ಸ್ಥಾಪನೆ : ೧೮೬೮ 1917 ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯು

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೮೮

ಶತಮಾನೋತ್ತರ ಬೆಳ್ಳಿ ಹಬ್ಬ

(ಎಪ್ಪತ್ತೈದನೆಯ ವರ್ಷ)

ವರ್ಷ 1917

ಶ್ರೀ ಚೆನ್ನಬಸವೇಶ್ವರ

(ರಜತ-ಗುಜರಿ)

ಶಾಲಾ ಸಂಪುಟ

ಕನ್ನಡ ಶಾಲಾ ಪತ್ರಿಕೆ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಪೆಟ್ಟಿಗೆ ಚೆನ್ನಬಸವೇಶ್ವರ ದೇವಸ್ಥಾನ, ರಾಯಲ್ ರೋಡ್, ಧಾರವಾಡ - ೫

ಸೂಚನೆ.

——: 0 :——

೧ ವರ್ಗಣೆಯುದರ:—ವರ್ಷಕ್ಕೆ ಮುಂಗಡ ಅಂಚೇ ವೆಚ್ಚ ಸೇರಿ ರೂ. ೧–೮–೦ ಒಡಿ ಸಂಚಿಕೆಗೆ ೨ ಆಣೆ.

ಜಾಹಿರಾತಿನ ದರಗಳು: – ಒಂದು ತಿಂಗಳಿನಿಂದ ಮೂರು ತಿಂಗಳುಗಳ ವರೆಗೆ ಇಟ್ಟರೆ ಪ್ರತಿತಿಂಗಳಿಗೆ ಒಂದು ಸಾಲಿಗೆ ನಾಲ್ಕು ಆಣೆ, ಆರು ತಿಂಗಳು ಇಟ್ಟರೆ ಪ್ರತಿತಿಂಗಳಿಗೆ ಒಂದು ಸಾಲಿಗೆ ಮೂರು ಆಣೆ, ಒಂದು ವರ್ಷ ಇಟ್ಟರೆ ಪ್ರತಿತಿಂಗಳಿಗೆ ಒಂದು ಸಾಲಿಗೆ ಎರಡು ಆಣೆ. ಜಾಹಿರಾತುಗಳು ಶಾಲಾಪತ್ರಕಕ್ಕೆ ಒಪ್ಪುವಂಥವಿರಬೇಕು.

೩ ಪತ್ರವ್ಯವಹಾರ:—ಶಾಲಾಪತ್ರಕದ ಸಂಬಂಧದ ಪತ್ರವ್ಯವಹಾರವನ್ನು 'ಮ್ಯಾನೇಜರ ಕನ್ನಡ ಶಾಲಾಪತ್ರಕ' ಈ ಪತ್ತೆಯ ಮೇಲೆ ನಡಿಸಬೇಕು. ಬರೆಯುತಕ್ಕ ಸಂಗತಿಯನ್ನು ಸುವಾಚ್ಯ ಅಕ್ಷರಗಳಿಂದ ಕಾಗದದ ಒಂದೇ ಮಗ್ಗಲು ಬರೆದು ಕಳಿಸಬೇಕು. ಹಳೇ ಗ್ರಂಥದೊಳಗಿನ ವಿಷಯವನ್ನೇ ಕಳಿಸುತ್ತ ಕೂಡ್ರಬಾರದು. ಅದನ್ನು ಕಳಿಸುವದಾದರೆ, ಹೊಸಪದ್ಧತಿಯಿಂದ ಕಲಿಸಲಿಕ್ಕೆ ಅನುಕೂಲವಾಗುವ ಹಾಗೆ ಅದಕ್ಕೆ ತಕ್ಕ ರೂಪವನ್ನು ಕೊಟ್ಟಿರಬೇಕು. ಶಿಕ್ಷಣ ಸಂಬಂಧದ ಪ್ರಚಲಿತ ವಿಷಯಗಳು, ಪಾಠದ ಟಪ್ಪಣಿಗಳು, ಅನುಭವಿಕ ಶಿಕ್ಷಕರ ಅನುಭವಗಳು, ಹೊಸ ಹೊಸ ಶೋಧಗಳು, ಶಿಕ್ಷಣ ಸಂಬಂಧದ ಉಪಯುಕ್ತ ವರ್ತಮಾನಗಳು ಈ ಪತ್ರಕದಲ್ಲಿ ಬರಲಿಕ್ಕೆ ಅಡ್ಡಿ ಇಲ್ಲ.

ಭೂಗೋಲ ಸಂಗ್ರಹ, (ಸುಧಾರಿಸಿದ ೨ನೆಯ ಆವೃತ್ತಿ.)

ವಿ. ನಾಡಿಗೇರ ಇವರ ಭೂಗೋಲ ಸಂಗ್ರಹವನ್ನು ೨ನೆಯ ಆವೃತ್ತಿ ಅಚ್ಚು ಹಾಕುವ ಬಗ್ಗೆ, ಬಹುಜನ ಅಧ್ಯಾಪಕರು ಸೂಚಿಸಿದ್ದರಿಂದ ಈ ಸಾರೆ ತಿದ್ದಿ, ಮುಲಕೀ ಪ್ರವೇಶ ಪರೀಕ್ಷೆಗಳ ಭೂಗೋಲ ಪ್ರಶ್ನೆಗಳನ್ನು ಸೇರಿಸಿ, ಅಚ್ಚುಹಾಕಿಸಿದೆ. ಈ ಪುಸ್ತಕಗಳು ಮಾರ್ಚ ೧೦ನೇ ತಾರೀಖಿನ ಸುಮಾರಿಗೆ ದೊರೆಯುವವು. ಇವು ಮತ್ತು ನಾಡಿಗೇರ ಕೃತ ಶಾಸ್ತ್ರೀಯ ವಿಷಯ ಸಂಗ್ರಹ (ಮುಲ್ಕೀ ಪರೀಕ್ಷೆಯ ಬಗ್ಗೆ, ಬೆಲೆ ೩ ಆಣೆ) ಹಾಗು ಜಮಾಖರ್ಚಿನ ಪದ್ಧತಿ (ಬೆಲೆ ೪॥ ಆಣೆ) ಇವು ಧಾರವಾಡದ ಎಲ್ಲ ದಿಪೋಗಳಲ್ಲಿ ದೊರೆಯುತ್ತವೆ.

ಸಿದ್ಧನಾಥ ವಾಚನ ಮಂದಿರ.
ಮೊರಬ. ಪೈ ದ್ವಾರಾ ಪ್ರಕಾಶಿತ.
ಶಾಲಾಪತ್ರಿಕೆ

ಪುಸ್ತಕ ೫೩. | ಜನವರಿ ೧೯೧೭. | ಸಂಚಿಕೆ ೧.

ಪ. ವಾ. ನಾ. ಡಬ್ಲ್ಯೂ. ಎಚ್. ಶಾರ್ಪರವರ ಸಂಕ್ಷಿಪ್ತ ಚರಿತ್ರೆಯು.

———:(0):———

ಮುಂಬಯಿ ಇಲಾಖೆಯ ಶಿಕ್ಷಣಖಾತೆಯ ಡಾಯರೆಕ್ಟರರಾದ ನಾಮದಾರ ಮಿ. ಡಬ್ಲ್ಯೂ. ಎಚ್. ಶಾರ್ಪರವರು ಇದೇ ತಿಂಗಳ ೧೧ನೇ ತಾರೀಖು ರವಿವಾರ ದಿವಸ ಬೆಳಗು ಮುಂಜಾನೆ ದಿವಂಗತರಾದ ಅತ್ಯಂತ ದುಃಖಕಾರಕ ಸಂಗತಿಯನ್ನು ಹಿಂದಿನ ಸಂಚಿಕೆಯ ಪುರವಣಿಯಲ್ಲಿ ತಿಳಿಸಿರುವೆವಷ್ಟೇ; ಆ ಮಹನೀಯರ ಸಂಕ್ಷಿಪ್ತ ಚರಿತ್ರೆಯನ್ನು ನಮ್ಮ ವಾಚಕರಿಗೋಸ್ಕರ ಇಲ್ಲಿ ಕೊಡುವೆವು.

ಮಿ. ಶಾರ್ಪ ಸಾ. ರ ಜನ್ಮವು ಮದ್ರಾಸ ಇಲಾಖೆಯೊಳಗಿನ ಮಚ್ಛಲೀ ಪಟ್ಟಣವೆಂಬಲ್ಲಿ ಸನ್ ೧೮೬೫ನೇ ಇಸವಿಯಲ್ಲಿ ಆಯಿತು. ಇವರ ಹಿರಿಯರು ಆಗ ಅಲ್ಲಿಯೇ ಮಿಶನರಿ (ಪಾದ್ರಿ) ಗಳಾಗಿದ್ದರು. ಅವರು ಇದುವರೆಗೂ ಬದುಕಿ ಇದ್ದಾರೆಂದು ತಿಳಿಯುತ್ತದೆ. ನಾ. ಶಾರ್ಪ ಸಾ. ರ ಅಭ್ಯಾಸವು ಆಕ್ಸಫರ್ಡ ಕಾಲೇಜದಲ್ಲಿ ಆಗಿ ಸನ್ ೧೮೯೧ ರಲ್ಲಿ ಮುಂಬಯಿ ಇಲಾಖೆಯ ಶಿಕ್ಷಣಖಾತೆಯಲ್ಲಿ ಅವರ ನೇಮಣೂಕು ಆಯಿತು. ಆರಂಭಕ್ಕೆ ಇವರು ಮುಂಬಯಿಯ ಎಲ್ಫಿನ್‌ಸ್ಟನ್ ಕಾಲೇಜದಲ್ಲಿ ತರ್ಕಶಾಸ್ತ್ರ, ತತ್ವಜ್ಞಾನ ಈ ವಿಷಯಗಳ ಪ್ರೊಫೆಸರರಾಗಿದ್ದರು. ಒಮ್ಮೊಮ್ಮೆ ಇಂಗ್ಲಿಷ ವಿಷಯವನ್ನಾದರೂ ಕಲಿಸುತ್ತಿದ್ದರು. ಇಲ್ಲಿ ಕೆಲಸಮಾಡುವಾಗ್ಗೆ ಇವರ ವಿದ್ವತ್ತೆ ಹಾಗು ಶೋಧಕ ಬುದ್ಧಿ ಇವು ನಜರಿಗೆ ಬಂದದ್ದರಿಂದ ಸರಕಾರದವರು ಸನ್ ೧೯೦೪ ರಲ್ಲಿ ಇವರನ್ನು ಜಪಾನಕ್ಕೆ ಶಿಕ್ಷಣ ಪದ್ಧತಿಯ ಅಭ್ಯಾಸಮಾಡಲಿಕ್ಕೆಂದು ಕಳಿಸಿಕೊಟ್ಟರು. ಅಲ್ಲಿ ಒಂದು ವರ್ಷ ಇದ್ದು ತಿರುಗಿ ಬಂದ ಮೇಲೆ ಇವರು "ಜಪಾನದೊಳಗಿನ ಶಿಕ್ಷಣಪದ್ಧತಿ" ಎಂಬ

ಪುಸ್ತಕವನ್ನು ಬರೆದರು. ಕೆಲಕಾಲ ಡೆಕ್ಕನ್ ಕಾಲೇಜದ ಪ್ರಿನ್ಸಿಪಾಲರೂ ಆಗಿದ್ದರು. ನಂತರ ೧೯೦೭ ರಲ್ಲಿ ಎಲ್‌ಫಿನ್‌ಸ್ಟನ್ ಕಾಲೇಜದ ಪ್ರಿನ್ಸಿಪಾಲರಾದರು. ಮೆ. ಸೆಲ್ಬೀ ಸಾ. ರು ಪೆನ್‌ಶನ್ ತೆಗೆದುಕೊಂಡನಂತರ ಸರಕಾರದವರು ಇವರನ್ನು ಡಾಯರೆಕ್ಟರ ಆಫ್ ಪಬ್ಲಿಕ್ ಇನಸ್ಟ್ರಕ್ಶನರನ್ನಾಗಿ ಮಾಡಿದರು. ಈ ಸ್ಥಳದ ಮೇಲೆ ಇವರು ಸುಮಾರು ೬-೭ ವರ್ಷ ಇದ್ದರು. ಅಧಿಕಾರದ ಸಂಬಂಧದಿಂದ ಇವರ ಕೆಲಸವು ಬೊಕ್ಕ ಆತ್ತು. ಇತರ ಯಾವತ್ತು ಖಾತೆಗಳ ಸಂಪೂರ್ಣ ಮಾಹಿತಿ ಸಹ ಇವರಿಗಿತ್ತು.

ಇವರ ಆಳಿಕೆಯಲ್ಲಿ ಶಿಕ್ಷಣಖಾತೆಯಲ್ಲಿ ಬಹಳೀ ಸುಧಾರಣೆಗಳಾದವು. ಪ್ರಾಥಮಿಕ ಶಾಲೆಗಳ ಸಂಖ್ಯೆಯು ಬೆಳೆಯಿತು. ಮೂಸ್ತರ ಜನರಿಗೆ ಕೋಡಿನಲ್ಲಿ ಹೇಳಿದಪ್ಪು ಪಗಾರವನ್ನು ಕೊಡುವಬಗ್ಗೆ ವ್ಯವಸ್ಥೆಯಾಯಿತು. ಮಧ್ಯಮ ತರಗತಿಯ ಶಿಕ್ಷಣಕ್ಕಂತೂ ವಿಶೇಷವಾಗಿ ಉತ್ತೇಜನ ಕೊಟ್ಟಿದ್ದಲ್ಲದೆ, ಆ ತರಗತಿಯ ಶಿಕ್ಷಕರಿಗೆ ಬಡತಿಯನ್ನು ಕೊಡುವ ಸಂಬಂಧದಿಂದ ಇದ್ದ ಮಾರ್ಕ್ಸ್ ಪದ್ಧತಿಯನ್ನು ತೆಗೆದು ಹಾಕಿದರು. ಇದರಿಂದ ಅವರ ಸತ್ಯಪ್ರಿಯತೆಯು ವ್ಯಕ್ತವಾಗುತ್ತದೆ. ಪ್ರಾಥಮಿಕ ಶಾಲೆಗಳ ತಪಾಸಣೆಗೆ ಅನುಭವಿಕರಾದ ಗ್ರಾಜ್ಯುಏಟರನ್ನು ನಿಯಮಿಸುವ ವ್ಯವಸ್ಥೆ ಮಾಡಿದ್ದರಿಂದ ಆ ಶಿಕ್ಷಣಕ್ಕೆ ಒಳ್ಳೇ ಪ್ರೋತ್ಸಾಹನವುಂಟಾಗಿದೆ. ಡೆ. ಇನ್‌ಸ್ಪೆಕ್ಟರ ಹಾಗು ಅವರ ಅಸಿ. ರ ಪಗಾರದ ಬಗ್ಗೆ ಗ್ರೇಡುಗಳನ್ನು ಗೊತ್ತುಮಾಡಿದ್ದರಿಂದ ಅವರಿಂದ ಒಳ್ಳೇ ಸಮಾಧಾನಕರವಾದ ಕೆಲಸವಾಗುತ್ತಿದೆ. ಇವರಿಂದ ಶಿಕ್ಷಣಖಾತೆಗೆ ಮಹತಿಯೂ ಭೂಷಣವೂ ಅತಿಶಯವಾಗಿ ಬಂದಿತ್ತು. ಇಂಥ ನಿಷ್ಣಾತರೂ, ಕರ್ತೃತ್ವ ಶಾಲಿಗಳೂ ಬಲ್ಲದಂತಾದ್ದರಿಂದ ನಮ್ಮ ಖಾತೆಗೂ ಸರಕಾರಕ್ಕೂ ಆದ ಹಾನಿಯು ಇಷ್ಟೇ ಎಂದು ಹೇಳಲಾಸಲ್ಲ ಶಿಕ್ಷಣವು ಪುಕ್ಕಟೆಯಾಗಿಯೂ ಸಕ್ತಿಯಿಂದಲೂ ನಡೆಯಬೇಕೆಂಬ ಸಂಗತಿಯಲ್ಲಿ ಇವರು ಪ್ರಜಾಪಕ್ಷದವರಾಗಿದ್ದರು.

ಇವರ ಸ್ವಭಾವವು ಸ್ವಲ್ಪ ವಿನೋದವುಳ್ಳದ್ದಾಗಿತ್ತು. ಆದ್ದರಿಂದ ಇವರ ತಾಸು ವಿದ್ಯಾರ್ಥಿಗಳಿಗೆ ಯಾವಾಗಲೂ ಮನೋರಂಜಕವೆನಿಸುತ್ತಿತ್ತು. ಇಂಗ್ಲಿಷ ಮತ್ತು ತರ್ಕಶಾಸ್ತ್ರ ಇವೆರಡೂ ವಿಷಯಗಳನ್ನು

ಕಲಿಸುವ ಇವರ ಸರಣಿಯು ಉತ್ತಮವಾದದ್ದಿತ್ತು. ವಿದ್ಯಾರ್ಥಿಗಳಿಗೆ ಉಪಯೋಗವಾಗುವಂತೆ ಅವೆರಡು ವಿಷಯಗಳ ಮೇಲೆ ಪುಸ್ತಕಗಳನ್ನು ಸಹ ಬರೆದಿರುವರು. ಇವರು ಉತ್ತಮ ವಕ್ತೃಗಳಾಗಿದ್ದರು. ಇವರ ಭಾಷಣವು ಸಾದಾ ಇದ್ದರೂ ಒಳ್ಳೇ ಪರಿಣಾಮಕಾರಕವಿತು. ವಿದ್ಯಾರ್ಥಿಗಳ ಮೇಲೆ ಇವರ ಪ್ರೇಮವು ಬಹಳವಿತ್ತು. ಕಾಲೇಜದೊಳಗಿನ ಎಷ್ಟೋ ಹುಡುಗರನ್ನು ಕೇವಲ ತಮ್ಮ ಮಕ್ಕಳಂತೆ ಭಾವಿಸುತ್ತಿದ್ದರು. ಕೆಲವೆ ವಿದ್ಯಾರ್ಥಿಗಳಿಗೆ ಯಾವತ್ತೂ ಶಿಕ್ಷಣದ ಖರ್ಚನ್ನು ಸಹ ಕೊಡುತ್ತಿದ್ದರು. ಒಬ್ಬ ವಿದ್ಯಾರ್ಥಿಯನ್ನಂತೂ ತಮ್ಮ ಸಂಗಡ ಇಡೀ ಜಗತ್ತಿನ ಪ್ರವಾಸಕ್ಕೆ ಕರಕೊಂಡು ಹೋಗಿದ್ದರು.

ದೃಷ್ಟಿಶಿಕ್ಷಣದ ಬಗ್ಗೆ ಇವರ ಲಕ್ಷವು ಬಹಳೇ ಇತ್ತು. ಫೋಟೋ ತೆಗೆದುಕೊಂಡು ಅದರಿಂದ ಮ್ಯಾಜಿಕ್ ಲ್ಯಾಂಟರ್ನದ ಪ್ಲೇಟುಗಳನ್ನು ತಯಾರುಮಾಡುವದರಲ್ಲಿ ಇವರಿಗೆ ಹೇಳಕೂಡದಷ್ಟು ಉಮೇದು ಇತ್ತು. ಇದೊಂದೇ ಕೆಲಸಕ್ಕೆ ಇವರು ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿರಬಹುದು. ಜಗತ್ತಿನೊಳಗಿನ ಯಾವತ್ತು ಪ್ರಸಿದ್ಧಸ್ಥಳ ಮತ್ತು ವಸ್ತುಗಳ ಸಂಗ್ರಹವು ಚಿತ್ರರೂಪದಿಂದ ಅವರ ಹತ್ತರ ಇತ್ತೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ಮ್ಯಾಜಿಕ್‌ಲ್ಯಾಂಟರ್ನದ ಸಹಾಯದಿಂದ ವ್ಯಾಖ್ಯಾನಕೊಡುವದರಲ್ಲಿ ಇವರ ಪ್ರೀತಿಯು ಬಹಳ. ತಾವು ಹೋದ ಹೋದಲ್ಲಿ ಈ ತರಹದ ವ್ಯಾಖ್ಯಾನಗಳನ್ನು ಕೊಡದೆ ಎಂದೂ ಇರಲಿಲ್ಲ. ಇವರ ಮಾತುಗಳು ಯಾವಾಗಲೂ ಮಾರ್ಮಿಕವಾಗಿರುತ್ತಿದ್ದವು. ಜನರ ಲಕ್ಷಣವನ್ನು ತಿಳಿದುಕೊಳ್ಳುವದರಲ್ಲಿ ಇವರ ಸಮಾನರು ಯಾರೂ ಇದ್ದಿಲ್ಲ ಅವರು ಯೋಗ್ಯತೆಯನ್ನು ಕೂಡಲೆ ಕಂಡು ಹಿಡಿಯುತ್ತಿದ್ದರು. ಇವರು ತಮ್ಮ ಕೆಲಸದ ಹೊರತು ಎರಡನೆ ಯಾವ ಉಸಾಬರಿಯನ್ನೂ ಮಾಡುತ್ತಿದ್ದಿಲ್ಲ. ಅಳಿಕೆಯಲ್ಲಿ ಏನಾದರೂ ತಪ್ಪು ಆಗಿದ್ದರೆ ಒಪ್ಪಿ ಕೊಳ್ಳದೆ ಎಂದೂ ಇರುತ್ತಿದ್ದಿಲ್ಲ. ಇವರು ಹಿಂದೂ ಜನರೊಳಗೆ ಕೂಡಿ ನಡಿಯುತ್ತಿದ್ದರು.

ದೇವರು ನಾ. ಶಾರ್ಪ ಸಾ. ರವರಿಗೆ ಸದ್ಗತಿಯನ್ನು ಕೊಡಲಿ!

ಶಾಲಾಪತ್ರಕ.

ಆಟಗಳು.

ಹಾಕೀ

ಆಡತಕ್ಕ ಸ್ಥಳದ ನಕಾಶವು.



ಆಟಗಳು.

೧. ಆಡತಕ್ಕ ಸ್ಥಳದ ಪ್ರತಿಯೊಂದು ಮೂಲೆಯಲ್ಲಿಯೂ ಅದರ ಪ್ರತಿಯೊಂದು ಬದಿಯ ಮಧ್ಯದಲ್ಲಿಯೂ ನಡಿಸುವದಕ್ಕೆ ಸಾಕಾಗುವಷ್ಟು ಬಣ್ಣದ ನಿಶಾನೆಗಳು.

೨. ಫಾಜೆ (ಮುಟ್ಟತಕ್ಕ ಸ್ಥಳ) ಯು ಕಂಬಗಳು—ಇವು ನೆಲದಿಂದ ೭ ಫೂಟು ಎತ್ತರವಾಗಿರಬೇಕು. ಎರಡೂ ಕಂಬಗಳ ಮಧ್ಯದಲ್ಲಿ ೧೦ ಫೂ. ಅಂತರವಿಟ್ಟು ಮೇಲೆ ಒಂದು ಅಡ್ಡ ಎಳೆಯನ್ನು ಕೂಡ್ರಿಸಿರಬೇಕು.

೩. ಬಿಳೇ ಬಣ್ಣ ಹಚ್ಚಿದ ತೊಗಲಿನ ಚಂಡು ಒಂದು.

೪. ಆಡುವ (ಯೋಗ್ಯ ಅಳತೆಯ) ಫಣೆಗಳು:—ಇವುಗಳ ಹಿಂಭಾಗವು ದುಂಡಗೂ ಚಂಡು ಹೊಡೆಯುವ ಭಾಗವು ಚಪ್ಪಟೆಯೂ ಆಗಿರಬೇಕು. ೨೪ ಔಂಸಗಳಿಗಿಂತ ಭಾರವಾಗಿರಬಾರದು.

೫. ಟೊಪ್ಪಿಗೆಗಳು—ಇವು ಗೋಲಕೀಪರನಿಗೆ ಮಾತ್ರ ಅವಶ್ಯವಾಗಿ ಬೇಕಾಗಿರುತ್ತವೆ.

೬. ಮೊಣಕಾಲು ಸಂರಕ್ಷಣೆಯ ಸಲುವಾಗಿ ಗೋಲಕೀಪರನಿಗೆ ಬೇಕಾಗುವ ಚರ್ಮದ ರಕ್ಷಕಗಳು.

೭. ಕಣಕಾಲ (ಮೊಣಕಾಲ ಕೆಳಗಿನ ಭಾಗದ) ರಕ್ಷಣೆಯ ಸಲುವಾಗಿ ಬೇಕಾಗುವ ಚರ್ಮದ ರಕ್ಷಕಗಳು. ಇವು ಆಡುವ ಪ್ರತಿಯೊಬ್ಬ ಹುಡ್ಡರಿಗೆ ಬೇಕಾಗುವವು.

ಹುಡ್ಡರಿಗಳ ರಚನೆ.



ಈ ಆಟದಲ್ಲಿ ಪ್ರತಿಯೊಂದು ಪಂಗಡದಲ್ಲಿ ೧೧ ಜನರು ಇರಬೇಕಾಗುವದು. ಇಂಥ ಎರಡು ಪಂಗಡಗಳಿರುವವು. ಒಂದು ಪಂಗಡದ ಜನರು ನಿಲ್ಲುವ ಕ್ರಮವನ್ನು ಮೇಲಿನ ಆಕೃತಿಯಲ್ಲಿ ತೋರಿಸಿದೆ. ಅಲ್ಲಿ ತೋರಿಸಿದ ಸ್ಥಳದಲ್ಲಿ ನಿಲ್ಲುವ ಪ್ರತಿಯೊಬ್ಬ ಹುದ್ದರಿಗೂ ಒಂದೊಂದು ಇಂಗ್ಲಿಷ ಹೆಸರು ಇರುವದು. ಅವು ಯಾವವೆಂದರೆ:—

೧. ಗೋಲಕೀಪರ. ೨. ಲೆಫ್ಟ್‌ಬ್ಯಾಕ್. ೩. ರಾಯಿಟಬ್ಯಾಕ್ ೪. ಹಾಫ ಲೆಫ್ಟ್ ಬ್ಯಾಕ್. ೫. ಸೆಂಟರ ಹಾಫ್ ಬ್ಯಾಕ್. ೬ ರಾಯಿಟ ಹಾಫ್ ಬ್ಯಾಕ್. ೭. ಲೆಫ್ಟ್ ಎಕ್‌ಸ್ಟ್ರೀಮು ಫಾರ್‌ವರ್ಡ ೮. ಲೆಫ್ಟ ಇನ್ ಸಾಯಿಡ ೯. ಸೆಂಟರ ಫಾರ್‌ವರ್ಡ. ೧೦. ರಾಯಿಟ ಇನ್‌ಸಾಯಿಡ ಫಾರವರ್ಡ. ೧೧. ರಾಯಿಟ ಎಕ್‌ಸ್ಟ್ರೀಮು.

(ಸೂ.— ಇವುಗಳಿಗೆಲ್ಲಕ್ಕೂ ಕನ್ನಡದಲ್ಲಿ ಸರಿಯಾದ ಹೆಸರುಗಳು ದೊರೆಯುವ ವಿಲ್ಲಾದ್ದರಿಂದ ಅವೇ ಹೆಸರುಗಳನ್ನು ಇಟ್ಟುಕೊಂಡಿದೆ.)

ಆಟವಾಡುವ ಕ್ರಮ.

ಪ್ರತಿಯೊಬ್ಬ ಹುದ್ದರಿಯ ಕೈಯಲ್ಲಿ ಒಂದು ಕೋಲನ್ನು (ಸ್ಟಿಕ್) ಕೊಟ್ಟಿರುತ್ತದೆ. ಅದರಿಂದ ಅವನು ಚಂಡನ್ನು ತನ್ನ ವಿರುದ್ಧ ಪಂಗಡದ ಫಾಜೆಯ ಕಡೆಗೆ ಸರಿಸುತ್ತ ಹೋಗಬೇಕು. ಹೀಗೆ ಮಾಡುವಲ್ಲಿ ಅವನು ತನ್ನಕಡೆಗೆ ಬರುವ ಚಂಡನ್ನು ಶರೀರದ ಯಾವಭಾಗದಿಂದಲಾದರೂ ನಿಲ್ಲಿಸಬಹುದು. ಪರಂತು ಹೊಡೆಯುವಾಗ ಕೋಲನ್ನೇ ಉಪಯೋಗಿಸಬೇಕು. ಆಗ ತನ್ನ ಯಾವ ಅವಯವದಿಂದಲೂ ತಡೆಯಕೂಡದು. ಆಟದ ಆರಂಭದಲ್ಲಿ ಎರಡೂ ಪಂಗಡದ ಮುಂದಿನ ಸಾಲಿನ ಮಧ್ಯರೀರ್ವರು, ಆಟವಾಡತಕ್ಕಸ್ಥಳದ ಮಧ್ಯದಲ್ಲಿ ಚಂಡನ್ನು ಇಟ್ಟು, ಅದನ್ನು ಸ್ಥಳಬಿಟ್ಟು ಕದಲಿಸಲಿಕ್ಕೆ ಪ್ರಯತ್ನ ಮಾಡಬೇಕು. ಮೊದಲು ಬಡಿಗೆಯನ್ನು ತನ್ನ ಬದಿಯ ನೆಲಕ್ಕೆ ಬಡಿದು ನಂತರ ವಿರುದ್ಧ ಪಂಗಡದ ಹುದ್ದರಿಯ ಬಡಿಗೆಯ ಮೇಲೆ ಒಂದು ಪೆಟ್ಟನ್ನು ಹಾಕಬೇಕು ಇದಕ್ಕೆ 'ಬುಲಿ' ಎನ್ನುವರು. ಇದರಂತೆ ಸರತಿಯಿಂದ ಒಬ್ಬರು ಇನ್ನೊಬ್ಬರ ಬಡಿಗೆಗೆ ೩ ಸಾರೆ ಪೆಟ್ಟು ಹಾಕಿದನಂತರ ಒಬ್ಬನು ಚಂಡನ್ನುಹೊಡೆಯತಕ್ಕದ್ದು. ಆ ಮೇಲೆ ಎಲ್ಲರೂ ಆಡಲಿಕ್ಕೆ ಅಡ್ಡಿಯಿಲ್ಲ.

ರಂಟಿಯು ಆಟ:—ಆಟದಲ್ಲಿ ರಂಟೆ ಬರುವ ರೀತಿಗಳು.—

೧. **ಸ್ಪಿಕ್ಸ**-(ಬಡಿಗೆಗಳು) ಯಾವನೊಬ್ಬ ಹುಡ್ಗರಿಯು, ತನ್ನ ಬಡಿಗೆಯನ್ನು (ಹೊಡತದ ಆರಂಭಕ್ಕೆ ಇಲ್ಲವೆ ನಂತರ) ತನ್ನಭುಜಕ್ಕಿಂತ ಮೇಲೆ ಎತ್ತರಿಸಿದರೆ 'ಸ್ಪಿಕ್ಸ, ಆಯಿತು.

ಇದಕ್ಕೆ ದಂಡ:— ತಪ್ಪು ಆದ ಸ್ಥಳದಲ್ಲಿ ಚಂಡನ್ನು ಇಟ್ಟು ವಿರುದ್ಧ ಪಂಗಡದ (ಆಸ್ಥಳದ)ವನು ಹೊಡೆಯುತಕ್ಕದ್ದು.

೨. **ಕಿಕ್ಸ ಆರ್‌ಕ್ಯಾರೀ:**— ಯಾವನೊಬ್ಬ ಹುಡ್ಗರಿಯು ಚಂಡನ್ನು ನಿಲ್ಲಿಸುವದಕ್ಕಾಗಿ ಕಾಲಿನಿಂದ ಇಲ್ಲವೆ ಕೈಯಿಂದ ತಡೆಯುವದು.

ಇದಕ್ಕೆ ದಂಡ:—ತಪ್ಪು ಆದ ಸ್ಥಳದಿಂದ ವಿರುದ್ಧ ಪಂಗಡದವರು ಚಂಡನ್ನು ಹೊಡೆಯುವದು.

೩. **ಬ್ಯಾಕ್‌ಸ್ಪಿಕ್ಸ:**—ಬಡಿಗೆಯ ಹೊಡೆಯುತಕ್ಕ ಭಾಗದ ವಿರುದ್ಧಭಾಗದಿಂದ ಹೊಡೆಯುವದು. (ಚಪ್ಪಟೆಯಾದ ಭಾಗವನ್ನು ಬಿಟ್ಟು ದುಂಡನ್ನ ಭಾಗದಿಂದ ಹೊಡೆಯುವದು. ಚಪ್ಪಟೆಯಾದಭಾಗದ ಹೊರಮೈಯು ಚಂಡಿಗೆ ಬಡಿಯುತಕ್ಕದ್ದು.)

ಇದಕ್ಕೆ ದಂಡ:—ತಪ್ಪು ಆದ ಸ್ಥಳದಿಂದ ವಿರುದ್ಧ ಪಂಗಡದವರು ಚಂಡನ್ನು ಹೊಡೆಯುವದು.

೪. **ಟರ್ನಿಂಗ್:**—ಯಾವನೊಬ್ಬ ಹುಡ್ಗರಿಯು ಚಂಡನ್ನು ತನ್ನ ಸುತ್ತಲು ತಿರುಗಿಸುತ್ತ, ತಾನು ಇನ್ನೊಬ್ಬರಿಗೆ ಮರೆ ಆಗಲಿಕ್ಕೆ ಯತ್ನ ಮಾಡೋಣ.

೫. **ಆಫ್‌ಸಾಯಿಡ:**—ಒಬ್ಬನು ಚಂಡನ್ನು ಹೊಡೆಯುವಕಾಲಕ್ಕೆ ಯಾವನೊಬ್ಬ ಹುಡ್ಗರಿಯು ತನ್ನ ವಿರುದ್ಧ ಪಂಗಡದವರ ಫಾಜಿಯ ಅಗದೀಸಮೀಪಕ್ಕೆ ಹೋಗಿನಿಲ್ಲೋಣ. ವಿರುದ್ಧ ಪಂಗಡದ ಮೂವರು ಇಲ್ಲವೆ ಹೆಚ್ಚು ಜನರು ಇದ್ದರೆ ಮಾತ್ರ ಹೀಗೆ ಮಾಡಲಿಕ್ಕೆ ಅಡ್ಡಿಯಿಲ್ಲ.

ಇದಕ್ಕೆ ದಂಡ:—ಮೇಲಿನಂತೆ.

೬. **ಔಟ**—ಯಾವನೊಬ್ಬ ಹುಡ್ಗರಿಯು ಬದಿಯ ಗೆರೆಗಳ ಹೊರಗೆ ಚಂಡನ್ನು ಹೊಡೆದರೆ ಈ ತಪ್ಪು ಆಗುವದು.

ಇದಕ್ಕೆ ದಂಡ:—ಚಂಡು ಬದಿಯ ಗೆರೆಯನ್ನು ತಾಕಿದ ಸ್ಥಳದಲ್ಲಿ ಪುನಃ ಅದನ್ನು ಇಟ್ಟು ವಿರುದ್ಧ ಪಂಗಡದವರು ನುಗಿಸಬೇಕು.

ನುಗಿಸುವ ಪಂಗಡದಲ್ಲಿಯೆ ಆಡುವ ಹುದ್ದರಿಯು, ಚಂಡನ್ನು ಗೋಲಲಾಯಿನದ ಆಚೆಗೆ ಕಳಿಸಿದರೆ, ಮತ್ತು ಸಂರಕ್ಷಕ ಪಂಗಡದ ಒಬ್ಬ ಹುದ್ದರಿಯು ೨೫ ಯಾರ್ಡಿನ ಗೆರೆಯ ಆಚೆಗೆ ಕಳಿಸಿದರೆ— ಅದನ್ನು ತಕ್ಕೊಂಡು ಬಂದು ೨೫ ನೇ ಯಾರ್ಡಿನ ಗೆರೆಯಲ್ಲಿ ಇಟ್ಟು ಬುಲಿ ಮಾಡಬೇಕು.

ಸಂರಕ್ಷಕ ಪಂಗಡದ ಯಾವನೊಬ್ಬ ಹುದ್ದರಿಯಿಂದ ಚಂಡು ಜರಿದು ಹೋದರೆ ಮುತ್ತುವ (ನುಗಿಸುವ) ಪಂಗಡದವರಿಗೆ ಒಂದು ಕಾರ್ನರ, ಕೊಡಬೇಕು. ಕಾರ್ನರ ಎಂದರೆ—ಚಂಡು ಹೋದ ಸ್ಥಳದ ಸಮೀಪದ ಮೂಲೆಯಿಂದ ಚಂಡನ್ನು ಹೊಡೆಯುವದು.

ನುಗಿಸುವ ಪಂಗಡದವನೊಬ್ಬನು ಉದ್ದೇಶಪೂರ್ವಕವಾಗಿ ಮೇಲೆ ಹೇಳಿದ ತಪ್ಪನ್ನು ಮಾಡಿದರೆ, ಎದುರು ಪಂಗಡದವರಿಗೆ ಪೆನಲ್ಟಿ ಕಾರ್ನರ, ಕೊಡಬೇಕು. 'ಪೆನಲ್ಟಿ ಕಾರ್ನರ' ಎಂದರೆ ಫಾಜಿಯ ಗೆರೆಯ ಯಾವದೊಂದು ಭಾಗದಿಂದ ಹೊಡೆಯುವದು.

ಆ ಕಾಲದಲ್ಲಿ ಸಂರಕ್ಷಕ ಪಂಗಡದವರು ತಮ್ಮ ಫಾಜಿಯ ಗೆರೆಯ ಹಿಂದೆ ಇರಬೇಕು. ನುಗಿಸುವ ಪಂಗಡದವರು ಆಟದ ಪ್ರದೇಶದಲ್ಲಿ ಗುರ್ತು ಮಾಡಿರುವ ವರ್ತುಲದ ಹೊರಗೆ ಇರಬೇಕು. ಆಗ ಹೊಡೆಯುವವನು ಒಮ್ಮೆ ಹೊಡೆದ ನಂತರ, ಇನ್ನೊಬ್ಬನು ಮುಟ್ಟುವವರೆಗೂ ತಾನು ಮುಟ್ಟಕೂಡದು.

ವರ್ತುಳದ ಮಧ್ಯದಲ್ಲಿ ಗೋಲದ ಎರಡು ಕಂಬಗಳ ನಡುವೆ ಚಂಡು ಹಾಯಿದು ಹೋಗುವಂತೆ ಯಾರಾದರೂ ಹೊಡೆದರೆ ಗೋಲ ಆದಂತಾಯಿತು. ಇಲ್ಲಿಗೆ ಆಟವು ಮುಗಿಯಿತು.

ಪ್ರಕೃತಿ ಪಾಠಗಳು.

ಬೆಕ್ಕು.

ಪ್ರಕೃತಿಪಾಠಗಳ ಅಥವಾ ವಿಮರ್ಶೆಪಾಠಗಳ ಉದ್ದೇಶವು ಮಕ್ಕಳ ನಿರೀಕ್ಷಣೆಗೆ ಹೆಚ್ಚು ಅವಕಾಶವನ್ನು ಕಲ್ಪಿಸಿ ಅವರ ಇಂದ್ರಿಯಗಳನ್ನು ಪಟುವಾಗುವಂತೆ ಮಾಡುವದೆಂದು ನಿರ್ಧಾರವಾಗಿರುತ್ತದೆ. ಈ ಪಾಠಗಳಿಗೆ ಮಕ್ಕಳ ನೆರೆಹೊರೆಯಲ್ಲಿ ಕಾಣುತ್ತಿರುವ ಸಾಮಾನ್ಯ ಪ್ರಾಣಿಗಳು ಅಂದರೆ, ಜಂತು, ಪಕ್ಷಿ, ಸಸ್ಯ ಮೊದಲಾದವು ಉತ್ತಮವಾದ ವಿಷಯಗಳಾಗಿರುತ್ತವೆ. ನಮ್ಮ ಸುತ್ತಲೂ ಇರುವ ಪದಾರ್ಥಗಳಲ್ಲಿ ಮಕ್ಕಳಿಗೂ ಹಾಗೆಯೆ ದೊಡ್ಡವರಿಗೂ ತಮ್ಮ ಹಾಗೆಯೆ ಆಚರಿಸುವ ಇತರ ಪ್ರಾಣಿಗಳಲ್ಲಿ ಪ್ರೀತಿಯು ಹೆಚ್ಚಾಗಿರುತ್ತದೆ. ಅವುಗಳ ಪೈಕಿ ಕೆಲವು ನಮಗೆ ಬಹಳ ಪ್ರಯೋಜನಕರವಾಗಿರುವದರಿಂದ ಅವುಗಳನ್ನು ನಾವು ಆದರಿಸುವದು ಮಾತ್ರವಲ್ಲದೆ, ನಮ್ಮ ಒಡಹುಟ್ಟಿದವರಂತೆ ಭಾವಿಸುತ್ತೇವೆ. ಆದುದರಿಂದ ಮಕ್ಕಳಿಗೆ ಪ್ರಕೃತಿಪಾಠಗಳನ್ನು ಆರಂಭಿಸುವಾಗ ಅವರ ಮನೆಗಳಲ್ಲಿ ಯಾವಾಗಲೂ ಗೋಚರವಾಗುತ್ತ ಅವರಿಗೆ ಬಹಳ ಬಳಕೆಯಾಗಿರುವ ಸಾಕಿದ ಪ್ರಾಣಿಗಳಿಂದ ಪ್ರಾರಂಭಿಸುವದು ಉತ್ತಮವಾದ ಪದ್ಧತಿಯು. ಹೀಗೆ ನಮಗೆ ತೀರ ಸಮೀಪವಾಗಿಯೂ ಹೆಚ್ಚು ಪ್ರಯೋಜನಕರವಾಗಿಯೂ ಇರುವ ಪ್ರಾಣಿಗಳ ವಿಚಾರದಿಂದ ಪ್ರಾರಂಭಿಸಿ ಮನುಷ್ಯನಿಗೆ ಅಧೀನವಾಗಿರುವ ಮೃಗಪಕ್ಷಿಜಾತಿಗಳ ಹಾಗೆಯೇ ಕೀಟ ಮೊದಲಾದ ಪ್ರಾಣಿಗಳ ಜೀವನಾನ ಕ್ರಮಗಳನ್ನು ತಿಳಿಸಬೇಕು.

ಮಕ್ಕಳಿಗೆ ಬಳಕೆಯಾದ ಪ್ರಾಣಿಗಳ ವಿಮರ್ಶೆಯನ್ನು ನಡಿಸುವಾಗ ಬೆಕ್ಕಿನಿಂದ ಪ್ರಾರಂಭಿಸಬಹುದು. ಎಲ್ಲಕ್ಕೂ ಮೊದಲು ಬೆಕ್ಕನ್ನು ಆರಿಸಿಕೊಳ್ಳುವದಕ್ಕೆ ಅನೇಕ ಕಾರಣಗಳಿರುತ್ತವೆ. ಮಗುವು ಕೇವಲ ಶೈಶವಾವಸ್ಥೆಯಲ್ಲಿರುವಾಗಲೇ ಮನೆಯಲ್ಲಿ ಓಡಾಡುತ್ತ ಹಾಲು, ಅನ್ನ ಮೊದಲಾದ ಆಹಾರ ಪದಾರ್ಥಗಳನ್ನು ತಿನ್ನುತ್ತ ಮನೆಗೆ ಸೇರಿದವರ ಹಾಗೆಯೇ ಇರುವ ಬೆಕ್ಕನ್ನು ಪದೇ ಪದೇ ನೋಡಿ ಅದರ ಕೆಲವು

ಅಭ್ಯಾಸಗಳನ್ನು ಕೂಡ ತಿಳಿದಿರುವುದು. ಸಾಕಿದ ಬೆಕ್ಕುಗಳು ಮಕ್ಕಳ ಸಂಗಡ ಆಟವಾಡುವದಕ್ಕೂ ಬರುತ್ತವೆ. ಮಕ್ಕಳು ಬೆಕ್ಕಿನ ಮರಿಗಳನ್ನು ಮನೆಗಳಲ್ಲಿಯೂ ಶಾಲೆಗಳಲ್ಲಿಯೂ ಪೋಷಿಸಿ ಅವುಗಳ ಅಂಗರಚನೆ, ಆಹಾರ ಮತ್ತು ಸ್ವಭಾವಗಳನ್ನು ಸಾವಧಾನದಿಂದ ಲಕ್ಷಿಸಬಹುದು.

ಈ ವಿಮರ್ಶೆಯನ್ನು ನಡಿಸುವಾಗ ಹುಡುಗರು ಸ್ವಾಭಾವಿಕವಾಗಿ ಯಾವ ಕ್ರಮದಲ್ಲಿ ನಿರೀಕ್ಷಿಸುತ್ತಾರೋ, ಅದೇ ಕ್ರಮವನ್ನೇ ಅನುಸರಿಸಬೇಕು. ಅವರಿಗೆ ಯಾವ ಸಂಗತಿಗಳು ಮಹತ್ವವುಳ್ಳವಗಳಾಗಿ ಕಂಡು ಬರುವವೋ, ಅವುಗಳಿಂದಲೇ ಪ್ರಾರಂಭಿಸಿ ಬೆಕ್ಕಿನ ವಿಷಯದಲ್ಲಿ ಅವರಿಗೆ ಕಂಡು ಬರುವ ವಿಷಯಗಳನ್ನು ಹೊರಡಿಸಬೇಕು.

ಬೆಕ್ಕು.

[ಬೆಕ್ಕಿನ ವಿಮರ್ಶೆಯನ್ನು ಶಾಲೆಯಲ್ಲಿ ನಡಿಸುವದಕ್ಕೆ ಮೊದಲು ಶಿಕ್ಷಕರಿಗೆ ಬೆಕ್ಕಿನ ಅಂಗರಚನೆ, ಆಹಾರ, ಸ್ವಭಾವಗಳು ಇವುಗಳ ವಿಷಯದಲ್ಲಿ ಸರಿಯಾದ ತಿಳುವಳಿಕೆಯಿರಬೇಕು. ಅನೇಕ ಉಪಾದಾಧ್ಯಾಯರಿಗೆ ಈ ವಿಷಯದಲ್ಲಿ ಕ್ರಮವಾದ ಜ್ಞಾನವು ಇಲ್ಲದೇ ಇರುವದರಿಂದ ಅವರಿಗೆ ಉಪಯೋಗವಾಗುವಂತೆ ಈ ಪ್ರಾಣಿಯ ಸಂಬಂಧವಾದ ಮುಖ್ಯ ವಿಷಯಗಳನ್ನು ಇಲ್ಲಿ ಸಂಕ್ಷೇಪವಾಗಿ ತಿಳಿಸಿರುತ್ತದೆ.]

ಈ ಪ್ರಾಣಿಯು ಹುಲಿ, ಸಿಂಹ, ಚಿರತೆ ಮೊದಲಾದ ಕ್ರೂರ ಜಂತುಗಳ ಜಾತಿಗೆ ಸೇರಿದ್ದು. ಆಕಾರಮಾನದಿಂದ ಈ ಜಾತಿಯ ಪ್ರಾಣಿಗಳು ಎಲ್ಲ ಮೃಗಗಳಲ್ಲಿಯೂ ಬಲಶಾಲಿಗಳಾಗಿಯೂ, ಭಯಂಕರವಾದವುಗಳಾಗಿಯೂ ಇರುತ್ತವೆ. ಮನುಷ್ಯನಿಗೆ ಈ ಜಾತಿಯ ಪ್ರಾಣಿಗಳಲ್ಲಿ ಒಂದೆರಡು ಮಾತ್ರ ಆಧೀನವಾಗಿರುತ್ತವೆ.

ಬೆಕ್ಕಿನ ಶರೀರ: — ಬೆಕ್ಕಿಗೆ ಇಲಿ, ಪಕ್ಷಿ ಮೊದಲಾದ ಪ್ರಾಣಿಗಳನ್ನು ಬೇಟೆಯಾಡಿ ಅವುಗಳನ್ನು ತಿನ್ನುವದು ಮುಖ್ಯವಾದ ಸ್ವಭಾವವಾದದ್ದರಿಂದ ಅದರ ಶರೀರವು ಸಂದುಗೊಂದುಗಳಲ್ಲಿ ಪ್ರವೇಶಿಸಲು ಅನುಕೂಲವಾಗಿರುವಂತೆ ಉದ್ದವಾಗಿಯೂ ಹಗುರವಾದದ್ದಾಗಿಯೂ ಇರುತ್ತದೆ.

ಅದರ ತಲೆ: — ಬೆಕ್ಕಿನ ತಲೆಯು ದುಂಡಾಗಿರುವದು; ಅದರ ಶರೀರ ವೂನದಿಂದ ತಲೆಯು ಚಿಕ್ಕದಾಗಿರುವದೆಂದು ಹೇಳಬಹುದು. ಇದರ ಬಾಯಿಯು ದೊಡ್ಡದಾಗಿಯೂ ಅಗಲವಾದದ್ದಾಗಿಯೂ ಇರುತ್ತದೆ. ಬೆಕ್ಕಿನ ದವಡೆಗಳು ದೃಢವಾಗಿರುವುವು; ಇವುಗಳನ್ನು ಕೆಳಕ್ಕೂ ಮೇಲಕ್ಕೂ ಆಡಿಸುವದೇ ಹೊರತು, ಎಡಕ್ಕೂ ಬಲಕ್ಕೂ ಆಡಿಸದಲಾರದು.

ಹಲ್ಲುಗಳು: — ಬೆಕ್ಕಿನ ಬಾಯಿಯನ್ನು ತೆಗೆಸಿದರೆ ಅದರ ಹಲ್ಲುಗಳ ರಚನೆಯನ್ನು ನೋಡಬಹುದು. ಒಂದೊಂದು ಪ್ರಾಣಿಗೂ ಅದರ ಆಹಾರಕ್ಕೆ ತಕ್ಕ ಹಾಗೆ ಹಲ್ಲುಗಳಿರುತ್ತವೆ. ಬೆಕ್ಕಿನ ಬಾಯಿಯಲ್ಲಿ ಮುಂದಿನ ಆರು ಹಲ್ಲುಗಳು ಬಹಳ ಹರಿತವಾದವುಗಳಾಗಿ ಕಡಿಯುವದಕ್ಕೆ ಅನುಕೂಲವಾಗಿರುತ್ತವೆ ಇವುಗಳ ಉಭಯ ಪಾರ್ಶ್ವಗಳಲ್ಲಿರುವ ಉದ್ದವಾದ ಕೋರೆ ಹಲ್ಲುಗಳು ಇತರ ಪ್ರಾಣಿಗಳನ್ನು ಹಿಡಿಯುವದಕ್ಕೂ ವೂಂಸವನ್ನು ಸೀಳುವದಕ್ಕೂ ಉಪಯುಕ್ತವಾಗಿವೆ. ಕೋರೆಗಳ ಹಿಂಭಾಗದಲ್ಲಿ ಒಂದೊಂದು ದವಡೆಯಲ್ಲಿಯೂ ನಾಲ್ಕು ನಾಲ್ಕು ಹರಿತವಾದ ಸಣ್ಣ ಹಲ್ಲುಗಳಿರುತ್ತವೆ. ಇವೂ ಸಹ ವೂಂಸವನ್ನು ತುಂಡು ವೂಡಲು ಸಹಾಯವಾಗಿರುವವೇ ಹೊರತು ಆಹಾರವನ್ನು ಅಗಿಯುವದಕ್ಕೆ ಸಾಧಕಗಳಲ್ಲ.

ನಾಲಿಗೆ: — ಬೆಕ್ಕಿನ ನಾಲಿಗೆಯು ಬಹಳ ಒರಟಾಗಿರುವದು. ಅದರ ಮೇಲೆ ಒಂದು ಬಗೆಯಾದ ಮುಳ್ಳುಗಳಿದ್ದು, ಅದು ಒಂದು ಆರದ ಹಾಗೆ ಇರುತದೆ. ಈ ಮುಳ್ಳುಗಳೆಲ್ಲವೂ ಹಿಂಭಕ್ಕೆ ಬಾಗಿರುವುವು. ಎಲುವುಗಳಿಗೆ (ವೂಳೆಗಳಿಗೆ) ಹತ್ತಿಕೊಂಡಿರುವ ವೂಂಸವನ್ನು ಹಲ್ಲುಗಳಿಂದ ವೂತ್ರವಲ್ಲದೇ, ಅರದ ಹಾಗಿರುವ ನಾಲಿಗೆಯಿಂದಲೂ ನಿಶ್ಶೇಷವಾಗಿ ಕೆರೆದು ತಿನ್ನುವುದು. ಬೆಕ್ಕು ಹಾಲನ್ನು ಕುಡಿಯುವಾಗಲೂ ನಾಲಿಗೆಯನ್ನು ಅದ್ದಿಕೊಂಡು ಕುಡಿಯುವುದು. ಬೆಕ್ಕು ಬಹಳ ಶುಚಿಯಾದ ಪ್ರಾಣಿಯು. ತನ್ನ ವೈಯೇಲೆ ಸ್ವಲ್ಪವೂ ಕೊಳೆಯಿಲ್ಲದಂತೆ ನಾಲಿಗೆಯಿಂದ ವೈಯನ್ನು ಸಹಾ ನೆಕ್ಕುತ್ತಿರುವುದು.

ಕಣ್ಣುಗಳು:— ಬೆಕ್ಕಿನ ಕಣ್ಣುಗಳ ರಚನೆಯು ಸ್ವಲ್ಪ ವಿಶೇಷವಾದದಾಗಿರುತ್ತದೆ. ಇವು ಆಕಾರದಲ್ಲಿ ಹೆಚ್ಚು ಕಡಮೆ ದುಂಡಾಗಿರುವುವು.

ಈ ಕಣ್ಣುಗಳನ್ನು ಹಗಲಿನಲ್ಲಿ ನೋಡಿದರೆ, ಕಣ್ಣಿನ ಗುಡ್ಡುಗಳಲ್ಲಿ ಒಂದು ಸಣ್ಣ ಗೆರೆಯು ಮಾತ್ರ ಕಾಣಿಸುವದು. ಕತ್ತಲೆಯಾಗಿರುವಾಗ ಗುಡ್ಡಿನ ಮಧ್ಯಭಾಗವು ದುಂಡಾಗಿಯೂ ದೊಡ್ಡದಾಗಿಯೂ ಇರುವದು. ಬೆಕ್ಕು ತನಗೆ ಮುಖ್ಯ ಆಹಾರವಾದ ಇಲಿಗಳನ್ನು ರಾತ್ರಿ ಕಾಲದಲ್ಲಿ ಬೇಟೆಯಾಡುತ್ತದೆ. ಕತ್ತಲಾಗಿರುವ ಪ್ರದೇಶಗಳಲ್ಲಿ, ಅಂದರೆ ಇತರ ಪ್ರಾಣಿಗಳಿಗೆ ವಸ್ತುಗಳು ಕಾಣಿಸದ ಸ್ಥಳಗಳಲ್ಲಿ, ಬೆಕ್ಕು ಪದಾರ್ಥಗಳನ್ನಾಗಲೀ ಇಲಿ ಮೊದಲಾದ ಪ್ರಾಣಿಗಳನ್ನಾಗಲಿ ಗುರ್ತಿಸಬಲ್ಲದು.

ಮೀಸೆಗಳು:—ರಾತ್ರಿಯಲ್ಲಿ ಬೇಟೆಯಾಡುವ ಬೆಕ್ಕಿಗೆ ಮತ್ತೊಂದು ಸಹಾಯಕರವಾದ ಅಂಗವು ಇರುತ್ತದೆ. ಕಗ್ಗತ್ತಲೆಯಾಗಿರುವ ಪ್ರದೇಶಗಳಲ್ಲಿ ಬೆಕ್ಕಿಗೂ ಸಹಾ ಕಾಣಿಸುವದಿಲ್ಲ. ಅಂತಹ ಪ್ರದೇಶಗಳಲ್ಲಿ, ಬೆಕ್ಕು ತನ್ನ ಮೀಸೆಗಳ ಸಹಾಯದಿಂದ ತನ್ನ ದಾರಿಯನ್ನು ತಿಳಿದು ಕೊಳ್ಳುವುದು. ಅಂದರೆ ಈ ಮೀಸೆಗಳಿಗೆ ಸ್ಪರ್ಶಜ್ಞಾನವಿರುತ್ತದೆ. ಇವುಗಳ ಸಹಾಯದಿಂದಲೇ ಇಕ್ಕಟ್ಟಾದ ಸ್ಥಳಗಳಲ್ಲಿ ತನ್ನ ಶರೀರವು ಹೋಗುವದಕ್ಕೆ ಸಾಧ್ಯವೋ ಇಲ್ಲವೋ ಎಂಬುವದನ್ನು ತಿಳಿದುಕೊಳ್ಳುತ್ತದೆ. ಈ ಮೀಸೆಗಳಿಗೆ ತಡೆಗಳಿಲ್ಲದೆ ಅವು ಒಳಗೆ ಹೋದರೆ, ಆ ಮಾರ್ಗದಲ್ಲಿ ತನ್ನ ಶರೀರವು ಹೋಗ ಬಹುದೆಂದು ಗ್ರಹಿಸಿಕೊಳ್ಳುವದು.

ಚರ್ಮ:—ನಾವು ಬೆಕ್ಕಿನ ಶರೀರವನ್ನು ಮುಟ್ಟಿದರೆ ಅದು ಬಹಳ ನಯವಾಗಿರುವದು. ಅದರ ಚರ್ಮದ ಮೇಲೆ ಮೃದುವಾದ ತುಪ್ಪಟವು (ಉಣ್ಣೆಯು) ದಟ್ಟವಾಗಿದ್ದು ಬಹಳ ಶಾಖ ವುಳ್ಳದ್ದಾಗಿರುವುದು. ಬೆಕ್ಕು ರಾತ್ರಿಯಕಾಲದಲ್ಲಿ ಹೆಚ್ಚಾಗಿ ಸಂಚರಿಸುವ ಪ್ರಾಣಿಯಾದದ್ದರಿಂದ ಅದಕ್ಕೆ ಈ ವಿಧವಾದ ಅನುಕೂಲವಿರಬೇಕಾದದ್ದು ಅವಶ್ಯಕ. ಬೆಕ್ಕಿನ ಚರ್ಮಕ್ಕೆ ನೀರು ತಗಲಿದರೆ ಸರಿ ಬೀಳುವದಿಲ್ಲ. ಆದುದರಿಂದಲೇ ಬೆಕ್ಕು ನೀರಿನಲ್ಲಿ ಈಜುವದಾಗಲಿ, ಮುಳುಗುವದಾಗಲಿ, ಇಲ್ಲ. ಇದರ ತುಪ್ಪಟಕ್ಕೆ ನೀರು ಅಂಟಿಕೊಂಡರೆ ಬೇಗನೆ ಬಿಡುವದಿಲ್ಲ,

ಕಾಲು:—ಬೆಕ್ಕಿನ ಕಾಲುಗಳು ಬಹಳ ಉದ್ದವಾಗಿರುವದಿಲ್ಲ; ಹೆಚ್ಚಾಗಿ ಒಡಾಡುವದಕ್ಕೆ ಅದು ಒಡಂಬಡುವದಿಲ್ಲ. ಬೆಕ್ಕಿನ ಅಂಗಾ

ಲನ್ನು ನೋಡಿದರೆ ಅದರಲ್ಲಿ ದಿಂಬುಗಳಂತಿರುವ ಮಾಂಸಖಂಡಗಳು ಕಾಣುತ್ತವೆ. ಅಂಗಾಲು ಹೀಗಿರುವದರಿಂದ ಬೆಕ್ಕು ನಡೆಯುವಾಗಲೂ ಓಡುವಾಗಲೂ ಸ್ವಲ್ಪವೂ ಶಬ್ದವಾಗುವದಿಲ್ಲ. ಬೆಕ್ಕಿಗೆ ಶಬ್ದವಾಡದೆ ನಡೆಯಬೇಕಾದ ಅವಶ್ಯಕತೆ ಏನೆಂದು ಕೇಳಿದರೆ ಅದಕ್ಕೆ ಆಹಾರವಾಗಿರುವ ಇಲಿ, ಪಕ್ಷಿಮೊದಲಾದವು ಬೆಕ್ಕಿಗಿಂತ ವೇಗವಾಗಿ ಚಲಿಸುವಂಥವುಗಳಾಗಿರುವದರಿಂದ ಬೆಕ್ಕು ಹಿಂಬಾಲಿಸುವದನ್ನು ತಿಳಿದರೆ ವೇಗವಾಗಿ ಓಡಿ ತಪ್ಪಿಸಿಕೊಳ್ಳಬಹದು. ಈ ಕಾರಣದಿಂದ ಬೆಕ್ಕು ಶಬ್ದವಾಡದೇ ನಡಿಯುತ್ತದೆ. ಬೆಕ್ಕು ನಡೆಯುವಾಗ ನಮ್ಮಹಾಗೆ ಪಾದಗಳನ್ನು ನೆಲದಮೇಲೆ ಊರದೆ ಬೆರಳುಗಳ ಮೇಲೆ ನಡಿಯುತ್ತ ಹಾರುವದಕ್ಕೆ ಸಿದ್ಧವಾಗಿರುವದು.

ಬೆಕ್ಕಿನ ಮುಂಗಾಲುಗಳಲ್ಲಿ ಐದು ಬೆರಳುಗಳೂ, ಹಿಂಗಾಲುಗಳಲ್ಲಿ ನಾಲ್ಕು ಬೆರಳುಗಳೂ ಇರುತ್ತವೆ. ಈ ಬೆರಳುಗಳ ತುದಿಯಲ್ಲಿರುವ ಉಗುರುಗಳು ಬಹಳ ಹರಿತವಾಗಿಯೂ ಕಠಿಣವಾಗಿಯೂ ಚೇಳಿನ ಕೊಂಡಿಯಂತೆ ಬಾಗಿದವುಗಳಾಗಿಯೂ ಇರುತ್ತವೆ. ಈ ಉಗುರುಗಳನ್ನು ಬೆಕ್ಕು ಬೇಕಾದಾಗ ಹೊರಗೆ ಬಿಟ್ಟುಕೊಂಡು, ಇತರ ಕಾಲಗಳಲ್ಲಿ ಒಳಗೆ ಸೇರಿಸಿಕೊಳ್ಳುವುದು. ತಾನು ಬೇಟೆಯಾಡುವ ಇಲಿ, ಪಕ್ಷಿ, ಮೊದಲಾದವುಗಳನ್ನು ಹಿಡಿದುಕೊಳ್ಳುವದಕ್ಕೆ ಉಪಯೋಗಕರವಾದ ಉಗುರುಗಳು ಸವದು ಹೊಗದಂತೆ ಬೆಕ್ಕಿನ ಅಂಗರಚನೆಯಲ್ಲಿ ಈ ವಿಧವಾದ ಅನುಕೂಲ್ಯವು ಏರ್ಪಟ್ಟಿರುತ್ತದೆ. ಬೆಕ್ಕು ಯಾವಪ್ರಾಣಿಯನ್ನಾದರೂ ಹಿಡಿಯಬೇಕಾದರೆ ತನ್ನ ಮುಂಗಾಲುಗಳನ್ನೇ ಉಪಯೋಗಿಸುವದರಿಂದ ಅದರ ಹಿಂಗಾಲುಗಳಲ್ಲಿರುವದಕ್ಕಿಂತಲೂ ಮುಂಗಾಲುಗಳಲ್ಲಿ ಒಂದೊಂದು ಪಾದಕ್ಕೆ ಒಂದೊಂದು ಉಗುರು ಹೆಚ್ಚಾಗಿರುತ್ತದೆ. ಉಗುರುಗಳ ಸಹಾಯದಿಂದಲೇ ಬೆಕ್ಕು ಮರಗಳನ್ನು ಹತ್ತುತ್ತವೆ.

ಬಾಲ:—ಬೆಕ್ಕಿನಬಾಲವು ಉದ್ದವಾಗಿಯೂ ಗಡುತರವಾಗಿಯೂ ಇರುತ್ತದೆ. ಬೆಕ್ಕು ಶಾಂತವಾಗಿರುವಾಗ ಬಾಲವನ್ನು ಸ್ತಬ್ಧವಾಗಿಟ್ಟುಕೊಳ್ಳುವುದು. ಕೋಪಬಂದಾಗ ಬಾಲವನ್ನು ಒಂದುಕಡೆಯಿಂದ ಮತ್ತೊಂದು ಕಡೆಗೆ ಬಿಸುತ್ತ ಝಾಡಿಸಿಕೊಳ್ಳುವುದು.

ಶಾಲಾಪತ್ರಕ.

ಬೆಕ್ಕಿನಿಂದ ಉಪಯೋಗ, ಅದರ ಸ್ವಭಾವಗಳು:—ನಾವು ಮನೆಗಳಲ್ಲಿ ಬೆಕ್ಕುಗಳನ್ನು ಸಾಕುವದರಿಂದ ಇಲಿಗಳ ಬಾಧೆಗಳು ಕಡಮೆಯಾಗುವುವು. ಬೆಕ್ಕು ಇಲಿಗಳ ಬಿಲಗಳ ಹತ್ತರ ಹೊಂಚು ಹಾಕುತ್ತಾ ಕಾದಿದ್ದು ಅವು ಹೊರಗೆ ಬಂದ ಕೂಡಲೆ ಅವುಗಳನ್ನು ಹಿಡಿದು ಕೊಲ್ಲುವದು. ಬೆಕ್ಕಿಗೆ ಅದರ ಮರಿಗಳಲ್ಲಿ ಪ್ರೀತಿ ಬಹಳ ಹೆಚ್ಚಾಗಿರುತ್ತದೆ.

ಬೆಕ್ಕು ತಾನು ವಾಸಮಾಡುವ ಮನೆ ಮೊದಲಾದ ಸ್ಥಳಗಳ ವಿಷಯದಲ್ಲಿ ತೋರಿಸುವಷ್ಟು ಪ್ರೀತಿಯನ್ನು ಮನುಷ್ಯರ ವಿಷಯದಲ್ಲಿ ತೋರಿಸುವದಿಲ್ಲ. ಒಡೆಯನ ವಿಷಯದಲ್ಲಿ ನಾಯಿಗೆ ಇರುವಷ್ಟು ವಿಶ್ವಾಸವು ಬೆಕ್ಕಿಗೆ ಇರುವದಿಲ್ಲ.

ಪಾಠಗಳ ಟಿಪ್ಪಣಿ.

ವಿಷಯ:—ಬೆಕ್ಕಿನ ಅಂಗರಚನೆ ಮತ್ತು ಸ್ವಭಾವಗಳು.

ಕಲಿಯುವ ಹುಡುಗರ ವಯಸ್ಸು:—೯, ೧೦ (ಇವರು, ೩, ೪ ವರ್ಗ ಅಥವಾ ಇಯತ್ತೆಯ ಹುಡುಗರಾಗಿರಬಹುದು.)

ವೇಳೆ:—೪೦ ನಿಮಿಷಗಳ ೨ ಅಥವಾ ೩ ಪಾಠಗಳು (ಬೆಕ್ಕಿನ ಸಂಬಂಧವಾದ ಯಾವತ್ತೂ ವಿಷಯಗಳನ್ನೂ ಒಂದೇ ಪಾಠದಲ್ಲಿ ತಿಳಿಸುವದು ಸಾಧ್ಯವಲ್ಲ. ಆದುದರಿಂದ ಈ ವಿಷಯಗಳನ್ನು ಭಾಗಗಳಾಗಿ ಮಾಡಿಕೊಂಡು ೨, ೩ ಪಾಠಗಳಲ್ಲಿ ಕಲಿಸಬೇಕು.)

ಉದ್ದೇಶ ಮತ್ತು ಉಪಕರಣ:—ಈ ವಯಸ್ಸಿನ ಹುಡುಗರ ನಿರೀಕ್ಷಣೆಗೊಳಗಾಗುವ ಬೆಕ್ಕಿನ ಅಂಗರಚನೆ, ಸ್ವಭಾವ ಮತ್ತು ಅಭ್ಯಾಸಗಳನ್ನು ವಿಚಾರಮಾಡಿ ಮುಕ್ಕಳ ಕಾರ್ಯಕಾರಣಗಳ ಭಾವವನ್ನೂ ವಿವರಣ ಶಕ್ತಿಯನ್ನೂ ಬೆಳೆಯಿಸುವದು ಈ ಪಾಠದ ಉದ್ದೇಶ. ಈ ಪಾಠಕ್ಕೆ ಅವಶ್ಯಕವಾದ ಉಪಕರಣಗಳು ಯಾವವೆಂದರೆ:—ಬೆಕ್ಕಿನಮರಿ, ಹಾಲನ್ನು ಕುಡಿಸಲು ಬೇಕಾದ ತಟ್ಟೆ, ಹಾಲು. (ಈ ಪಾಠವನ್ನು ನಡಿಸುವದಕ್ಕೆ ಕೆಲವು ದಿನಗಳಿಗೆ ಮುಂಚಿತವಾಗಿಯೇ ಶಾಲೆಯಲ್ಲಿ ಒಂದು ಬೆಕ್ಕಿನ ಮರಿಯನ್ನು ತಂದಿಟ್ಟುಕೊಳ್ಳಬಹುದು. ಅಥವಾ ಹುಡುಗರ ಮನೆಗಳಲ್ಲಿ ಬೆಕ್ಕುಗಳನ್ನು ಸಾಕುತ್ತಿದ್ದರೆ ಅವುಗಳಲ್ಲಿ ಒಂದೆರಡನ್ನು ತರಿಸಬಹುದು.)

ಮೊದಲನೇ ಭಾಗ.

ವಿಷಯ.	ತಿಳಿಯುವ ಕ್ರಮ ಮತ್ತು ಪ್ರಶ್ನೆಗಳು.
ಬೆಕ್ಕಿನ ಶರೀರವು ಉದ್ದವಾಗಿಯೂ, ತೆಳುವಾಗಿಯೂ ಇರುತ್ತದೆ.	ಬೆಕ್ಕನ್ನು ತಂದು ಮೇಜಿನ ಮೇಲೆ ಅಥವಾ ನೆಲದ ಮೇಲೆ ನಿಲ್ಲಿಸಿ, ಹುಡುಗರನ್ನು ಸುತ್ತಲೂ ಕೂಡಿಸಿ, ಬೆಕ್ಕಿನ ಒಟ್ಟು ಆಕಾರವನ್ನು ನೋಡಿರೆಂದು ಹೇಳಬೇಕು. ಅನಂತರ ಅದರ ದೇಹದ ರಚನೆಯನ್ನು ಕುರಿತು ಪ್ರಶ್ನೆ ಮಾಡಬೇಕು.
ತಲೆ:—ಬೆಕ್ಕಿನ ತಲೆಯು ದುಂಡಾಗಿಯೂ ಚಿಕ್ಕದಾಗಿಯೂ ಇರುತ್ತದೆ.	ಬೆಕ್ಕಿನ ತಲೆಯನ್ನು ಗಮನಿಸಿ ನೋಡಿರೆಂದು ಹೇಳಿ ಅದರ ಆಕಾರ ಮತ್ತು ಪ್ರಮಾಣ, ಇವುಗಳನ್ನು ಹುಡುಗರಿಂದ ಹೊರಡಿಸಬೇಕು.
(ಅ) ಬಾಯಿ:— ಅದರ ಬಾಯಿಯು ದೊಡ್ಡದಾಗಿಯೂ ಅಗಲವಾಗಿಯೂ ಇರುತ್ತದೆ.	ಬೆಕ್ಕು ಅಕಳಿಕೆಯನ್ನು ಬಿಟ್ಟು ಬಾಯಿಯನ್ನು ತೆರೆದಿರುವಾಗ ನೋಡಿರುವರು ಯಾರು? ಅದರ ಬಾಯಿಯು ಹೇಗಿರುತ್ತದೆ? ಎಂಬ ಪ್ರಶ್ನೆಗಳನ್ನು ಕೇಳಬೇಕು.
ಹಲ್ಲುಗಳು:— ಇವು ಮೊನೆಯುಳ್ಳವುಗಳಾಗಿಯೂ ಹರಿತವಾಗಿಯೂ ಇರುತ್ತವೆ. ಬಾಯಿಯ ಮುಂಭಾಗದಲ್ಲಿ ೬ ಹರಿತವಾದ ಸಣ್ಣ ಹಲ್ಲುಗಳೂ, ಪಾರ್ಶ್ವದಲ್ಲಿ ಉದ್ದವಾಗಿಯೂ ಬಲವಾಗಿಯೂ ಇರುವ ಕೊರೆಯ ಹಲ್ಲುಗಳೂ, ಇವುಗಳ ಹಿಂಭಾಗದಲ್ಲಿ ಮೊನೆಯುಳ್ಳ ಸಣ್ಣ ಹಲ್ಲುಗಳೂ ಇರುತ್ತವೆ.	ಬೆಕ್ಕು ಬಾಯಿಯನ್ನು ತೆಗದ ಕೂಡಲೆ ಅದರಲ್ಲಿ ಕಾಣಿಸುವವು ಯಾವವು? ಈ ಪ್ರಶ್ನೆಯಿಂದ ಹಲ್ಲುಗಳ ವಿಷಯಕ್ಕೆ ಬರಬಹುದು. ಬೆಕ್ಕಿಗೆ ತಿನ್ನುವದಕ್ಕೆ ತುಪ್ಪ ಅಥವಾ ಬೆಣ್ಣೆಯನ್ನು ಸವರಿದ ಒಂದು ರೊಟ್ಟಿಯ ಚೂರನ್ನು ಕೊಟ್ಟು ಅದು ತಿನ್ನುವ ಕ್ರಮವನ್ನು ಲಕ್ಷಿಸಬೇಕು. ಅದರ ಹಲ್ಲುಗಳನ್ನು ಹೇಗೆ ಉಪಯೋಗಿಸುತ್ತದೆ? ಬೆಕ್ಕಿನ ದವಡೆಗಳು ಹೇಗೆ ಚಲಿಸುತ್ತವೆ? ಒಬ್ಬ ಹುಡುಗನಿಗೂ ಒಂದು ತುಂಡನ್ನು ಕೊಟ್ಟು ಬೆಕ್ಕು ತಿನ್ನುವದಕ್ಕೂ ಆ ಹುಡುಗನು ತಿನ್ನುವದಕ್ಕೂ ಇರುವ ವ್ಯತ್ಯಾಸವೇನೆಂದು ಇತರ ಹುಡುಗರನ್ನು ಕೇಳಬೇಕು. ನಮ್ಮಹಾಗೆ ಸಾವಕಾಶದಿಂದ ಅಗಿಯದೆ, ರೊಟ್ಟಿಯನ್ನು ತುಂಡುಗಳಾಗಿ ಕತ್ತರಿಸಿ ನುಂಗುವದನ್ನು ಹುಡುಗರ ಲಕ್ಷ್ಯಕ್ಕೆ ತರಬೇಕು.

ವಿಷಯ	ತಿಳಿಸುವಕ್ರಮ ಮತ್ತು ಪ್ರಶ್ನೆಗಳು
ನಾಲಿಗೆ:— ಬೆಕ್ಕು ಹಾಲು, ಮೊಸರು ಮೊದಲಾದ ದ್ರವಗಳನ್ನು ನಾಲಿಗೆಯಿಂದ ಅದ್ದಿ ಸೇವಿಸುತ್ತದೆ. ನಾಲಿಗೆಯ ಮೇಲ್ಭಾಗವು ಒರಟಾಗಿಯೂ, ಮುಳ್ಳುಗಳುಳ್ಳದ್ದಾಗಿಯೂ ಇರುತ್ತದೆ. ಈ ಮುಳ್ಳುಗಳಿಂದಲೇ ಎಲುವುಗಳಿಗೆ ಹತ್ತಿಕೊಂಡಿರುವ ಮಾಂಸವನ್ನು ಕೆರೆದು ತಿನ್ನುತ್ತದೆ	ಒಂದು ತಟ್ಟೆಯಲ್ಲಿ ಸ್ವಲ್ಪ ಹಾಲನ್ನು ಹಾಕಿ ಬೆಕ್ಕಿನ ಮುಂದಿಟ್ಟು ಅದು ಕುಡಿಯುವದನ್ನು ನೋಡಬೇಕು. ನಾವು ಕುಡಿಯುವ ಕ್ರಮಕ್ಕೂ ಅದು ಕುಡಿಯುವದಕ್ಕೂ ಇರುವ ವ್ಯತ್ಯಾಸವೇನೆಂದು ಹುಡುಗರನ್ನು ಕೇಳಬೇಕು. ಅದರ ನಾಲಿಗೆಯ ಮೇಲ್ಭಾಗವು ಹೇಗೆ ಕಾಣುತ್ತದೆ? (ಒಬ್ಬ ಹುಡುಗನ ಕೈಯಲ್ಲಿ ಸ್ವಲ್ಪ ಹಾಲನ್ನು ಹಾಕಿ ಬೆಕ್ಕಿಗೆ ಕೊಡೆಂದು ಹೇಳಿ ಅದರ ನಾಲಿಗೆಯು ಕೈಗೆ ಹೇಗೆ ಹತ್ತುತ್ತದೆಂದು ಕೇಳಬಹುದು) ನಾಲಿಗೆಯಲ್ಲಿ ಮುಳ್ಳುಗಳಿರುವದರಿಂದ ಉಪಯೋಗವೇನು?
(೨) **ಕಣ್ಣು:—** ಬೆಕ್ಕಿನ ಕಣ್ಣು ಸ್ವಲ್ಪ ಹೆಚ್ಚು ಕಡಿಮೆ ದುಂಡಾಗಿರುವದು. ಅದರ ಮಧ್ಯ ಭಾಗದಲ್ಲಿ ನಮ್ಮ ಕಣ್ಣಿನಲ್ಲಿರುವ ಹಾಗಲ್ಲದೆ ಒಂದು ರೇಖೆಯು ಮಾತ್ರ ಕಾಣುವುದು.	ಹುಡುಗರನ್ನು ಬೆಕ್ಕಿನ ಕಣ್ಣನ್ನು ನೋಡಿ ಅದು ಹೇಗೆ ಕಾಣುತ್ತದೆಂದು ಕೇಳಬೇಕು. ನಮ್ಮ ಕಣ್ಣಿಗೂ ಅದರ ಕಣ್ಣಿಗೂ ಏನು ವ್ಯತ್ಯಾಸವಿರುತ್ತದೆ?
ರಾತ್ರಿಯಲ್ಲಿಯೂ ಹಗಲಲ್ಲಿ ಕತ್ತಲೆಯಾಗಿರುವ ಪ್ರದೇಶಗಳಲ್ಲಿಯೂ ಬೆಕ್ಕಿನ ಕಣ್ಣಿನ ಮಧ್ಯಭಾಗವು ದುಂಡಾಗಿಯೂ ಮಿಂಚುತ್ತಲೂ ಇರುವದು.	ಬೆಕ್ಕಿನ ಕಣ್ಣನ್ನು ರಾತ್ರಿಯ ವೇಳೆಯಲ್ಲಿ ಯಾರಾದರೂ ನೋಡಿದ್ದಿರಾ? ಅದು ಹೇಗೆ ಕಾಣುತ್ತದೆ? ಎಂಬ ಪ್ರಶ್ನೆಗಳನ್ನು ಕೇಳಬೇಕು. ಇದಕ್ಕೆ ಸಮರ್ಪಕವಾದ ಉತ್ತರಗಳನ್ನು ಹೊರಡಿಸಿದನಂತರ ಬೆಕ್ಕಿನ ಕಣ್ಣುಗಳು ಹಗಲಿನಲ್ಲಿ ಕಾಣುವದಕ್ಕೂ ರಾತ್ರಿಯಲ್ಲಿ ಕಾಣುವದಕ್ಕೂ ವ್ಯತ್ಯಾಸಗಳಿಂದಲೂ ಕಾರಣವೇನೆಂಬ ವಿಚಾರ ಮಾಡಬೇಕು.

ವಿದ್ಯಾಖಾತೆಯ ಮೇಲಧಿಕಾರಿಗಳ ಅಪ್ಪಣೆಯ ಮೇರೆಗೆ ಈಗೆ ರಡು ವರ್ಷಗಳಿಂದ ಪ್ರತಿಯೊಂದು ಜಿಲ್ಲೆಯಲ್ಲಿ "ಶಿಕ್ಷಕರ ಸಮ್ಮೇಲನ" ಗಳು ನಡೆಯುತ್ತಿರುವವಷ್ಟೇ. ಅದರಂತೆ ಈ ವರ್ಷ ಧಾರವಾಡ ಜಿಲ್ಲೆಯಲ್ಲಿ ನಡೆಯುವ ಸಮ್ಮೇಲನಗಳ ಕಾರ್ಯಕ್ರಮವು ಆ ಜಿಲ್ಲೆಯ ಡಿ. ಎ. ಇ. ರವರಿಂದ ನಮ್ಮ ಕಡೆಗೆ ಬಂದದ್ದನ್ನು ಇಲ್ಲಿ ಕೊಟ್ಟಿರುವೆವು. ಹಾಗೂ ಅಣ್ಣಿಗೇರಿಯಲ್ಲಿ ಕೂಡಿದ ಶಿಕ್ಷಕರ ಸಮ್ಮೇಲನದ ವೃತ್ತಾಂತವೂ ಆ ಸಮ್ಮೇಲನದ ಸೆಕ್ರೆಟರಿಯವರಿಂದ ಬಂದಿದ್ದು ಅದರ ಸಾರಾಂಶವನ್ನೂ ಇದರಡಿಯಲ್ಲಿ ಕೊಡುವೆವು.

ಶಿಕ್ಷಕರ ಸಮ್ಮೇಲನಕ್ಕಾಗಿ ತೆಗೆದುಕೊಳ್ಳತಕ್ಕ ವಿಷಯಗಳು.

೧. ಶಾಲೆಯ ವಾಚನಾಲಯಗಳು.

೨. ಶಾಲೆಯ ಪದಾರ್ಥಸಂಗ್ರಹಾಲಯಗಳೂ ಪ್ರಕೃತಿವಿಜ್ಞಾನವೂ.

೩. ಸಣ್ಣ ಶಾಲೆಗಳ ಶಿಕ್ಷಕರ ಕರ್ತವ್ಯಗಳೂ, ಅವುಗಳನ್ನು ಸಮಾಧಾನಕರವಾಗಿ ಜರಗಿಸುವದರಲ್ಲಿ ಒದಗುವ ತೊಂದರೆಗಳೂ, ಈ ತೊಂದರೆಗಳನ್ನು ಹೋಗಲಾಡಿಸುವ ಉಪಾಯಗಳೂ.

೪. ನೈತಿಕ ಶಿಕ್ಷಣದ ಅವಶ್ಯಕತೆ.

೫. ಹುಡುಗರ ಪರಸ್ಪರ ಸಹಾಯಕಾರಕ ಸಂಘಗಳೂ, ಅವುಗಳಿಂದಾಗುವ ಲಾಭಗಳೂ.

೬. ಶಾಲೆಯನ್ನು ಹಾಕಲಿಕ್ಕೆ ಒಕ್ಕಲತನದವರಿಗೆ ಅನುಕೂಲವಾದ ವೇಳೆಯು ಯಾವದು.

೭. ಹುಡುಗರಲ್ಲಿ ಓರಣ, ಸ್ವಚ್ಛತೆ, ನಿಯಮಿತತನ ಮುಂತಾದ ಚಟಗಳನ್ನು ಹುಟ್ಟಿಸಲಿಕ್ಕೆ ಅನುಕೂಲವಾದ ಸಾಧನಗಳು.

ಧಾರವಾಡ ಜಿಲ್ಲೆಯಲ್ಲಿ ಕೂಡುವ ಶಿಕ್ಷಕರ ಸಮ್ಮೇಲನಗಳ ಸ್ಥಳ, ಕಾಲ. ಮು. ಗಳನ್ನು ತೋರಿಸುವ ಪತ್ರಿಕೆಯು.

ನಂ	ಸ್ಥಳ.	ಕಾಲ.		ಅಧ್ಯಕ್ಷರು.	ಕಾರ್ಯದರ್ಶಿಗಳು.
೧	ಅಣ್ಣಿಗೇರಿ	ತಾ. ೮/೯	೧ / ೧೯೧೭	ಮಿ. ಸೋಹನಿ ಮತ್ತು ಡಿ.ಎ.ಇ.ರು	ಹೆ.ಮೂ.ಕ. ಶಾಲಾ ಅಣ್ಣಿಗೇರಿ.
೨	ಸವಡಿ	,, ೧೫/೧೬	೧ / ೧೯೧೭	ಮಿ. ದೇಶಪಾಂಡೆ	,, ಸವಡಿ
೩	ಲಕುಂಡಿ	,, ೨೨/೨೩	೧ / ೧೯೧೭	ಮಿ. ಪರ್ವತೀಕರ	,, ಲಕ್ಕುಂಡಿ
೪	ಬ್ಯಾಡಗಿ	,, ೨೯/೩೦	೧ / ೧೯೧೭	ಮಿ. ಮನೋಳಿ	,, ಬ್ಯಾಡಗಿ
೫	ಬಂಕಾಪುರ	,, ೨/೩	೨ / ೧೯೧೭	ಮಿ. ಮಣ್ಣೂರ	,, ಬಂಕಾಪುರ
೬	ಕಜ್ಜಿಗಿ	,, ೫/೬	೨ / ೧೯೧೭	ಮಿ. ಹಿ. ಆರ್ ಪರ್ವತೀಕರ	,, ಕಜ್ಜಿಗಿ
೭	ಕಲಘಟಗಿ	,, ೧೨/೧೩	೨ / ೧೯೧೭	ಮಿ. ಖಾಜಾಪುರ, ಮತ್ತು ಡಿ.ಎ.ಇ.ರು.	,, ಕಲಘಟಗಿ

ರಾವಸಾಹೇಬ ಏಡಿಟರ ಕನ್ನಡ ಶಾಲಾಪತ್ರಕ ಧಾರವಾಡ ಇವರ ಸನ್ನಿಧಾನಕ್ಕೆ.—

ವಿಧೇಯ ಹೆಡ್ ಮಾಸ್ತರ ಕನ್ನಡ ಶಾಲಾ ಅಣ್ಣೀಗೇರಿ, ಹಾಗು ಸೆಕ್ರೆಟರಿ ಶಿಕ್ಷಕರ ಸಮ್ಮೇಲನ ಅಣ್ಣೀಗೇರಿ ಈತನ ವಿನಯ ವಿನಂತಿ ಏನಂದರೆ:—

ಸತಕ್ಯೂಲರ, ಹಾಗು ಈ ಭಾಗದ ಅಸಿ. ಡೆ. ಯೆವರಾದ ರಾವ ಸಾಹೇಬ ಸೊಹನಿಯವರ ವ್ಯವಸ್ಥೆಯ ಸಂಬಂಧದ ಹುಕುಮು, ಬಂದ ಮೇರೆಗೆ ಸುತ್ತುಮುತ್ತಲಿನ ೧೦ ಮೈಲು ಅಂತರದಲ್ಲಿರುವ ಯಾವ ತೂ. ಶಿಕ್ಷಕರಿಗೆ ಸಮ್ಮೇಲನಕ್ಕೆ ಬರುವ ಬಗ್ಗೆ ವಿನಂತಿ ಮಾಡಿ ಕೊಂಡಿತ್ತು. ಅದರಂತೆ ಎಲ್ಲ ಕಡಯಿಂದ ಕೂಡಿ ೧೦೧ ಜನ ಶಿಕ್ಷಕರು ಬಂದಿದ್ದರು.

ಶಿಕ್ಷಣದಂಥ ಪವಿತ್ರ ಕಾರ್ಯಕ್ಕೆ ತೊಡಗಿದ ಪರಸ್ಥಳದ ಶಿಕ್ಷಕ ಸಮುದಾಯಕ್ಕೆ ಊಟದ ವ್ಯವಸ್ಥೆಯೆನ್ನು ಮಾಡುವೆವೆಂದು ಊರೊಳಗಿನ ಎಲ್ಲ ಜಾತಿಯ ಪ್ರಮುಖ ಜನರು ಒಟ್ಟುಗೂಡಿ ೧೧೩ ರೂಪಾಯಿಗಳ ವರ್ಗಣೆಯನ್ನು ಕೂಡಿಸಿ ಜಾತಿಮತಗಳ ಪ್ರಕಾರ ಊಟದ ವ್ಯವಸ್ಥೆಯನ್ನು ಮಾಡಿಸಿದರು. ಈ ಬಗ್ಗೆ ಊರವರನ್ನು ಎಷ್ಟು ಕೊಂಡಾಡಿದರೂ ತೀರದು. ಈ ಊರ ಪ್ರಮುಖ ಗೃಹಸ್ಥರಲ್ಲಿ ಒಬ್ಬರಾದ ವೇ. ಶಾ. ಸ. ಗಣೇಶಭಟ್ಟ ಘಳಗಿ ಇವರು ತಮ್ಮ ಅಗ್ನಿಹೋತ್ರ ಇಷ್ಟಿಯ ನಿಮಿತ್ತವಾಗಿ ಒಂದು ದಿವಸ ಯಾವತ್ತೂ ಶಿಕ್ಷಕರನ್ನು ಊಟಕ್ಕೆ ಕರೆದಿದ್ದರು.

ಶಾಲೆಯ ಇಮಾರತಿಯನ್ನು ಸುಶೋಭಿತವುಳ್ಳದ್ದನ್ನಾಗಿ ಮಾಡುವದಕ್ಕೂ ಪಾನುಸುಪಾರಿ ಮುಂತಾದವುಗಳ ವ್ಯವಸ್ಥೆಯ ಬಗ್ಗೆಯೂ ಇಲ್ಲಿಯ ಎಜ್ಯುಕೇಶನಲ್ ಕಮೀಟಿಯವರು ೫೦ ರೂಪಾಯಿಗಳನ್ನು ಕೊಟ್ಟರು.

ಟ್ರೇನಿಂಗ ಕಾಲೇಜುಗಳಿಗೂ ಪ್ರಾಥಮಿಕ ಶಾಲೆಗಳಿಗೂ ಇರತಕ್ಕ ಸಂಬಂಧವು ಕಡೆತನಕ ಉಳಿಯಬೇಕು. ಅದನ್ನರಿತು, ಹೆಣ್ಣು ಮಕ್ಕಳ ಟ್ರೇ. ಕಾ. ದ ಲೇಡೀಸುಪರಿಂಟೆಂಡೆಟರಿಗೂ ಅವರ ಅ. ಮಿಸ್ಟ್ರೆಸ ಹಾಗೂ ಗಂಡುಮಕ್ಕಳ ಟ್ರೇ. ಕಾ. ದ ೩ ನೇ ವರ್ಷದ ವಿದ್ಯಾರ್ಥಿಗಳಿಗೂ ಸಮ್ಮೇಲನಕ್ಕೆ ಬರುವ ಬಗ್ಗೆ ವಿನಂತಿ ಮಾಡಿಕೊಂಡಿತ್ತು. ಆ ಮೇರೆಗೆ ಮೆ. ಲೇಡೀಸುಪರಿಂಟೆಂಡೆಂಟರೂ ಅವರ ಅಸಿ. ರೂ ಗಂಡುಮಕ್ಕಳ ಟ್ರೇ. ಕಾ. ದ ಒಬ್ಬಿಬ್ಬ ವಿದ್ಯಾರ್ಥಿಗಳೂ ಬಂದಿದ್ದರಾದ್ದರಿಂದ ಸಮ್ಮೇಲನಕ್ಕೆ ಒಂದು ವಿಶೇಷ ತರದ ಕಳೆಯುಬಂದಿತ್ತು.

ಟ್ರೇ. ಕಾ. ದ ಪ್ರಿನ್ಸಿಪಾಲರು ಕೆಲವು ಶಾಸ್ತ್ರೀಯ ಪ್ರಯೋಗದ ಉಪಕರಣಗಳನ್ನೂ ಮೆ. ಲೇಡೀ ಸುಪರಿಂಟೆಂಡೆಂಟರು ಶಾರೀರಶಾಸ್ತ್ರದ ಎಲ್ಲ ಚಾರ್ಟುಗಳನ್ನೂ ಸಮ್ಮೇಲನದ ವಸ್ತು ಪ್ರದರ್ಶನದಲ್ಲಿ ಇಡುವದಕ್ಕಾಗಿ ಕೊಟ್ಟಿದ್ದರು. ಸವಡಿ ಶಾಲೆಯ ಅಸಿ. ಮಾಸ್ತರ ಮಿ. ಮಹಾಂತಶಟ್ಟ ಇವರು ತಾವು ತಯಾರಿಸಿದ ಹಿಂದುಸ್ಥಾನದ ಖನಿಜಗಳನ್ನು ತೆಗೆದುಕೊಂಡು ಬಂದಿದ್ದರು.

ಕಾರ್ಯಕ್ರಮ ಪತ್ರಿಕೆಯಂತೆ ನಿಬಂಧಗಳನ್ನು ಓದೋಣ, ಪಾಠಗಳನ್ನು ಕಲಿಸುವದು ಮುಂತಾದವುಗಳು ನಡೆದನಂತರ ಸಮ್ಮೇಲನದ

ಅಧ್ಯಕ್ಷರಾದ ರಾ. ಸಾ. ರಾಮಚಂದ್ರರಾವ ಪೆರೂರ ಡೆ. ವಿ. ಇ. ಧಾರವಾಡ ಇವರು ಮಗ್ಗಿಯ ಪಾಠವನ್ನು ಸ್ವತಃ ಕಲಸ ತೋರಿಸಿ ಮತ್ತು ವಿಷಯಗಳನ್ನು ಕಲಿಸುವಾಗ ಶಿಕ್ಷಕರಿಂದ ಆಗುವ ಪ್ರಮಾದಗಳ ಬಗ್ಗೆ ಉಪಯುಕ್ತವಾದ ಸೂಚನೆಗಳನ್ನು ಮಾಡಿದರು. ಮರುದಿವಸ 'ಶಿಕ್ಷಕರಿಗೆ ಸೂಚನೆಗಳು' ಈ ವಿಷಯದ ಬಗ್ಗೆ ಸರಸಾದ ವ್ಯಾಖ್ಯಾನವನ್ನು ಕೊಟ್ಟರು. ಅವುಗಳಲ್ಲಿ ನಾವು ಅನುಸರಿಸತಕ್ಕ ಮುಖ್ಯಾಂಶಗಳಂದರೆ.

೧ ಅಂಕಗಣಿತದ ಒಂದೇ ಮೂಲ ತತ್ವದ ಸಹಾಯದಿಂದ ಪ್ರಶ್ನೆ ಸಮುದಾಯದೊಳಗಿನ ಅನೇಕ ವ್ಯವಹಾರದ ಉದಾಹರಣೆಗಳನ್ನು ಹ್ಯಾಗೆ ಬಿಡಿಸಬೇಕು.

೨ ಭೂಗೋಲದ ಯಥಾರ್ಥ ಶಿಕ್ಷಣವೆಂದರೇನು?

೩ ನೈತಿಕ ಶಿಕ್ಷಣ (ಸ್ವಂತ ಆಚರಣೆಯಿಂದ ವಿದ್ಯಾರ್ಥಿಗಳಲ್ಲಿ ನೀತಿಯನ್ನು ನೆಲೆಗೊಳಿಸುವ ಉಪಾಯಗಳು)

೪ ಶಿಕ್ಷಕರ ವರ್ತನ (ಶಿಕ್ಷಕರು ಅಧಿಕಾರ ರಹಿತರಾದ್ದರಿಂದ ವಿದ್ವಾಂಸರೂ, ಕರ್ತವ್ಯದಕ್ಷರೂ, ಉತ್ಸಾಹಿಗಳೂ ಆಗಿ ಊರ ಜನರಲ್ಲಿ ಮರ್ಯಾದೆಯನ್ನು ಪೊಂದುವ ಮಾರ್ಗಗಳು)

ಇವೇ ಮೊದಲಾದವುಗಳಿದ್ದವು.

ಮರುದಿವಸ ಸಾಯಂಕಾಲಕ್ಕೆ ಮ್ಯಾಜಿಕ್‌ಲ್ಯಾಂಟರ್ನದ ಸಹಾಯದಿಂದ ಯುರೋಪದ ಮಹಾಯುದ್ಧದ ಸಂಬಂಧದ ವ್ಯಾಖ್ಯಾನವನ್ನು ಸಮ್ಮೇಲನದ ಸೆಕ್ರೆಟರಿಯವರಾದ ಮಿ, ತ. ಸಾ. ಅಮಿನಭಾವಿಯವರು ಕೊಟ್ಟರು. ಬಂದ ಯಾವತ್ತೂ ಜನರ ಆಭಾರ ಮನ್ನಿಸಿದ ತರುವಾಯ ಸಭೆಯು ವಿಸರ್ಜನವಾಯಿತು. ಪತ್ರ ವಿಸ್ತಾರಕ್ಕೆ ಕ್ಷಮೆ ಇರಲಿ.

ವಿಧೇಯ.

ತ. ನಾ. ಅಮಿನಭಾವಿ.

ಶಿಕ್ಷಕರ ಸಮ್ಮೇಲನ.

ನವಂಬರ (೧೬) ತಿಂಗಳ ಶಾಲಾಪತ್ರಿಕದಲ್ಲಿ ಮುದೂರ ಶಾಲೆಯ ಮಾಸ್ತರ ಮಿ. ಕುಲಕರ್ಣಿಯವರು ಕೊಟ್ಟ ಲೆಕ್ಖಿಗಳಿಗೆ ಉತ್ತರವೆಂದು ಅನೇಕ ಜನರು ಬರೆದು ಕಳಿಸಿರುವರು. ಎಲ್ಲರೂ ಬೀಜಗಣಿತದಂತೆಯೇ ಬಿಡಿಸಿರುವರು. ಅವು ಶಿಕ್ಷಕ ಜನರ ತಿಳುವಳಿಕೆಯ ಪೂರ್ತಿ ಬರೆಯಲ್ಕಡುವದಕ್ಕಿಂತ ಮೇಲಿನ ಕ್ಲಾಸುಗಳ ವಿದ್ಯಾರ್ಥಿಗಳಿಗೂ ಕೂಡ ತಿಳಿಯುವಷ್ಟು ಸುಲಭವಾಗಿ ಬರೆಯಲ್ಕಡುವದು ಹೆಚ್ಚು ಉಪಯುಕ್ತವು. ಕ್ಷ. ಯ. ಮುಂತಾದವುಗಳಿಗಿಂತ ವಿಶೇಷ ಸಂಖ್ಯೆಯನ್ನು ಹಿಡಿದು ಉದಾಹರಣೆಗಳನ್ನು ಬಿಡಿಸುವದರಿಂದ ವಿದ್ಯಾರ್ಥಿಗಳಿಗೆ ಸುಲಭವಾಗಿ ತಿಳಿಯುವದು. ಕರ್ಜಗಿಯ ಧೇಡಸ್ಕೂಲ ಮಾಸ್ತರ ಮುಂತಾದ ಒಬ್ಬಬ್ಬರು ಇದೇ ಧೋರಣದಂತೆ ಬಿಡಿಸಲು ಯತ್ನಮಾಡಿದ್ದರೂ, ಉದಾಹರಣೆಯನ್ನು ಬಿಡಿಸುವ ಪದ್ಧತಿಯು ಅಷ್ಟು ಸಮಂಜಸವಾಗಿಲ್ಲವಾದ್ದರಿಂದ ಅವುಗಳಲ್ಲಿಯೇ ಒಂದನ್ನು ಇದ್ದಂತೆಕೆಳಗೆ ಕೊಟ್ಟಿರುವೆವು.

ಎ ಶಾ. ಪ.

ಮ. ರಾ ರಾ. " ಮ್ಯಾನೇಜರ ಕನ್ನಡ ಶಾಲಾಪತ್ರಿಕ "
ಧಾರವಾಡ ಇವರ ಸನ್ನಿಧಾನಕ್ಕೆ

ಶ್ರೀ ಸಾ. ನ. ವಿನಂತಿ ಏನಂದರೆ—ಕಳೆದ ನವಂಬರ ತಿಂಗಳ ಮಾಸಪತ್ರಿಕೆಯಲ್ಲಿ ' ಮಿ. ಎಲಗುರ್ದ ಭೀಮಾಜಿ ಕುಲಕರ್ಣಿ ' ಶಾಲಾ ಮಾಸ್ತರ ಮುದೂರ ಇವರು ಕೊಟ್ಟ ಎರಡು ಉದಾಹರಣೆಗಳನ್ನು ನನ್ನ ಮಂದಮತಿಗನುಸಾರವಾಗಿ ಬಿಡಿಸಿ ಕಳಿಸಿರುತ್ತೇನೆ. ಯೋಗ್ಯಕಂಡಲ್ಲಿ ತಮ್ಮ ಮಾಸಪತ್ರಿಕೆಯಲ್ಲಿ ಸ್ಥಳದೊರದೀತೆಂದು ಅಂಜಲಿಬದ್ಧನಾಗಿ ಬೇಡಿಕೊಳ್ಳುತ್ತೇನೆ.

೧ನೇ ಉದಾಹರಣೆ :—ಅ ಬ ಕ, ಈ ಮೂವರು ಪ್ರತಿಪ್ರತ್ಯೇಕವಾಗಿ ಒಂದೊಂದು ಶಾಖೆಯಲ್ಲಿರುವ ಹಣ್ಣುಗಳನ್ನು ಹರಿದುಕೊಂಡು ಕೆಳಗೆ ಇಳಿದರೆಂದು ತಿಳಿಯುವಾ.

ಅ ನು ಉಳಿದ ಶಾಖೆಯ ಹಣ್ಣು ತಕ್ಕೊಂಡರೆ.

ಅ ನ ಹಣ್ಣು + ಉಳಿದ ಹಣ್ಣು = (ಬ ನ ಹಣ್ಣು + ಕ ನ ಹಣ್ಣು) × ೨

ಒಟ್ಟು ಹಣ್ಣುಗಳಲ್ಲಿ ಅ ನ ಹಣ್ಣು + ಉಳಿದ ಹಣ್ಣು (ಬ + ಕ) ಇವರ ಹಣ್ಣು
೨ ೧ ಹೀಗೆ ಇರಬೇಕು.

∴ ಒ. ಹ. ಗಳ ೩ ದಷ್ಟು ಹ.=(ಬ + ಕ) ಇವರ ಹಣ್ಣು =೨ನೆ ಶಾಖೆಯಹಣ್ಣು + ೩ನೇ ಶಾಖೆಯ ಹಣ್ಣು

ಬ ನು ಉಳಿದ (ನಾಲ್ಕನೆಯ) ಶಾಖೆಯ ಹಣ್ಣು ತಕ್ಕೊಂಡರೆ

ಬ ನಹಣ್ಣು + ಉಳಿದ ಹಣ್ಣು = (ಅ ನಹಣ್ಣು + ಕ ನಹಣು) × ೩

∴ ಒಟ್ಟು ಹಣ್ಣುಗಳಲ್ಲಿ ಬ ನಹ. + ಉಳಿದ ಹಣ್ಣು (ಅ+ಕ) ಇವರ ಹಣ್ಣು

೩ : ೧ ಹೀಗೆ ಇರಬೇಕು.

∴ ಒಟ್ಟು ಹಣುಗಳ ೪ ದಷ್ಟು ಹಣ್ಣು = (ಅ+ಕ) ಇವರ ಹಣ್ಣು = ೧ನೇ ಶಾ. ಹಣ್ಣು + ೩ನೇ ಶಾಖೆಯ ಹಣ್ಣು

ಕ ನು ಉಳಿದ (ನಾಲ್ಕನೆಯ) ಶಾಖೆಯ ಹಣ್ಣು ತಕ್ಕೊಂಡರೆ

ಕ ನಹಣ್ಣು + ಉಳಿದ ಹಣ್ಣು = (ಅ ನಹಣ್ಣು + ಬ ನಹಣ್ಣು) × ೪

∴ ಒ. ಹ. ಗಳಲ್ಲಿ ಕ ನಹಣ್ಣು + ಉಳಿದ ಹಣ್ಣು (ಅ+ಬ) ಇವರ ಹಣ್ಣು

೪ : ೧ ಹೀಗೆ ಇರಬೇಕು.

∴ ಒ. ಹ. ಗಳ ೫/೯ ದಷ್ಟು ಹ. = (ಅ+ಬ) ಇವರ ಹ. = ೧ನೇ ಶಾ. ಹ. + ೨ನೇ ಶಾಖೆಯ ಹಣ್ಣು.

$$\frac{\text{ಬ+ಕ}}{೩} + \frac{\text{ಅ+ಕ}}{೪} + \frac{\text{ಅ+ಬ}}{೫} = \frac{೨೬\text{ಅ}+೨೨\text{ಬ}+೨೩\text{ಕ}}{೬೦}$$

∴ ಒ. ಹ. ಗಳ $\frac{೪೨}{೧೨೦}$ ದಷ್ಟು ಹಣ್ಣು = ಅ+ಬ+ಕ ಇವರ ಹಣ್ಣು

$$= \frac{\text{ಅ+ಬ+ಕ}}{೧೨೦} \text{ನೇ ಶಾ.} + \frac{\text{ಬ+ಕ}}{೩} \text{ನೇ ಶಾ.} + \frac{\text{ಅ}}{೫} \text{ನೇ ಶಾ.}$$

$$\frac{೪೨}{೧೨೦} - \frac{೧}{೩} = \frac{೨}{೧೨೦}$$

ಇದರಂತೆ $\frac{\text{ಬ}}{೧೨೦}$, $\frac{\text{ಕ}}{೧೨೦}$ ಬರುವದು

$$೧ - \frac{೪೨}{೧೨೦} = \frac{೭೩}{೧೨೦}$$ ಉಳಿದ ಹಣ್ಣು.

೧ನೇ ಶಾ. ೨ನೇ ಶಾ. ೩ನೇ ಶಾ. ೪ನೇ ಶಾ.

∴ ಒಟ್ಟು ಹಣ್ಣುಗಳಲ್ಲಿ $\frac{೬}{೧೨೦}$: $\frac{೧೬}{೧೨೦}$: $\frac{೨೩}{೧೨೦}$: $\frac{೬೩}{೧೨೦}$ ಈ ಪ್ರಮಾಣಗಳು ಇರಬೇಕು.

೬ : ೧೬ : ೨೩ : ೬೩

ಇವೇ ಪ್ರಮಾಣಗಳಿಂದ ಅನೇಕ ಉತ್ತರಗಳು ಈ ಲೆಕ್ಕಕ್ಕೆ ಹೊರಡುತ್ತವೆ.

∴ ೧ನೇ ಶಾ. ಹ. $\frac{}{೬}$ ೨ನೇ ಶಾ. ಹ. $\frac{}{೧೬}$ ೩ನೇ ಶಾ. ಹ. $\frac{}{೨೩}$ ೪ನೇ ಶಾ. ಹಣ್ಣು. $\frac{}{೬೩}$

ಉತ್ತರಗಳು.

೨ನೇ ಉದಾಹರಣೆ:—ಅ ಬ ಕ ಡ ಎಂಬ ನಾಲ್ಕು ಚಿನಿವಾರರ ಅಂಗಡಿಗಳಿದ್ದವೆಂದು ತಿಳಿಯುತ್ತೇನೆ.

ಅ ಅಂಗಡಿಯ $\frac{೧}{೨}$ ಬೆಲೆ + (ಬ + ಕ + ಡ) ಈ ಮೂರು ಅಂಗ. ಬೆಲೆ = ರತ್ನದ ಬೆಲೆ

$$ಬ\ \frac{೧}{೩} + ಅ + ಕ + ಡ = \text{ರತ್ನದ ಬೆಲೆ}$$

$$\therefore \frac{೧}{೨}\ ಅ + ಬ = \frac{೧}{೩}\ ಬ + ಅ.$$

∴ ಬ ಅಂಗಡಿಯ $\frac{೨}{೩}$ ಬೆಲೆ = ಅ ಅಂಗಡಿಯ $\frac{೧}{೨}$ ಬೆಲೆ

∴ ಅ ಅಂಗಡಿಯ ಬೆಲೆಗೂ, ಬ ಅಂಗಡಿಯ ಬೆಲೆಗೂ $\frac{೨}{೩}$: $\frac{೧}{೨}$ ಈ ಪ್ರಮಾಣವದೆ.

$$\frac{೧}{೩}\ ಬ + ಅ + ಕ + ಡ = \text{ರತ್ನದ ಬೆಲೆ}$$

$$\frac{೧}{೪}\ ಕ + ಅ + ಬ + ಡ = \text{ರತ್ನದ ಬೆಲೆ}$$

$$\therefore \frac{೧}{೩}\ ಬ + ಕ = \frac{೧}{೪}\ ಕ + ಬ$$

∴ ಕ ಅಂಗಡಿಯ $\frac{೩}{೪}$ ಬೆಲೆ = ಬ ಅಂಗಡಿಯ $\frac{೨}{೩}$ ಬೆಲೆ

∴ ಬ ಅಂಗಡಿಯ ಬೆಲೆಗೂ, ಕ ಅಂಗಡಿಯ ಬೆಲೆಗೂ $\frac{೩}{೪}$: $\frac{೨}{೩}$ ಬೆಲೆ

ಬ ಬೆಲೆ ಕ ಬೆಲೆ ಬ ಬೆಲೆ ಕ ಬೆಲೆ

$$\frac{೩}{೪} : \frac{೨}{೩} :: \frac{೧}{೨} : \frac{೪}{೯}$$

$$\frac{೧}{೫}\text{ಡ}+\text{ಅ}+\text{ಬ}+\text{ಕ} = \text{ರತ್ನದ ಬೆಲೆ} = \frac{೧}{೪}\text{ಕ}+\text{ಅ}+\text{ಬ}+\text{ಡ}$$

$$\therefore \frac{೧}{೫}\text{ಡ}+\text{ಕ} = \frac{೧}{೪}\text{ಕ}+\text{ಡ}$$

$$\therefore \text{ಡ ಅಂಗಡಿಯ } \frac{೪}{೫} \text{ ಬೆಲೆ} = \text{ಕ ಅಂಗಡಿಯ } \frac{೩}{೪} \text{ ಬೆಲೆ}$$

$\therefore$ ಕ ಅಂಗಡಿಯ ಬೆಲೆಗೂ, ಡ ಅಂಗಡಿಯ ಬೆಲೆಗೂ $\frac{೪}{೫} : \frac{೩}{೪}$ ಈ ಪ್ರಮಾಣವದೆ.

ಕ ಬೆಲೆ ಡ ಬೆಲೆ ಕ ಬೆಲೆ ಡ ಬೆಲೆ

$$\frac{೪}{೫} : \frac{೩}{೪} :: \frac{೪}{೯} : \frac{೫}{೧೨}$$

ಅಂದ ಮೇಲೆ ಅ ಬೆಲೆ ಬ ಬೆಲೆ ಕ ಬೆಲೆ ಡ ಬೆಲೆ

$$\frac{೨}{೩} : \frac{೧}{೨} : \frac{೪}{೯} : \frac{೫}{೧೨}$$

ಅಂದರೆ ೨೪ : ೧೪ : ೧೬ : ೧೫ ಈ ಪ್ರಮಾಣಗಳಂತೆ ಆ ಅಂಗಡಿಗಳ ಬೆಲೆ ಇರಬೇಕು.

ಇವೇ ಪ್ರಮಾಣಗಳಿಂದ ಅನೇಕ ಉತ್ತರಗಳು ಈ ಲೆಖ್ಖಕ್ಕೆ ಹೊರಡುತ್ತವೆ.

$\therefore$ ೧ನೇ ಅ. ಬೆ. ೨ನೇ ಅ. ಬೆ. ೩ನೇ ಅ. ಬೆ ೪ನೇ ಅ. ಬೆ
೨೪ರೂ. ೧೪ರೂ. ೧೬ರೂ. ೧೫ರೂ.
ರೂ.

$\therefore$ ರತ್ನದ ಬೆಲೆ $= \frac{೨೪}{೨} + ೧೪\text{ರೂ} + ೧೬\text{ರೂ} + ೧೫\text{ರೂ} = ೬೧\text{ರೂ}.$ ಗಳ } ಉತ್ತರ.

ತಮ್ಮ ವಿಧೇಯ,
ವಿ. ವೆ. ತೊರ್ಕೆ,
ಹೆಡ್ ಮಾಸ್ತರ ಶಾಶಾ, ಕೊಲ್ಲಾಪುರ ಸಿಸಿ

ಶಾ॥ ಸಿದ್ದಾಪುರ, ಜಿಲ್ಲಾ ಉತ್ತರ ಕಾನಡಾ,
ತಾರೀಖು ೩೦—೧—೧೯೧೭.

ವಿದ್ಯಾಖಾತೆಯ ನೋಟೀಸುಗಳು.

ಮಿ. ಜೋಶಿಯವರ ಆರೋಗ್ಯ ವಿಜ್ಞಾನದ ಊರ್ದು ಭಾಷಾಂತರವು ಎಲ್ಲ ಊರ್ದು ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗ ಮಾಡುವ ಬಗ್ಗೆ ಸರಕಾರದವರಿಂದ ಮಂಜೂರ ಮಾಡಲ್ಪಟ್ಟಿದೆ.

ಡಿರೆಕ್ಟರ ಆಫ್ ಪಬ್ಲಿಕ ಇನ್‌ಸ್ಟ್ರಕ್ಶನ್ ರವರ ಆಫೀಸು, ಪುಣೆ. ೩—೧—೧೯೧೭.

Sd/. **A. L. Covernton.**
Ag. Director of Public Instruction.

ವ್ಹನ್ಯಾಕ್ಯುಲರ ಫಾಯನಲ್ ಪರೀಕ್ಷೆ, ದಕ್ಷಿಣಭಾಗ.

೧೯೧೭ನೆಯ ಇಸವಿಯ ಜೂನ ತಿಂಗಳ ೭ಳನೆಯ ತಾರೀಖಿನ ಮುಂಬಯಿ ಸರಕಾರದ ಗ್ಯಾಝೆಟಿನ ೧ನೆಯ ಭಾಗದ ೧೬೦೧–೧೬೦೪ ಪುಟಗಳಲ್ಲಿ ಪ್ರಸಿದ್ಧಪಡಿಸಿದ ನಿಯಮಗಳ ಮೇರೆಗೆ ಸನ್ ೧೯೧೭ನೆಯ ಇಸವಿಯ ಸಪಟೆಂಬರ ತಿಂಗಳಲ್ಲಿ ಆಗುವ ವ್ಹನ್ಯಾಕ್ಯುಲರ ಫಾಯನಲ್ ಪರೀಕ್ಷೆಗೆ ಕೆಳಗೆ ಬರೆದ ಪುಸ್ತಕಗಳು ನಿಯಮಿಸಲ್ಪಟ್ಟಿರುತ್ತವೆ.

ಮರಾಠಿ.

ಗದ್ಯ:— ವಿದ್ಯಾಖಾತೆಯ ಕ್ರಮಿಕ ೭ಳನೆಯ ಪುಸ್ತಕ (೧೯೧೫ನೆಯ ಇಸವಿಯ ಆವೃತ್ತಿ) ಪೂರಾ.

ಪದ್ಯ:—ವಿದ್ಯಾಖಾತೆಯ ಕ್ರಮಿಕ ಪುಸ್ತಕದೊಳಗಿನ ಕಡೆಯ ಪದ್ಯಗಳ ೩ಂ ಸಾಲುಗಳನ್ನು ಬಾಯಿಪಾಠ ಅನ್ನುವದು ಮತ್ತು ಅರ್ಥ ಹೇಳುವದು.

ಕನ್ನಡ.

ಗದ್ಯ:— ವಿದ್ಯಾಖಾತೆಯ ಕ್ರಮಿಕ ೭ಳನೆಯ ಪುಸ್ತಕ ಸಂಪೂರ್ಣ.

ಪದ್ಯ:— ವಿದ್ಯಾಖಾತೆಯ ಕ್ರಮಿಕ ೭ಳನೆಯ ಪುಸ್ತಕದೊಳಗಿನ ಕಡೆಯ ಪದ್ಯಗಳ ೩ಂ ಸಾಲುಗಳನ್ನು ಬಾಯಿಪಾಠ ಅನ್ನುವದು ಮತ್ತು ಅರ್ಥ ಹೇಳುವದು

ಊರ್ದು.

ಗದ್ಯ:— ಊರ್ದು ಮಿಡಲ್ ಕೋರ್ಸ್, ಭಾಗ ೨. ಪಂಜಾಬ ೧ರಿಂದ ೧೦೫ ಪುಟಗಳ ವರೆಗೆ.

ಪದ್ಯ:—"ಮುಸದ್ದಸ-ಇ-ಹಲಿ" ಯೊಳಗಿನ ೫೦ ಮುಸದ್ದಸಗಳು, ಅಥವಾ ೧೫೬ನೇ ಮುಸದ್ದಸದಿಂದ ೩೦೦ ಅರ್ಧ ಪದ್ಯಗಳು.

Office of the Educational Inspector S. D.
DHARWAR,
25th January 1917.

Sd/. **V. B. Joshi,**
Ag. Educational Inspector,
S. D.

ಹಾಯಸ್ಕೂಲುಗಳಲ್ಲಿ ದೊರೆಯುವ ಮಹಮ್ಮದನ್ ಬರ್ಸರೀ ಫಂಡ ಸ್ಕಾಲರ ಶಿಪ್ಪಿನ ಬಗ್ಗೆ

ನೋಟೀಸು.

ಮೂಲಕ ನೋಟೀಸು ಕೊಡುವದೇನಂದರೆ:— ತಾರೀಖು ೩೦ನೇ ದಿಶಂಬರ ಸನ್ ೧೯೧೭ನೇ ಇಸವಿಯ ಮುಂಬಯಿ ಸರಕಾರದ ಗ್ಯಾಝೆಟ್ ಭಾಗ ೧ ನೆಯ ೨೦೬೫ ರಿಂದ ೨೦೬೯ನೆಯ ಪುಟಗಳಲ್ಲಿ ಪ್ರಸಿದ್ಧ ಮಾಡಿದ ನಿಯಮಗಳ ಪ್ರಕಾರ ಧಾರವಾಡ ಜಿಲ್ಲೆಯಲ್ಲಿ ಮಹಮ್ಮದನ್ ಬರ್ಸರೀಫಂಡದಿಂದ ಒಂದು ಸ್ಕಾಲರಶಿಪ್ಪು ಕೊಡುವ ಬಗ್ಗೆ ಮೇಲಾಟದ ಪರೀಕ್ಷೆಯು ಧಾರವಾಡ ಹಾಯಸ್ಕೂಲಿನಲ್ಲಿ ೧೯೧೮ನೇ ಇಸವಿಯ ಎಪ್ರಿಲ್ ತಿಂಗಳ ೪ ನೇ ತಾರೀಖು ಬುಧವಾರ ಮತ್ತು ಅದರ ಮರುದಿವಸ ಬೆಳಗಿನ ೧೧ ಘಂಟೆಗೆ ಪ್ರಾರಂಭವಾಗುವದು.

೨. ಈ ಸ್ಕಾಲರಶಿಪ್ಪ ಪರೀಕ್ಷೆಗೆ ಧಾರವಾಡ ಜಿಲ್ಲೆಯೊಳಗಿನ ಶಾಲಾಪಾತೆಯಿಂದ ಮಾನ್ಯಮಾಡಲ್ಪಟ್ಟ ಬೇಕಾದ ಶಾಲೆಯ ಮುಸಲ್ಮಾನ ವಿದ್ಯಾರ್ಥಿಗಳು ಬರಬಹುದು. ಆದರೆ ಅವರು ತಾವು ನಿಜವಾಗಿ

ಧಾರವಾಡ ಜಿಲ್ಲೆಯ ವಾಸಸ್ಥರೆಂಬ ಬಗ್ಗೆಯೂ ಹಾಯಸ್ಕೂಲಿನಲ್ಲಿ ಇಂಗ್ಲಿಷ ಕಲಿಯಲಿಕ್ಕೆ ತಾಗುವ ಖರ್ಚನ್ನು ಮಾಡುವದಕ್ಕೆ ಆಗದಷ್ಟು ಬಡವರಿದ್ದ ಬಗ್ಗೆಯೂ ಇಬ್ಬರು ಪ್ರಸಿದ್ಧ ಸಂಭಾವಿತ ಗೃಹಸ್ಥರ ಸರಟ ಫಿಕೇಟನ್ನು ಹಾಜರ ಮಾಡಲಿಕ್ಕೆ ಬೇಕು.

೩. ಪರೀಕ್ಷೆಯು ಕನ್ನಡದಿಂದ ಆಗುವದು.

೪. ಪರೀಕ್ಷೆಯು ಒಂದು ಕಮೀಟಿಯ ಮುಖಾಂತರವಾಗಿ ಆಗುವದು. ಆ ಕಮೀಟಿಗೆ ಧಾರವಾಡ ಸರಕಾರೀ ಹೈಸ್ಕೂಲಿನ ಹೆಡ್‌ಮಾಸ್ತರರು ಪ್ರೆಸಿಡೆಂಟರಿರುವರು. ಮಿಡಲ್‌ಸ್ಕೂಲಸ್ಕಾಲರಶಿಪ್ಪ ಪರೀಕ್ಷೆಗೆ ಕೂಡ್ಸುವ ಪರವಾನಗಿಯ ಬಗ್ಗೆ ಮಾಡತಕ್ಕ ಛಾಪೀನಮೂನೆಯಲ್ಲಿ ತಕ್ಕ ಬದಲಾವಣೆಗಳನ್ನು ಮಾಡಿ ಅದರ ಮೇಲೆಯೇ ಅರ್ಜಿಯನ್ನು ಮಾಡತಕ್ಕದ್ದು. ಈ ನಮೂನೆಗಳು ಪರೀಕ್ಷಾ ಕಮೀಟಿಯ ಅಧ್ಯಕ್ಷರ ಕಡೆಗೆ ಖರ್ಚು ಬೀಳದೆ ಸಿಗುವವು. ಪರೀಕ್ಷೆಯ ಬಗ್ಗೆ ಅರ್ಜಿಗಳು ಪರೀಕ್ಷಾ ಕಮೀಟಿಯ ಅಧ್ಯಕ್ಷರ ಕಡೆಗೆ ತಾರೀಖು ೧೫ ನೇ ಮಾರ್ಚ ೧೯೧೭ ನೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ತಲಪುವಂತೆ ಕಳಿಸಲಿಕ್ಕೆ ಬೇಕು. ಅನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

೫. ಈಪರೀಕ್ಷೆಗೆ ಬರಲಪೇಕ್ಷಿಸುವ ಉಮೇದವಾರರ ವಯಸ್ಸು, ಪರೀಕ್ಷೆಗಳ ವಿಷಯ, ಸ್ಕಾಲರಶಿಪ್ಪನ್ನು ಕೊಡೋಣ ಮತ್ತು ಬಂದ ಮಾಡೋಣ, ಸ್ಕಾಲರಶಿಪ್ಪು ದೊರೆತ ಉಮೇದವಾರನ ಹೆಸರು ಪ್ರಸಿದ್ಧ ಮಾಡೋಣ ಸ್ಕಾಲರಶಿಪ್ಪಿನ ರಕಮು ಮತ್ತು ಅವಧಿ, ಶಾಲೆಯ ಫೀ ಬಗ್ಗೆ ನಿಯಮ, ಮುಂತಾದವುಗಳು ಮಿಡಲ್‌ಸ್ಕೂಲ ಸ್ಕಾಲರಶಿಪ್ಪುಗಳಂತೆಯೇ ಇರುವವು. ಆದರೆ ಈ ಸ್ಕಾಲರಶಿಪ್ಪ ಪರೀಕ್ಷೆಗೆ ಪರೀಕ್ಷಾ ಫೀ ಮಾತ್ರ ತೆಗೆದುಕೊಳ್ಳಲ್ಪಡಲಿಕ್ಕಿಲ್ಲ.

ಎಜುಕೇಶನಲ್. ಇ. ರವರ ಆಫಿಸು } (*Sd*) V. B. Joshi
ಧಾರವಾಡ. ತಾ. ೨೨-೧-೧೯೧೭ } *Ag: Educational Inspector*
S. D.

ಶಾಲಾಪತ್ರಿಕೆ.

ಮಿಡಲ್ ಮತ್ತು ಸ್ಪೆಶಲ್ ಸ್ಕೂಲ ಸ್ಕಾಲರಶಿಪ್ಪುಗಳ ಬಗ್ಗೆ ನೋಟೀಸು.

ದಕ್ಷಿಣ ಭಾಗ.

೨೪ನೇ ಆಕ್ಟೋಬರ ಸನ್ ೧೯೧೫ನೇ ಇಸವಿಯ ಮುಂಬಯಿ ಸರಕಾರದ ಗ್ಯಾಝೆಟಿನ ಮೊದಲನೇ ಭಾಗದ ೬೬೧೧ರಿಂದ ೬೬೩೯ರ ವರೆಗಿನ ಪುಟಗಳಲ್ಲಿ ಪ್ರಸಿದ್ಧ ಪಡಿಸಿದಂತೆ ಪ್ರತಿಯೊಂದು ಜಿಲ್ಲೆಗೆ ಆರು ಮಿಡಲ್ ಸ್ಕೂಲ ಸ್ಕಾಲರಶಿಪ್ಪುಗಳನ್ನು ಕೊಡುವ ಸಂಬಂಧದ ಪರೀಕ್ಷೆಯು ತಾರೀಖು ೪ನೇ ಎಪ್ರಿಲ್ ೧೯೧೬ನೇ ಇಸವಿ ಬುಧವಾರ ಮತ್ತು ಅದರ ಮರುದಿವಸ ಪ್ರಾತಃಕಾಲದ ೧೧ ಘಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿಯೊಂದು ಸೆಂಟರಿನಲ್ಲಿ ಪ್ರಾರಂಭವಾಗುವದು. ಆ ಸೆಂಟರುಗಳು ಯಾವವೆಂದರೆ:—

೧. ಧಾರವಾಡ ಹೈಸ್ಕೂಲು.
೨. ಬೆಳಗಾವ ಹೈಸ್ಕೂಲು.
೩. ಬಿಜಾಪುರ ಹೈಸ್ಕೂಲು.
೪. ಕಾರವಾರ ಹೈಸ್ಕೂಲು.
೫. ರತ್ನಾಗಿರಿ ಹೈಸ್ಕೂಲು.
೬. ಅಲಿಬಾಗ ಜಾನ್ ಎಲ್ ಫಿನ್‌ಸ್ಟನ್ ಹೈಸ್ಕೂಲು.

೨. ಈ ಆರು ಸ್ಕಾಲರಶಿಪ್ಪುಗಳಲ್ಲಿ ಎರಡು, ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಸಿಗುವವು. ಎರಡು, ಇಂಗ್ಲೀಷ ಅಭ್ಯಾಸದಲ್ಲಿ ಹಿಂದುಳಿದ ಬೀನಿ ಇಸ್ರಾಯಿಲ್, ಕುಣಬಿ, ಇವರಿಗಿಂತಲೂ ಕಡಿಮೆ ವರ್ಗದವರಿಗಾಗಿ ಕಾದಿಡಲ್ಪಟ್ಟಿಂಥವು; ಇವು ಅವರಲ್ಲಿ ಉತ್ತೀರ್ಣರಾದವರಿಗೆ ಸಿಗುವವು. ಮತ್ತು ಎರಡು ಸ್ಕಾಲರಶಿಪ್ಪುಗಳು ಮುಸಲ್ಮಾನರಿಗಾಗಿ ಕಾದಿಡಲ್ಪಡುವವು.

೩. ಸರಕಾರೀ ಠರಾವ ನಂಬರ $\frac{\text{ಗಿಲ್ಲಿಟ}}{\text{ಗಟ-೭-೧೯೧೩}}$ ನೇದರಲ್ಲಿ ಮುಂ ಜೂರಾದ ಪ್ರಕಾರ ದರ ತಿಂಗಳಿಗೆ ೫ ರೂ. ದೊರೆಯುವ ಒಂದು ಹೆಚ್ಚಿನ ಸ್ಕಾಲರಶಿಪ್ಪು ಕೀಳು ಜಾತಿಯವರಲ್ಲಿ ಮೇಲು ಬಂದವರಿಗೆ ಮಾತ್ರ ಇರುತ್ತದೆ. ಈಗ ಅಮಲಿನಲ್ಲಿರುವ ಮಿಡಲ್ ಮತ್ತು ಸ್ಪೆಶಲ್ ಸ್ಕೂಲ ಸ್ಕಾಲರಶಿಪ್ಪುಗಳ ಬಗ್ಗೆ ಇರತಕ್ಕ ನಿಯಮಗಳೇ ಇದಕ್ಕೂ ಇರುವವು.

೪. ಈಗ ಖಾಲೀ ಬಿದ್ದಿರುವ ಕೆಳಗೆ ಕಾಣಿಸಿದ ಮಿಡಲ್ ಮತ್ತು ಸ್ಪೆಶಲ್‌ಸ್ಕೂಲ ಸ್ಕಾಲರಶಿಪ್ಪುಗಳೂ ಪರೀಕ್ಷೆಯಲ್ಲಿ ಮೇಲು ನಂಬರು ಬಂದವರಿಗೆ ದೊರೆಯುವಂತೆ ಇವೆ:—

ನಂಬರು	ಜಿಲ್ಲೆ.	ಯಾವ ಸ್ಕಾಲರಶಿಪ್ಪುಗಳು.	ಎಷ್ಟು ಕಾಲ ನಡೆಯುವದು.	
			ಯಾವ ತಾರೀಖಿನಿಂದ.	ಯಾವ ತಾರೀಖಿನವರೆಗೆ.
೧	ಧಾರವಾಡ	ಹಿಂದುಳಿದ ಹಿಂದುಗಳಿಗೋಸ್ಕರ ಕಾದಿಟ್ಟದ್ದು.	೧ನೇ ಜೂನ ೧೯೧೭.	೩೧-ಮೇ ೧೯೧೮
೨	ಬೆಳಗಾವ	ಸದರ	ಸದರ	ಸದರ
೩	ಬಿಜಾಪುರ	ಸದರ	ಸದರ	ಸದರ
೪	ಕಾರವಾರ	ಸದರ	ಸದರ	ಸದರ
೫	ರತ್ನಾಗಿರಿ	ಸದರ	ಸದರ	ಸದರ
೬	ಧಾರವಾಡ	ಸದರ	ಸದರ	೩೧. ಮೇ ೧೯೧೯
೭	ಬೆಳಗಾವ	ಸದರ	ಸದರ	ಸದರ
೮	ಬಿಜಾಪುರ	ಸದರ	ಸದರ	ಸದರ
೯	ಕಾರವಾರ	ಸದರ	ಸದರ	ಸದರ
೧೦	ರತ್ನಾಗಿರಿ	ಸದರ	ಸದರ	ಸದರ
೧೧	ಕುಲಾಬಾ	ಮುಸಲಮಾನರಿಗಾಗಿ ಕಾದಿಟ್ಟದ್ದು.	ಸದರ	ಸದರ
೧೨	ಸದರ	ಸದರ	ಸದರ	ಸದರ

ಇವು ಮೇಲೆ ಹೇಳಿದ ಪೂರ್ಣ ಅವಧಿಯ ಸ್ಕಾಲರಶಿಪ್ಪುಗಳು ದೊರೆತ ಉಮೇದವಾರರಲ್ಲಿ ಕಡೆಯ ನಂಬರಿನವನ ಕೆಳಗೇ ಯಾವ ಯೋಗ್ಯರಾದ ಉಮೇದವಾರರ ನಂಬರುಗಳು ಬರುವವೋ ಅವರಿಗೆ ಕೊಡಲ್ಪಡುವವು.

೫. ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಧಾರವಾಡ, ಬಿಜಾಪೂರ, ಕಾರವಾರ ಸೆಂಟರುಗಳಲ್ಲಿ ಕನ್ನಡ ಭಾಷೆಯ ಮುಖಾಂತರವಾಗಿಯೂ, ರತ್ನಾಗಿರಿ ಅಲಿಬಾಗ ಸೆಂಟರುಗಳಲ್ಲಿ

ಮರಾಠಿ ಭಾಷೆಯ ಮುಖಾಂತರವಾಗಿಯೂ ತೆಗೆದುಕೊಳ್ಳಲ್ಪಡುವದು.

೬. ಪ್ರತಿಯೊಂದು ಸೆಂಟರಿನಲ್ಲಿ ಪರೀಕ್ಷೆಯು ಒಂದು ಕಮಿಟಿಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಅಲಿಬಾಗ ಪರೀಕ್ಷಾ ಕಮೀಟಿಯ ಅಧ್ಯಕ್ಷರು ಅಲ್ಲಿಯ ಡೆಪುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು. ಉಳಿದ ಕಡೆಯಲ್ಲಿ ಅಲ್ಲಲ್ಲಿಯ ಹೈಸ್ಕೂಲ ಹೆಡ್‌ಮಾಸ್ತರರು ಪರೀಕ್ಷಾ ಕಮೀಟಿಯ ಅಧ್ಯಕ್ಷರಿರುವರು. ಈ ಪರೀಕ್ಷೆಗೆ ಕೂಡ್ರಲಿಕ್ಕೆ ಬೇಕಾಗುವ ಪರವಾನಗಿಯನ್ನು ಕುರಿತು ಮಾಡತಕ್ಕ ಅರ್ಜಿಗಳನ್ನೆಲ್ಲ ಛಾಪಿಸಿದ ನಮೂನೆಗಳ ಮೇಲೆ ಮಾಡತಕ್ಕದ್ದು. ಅರ್ಜಿಯ ನಮೂನೆಗಳು ಪರೀಕ್ಷಾ ಕಮೀಟಿಯ ಅಧ್ಯಕ್ಷರ ಕಡೆಗೆ ಕ್ರಯವಿಲ್ಲದೆ ದೊರೆಯುವವು. ಉಮೇದವಾರರು ಅರ್ಜಿಗಳನ್ನು ೧೫ನೇ ಮಾರ್ಚ ೧೯೧೭ನೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ತಮ್ಮ ಜಿಲ್ಲೆಯ ಅಧ್ಯಕ್ಷರಿಗೆ ತಲಪುವಂತೆ ಕಳಿಸಿಕೊಡಬೇಕು. ಅನಂತರ ಬಂದ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲ.

೭. ಉಮೇದವಾರರ ವಯಸ್ಸು, ಪರೀಕ್ಷೆಯ ವಿಷಯಗಳು, ಸ್ಕಾಲರಶಿಪ್ಪಿನ ರಕಮು, ಅವಧಿ, ಪರೀಕ್ಷೆಯ ಫೀ, ಮುಂತಾದ ಸಂಗತಿಗಳ ಸಂಬಂಧದ ಹೆಚ್ಚಿನ ಮಾಹಿತಿಯು ಸುಧಾರಿಸಿದ ನಿಯಮುಗಳಲ್ಲಿ ಕಂಡುಬರುವದು. ಈ ನಿಯಮುಗಳ ಪ್ರತಿಗಳು ಪರೀಕ್ಷಾ ಕಮೀಟಿಯ ಅಧ್ಯಕ್ಷರ ಕಡೆಗೆ ಅರ್ಜಿಯನ್ನು ಮಾಡಿದರೆ ಬೆಲೆ ಇಲ್ಲದೆ ಸಿಗುವವು.

ಎಜ್ಯುಕೇಶನಲ್ ಇ. ರವರ ಆಫೀಸು,
ಧಾರವಾಡ.
ತಾ. ೨೨–೧. ೧೯೧೭.

V. B. Joshi,
Ag. *Educational Inspector*,
S. D.

ಸಿಲ್ಹಿಯನ್' ಅನಾಥ ಬಾಲಕರ ಸಹಾಯಾರ್ಥವಾಗಿ ವಸೂಲಾದ ಹಣದ ವಿವರವು.

ಧಾರವಾಡ ಜಿಲ್ಲೆ.

ಧಾರವಾಡ ತಾಲೂಕು:—ಅಮಿನಭಾವಿ ೧೧–೧೩–೦, ಹುಬ್ಬಳ್ಳಿ ೧೪–೧೧–೦, ನವಲೂರ ೫–೦–೦, ಉಪ್ಪಿನಬೆಟಗೇರಿ ೧೦–೦–೦, ಉಪ್ಪಿನಬೇಟಗೇರಿ ಉರ್ದು ೬–೦–೦, ಅಂತು ೫೭–೪–೦.

ಗದಗ ತಾಲೂಕು:- ಲಕ್ಕುಂಡಿ ೭೫-೧೦-೦ ಮುಂಡರಿಗಿ ೪೦-೧೦-೩. ಬಳಗಾನೂರ ೬೭-೦-೦. ಮುಳಗುಂದ ೪೫-೧-೬. ಹೊಂಬಳ ೩೬-೧೫-೦. ೯ಂಬಳ ೧೧-೦-೦. ಲಿಂಗದಾಳ ೩-೧೫-೦. ಸೊರಟೂರ ೩-೯-೬. ಅಂತು ೩೭೫-೧೫-೩. ಮು. ಅ. ಕಮಿಶನ್ ವಜಾ ೩-೪-೦. ಶಿಲ್ಕು ಜಮಾ ೩೭೨-೧೧-೩.

ಹಾನಗಲ್ಲ ತಾಲೂಕು:—ಹಾನಗಲ್ಲ ೪-೦-೦. ಹಾನಗಲ್ಲ ಉರ್ದು ೭-೧೦-೦. ಆಡೂರ ೯-೧೪-೬. ಬಾಳಂಬೀಡ ೨-೧೭-೦ ಬೊಮ್ಮನಹಳ್ಳಿ ೩-೦-೦. ತಿಳವಳ್ಳಿ ೩-೨-೬. ತಿಳವಳ್ಳಿ ಉರ್ದು ೧-೪-೦. ಮೂಸನಹಳ್ಳಿ ೧-೧೭-೦ ಸಿರಗೋಡ ೧-೦-೦ ಅಂತು ೩೪-೧೧ ೦. ಮು. ಅ.ಕ. ವಜಾ ೦-೭-೦. ಶಿಲ್ಕು ಜಮೂ ೩೪-೪-೦.

ಹುಬ್ಬಳ್ಳಿ ತಾಲೂಕು:—ಬ್ಯಾಹಟ್ಟಿ ೫-೧೪-೯. ಶಿರಗುಪ್ಪಿ ೨-೭-೦. ಇಂಗಳಹಳ್ಳಿ ೫-೫-೦. ಉಣಕಲ್ಲ ೧೧-೨-೦. ಅಂತು ೨೪-೧೨-೯. ಮು. ಅ. ಕ. ವಜಾ ೦-೪-೦. ಶಿಲ್ಕು ಜಮೂ. ೨೪ ೪-೯.

ಕಲಘಟಿಗಿ ತಾಲೂಕು:-ಗಳಗಿ ೦-೫-೦. ಕಲಘಟಿಗಿ ೩೦-೧೨-೦. ನಿಶ್ರೀಕೋಟಿ ೨೧-೫-೦. ಅಂತು ೫೨ ೬-೦ ಮು. ಅ. ಕ. ವಜಾ ೦-೧೮-೦. ಶಿಲ್ಕು ಜಮೂ ೫೧-೧೨-೦.

ಕರ್ಜಗಿ ತಾಲೂಕು:-ಅಗಡಿ ೩೪-೪-೬. ದೇವೀಹೊಸೂರ ೩-೩-೦, ಗುತ್ತಲ ೧೪ ೪-೦. ಹತ್ತಿಮತ್ತೂರ ೩-೧೨-೬. ಹಾವನೂರ ೧೭-೦-೦ ಕರಜಿಗಿ ೩೫-೧೨-೦. ನೆಗಳೂರ ೧೦-೧-೩. ಎಲಗಚ್ಚ ೧೦-೩-೦. ಅಗಡಿ ಗಲ್ ೩-೭-೦. ಅಂತು ೧೩೫-೯-೩. ಮು. ಅ. ಕ. ವಜಾ ೧-೬-೦. ಶಿಲ್ಕು ಜಮಾ ೧೩೪-೩-೩.

ಕೋಡ ತಾಲೂಕು:-ಮಾಸೂರ ೫-೧-೬. ರಟ್ಟಿಹಳ್ಳಿ ೧೧-೯-೦. ಹಾಂ ಸಭಾವಿ ೧೦-೪-೦. ಹಿರೇಕೆರೂರ ೨೧-೧೪-೦. ಅಂತು ೪೯-೦-೬. ಮು. ಅ. ಕ. ವಜಾ ೦-೪-೦. ಶಿಲ್ಕು ಜಮಾ ೪೪-೪-೬.

ನವಲಗುಂದ ತಾಲೂಕು:-ಶಲವಡಿ ೫೦-೦-೦. ತಿರೋಳ ೧೩-೯-೯. ಕೊಣ್ಣೂರ ೯-೪-೦ ಮೊರಬ ೫-೧೨-೦. ಅಂತು ೭೪-೧೩-೯. ಇನ್ಸ್ಯೂರನ್ಸ ವಜಾ ೦-೭-೨. ಶಿಲ್ಕು ಜಮಾ ೭೪-೬-೭.

ರಾಣೇಬೆನ್ನೂರ ತಾಲೂಕು:-ಮೇಡ್ಲೇರಿ ೨೫-೦ ೦. ಮೋಟೆಬೆನ್ನೂರ ೩-೬-೦. ಅಂತು ೨೪-೬-೦. ಮು. ಅ. ಕ. ವಜಾ ೦-೫-೦. ಶಿಲ್ಕು ಜಮಾ ೨೪-೧-೦.

ಕೋಣ ತಾಲೂಕು: — ಕೋಣ ೫೦-೦-೦. ಆಲೂರ ೪೦-೦-೦ ಸವದಿ ೩೦-೪-೦. ಗಜೇಂದ್ರಗಡ ೨೨-೨-೦. ಸೂಡಿ ೨೦-೪-೬ ಬೆಳವಣಕಿ ೧೬-೨-೩. ನಿಡಗುಂದಿ ೧೪-೧೩-೦. ಹಿರೇಹಾಳ ೬-೦-೦. ನರೇಗಲ್ಲ ೪೫-೫-೩. ಅಬ್ಬಿಗೇರಿ ೫-೦-೦. ಹಾಳಕೇರಿ ೩೦-೦-೦. ಹಡಲಗಿ (ಯಾವಗಲ್ಲ ಸಮತ) ೧೨-೫-೦. ಗಜೇಂದ್ರಗಡ ಗರ್ಲ್ ೪-೦-೦. ನರೇಗಲ್ಲ ಉರ್ದು ೧-೦-೦. ಅಂತು ೩೦೩-೧೨-೦.

ಬಂಕಾಪುರ ತಾಲೂಕು:—ಸಿಗ್ನಾವಿ ೧೫-೧೦-೦. ಅಂತು ೧೫-೧೦-೦.

ಇತರ: — ಹೊಂಬಳ ಗ್ರಾಮಸ್ಥರು ೪೪-೪-೦.

ಅಂತು ಧಾರವಾಡ ಜಿಲ್ಲೆ ಲೊ. ಬೋ. ೧೧೪೬-೧೩-೪.

ಮುನಸಿಪಲ್ ಸ್ಕೂಲುಗಳು.

ಧಾರವಾಡ ಜಿಲ್ಲೆ.

ಧಾರವಾಡ ಮ್ಯು: — ನಂ. ೧. ೬-೧೧-೦ ನಂ ೨. ೧-೯-೦ ನ. ಷಿ. ೨-೩-೬. ನ. ೫. ೦-೪-೩. ನ. ೬. ೧-೪-೦. ಇನ್‌ಫಂಟ ಮಾಡೆಲ್ ಸ್ಕೂಲ ೦-೧೫-೬. ಮರಾಠಿ ಗಂಡು ೨-೧೫-೬. ಮರಾಠಿ ಗರ್ಲ್ ೦-೧೪-೦ ಉರ್ದು ಗಂಡು ನ. ೧. ೨-೧೪-೩. ನ. ೨. ೧-೦-೦ ನ ಷಿ. ೧-೬-೬. ಅಂತು ೨೨-೫-೬.

ಬ್ಯಾಡಗಿ ಮ್ಯು:—ಕನ್ನಡ ಗಂಡು ೩೪-೭-೩. ಏ. ವ್ಹಿ. ಸ್ಕೂಲು, ೪-೪-೦. ಉರ್ದು ಸ್ಕೂಲ ೧-೧೪-೬. ಧೇಡಸ್ಕೂಲ ೦-೪-೦. ಗರ್ಲ್ ಸ್ಕೂಲ ೪-೦-೩. ಅಂತು ೪೫-೨-೦. ಮು. ಆ. ಕ. ವಜಾ ೦-೪-೦. ತಿಲ್ಕು ಜಮಾ ೪೪-೧೦-೦.

ನರಗುಂದ ಮ್ಯು. — ಕನ್ನಡ ನಂ. ೧. ೭-೧೩-೦. ನಂ. ೨. ೩-೧೨-೦. ಮರಾಠೀ ಸ್ಕೂಲ ೧-೧೪-೦ ಉರ್ದು ಸ್ಕೂಲ ೧-೪-೦. ಗರ್ಲ್ ಸ್ಕೂಲ ೪-೦-೦. ಸಾರ್ವಜನಿಕ ವರ್ಗಣಿ ೨೬-೧೩-೦. ಏ. ವ್ಹಿ. ಸ್ಕೂಲ ೯-೧೫-೦. ಅಂತು ೫೫-೧೧-೦.

ಹಾವೇರಿ ಮ್ಯು: — ಕನ್ನಡ ೧೯-೩-೬. ಗರ್ಲ್ ೫-೦-೦. ಏ. ವ್ಹಿ. ಸ್ಕೂಲ ೫-೦-೦ ಅಂತು ೨೯-೩-೬ ಮು. ಆ. ಕ. ವಜಾ ೮-೫-೦ ತಿಲ್ಕು ಜಮಾ ೨೪-೧೪-೬.

ನವಲಗುಂದ ಮ್ಯು:—ಕನ್ನಡ ಗಂಡು ೪೩-೬-೩. ಗರ್ಲ್ ೪-೫-೬ ಅಂತು ೪೭-೧೧-೯.

ಶಾಲಾಪತ್ರಕ.

ಪುಸ್ತಕ ೫೩. | ಫೆಬ್ರುವರಿ ೧೯೧೬. | ಸಂಚಿಕೆ ೨.

ಅಂದಾಜು ಪತ್ರಿಕೆಗಳು.

———:o:———

ಖಾಸಗೀ ಮನೆಗಳನ್ನು ಕಟ್ಟುವವರು, ತಾವು ಹಿಡಿದ ಕೆಲಸವನ್ನು ಮುಗಿಸುವ ವಿಷಯದಲ್ಲಿ ಎಷ್ಟೋ ತಪ್ಪುಗಳನ್ನು ಮಾಡುವದು ಕಂಡು ಬರುತ್ತದೆ. ತಲೆಬಾಗಿಲನ್ನು ಸುಳುವುಗಳಿಂದ ಶೃಂಗರಿಸುವದರಲ್ಲಿಯೇ ವೇಳೆಯನ್ನು ಕಳೆದು, ಕಡೆಗೆ ಹ್ಯಾಗೋ ಮುಗಿಸಿದಂಥ ಮನೆಗಳು ಎಷ್ಟೋ ಇರುವವು. ಆರಂಭದಲ್ಲಿ ಇಟ್ಟ ಅಡಂಬರಕ್ಕೂ ಮುಗಿಸಿದ ನಂತರ ಕಾಣುವ ಇಮಾರತಿಗೂ ಎಷ್ಟೋ ಅಭ್ಯಂತರಗಳು ಕಂಡುಬರುವವು. ಮನೆಯನ್ನು ಕಟ್ಟುವಾಗ ಕಾಲಕಾಲಕ್ಕೆ ತೋಚಿದ ವಿಚಾರಗಳಂತೆಯೇ ಹೆಚ್ಚು ಕಡಿಮೆ ಮಾಡಿ ಕಡೆಗೆ ದುಡ್ಡು ಸಾಲದೆ ಅಲ್ಲಿಗೇ ಕೈಬಿಟ್ಟ ಮನೆಗಳೂ ನಮ್ಮ ಪ್ರಾಂತದಲ್ಲಿ ಕಡಿಮೆ ಇಲ್ಲ. ಮನೆಯ ಒಂದು ಭಾಗವು ಯಾವದೊಂದು ಅಳತೆಯದು ಇದ್ದರೆ, ಉಳಿದ ಭಾಗಗಳು ಆ ಪ್ರಮಾಣಕ್ಕನುಸರಿಸಿ ಇರುವದಿಲ್ಲ. ಇದೇ ಕಾರಣದಿಂದ ಸುಲಕ್ಷಣವುಳ್ಳ ಮನೆಗಳು ನಮ್ಮಲ್ಲಿ ದೊರೆಯುವದು ದುರ್ಲಭವು. ಅಳತೆಗಿಂತ ಹೆಚ್ಚು ಖರ್ಚು ಬರುವದರಿಂದಲೇ ನಮ್ಮಲ್ಲಿ 'ಮನೆಯನ್ನು ಕಟ್ಟಿ ನೋಡು, ಮದುವೆಯನ್ನು ಮಾಡಿನೋಡು' ಎಂಬ ಗಾದೆಯ ಮಾತು ರೂಢವಾಗಿದೆ. ಅದೇ ಒಬ್ಬ ಎಂಜನಿಯರನು ಮಾಡುವ ಕೆಲಸವನ್ನು ನೋಡಿದರೆ, ಅದರಲ್ಲಿ ಮೇಲ್ನೋಡಕ್ಕೆ ಯಾವ ದೋಷಗಳೂ ಕಂಡು ಬರಲಿಕ್ಕಿಲ್ಲ. ತಾನು ಕಟ್ಟಿಸತಕ್ಕ ಇಮಾರತಿಗೆ ಬೇಕಾಗುವ ಸ್ಥಳವೆಷ್ಟು? ಯಾವ ಯಾವ ಭಾಗವು ಎಲ್ಲೆಲ್ಲಿ ಬರಬೇಕು? ಪ್ರತಿಯೊಂದು ಭಾಗದ ಅಳತೆ ಎಷ್ಟು, ಇವೇ ಮುಂತಾದ ಸಂಗತಿಗಳನ್ನು ಮೊದಲೇ ಗೊತ್ತುಮಾಡಿಟ್ಟುಕೊಳ್ಳುವನು. ಸಾರಾಂಶ–ಕಟ್ಟಿಸಿದ ನಂತರ ಕಾಣತಕ್ಕ ಇಮಾರತಿಯ ಕಾಶವನ್ನು ಮೊದಲೇ ಮಾಡಿಟ್ಟುಕೊಳ್ಳುವನು. ಇದಕ್ಕೆ ಇಂಗ್ಲಿಷದಲ್ಲಿ

'ಪ್ಲ್ಯಾನ'(Plan) ಎನ್ನುವರು. ತಾನು ಕಟ್ಟಿಸತಕ್ಕ ಇಮಾರತಿಗೆ ಬೇಕಾಗುವ ಇಟ್ಟಿಗೆಗಳೆಷ್ಟು? ಕಲ್ಲುಗಳೆಷ್ಟು? ಕಟ್ಟಿಗೆಯ ಸಾಮಾನುಗಳೆಷ್ಟು? ಕೂಲಿಕಾರರ ಕೂಲಿಯ ಬಗ್ಗೆ ಹತ್ತಬಹುದಾದ ಹಣವೆಷ್ಟು ಈ ಮುಂತಾದ ಸಂಗತಿಗಳ ಸಾಧಾರಣ ತಿಳಿತೆಯನ್ನು ಮೊದಲೇ ಮಾಡಿಟ್ಟುಕೊಳ್ಳುವನು. ಇದಕ್ಕೆ ಇಂಗ್ಲಿಷಿನಲ್ಲಿ 'ಎಸ್ಟಿಮೇಟ' ಎನ್ನುವರು. ಈ ಪ್ಲ್ಯಾನ ಎಸ್ಟಿಮೇಟುಗಳನ್ನು ತಯಾರು ಮಾಡುವದರಲ್ಲಿದ್ದಷ್ಟು ಮಹತ್ವವು ಇಮಾರತನ್ನು ಕಟ್ಟಿಸುವದರಲ್ಲಿಲ್ಲ. ಆಂತೇ ಇದುವರೆಗೆ ಎಂಜನಿಯರರು ಕಟ್ಟಿಸಿದ ಇಮಾರತುಗಳಲ್ಲಿ ಯಾವವೂ ಅಪೂರ್ಣವಾಗಿಲ್ಲ. ಯಾವ ಇಮಾರತಿನಲ್ಲಿಯೂ ಭಾಗಗಳು ಅಕ್ರಮವಾಗಿಲ್ಲ. ಅಂದಗೇಡಿಯಾದ ಇಮಾರತುಗಳಂತೂ ಎಲ್ಲಿಯೂ ಇಲ್ಲ. ಕಟ್ಟಿಸಬೇಕಾದ ಇಮಾರತಿಯ ನಕಾಶ, ಅದಕ್ಕೆ ಹತ್ತಬಹುದಾದ ಸಾಮಾನು ಮತ್ತು ಹಣ ಇವುಗಳ ಅಂದಾಜನ್ನು ಮೊದಲೇ ಮಾಡಿಟ್ಟುಕೊಂಡಿರುವದರಿಂದ ಎಂಜನಿಯರಿಗೆ ಯಾವ ತರಹದ ಅಡಚಣೆಯೂ ಬರುವದಿಲ್ಲ. ಈ ತರಹದ ಪೂರ್ವ ತಯಾರಿಯು ಇಲ್ಲದಿರುವದರಿಂದ ಖಾಸಗೀ ಮನೆಯನ್ನು ಕಟ್ಟುವವರು ಯಾವಾಗಲೂ ತೊಂದರೆಗೊಳಗಾಗುವರು. ಇದೇ ಮಾತು, ನಿತ್ಯದಲ್ಲಿ ನಮ್ಮ ಶಾಲೆಗಳಲ್ಲಿ ನಡೆಯುವ ಅಭ್ಯಾಸಕ್ಕೂ ಹತ್ತುವದು.

ಇಡೀ ವರ್ಷದಲ್ಲಿ ಶಿಕ್ಷಕನು ತನ್ನ ವರ್ಗಕ್ಕೆ ಕಲಿಸಬೇಕಾದ ವಿಷಯವೆಷ್ಟು? ಪ್ರತಿತಿಂಗಳಲ್ಲಿ ಯಾವ ಯಾವ ವಿಷಯವು ಎಷ್ಟೆಷ್ಟು ಆಗಬೇಕು? ಇದನ್ನು ಮೊದಲೇ ಗೊತ್ತುಮಾಡಿಟ್ಟುಕೊಂಡು ಅದರಂತೆ ವಿಷಯ ಸಾಗಿಸುವದರಿಂದ ಬಹಳೇ ಲಾಭವುಂಟು. ಸೂಟಿ ಮುಂತಾದವುಗಳು ಹೋಗಿ ಸುಮಾರು ಒಂಬತ್ತು ತಿಂಗಳುಗಳಲ್ಲಿ ಪ್ರತಿಯೊಂದು ವಿಷಯವು ಎಷ್ಟೆಷ್ಟು ಆದೀತು; ಇದರ ಅಂದಾಜು ಪತ್ರಿಕೆಯನ್ನು ಮಾಡಿ ಇಟ್ಟುಕೊಳ್ಳಬೇಕು. 'ಕೋಡಿನಲ್ಲಿ ಹೇಳಿದಷ್ಟು ವಿಷಯವನ್ನು ಕಲಿಸಿಬಿಟ್ಟಿರುವೆನು' ಎಂದು ಪರೀಕ್ಷಕರಿಗೆ ತೋರಿಸುವದಕ್ಕಿಂತ 'ಇಷ್ಟು ವಿಷಯವನ್ನು ಚನ್ನಾಗಿ ಕಲಿಸಿರುವೆನು' ಎಂದು ತೋರಿಸುವದು ಹೆಚ್ಚು ಮಹತ್ವದ್ದು. (ಇದರಿಂದ ಕೋಡಿನಲ್ಲಿ ಹೇಳಿದ್ದನ್ನು ಸಂಪೂರ್ಣವಾಗಿ ಬಿಡಲೇ ಬೇಕು ಎಂಬ ವಿಪರೀತಾರ್ಥವನ್ನು ಮಾತ್ರ ಮಾಡಿಕೊಳ್ಳಬಾರದು. ಒಂದು ವೇಳೆ ಕೋಡಿನಲ್ಲಿ ಹೇಳಿದವಷ್ಟಕ್ಕಿಂತ ಸ್ವಲ್ಪಕಡಿಮೆಯಾದರೂ ಚಿಂತೆಯಿಲ್ಲ; ಅದನ್ನು ಚನ್ನಾಗಿ ಆಗಬೇಕೆಂಬದೇ ನಮ್ಮ

ಬರಹದವುಪ್ಯೋದ್ದೇಶವು.) ಪರೀಕ್ಷೆಯ ದಿವಸಗಳು ಬರುವವರೆಗೆ ಎಷ್ಟೋ ವಿಷಯಗಳ ಸ.ದ್ಧಿ ಸಹ ಇಲ್ಲದೆ ಕಡೆ ಕಡೆಗೆ ನಾಲ್ಕಾರುದಿವ ಸಗಳಲ್ಲಿ ಹ್ಯಾಗೋ ಮುಗಿಸಿ, 'ಯಾವತ್ತೂ ವಿಷಯಗಳು ಮುಗಿದಿರು ವವು' ಎಂದು ಹೇಳುವ ಎಷ್ಟೋ ಶಿಕ್ಷಕರುಂಟು. ಎಷ್ಟೋ ತಿಂಗಳು ಗಳವರೆಗೆ ಕಾಪೀ ಪುಸ್ತಕಗಳನ್ನು ಬರೆಯಿಸದೆ ಒಮ್ಮೆಲೆ ಕೆಲವು ಪುಟ ಗಳನ್ನು ಬರೆಯಿಸಿ, ಹಿಂದಿನ ತಾರೀಖು ಹಾಕಿ ಸಹಿ ಮಾಡುವ ದುಷ್ಟ ಚಾಳಿಯು ನಮ್ಮ ಪ್ರಾಥಮಿಕ ಶಾಲೆಗಳನ್ನು ಬಿಟ್ಟು ಇನ್ನೂ ಹೋಗಿಲ್ಲ.

ಮುಂದಿನ ತಿಂಗಳಿನಲ್ಲಿ ಮಾಡಿಸಬೇಕಾದ ವಿಷಯಗಳ ಅಂದಾ ಜನ್ನು ಈ ತಿಂಗಳ ಅಖೈರದೊಳಗಾಗಿ ಮಾಡಿ ಇಟ್ಟಿರಬೇಕು. ಪ್ರತಿ ಯೊಂದು ವಿಷಯವು ಒಂದು ತಿಂಗಳಿನಲ್ಲಿ ಎಷ್ಟು ತಾಸು ಇದ್ದೀತು; ಆ ವುಗಳಲ್ಲಿ ಕಲಿಸತಕ್ಕ ತಾಸುಗಳೆಷ್ಟು? ರೂಢೀ ಮಾಡಿಸತಕ್ಕ ತಾಸುಗ ಳೆಷ್ಟು ಇದನ್ನು ಮೊದಲೇ ಗೊತ್ತುಮಾಡಿಕೊಂಡಿರಬೇಕು. ಒಂದು ತಾಸು ಕಲಿಸುವದು, ಎರಡು ತಾಸು ರೂಢಿ, ಇಲ್ಲವೆ ಎರಡು ತಾ ಸು ಕಲಿಸುವದು ಎರಡು ತಾಸು ರೂಢಿ ಹೀಗೆ ತಮಗೆ ಅನುಕೂಲ ವಿದ್ದಂತೆ ಇಟ್ಟುಕೊಂಡು ತಪ್ಪದೆ ವಿಷಯವನ್ನು ಸಾಗಿಸಿದರೆ, ಅದು ಸುಲಭಸಾಧ್ಯವೂ ಮನಸಿಗೆ ಆನಂದದಾಯಕವೂ ಆಗುವದು. ಆದ್ದ ರಿಂದ ಶಾಲೆಯಲ್ಲಿಯೆ ಅಭ್ಯಾಸಕ್ರಮಕ್ಕೆ ಮೊತ್ತ ಮೊದಲು ಅಂದಾಜು ಪತ್ರಿಕೆಗಳು ಬೇಕು. ಪ್ಲಾನ್ನಿನ ಎಷ್ಟುಮೇಟುಗಳಿಲ್ಲದೆ ಮನೆಯನ್ನು ಕಟ್ಟುವವನ ಹಾಡೂ ಅಂದಾಜು ಪತ್ರಿಕೆಗಳಿಲ್ಲದೆ ಅಭ್ಯಾಸ ನಡಿಸು ವವನ ಹಾಡೂ ಒಂದೇ. ಇದನ್ನರಿತು ಶಿಕ್ಷಕರು ವಿಷಯವನ್ನು ಸಾ ಗಿಸಬೇಕು. ಮಾದರಿಗಾಗಿ ಯಾವದೊಂದು ಇಯತ್ತೆಯ ಒಂದು ವರ್ಷದ ಅಂದಾಜು ಪತ್ರಿಕೆಯನ್ನು ಯಥಾವಕಾಶ ಶಾಲಾಪತ್ರಿಕದಲ್ಲಿ ಕೊಡುವೆವು.

ವಿಕಾಸ ವಿರೋಧ.

——೦೦೦——

(ನವೆಂಬರ ತಿಂಗಳಿಂದ ಮುಂದೆ ಸೇರಿದ್ದು.)

ಶಿಕ್ಷಕರ ವರ್ತನದ ವಿಸಂಗತತನದ ಮತ್ತೂ ವಿಶೇಷವಾದ ಉದಾಹರಣೆಯೆಂದರೆ:— ಅವರಲ್ಲಿರುವ ಪರಸ್ಪರ ವಿರೋಧೀ ಗುಣವು.

ಒಮ್ಮೆ "ದೊಡ್ಡವರು ಹ್ಯಾಗೆ ನಡೆಯುತ್ತಾರೆಯೋ ಹಾಗೆ ನಡೆ" ಎಂದು ಹೇಳುವದು, ಮತ್ತೊಮ್ಮೆ "ಸಣ್ಣ ಹುಡುಗರು ಹೀಗೆ ಮಾಡಬಾರದು" ಎಂದು ಹೇಳುವದು. ಒಮ್ಮೆ "ಸತ್ಯಮಾರ್ಗವನ್ನು ಎಂದೂ ಬಿಡಬಾರದು" ಎಂದು ಹೇಳುವದು, ಇನ್ನೊಮ್ಮೆ "ನಿನಗೆ ವ್ಯವಹಾರ ಜ್ಞಾನವಿದೆಯೋ ಇಲ್ಲವೋ" ಎಂದು ಕೇಳುವದು, ಈ ಪ್ರಕಾರ ಅನೇಕ ತರದ ವಿಸದೃಶ ಅಪ್ಪಣೆಗಳನ್ನು ಮಾಡುವದು ಶಿಕ್ಷಕರ ಮತ್ತು ಪಾಲಕರ ವಿಶೇಷ ರೂಢಿಯಾಗಿದೆ. ಇದರಿಂದ ಶಿಕ್ಷಕರ ವಿಷಯವಾಗಿಯೂ ಪಾಲಕರ ವಿಷಯವಾಗಿಯೂ ವಿದ್ಯಾರ್ಥಿಗಳಲ್ಲಿ ಅನಾದರವುಂಟಾಗುತ್ತದೆ. ಮೇಲೆ ಹೇಳಿದ್ದರಲ್ಲಿ ಪ್ರತಿಯೊಂದು ತತ್ವವು ವಿಶಿಷ್ಟ ಪರಿಸ್ಥಿತಿಯಲ್ಲಿ ಉಪಯೋಗವಾಗುತ್ತದೆಂಬದು ನಿಜವು, ಪರಂತು ಆ ಉಪದೇಶವು ಎಲ್ಲ ರೀತಿಯಿಂದಲೂ ವಿಚಾರಮಾಡಿದ್ದು ಇರುತ್ತದೆಯೋ ಇಲ್ಲವೋ ಎಂಬ ಬಗ್ಗೆ ಸಂಶಯವಿದೆ. ಅದು ಕೇವಲ ಶಿಕ್ಷಕರ ಮತ್ತು ಪಾಲಕರ ಮನಸಿನ ಸ್ಥಿತಿಯನ್ನು ಅವಲಂಬಿಸಿರುತ್ತದೆ. ಆದ್ದರಿಂದ ಶಿಕ್ಷಕ ಮತ್ತು ಪಾಲಕರ ಅಪ್ಪಣೆಗಳು ಒಳ್ಳೇ ವಿಚಾರ ಮಾಡಿದವುಗಳಾಗಿರಬೇಕು.

ಒಬ್ಬ ಹುಡುಗನ ಕೂಡ ವರ್ತನವಿಡುವಾಗ್ಗೆ ಒಂದು ತತ್ವ ಇನ್ನೊಬ್ಬನ ಕೂಡ ವರ್ತನವಿಡುವಾಗ್ಗೆ ಮತ್ತೊಂದು ತತ್ವ ಹೀಗೆ ವಿಸಂಗತತನವನ್ನು ತೋರಿಸಿ ಪಕ್ಷಪಾತ ಮಾಡುವ ಲಕ್ಷಣವನ್ನು ತೋರಿಸಿಕೊಳ್ಳಬಾರದು. ಈ ಬಗ್ಗೆ ಶಿಕ್ಷಕರೂ ಪಾಲಕರೂ ಲಕ್ಷ್ಯಕೊಡದಿದ್ದರೆ ವ್ಯವಹಾರವೆಂದರೆ ಒಂದು ವೇಷವೆಂಬಂತೆ ವಿದ್ಯಾರ್ಥಿಗಳಿಗೆ ಭಾಸವಾಗುತ್ತದೆ. ಅಲ್ಲದೆ "ನಿಯಮುಗಳು ನಿಜವಾದವುಗಳಲ್ಲ; ವೇಳೆ ಬಂದ ಹಾಗೆ ಬದಲು ಮಾಡಲಿಕ್ಕೆ ಬರುವಂತಿವೆ" ಎಂಬ ವೃಥಾ ಕಲ್ಪನೆಗಳು ವಿದ್ಯಾರ್ಥಿಗಳ ಮನಸಿನಲ್ಲಿ ಉತ್ಪನ್ನವಾಗುತ್ತವೆ.

೬. ಶಿಕ್ಷಣ ಮಾರ್ಗದೊಳಗಿನ ಆರನೇ ಮಹತ್ವದ ಅಡಚಣೆಯೆಂದರೆ:— ಶಿಕ್ಷಣ ಮತ್ತು ವ್ಯವಹಾರ ಇವುಗಳಿಗೆ ಅಗದೀ ಸಂಬಂಧವಿಲ್ಲದಿರುವದು. ಶಾಲೆಯಲ್ಲಿ ವಿದ್ಯಾರ್ಥಿಗಳ ನಂಬರು ಮೇಲೆ ಇದ್ದರೆ ತೀರಿತು ಶಿಕ್ಷಕರೂ ಪಾಲಕರೂ ಅತ್ಯಾನಂದವುಳ್ಳವರಾಗುವರು ಇದರಿಂದ ಅವರಿಗೆ ವ್ಯವಹಾರದೊಳಗಿನ ಒಂದೂ ಸಂಗತಿಯು ಜ್ಞಾನವಾಗುವದಿಲ್ಲ. ಚಂಡಿತನವೂ ಹಟಮಾರಿತನವೂ ಮಾತ್ರ ವಿಶೇಷ

ನಾಗಿ ಬೆಳೆಯುವವು. 'ಕೂಪ ಮಂಡೂಕ ನ್ಯಾಯ'ದಂತೆ ಅವರಿಗೆ ಜಗತ್ತಿನ ಯಾವ ಸಂಗತಿಯೂ ಗೊತ್ತಾಗುವದಿಲ್ಲ. ಆದ್ದರಿಂದ ಎಲ್ಲ ತರದ ಕೆಲಸಗಳನ್ನು ಹುಡುಗರಿಂದಲೇ ಮಾಡಿಸಿಕೊಳ್ಳುವದು ಅವರಿಗೆ ಲಾಭದಾಯಕವೆಂಬದನ್ನು ಶಿಕ್ಷಕರೂ ಪಾಲಕರೂ ಮರೆಯ ಕೂಡದು. ಶಾಲೆಯಲ್ಲಿಯ ಅಭ್ಯಾಸಕ್ರಮದಲ್ಲಿಯೂ ಇದೇ ದೋಷವು ಕಂಡುಬರುವದು. ಗಣಿತದೊಳಗಿನ ದೊಡ್ಡ ದೊಡ್ಡ ಉದಾಹರಣಗಳನ್ನು ಬಿಡಿಸುವ ಹುಡುಗರಿಗೆ ದಸರೆಯಿಂದ ದೀಪಾವಳಿಯ ವರೆಗಿನ ದಿವಸಗಳನ್ನು ಎಣಿಸಲಿಕ್ಕೆ ಬರುವದಿಲ್ಲ ಬಾಯಿಲೆಕ್ಕದರೀತಿಗಳನ್ನು ಬೇಕಾದ ಹಾಗೆ ಹೇಳುವ ಹುಡುಗನು ತಾನೇ ತೆಗೆದುಕೊಂಡ ಹತ್ತೆಂಟು ಸೇರು ಬೆಲ್ಲದ ಬೆಲೆಯನ್ನು ಕೂಡಲೆ ಹೇಳಲಿಕ್ಕಾಗದೆ ತ್ರೈರಾಶಿಕವನ್ನು ಹಾಕಿಕೊಂಡು ಕೂಡ್ರುವನು. ಆದ್ದರಿಂದ ತತ್ವದ ಸಂಗಡ ವ್ಯವಹಾರದ ಉದಾಹರಣಗಳು ಹೆಚ್ಚಾಗಿ ಬೇಕು. ಮೇಲೆ ಹೇಳಿದ ಸೂಚನೆಗಳನ್ನು ಲಕ್ಷದಲ್ಲಿಟ್ಟು ಅದರಂತೆ ನಡೆಯಲಿಕ್ಕೆ ನಮ್ಮ ಶಿಕ್ಷಕ ವರ್ಗವು ಯತ್ನಿಸಿದರೆ ಎಷ್ಟೋ ಲಾಭವಾಗುವ ಸಂಭವವುಂಟು.

ಶಾಲೆಯ ತೋಟ

——:(0):——

ನಮ್ಮ ವಾಸಸ್ಥಾನಗಳ ಸುತ್ತಲೂ ವಿಹಾರಾರ್ಥವಾಗಿಯೂ ನೇತ್ರಾನಂದಕ್ಕಾಗಿಯೂ ತೋಟಗಳಿರುವದು ಅವಶ್ಯಕವು. ಅವುಗಳಿರುವದರಿಂದ ಎತ್ತ ನೋಡಿದರೂ ಸೃಷ್ಟಿಯ ವೈಚಿತ್ರ್ಯಗಳು ದೃಷ್ಟಿಗೋಚರಗಳಾಗುವವು. ಕಾಲಚಕ್ರದಂತೆ ಪರಿವರ್ತನವನ್ನು ಹೊಂದುತ್ತಿರುವ ಬಗೆಬಗೆಯ ಹೂಗಳು ಕಣ್ಣುಗಳಿಗೆ ಆನಂದವನ್ನೀಯುವವು. ಅವುಗಳ ಸುಗಂಧವು ಘ್ರಾಣೇಂದ್ರಿಯಕ್ಕೆ ಅದ್ವಿತೀಯವಾದ ಆನಂದವನ್ನೀಯುವದು. ಇಂಥ ತೋಟಗಳಿಂದುಂಟಾಗುವ ಮನೋನೈರ್ಮಲ್ಯವೂ ಆರೋಗ್ಯವೂ ಸೌಖ್ಯವೂ ಹೊಗಳತಕ್ಕಂಥವು ನಮ್ಮ ಪ್ರಾಥಮಿಕ ಶಾಲಾ ಮಾಸ್ತರರಿಗೂ ಅವರ ವಿದ್ಯಾರ್ಥಿಗಳಿಗೂ ಮಾನಸಿಕ ಶ್ರಮವು ಹೆಚ್ಚು ಆಗುವದರಿಂದ ಅವರಿಗೆ ಈ ತರಹದ ವಿಹಾರಸ್ಥಾನಗಳು ಇರುವದು ಅತ್ಯಾವಶ್ಯಕ. ಯಾವತ್ತೂ ಶಾಲಾ ಮಾಸ್ತರರಿಗೂ ಈ ತರಹದ ತೋಟಗಳನ್ನು ನಿರ್ಮಾಣ ಮಾಡಲಿಕ್ಕೆ ಅನುಕೂಲವಿದ್ದೀತೆಂದು ಹೇಳಲಾಗುವದಿಲ್ಲ. ಅನುಕೂಲ್ಯವಿದ್ದವರಾದರೂ ಈ ಬಗ್ಗೆ ಹೆಚ್ಚು

ಲಕ್ಷಕೊಟ್ಟಾರೆಂಬ ಉದ್ದೇಶದಿಂದ ಉದ್ಯಾನವನಗಳ ನಿರ್ಮಾಣ, ಪಾಲನೆ ಮುಂತಾದವುಗಳ ಬಗ್ಗೆ ಇಲ್ಲಿ ಸಂಕ್ಷೇಪವಾಗಿ ವಿವೇಚನೆ ಮಾಡುವೆವು.

ತೋಟಗಳ ನಿರ್ಮಾಣ ವಿಷಯದಲ್ಲಿ ಎಲ್ಲಕ್ಕೂ ಮೊದಲು ನೆಲದ ಅನುಕೂಲವನ್ನು ನೋಡಿಕೊಳ್ಳಬೇಕು. ಪ್ರತಿಕೂಲವಾದ ನೆಲದಲ್ಲಿ ಎಷ್ಟು ವ್ಯವಸಾಯ ಮಾಡಿದರೂ ಅದು ಶೋಭಿಸುವದಿಲ್ಲ. ಭೂಮಿಯು ಉತ್ತಮವಾದದ್ದಿದ್ದರೂ ಸಮೀಪದಲ್ಲಿ ಜಲಾಶಯವಿಲ್ಲದಿದ್ದರೆ ಅದು ನಿರುಪಯೋಗವು. ಆದುದರಿಂದ ಉದ್ಯಾನ ನಿರ್ಮಾಣಕ್ಕೆ ಮೊದಲು ಉತ್ತಮವಾದ ನೆಲ, ತಕ್ಕ ನೀರಾಸರೆ ಇವುಗಳನ್ನು ಸಿದ್ಧಮಾಡಿಟ್ಟುಕೊಳ್ಳುವದು ಯೋಗ್ಯವು

ತಕ್ಕ ನೆಲ ಮತ್ತು ಜಲ ಇವುಗಳ ಸಿದ್ಧತೆಯಾದ ನಂತರ, ಸೂಕ್ಷ್ಮ ಬುದ್ಧಿಯಿಂದಲೂ, ಸ್ವಾನುಭವದಿಂದಲೂ, ತಾನು ನಿರ್ಮಿಸಬೇಕಾದ ಉದ್ಯಾನದ ನಿರ್ಮಾಣ ಪಥಕವನ್ನು ಗೊತ್ತುಮಾಡಿಟ್ಟುಕೊಳ್ಳಬೇಕು. ಶಿಲ್ಪಿಕರು ತಮ್ಮ ಚಾತುರ್ಯವನ್ನು ಬೇಕಾದ ಹಾಗೆ ತೋರಿಸಲಿಕ್ಕೆ ಇಲ್ಲಿ ಅವಕಾಶವುಂಟು. ಕವಿಯು ಹ್ಯಾಗೆ ಉತ್ತಮ ಪದಗಳನ್ನು ಪ್ರಯೋಗಿಸಿ ಕಾವ್ಯಗಳನ್ನು ಮನೋರಂಜಕಗಳನ್ನಾಗಿ ಮಾಡುವನೋ ಹಾಗೆಯೇ ಉದ್ಯಾನ ಪಾಲಕನು ರಮ್ಯವಾದ ಗಿಡಗಳು, ಲತಾಮಂದಿರಗಳು ಮುಂತಾದವುಗಳಿಂದ ಉದ್ಯಾನ ವನಗಳನ್ನು ಶೋಭಾಸ್ಪಿತಗಳನ್ನಾಗಿ ಮಾಡಬಹುದು.

ಹೀಗೆ ಉದ್ಯಾನ ನಿರ್ಮಾಣದಲ್ಲಿ ಪಾಲಕನ ಚಾತುರ್ಯವೇ ಮುಖ್ಯವಾಗಿದ್ದರೂ ಆರಂಭದವರಿಗೆ ಮಾರ್ಗತೋರಿಸಲಿಕ್ಕೆಂದು ಕೆಲವು ಸಾಮಾನ್ಯ ಸೂಚನೆಗಳನ್ನು ಇಲ್ಲಿ ಹೇಳುವೆವು.

ಉದ್ಯಾನವನ್ನು ನಿರ್ಮಿಸತಕ್ಕ ಸ್ಥಳದ ಸುತ್ತಲೂ ಯಾವದಾದರೊಂದು ತರದ ಆವರಣವಿರಬೇಕು. ಇಟ್ಟಂಗಿ, ಕಲ್ಲು ಮುಂತಾದವುಗಳ ಅನುಕೂಲವಿಲ್ಲದಿದ್ದಲ್ಲಿ, ವಿಲಾಯತಿಯ ಕಳ್ಳಿ ಮುಂತಾದವುಗಳನ್ನು ದಟ್ಟಾಗಿ ಬೆಳೆಯಿಸಬಹುದು. ಕಾಲುದಾರಿಗಳನ್ನೂ ರಸ್ತೆಗಳನ್ನೂ ಏರ್ಪಡಿಸುವದು ಎರಡನೆಯ ಕೆಲಸವು. ಈ ದಾರಿಗಳ ಉದ್ದ ಅಗಲ ಮುಂತಾದವುಗಳು ಸ್ಥಳದ ಅನುಕೂಲನಿದಂತೆ ನಿರ್ಣಯಿಸಲ್ಪಡ

ಬೇಕು. ದಾರಿಗಳ ಎರಡೂ ಮಗ್ಗಲು ಕರಿಕೆ ಮುಂತಾದ ಹುಲ್ಲು ಜಾತಿಗಳನ್ನು ಬೆಳೆಯಿಸಿ, ಕತ್ತರಿಸುವದರಿಂದ ಅಂದವಾಗಿ ತೋರುವಂತೆ ಮಾಡಬೇಕು. ಒಂದೊಂದು ತರಗತಿಗೆ ಒಂದೊಂದರಂತೆ ಭಾಗಗಳನ್ನು ಕಲ್ಪಿಸಿ, ಆಯಾ ತರಗತಿಯ ವಿದ್ಯಾರ್ಥಿಗಳು ತಮ್ಮ ತಮ್ಮ ಭಾಗಗಳಲ್ಲಿಯೇ ಕೆಲಸಮಾಡುವಂತೆ ನಿಯಮಿಸಬೇಕು. ಇದರಿಂದ ವಿದ್ಯಾರ್ಥಿಗಳಲ್ಲಿ ಸ್ವಾಭಿಮಾನ, ಹೌದೆನಿಸಿಕೊಳ್ಳಬೇಕೆಂಬ ಅಪೇಕ್ಷೆ ಮುಂತಾದ ಉತ್ಕೃಷ್ಟ ಗುಣಗಳು ನೆಲೆಗೊಳ್ಳುವವು ಬಾಲಕರು ತೋಟಗಳಲ್ಲಿ ಕೆಲಸಮಾಡುವದರಿಂದ ಮನಸು ಸ್ವಚ್ಛವಾಗಿ, ವಿಷಯ ಗ್ರಹಣಶಕ್ತಿಯು ಬಲವತ್ತರವಾಗುವದು. ಭೂಮಿಯನ್ನು ಹದಗೊಳಿಸುವದು, ಬಗೆ ಬಗೆಯ ಗೊಬ್ಬರವನ್ನುಪಯೋಗಿಸಿ, ಆಯಾ ಜಾತಿಯ ಗಿಡಗಳಿಗನುಕೂಲವಾಗುವಂತೆ ಮಣ್ಣನ್ನು ಸಿದ್ಧಮಾಡಿಕೊಳ್ಳುವದು, ಯಾವಸ್ಥಳದಲ್ಲಿ ಯಾವಜಾತಿಯ ಗಿಡವು ಬೇಕೋ ಆದನ್ನು ಹಚ್ಚುವದು, ಹದವನ್ಸರಿತು ಪೈರುಗಳಿಗೆ ನೀರು ಹಾಕುವದು, ಕಳೆತೆಗೆಯುವದು ಮುಂತಾದ ಕೆಲಸಗಳಲ್ಲಿ ತಕ್ಕ ಅನುಭವವನ್ನು ಸಂಪಾದಿಸಿ, ಜಾಗರೂಕತೆಯಿಂದಲೂ ಶಾಂತ ಸ್ವಭಾವದಿಂದಲೂ ಮಾಡಬೇಕು. ವೇತನಾಭಿಲಾಷೆಯಿಂದ ಮಾಡಿದರೆ ತೋಟವು ಅಷ್ಟು ತೃಪ್ತಿಕರವಾಗಿ ಆಗಲಿಕ್ಕಿಲ್ಲ.

ನಮ್ಮ ಪ್ರಾಥಮಿಕ ಶಾಲಾ ಮಾಸ್ತರರಲ್ಲಿ ಈ ಬಗ್ಗೆ ಯತ್ನ ಮಾಡಿದವರು ವಿರಳ. ಮೇಲೆ ಹೇಳಿದಂತೆ ಅನುಕೂಲವಿದವರಾದರೂ ಯತ್ನವಮಾಡುವರೆಂದಾಶಿಸುತ್ತೇವೆ.

ಶಿಕ್ಷಣದ ಮಹತ್ವವು.

ಆಯುಷ್ಯವು ಪೂರ್ಣವಾಗಿ ಸಾರ್ಥಕ್ಯವನ್ನು ಹೊಂದಬೇಕೆಂಬದೇ ಶಿಕ್ಷಣದ ಇಲ್ಲವೆ ವಿದ್ಯೆಯ ಮುಖ್ಯೋದ್ದೇಶವು ಮನುಷ್ಯನ ಬುದ್ಧಿ, ವೃತ್ತಿ ಮತ್ತು ಆತ್ಮ ಇವು ಉಚ್ಚಸ್ಥಿತಿಯನ್ನು ಹೊಂದಿ, ವ್ಯಕ್ತಿ, ಕುಟುಂಬ, ಸಮಾಜ ಇವುಗಳ ಉತ್ಕರ್ಷವಾಗಬೇಕಾದರೆ, ಶಿಕ್ಷಣದ ಸಂಸ್ಕಾರವು ಅವಶ್ಯವಾಗಿ ಬೇಕಾಗುವದು. ಈ ಗುಣಗಳು ಯಾವ ಶಿಕ್ಷಣದಿಂದ ಬರುವದಿಲ್ಲವೋ ಅಂಥ ಶಿಕ್ಷಣವೆ ಸದೋಷ ಅಥ

ವಾ ಅಪೂರ್ಣವೆಂದು ತಿಳಿಯಲಿಕ್ಕೆ ಬೇಕು. ಶಿಕ್ಷಣದಿಂದ ಮನುಷ್ಯನ ದುರ್ಗುಣ, ದುರ್ವಿಚಾರ, ದೌರ್ಬಲ್ಯ ಮುಂತಾದವುಗಳು ಅಳಿದು ಹೋಗಿ, ಅವುಗಳ ಸ್ಥಳದಲ್ಲಿ ಸದ್ಗುಣ, ಸುವಿಚಾರ, ಸಾಮರ್ಥ್ಯ ಮೊದಲಾದವುಗಳು ಉಂಟಾಗುವವು. ಅಂದರೆ ಅನುವಂಶಿಕ ಸಂಸ್ಕಾರವು ಉತ್ತಮ ರೀತಿಯಿಂದ ನಡೆಯುವದು. ಇದರಿಂದ ಜನಾಂಗದ ಸುಧಾರಣೆಯೂ ಸುಲಭವಾಗಿ ಆಗುವದು. ರಾಷ್ಟ್ರೋನ್ನತಿಯ ಕಲ್ಪನೆಯನ್ನು ಆಲೋಚಿಸಿ, ವ್ಯಕ್ತಿಯ ಬಗ್ಗೆ ಶಿಕ್ಷಣದ ಸಿದ್ಧತೆಯು ಮಾಡಲ್ಪಡಬೇಕು. ಕೇವಲ ವ್ಯಕ್ತಿಯ ಹಿತದ ಕಡೆಗೇ ಚಿತ್ತ ಕೊಟ್ಟಲ್ಲಿ ಜನಾಂಗದ ಇಲ್ಲವೆ ದೇಶದ ಹಿತವು ಸಾಧ್ಯವಾಗಲಾರದು. ವ್ಯಕ್ತಿಯ ಹಿತವಂತೂ ಸಾಧಿಸಲಾರದೆಂಬದು ನಿಶ್ಚಯವು. ಇದಲ್ಲದೆ ಆಧುನಿಕ ಶಿಕ್ಷಣವು ವ್ಯಕ್ತಿ ಹಿತವನ್ನನುಸರಿಸಿ, ಇಟ್ಟಿರುವದರಿಂದ ನಮ್ಮಲ್ಲಿ ಸ್ವಾರ್ಥಪರ ಪ್ರವೃತ್ತಿಯು ಹೆಚ್ಚಾಗುತ್ತ ನಡೆದಿರುವದು. ಹೀಗೆಯೇ ಅಸಾಮಾಜಿಕ ರೀತಿಯ ಶಿಕ್ಷಣವು, ಕೆಲಕಾಲ ನಡೆದರೆ, ಸಮಾಜದ ಸಂಗಡ ವ್ಯಕ್ತಿಯ ಹಾನಿಯೂ ತಪ್ಪುತ್ತದೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ಮೊದಲು ಸಮಾಜ, ಬಳಿಕ ಸ್ವದೇಶ ಆ ಮೇಲೆ ಜಗತ್ತಿನ ಅಭಿಮಾನವನ್ನು ಹಿಡಿಯಲಿಕ್ಕೆ ಬೇಕು. ಮತ್ತು ಇವುಗಳಲ್ಲಿಯ ದೃಢತ್ವ, ಬಂಧನ, ನ್ಯಾಯ, ನೀತಿ, ಕಲಾ, ಜ್ಞಾನ, ಮುಂತಾದವುಗಳು ಶಾಶ್ವತವಾಗಿ ನಿಲ್ಲುವಂತೆ ಯೋಗ್ಯ ಶಿಕ್ಷಣದ ಪದ್ಧತಿಯನ್ನು ಹಾಕಿಕೊಡಬೇಕು. ಅದರಂತೆ ಪ್ರತಿಯೊಂದು ವ್ಯಕ್ತಿಯಲ್ಲಿರುವ ಒಂದು ವಿಶೇಷ ಗುಣವನ್ನು ವೃದ್ಧಿಗೊಳಿಸಿ, ಆತ್ಮೋನ್ನತಿ, ಕರ್ತವ್ಯ, ಸುಖ ಮುಂತಾದವುಗಳನ್ನು ಹ್ಯಾಗೆ ಸಾಧಿಸಬೇಕೆಂಬದನ್ನು ಕಲಿಯಲಿಕ್ಕೆ ಬೇಕು. ತಾತ್ಪರ್ಯವೇನೆಂದರೆ:— ಮನುಷ್ಯನು ತನಗೂ, ಸಮಾಜಕ್ಕೂ ರಾಷ್ಟ್ರಕ್ಕೂ, ಹಿತವಾಗುವಂತೆ ನಡೆಯುವದು ತನ್ನ ಕರ್ತವ್ಯವೆಂದು ತಿಳಿದು, ಅದರಂತೆ ವರ್ತಿಸಲಿಕ್ಕೆ ಬೇಕು. ಬರೇ ಭಂಗಾರದ ಆಭರಣಗಳಿಂದ ತನ್ನ ದೇಹಕ್ಕೆ ಸೌಂದರ್ಯವನ್ನು ತಂದು ತಂದುಕೊಳ್ಳುವದಕ್ಕಿಂತ ಅಂಗಕಾಂತಿ, ಆರೋಗ್ಯ, ಸುದೃಢತೆಗಳೆಂಬ ಆಭರಣಗಳಿಂದ ಭೂಷಿಸುವದು ಹೆಚ್ಚು ಶ್ರೇಯಸ್ಕರವಾಗಿ ತೋರುತ್ತದೆ. ಇಡೀ ರಾಷ್ಟ್ರವನ್ನು ಭೂಷಿಸುವದು ತನ್ನ ಕರ್ತವ್ಯವೆಂದು ತಿಳಿದು, ಯತ್ನಮಾಡುತ್ತಿರಬೇಕು. ಶಿಕ್ಷಣದಿಂದ ಮನಸ್ಸಿನ ಮತ್ತು

ಬುದ್ಧಿಯ ಶಕ್ತಿಯು ಬೆಳೆಯಲಿಕ್ಕೆ ಬೇಕು. ಅದು ಕ್ರಿಯೆಯ ದ್ವಾರದಿಂದ ಪ್ರಸಿದ್ಧಿಯನ್ನು ಹೊಂದಲಿಕ್ಕೆ ಸುದೃಢವಾದ ಮತ್ತು ಸ್ವಾಧೀನವಾದ ಶರೀರವು ಲಭಿಸಬೇಕು. ಇದಕ್ಕೆ ಇಚ್ಛಾ ಶಕ್ತಿಯ ಅನುಕೂಲವೂ ಬೇಕು. ಅದು ಸಂತೋಷದಿಂದ ಸುವಿಚಾರದ ಮತ್ತು ಸದ್ಪ್ರವೃತ್ತಿಯ ತಂತ್ರದಿಂದ ನಡೆಯಬೇಕು. ಸಮಾಧಾನ ಗುಣವನ್ನು ಹೊಂದಬೇಕು. ಇದಲ್ಲದೆ ಆಯುಷ್ಯವು ವಿಸ್ತೀರ್ಣವಾಗಿ ಫಲದ್ರೂಪವನ್ನು ಹೊಂದ ಬೇಕು. ಆಯುಷ್ಯವು ಬಹಳ ಮಹತ್ವದ್ದು ಇದ್ದು, ಅದರ ಕಡೆಗೆ ಯಾವ ಕಾರಣದಿಂದಲೂ, ಅಲಕ್ಷ್ಯ ಮಾಡುವದು ತಕ್ಕದ್ದಲ್ಲೆಂದು ತಿಳಿದು, ಯೋಗ್ಯ ರೀತಿಯಿಂದಲೂ, ಸುವಿಚಾರದಿಂದಲೂ ವರ್ತಿಸುತ್ತಿರಬೇಕು. ಯಾವ ದೇಶದಲ್ಲಿಯಾದರೂ ಸತ್ಪುರುಷರು ಹುಟ್ಟುವದು, ಅವರಿಂದ ಧರ್ಮ, ಸುವಿಚಾರ, ಸದ್ಗುಣ, ಮತ್ತು ಕರ್ತವ್ಯ ಇವುಗಳ ಉತ್ಕರ್ಷವು ಆಗುವದು, ಸತ್ಕರ್ಮದಲ್ಲಿ ತಿರಸ್ಕಾರವು ಹುಟ್ಟದೆ ಇರುವದು, ಇವೆಲ್ಲ ಉತ್ತಮ ಶಿಕ್ಷಣದ ಫಲಗಳು. ಸತ್ಕರ್ಮದ ವಿಷಯವಾಗಿ ಉತ್ತಮವಾದ ಕಲ್ಪನೆಯಿಂದ ಅಂತಃಕರುಣವನ್ನು ತುಂಬಿಬಿಟ್ಟಿರಬೇಕು. ಪ್ರಾಚೀನ ಸ್ಥಿತಿಯ ಬಗ್ಗೆ ಯೋಗ್ಯ ಅಭಿಮಾನವೂ, ಸದ್ಯಸ್ಥಿತಿಯ ಸಲುವಾಗಿ ಸುಧಾರಣೆಯ ಚಿಂತನೆಯೂ, ಭಾವೀ ಸಮಾಜದ ದೆಶೆಯಿಂದ ಕಳಿಕಳಿಯೂ, ಹುಟ್ಟಲಿಕ್ಕೆ ಬೇಕು. ಪಾಪಕರ್ಮಕ್ಕೆ ಆಶ್ರಯವು ಸಿಗದೆ, ಸಮಾಜದಲ್ಲಿ ಸುಖಶಾಂತಿಗಳು ಕುಣಿಯುತ್ತಿರಬೇಕು. ಪ್ರತಿಯೊಬ್ಬನು ವೇಳೆಯ ಬೆಲೆಯನ್ನು ಚನ್ನಾಗಿ ತಿಳಿಯಲಿಕ್ಕೆ ಬೇಕು. ಈಗ ಕಲಿಯುಗವು ಇದ್ದದರಿಂದ ನಮ್ಮ ಸಮಾಜ ಸುಧಾರಣೆಯೆಂಬ ಇಮಾರತಿನ ತಳವು, ಸಡಿಲವಾಗದಂತೆ ಕಾಪಾಡುವ ಸಲುವಾಗಿ ಉಳಿದ ಯುಗಕ್ಕಿಂತಲೂ ಹೆಚ್ಚು ಜಾಗ್ರತೆಯನ್ನು ಹೊಂದಲಿಕ್ಕೆ ಬೇಕು. ದುರ್ಗುಣದ ತವರಮನೆಯಾದ ಅಹಂಕಾರದಿಂದ ದೇವರು, ಗುರುಗಳು, ಪಿತೃ ಮೊದಲಾದವರ ಅಮರ್ಯಾದೆಯು ಆಗದಂತೆ ಎಚ್ಚರ ಪಡಬೇಕು. ಧರ್ಮದ ಉತ್ತಮವಾದ ಹಾದಿಯನ್ನು ತೆಗೆಯಲಿಕ್ಕೆ ಬೇಕು ಮತ್ತು ಪರಮೇಶನ ಕೃಪೆಯನ್ನು ಸಂಪಾದಿಸುವ ಸಾಧನಗಳನ್ನು ನಮ್ಮ ಕೈಯಲ್ಲಿ ತೆಗೆದುಕೊಳ್ಳಲಿಕ್ಕೆ ಬೇಕು.

ಮೇಲೆ ಹೇಳಿದ ಸಾಧನಗಳನ್ನು ಯಾವದು ಸಾಧಿಸಿಕೊಡುವದೋ ಅದೇ ನಿಜವಾದ ಶಿಕ್ಷಣವು; ಮತ್ತು ಅದೇ ನಿಜವಾದ ವಿದ್ಯೆಯು ಉಳಿದದ್ದು ವೇಷವೆಂದು ತಿಳಿಯಬೇಕು. ವೇಷವು ಉಳಿದ ಯಾವದಾದರೂ ಕೆಲಸದಲ್ಲಿ ಕೆಲವೇಳೆ ನಡೆಯಬಹುದು. ಆದರೆ ಯಾವದು ಎಲ್ಲ ಸುಸ್ಥಿತಿಯ ಮತ್ತು ಸುಖದ ಆಧಾರಸ್ತಂಭವಾಗಿರುವದೋ ಅದರಲ್ಲಿ ವೇಷವು ಸ್ವಲ್ಪಾದರೂ ಇರಕೂಡದು. ಶಿಕ್ಷಣದಲ್ಲಿ ತಿರಸ್ಕಾರವು ಹುಟ್ಟಿದ್ದಾದರೆ, ಉಳಿದ ಎಲ್ಲ ಸುಖಶಾಂತಿಗಳು ಮಣ್ಣುಪಾಲಾಗುವವೆಂಬದನ್ನು ಮರೆಯಕೂಡದು. ಒಬ್ಬ ಅರಸನು ಸೈನ್ಯದ ಕಡೆಗೂ, ನ್ಯಾಯದ ಕಡೆಗೂ, ಜನಾಬಂದಿಯ ಕಡೆಗೂ, ದೂರದೃಷ್ಟಿಯಿಂದ ನಿರೀಕ್ಷಿಸಿ, ಅಡಿಗೆಯವನ ಕಡೆಗೆ ದುರ್ಲಕ್ಷಿಸಿದರೆ, ಒಂದೊಂದು ವೇಳೆ ವಿಷವು ಆತನ ಹೊಟ್ಟೆಯಲ್ಲಿ ಸೇರಿ, ಅವನಿಗೂ, ಅವನ ಪ್ರಜೆಗಳಿಗೂ ಅಕಾಲದಲ್ಲಿ ದುಃಖವು ಒದಗಬಹುದು. ಇಂಥ ಎಷ್ಟೋ ಉದಾಹರಣೆಗಳು ದೊರಕಬಹುದು. ಅದರಂತೆ ವ್ಯಕ್ತಿಯ ರಾಷ್ಟ್ರದ ಐಹಿಕ, ಮತ್ತು ಪಾರಮಾರ್ಥಿಕ ಶಿಕ್ಷಣವನ್ನು ತಿರಸ್ಕರಿಸಿದಲ್ಲಿ ನಮ್ಮ ಉಳಿದ ಸಂಪತ್ತುಗಳು ತೀವ್ರವೇ ನಾಶವಾಗುವವೆನ್ನಲಿಕ್ಕೆ ಸಂದೇಹವಿಲ್ಲ. ಆದ್ದರಿಂದ ಶಿಕ್ಷಣದ ಕಡೆಗೆ ಅರಸರೂ, ಅದಕ್ಕಿಂತ ಹೆಚ್ಚು ಪ್ರಜೆಗಳೂ ಲಕ್ಷಕೊಡಲಿಕ್ಕೆಬೇಕು. ಇದೊಂದು ಕಾರ್ಯವು ನಮಗೆ ಸಾಧಿಸಿದಲ್ಲಿ ಉಳಿದವುಗಳು ಸಹಜವಾಗಿ ದೊರಕುವವು. ಇದರ ಮಹತ್ವವನ್ನು ಎಷ್ಟು ಹೇಳಿದರೂ ಸ್ವಲ್ಪವೇ ಇರುವದು. ಈ ಕಾರ್ಯವು ಮುಖ್ಯವಾಗಿ ಸಮಾಜಕ್ಕೆ ಬೇಕಾಗಿರುವದರಿಂದ ಸಮಾಜದಲ್ಲಿ ಯಾವನು ಯೋಗ್ಯನಿರುವನೋ ಅವನು ಉದಾರ ಮನಸ್ಸಿನಿಂದ ಇದು ತನ್ನ ಆದ್ಯ ಕರ್ತವ್ಯವೆಂದು ತಿಳಿದು, ಈ ಪವಿತ್ರಕಾರ್ಯವನ್ನು ಕೂಡಲೆ ಕೈಯಲ್ಲಿ ತೆಗೆದುಕೊಳ್ಳಲಿಕ್ಕೆಬೇಕು. ಮತ್ತು ಈ ನಿರ್ಮಲಕಾರ್ಯವನ್ನು ವಂಶಪರಂಪರವಾಗಿ ಮಾಡಲಿಕ್ಕೆ ದೃಢವಾದ ಪ್ರತಿಜ್ಞೆಯನ್ನು ಮಾಡಲಿಕ್ಕೆ ಬೇಕು.

K. S Gálagali.

ಶಿಕ್ಷಕರ ಸಮ್ಮೇಲನಗಳು.

ಧಾರವಾಡ ಜಿಲ್ಹೆಯ ಕರ್ಜಗಿ, ಸವಡಿ, ಲಕ್ಕುಂಡಿ ಶಾಲೆಗಳಲ್ಲಾದ ಶಿಕ್ಷಕರ ಸಮ್ಮೇಲನಗಳ ಬಗ್ಗೆ ಅಯಾ ಸೆಕ್ರೆಟರಿಯವರಿಂದ ಬಂದ ರಿಪೋರ್ಟುಗಳನ್ನು ಶಾಲಾಪತ್ರಕದಲ್ಲಿ ಮುದ್ರಿಸುವ ಬಗ್ಗೆ ಮೆ. ಡೆ. ಎ. ಇ. ಧಾರವಾಡ ಇವರ ಕಡೆಯಿಂದ ಬರೆದು ಬಂದಿದೆ. ಸ್ಥಲ ಸಂಕೋಚದ ಮೂಲಕ ಸಂಪೂರ್ಣ ರಿಪೋರ್ಟುಗಳನ್ನು ಮುದ್ರಿಸದೆ, ಮೂರೂ ಸಮ್ಮೇಲಗಳಲ್ಲಿ ನಡೆದ ಮುಖ್ಯ ಮುಖ್ಯ ಸಂಗತಿಗಳನ್ನು ಸಂಗ್ರಹವಾಗಿ ನಮ್ಮ ವಾಚಕರಿಗೋಸ್ಕರ ಇಲ್ಲಿ ಕೊಟ್ಟಿರುತ್ತೇವೆ.

ಕರ್ಜಗಿಯಲ್ಲಾದ ಸಮ್ಮೇಲನವು.

ಸುತ್ತಲು ನಾಲ್ಕು ಹರದಾರಿಗಳ ಅಂತರದಲ್ಲಿರುವ ಯಾವತ್ತೂ ಶಾಲೆಗಳಿಗೆ ಸರಕ್ಯೂಲರ ಕಳಿಸಿತ್ತು. ಸಮ್ಮೇಲನದಲ್ಲಿ ಓದತಕ್ಕ ನಿಬಂಧಗಳನ್ನೂ, ಕಲಿಸತಕ್ಕ ಮೂವರಿಯ ಪಾಠಗಳನ್ನೂ ನುರಿತ ಟ್ರೇಂಡ ಮಾಸ್ತರರಿಗೂ ಅಸಿ. ರಿಗೂ ಗೊತ್ತುಮಾಡಿ ಕೊಟ್ಟಿತ್ತು. ಶಿಕ್ಷಣಕ್ಕೆ ಉಪಯುಕ್ತವಾದ ಉಪಕರಣಗಳನ್ನು ಸಮ್ಮೇಲನದ ಪ್ರದರ್ಶನಕ್ಕೆ ಕಳಿಸುವ ಬಗ್ಗೆ ಮೊದಲೇ ಸೂಚನೆ ಮಾಡಿತ್ತು. ಅದರಂತೆ ಅನೇಕ ಶಾಲೆಗಳಿಂದ ಬಂದ ಮತ್ತು ಕರ್ಜಗಿ ಶಾಲೆಯಲ್ಲಿಯೇ ತಯಾರಾದ ಹೊಸ ನಕಾಶೆಗಳು, ಮಾಡೆಲ್ಲುಗಳು, ಕಾರ್ಡಬೋರ್ಡಿಯ ಆಕೃತಿಗಳು, ಕಟ್ಟಿಗೆಯ ಮಾದರಿಗಳು, ಗ್ಲೋಬುಗಳು ಮುಂತಾದವುಗಳು ಸುವ್ಯವಸ್ಥಿತವಾಗಿ ಇಡಲ್ಪಟ್ಟಿದ್ದವು. ಅಧ್ಯಕ್ಷ ಸ್ಥಾನವನ್ನು ಮೆ. ಸೇನ ಸಾ. ಬಹಾದ್ದೂರ ತನೇ ಅ. ಕಲೆಕ್ಟರ ಧಾರವಾಡ ಇವರು ವಹಿಸಿದ್ದರು.

ಪ್ರದರ್ಶನದ ವ್ಯವಸ್ಥೆ, ಪರಸ್ಥಳದ ಸಾವಮಾನುಗಳ ವ್ಯವಸ್ಥೆ, ಬ್ರಾಹ್ಮಣರ ಊಟದ ವ್ಯವಸ್ಥೆ, ಲಿಂಗವಂತರ ಊಟದ ವ್ಯವಸ್ಥೆ, ಮಿಸ್ಟೆಸ್‌ರ ಊಟದ ವ್ಯವಸ್ಥೆ ಮುಸಲ್ಮಾನರ ಊಟದ ವ್ಯವಸ್ಥೆ, ಶಾಲೆಯನ್ನು ಅಲಂಕರಿಸುವ ವ್ಯವಸ್ಥೆ, ತಿಳ್ಳಿಯ ಮ್ಯಾಚ (ಸಮುದಂಡಿಯ ಆಟ) ದ ವ್ಯವಸ್ಥೆ ಮುಂತಾದವುಗಳನ್ನು ಕರ್ಜಗಿ ಶಾಲೆಯ ಅಸಿ. ಮಾಸ್ತರರೂ ಮಿಸ್ಟೆಸ್‌ರೂ ಮುಸಲ್ಮಾನೀ ಮಾಸ್ತರರೂ ವಹಿಸಿ ಕೊಂಡಿದ್ದರು. ಅವರೆಲ್ಲರೂ ತಾವು ವಹಿಸಿಕೊಂಡ ಕೆಲಸವನ್ನು ಮಾಡಿದರು.

ಪ್ರಥಮ ದಿವಸ ಹೆ. ಮಾಸ್ತರ ಇಂಗಳಗಿ ಇವರು ಪ್ರಾಸ್ತಾವಿಕ ಭಾಷಣವನ್ನು ಮಾಡಿ ಸಾರ್ವಭೌಮರ ವಿಜಯವನ್ನು ಚಿಂತಿಸಿ ಕೆಳಗೆ ಬರೆದ ಸಮ್ಮೇಲನದ ಉದ್ದೇಶಗಳನ್ನು ಅಧ್ಯಕ್ಷರಿಗೆ ತಿಳಿಸಿದರು.

ಉದ್ದೇಶಗಳು.

೧. ಸುಧಾರಿಸಿದ ದೇಶಗಳ ಶಿಕ್ಷಣಕ್ರಮದಲ್ಲಿಯ ಸುಧಾರಣೆಗಳನ್ನು ಬಲ್ಲವರಿಂದ ತಿಳಿದುಕೊಳ್ಳುವದು.

೨. ಈಗೀಗ ಕಾಲೇಜದಿಂದ ಬಂದ ಹೊಸ ಶಿಕ್ಷಕರಿಂದ ಹೊಸ ಹೊಸ ಸಂಗತಿಗಳನ್ನು ಅರಿತುಕೊಳ್ಳುವದು.

೩. ಅನುಭವಿಕ ಮಾಸ್ತರರು ತಮ್ಮ ಅನುಭವವನ್ನು ಹೊಸ ಶಿಕ್ಷಕರಿಗೆ ತಿಳಿಸುವದು.

೪. ಶಿಕ್ಷಕರಲ್ಲಿ ಪರಸ್ಪರ ಸಹಕಾರಿತ್ವವನ್ನೂ ಪ್ರೇಮವನ್ನೂ ಬೆಳಿಯಿಸುವದು.

೫. ಶಿಕ್ಷಕರು ಸುಮ್ಮನೆ ಕೂಡ್ರದೆ ಶಿಕ್ಷಣಕಾರ್ಯವನ್ನು ಆಸ್ಥೆಯಿಂದ ನಡಿಸಿರುತ್ತಾರೆಂಬದನ್ನು ಜನರಿಗೆ ತೋರಿಸಿಕೊಡುವದು.

ಅನಂತರ "ನೈತಿಕ ಶಿಕ್ಷಣದ ಆವಶ್ಯಕತೆ" ಎಂಬ ಬಗ್ಗೆ ಸದರಿ ಹೆ. ಮಾಸ್ತರರು ಒಂದು ನಿಬಂಧವನ್ನು ಓದಿದರು. ಬಳಿಕ ಪೋಲೀಸ ಪ್ರಾಶೀಕ್ಯೂಟರರಾದ ವಿ. ಪುರುಷೋತ್ತಮರಾವ ರಾಯಚೂರ ವಕೀಲ ಇವರೂ ನೈತಿಕ ಶಿಕ್ಷಣದ ಮೇಲೆ ಬಳ್ಳೇ ಪರಿಣಾಮಕಾರಕವಾದ ಒಂದು ಭಾಷಣವನ್ನು ಮಾಡಿದರು. ಕಡೆಗೆ ಪ್ರಸಿದ್ಧ ವಕೀಲರಾದ ಸಿದ್ದಪ್ಪ ಅಣ್ಣಾ ಹೊಸಮನಿ ಬಿ. ಏ ಎಲ್. ಎಲ್. ಬಿ. ಇವರು ಕೊಲಪ ರೇಟವ್ವ ಕ್ರೆಡಿಟ ಸೊಸಾಯಿಟಿಯ ಬಗ್ಗೆ ಸುಶ್ರಾವ್ಯವಾದ ಭಾಷಣವನ್ನು ಮಾಡಿದರು.

ಮರು ದಿವಸ ಮೆ. ಸೇನ ಸಾಹೇಬರವರಿಂದ ಪ್ರದರ್ಶನವು ತೆರೆಯಲ್ಪಟ್ಟಿತು. ಬಕ್ಷಿಸ ಸಮಾರಂಭವಾದನಂತರ ಸಾಹೇಬ ಬಹಾದ್ದೂರವರು ಸಮಾರೋಪದ ಭಾಷಣವನ್ನು ಮಾಡಿದರು. ಅವರು ಹೇಳಿದ್ದೇನಂದರೆ:—

"ಅವಾಧವ್ಯವಾದ ದೊಡ್ಡ ದೊಡ್ಡ ಸಭೆಗಳಿಗಿಂತ ಇಂಥ ಸಣ್ಣ ಸಣ್ಣ ಸಮ್ಮೇಲನಗಳೇ ಹೆಚ್ಚು ಪರಿಣಾಮಕಾರಿಗಳು. ಇಂಥ ಪ್ರಸಂಗಗಳಲ್ಲಿ ಬರೇ ನಿಬಂಧ ವಾಚನವನ್ನು ಸಾಗಿಸದೆ, ಅವುಗಳ ವಿಷಯವಾಗಿ ಚರ್ಚೆ ನಡಿಸಿ, ಜಗತ್ತಿನ ಮುಂದಿಡುವದು ಹೆಚ್ಚು ಪ್ರಯೋಜನಕರವು. ಹಳ್ಳಿಯಲ್ಲಿ ಮಾಸ್ತರನೇ ಕಲಿತವನೂ ಗೌರವಶಾಲಿಯೂ ಎನಿಸುವನು.

ಅವನು ಹುಡುಗರ ಆಟನೋಟಗಳಲ್ಲಿ ಸೇರಿ ಸ್ವಂತ ಉದಾಹರಣೆಗಳಿಂದ ನೀತಿ ಶಿಕ್ಷಣವನ್ನು ಕೊಡಬೇಕು. ಶಾಲೆಯ ಹೊರಗೂ ಒಳಗೂ ಶಿಕ್ಷಕನು ನೀತಿ ಶಿಕ್ಷಣದ ಬಗ್ಗೆ ಹೆಚ್ಚು ಲಕ್ಷ ಕೊಡಬೇಕು. ಶಿಕ್ಷಕನು ಊರೊಳಗಿನ ಪಂಗಡಗಳಲ್ಲಿ ಸೇರಕೂಡದು. ಶಕ್ಯನಿದ್ದರೆ ಅಂತಃಕಲಹಗಳನ್ನು ಚಾತುರ್ಯದಿಂದ ಬಿಡಿಸಲಿಕ್ಕೆ ಯತ್ನಮಾಡಬೇಕು. ವರ್ಷದಲ್ಲಿ ಒಮ್ಮೆಯಾದರೂ ಹುಡುಗರನ್ನು ಸೃಷ್ಟಿನಿರೀಕ್ಷಣಕ್ಕಾಗಿ ಪ್ರವಾಸಕ್ಕೆ ಕರೆದೊಯ್ಯಬೇಕು. ದೇಶ ಹಿತದ ದೃಷ್ಟಿಯಿಂದ ಶಿಕ್ಷಣವು ಮುಕ್ತದ್ವಾರವಾಗಿರುವದು ಅತ್ಯಾವಶ್ಯಕವಾದದರಿಂದ ಅದು ಎಲ್ಲರಿಗೂ ನಿಲುಕುವಂತೆ ಶಿಕ್ಷಕರು ವಿಶ್ವ ಪ್ರಯತ್ನಮಾಡತಕ್ಕದ್ದು. ಬರಿಯ ಮಾನಸಿಕ ಶಿಕ್ಷಣದ ಕಡೆಗೆ ಲಕ್ಷ ಕೊಡದೆ ಶಾರೀರಿಕ ಶಿಕ್ಷಣದ ಕಡೆಗೂ ಹೆಚ್ಚು ಲಕ್ಷ ಕೊಡಬೇಕು. ವಿ. ಸರ್ವತೀರ್ಥರ ಇವರು ಈ ಸಮಾರಂಭದಲ್ಲಿ ಸೇರುವ ಸಂಧಿಯನ್ನು ತಂದುಕೊಟ್ಟದ್ದಕ್ಕಾಗಿ ನಾನು ಅವರಿಗೆ ತುಂಬಾ ಆಭಾರಿಯಾಗಿದ್ದೇನೆ." ಈ ಪ್ರಕಾರ ಅವರ ಭಾಷಣವಾದನಂತರ ಒಂದವರಿಗೆಲ್ಲ ತಾಂಬೂಲ ಪುಷ್ಪಾದಿಗಳು ಕೊಡಲ್ಪಟ್ಟವು, ಆ ಮೇಲೆ ತ್ರಿವಾರ ಬಾದಶಹರ ಹೆಸರಿನಿಂದ ಜಯ ಘೋಷವಾಗಿ ಸಭೆಯು ವಿಸರ್ಜನೆಯಾಯಿತು.

ಸವಡಿ (ರೋಣ) ಯಲ್ಲಾದ ಶಿಕ್ಷಕರ ಸಮ್ಮೇಲನವು.

ಸನ್ ೧೯೧೩ ನೇ ಜನವರಿಯ ೧೫–೧೬ ನೇ ದಿವಸಗಳಲ್ಲಿ ಇಲ್ಲಿ ಸಮ್ಮೇಲನ ಕಾರ್ಯವು ಜರುಗಿತು. ಅಗ್ಗೆ ೧೪೦ ಜನ ಶಿಕ್ಷಕರೂ ತಿಳ್ಳ, ಫುಟ್‌ಬಾಲ್ ಆಟವನ್ನಾಡುವ ನೆರೆ ಗ್ರಾಮಗಳ ಹುಡುಗರೂ ಬಂದಿದ್ದರು.

ಕಾರ್ಯಕ್ರಮದಂತೆ ದೇವರ ಸ್ತೋತ್ರವೂ ಸ್ವಾಗತಪರ ಪದ್ಯವೂ ಆದ ಬಳಿಕ ವಿ. ಪಾಟೀಲ ಹೆ. ಮಾ. ಸವಡಿ ಇವರು ಸಭಿಕರ ಸ್ವಾಗತವನ್ನು ಒಳ್ಳೇ ವಿನಯದಿಂದ ಮಾಡಿದರು.

ಬಳಿಕ ವಿ. ದೇಶಪಾಂಡೆ ೧ನೇ ಅಸಿ. ಡಿ. ಎ. ಇ. ಧಾರವಾಡ ಇವರು ಪ್ರಾಸ್ತಾವಿಕ ಭಾಷಣವನ್ನು ಮುಗಿಸಿದ ಬಳಿಕ ವಿ. ಪಾಟೀಲ ಮಾವು ಲೇದಾರ ಸಾಹೇಬ ರೋಣ ಇವರ ಅಧ್ಯಕ್ಷತೆಯ ಕೆಳಗೆ ಅನುಭವಿಕರಾದ ಶಿಕ್ಷಕರು ರಕ್ತಾಕ್ಷಯ, ಆಜ್ಞಾಪಾಲನೆ, ಶಬ್ದಬರಹ ಈ ವಿಷಯಗಳನ್ನು ಕಲಿಸಿ ತೋರಿಸಿದರು.

ಮಧ್ಯಾನ್ಹದಲ್ಲಿ (೧) ಪ್ರಸ್ತುತದ ಮಹಾಯುದ್ಧ (೨) ಸ್ವೆಚ್ಛೆಯ ಬಗ್ಗೆ ಕಥೆ, (೩) ಳನೇ ಇಯತ್ತೆಯ ವಾಚನ ಈ ವಿಷಯಗಳು ಕಲಿಸಲ್ಪಟ್ಟ ನಂತರ ವಿ. ಕಬ್ಬಿಣ ಡಾಕ್ಟರ ಸಾ. ರೋಣ ಇವರು ಭಾಷಣ ಮಾಡಿದರು. ಅವರು ಅಂದದ್ದೇನೆಂದರೆ:-

"ನಾವು ನಮ್ಮ ಮಕ್ಕಳನ್ನು ಗುರುಗಳ ಸ್ವಾಧೀನ ಮಾಡುತ್ತೇವೆ. ಅವರು ಶಾರೀರಿಕ, ಮಾನಸಿಕ, ನೈತಿಕ ಸಾಮಾಜಿಕ, ಧಾರ್ಮಿಕ ಶಿಕ್ಷಣಗಳೆಂಬ ಪಂಚಾವೃತವನ್ನು ನಮ್ಮ ಮಕ್ಕಳಿಗೆ ಪಾನಮಾಡಿಸಿ ಅವರನ್ನು ಅಮರರನ್ನಾಗಿ ಮಾಡಬೇಕು. ಶಿಕ್ಷಕರೆಲ್ಲರು ಸ್ವಾರ್ಥತ್ಯಾಗಿಗಳಾಗಬೇಕು. ಭಾವೀ ರಾಷ್ಟ್ರದ ಸುಧಾರಣೆಯಲ್ಲಿ ದೃಷ್ಟಿಯನ್ನಿಟ್ಟು ಚನ್ನಾಗಿ ದುಡಿಯಬೇಕು. ಕೆಲಕಾಲದ ಮೇಲಾದರೂ ಶಿಕ್ಷಕರ ಸಂಬಳವು ಹೆಚ್ಚಾಗುವದು ಅವಶ್ಯವಾಗಿದೆ. ನಮ್ಮಲ್ಲಿಯ ಸುಶಿಕ್ಷಿತರು ತಮ್ಮ ಮಕ್ಕಳಿಗೆ ದೇಶದ ಸಂಪತ್ತು ಬೆಳೆಯುವ ಮುಖ್ಯ ಸಾಧನವಾದ ಔದ್ಯೋಗಿಕ ಶಿಕ್ಷಣವನ್ನು ಕೊಡಬೇಕು. ಶ್ರೀಮಂತರು ಚುರುಕು ಬುದ್ಧಿಯವರಾದ ಅನಾಥ ಹುಡುಗರನ್ನು ಮುಂದಕ್ಕೆ ತರುವದಕ್ಕಾಗಿ ಟೊಂಕಕಟ್ಟಬೇಕು."

ಬಳಿಕ ರೋಣ, ಗಜೇಂದ್ರಗಡ ಕ್ಲಬ್ಬುಗಳ ನಡುವೆ ಆದ ಫುಟ್ ಬಾಲ್ ಮ್ಯಾಚ್ ನೋಡಿ ಸರ್ವರೂ ಸಂತೋಷಗೊಂಡರು.

ಮರು ದಿವಸ ಮುಸಲ್ಮಾನ ಹುಡುಗರ ತಿಳ್ಳೀಆಟವಾಯಿತು. ಬಳಿಕ ಸಮ್ಮೇಲನ ಕಾರ್ಯವು ಆರಂಭವಾಯಿತು. ೧. ದಶಾಂಶ ಅಪೂರ್ಣಾಂಕದ ಆರಂಭ ೨. ಬಂಗಾಲ ಪ್ರಾಂತದ ಪ್ರಾ. ಭೂಗೋಲ ೩. ಕಾಗದ ಮಡಿಚುವದು ೪ ಮಗ್ಗಿಯರಚನೆ ೫. ಧ್ರುವಚರಿತ್ರೆ ಇಷ್ಟು ವಿಷಯಗಳು ಕಲಿಸಲ್ಪಟ್ಟ ನಂತರ– (೧) ಭಾಷಾವಿಷಯದ ಉಪಾಂಗಗಳ ಪರಸ್ಪರ ಹೊಂದಿಕೆ (೨) ಇತಿಹಾಸ ಭೂಗೋಲ ಪಾಠಗಳ ಹೊಂದಿಕೆ (೩) ಗಣಿತ ವಿಷಯದ ಹೊಂದಿಕೆ (೪) ಶಾಲೆಯ ತೋಟ (೫) ಶಾರೀರಿಕ ಶಿಕ್ಷಣ ಈ ವಿಷಯಗಳ ಸರ್ವೋತ್ಕೃಷ್ಟವಾದ ನಿಬಂಧಗಳು ಓದಲ್ಪಟ್ಟವು.

ಬಳಿಕ ಮಧ್ಯಾನ್ಹದಲ್ಲಿ (೧) ವಿದ್ಯಾರ್ಥಿಗಳ ವಾಚನಾಲಯ (೨) ಶಾಲೆಯ ಪದಾರ್ಥ ಸಂಗ್ರಹಾಲಯ (೩) ಸಣ್ಣ ಶಾಲೆಗಳ ಶಿಕ್ಷಕರ ಕರ್ತವ್ಯ (೪) ನೀತಿ ಶಿಕ್ಷಣದ ಆವಶ್ಯಕತೆ (೫) ವಿದ್ಯಾರ್ಥಿಗಳ ಸಹಕಾರೀ ಸಂಘ (೬) ಒಕ್ಕಲಿಗರ ಮಕ್ಕಳಿಗೆ ಶಾಲೆ ಕಲಿಸುವ ವೇಳೆ (೭) ಹುಡುಗರಲ್ಲಿ ಸಿರಿಮುಂತಾದ ಚಲೋ ಚಟಗಳನ್ನು ಸೆಲೆಗೊಳಿಸುವ ಉಪಾಯ. ಇವ

ನಿಬಂಧಗಳು ಓದಲ್ಪಟ್ಟ ನಂತರ ಮಿ. ಧರಣಪ್ಪನವರ ಕೆ. ಮಾ. ಹಳ್ಳಿ ಕೇರಿ ಇವರು ಊರ ಜನರ ಪರವಿಂದ ಸಭಿಕರ ಅಭಾರ ಮನ್ನಿಸಿದರು.

ಬಳಿಕ ಡಾ. ಕಬ್ಬಿಣ ಇವರು "ನಾನು ನೋಡಿದ ಅನೇಕ ಸಮ್ಮೇಲನಗಳಲ್ಲಿ ಶಿಕ್ಷಕರ ಸಮ್ಮೇಲನವು ಅತಿ ಪವಿತ್ರವಾದದ್ದು. ಇದು ಸಭಾ ಮಂದಿರವಲ್ಲ, ಶಾರದಾ ಮಂದಿರವು. ಶಾರದೆಯ ಉಪಾಸನೆಯನ್ನು ಶಾರದಾ ಭಕ್ತರು ಈಗೆರಡು ದಿನ ಮಾಡಿದ್ದನ್ನು ಕಂಡು ನನಗೆ ಬಹಳೇ ಆನಂದವಾ ಗಿದೆ. ಉತ್ತಮವಾದ ಪದ್ಧತಿಯಿಂದಲೂ ಸರಿಯಾದ ಉಪಕರಣಗಳಿಂದ ಲೂ ಕಲಿಸುವದನ್ನು ನೋಡಿ ಯಾರಿಗೆ ಆನಂದವಾಗಲಿಕ್ಕಿಲ್ಲ? ಇದರಂತೆ ಪ್ರ ತಿನಿತ್ಯದ ಪಾಠಗಳು ನಡೆದರೆ ಭಾವೀ ರಾಷ್ಟ್ರವು ಬೇಗನೆ ಸುಧಾರಿಸುವದು.

ಇಂಥ ಸಮ್ಮೇಲನಗಳು ನಮ್ಮಲ್ಲೆರ ಕಲ್ಯಾಣಕ್ಕಾಗಿ ಬಂದಿವೆ. ಬರೇ ಶಿಕ್ಷಕರ ಸಲುವಾಗಿ ಅಲ್ಲ. ಇಲ್ಲಿ ಶಿಕ್ಷಕರಲ್ಲಿ ಕಂಡು ಬರುವ ಬಂಧು ಭಾವವು ಪ್ರತಿ ಗ್ರಾಮದಲ್ಲಿಯ ಮಾಸ್ತರ, ಅಸಿ. ಮಾಸ್ತರರಲ್ಲಿಯೂ ಊರ ವರಲ್ಲಿಯೂ ಕಂಡುಬಂದರೆ ನಿಜವಾಗಿ ಎಲ್ಲರ ಕಲ್ಯಾಣವಾಗುತ್ತದೆ.

ಮಾಸ್ತರ ಜನರ ಅಡಚಣೆಗಳನ್ನು ವಿಚಾರಿಸಲಿಕ್ಕೂ, ಅವುಗಳನ್ನು ದೂ ರ ಮಾಡುವ ಉಪಾಯಗಳನ್ನು ಯೋಚಿಸಲಿಕ್ಕೂ ರೋಣ ಗ್ರಾಮದಲ್ಲಿ ಒಂ ದು ಪ್ರಮುಖ ಮಾಸ್ತರ ಜನರ ಸಂಘವನ್ನು ಬೇಗ ನಿರ್ಮಿಸಬೇಕೆಂದು ಮಿ. ದೇಶಪಾಂಡೆ ಇವರಿಗೆ ನನ್ನ ವಿನಂತಿಯುಂಟು." ಎಂಬ ಭಾವದ ಉತ್ಸಾಹ ಪೂರಿತವಾದ ಭಾಷಣವನ್ನು ಮಾಡಿದರು. ಬಳಿಕ ಮಿ. ದೇಶಪಾಂಡೆ ಇವರು ತಮ್ಮ ಸಿಂಹಾವಲೋಕನಪರವಾದ ಭಾಷಣದಲ್ಲಿ ಹೇಳಿದ್ದೇನಂದರೆ:—

ನಾನು ಈ ಜಿಲ್ಲೆಯಲ್ಲಿ ನೆರೆಸಿದ ಸಮ್ಮೇಲನಗಳಲ್ಲಿ ಇದು ಮೂರ ನೆಯದು, ಇಲ್ಲಿ ಮೇಲಿನ ವರ್ಗಗಳ ಉಪಯೋಗಕ್ಕಾಗಿ ಕಲಿಸಲ್ಪಟ್ಟ ಪಾಠ ಗಳಲ್ಲಿ ಮಿ. ಭೀ. ಶ. ಪೂಜಾರ ಇವರು ಕಲಿಸಿದ ರಕ್ತಾಕಯದ ಪಾಠವೂ, ಮಿ. ಮಂಟಗಣೇಕರ ಇವರು ಕಲಿಸಿದ ಬಂಗಾಲ ಪ್ರಾಂತದ ಭೂ. ಭೂಗೋಲ ಪಾಠವೂ, ಮಿ. ತಟ್ಟಿ ಇವರು ಕಲಿಸಿದ ಆಜ್ಞಾಪಾಲನೆ ಎಂಬ ನೀತಿಪಾಠವೂ, ಪೂರಾ ತಕ್ಕೊಳ್ಳುವಂತೆ ಆದವು.

ಕೆಳಗಿನ ವರ್ಗದ ಪಾಠಗಳಲ್ಲಿ ಮಿ ಲಕ್ಷ್ಮೇಶ್ವರ ಇವರು ಕಲಿಸಿದ ಕವಿತಾ ಪಾಠವೂ ಮಿ. ಕರಡಿ ಇವರು ಕಲಿಸಿದ ಬಾಲಕರ ವರ್ಗದ ನೀತಿ ಪಾಠವೂ ಸೊಗಸಾದವು.

ಇಲ್ಲಿ ಓದಲ್ಪಟ್ಟ ನಿಬಂಧಗಳೆಲ್ಲ ಅನುಭವಪೂರಿತವಾಗಿದ್ದವು. ಮಿ. ಕಬ್ಬಿಣ ಡಾಕ್ಟರರು ಹೇಳಿದಂತೆ ಮಾಸ್ತರ ಅಸಿ. ಮಾಸ್ತರರು ಬರದು

ಭಾವದಿಂದಿರುವದು ಬಹಳೇ ಹಿತಕರವು. ಅವರಲ್ಲಿಯ ಆಲಸ್ಯದ ಮೂಲ ಕ ಕೆಲವೆಡೆಯಲ್ಲಿ ಈ ಭಾವವು ತಕ್ಕಷ್ಟಿರುವದಿಲ್ಲ ಇದಕ್ಕೆ ಮೂಲವಾದ ಆಲಸ್ಯವನ್ನು ನಾಶಗೊಳಿಸಿದರೆ ಅವರ ಹಿತವೂ ಹೆಚ್ಚಳವೂ ಆಗುತ್ತವೆಂ ಬದರಲ್ಲಿ ಸಂದೇಹವಿಲ್ಲ; ಮತ್ತು ಡಾಕ್ಟರ ಸಾಹೇಬರವರು ಸೂಚಿಸಿದ ಶಿಕ್ಷಕರ ಅಸೋಸಿಯೇಶನ್‌ವು ಮಹತ್ವದ್ದೂ ವಿಚಾರಾರ್ಹವೂ ಆಗಿದೆ.

ಸಮ್ಮೇಲನಕ್ಕೆ ಶ್ರಮ ಸಹಿಸಿ ಬಂದ ವೆ. ಮಾಮಲೇದಾರ ಸಾ|| ರ ಹಾಗು ಡಾಕ್ಟರ ಕಬ್ಬಿಣ ಇವರ ಮತ್ತು ತನುಮನುಧನಗಳಿಂದ ಸಹಾಯ ಮಾಡಿದ ಈ ಗ್ರಾಮ ನಿವಾಸಿಗಳ ಆಭಾರವನ್ನು ನಾನು ಬಹಳವಾಗಿ ಮನ್ನಿಸುತ್ತೇನೆ.

ಬಳಿಕ ಮಾಮಲೇದಾರಸಾಹೇಬರು—"ಬಡೋದಾ ಮೈಸೂರ ಸೀಮೆ ಗಳಲ್ಲಿ ಒತ್ತಾಯದ ಶಿಕ್ಷಣವು ಆರಂಭವಾದದ್ದರಿಂದ ಅಲ್ಲಿ ಶಿಕ್ಷಣಕಾರ್ಯ ವು ಭರದಿಂದ ಸಾಗಿದೆ. ನನು ಲ್ಲಿ ಮಾತ್ರ ಊರೊಳಗಿನ ಪ್ರಮುಖರು ಜನ ರಿಗೆ ತಿಳಿಹೇಳಿ ಹುಡುಗರನ್ನು ಶಾಲೆಗೆ ಕಳಿಸುವದು ಉತ್ತಮ ಸಾಧನವಾ ಗಿದೆ. ಹೀಗಾದರೆ ಹುಡುಗರ ಸಂಖ್ಯೆ ಕಡಿಮೆಯಿರುವದೆಂಬ ಶಿಕ್ಷಕರ ಕೂರಕುರಿಯು ಅಳಿಯಬಹುದು." ಎಂಬರ್ಥದ ಭಾಷಣ ಮಾಡಿದರು, ಬಳಿಕ ಮಿ. ತಟ್ಟಿ ಹೆ. ಮಾ. ರೋಣ ಇವರು ಎಲ್ಲ ಅಧಿಕಾರಸ್ಥರ ಹಾಗೂ ಸಭ್ಯ ಗೃಹಸ್ಥರ ಆಭಾರವನ್ನು ಮನ್ನಿಸಿದ ಬಳಿಕ ರಾಷ್ಟ್ರಗೀತ ವು ಅನ್ನಲ್ಪಟ್ಟು, ಸಾರ್ವಭೌಮರ ಹೆಸರಿನಿಂದ ಜಯಘೋಷವಾಯಿತು, ಬಳಿಕ ಹಾರ ತುರಾಯಿ ಮುಂತಾದ ಶಿಷ್ಟಾಚಾರಗಳು ನಡೆದವು.

ಆ ಮೇಲೆ ಶಿಕ್ಷಣ ಪ್ರದರ್ಶನವು ತೆರೆಯಲ್ಪಟ್ಟಿತು, ಅಲ್ಲಿ ಮಂಡಿಸಿದ ಎಲ್ಲ ಉಪಕರಣಗಳನ್ನು ನೋಡಿ, ಪ್ರೇಕ್ಷಕರು ಆನಂದಭರಿತರಾದರು.

ಬಳಿಕ ಸಮ್ಮೇಲನದ ಭಾವಪಟವು ತೆಗೆಯಲ್ಪಟ್ಟನಂತರ ಮಿ. ದೇಶ ಪಾಂಡೆ ಅಸಿ. ಮಾಸ್ತರ ಸವಡಿ ಇವರ ಸುಶ್ರಾವ್ಯ ಗಾಯನವಾಯಿತು.

ಆ ಮೇಲೆ ಸಂಜೆಯಾದ ಬಳಿಕ ಮೆ. ದೇಶಪಾಂಡೆ ಸಾ|| ರು ಮ್ಯಾ ಝಿಕ್ ಲ್ಯಾಂಟರ್ನದ ಸಹಾಯದಿಂದ ಆಗ್ರಾ, ಬನಾರಸ, ಲಖನೌ, ದಿಲ್ಲಿ, ಮಿರತ, ಝಾಂಸಿ ಈ ಪಟ್ಟಣಗಳ ಬಗ್ಗೆ ವ್ಯಾಖ್ಯಾನ ಕೊಟ್ಟರು. ಇದ ಕ್ಕಾಗಿ ಇವರ ಆಭಾರವನ್ನು ಮನ್ನಿಸಿದ ಬಳಿಕ ಸಮ್ಮೇಲನವು ಸವಾ ಪ್ತವಾಯಿತು.

ಪ್ರಕೃತಿ ಪಾಠಗಳು: —

ಬೆಕ್ಕು.

(ಜನವರಿ ತಿಂಗಳಿಂದ ಮುಂದೆ ಸಾಗಿದ್ದು.)

ವಿಷಯ.	ತಿಳಿಯುವ ಕ್ರಮ ಮತ್ತು ಪ್ರಶ್ನೆಗಳು.
ಕತ್ತಲೆಯಾಗಿರುವಾಗ ಕಣ್ಣಿನ ಗುಡ್ಡೆಸ್ಸು ಪೂರ್ಣವಾಗಿ ತೆರೆದಿಟ್ಟುಕೊಳ್ಳುವುದು. ಬೆಕ್ಕು ರಾತ್ರಿಯಲ್ಲಿ ಬೇಟೆಯಾಡುವದರಿಂದ ಅದಕ್ಕೆ ರಾತ್ರಿಯಲ್ಲಿ ದೃಷ್ಟಿ ಹೆಚ್ಚಾಗಿರಬೇಕು.	ಬೆಕ್ಕಿನ ಕಣ್ಣಿನಲ್ಲಿ ಹಗಲು ಒಂದು ರೇಖೆಯು ಮಾತ್ರ ವಿರಲು ಕಾರಣವನ್ನು ತಿಳಿಸುವದಕ್ಕೆ ಹಗಲು ವೇಳೆಯಲ್ಲಿ ನಮ್ಮ ಮನೆಗಳ ಕಿಟಕಿಗಳಿಂದ ಬಿಸಿಲು ಹೆಚ್ಚಾಗಿ ಬರುತ್ತಿದ್ದರೆ ನಾವು ಏನುಮಾಡುತ್ತವೆಂದು ಕೇಳಬೇಕು. ಬಿಸಿಲು ಇಲ್ಲದೇ ಇರುವ ವೇಳೇಗಳಲ್ಲಿ ನಮ್ಮ ಕಿಟಕಿಗಳ ಬಾಗಿಲುಗಳನ್ನು ಹೇಗಿಟ್ಟಿರುತ್ತೇವೆ?
(೩) ಮೂಸೆಗಳು. ಬೆಕ್ಕಿನ ಬಾಯಿಯ ಮೇಲೆ ಮೂಸೆಗಳಿದ್ದು ಅವು ಪಾರ್ಶ್ವಗಳಲ್ಲಿ ನೀಟಾಗಿ ವ್ಯಾಪಿಸಿರುತ್ತವೆ. ಈ ಮೂಸೆಗಳಿಗೆ ಸ್ಪರ್ಶಜ್ಞಾನವಿರುತ್ತದೆ. ಬೆಕ್ಕಿನ ತಲೆಯು ಶರೀರಕ್ಕಿಂತ ಅಗಲದಲ್ಲಿ ಕಡಿಮೆಯಾಗಿರುತ್ತದೆ. ಅದರ ಮೂಸೆಗಳು ಶರೀರದಷ್ಟು ಅಗಲವಾಗಿರುವದರಿಂದ ಯಾವದಾದರೂ ಇಕ್ಕಟ್ಟಾದ ಸ್ಥಳದಲ್ಲಿ ಹೋಗಬೇಕಾದರೆ ಮೊದಲು ಮೂಸೆಗಳು ಹಿಂದಕ್ಕೆ ಬಗ್ಗದೆ ಹೋಗುತ್ತವೋ ಇಲ್ಲವೊ ಎಂದು ನೋಡುವುದು.	ಬೆಕ್ಕಿನ ಕಣ್ಣಿನ ರಾತ್ರಿಯಲ್ಲಿ ಯಾಕೆ ಹೆಚ್ಚು ದೃಷ್ಟಿಯು ಳ್ಳದ್ದಾಗಿದೆ? ಹುಡುಗರನ್ನು ಬೆಕ್ಕಿನ ಬಾಯಿಯ ಮೇಲ್ಭಾಗದಲ್ಲಿರುವ ಮೂಸೆಗಳನ್ನು ನೋಡಿರೆಂದು ಹೇಳಿ ಅವುಗಳ ರಚನೆಯನ್ನು ಕುರಿತು ಪ್ರಶ್ನೆ ಮಾಡಬೇಕು. ಒಬ್ಬ ಹುಡುಗನನ್ನು ಬೆಕ್ಕಿನ ಮೂಸೆಗಳ ತುದಿಯನ್ನು ಮುಟ್ಟಿಂದು ಹೇಳಿ ಆಗ ಬೆಕ್ಕು ಹೇಗೆ ವರ್ತಿಸುವದನ್ನೂ ಎಲ್ಲರೂ ನೋಡಬೇಕೆಂದು ಹೇಳಬೇಕು. ಬೆಕ್ಕಿನ ತಲೆಯಪ್ರಮಾಣಕ್ಕೂ ಶರೀರದ ಪ್ರಮಾಣಕ್ಕೂ ಇರುವ ಸಂಬಂಧವನ್ನು ಹುಡುಗರಿಂದ ಹೊರಡಿಸಬೇಕು. ಬೆಕ್ಕಿನ ಮೂಸೆಗಳು ಪಾರ್ಶ್ವಗಳಲ್ಲಿ ಎಷ್ಟು ದೂರ ವ್ಯಾಪಿಸಿರುತ್ತವೆ? ಇದರ ಅಗಲವನ್ನೂ ಬೆಕ್ಕಿನ ಶರೀರದ ಅಗಲವನ್ನೂ ಹೋಲಿಸಿದರೆ ಅವು ಹೇಗೆ ಇರುತ್ತವೆ? ಬೆಕ್ಕು ಒಂದು ಇಕ್ಕಟ್ಟಾದ ಸ್ಥಳದಲ್ಲಿ ಹೋಗಬೇಕಾದರೆ ತನ್ನ ಶರೀರವು ಹೋಗುತ್ತದೋ ಇಲ್ಲವೆಂಬುವದನ್ನು ಹೇಗೆ ತಿಳಿಯುವುದು?

ಪುನರಾವೃತ್ತಿ.

ಎರಡನೆಯ ಭಾಗ.

ವಿಷಯ	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು
(ಬ) ಚರ್ಮ (ತೊಗಲು)-ಬೆಕ್ಕಿನಚರ್ಮವು ವಿವಿಧ ಬಣ್ಣವುಳ್ಳದ್ದಾಗಿರುತ್ತದೆ. ಅದು ನಯವಾಗಿರುವದು. ಅದರ ಮೇಲಿನ ತುಪ್ಪಟವು ಮೃದುವಾಗಿಯೂ ಶಾಖವುಳ್ಳದ್ದಾಗಿಯೂ ಇರುತ್ತದೆ. ಬೆಕ್ಕು ರಾತ್ರಿಯಲ್ಲಿ ಹೆಚ್ಚಾಗಿ ಸಂಚರಿಸುವ ಪ್ರಾಣಿಯಾದದ್ದರಿಂದ ಅದಕ್ಕೆ ಈ ಅನುಕೂಲ್ಯವಿರಬೇಕು.	ಬೆಕ್ಕಿನ ತಲೆಯನ್ನು ಪರೀಕ್ಷಿಸಿದ ನಂತರ ಅದರ ದೇಹದ ಇತರ ಭಾಗಗಳನ್ನು ನೋಡಬೇಕಾದದ್ದು ಕ್ರಮವಷ್ಟೆ. ಮೊದಲಿನ ಹಾಗೆಯೆ ಬೆಕ್ಕನ್ನು ಹುಡುಗರ ಮುಂದಿಟ್ಟುಕೊಂಡು ಅವರು ಅದರ ಚರ್ಮವನ್ನು ನೋಡಿದನಂತರ ಅದರ ಬಣ್ಣವನ್ನು ಕುರಿತು ಪ್ರಶ್ನೆಗಳನ್ನು ಕೇಳಬೇಕು. ಅನಂತರ ಅದನ್ನು ಕೈಯಿಂದ ಸವರಿನೋಡಿರೆಂದು ಹೇಳಿ ಈ ಪ್ರಶ್ನೆಗಳನ್ನು ಕೇಳಬಹುದು:—ಅದರ ಚರ್ಮವನ್ನು ಮುಟ್ಟಿದರೆ ಹೇಗಿರುವಂತೆ ತೋರುತ್ತದೆ? ಅದರ ಚರ್ಮವು ಹೀಗಿರುವದರಿಂದ ಉಪಯೋಗವೇನು? ಪುಷ್ಟಿಯಾಗಿ ಬೆಳೆದಿರುವ ಬೆಕ್ಕಿಗೂ ಬಡಕಲಾಗಿರುವ ಬೆಕ್ಕಿಗೂ ವ್ಯತ್ಯಾಸವೇನು?
ಬೆಕ್ಕು ತನ್ನ ಚರ್ಮದ ಮೇಲೆ ಕೊಳೆ ಸೇರಬಾರದೆಂದು ಅದನ್ನು ನಾಲಿಗೆಯಿಂದ ನೆಕ್ಕುತ್ತಿರುತ್ತದೆ.	ಬೆಕ್ಕು ಎಲ್ಲಾದರೂ ಕೂತಿರುವಾಗ ತನ್ನ ಮೈಯನ್ನೂ ನಾಲಿಗೆಯಿಂದ ನೆಕ್ಕುವದಷ್ಟೆ. ಇದಕ್ಕೆ ಕಾರಣವೇನು?
ಬೆಕ್ಕಿನ ಚರ್ಮಕ್ಕೆ ನೀರು ಅಂಟಕೊಂಡರೆ ಬಿಡುವದಿಲ್ಲ. ಅದುದರಿಂದ ಬೆಕ್ಕು ಈಜುವದಾಗಲಿ ನೀರಿನಲ್ಲಿ ಮುಳುಗುವದಾಗಲಿ ಇಲ್ಲ.	ಬೆಕ್ಕು ಈಜುವದನ್ನಾಗಲಿ ತನ್ನ ಚರ್ಮವನ್ನು ನೀರಿನಿಂದ ತೊಳೆದುಕೊಳ್ಳುವದನ್ನಾಗಲಿ ಯಾರಾದರೂ ನೋಡಿದ್ದಿರಾ? ಅದು ಏತಕ್ಕೆ ನೀರಿನ ಸಮೀಪಕ್ಕೆ ಹೋಗುವದಿಲ್ಲ?

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ಬೆಕ್ಕಿಗೆ ಕೋಪ ಅಥವಾ ಭಯವುಂಟಾದಾಗ ಅದರ ಮೈಮೇಲಿನ ಕೂದಲು ಎದ್ದು ನಿಲ್ಲುವಂತೆ ಕಾಣುವುದು.	ಒಂದು ಇಲಿ ಅಥವಾ ಒಂದು ನಾಯಿ ಬೆಕ್ಕಿನ ದೃಷ್ಟಿಗೆ ಬಿದ್ದಕೂಡಲೆ ಅದರ ಚರ್ಮದ ಮೇಲಿನ ಕೂದಲಿನಲ್ಲಿ ಏನೂ ವ್ಯತ್ಯಾಸವು ಕಂಡುಬರುವದು?
(ಕ) ಬೆಕ್ಕಿನ ಕಾಲುಗಳು:—ಇವು ಉದ್ದವಾಗಿಲ್ಲ. ಆದುದರಿಂದ ಅದು ಹೆಚ್ಚಾಗಿ ಓಡುವದಕ್ಕೆ ಇಷ್ಟ ಪಡುವದಿಲ್ಲ. ಬೆಕ್ಕಿನ ಕಾಲುಗಳು ಹಾರುವದಕ್ಕೂ ಮರಗಳನ್ನು ಹತ್ತುವದಕ್ಕೂ ಉಪಯೋಗಕರವಾಗಿವೆ.	ಬೆಕ್ಕಿನ ಕಾಲುಗಳ ಪ್ರಮಾಣದ ವಿಷಯಲ್ಲಿ ಅವಂಗೆ ಕಾಣುವದನ್ನು ಹೊರಡಿಸಿ, ಕಾಲು ಉದ್ದವಾಗಿರುವದರಿಂದ ಅನುಕೂಲವೇನೆಂದು ಕೇಳಬೇಕು. ? ಕಾಲುಗಳಿಂದ ಬೆಕ್ಕಿಗೆ ಉಪಯೋಗಗಳು ಯಾವವು?
(೧) ಬೆಕ್ಕಿನ ಅಂಗಾಲು (ಪಾದ):— ಅದರ ಅಂಗಾಲು ಮೃದುವಾಗಿರುತ್ತದೆ. ಅದರಲ್ಲಿ ಮೊಂಸಖಂಡಗಳಿರುತ್ತವೆ. ಆದುದರಿಂದ ಬೆಕ್ಕು ನಡೆಯುವಾಗ ಸಪ್ಪಳವಾಗುವದಿಲ್ಲ.	ಬೆಕ್ಕಿನ ಅಂಗಾಲನ್ನು ಕೈಯಿಂದ ಮುಟ್ಟಿ ಪರೀಕ್ಷಿಸಿನೋಡಿ ಅದರ ಅಡಿಯಭಾಗವು ಹೇಗಿರುತ್ತದೆಂದು ಹುಡುಗರನ್ನು ಕೇಳಬೇಕು. ? ಅಡಿಯಭಾಗಲ್ಲಿ ದಿಂಬಿನಂತಿರುವ ಮೊಂಸಖಂಡಗಳಿಂದ ಪ್ರಯೋಜನವೇನು. ?
(೨) ಉಗುರುಗಳು:— ಬೆಕ್ಕು ಶಾಂತವಾಗಿ ಕೂತಿರುವಾಗ ಅದರ ಉಗುರುಗಳು ಕಾಣುವ	ಬೆಕ್ಕು ಶಾಂತವಾಗಿರುವಾಗ ಅದರ ಉಗುರುಗಳು ಎಲ್ಲಿರುತ್ತವೆ? ಅದಕ್ಕೆ ಕೋಪಬಂದಾಗ ಉಗುರುಗಳು ಎಲ್ಲಿರುತ್ತವೆ? ಆದರ ಮುಂದೆ ರೊಟ್ಟಿಯ ಚೂರನ್ನು ಹಾಕಿದಾಗ ಉಗುರುಗಳನ್ನು ಹೇಗೆ ಉಪಯೋಗಿಸು

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ದಿಲ್ಲ. ಇಲಿ ಮೊದಲಾದ ಪ್ರಾಣಿಗಳನ್ನು ನೋಡಿದಾಗಲೂ, ಆಹಾರವನ್ನು ಹಿಡಿಯುವಾಗಲೂ ಉಗುರುಗಳನ್ನು ಹೊರಗೆ ಬಡುತ್ತದೆ. ಮುಂಗಾಲನ್ನೇ ಹೆಚ್ಚಾಗಿ ಉಪಯೋಗಿಸುವದರಿಂದ ಅದರಲ್ಲಿ ಐದು ಉಗುರುಗಳೂ, ಹಿಂಗಾಲಿನಲ್ಲಿ ನಾಲ್ಕು ಉಗುರುಗಳೂ ಇರುತ್ತವೆ. ಉಗುರುಗಳನ್ನು ಯಾವಾಗಲೂ ಹೊರಗೆ ಬಿಟ್ಟುಕೊಂಡಿದ್ದರೆ ಅವು ಸವೆದು ಹೋಗುವುವು.	ತ್ತದೆ? ಈ ಉಗುರುಗಳು ಬೆಕ್ಕಿಗೆ ಯಾವ ಯಾವ ಕೆಲಸದ ಉಪಯೋಗಕ್ಕೆ ಬರುತ್ತವೆ? ಮುಂಗಾಲಿನಲ್ಲಿ ಉಗುರುಗಳಿಷ್ಟು? ಹಿಂಗಾಲಿನಲ್ಲಿಷ್ಟು? ಮುಂಗಾಲಿನಲ್ಲಿ ಉಗುರುಗಳು ಹೆಚ್ಚಾಗಿರಲು ಕಾರಣವೇನು? ಅದು ನಡಿಯುವಾಗ ಉಗುರುಗಳನ್ನು ಹೊರಗೆ ಬಡದೇ ಇರುವದರಲ್ಲಿ ಉದ್ದೇಶವೇನು?
ಬೆಕ್ಕಿನ ಬಾಲ:— ಬೆಕ್ಕಿನಬಾಲವು ಉದ್ದವಾಗಿಯೂ ಗಡುತರವಾಗಿಯೂ ಇರುತ್ತದೆ. ನೆಲದ ಮೇಲೆ ಕೂತಿರುವಾಗ ಅದರ ಬಾಲವು ಕಾಲುಗಳನ್ನು ಸುತ್ತಿಕೊಂಡಿರುವಂತೆ ಕಾಣುತ್ತದೆ. ಅದು ನಡಿಯುವಾಗ ಬಾಲವು ನೆಲವನ್ನು ಸವರಿಕೊಂಡಿರುತ್ತ	ಬೆಕ್ಕಿನ ಬಾಲವನ್ನು ನೋಡಿರೆಂದು ಹೇಳಿ ಅದರ ಪ್ರಮಾಣವನ್ನು ಕುರಿತು ಪ್ರಶ್ನೆಯನ್ನು ಮಾಡಬೇಕು. ಬೆಕ್ಕು ಕೂತಿರುವಾಗ ಬಾಲವನ್ನು ಹೇಗಿಟ್ಟುಕೊಂಡಿರುತ್ತದೆ? ಅದು ನಡಿಯುವಾಗ ಬಾಲವು ಹೇಗಿರುತ್ತದೆ?

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು
ದೆ. ಅದು ಸಂತೋಷದಿಂದ ಓಡಿ ಬರುವಾಗ ಬಾಲವನ್ನು ಮೇಲಕ್ಕೆ ಎತ್ತಿಕೊಂಡು ಸ್ತಬ್ಧವಾಗಿಟ್ಟುಕೊಳ್ಳುತ್ತದೆ. ಅದಕ್ಕೆ ಕೋಪ ಬಂದಾಗಲೂ ಭಯ ವುಂಟಾದಾಗಲೂ ಬಾಲವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಝಾಡಿಸಿಕೊಳ್ಳುತ್ತದೆ	ಅದು ಸಂತೋಷದಿಂದ ನಿಮ್ಮ ಕಡೆಗೆ ಓಡಿ ಬರುವಾಗ ಅದರ ಬಾಲವು ಹೇಗಿರುತ್ತದೆ? ಅದಕ್ಕೆ ಕೋಪ ಬಂದಾಗ ಅಥವಾ ಭಯವುಂಟಾದಾಗ ಬಾಲವನ್ನು ಹೇಗಿಟ್ಟುಕೊಳ್ಳುತ್ತದೆ?
ಬೆಕ್ಕಿನಿಂದ ಉಪಯೋಗ:— ಮನೆಯಲ್ಲಿ ಬೆಕ್ಕುಗಳನ್ನು ಸಾಕುತ್ತಿದ್ದರೆ ಇಲಿಗಳ ಬಾಧೆಯು ಕಡಿಮೆಯಾಗುವುದು. ಬೆಕ್ಕು ಮಕ್ಕಳ ಸಂಗಡ ಆಟವಾಡುತ್ತದೆ.	ನಾವು ಮನೆಗಳಲ್ಲಿ ಬೆಕ್ಕುಗಳನ್ನು ಏತಕ್ಕೆ ಸಾಕಬೇಕು?
ಬೆಕ್ಕಿನ ಜಾತಿಗೆ ಸೇರಿದ ಪ್ರಾಣಿಗಳು:— ಹುಲ್ಲಿ, ಸಿಂಹ, ಚಿರತೆ (ಕಿರುಬ) ಮೊದಲಾದವು.	ಬೆಕ್ಕಿನ ಜಾತಿಗೆ ಸೇರಿದ ಪ್ರಾಣಿಗಳನ್ನು ಯಾರಾದರೂ ನೋಡಿದಿರಾ? (ನೋಡದೇ ಇದ್ದರೆ ಅವುಗಳ ಚಿತ್ರಗಳನ್ನು ತೋರಿಸಬೇಕು.) ಇವು ಎಲ್ಲಿ ವಾಸ ಮಾಡುತ್ತವೆ?

ಕಪ್ಪು ಹಲಿಗೆಯ ಮೇಲೆ ಬರೆಯುವ ಸಂಕ್ಷಿಪ್ತ ವಿವರಣೆ,

ಬೆಕ್ಕಿನ ಅಂಗರಚನೆ.

೧. ಹಲ್ಲು.—ಮೊನೆಯುಳ್ಳವು.
೨. ನಾಲಿಗೆ.—ಒರಟಾಗಿರುತ್ತದೆ.
೩. ಕಣ್ಣುಗಳು.—ಬೆಳಕಿಗೆ ತಕ್ಕ ಹಾಗೆ ಗುಡ್ಡುಗಳು ಚಿಕ್ಕವೂ ದೊಡ್ಡವೂ ಆಗುತ್ತವೆ.
೪. ವಿಸೆಗಣ್ಣು.—ಸ್ಪರ್ಶಜ್ಞಾನವನ್ನು ತಿಳಿಸುತ್ತವೆ.
೫. ಅಂಗಾಲು.—ಮೆತ್ತಗೆ ಇರುತ್ತದೆ. ದಿಂಬುಗಳನ್ನುಳ್ಳದ್ದಾಗಿರುತ್ತದೆ.
೬. ಉಗುರುಗಳು.—ತೀಕ್ಷ್ಣವಾಗಿರುತ್ತವೆ. ಆವುಗಳನ್ನು ಬೇಕಾದಾಗ ಹೊರತಗೆ ಬಿಡುತ್ತದೆ.
೭. ಚರ್ಮ.—ನಯುಸಾಗಿಯೂ ಶಾಖವುಳ್ಳದಾಗಿಯೂ ಇರುತ್ತದೆ.

ಬೆಕ್ಕಿನ ಅಭ್ಯಾಸಗಳು.

೧. ಚರ್ಮವನ್ನು ಸ್ವಚ್ಛ ಮಾಡುತ್ತದೆ.
೨. ಮೂಂಸವನ್ನು ಕೆರೆದು ತಿನ್ನುತ್ತದೆ. } ನಾಲಿಗೆಯಿಂದ.
೩. ಮರಗಿಡಗಳನ್ನು ಚನ್ನಾಗಿ ಹತ್ತಬಲ್ಲದು—ಉಗುರುಗಳ ಸಹಾಯದಿಂದ.
೪. ಆಹಾರವನ್ನು ಕತ್ತರಿಸಿ ತುಂಡುಮಾಡಿ ನುಂಗುತ್ತದೆ.—ಹಲ್ಲುಗಳಿಂದ.
೫. ಬೆಕ್ಕಿಗೆ ಆಟದಲ್ಲಿ ಪ್ರಿಯ ಹೆಚ್ಚು.

ನಾಯಿ.

ನಾವು ಮನೆಗಳಲಿ ಸಾಕುವ ಎಲ್ಲ ಪ್ರಾಣಿಗಳಲ್ಲಿ ನಾಯಿಯು ಬಹಳ ಹೆಚ್ಚು ಉಪಯೋಗಕರವಾದದ್ದೆಂದು ಹೇಳಬಹುದು. ಮನುಷ್ಯನಿಗೆ ವಶವಾಗಿ ಅವನ ಸಂಗಡ ಗೆಳೆತನವನ್ನು ಬೆಳಿಸಿರುವ ಪ್ರಾಣಿಗಳಲ್ಲಿ ಇದೇ ಮೊದಲನೇದು. ನಾಯಿಯ ಉತ್ತಮ ಸ್ವಭಾವವು ಮತ್ತು ಗುಣಗಳು ಇವೇ ಇದಕ್ಕೆ ಕಾರಣಗಳು. ಮುಕ್ಕಳಿಗೂ ಸಹ ಸಾಧಾರಣವಾಗಿ ಬೆಕ್ಕಿಗಿಂತ ನಾಯಿಯಲ್ಲಿ ಹೆಚ್ಚು ಪ್ರೀತಿ ಇರುವದು. ಅವರು ಎಲ್ಲೆಲ್ಲಿ ಹೋದರೂ ನಾಯಿಯು ಅವರನ್ನು ಹಿಂಬಾಲಿಸುವುದು.

ನಾಯಿಯ ಶರೀರ:—ನಾಯಿಯ ಶರೀರವು ಬೆಕ್ಕಿನ ಶರೀರಕ್ಕಿಂತ ದೊಡ್ಡದಾಗಿಯೂ ಹೆಚ್ಚು ಬಲವುಳ್ಳದ್ದಾಗಿಯೂ ಇರುತ್ತದೆ. ಓಡುವದರಲ್ಲೂ ಹಾರುವದಲ್ಲೂ ಹೆಚ್ಚು ಶ್ರಮವನ್ನು ತಡೆಯುವದಕ್ಕೆ ಅನುಕೂಲವಾಗುವಂತೆ ನಾಯಿಯ ಶರೀರದ ರಚನೆಯು ಏರ್ಪಟ್ಟಿರುವದು. ಅದರ

ಭದಿಂದಲೂ ಬೇಟೆಯಾಡುವದರಲ್ಲಿ ಹೆಚ್ಚಾಗಿ ಉಪಯೋಗಿಸಲ್ಪಡುತ್ತಿರುವ ನಾಯಿಯು ಬೇಟೆಯಲ್ಲಿ ಜಂತುಗಳನ್ನು ಬಹು ದೂರ ಅಟ್ಟಿಸಿಕೊಂಡು ಹೋಗಿ ಹಿಡಿಯುತಕ್ಕದ್ದಾಗಿರುತ್ತದೆ.

ತಲೆ: — ನಾಯಿಯ ತಲೆ ಬೆಕ್ಕಿನ ತಲೆಗಿಂತಲೂ ದೊಡ್ಡದು. ಮೋರೆಯು ಉದ್ದವಾಗಿರುತ್ತದೆ. ಮೂಗಿನ ತುದಿಯು ಮೊನೆಯಾಗಿರುತ್ತದೆ. ನಾಯಿಗಳು ಬೀದಿಗಳಲ್ಲಿ ಓಡಾಡುವಾಗ ತಮ್ಮ ಮೂಗನ್ನು ನೆಲಕ್ಕೆ ಸವರಿಕೊಂಡು ಹೋಗುವದನ್ನು ನಾವು ನೋಡಬಹುದು. ನಾಯಿಗಳಿಗೆ ಸ್ವಾಭಾವಿಕವಾಗಿ ವಾಸನೆ ಹಿಡಿಯುವ ಶಕ್ತಿಯು ಹೆಚ್ಚಾಗಿರುತ್ತದೆ. ಬೇಟೆಯಾಡುವಾಗ ಈ ಶಕ್ತಿಯಿಂದಲೇ ಬೇಟೆಯ ಜಂತುಗಳು ಹೋದ ಮಾರ್ಗವನ್ನು ತಿಳಿದುಕೊಳ್ಳುವುದು. ನಾಯಿಗೆ ದುಃಖವುಂಟಾದಾಗ ಮಾತ್ರ ತಲೆಯನ್ನು ಮೇಲಕ್ಕೆತ್ತಿ ರೋದನ ಧ್ವನಿಯನ್ನು ಮಾಡುವದು.

ಹಲ್ಲು: — ಬೆಕ್ಕಿನ ಹಲ್ಲುಗಳಂತೆಯೇ ನಾಯಿಯ ಹಲ್ಲುಗಳು ಮೊನೆಯಾಗಿಯೂ ಹರಿತವಾಗಿಯೂ ಇರುತ್ತವೆ. ಒಂದೊಂದು ದವಡೆಯಲ್ಲಿಯೂ ಎರಡು ಒಲವಾಸ ಕೋರೆ ಹಲ್ಲುಗಳಿರುತ್ತವೆ. ಇವುಗಳ ಸಹಾಯದಿಂದಲೇ ನಾಯಿಯು ಬೇಟೆಯ ಪ್ರಾಣಿಗಳನ್ನು ಹಿಡಿಯುತ್ತದೆ. ಇತರರೊಡನೆ ಜಗಳವಾಡುವಾಗ ಕಡಿಯುವದಕ್ಕೂ ಇವುಗಳನ್ನೇ ಉಪಯೋಗಿಸುತ್ತದೆ. ಇವುಗಳ ಹಿಂದಿರುವ ಹಲ್ಲುಗಳಿಂದಲೇ ಆಹಾರವನ್ನು ತಿನ್ನುತ್ತದೆ. ಬೆಕ್ಕಿನ ಹಾಗೆ ಇದಕ್ಕೂ ದವಡೆಗಳ ಪಾರ್ಶ್ವ ಚಲನೆಯಿಲ್ಲ. ನಾಯಿಯು ಮಾಂಸವನ್ನು ಮಾತ್ರವಲ್ಲದೆ ರೊಟ್ಟಿ ಮೊದಲಾದ ಪಕ್ವಾಹಾರಗಳನ್ನೂ ತಿನ್ನುವುದು

ನಾಲಿಗೆ: — ನಾಯಿಯ ನಾಲಿಗೆಯು ಮೃದುವಾಗಿಯೂ ನಯವಾಗಿಯೂ ಉದ್ದವಾಗಿಯೂ ಇರುತ್ತದೆ.

ಕಣ್ಣು: — ನಾಯಿಯ ಕಣ್ಣುಗಳು ದೊಡ್ಡವಾಗಿಯೂ ಪ್ರಕಾಶವುಳ್ಳವಾಗಿಯೂ ಇರುತ್ತವೆ ಹಗಲಲ್ಲಿಯೂ ರಾತ್ರಿಯಲ್ಲಿಯೂ ಇವು ಒಂದೇ ವಿಧವಾಗಿರುವುವು. ರಾತ್ರಿಯಲ್ಲಿ ಬೆಕ್ಕಿನ ಹಾಗೆ ಇದಕ್ಕೆ ದೃಷ್ಟಿ ಸೂಕ್ಷ್ಮವಾಗಿರುವದಿಲ್ಲ.

ಮೀಸೆಗಳು: — ನಾಯಿಗೆ ಮೀಸೆಗಳು ದೊಟಕಾಗಿರುತ್ತವೆ. ಇವುಗಳಿಂದ ಅದಕ್ಕೆ ವಿಶೇಷ ಪ್ರಯೋಜನ ವಿರುವದಿಲ್ಲ. ನಾಯಿಯು

ಹಗಲು ಬೇಟೆಯಾಡುವದರಿಂದ ಅದಕ್ಕೆ ಮೀಸೆಗಳ ಉಪಯೋಗವು ಅವಶ್ಯಕವಿಲ್ಲ.

ನಾಯಿಯ ಚರ್ಮ:—ನಾಯಿಯ ಚರ್ಮದ ಮೇಲಿರುವ ಕೂದಲು ಬೆಕ್ಕಿಗಿರುವದಕ್ಕಿಂತ ಉದ್ದವಾಗಿರುತ್ತದೆ. ಆದರೆ ಬೆಕ್ಕಿನ ಚರ್ಮದ ಮೇಲಿರುವಂತೆ ದಟ್ಟವಾದ ತುಪ್ಪಟವು ಇರುವದಿಲ್ಲ. ತುಪ್ಪಟವು (ಉಣ್ಣೆಯು) ಕೂದಲಿಗಿಂತ ಹೆಚ್ಚು ಶಾಖವುಳ್ಳದ್ದು. ನಾಯಿಯು ಬೆಕ್ಕಿನಂತೆ ರಾತ್ರಿಯಲ್ಲಿ ಬೇಟೆಯಾಡುವ ಜಂತುವಲ್ಲವಾದದ್ದರಿಂದ ಅದಕ್ಕೆ ಶಾಖವಾದ ಹೊದ್ದಿಕೆಯು ಬೇಕಾಗಿರುವದಿಲ್ಲ.

ನಾಯಿಯ ಎದೆ:—ನಾಯಿಯ ಎದೆಯು ಬೆಕ್ಕಿನ ಎದೆಯಗಿಂತಲೂ ವಿಶಾಲವಾದದ್ದು. ಹೀಗೆ ವಿಶಾಲವಾದ ಎದೆಯಿರುವದರಿಂದಲೇ ಬೇಟೆಯಲ್ಲಿ ಹೆಚ್ಚು ಶ್ರಮವನ್ನು ತಡೆಯಬಲ್ಲದು.

ಕಾಲುಗಳು:—ನಾಯಿಯ ಕಾಲುಗಳು ಉದ್ದವಾಗಿಯೂ, ತೆಳುವಾಗಿಯೂ ಇರತ್ತವೆ. ಅದುದರಿಂದ ನಾಯಿಯು ಬಹಳ ವೇಗವಾಗಿ ಓಡುತ್ತದೆ. ಕಾಲುಗಳು ಗಡುತರವಾಗಿದ್ದರೆ ಭಾರವು ಹೆಚ್ಚಿ ವೇಗದಿಂದ ಓಡುವದಕ್ಕಾಗುವದಿಲ್ಲ. ನಾಯಿಯ ಅಂಗಾಲಲ್ಲಿ ಮಾಂಸ ಖಂಡಗಳಿರುತ್ತವೆ. ಇವು ಬೆಕ್ಕಿನ ಪಾದಗಳ ಖಂಡಗಳಿಗಿಂತ ಕಠಿಣವಾಗಿರುವುವು.

ಉಗುರುಗಳು:—ನಾಯಿಗೂ ಮುಂಗಾಲಲ್ಲಿ ಐದು ಉಗುರುಗಳೂ ಹಿಂಗಾಲಲ್ಲಿ ನಾಲ್ಕು ಉಗುರುಗಳೂ ಇರುತ್ತವೆ. ನಾಯಿಯ ಉಗುರುಗಳು ಮೊಟಕಾಗಿಯೂ ಹರಿತವಿಲ್ಲದವುಗಳಾಗಿಯೂ ಇರುತ್ತವೆ. ನಾಯಿಯ ಉಗುರುಗಳು ಯಾವಾಗಲೂ ಹೊರಗೆ ಇರುತ್ತವೆ. ನಾಯಿಯು ಬೆಕ್ಕಿನಂತೆ ತನ್ನ ಉಗುರುಗಳನ್ನು ಒಳಕ್ಕೆ ಸೆಳೆದುಕೊಳ್ಳಲಾರದು. ಅದು ನಡಿಯುವಾಗ ಈ ಉಗುರುಗಳು ನೆಲಕ್ಕೆ ತಗಲುವದರಿಂದ ಸ್ವಲ್ಪಸಪ್ಪಳವು ಕೇಳಬರುವುದು. ನಾಯಿಯು ಬೆಕ್ಕಿನಂತೆ ಶಬ್ದವಿಲ್ಲದೆ ನಡೆಯಲಾರದು. ಈ ಉಗುರುಗಳು ಮೊಂಡಾಗಿರುವದರಿಂದ ನಾಯಿಯು ಮರಗಳನ್ನು ಹತ್ತಲಾರದು.

ಬಾಲ:—ನಾಯಿಯ ಬಾಲವು ಬೆಕ್ಕಿನ ಬಾಲದಷ್ಟು ದೃಢವಾದದ್ದಲ್ಲ ಅದರ ತುದಿಯು ಡೊಂಕಾಗಿ ಮೆಲಕ್ಕುತ್ತಿರುವದು. ನಾಯಿಗೆ ಸಂತೋಷವುಂಟಾದಾಗ ಬಾಲವನ್ನಾಡಿಸುವದು ಭಯವುಂಟಾದಾಗ ಬಾಲವನ್ನು ಹಿಂಗಾಲುಗಳ ನಡುವೆ ಸೇರಿಸಿಕೊಳ್ಳುವದು.

ಪ ತ್ರ ವ್ಯ ವ ಹಾ ರ.

"ಎಸೆವವಸಂತಮಾಸದೆ..." ಈ ಪದ್ಯದೊಳಗಿನ ಅಲಂಕಾರವು.

ಮೇಲಿನ ಕವಿತೆಯಲ್ಲಿ ಯಾವ ಅಲಂಕಾರವು ಪ್ರತೀತವಾಗುತ್ತದೆಂದು ಜಿಜ್ಞಾಸುಗಳೊಬ್ಬರು ಕೇಳಿದ್ದಕ್ಕೆ ಒಬ್ಬರಾದರು ಉತ್ತರ ಕಳಿಸಿದರೆಂಬದು ಕನ್ನಡ ಶಿಕ್ಷಕರಿಗೆ ಭೂಷಣವೇ ಸರಿ. ಆ ಉತ್ತರವನ್ನು ವಾಚಕರು ಓದಿ ನೋಡಿದ್ದಾರೆ. ಇದರ ಕೆಳಗೆ ಬರಕೊಂಡ ಉತ್ತರವನ್ನು ವಾಚಕರು ಓದಿ ತೃಪ್ತಿಹೊಂದಲಿ!

ಅಲಂಕಾರಶಾಸ್ತ್ರವು ಬೇರೆ ಶಾಸ್ತ್ರಗಳಂತೆ ಒಂದು ಸಮುದ್ರವೇ. ಯಾವನ ಬುದ್ಧಿಪಾತ್ರದ ಒಡಲು ದೊಡ್ಡದೋ ಅವನು ಹೆಚ್ಚು ನೀರನ್ನು ಎತ್ತಿಕೊಂಡು ಬಂದಾನು. ಆದಾಗ್ಯೂ ಇಡೀ ಸಮುದ್ರವನ್ನು ಎತ್ತಿತರುವದು ಯಾರಿಗಾದರೂ ಅಸಾಧ್ಯವಪ್ಪೆ! ಹೀಗಿರಲು ಒಬ್ಬರು ಇನ್ನೊಬ್ಬರಿಗೆ ದೋಷ ಕೊಡುವದು ಅವಿಚಾರದ ಕೆಲಸವೆಂಬದು ತಾನೇ ಸ್ಪಷ್ಟವದೆ.

ಎಸೆವವಸಂತ ಮಾಸದೆ ಇ. ಕವಿತೆಯು, ಬಾಣನ ಕಾದಂಬರಿಯಲ್ಲಿಯ "ಕ್ರಮೇಣಚ ಕೃತಂ ಮೇವಪುಷಿವಸಂತ ಇವ ಮಧುಮಾಸೇನ, ಮಧುಮಾಸ ಇವ ನವಪಲ್ಲವೇನ, ನವಪಲ್ಲವ ಇವ ಕುಸುಮೇನ, ಕುಸುಮ ಇವ ಮಧುಕರೇಣ, ಮಧುಕರ ಇವ ಮದೇನ, ನವಯೌವನೇನ ಪದವ್" ಎಂಬ ವಾಕ್ಯದ ಅನುವಾದವಾಗಿರುತ್ತದೆ. ಪದ್ಯದಲ್ಲಿ ಮೂಲದ ಅನುಕ್ರಮವಾಗಲಿ, ಭಾವವಾಗಲಿ ಪೂರ್ಣವಾಗಿ ಮೂಡಲಿಲ್ಲ. ಆದರೂ ಅದರ ಛಾಯೆಯು ತೀರ ವಿಕಾರ ಹೊಂದಲಿಲ್ಲ. ಅದರಿಂದ ಮೂಲದ ಅಲಂಕಾರವೇ ಇಲ್ಲಿ ಅದೆ ಎಂದು ಹಿಡಿಯ ಬಹುದು. ಮೂಲದಲ್ಲಿ "ಮಾಲೋಪಮೆ" (ಏಕಸ್ಯೈವಬಹೂಪಮಾನೋಪಾದಾನೇ ಮಾಲೋಪಮಾ) ಎಂಬ ಅಲಂಕಾರವೂ, ಅದರಲ್ಲಿ ಏಕಾವಲಿಯ ಸಂಸೃಷ್ಟಿ ಇರುವದರಿಂದ ಅದು (ಮಾಲೋಪಮೆಯು) ಏಕಾವಲಿಯಿಂದ "ಅನುಪ್ರಾಣಿತ" ವಾದದ್ದೂ ಎಂದು ಹೇಳಬೇಕಾಗಿದೆ. ಇದಲ್ಲದೆ ಅಲ್ಲಿ ದೀಪಕವು ವ್ಯಂಗ್ಯವಾಗಿ ತೋರುತ್ತದೆ. (ಕನ್ನಡದಲ್ಲಿ ಉಪಮಾನಗಳ

ಪೂರ್ತಿ ದೀಪಕದ ನೆರಳು ಬಿದ್ದಿದೆ.) ವ್ಯಂಗ್ಯವೆಂದಮೇಲೆ ಬುದ್ಧಿವಂತರು ಕಾವ್ಯದಲ್ಲಿ ತಮ್ಮ ಊಹಾಬಲದಿಂದ ಬೇಕಾದಷ್ಟು ಅಲಂಕಾರಗಳನ್ನೂ ಆಶಯಗಳನ್ನೂ ಹೇಳಿಕೊಳ್ಳಬಹುದು. ಒಮ್ಮೊಮ್ಮೆ ಕವಿಯು ಕನಸಿನಲ್ಲಿಯೂ ಕೂಡ ಕಾಣದ ಗರ್ಭಿತಾರ್ಥವನ್ನು ಟೀಕಾಕಾರನು ಊಹಿಸಬಹುದು. ಆದ್ದರಿಂದಲೇ ಇದು ಸಮುದ್ರವೆಂದು ಹೇಳಲ್ಪಟ್ಟಿದೆ.

ಸಂಸೃಷ್ಟಿ, ಅನುಪ್ರಾಣಿತ, ದೀಪಕ, ವ್ಯಂಗ್ಯ ಇವುಗಳ ಅರ್ಥವನ್ನು ಯಾವದೊಂದು ಅಲಂಕಾರಗ್ರಂಥದಲ್ಲಿ (ಕಾವ್ಯಾದರ್ಶದಲ್ಲಿ) ವಾಚಕರು ನೋಡಿಕೊಂಡರೆ ಮೇಲಿನ ವಿಷಯವು ಚನ್ನಾಗಿ ತಿಳಿಯುವದು. ಅದನ್ನು ವಿಸ್ತರಭಯಕ್ಕೋಸ್ಕರ ಇಲ್ಲಿ ಬಿಟ್ಟಿದೆ.

ಈಗ ಮೇಲಿನ ಪದ್ಯದಲ್ಲಿ ಕೆಲವು ಸ್ಥಳಗಳಲ್ಲಿ ಬಹಳ ಮಾಡಿ ಎಲ್ಲರೂ ಮಾಡುವ ಅರ್ಥವನ್ನು ಹೇಳಿ ಒಂದೆರಡು ಆಕ್ಷೇಪಗಳನ್ನು ಮುಂದಿಡುತ್ತೇನೆ. 'ವಸಂತಮಾಸದೆ' ಇಲ್ಲಿ ಸಪ್ತಮಿಯಾಗಿಯೂ 'ವಸಂತ' ಎಂಬದಕ್ಕೆ ಕೆಂಬಣ್ಣವೆಂದೂ ಅರ್ಥವನ್ನು ಹೇಳುತ್ತಾರೆ. ಆಕ್ಷೇಪ:—ವ. ಮಾಸದೆ ಇಲ್ಲಿ ತೃತೀಯೆ ಇರತಕ್ಕದ್ದಲ್ಲವೊ? ವಸಂತವೆಂದರೆ ಕೆಂಬಣ್ಣವೆನ್ನಲಿಕ್ಕೆ ಕೋಶಗಳ (ಸಂಸ್ಕೃತ ಇಲ್ಲವೆ ಕನ್ನಡ) ಪ್ರಮಾಣವುಂಟೊ? ವಸಂತವೆಂಬದಕ್ಕೆ ವಸಂತ ಕುಸುಮವೆಂದು ಅರ್ಥವಿರಬೇಕಲ್ಲವೊ? (ಇದಕ್ಕೆ ಪ್ರಮಾಣವುಂಟು.) ಈ ಆಕ್ಷೇಪಗಳನ್ನು ತಿಳಿದವರು ವಿಚಾರಿಸಲಿ!

ಒಬ್ಬ ಕನ್ನಡ ಶಿಕ್ಷಕ.

'ಕನ್ನಡ ನಾಡುಗಳಲ್ಲಿ ಪ್ರಚುರವಾಗಿರುವ ಗ್ರಾಂಥಿಕರೂಪಗಳ ಏಕರೂಪತೆ' ಯ ಬಗ್ಗೆ 'ವಾಸುದೇವ ಹಣಮಂತ ಮುತ್ತೂರ' ಅಸಿ. ಮಾಸ್ತರ ಶಾಳಾ ಕೊಲ್ಲಾರ ಜಿಲ್ಲಾ ವಿಜಾಪುರ ಇವರು ಒಂದು ಲೇಖನವನ್ನು ಬರೆದು ಶಾಲಾಪತ್ರಿಕೆಯಲ್ಲಿ ಮುದ್ರಿಸುವದಕ್ಕಾಗಿ ನಮ್ಮ ಕಡೆಗೆ ಕಳಿಸಿರುವರು. ಸ್ಥಲಸಂಕೋಚದ ಮೂಲಕ ಸಮಗ್ರಲೇಖನವನ್ನು ಕೊಡದೆ ಅದರಲ್ಲಿಯ ಮುಖ್ಯಾಂಶಗಳನ್ನು ವಾಚಕರ ಮುಂದೆ ಇಡುವೆವು.

ಬಾಧಕಗಳು.

೧. ಪ್ರಾಕೃತಿಕ ಕಾರಣಗಳು: —

(ಅ) ಕರ್ನಾಟಕದ ಉತ್ತರ ಭಾಗವೆಲ್ಲ ಮಹಾರಾಷ್ಟ್ರದೇಶಕ್ಕೆ ಹೊಂದಿರುವದರಿಂದ ಅದರ ಸಂಪೂರ್ಣ ಛಾಯೆಯು ನಮ್ಮ ಭಾಷೆಯ ಮೇಲೆ ಬಿದ್ದಿದೆ. ಇದರಂತೆ ತೆಲಗು, ತಮಿಳು, ಅರಬ, ಮಲೆಯಾಳ, ತುಳು ಮುಂತಾದ ಭಾಷೆಗಳ ಸಂಪರ್ಕವಾದರೂ ನಮ್ಮ ಭಾಷೆಗೆ ಇರುವದರಿಂದ ಭಾಷೆಯನ್ನಾಡುವಾಗಲೂ ಗ್ರಂಥಗಳನ್ನು ಬರೆಯುವಾಗಲೂ ಏಕರೂಪತೆಯ ಕನ್ನಡವನ್ನುಪಯೋಗಿಸುವದು ಅನಿವಾರ್ಯವು.

(ಬ) ಪಶ್ಚಿಮದಿಂದ ಪೂರ್ವಕ್ಕೆ ಇಲ್ಲವೆ ಉತ್ತರದಿಂದ ದಕ್ಷಿಣಕ್ಕೆ ಪ್ರವಾಸ ಮಾಡುವವನು ಪ್ರತಿ ೧೦ ಹರದಾರಿಗೆ ಭಾಷೆಯ ವ್ಯತ್ಯಾಸವನ್ನು ಕಾಣಬಹುದು. ಇದನ್ನು ತಿದ್ದುವದು ಸುಲಭಸಾಧ್ಯವಲ್ಲ.

(ಕ) ಅತಿನೀಚವರ್ಗದವರಿಂದ ಅತ್ಯುಚ್ಚವರ್ಗದವರ ವರೆಗೆ ಅಥವಾ ಅಲ್ಪಜ್ಞನಿಂದ ಘನಪಂಡಿತರ ವರೆಗೆ ಆಡುವ ಭಾಷೆಯು ಬೇರೆ ಬೇರೆ ತರದ್ದಾಗಿರುವದು. ಈ ಎಲ್ಲರ ಭಾಷೆಯು ಒಂದೇಯಾಗುವದು ಅಸಂಭವವು.

೨. ರಾಜಕೀಯ ಕಾರಣ: —

ಈ ನಮ್ಮ ದೇಶವು ಮೊದಲು ಸಂಸ್ಕೃತವನ್ನಾಡುವ ಆರ್ಯರ ವಶದಲ್ಲಿದ್ದುದರಿಂದ ಸಂಸ್ಕೃತ ಶಬ್ದಗಳೂ, ಮುಸಲ್ಮಾನೀ ಬಾದಶಹರ ವಶದಲ್ಲಿದ್ದುದರಿಂದ ಮುಸಲ್ಮಾನೀ ಶಬ್ದಗಳೂ, ಮಹಾರಾಷ್ಟ್ರರ ವಶದಲ್ಲಿದ್ದುದರಿಂದ ಮರಾಠೀ ಶಬ್ದಗಳೂ, ಈಗ ಇಂಗ್ಲಿಷರವಶದಲ್ಲಿರುವದರಿಂದ ಇಂಗ್ಲಿಷ ಶಬ್ದಗಳೂ ನಮ್ಮ ಭಾಷೆಯಲ್ಲಿ ಸೇರುವದು ವಾಡಿಕೆಯಾಗಿದೆ. ಸದ್ಯಕ್ಕೆ ಕನ್ನಡ ನಾಡುಗಳಲ್ಲಿ ಮುಂಬಯಿ, ಮದ್ರಾಸ, ಮೊಗಲಾಯಿ, ಮೈಸೂರ ಮತ್ತು ಇತರ ದೇಶೀಯ ಸಂಸ್ಥಾನಗಳು ಈ ಪ್ರಕಾರ ಐದು ಬಗೆಯ ಆಮಲುಗಳಿರುವದರಿಂದ ಆ ಐದು ಭಾಷೆಗಳ ವರ್ಚಸ್ಸು ನಮ್ಮ ಭಾಷೆಯ ಮೇಲೆ ಬೀಳುತ್ತದೆ. ಇದನ್ನು ಮೀರಿ ಭಾಷೆಯಲ್ಲಿ ಏಕರೂಪತೆಯಾಗುವದು ಕಠಿಣ.

ಸಾಧಕಗಳು.

೧. ವಿದ್ಯಾವಂತರ ಸ್ವಂತ ಕರ್ತವ್ಯಗಳು: —

(ಅ) ಕರ್ಣಾಟಕದ ಕೇಂದ್ರಸ್ಥಾನದಲ್ಲಿ ಒಟ್ಟುಗೂಡಿ, ವಿದ್ಯಾವರ್ಧಕಸಂಘದ ಶಾಖೋಪಶಾಖೆಗಳನ್ನು ಸ್ಥಾಪಿಸುವದು.

(ಬ) ಗಾದೆಯ ಮಾತುಗಳು, ಚಾತುರ್ಯವನ್ನು ಬೆಳೆಯಿಸುವ ಒಗಟುಗಳು, ವ್ಯಾಕರಣ, ಛಂದಃಸಾರ ಮುಂತಾದ ವಿಷಯಗಳನ್ನು ಸೇರಿಸಿ ಬರೆದ ಪುಸ್ತಕಗಳನ್ನೂ, ಮಾಸಿಕ ಸಾಪ್ತಾಹಿಕ ಪತ್ರಗಳನ್ನೂ ಜನರ ಮುಂದೆ ಇಡುವದು.

(ಕ) ಶುದ್ಧಕನ್ನಡ, ತತ್ಸಮ, ತದ್ಭವ ಮುಂತಾದ ಶಬ್ದಗಳನ್ನು ಬೇರೆ ಬೇರೆಯಾಗಿ ತೋರಿಸುವ ಪ್ರಚಂಡವಾದ ಕನ್ನಡ ಕೋಶವನ್ನು ತಯಾರಿಸುವದು.
(ಕನ್ನಡ ಭಾಷೆಯನ್ನಾಡುವ ಯಾವತ್ತೂ ಪ್ರದೇಶಗಳಲ್ಲಿಯ ಬಳಿಕೆಯಲ್ಲಿರುವ ಶಬ್ದಗಳು ಸಹ ಅದರಲ್ಲಿ ಬಂದಿರಬೇಕು.)

(ಡ) ಕರ್ಣಾಟಕ ದೇಶದ ನಿಜವಾದ ಮೇರೆಯನ್ನು ಗೊತ್ತುಮಾಡಿ ಸರಿಯಾದ ಅಕ್ಷಾಂಶ ರೇಖಾಂಶಗಳಿಂದ ಒಂದು ನಕಾಶವನ್ನು ತಯಾರಿಸುವದು.

(ಈ) ಅಲ್ಲಲ್ಲಿಗೆ ಸಭೆಗಳನ್ನು ನೆರೆಯಿಸಿ, ಭಾಷೆಯ ಏಕರೂಪತೆಯ ಬಗ್ಗೆ ಜನ್ನಾಗಿ ಬೋಧಿಸಿ ಜನರನ್ನು ಪ್ರೋತ್ಸಾಹಗೊಳಿಸುವದು.

೨. ರಾಜಾಶ್ರಯದಿಂದ ಜರುಗಿಸತಕ್ಕ ಕಾರ್ಯಗಳು:—

(ಅ) ಇಡೀ ಕರ್ಣಾಟಕದೊಳಗಿನ ಪ್ರಾಥಮಿಕ ಶಾಲೆಗಳಲ್ಲಿ ಹಚ್ಚುವ ಎಲ್ಲ ಕ್ರಮಿಕ ಪುಸ್ತಕಗಳೂ ಇತರ ಪುಸ್ತಕಗಳೂ ಒಂದೇ ಇರುವಂತೆ ಮಾಡುವದು.

(ಬ) ಟ್ರೇನಿಂಗ ಕಾಲೇಜುಗಳಲ್ಲಿಯೂ ಯುನಿವ್ಹರ್ಸಿಟಿಗಳಲ್ಲಿಯೂ ಭಾಷಾವಿಷಯವನ್ನು ಕಲಿಸುವ ಪಂಡಿತರು ವಿಶಿಷ್ಟವಾದ ಒಂದೇ ಸ್ಥಳದಿಂದ ತೇರ್ಗಡೆಹೊಂದಿ ಬಂದವರಾಗಿರಬೇಕು. ಅಂದರೆ ಇವರ ಕೈಕೆಳಗೆ ತಯಾರಾಗುವ ಎಲ್ಲ ವಿದ್ಯಾರ್ಥಿಗಳಿಗೂ ಒಂದೇ ವಿಧವಾದ ಶಿಕ್ಷಣವು ದೊರೆಯಲು ಅನುಕೂಲವಾಗುವದು.

ಫಲಿತಾಂಶ.

ನಮ್ಮ ಈ ಉತ್ತರ ಕರ್ನಾಟಕದಲ್ಲಿ ವೆಂಕಟ ರಂಗೋ ಕಟ್ಟಿಯವರ ಭಾಷೆಯು ಮನೋಹರವಾಗಿದೆ. ಇದರಂತೆ ಉಳಿದ ಭಾಗಗಳ ಜನರಿಗೂ ಒಬ್ಬೊಬ್ಬರ ಶೈಲಿಯು ಮನೋಹರವಾಗಿರಬಹುದು. ಈಗ ಹೊಸದೊಂದು ನಮೂನೆಯೊದರೆ ಎಲ್ಲರಿಗೂ ಸರಿಯಾಗುವದೋ ಇಲ್ಲವೋ ಸಂಶಯವಿದೆ. ಈ ಪ್ರಕಾರ ಏಕರೂಪತೆಯ ಗೊಂದಲವು ಪರಿಸ್ಥಿತಿಗೆ ವಿರುದ್ಧವಾದರೆ ತಕ್ಕ ಫಲವು ದೊರೆಯಲಿಕ್ಕಿಲ್ಲೆಂದು ತೋರುತ್ತದೆ. ಆದರೂ ಸರಿಬೀಳುವಂತೆ ಮಾಡುವದು ನಮ್ಮಲ್ಲಿಯ ವಿದ್ವನ್ಮಣಿಗಳ ಜಾಣ್ಮೆಯನ್ನು ಅವಲಂಬಿಸಿದೆ. ಆದ್ದರಿಂದ ಈ ಘನಕಾರ್ಯಕ್ಕೆ ಪ್ರಯತ್ನಿಸುವ ಸಾಹಸಿಕರಿಗೆ ಸರ್ವ ಶಕ್ತನಾದ ಪರಮಾತ್ಮನು ಅನುಗ್ರಹಿಸಲೆಂಬ ಪ್ರಾರ್ಥನೆ.

ಪತ್ರಗಳ ಸಾರಾಂಶ.

'ಹುನಗುಂದ ತಾಲೂಕ ಪೈಕಿ ಮುರಡೀ ಗ್ರಾಮದ ರೈತರು, ೧೦ ರೂ. ಗಳನ್ನು ಕೂಡಿಸಿ, ಶಾಲೆಯ ಬಿದ್ದ ಭಾಗವನ್ನು ಕಟ್ಟಿಸಿ ಕೊಟ್ಟರು' ಎಂದು ಆ ಶಾಲೆಯ ಮಾಸ್ತರರು ಬರೆಯುತ್ತಾರೆ.

ಬಿಜಾಪುರ ತಾಲೂಕಪೈಕಿ 'ಕನಮಡಿ' ಶಾಲೆಯಲ್ಲಿ ಶಾಸ್ತ್ರೀಯ ಪಾಠಗಳ ಉಪಕರಣ ಮುಂತಾದವುಗಳನ್ನು ಕೊಂಡುಕೊಳ್ಳುವ ಬಗ್ಗೆ ಆ ಊರ ಸಭ್ಯಗೃಹಸ್ಥರು ೬೦ ರೂ.ಗಳನ್ನು ಕೂಡಿಸಿಕೊಟ್ಟರೆಂದು ಆ ಶಾಲೆಯ ಹೆಡ್ ಮಾಸ್ತರ 'ಮನಗೋಳಿ,' ಎಂಬವರು ತಿಳಿಸುತ್ತಾರೆ.

ಕರ್ಜಗಿ ತಾಲೂಕ ಪೈಕಿ ದೇವಗಿರಿ ಉರ್ದು ಶಾಲೆಯ ಬಕ್ಷೀಸ ಸಮಾರಂಭದ ಕಾಲಕ್ಕೆ ಆ ಊರೊಳಗಿನ ಪ್ರಮುಖ ಮುಸಲ್ಮಾನರು ೧೦ ರೂ. ಗಳನ್ನು ಕೊಟ್ಟರೆಂತಲೂ, ಮತ್ತೊಮ್ಮೆ ರಾವಸಾಹೇಬ ಚನಬಸಪ್ಪಾ ಅಣ್ಣಾ ಶಟ್ಟರ ಮತ್ತು ಪ್ರಮುಖ ಮುಸಲ್ಮಾನರು ಕೂಡಿ ಹತ್ತು ರೂಪಾಯಿಗಳನ್ನು ಕೊಟ್ಟು ತಮ್ಮ ಉದಾರ ಬುದ್ಧಿಯನು ವ್ಯಕ್ತಪಡಿಸಿದರೆಂತಲೂ ಆ ಶಾಲೆಯ ಮಾಸ್ತರರು ತಿಳಿಸುತ್ತಾರೆ.

ವಿದ್ಯಾಖಾತೆಯ ನೋಟೀಸುಗಳು.

ಮೆಹಬೂಬನ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ದಕ್ಷಿಣಭಾಗ ಇವರ ಇಂಗ್ರೇಜೀ ಪತ್ರ ನಂಬರ ೯೪೬೩ ತಾರೀಖು ೨೬ ದಿಶಂಬರ ೧೯೧೬ ನೇ ಪ್ರಕಾರ ಕೆಳಗಿನ ಪ್ರೈಸ್‌ನೋಟನ್ನು ಎಲ್ಲ ಜನರ ತಿಳುವಳಿಕೆಗಾಗಿ ಪ್ರಸಿದ್ಧ ಮಾಡಿರುತ್ತದೆ.

ಪ್ರೈಸ್ ನೋಟ.

ದೇಶಭಾಷೆಯ ವಾಚನ ಪುಸ್ತಕಗಳು.

ಮೆಸರ್ಸ ಮ್ಯಾಕ್‌ಮಿಲನ ಮತ್ತು ಕಂಪನಿಯವರು ಮಾಡಿಕೊಂಡ ಹೆಚ್ಚಿನ ಸವಲತಿಯ ಕರಾರುಗಳಂತೆ ತಾರೀಖು ೧ ನೇ ಅಕ್ಟೋಬರ ಸನ್ ೧೯೧೬ ರಿಂದ ದೇಶ ಭಾಷೆಯ ವಾಚನ ಪುಸ್ತಕಗಳನ್ನು ಪ್ರಸಿದ್ಧ ಮಾಡುವ ಹೊಸ ಮಕ್ತೆಯನ್ನು ಕೊಟ್ಟಿರುತ್ತದೆ; ಎಂಬರ್ಥದ ಪ್ರೈಸ್ ನೋಟನ್ನು ನಂಬರ ೧೧೬೫ ತಾರೀಖು ೧೦ ನೇ ಎಪ್ರಿಲ ೧೯೧೭ರಲ್ಲಿ ಪ್ರಸಿದ್ಧಮಾಡುವದರಲ್ಲಿ ಬಂದಿತ್ತು. ಅದರಂತೆ ಆ ಹೊಸ ಮಕ್ತೆಯು ಈಗ ಒಂದು ವರ್ಷಕ್ಕಿಂತ ಹೆಚ್ಚು ದಿವಸ ನಡೆದದೆ.

ಸದ್ಯದ ಯುದ್ಧವು ಈ ವರ್ಷ ಮುಗಿದ ನಂತರ ಹೀಗೆಯೇ ಚಾಲೂ ಇದ್ದರೆ, ಅತಿಶಯ ತುಟ್ಟಿಯಾದ ಕಾಗದ ಅರಿವೆಗಳ ಮೂಲಕ ಕಂಪನಿಯು ಬಹಳೇ ಹಾನಿಯನ್ನು ಸೋಸಬೇಕಾಗುತ್ತದೆ ಎಂದು ಮೆಸರ್ಸ ಮ್ಯಾಕಮಿಲನ್ ಮತ್ತು ಕಂಪನಿಯವರು ಕೆಲವು ದಿವಸಗಳ ಹಿಂದೆ ಸರಕಾರಕ್ಕೆ ಅರ್ಜಿಯನ್ನು ಮಾಡಿಕೊಂಡಿದ್ದರು. ಮತ್ತು ಈ ಅಡಚಣಿಯು ದೂರಾಗುವ ಬಗ್ಗೆ ಕಂಪನಿಯವರು ಕೆಲವು ಸೂಚನೆಗಳನ್ನು ಸಹ ಮಾಡಿದ್ದರು. ಪರಂತು ಅವರು ಸೂಚಿಸಿದ ಎಲ್ಲ ಸಂಗತಿಗಳನ್ನು ಮಾನ್ಯ ಮಾಡಲಿಕ್ಕಾಗುವದಿಲ್ಲಾದ್ದರಿಂದ ಬುಕ್ಕ ಸೆಲರರಿಗೆ ಕೊಡತಕ್ಕ ಕಮಿಶನವನ್ನು ಕಡಿಮೆಮಾಡಿ ೧೦೦ಕ್ಕೆ ೧೫ ರಂತೆ ಇದ್ದದ್ದನ್ನು ೧೦೦ಕ್ಕೆ ೧೦ ರಂತೆ ಮಾಡುವ ಸೂಚನೆಯನ್ನು ಸರಕಾರದವರು ಪಸರಿಸಿ ಮಾಡಿರುತ್ತಾರೆ ನಡೆಯುವ ವರ್ಷದ ನಂತರವೂ ಕಾಗದ ಅರಿವೆಗಳ ಭಾವವು

ಹೀಗೆಯೇ ಇದ್ದರೆ ಮೆಸರ್ಸ ವ್ಯಾಕಮಿಲನ ಮತ್ತು ಕಂಪನಿಯವರಿಗಾಗ ಬಹುದಾದ ಹಾನಿಯ ಕೆಲವು ಭಾಗವನ್ನು ಅವರು ತಾವೇ ಸೋಸಿಕೊಳ್ಳಬೇಕು ಎಂಬ ಬಗ್ಗೆಯಾದರೂ ಸರಕಾರದವರು ಠರಾವು ಮಾಡಿರುತ್ತಾರೆ. ದಿ ಗವರ್ನರ ಇನ್‌ಕೌನ್ಸಿಲರವರು, ದೇಶ ಭಾಷೆಯ ವಾಚನ ಪುಸ್ತಕಗಳ ಬೆಲೆಯು ಕೆಳಗೆ ತೋರಿಸಿದಂತೆ ಇರಬೇಕೆಂದು ಗೊತ್ತು ಮಾಡಿದ್ದಾರೆ.

	ಕಾಗದಗಳ ಹೊಸ ಭಾವದಂತೆ ಕಿರು ಕುಳ ಪೂರ್ಣ ಬೆಲೆ.	ಬುಕ್‌ಸೆಲರರ ಕಮಿಶನದ ಮೂಲಕ ಕಡಿಮೆ ಮಾಡಿ ಗತಕ್ಕದ್ದು.	ಕಂಪನಿಯವರು ಸೋಸಬೇಕಾಗುವದರಿಂದ ಕಡಿಮೆ ಯಾಗತಕ್ಕದ್ದು.	ಇಡಬೇಕಾದ ಬೆಲೆ.
	ರೂ. ಆ ಪೈ.	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.
ಬಾಲಬೋಧಿನಿ—ಸಾಧಾ ಕಾಗದದ ಬೈಂಡು	೦—೨—೦	೦—೦—೧೫	೦—೦—೧೫	೦—೧—೯
ಮೊದಲನೇ ಪುಸ್ತಕ— ,,	೦—೪—೦	೦—೦—೨೫	೦—೦—೩೫	೦—೩—೬
ಎರಡನೇ ಪುಸ್ತಕ— ,,	೦—೪—೦	೦—೦—೨೫	೦—೦—೩೫	೦—೩—೬
ಮೂರನೇ ಪುಸ್ತಕ—ದಪ್ಪ ಕಾಗದದ ಬೈಂಡು	೦—೫—೬	೦—೦—೩	೦—೦—೩	೦—೫—೦
ನಾಲ್ಕನೇ ಪುಸ್ತಕ— ,,	೦—೭—೦	೦—೦—೩	೦—೦—೩	೦—೬—೬
ಐದನೇ ಪುಸ್ತಕ— ,,	೦—೯—೦	೦—೦—೬	೦—೦—೬	೦—೭ ೦
ಆರನೇ ಪುಸ್ತಕ— ,,	೦—೯—೦	೦—೦—೬	೦—೦—೬	೦—೮—೦
ಏಳನೇ ಪುಸ್ತಕ— ,,	೦—೧೦—೦	೦—೦—೬	೦—೦—೬	೦—೯—೦

ನಡೆಯುವ ವರ್ಷ ಮುಗಿಯುವ ವರೆಗೆ ಸಾಕಾಗುವಷ್ಟು ಮಾಲು ಸಿಲಕು ಅದೆ ಎಂದು ಪ್ರಕಾಶಕರು ತಿಳಿಸಿದ್ದಾರೆ. ಆದ್ದರಿಂದ ಈ ಹೊಸ ಬೆಲೆಯು ೧೯೧೭ನೇ ಇಸವಿಯ ಜಾನೆವಾರಿ ತಿಂಗಳಿನಿಂದ ಅಮಲಿನಲ್ಲಿ ಬರುವದು. ಯುದ್ಧ ಸಮಾಪ್ತಿಯ ನಂತರ ಈ ವ್ಯವಸ್ಥೆಯಲ್ಲಿ ಹೆಚ್ಚು ಕಡಿಮೆ ಯಾದೀತು.

ಗಾವಠೀ ಶಾಲೆಗಳ ಮಾಸ್ತರರು ತಮ್ಮ ಕಡೆಗಿದ್ದ ಶಾಲೆಯು ಯಾವತ್ತೂ ಚಾರ್ಜನ್ನು ರೀತಿಯ ಪ್ರಕಾರ ಇನ್ನೊಬ್ಬರ ಕಡೆಗೆ ಒಪ್ಪಿಸದೆ, ಆ ಶಾಲೆಯನ್ನು ಬಂದು ಮಾಡಿ, ಕೂಡಲೆ ಮತ್ತೊಂದು ಊರಿಗೆ ಹೋಗುತ್ತಿರುವದು ಕೆಳಗೆ ಸಹಿ ಮಾಡಿದವರ ದೃಷ್ಟಿಗೆ ಬಂದಿದೆ. ಹೊಸ ಶಿಕ್ಷಕರು ತಮ್ಮ ಹೆಸರನ್ನು ನಮ್ಮ ಆಫೀಸಿನಲ್ಲಿ ರಜಿಸ್ಟರ ಮಾಡಿಸದೆ, ಮೊದಲಿನವರು ಬಿಟ್ಟು ಹೋದ ಶಾಲೆಯ ಕೆಲಸವನ್ನು ಹಾಗೆಯೇ ಸಾಗಿಸಹತ್ತುತ್ತಾರೆ. ಈ ಕ್ರಮವು, ನಿಯಮಕ್ಕೆ ವಿರುದ್ಧವಾದದ್ದಿರುವದಲ್ಲದೆ, ಆ ಶಾಲೆಯ ಗ್ರ್ಯಾಂಟಿನ ಹಣವು ಯಾರಿಗೆ ಸಲ್ಲತಕ್ಕದ್ದೆಂಬದನ್ನು ಗೊತ್ತು ಮಾಡುವದು ಕಠಿಣವಾಗುತ್ತದೆ. ಆದ್ದರಿಂದ ಯಾವತ್ತೂ ಗಾವಠೀ ಶಾಲಾ ಮಾಸ್ತರರಿಗೆ ತಿಳಿಯಪಡಿಸುವದೇನಂದರೆ—ಯಾವದೊಂದು ಶಾಲೆಯನ್ನು ಬಿಟ್ಟು ಹೋಗುವಾಗ್ಗೆ ಆ ಶಾಲೆಯ ಯಾವತ್ತೂ ಚಾರ್ಜನ್ನು ಯೋಗ್ಯರೀತಿಯಿಂದ ಬೇರೆಯವರಿಗೆ ಕೊಡತಕ್ಕದ್ದು ಹಾಗೆ ಚಾರ್ಜ ತೆಗೆದುಕೊಂಡಂಥವರ ಹೆಸರನ್ನು ರಜಿಸ್ಟರದಲ್ಲಿ ದಾಖಲ ಮಾಡಿಸತಕ್ಕದ್ದು. ಇದಕ್ಕೆ ತಪ್ಪಿದರೆ ಆ ಶಾಲೆಗೆ ಗ್ರ್ಯಾಂಟು ದೊರೆಯಲಿಕ್ಕಿಲ್ಲ.

DHARWAR,
15-2-1917.

(*Sd*) **V. B. Joshi**
Ag: Educational Inspector
S D

"ಆರ್ಥಸಾಧಕ ಪತ್ರಿಕೆ" ಎಂಬ ವಾರ ಪತ್ರಿಕೆಯ ಇದೇ ತಿಂಗಳ ೭ನೇ ತಾರೀಖಿನ ಸಂಚಿಕೆಯು ನಮ್ಮ ಕಡೆಗೆ ಬಂದಿದೆ. ಈ ಪತ್ರಿಕೆಯು ಮೈಸೂರ ಸರಕಾರದವರಿಂದ ಪ್ರತಿವಾರಕ್ಕೆ ಹೊರಡಿಸಲ್ಪಡುತ್ತದು. ಇದರಲ್ಲಿ ಕೈಗಾರಿಕೆ, ಕೃಷಿ ಮೊದಲಾದ ಉದ್ಯೋಗ, ವ್ಯಾಪಾರ, ಹಾಗು ಆರೋಗ್ಯತೆ ಈ ಮೊದಲಾದ ವಿಷಯಗಳ ವಿವೇಚನೆಯಾಗುತ್ತದೆ. ಅದರಲ್ಲಿರುವ ಮಾಹಿತಿಯು ಮೈಸೂರ ಸೀಮೆಗೆ ಸಂಬಂಧಪಟ್ಟದ್ದಾದರೂ ಕರ್ನಾಟಕದ ಬೇರೆ ಸೀಮೆಯವರಿಗೂ ಉಪಯುಕ್ತವಾದದ್ದಿರುವದು. ಇಂಥ ವಿಶ್ವಸನೀಯವಾದ ಮಾಹಿತಿಯ ಪತ್ರವನ್ನು ಯಾವತ್ತೂ ಕೈಗಾರಿಕೆಯ ಉದ್ಯೋಗದವರೂ, ರೈತರೂ, ವ್ಯಾಪಾರಸ್ಥರೂ ಓದಬೇಕೆಂದು ನಮ್ಮ ಸೂಚನೆಯದೆ. ಅದರೊಳಗಿನ ವಿಷಯಗಳನ್ನು ಓದುವದರಿಂದ ಉದ್ಯೋಗ ಸಂಬಂಧದ ನಿಜವಾದ ಜ್ಞಾನವಾಗುವದಲ್ಲದೆ, ವಾಚಕರಿಗೆ ಆಯಾ ವಿಷಯದ ಶಾಸ್ತ್ರೀಯ ಶಿಕ್ಷಣವು ಸಹ ದೊರೆಯುವದು.

ಸಿದ್ಧನಾಥ ವಾಚನ ಮಂದಿರ.
ಶಾಲಾ ಪುಸ್ತಕ ಜಿ ಧಾರವಾಡ.

ಯುದ್ಧದ ಸಂಬಂಧದ ಸಾಲವು.

ಸದ್ಯದ ಮಹಾಯುದ್ಧದ ಸಲುವಾಗಿ ನಮ್ಮ ಸರಕಾರದವರು ಯಾವ ಪ್ರಕಾರದ ತೊಂದರೆಗೊಳಗಾಗಿರುವರೆಂಬದು ಎಲ್ಲರಿಗೂ ವಿದಿತವಾದದ್ದೇ ಇದೆ. ಸಾಮ್ರಾಜ್ಯ ಸರಕಾರಕ್ಕೊಳಪಟ್ಟ ಯಾವತ್ತೂ ಪ್ರಜೆಗಳು, ಈಗ ನಡೆದಿರುವ ಅರ್ಥಹಾನಿ, ಪ್ರಾಣಹಾನಿಗಳನ್ನು ನೋಡಿ ಸುಮ್ಮನೆ ಕೂಡ್ರುವದು ಎಷ್ಟು ಮಾತ್ರವೂ ಸರಿಯಲ್ಲ. ನಮ್ಮ ಸರಕಾರದವರ ವಿಜಯ ಪ್ರಾಪ್ತಿಗಾಗಿ ಪ್ರತಿಯೊಬ್ಬನು ತನುಮನಧನಗಳನ್ನರ್ಪಿಸಲಿಕ್ಕೆ ಸಿದ್ಧನಾಗಿ ಇರಲಿಕ್ಕೆ ಬೇಕು. ಸಭೆಸೇರಿಸಿ ಬರೇ ನಾಲ್ಕು ಮಾತಗಳನ್ನಾಡಿ ಹೋಗು ವ ದಿವಸಗಳು ಹಿಂದಾದವು. ಈಗ ಪ್ರತಿಯೊಬ್ಬ ಹಿಂದುವಾಸಿಯ ಪರೀ ಕ್ಷೆಯಾಗುವ ವೇಳೆ ಬಂದಿದೆ. ನಮ್ಮಲ್ಲಿರುವ ನಿಜವಾದ ರಾಜಭಕ್ತಿಯ ಪರೀಕ್ಷೆಗಾಗಿಯೇ ಸರಕಾರದವರು ಹೆಚ್ಚಿ ಬಡ್ಡಿಯ ಸಾಲದಿಂದ ಸಾಲತೆಗೆ ಯುವವರಿದ್ದಾರೆ. ದಿನಾಲು ಹತ್ತೆಂಟು ಕೋಟಿ ರೂಪಾಯಿಗಳು ಸಾಲದೆ ಹೋಗುವಷ್ಟು ಖರ್ಚು ನಡೆದಿರಲು ನಾವು ಕೊಟ್ಟ ಸಾಲವು ಎಷ್ಟು ವಸದ್ದಾದೀತು. ಆದ್ದರಿಂದ ದಯಾಳು ಸರಕಾರದವರು ಅನಾಯಾ ವಾಗಿ ಒದಗಿಸಿಕೊಟ್ಟ ಈ ಲಾಭದಾಯಕ ಸಂಧಿಯನ್ನು ಕಳೆದು ಕೊಳ್ಳಬಾರದೆಂದು ನಮ್ಮ ಶಾಲಾಮಾಸ್ತರರಿಗೆ ನಾವು ಆಗ್ರಹದಿಂದ ಸೂ ಚನೆಮಾಡುತ್ತೇವೆ.

ಹಿಂದಕ್ಕೆ ಕೂರತನವನ್ನು ತೋರಿಸಿದ ಮನೆತನಗಳು ನವ್ಯಲ್ಲಿ ಎ
ಷ್ಟೋ ಇದ್ದು, ನವುಗೂ ಸೈನ್ಯದಲ್ಲಿ ಸೇರಲಿಕ್ಕೆ ಅಪ್ಪಣೆಯನ್ನು ಕೊಡಿರೆಂ
ದು ನವ್ಮಲ್ಲಿಯ ಮುಖಂಡರು ಇದುವರೆಗೆ ಸರಕಾರದವರಿಗೆ ವಿನಂತಿ
ಮಾಡಿಕೊಳ್ಳುತ್ತ ಬಂದಿದ್ದರು. ಸರಕಾರದವರು ದಯವಿಟ್ಟು ಈಗ ನ
ವ್ಮ ಜನರೂ ಸೈನ್ಯದಲ್ಲಿ ಸೇರಬಹುದೆಂದು ಠರಾವು ಮಾಡಿರುವರು. ಇಂಥ
ಸಂಧಿಯು ಇನ್ನು ಮುಂದೆ ಬರಲಿಕ್ಕಿಲ್ಲ. ಆದ್ದರಿಂದ ಶಾಲಾಮಾಸ್ತರರು
ತಾವು ಇದ್ದಲ್ಲಿ ಜನರಿಗೆ ಉಪದೇಶಮಾಡಿ ಸ್ವಯಂ ಸೈನಿಕರನ್ನು ಒದಗಿಸಿ
ಕೊಡುವ ಬಗ್ಗೆ ಪ್ರಯತ್ನಮಾಡುವರೆಂತಲೂ, ತಾವಾದರೂ ಈ ವೇಳೆಯ
ನ್ನು ವ್ಯರ್ಥಹೋಗಗೊಡಲಿಕ್ಕಿಲ್ಲೆಂತಲೂ ಆಶಿಸುತ್ತೇವೆ.

ಬಹಳ ದಿವಸ ಕೆಲಸಮಾಡಿದ ಅನುಭವಿಕ ಅಂಟ್ರೇಂಡ ಶಿಕ್ಷಕರ
ಶಿಕ್ಷಣಕ್ಕೂ ನೂತನ ಟ್ರೇಂಡ ಜನರ ಶಾಸ್ತ್ರೀಯ ದೃಷ್ಟಿಯಿಂದ ಕೊಡಲ್ಪ
ಡುವ ಶಿಕ್ಷಣಕ್ಕೂ ಹೆಚ್ಚು ಕಡಿವೆಯುಂಟು. ಇಂಥ ಸಂಗತಿಗಳ ವಿಚಾ
ರವು ಮೇಲಿಂದ ಮೇಲೆ ಆಗುತ್ತಿದ್ದರೆ ಜಿಜ್ಞಾಸುಗಳಾದ ಶಿಕ್ಷಕರಿಗೆ ಉಪ
ಯೋಗವಾದೀತೆಂದು ತಿಳಿದು, ಅವೆರಡು ತರದ ಶಿಕ್ಷಕರ ಕೆಲಸದ ವಿ
ಷಯವನ್ನು ತೋರಿಸುವ ತುಲನಾದರ್ಶಕ ಪಟ್ಟಿಯನ್ನು ಕೆಳಗೆ ಕೊಡ
ುತ್ತೇವೆ. ನೂತನ ಟ್ರೇಂಡರು ಅದನ್ನು ಓದಿ ಮನನೆ ಮಾಡಬೇಕೆಂದು ನವ
ಅಭಿಪ್ರಾಯವಿದೆ.

ಅನುಭವಿಕ ಅಂಟ್ರೇಂಡ ಶಿಕ್ಷಕನ ಕೆಲಸ.	ಶಾಸ್ತ್ರಾಧ್ಯಯನ ಮಾಡಿದ ನೂತನ ಟ್ರೇಂಡ ಶಿಕ್ಷಕನ ಕೆಲಸ.
೧. ಪರಿಣಾಮದ ಕಡೆಗೆ ಮಾತ್ರ ಲಕ್ಷವಿರುವದರಿಂದ ಕಲಿಸತಕ್ಕ ಸಂಗತಿಯನ್ನು ಆಯಾಸವಿಲ್ಲದೆ ಕಲಿಸುವನು.	೧. ಪದ್ಧತಿಯ ಕಡೆಗೆ ಲಕ್ಷವಿರುವದರಿಂದ ವಿಷಯವು ಮಂದವಾಗಿ ಸಾಗುವದು.

೨. ಪಾಲಕರಿಗೂ ತಪಾಸಣೆಯ ಅಮಲದಾರರಿಗೂ ತೃಪ್ತಿಕರವೆನಿಸುವದು.	೨. ಪಾಲಕ ಮತ್ತು ತಪಾಸಣೆಯ ಅಮಲದಾರರ ಲಕ್ಷದಲ್ಲಿ ಬರುವದಿಲ್ಲಾದ್ದರಿಂದ ಅಷ್ಟುತೃಪ್ತಿಕರವಾಗುವದಿಲ್ಲ.
೩. ಮಾನಸಿಕ ಶಕ್ತಿಯು ಬೆಳವಣಿಗೆಯು ಆಗುವದಿಲ್ಲ.	೩. ಮಾನಸಿಕ ಶಕ್ತಿಯು ಬೆಳವಣಿಗೆಯು ಆಗುತ್ತದೆ. ಅನುಭವವು ಕಡಿಮೆ ಇದ್ದದರಿಂದ ಮೊದಮೊದಲು ಕೆಲವು ತಪ್ಪು ತಡಿಗಳಾಗಬಹದು.
೪. ಶಿಕ್ಷಣವು ವ್ಯವಹಾರಕ್ಕೆ ಉಪಯುಕ್ತವಾದುದಲ್ಲ.	೪. ಶಿಕ್ಷಣವು ವ್ಯವಹಾರಕ್ಕೆ ಉಪಯುಕ್ತವಾದದ್ದು.
೫. ವಿದ್ಯಾರ್ಥಿಗೆ ಸ್ವತಃ ಉಲ್ಲಾಸವುಂಟಾಗುವಿಲ್ಲ.	೫. ವಿಷಯ ತಿಳಿಯುವದರಿಂದ ವಿದ್ಯಾರ್ಥಿಗೆ ಸ್ವತಃ ಆನಂದವಾಗುತ್ತ ಹೋಗುತ್ತದೆ.
೬. ಉತ್ಸಾಹವು ಇಲ್ಲದ್ದರಿಂದಲೂ ಮಾರ್ಗವು ಗೊತ್ತಿಲ್ಲದ್ದರಿಂದಲೂ ಸ್ವಂತ ಶಿಕ್ಷಣ ಬೆಳಿಸುವದಕ್ಕೆ ವಿದ್ಯಾರ್ಥಿಗೆ ಆಗುವದಿಲ್ಲ.	೬. ಉತ್ಸಾಹವು ಇರುವದರಿಂದಲೂ ಮಾರ್ಗವು ಗೊತ್ತಿರುವದರಿಂದಲೂ ಸ್ವಂತ ಶಿಕ್ಷಣವನ್ನು ಬೆಳಿಸಿಕೊಳ್ಳಲಿಕ್ಕೆ ಆಗುತ್ತದೆ.
೭. ಪರೀಕ್ಷೆಯ ಜವಾಬುದಾರಿಯು ಹೋಯಿತು ಎಂಬ ಆನಂದವೇ ಹೊರತು ಶಿಕ್ಷಕನಿಗೆ ನಿಜವಾದ ಆನಂದವಿಲ್ಲ.	೭. ಶಿಕ್ಷಕನಿಗೆ ತನ್ನ ಅನುಭವದಂತೆ ದೋಷಗಳು ತಿದ್ದುತ್ತ ನಡೆದು ಆನಂದವು ಹೆಚ್ಚುತ್ತ ನಡೆಯುವದು.
೮. ಶಿಕ್ಷಕನಿಗೆ ಸುಧಾರಣೆಯ ಮಾರ್ಗವು ತೋರುವದಿಲ್ಲ. ಇಚ್ಛೆಯೂ ಉತ್ಪನ್ನವಾಗುವದಿಲ್ಲ.	೮. ಶಿಕ್ಷಣದ ಕೆಲಸದಲ್ಲಿ ಹೆಚ್ಚಿನ ಸುಧಾರಣೆಯದ್ದು ಮಾಡಲಿಕ್ಕೆ ಶಿಕ್ಷಕನಿಗೆ ಇಚ್ಛೆಯು ಉತ್ಪನ್ನವಾಗುತ್ತದೆ ಮಾರ್ಗವೂ ತೋರುತ್ತದೆ.

೯. ಕೆಲವು ಕಾಲದನಂತರ ಶಿಕ್ಷಣದ ಗತಿಯು ಕುಂಠಿತವಾಗುತ್ತದೆ. ಪದ್ಧತಿಯು ಒಂದು ಸಾರಣೆಯಂತೆ ಆಗುತ್ತದೆ.	೯. ವೈಚಿತ್ರ್ಯ ವಿರುವದರಿಂದ ತಪ್ಪುಗಳು ತಿದ್ದುತ್ತ ನಡೆದು, ವಿದ್ಯಾರ್ಥಿಗಳೂ ಪಾಲಕರೂ, ಪರೀಕ್ಷೆಯ ಅಧಿಕಾರಿಗಳೂ ಕಡೆಗೆ ಆನಂದಭರಿತರಾಗುವರು.

ಚಿಕ್ಕಮಕ್ಕಳ ಶಿಕ್ಷಣದ ವಿಷಯದಲ್ಲಿ ಅವಶ್ಯವಾಗಿ ಲಕ್ಷದಲ್ಲಿಡತಕ್ಕ ಕೆಲವು ಸಂಗತಿಗಳು.

ಚಿಕ್ಕಬಾಲಕರ ಮಾನಸಿಕ ಮತ್ತು ಶಾರೀರಿಕ ಶಕ್ತಿಗಳು ಬಲವಾಗಿ ಇರುವದಿಲ್ಲ. ಕಲ್ಪನಾ ಮತ್ತು ಅನುಮಾನ ಮಾಡುವ ಶಕ್ತಿಗಳು ಇದ್ದರೂ ಮುಂದವಾಗಿ ಸಾಗುತ್ತವೆ ನಿರೀಕ್ಷಣ ಶಕ್ತಿಯು ಮಾತ್ರ ಒಳ್ಳೇ ಪ್ರಬಲವಾಗಿರುತ್ತದೆ. ಹೀಗೆ ಸ್ವಾಭಾವಿಕವಾಗಿರುವ ಬಾಲಕರ ಶಾರೀರಿಕ ಮಾನಸಿಕ ಮುಂತಾದ ಶಕ್ತಿಗಳನ್ನು ಕಂಡುಹಿಡಿದು, ಆಯಾ ಶಕ್ತಿಗಳ ಬೆಳುವಣಿಗೆಗನುಕೂಲವಾಗುವಂತೆ ಶಿಕ್ಷಣ ಸಾಗಿಸುವದು ಹಿತಕರವು. ಶಿಕ್ಷಕರು ಹೀಗೆಂತೆ ಚಿಕ್ಕಬಾಲಕನನ್ನು ಎಣಿಸಿ, ಅವದಲ್ಲಿರುವ ಶಾರೀರಿಕ ಚಟುವಟಿಕೆ, ನಿರೀಕ್ಷಣ ಶಕ್ತಿಗಳನ್ನು ಕುಗ್ಗಿಸಿ, ಕಲ್ಪನಾ ಅನುಮಾನ ಮುಂತಾದ ಶಕ್ತಿಗಳನ್ನು ಹೆಚ್ಚು ಒತ್ತರದಿಂದ ಸಾಗಿಸಲಿಕ್ಕೆ ಯತ್ನಿಸುತ್ತಾರೆ. ಇದು ಚಿಕ್ಕಮಕ್ಕಳ ಸ್ವಾಭಾವಿಕ ಬೆಳವಣಿಗೆಗೆ ವಿರೋಧವಾದದ್ದು. ಈ ವಯಸ್ಸಿನಲ್ಲಿ ಮಕ್ಕಳ ಶಾರೀರಿಕ ಶಿಕ್ಷಣದ ವಿಷಯವಾಗಿ ಎಷ್ಟು ಲಕ್ಷ ಕೊಟ್ಟರೂ ಕಡಿಮೆಯೇ. ಚಿಕ್ಕ ವಯಸ್ಸಿನಲ್ಲಿ ಬಾಲಕರ ಅವಯವಗಳು ಒಳ್ಳೇ ಬೆಳೆಗೆಯ ಸ್ಥಿತಿಯಲ್ಲಿರುತ್ತವೆ ಬರದಿಂದ ಬೆಳೆಯುವ ವೃಕ್ಷಕ್ಕೆ ಯಾವದೊಂದು ಕಾರಣವು ಅಡ್ಡಿಯಾದರೆ, ಅದರ ಲತಾಪಲ್ಲವಗಳು ಬಿದಂತಾಗಿ ವೃಕ್ಷವು ಅಸಹ್ಯವಾಗಿ ತೋರುವದು ಅದರಂತೆ ಚಿಕ್ಕಮಕ್ಕಳ ಸ್ವಾಭಾವಿಕ ಬೆಳುವಣಿಗೆಗೆ ಸಂಪೂರ್ಣ ಅವಕಾಶ ಕೊಡದೆ ಶಿಕ್ಷಕನು ತನ್ನ ಶಿಕ್ಷಣವನ್ನು ಸಾಗಿಸಿದರೆ ಮಕ್ಕಳ ಬೆಳೆಗೆಯು ಕುಗ್ಗಿ ಶರೀರವು ಅಸಹ್ಯವಾಗಿ ತೋರುವದು. "ಶರೀರಮಾದ್ಯಂಖಲು ಧರ್ಮ ಸಾಧನಂ" (A sound mind in a sound body) ಎಂಬ ಗಾದೆಯಂತೆ ಶಿಕ್ಷಕನು ತನ್ನ ಶಿ

ಣದ ಸಲುವಾಗಿ ಚಿಕ್ಕಮಕ್ಕಳ ಬೆಳುವಣಿಗೆಯನ್ನು ಕುಗ್ಗಿಸಬಾರದು ಸದ್ಯಕ್ಕೆ ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ಇದೇ ದೋಷವು ಕಂಡು ಬರುತ್ತದೆ. ಚಿಕ್ಕಮಕ್ಕಳ ಶಾರೀರಿಕ ಶಿಕ್ಷಣದ ಬಗ್ಗೆ ಲಕ್ಷ್ಯ ಕೊಡುವ ಶಿಕ್ಷಕರು ಇಲ್ಲೇ ಇಲ್ಲವೆಂದು ಹೇಳಿದರೂ ತಪ್ಪಾಗಲಿಕ್ಕಿಲ್ಲ. ಬಾಲಕನನ್ನು ಸ್ವೇಚ್ಛೆಯಾಗಿ ಬಿಟ್ಟು ಬಿಟ್ಟು ಅವನ ಬೆನ್ನುಹತ್ತಿ ನಾವು ಹೋದರೆ ಅವನು ಸ್ವಲ್ಪವೇಳೆ ಅಡಬಹುದು, ಓಡಾಡಬಹುದು, ಅನಂತರ ಹಸಿವೆಯಾಗಿದೆ ಎಂದು ತಾಯಿಯ ಬಳಿಗೆ ಓಡಿ ಹೋಗಬಹುದು, ಆಮೇಲೆ ಯಾವದೊಂದು ಹೊಸ ವಸ್ತುವನ್ನು ನೋಡಿದ ಕೂಡಲೆ ಇವೇನು? ಹೀಗೆ ಯಾಕೆ ಇದೆ? ಇದು ಎಲ್ಲಿ ಇತ್ತು? ನಾನು ತೆಗೆದುಕೊಳ್ಳಲಿಯಾ? ಎಂದು ಹಲವು ಪ್ರಶ್ನಗಳನ್ನು ಕೇಳಬಹುದು. ಹೀಗೆ ಸಂಪೂರ್ಣವಾಗಿ ಅವನನ್ನು ಸ್ವತಂತ್ರ ರೀತಿಯಿಂದ ಬಿಟ್ಟು ಬಿಟ್ಟು ಅದರಲ್ಲಿಯೇ ನಮ್ಮ ಕಾರ್ಯವನ್ನು ಸಾಧಿಸಿಕೊಳ್ಳಲಿಕ್ಕೆ ಬರುತ್ತದೋ ಹ್ಯಾಗೋ ಎಂಬ ಬಗ್ಗೆ ಶಿಕ್ಷಕನು ಮಾರ್ಗವನ್ನು ಹುಡುಕಿತೆಗೆಯಬೇಕು. ಅನಸಿಗೆ ಆಡುವ ಮನಸಾದಕೂಡಲೆ ವ್ಯವಸ್ಥಿತವಾದ ಆಟವನ್ನೇ ಪ್ರಾರಂಭಿಸಬೇಕು. ನೋಡುವ ಮನಸಾದ ಕೂಡಲೆ ತರತರದ ವಸ್ತುಗಳನ್ನು ನೋಡಲಿಕ್ಕೆ ಹಚ್ಚಬೇಕು. ಹೀಗೆ ಮಾಡದೆ ನಾವು ದಿನಾಲು ಶಾಲೆಗಳಲ್ಲಿ ನಮಗೆ ಅನುಕೂಲವಾಗುವಂಥ ವೇಳಾಪತ್ರಿಕೆಗಳನ್ನೂ ಕಲಿಸತಕ್ಕ ಪಾಠಗಳನ್ನೂ ಗೊತ್ತುಮಾಡಿಕೊಂಡು, ಚಿಕ್ಕಮಕ್ಕಳ ಬಂಗಾರದಂಥ ಶರೀರವನ್ನೂ ಅವರ ಮನಸ್ಸಿನ ಉತ್ಸಾಹವನ್ನೂ ಹಾಳುಮಾಡಿಬಿಡುತ್ತೇವೆ. ಈ ಶಾರೀರಿಕ ಶಕ್ತಿಯ ಬೆಳುವಣಿಗೆಯನ್ನೇ ಮೊದಲಿನ ದಾಗಿಟ್ಟುಕೊಂಡು ಶಿಕ್ಷಣವನ್ನು ಸಾಗಿಸಬೇಕು. ಅಂದರೆ ಚಿಕ್ಕ ಮಕ್ಕಳಿಗೆ ಕಲಿಸತಕ್ಕ ಪಾಠಗಳಲ್ಲಿ ಶಾರೀರಿಕ ಶಿಕ್ಷಣದ ಪಾಠಗಳು ಹೆಚ್ಚಾಗುವಂತೆ ಮಾಡಬೇಕು. ಆಟ, ನೋಟ ಮುಂತಾದವುಗಳಿಂದ ಶರೀರದ ಬೆಳುವಣಿಗೆಗೆ ಅನುಕೂಲವಾಗುವಂತೆ ಮಾಡಬೇಕು. ಪೌಷ್ಟಿಕ ಆಹಾರ ಕೊಡುವ ಬಗ್ಗೆ ಪಾಲಕರಿಗೆ ಉಪದೇಶ ಮಾಡಬೇಕು. ಸ್ವಚ್ಛತೆ, ಆರೋಗ್ಯತೆಗಳು ಚಿಕ್ಕಮಕ್ಕಳಿಗೆ ಒದಗುವಂತೆ ಕೃತಿಯಿಂದ ಮಾಡಿ ತೋರಿಸಬೇಕು. ಅದು ಹ್ಯಾಗಂದರೆ:—ಹೊಲಸಾದ ಅರಿವೆಯನ್ನು ತೆಗಿಸಿ, ಸ್ವಚ್ಛವಿದ್ದ ಅರಿವೆಯನ್ನು ಹಾಕಿ ತೋರಿಸುವದು; ಅದಕ್ಕೆ ಸಬಕಾರಹಚ್ಚಿ ಅಲ್ಲಿಯೇ ಸ್ವಚ್ಛಮಾಡಿ ತೋರಿಸುವದು; ಹೊಲಗುಡದ ಪೋರಿಯವನಿಗೆ ಸಬಕಾರಹಚ್ಚಿ ತೊಳೆದುಕೊಳ್ಳಲಿಕ್ಕೆ ಹೇಳಿ

ಕನ್ನಡಿಯನ್ನು ನೋಡಿಕೊಳ್ಳಲಿಕ್ಕೆ ಹಚ್ಚುವದು; ಇವೇ ಮುಂತಾದ ಕೃತಿಗಳಿಂದ ಸ್ವಚ್ಛತೆಯಿಂದ ಇರುವ ಚಟವನ್ನು ಬಾಲಕರಲ್ಲಿ ನೆಲೆಗೊಳಿಸಲಿಕ್ಕೆ ಯತ್ನಮಾಡಬೇಕು. ಅವರು ಇರುವ ಕೋಣೆಯ ಒಳಗೂ ಹೊರಗೂ ಸ್ವಚ್ಛವಾಗಿ ಬೆಳಕು ಹವೆಗಳು ಬರುವಂತೆ ಮಾಡಬೆಕು. ವೇಳಾಪತ್ರಿಕೆಯಲ್ಲಿ ಬರೆದಂತೆ ಯಾವದೊಂದು ಸಂಗತಿಯಬಗ್ಗೆ ಉದ್ದಕ್ಕೆ ಹೇಳಿಬಿಡುವದು ಪಾಠವೆನಿಸುವದಿಲ್ಲ. ಮೇಲೆ ಹೇಳಿದಂತೆ ಶಿಕ್ಷಕನು ಚಿಕ್ಕ ಬಾಲಕರೊಳಗೆ ಕೂಡಿ ಅವರ ಒಲವುಗಳಂತೆ ಅವರನ್ನು ಇಚ್ಛಿತವಾಗದ ಕಡೆಗೆ ಬಯ್ಯುವದೇ ಪಾಠವು. ಚಿಕ್ಕಬಾಲಕರ ಶಾರೀರಿಕ ಶಿಕ್ಷಣದ ಕಡೆಗೇ ದೃಷ್ಟಿಯಿಟ್ಟು ಅವರನ್ನು ಅಡಿಸುವದು, ಓಡಾಡಿಸುವದು, ತಿನ್ನಿಸುವದು, ಅವರ ಕೂಡ ಶಿಕ್ಷಕನೂ ಇವೆಲ್ಲ ಕೃತಿಗಳನ್ನು ಮಾಡುವದು ಇವೆಲ್ಲವುಗಳಿಗೆ ನಾವು ಪಾಠಗಳೇ ಎಂದೆನ್ನುವೆವು. ಈ ಪ್ರಕಾರ ಪಾಠದ ವ್ಯಾಪಕವಾದ ವ್ಯಾಖ್ಯೆಯನ್ನು ಲಕ್ಷದಲ್ಲಿ ತಂದು ಶಿಕ್ಷಕರು ಚಿಕ್ಕ ಮಕ್ಕಳ ಶಿಕ್ಷಣವನ್ನು ಸಾಗಿಸಬೇಕು.

ಶಾರೀರಿಕ ಶಿಕ್ಷಣದ ನಡುವೆ ಆಗಾಗ್ಗೆ ಮಾನಸಿಕ ಶಿಕ್ಷಣದ ಪಾಠಗಳಿರಬೇಕು. ಅಂದರೆ ಶಾರೀರಿಕ ಶಿಕ್ಷಣದ ಪಾಠಗಳಿಗಿಂತ ಈ ಪಾಠಗಳು ಕಡಿಮೆ ಇರಬೇಕು. ಮಾನಸಿಕ ಶಿಕ್ಷಣದ ಪಾಠಗಳಲ್ಲಿ ನಿರೀಕ್ಷಣ, ಕೈಕೆಲಸಗಳು, ಕಲ್ಪನಾ ಅನುಮಾನ ಮಾಡುವ ಪಾಠಗಳು ಬರುವವು. ಅನುಮಾನ ಮಾಡುವ ಪಾಠಗಳೆಂದರೆ ಗಣಿತ, ವಾಚನ ಮುಂತಾದವುಗಳು. ಇಂಥ ಪಾಠಗಳನ್ನು ನಿದಾನವಾಗಿ ಸಾಗಿಸಬೇಕು.

ಈ ಪ್ರಕಾರ ಶಿಕ್ಷಣವನ್ನು ಸಾಗಿಸಬೇಕಾದರೆ ಶಿಕ್ಷಕನಲ್ಲಿ ಸಹಾನುಭೂತಿ ಎಂಬ ಗುಣವು ಅವಶ್ಯವಾಗಿ ಬೇಕಾಗುತ್ತದೆ. ಪ್ರೀತಿಯಿಂದ ಬಾಲಕನೆನ್ನು ಒಲಿಸಿಕೊಳ್ಳುವದು ಹೆಚ್ಚು ಲಾಭಕರವು. ಯಾಕಂದರೆ ವಿಚಾರದಿಂದ ಅವರನ್ನು ಒಲಿಸಿಕೊಳ್ಳುವದು ಸಾಧ್ಯವಲ್ಲ. ಪ್ರೀತಿಯಿಂದ ನಡಿಸಿಕೊಳ್ಳುವವರಿಗೆ ಚಿಕ್ಕಮಕ್ಕಳು ಸಲಿಗೆಯಿಂದ ಎಷ್ಟೋ ಪ್ರಶ್ನಗಳನ್ನು ಕೇಳುತ್ತಾರೆ. ಅವರು ಕೇಳುವ ಪ್ರಶ್ನಗಳಿಗೆ ಬೇಸತ್ತು 'ಸುಮ್ಮನೇ ಕೂಡ್ರು' ಎಂದು ಗದರಿಸುವ ಶಿಕ್ಷಕರಿಂದಲೂ ಬಾಲಕರಿಂದಲೂ ಅವರ ಕುತೂಹಲವು ಕುಂಠಿತವಾಗುವದು. ಅವರಲ್ಲಿ ಸ್ವಾಭಾವಿಕವಾಗಿರುವ

ಕೋಮಲ ಮತ್ತು ಚಂಚಲ ಮನಸ್ಸು, ನಿರೀಕ್ಷಣಶಕ್ತಿ, ಪ್ರಬಲವಾದ ಅನುಕರಣ, ಪ್ರೀತಿಯಿಂದ ನಡಿಸಿಕೊಂಡರೆ ಉತ್ತಮ ಕೆಲಸವಮಾಡುವ ಗುಣ ಮುಂತಾದವುಗಳಿಗನುಸರಿಸಿ ಶಿಕ್ಷಣವನ್ನು ಹ್ಯಾಗೆ ಸಾಗಿಸಬಹುದೆಂಬ ಬಗ್ಗೆ ಇಲ್ಲಿ ನಾಲ್ಕು ಮಾತುಗಳನ್ನು ಹೇಳುವೆವು

೧ ಬಾಲಕರ ಮನಸ್ಸು ಚಂಚಲವಿರುವದರಿಂದ ಒಂದೇ ಸವನೆ ಕೆಲವೊಂದು ಸಂಗತ್ತಿಯ ಕಡೆಗೆ ಲಕ್ಷ ಕೊಡುವದು ಅವರಿಂದಾಗುವದಿಲ್ಲ. "ನಾವು ಕಲಿಸುವ ಪಾಠದ ಕಡೆಗೇ ಬಾಲಕರ ಲಕ್ಷವಿರಬೇಕು" ಎಂದು ಶಿಕ್ಷಕರ ಅಪೇಕ್ಷೆ ಇರುತ್ತದೆ. ಪರಂತು ಅವರು ಲಕ್ಷಕೊಡದಿರುವ ನಿಜವಾದ ಕಾರಣಗಳ ಬಗ್ಗೆ ಶಿಕ್ಷಕರು ವಿಚಾರ ಮಾಡಿರುವದಿಲ್ಲ. ಪಾಠವು ಪ್ರಯೋಜನಕರವೆನಿಸದಿರುವದರಿಂದ ಅವರಲ್ಲಿ ಆಸಕ್ತಿ ಹುಟ್ಟಲಿಕ್ಕಿಲ್ಲ. ಒಂದೇ ಸವನೆ ಬಹಳ ವೇಳೆಯ ವರೆಗೆ ಅದೇ ಪಾಠವು ನಡೆದಿರಬಹುದು. ಹೀಗಿದ್ದರೆ ಹುಡುಗರ ಮನಸ್ಸು ಬೇರೆ ಕಡೆಗೆ ಹೋಗುವದು ಸ್ವಾಭಾವಿಕವು. ಇಷ್ಟಕ್ಕೇ ಮಾಸ್ತರನು ಸಿಟ್ಟಿಗೆದ್ದು ವಿದ್ಯಾರ್ಥಿಗಳನ್ನು ಶಿಕ್ಷಿಸುವದು ಇಲ್ಲವೆ ತಾನು ಅಸಮಾಧಾನಪಡುವದು ಸರಿಯಲ್ಲ, ಬಾಲಕರ ಮನಸ್ಸು ಕೋಮಲವಿರುವದರಿಂದ ಕಠಿಣ ವಿಚಾರವುಳ್ಳ ಸಂಗತಿಗಳೂ ಹೆಚ್ಚು ವೇಳೆ ನಡೆಯುವ ಪಾಠಗಳೂ ಅವರಿಗೆ ರುಚಿಸುವದಿಲ್ಲ. ಶಿಕ್ಷಕರ ಭಯಕ್ಕಾಗಿ ಹೆಚ್ಚು ವೇಳೆ ಕುಳಿತುಕೊಳ್ಳಬಹುದು. ಈ ಪ್ರಕಾರ ಬೇಕಾದಷ್ಟು ವೇಳೆಯ ವರೆಗೆ ಕಲಿಸಿದರೂ ವ್ಯರ್ಥ. ಯಾವದೊಂದು ಸಂಗತಿಯ ಕಡೆಗೆ ನಿಯಮಿತ ವೇಳೆಗಿಂತ ಹೆಚ್ಚು ವೇಳೆಯ ವರೆಗೆ ಬಾಲಕರ ಲಕ್ಷವಿರುವದಿಲ್ಲ. ಕೂಡಲೆ ಮತ್ತೊಂದು ಸಂಗತಿಯ ಕಡೆಗೆ ಅವರ ಲಕ್ಷವು ಹೋಗುವದು. ದೊಡ್ಡವರಂತೆ ಬಹಳ ವೇಳೆಯ ವರೆಗೆ ಹಸಿವೆ ನೀರಡಿಕೆಗಳನ್ನು ತಡೆಯುವದೂ ಅವರಿಂದಾಗುವದಿಲ್ಲ. ಒಂದೇ ಸ್ಥಳದಲ್ಲಿ ಹೆಚ್ಚು ವೇಳೆ ಕೂಡ್ರಲಿಕ್ಕೂ ಆಗುವದಿಲ್ಲ. ಇವೆಲ್ಲ ಸಂಗತಿಗಳನ್ನು ಲಕ್ಷದಲ್ಲಿ ತಂದು ಚಿಕ್ಕ ಮಕ್ಕಳ ಬಗ್ಗೆ ಪಾಠಗಳ ಕ್ರಮವನ್ನು ಗೊತ್ತು ಮಾಡಬೇಕು. ಹ್ಯಾಗಂದರೆ:—

೧. ಶಾಲೆಯನ್ನು ಬಹಳ ವೇಳೆಯವರೆಗೆ ಹಾಕಬಾರದು,

೨. ಶಾರೀರಿಕ ಶಿಕ್ಷಣದ ಪಾಠಗಳು ಉಳಿದವುಗಳಿಗಿಂತ ಹೆಚ್ಚಿಗಿರಬೇಕು,

೩. ಶಾರೀರಿಕ ಶಿಕ್ಷಣದ ಪಾಠಗಳನಂತರ ಮಾನಸಿಕ ಶಿಕ್ಷಣದ ಪಾಠಗಳಿರಬೇಕು.

೪. ಪ್ರತಿಯೊಂದು ಪಾಠದನಂತರ ವಿಶ್ರಾಂತಿ ಇರಬೇಕು.

೫. ೧೫ ನಿ. ಗಳಿಗಿಂತ ಹೆಚ್ಚು ವೇಳೆ ಯಾವ ಪಾಠವೂ ಇರಕೂಡದು.

೬. ಒಂದೇ ವಿಷಯದ ಪಾಠವು ಬಹಳ ವೇಳೆಯವರೆಗೆ ನಡೆಯುಬಾರದು

೭. ಒಂದೇ ವಿಷಯವನ್ನು ಅನೇಕ ತರದಿಂದ ಕಲಿಸಬೇಕು.

೧. ಬಾಲಕರಲ್ಲಿ ವಿಚಾರ ಮಾಡುವ ಶಕ್ತಿಗಿಂತ ನಿರೀಕ್ಷಣ ಶಕ್ತಿಯು ಬಲವತ್ತರವಾಗಿರುತ್ತದೆಂದು ಹಿಂದೆ ಹೇಳಿಯಾದೆ. ಅಪರಿಚಿತ ವಸ್ತುವನ್ನು ಕಂಡ ಕೂಡಲೆ ಅದರ ಬಗ್ಗೆ ನಾಲ್ಕು ಮಾತುಗಳನ್ನು ಕೇಳದೆ ಎಂದೂ ಇರುವದಿಲ್ಲ. ಈ ಪ್ರಕಾರ ಸ್ವಾಭಾವಿಕವಾಗಿ ಇರುವ ಅವರ ಜಿಜ್ಞಾಸೆಯನ್ನು ಶಿಕ್ಷಣ ಕಾರ್ಯದಲ್ಲಿ ಉಪಯೋಗ ಮಾಡಿಕೊಳ್ಳಲಿಕ್ಕೆ ಶಿಕ್ಷಕನಿಗೆ ಹೇಳಕೂಡದಷ್ಟು ಪ್ರಸಂಗಗಳು ಬರುವವು. ಆದ್ದರಿಂದ ತರತರದ ವಸ್ತುಗಳನ್ನು ಉಪಯೋಗಿಸಿ ಅವುಗಳ ಸಹಾಯದಿಂದಲೇ ಶಿಕ್ಷಣವನ್ನು ಹೆಚ್ಚಾಗಿ ಸಾಗಿಸಬೇಕು. ಕಲ್ಪನಾ, ವಿಚಾರ, ಅನುಮಾನ ಮುಂತಾದವುಗಳ ಸಂಬಂಧದ ಶಿಕ್ಷಣವನ್ನು ಅದಷ್ಟು ಕಡಿಮೆ ಮಾಡ ಬೇಕು. ಇವುಗಳೊಳಗಿನ ಯಾವದೊಂದು ಶಕ್ತಿಯ ಬೆಳವಣಿಗೆಯ ಪಾಠವನ್ನು ಕಲಿಸುವ ಪ್ರಸಂಗವೇ ಬಂದರೆ ಬಹಳೇ ಸಾವಕಾಶವಾಗಿ ಸಾಗಿಸಬೇಕು. ತಿಳಿಯುತಕ್ಕ ಸಂಗತಿಯ ಭಾವನೆಯು ಬಾಲಕರಲ್ಲಿ ಆದರೆ ಸಾಕು, ನಿಜವಾಗಿ ತಿಳಿದಿದ್ದರೂ ಶಬ್ದಗಳಿಂದ ಹೇಳಲಿಕ್ಕೆ ಬರದಿದ್ದರೆ ಅಷ್ಟಕ್ಕೇ ಶಿಕ್ಷಕರು ನಿರಾಶವುಳ್ಳವರಾಗಬಾರದು. ಇಂಥ ಪಾಠಗಳನ್ನು ಸಾವಕಾಶವಾಗಿ ಸಾಗಿಸಿ, ಬಾಲಕರಿಗೆ "ತಿಳಿಯುತಕ್ಕ ಸಂಗತಿಯ ಭಾವನೆಯು ಆಗಿದೆ" ಎಂದು ಖಾತ್ರಿ ಮಾಡಿಕೊಂಡರೆ ಸಾಕು. ಚಿಕ್ಕ ಬಾಲಕರು ತಮಗೆ ತಿಳಿಯುವವರೆಗೆ ಕೇಳುವದನ್ನು ಬಿಡುವದಿಲ್ಲ. ಮತ್ತು ಅವರಲ್ಲಿ ಸುಲಭ ಸಂಗತಿಗಳನ್ನು ಸಾವಕಾಶವಾಗಿ ಗ್ರಹಿಸಿಕೊಳ್ಳುವ ಶಕ್ತಿ ಇರುತ್ತವೆ. ಆದ್ದರಿಂದ ಪಾಠಕ್ಕೆ ಸುಲಭ ರೂಪವನ್ನು ಕೊಟ್ಟು, ಅವರಲ್ಲಿ ಸ್ವಾಭಾವಿಕವಾಗಿರುವ ನಿರೀಕ್ಷಣ ಶಕ್ತಿಯ ಬಲದಿಂದ, ಸಾವಕಾಶವಾಗಿ ಶಿಕ್ಷಣವನ್ನು ಸಾಗಿಸಿದರೆ ಎಷ್ಟೋ ಲಾಭವಾಗುವದು. (ಅಪೂರ್ಣ)

ಪ್ರಕೃತಿ ಪಾಠಗಳು.

ನಾಯಿ.

(ಫೆಬ್ರುವರಿ ತಿಂಗಳಿಂದ ಮುಂದೆ ಸಾಗಿದ್ದು.)

ನಾಯಿಯಿಂದ ಉಪಯೋಗ ಮತ್ತು ನಾಯಿಯ ಸ್ವಭಾವಗಳು— ನಾಯಿಗಳಲ್ಲಿ ಅನೇಕ ಜಾತಿಗಳಿರುತ್ತವೆ. ಒಂದೊಂದು ಜಾತಿಯ ನಾಯಿಗಳು ಒಂದೊಂದು ಬಗೆಯಾದ ಉಪಯೋಗಕ್ಕೆ ಬರುತ್ತವೆ. ಕೆಲವು ನಾಯಿಗಳು ಬೇಟೆಗೆ ಉಪಯೋಗಕರವಾಗಿರುತ್ತವೆ. ಕುರುಬರು ಹಳ್ಳಿಗಾಡುಗಳಲ್ಲಿ ಸಾಕುವ ನಾಯಿಗಳು ಕುರಿಯ ಮಂದೆಗಳನ್ನು ಕಾಯುತ್ತವೆ. ನಾವು ಮನೆಗಳಲ್ಲಿ ಸಾಕುವ ನಾಯಿಗಳು ಮನೆಗೆ ಕಳ್ಳರು ಬರದಂತೆ ನೋಡಿಕೊಳ್ಳುತ್ತವೆ. ಯುರೋಪ ಖಂಡದ ಕೆಲವು ದೇಶಗಳಲ್ಲಿ ನಾಯಿಗಳು ಎತ್ತರವಾದ ಪರ್ವತಗಳ ಹಿಮದ ಗಡ್ಡೆಗಳಲ್ಲಿ ದಾರಿ ತಪ್ಪಿರುವ ಮನುಷ್ಯರನ್ನು ಸರಿಯಾದ ದಾರಿಯಲ್ಲಿ ಕರೆದುಕೊಂಡು ಹೋಗುತ್ತವೆ. ಎಸ್ಕಿಮೊ ಜನರ ನಾಯಿಗಳು ಬಂಡಿಗಳನ್ನು ಸಹ ಎಳೆಯುತ್ತವೆ

ಒಡೆಯನ ವಿಷಯದಲ್ಲಿ ನಾಯಿಗೆ ಇರುವಷ್ಟು ವಿಶ್ವಾಸವು ಬೇರೆ ಯಾವ ಪ್ರಾಣಿಗೂ ಇರುವದಿಲ್ಲ. ಅವನು ಎಲ್ಲೆಲ್ಲಿ ಹೋದರೂ ಅವನನ್ನೇ ಹಿಂಬಾಲಿಸುತ್ತಿರುವುದು. ಮತ್ತು ಅವನಿಗೋಸ್ಕರ ತನ್ನ ಪ್ರಾಣವನ್ನೂ ಕಳೆದುಕೊಳ್ಳುವದಕ್ಕೆ ಹಿಂತೆಗೆಯುವದಿಲ್ಲ.

ಪಾಠಗಳ ಟಿಪ್ಪಣಿ.

ವಿಷಯ— ನಾಯಿಯ ಅಂಗರಚನೆ ಮತ್ತು ಸ್ವಭಾವಗಳು.

ಕಲಿಯುವ ಹುಡುಗರ ವಯಸ್ಸು— ೯, ೧೦. (೩, ೪, ಇಯತ್ತೆ ಅಥವಾ ವರ್ಗದ ಹುಡುಗರು.)

ವೇಳೆ— ೪೦ ನಿಮಿಷಗಳ ೨ ಪಾಠಗಳು. (ಬೆಕ್ಕಿನ ಪಾಠದ ಹಾಗೆಯೆ ಇದನ್ನೂ ೨ ಭಾಗಗಳನ್ನಾಗಿ ಮಾಡಿಕೊಳ್ಳಬೇಕು.)

ಉದ್ದೇಶ ಮತ್ತು ಉಪಕರಣ— ಹಿಂದಿನ ಪಾಠಗಳಲ್ಲಿದ್ದ ಉದ್ದೇಶವೇ. ಬೆಕ್ಕಿಗೆ ಬದಲಾಗಿ ನಾಯಿಯನ್ನು ಇಟ್ಟುಕೊಳ್ಳುತ್ತೇವೆ. ಪಾಠಕಾಲಗಳಲ್ಲಿ ಹುಡುಗರ ಮುಂದೆ ಒಂದು ನಾಯಿ ಇರಬೇಕು. (ಬೆಕ್ಕಿಗಿಂತ ನಾಯಿಯನ್ನು ಸುಲಭವಾಗಿ ತಂದು ಹುಡುಗರು ಅದನ್ನು ಸಾವಧಾನದಿಂದ ಪರೀಕ್ಷಿಸಬಹುದು.)

ಮೊದಲನೇ ಭಾಗ

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ನಾಯಿಯ ಶರೀರ:— ನಾಯಿಯ ಶರೀರವು ಬೆಕ್ಕಿನ ಶರೀರಕ್ಕಿಂತ ಉದ್ದವಾಗಿರುತ್ತದೆ. ಅದರ ಕಾಲುಗಳು ಉದ್ದವಾಗಿರುವದರಿಂದ ಅದು ಎತ್ತರವಾಗಿಯೂ ಕಾಣುತ್ತದೆ. ಅದರ ಎದೆಯು ಅಗಲವಾಗಿದೆ. (ಅ) ತಲೆ:— ನಾಯಿಯ ತಲೆಯು ಬೆಕ್ಕಿನ ತಲೆಗಿಂತ ದೊಡ್ಡದು. ಅದರ ಮೊರೆಯು ಉದ್ದವಾಗಿದ್ದು, ಮೂಗಿನ ತುದಿಯು ಮೊನೆಯುಳ್ಳದ್ದಾಗಿರುತ್ತದೆ. (ಇ) ಹಲ್ಲುಗಳು:—ನಾಯಿಯ ಹಲ್ಲುಗಳು ಮೊನೆಯುಳ್ಳವುಗಳಾಗಿಯೂ ಹರಿತವಾಗಿಯೂ ಇರುತ್ತವೆ. ಮುಂಭಾಗದಲ್ಲಿ ಸಣ್ಣ ಹಲ್ಲುಗಳೂ, ಒಂದೊಂದು ದವಡೆಯಲ್ಲಿಯೂ ಒಂದೊಂದಾದ ಎಕೋರೆ ಹಲ್ಲುಗಳೂ ಇವುಗಳ ಹಿಂದೆ ಮೊನೆಯುಳ್ಳ ಸಣ್ಣ ಹಲ್ಲುಗಳೂ ಇರು	ಮನೆಯಲ್ಲಿ ಸಾಕಿದ ಒಂದು ನಾಯಿಯನ್ನು ಶಾಲೆಗೆ ತಂದು ಹುಡುಗರನ್ನು ಅದರ ಸುತ್ತಲೂ ಕೂಡಿಸಿ, ಅದರ ಒಟ್ಟು ಆಕಾರವನ್ನು ನೋಡಿರೆಂದು ಹೇಳಬೇಕು. ಅನಂತರ ಅದರ ದೇಹದ ರಚನೆಯನ್ನು ಕುರಿತು ಪ್ರಶ್ನೆ ಮಾಡಬೇಕು. ನಾಯಿಯ ಶರೀರಕ್ಕೂ ಬೆಕ್ಕಿನ ಶರೀರಕ್ಕೂ ಇರುವ ವ್ಯತ್ಯಾಸಗಳನ್ನು ಅವರಿಂದ ಹೊರಡಿಸಬೇಕು. ನಾಯಿಯ ತಲೆಯನ್ನು ಲಕ್ಷಿಸಿರೆಂದು ಹೇಳಿ ಅದರ ಆಕಾರ ಮತ್ತು ಪ್ರಮಾಣ ಇವುಗಳನ್ನು ಹುಡುಗರಿಂದ ಹೇಳಿಸಿಬೇಕು. ನಾಯಿಯ ತಲೆಗೂ ಬೆಕ್ಕಿನ ತಲೆಗೂ ಆಕಾರ ಪ್ರಮಾಣಗಳಲ್ಲಿ ಯಾವ ವ್ಯತ್ಯಾಸಗಳಿರುತ್ತವೆ? ನಾಯಿಯು ಬೀದಿಯಲ್ಲಿ ಹೋಗುತ್ತಿರುವಾಗ ಅದರ ತಲೆಯನ್ನು ಹೇಗಿಟ್ಟುಕೊಂಡಿರುತ್ತದೆ? ಮೊರೆಯು ಉದ್ದವಾಗಿರುವದರಿಂದ ಅನುಕೂಲವೇನು? ಸಾಕಿದ ನಾಯಿಯ ಬಾಯಿಯನ್ನು ತೆಗಿಸಿ ಅದರಲ್ಲಿ ಹಲ್ಲುಗಳ ರಚನೆಯನ್ನು ನೋಡಬಹುದು. ಅದರಲ್ಲಿ ಕಾಣುವ ಹಲ್ಲುಗಳ ವ್ಯತ್ಯಾಸಗಳನ್ನು ಹುಡುಗರಿಂದ ಹೇಳಿಸಬೇಕು. ನಾಯಿಗೆ ತಿನ್ನುವದಕ್ಕೆ ಒಂದು ರೊಟ್ಟಿಯ ಚೂರನ್ನು ಕೊಟ್ಟು ಅದು ತಿನ್ನುವ ಕ್ರಮವನ್ನು ಲಕ್ಷಿಸಬೇಕು. ಅದರ ಹಲ್ಲುಗಳನ್ನು ಹೇಗೆ ಉಪಯೋಗಿಸುತ್ತದೆ? ಇದೇ ವೇಳೆಯಲ್ಲಿ ಒಬ್ಬ ಹುಡುಗನಿಗೆ ಒಂದು ಬಿಸ್ಕತ್ತನ್ನು ಕೊಟ್ಟು ಅವನ ದವಡೆಗಳ ಚಲನೆಗೂ ನಾಯಿಯ

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ತ್ತವೆ. ನಾಯಿಯ ದವಡೆಗಳಿಗೂ ಪಾರ್ಶ್ವ ಚಲನೆಯಿಲ್ಲ. ನಾಲಿಗೆ:— ನಾಯಿಯ ನಾಲಿಗೆಯು ಮೃದುವಾಗಿಯೂ ನಯವಾಗಿಯೂ ತೇವವುಳ್ಳದ್ದಾಗಿಯೂ ಇರುತ್ತದೆ. ನಾಯಿಯು ಓಡುವಾಗ ನಾಲಿಗೆಯನ್ನು ಹೊರಗೆ ಬಿಟ್ಟು ಕೊಂಡಿರುತ್ತದೆ. ಅದರ ತುದಿಯಿಂದ ನೀರು ತೊಟ್ಟು ತೊಟ್ಟಾಗಿ ಬೀಳುತ್ತಿರುವುದು. ನಾಯಿಯು ಹೆಚ್ಚಾಗಿ ಓಡುವಾಗ ಅದರ ಚರ್ಮದಿಂದ ಬೆವರು ಹೊರಗೆ ಬರದೆ ನಾಲಿಗೆಯಿಂದ ಬರುತ್ತದೆ. ನಾಯಿಯು ದ್ರವಗಳನ್ನು ನಾಲಿಗೆಯಿಂದ ಅದ್ದಿ ಸೇವಿಸುತ್ತದೆ. (೨) ಕಣ್ಣು :— ನಾಯಿಯ ಕಣ್ಣುಗಳು ದೊಡ್ಡವಾಗಿಯೂ ಪ್ರಕಾಶವುಳ್ಳವಾಗಿಯೂ ಇರುತ್ತವೆ. ಕಣ್ಣಿನ ಗುಡ್ಡೆಗಳು ಬೆಕ್ಕಿನ ಕಣ್ಣುಗಳಲ್ಲಾಗುವಂತೆ ಹಗಲು ರಾತ್ರಿಗಳಲ್ಲಿ ಸ	ದವಡೆಗಳ ಚಲನೆಗೂ ಇರುವ ವ್ಯತ್ಯಾಸವೇನೆಂದು ಹುಡುಗರನ್ನು ಕೇಳಬೇಕು. ಈ ವಿಷಯದಲ್ಲಿ ನಾಯಿಗೂ ಬೆಕ್ಕಿಗೂ ಇರುವ ಹೋಲಿಕೆಯನ್ನು ಹುಡುಗರ ಲಕ್ಷ್ಯಕ್ಕೆ ತರಬೇಕು. ನಾಯಿಯು ಬಾಯಿಯನ್ನು ತೆಗೆದಾಗ ಅದರ ನಾಲಿಗೆಯು ಸುಲಭವಾಗಿ ಕಾಣುವುದು. ಅದರ ನಾಲಿಗೆಯು ಹೇಗಿರುತ್ತದೆಂದು ಹುಡುಗರನ್ನು ಪ್ರಶ್ನೆ ಮಾಡಬೇಕು. ನಾಯಿಯ ನಾಲಿಗೆಗೂ ಬೆಕ್ಕಿನ ನಾಲಿಗೆಗೂ ಇರುವ ವ್ಯತ್ಯಾಸಗಳು ಯಾವವು ? ಸಾಧಾರಣವಾಗಿ ನಾಯಿಯು ಓಡುವಾಗ ನಾಲಿಗೆಯನ್ನು ಬಾಯಿಯು ಹೊರಗೆ ಬಿಟ್ಟುಕೊಂಡಿರುವದಷ್ಟೆ. ಸಾವಧಾನದಿಂದ ನೋಡಿದರೆ ಅದರ ತುದಿಯಿಂದ ನೀರು ತೊಟ್ಟು ತೊಟ್ಟಾಗಿ ಬೀಳುವದು ಕಾಣುವದು. ಇದಕ್ಕೆ ಕಾರಣವೇನು? ನೀವು ಹೆಚ್ಚಾಗಿ ಓಡಾಡಿದರೆ ಅಥವಾ ಬಿಸಲಿನ ವೇಳೆಯಲ್ಲಿ ದೇಹಶ್ರಮಬೇಕಾದ ಕೆಲಸವನ್ನು ಮಾಡಿದರೆ ನಿಮ್ಮ ಚರ್ಮವು ಯಾವ ಸ್ಥಿತಿಯಲ್ಲಿರುವದು? ನಾಯಿಯನ್ನು ಸ್ವಲ್ಪ ಓಡಾಡಿಸಿ ಅದರ ಚರ್ಮವನ್ನು ಮುಟ ನೋಡಿರೆಂದು ಹೇಳಿ ಅದರಲ್ಲಿ ಬೆವರು ಕಾಣದೇ ಇರುವದನ್ನು ಹುಡುಗರು ನಿರೀಕ್ಷಿಸಬೇಕು. ನಾಯಿಯು ಬೇವರು ಹೇಗೆ ಹೊರಗೆ ಹೋಗುತ್ತದೆ? ನಾಯಿಗೆ ಸ್ವಲ್ಪ ಹಾಲನ್ನು ಕೊಟ್ಟು ಅದು ಕುಡಿಯುವ ರೀತಿಯನ್ನು ಹುಡುಗರು ನೋಡಬೇಕು. ನಾಯಿ, ಬೆಕ್ಕು ಇವೆ ಒಂದೆ ವಿಧವಾಗಿ ಹಾಲನ್ನು ಕುಡಿಯುವದನ್ನು ಅವರು ತಿಳಿಯಬಹುದು. ಹುಡುಗರು ನಾಯಿಯ ಕಣ್ಣನ್ನು ನೋಡಿ ಅದು ಹೇಗೆ ಕಾಣುತ್ತದೆಂಬದನ್ನು ಹೇಳಬೇಕು.

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ಣ್ಣವೂ ದೊಡ್ಡವೂ ಆಗಿದ್ದೆ, ಯಾವಾಗಲೂ ಒಂದೇ ವಿಧವಾಗಿರುತ್ತವೆ. ನಾಯಿಯು ಹಗಲಿನಲ್ಲಿ ಬೇಟೆಯಾಡುತ್ತದೆ. ಅದು ರಾತ್ರಿಯಲ್ಲಿ ವಿಶೇಷವಾಗಿ ಚಲಿಸದೇ ಇರುವದರಿಂದ ಅದಕ್ಕೆ ರಾತ್ರಿಯಲ್ಲಿ ಸೂಕ್ಷ್ಮವಾದ ದೃಷ್ಟಿಯು ಅವಶ್ಯಕ ವಿರುವದಿಲ್ಲ.	ಬೆಕ್ಕಿನ ಕಣ್ಣುಗಳಿಗೂ ನಾಯಿಯ ಕಣ್ಣುಗಳಿಗೂ ಹಗಲಿನಲ್ಲಿ ಯಾವ ವ್ಯತ್ಯಾಸಗಳು ಕಾಣುತ್ತವೆ? ಇದಕ್ಕೆ ಕಾರಣವೇನು? ಬೆಕ್ಕಿನ ಕಣ್ಣಿನ ಹಾಗೆ ನಾಯಿಯ ಕಣ್ಣುಗಳು ಹಗಲೂ ರಾತ್ರಿಗಳಲ್ಲಿ ಏಕೆ ವ್ಯತ್ಯಾಸವಾಗುವದಿಲ್ಲ?
ಮೀಸೆ:— ನಾಯಿಯ ಮೀಸೆಗಳು ಮೋಟಾಗಿರುತ್ತವೆ. ನಾಯಿಯು ಹಗಲು ಬೇಟೆಯಾಡುವ ಜಂತುವಾದದ್ದರಿಂದ ಈ ಮೀಸೆಗಳು ವಿಶೇಷ ಉಪಯೋಗಕ್ಕೆ ಬರುವದಿಲ್ಲ.	ನಾಯಿಯ ಮೀಸೆಗಳು ಹೇಗಿರುತ್ತವೆ? ಬೆಕ್ಕಿನ ಮೀಸೆಗಳಿಗೂ ನಾಯಿಯ ಮೀಸೆಗಳಿಗೂ ವ್ಯತ್ಯಾಸವೇನು? ಇವೆರಡು ಪ್ರಾಣಿಗಳಲ್ಲಿಯೂ ಯಾವದಕ್ಕೆ ಮೀಸೆಗಳು ಹೆಚ್ಚು ಉಪಯೋಗಕರವಾಗಿರುತ್ತವೆ?
ಕಿವಿಗಳು:—ಕೆಲವು ನಾಯಿಗಳ ಕಿವಿಗಳು ಜೋಲಾಡುತ್ತಿರುತ್ತವೆ. ಕೆಲವು ನಾಯಿಗಳ ಕಿವಿಗಳು ಎತ್ತರವಾಗಿ ನಿಂತಿರುತ್ತವೆ. ಕಾಡು ಸ್ಥಿತಿಯಲ್ಲಿರುವ ನಾಯಿಗಳ ಕಿವಿಗಳು ಎತ್ತರಕ್ಕೆ ನಿಂತಿರುತ್ತವೆ. ಅವುಗಳಿಗೆ ಕಿವಿಗಳ ಉಪಯೋಗವು ಬೇಕಾಗಿರುತ್ತದೆ.	ನಾಯಿಗಳ ಕಿವಿಗಳು ಹೇಗಿರುತ್ತವೆ? ಕಾಡುನಾಯಿಗಳ ಕಿವಿಗಳು ಎತ್ತರವಾಗಿ ನಿಂತಿರುವದರಿಂದ ಹೇಗೆ ಉಪಯೋಗಕರವಾಗುತ್ತವೆ?

ಪುನರಾವೃತ್ತಿ.

ಎರಡನೇ ಭಾಗ.

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
(ಬ) (೧) ಚರ್ಮ (ತೊಗಲು):— ನಾಯಿಯ ಚರ್ಮವು ವಿವಿಧ ಬಣ್ಣವುಳ್ಳದಾಗಿರುತ್ತದೆ. ಅದರ ಮೇಲೆ ಕೂದಲಿರುತ್ತದೆ. ಈ ಕೂದಲು ಬಿಕ್ಕಿನ ತುಪ್ಪಟದಷ್ಟು ಶಾಖ (ಶಕೆ) ವುಳ್ಳದ್ದಲ್ಲ. ನಾಯಿಯ ಕೂದಲಿಗೆ ನೀರು ಅಂಟಿಕೊಳ್ಳುವದಿಲ್ಲವಾದ್ದರಿಂದ ನಾಯಿಯು ನೀರನ್ನು ಕಂಡಾಗ ಈಜಾಡುವದಕ್ಕೆ ಬಯಸುತದೆ.	ನಾಯಿಯು ಚರ್ಮವನ್ನು **ನೋಡಿ** ಅದರ ಬಣ್ಣದ ವಿಷಯದಲ್ಲಿ ಕಾಣುವದನ್ನು ಹುಡುಗರಿಂದ ಹೇಳಿಸಬೇಕು. ಅನಂತರ ಹುಡುಗರು ಅದರ ಚರ್ಮವನ್ನು ಸವರಿ **ನೋಡಿ** ಈ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳಬೇಕು:— ಅದರ ಚರ್ಮವನ್ನು ಮುಟ್ಟಿದರೆ ಹೇಗಿರುವಂತೆ ತೋರುತ್ತದೆ? ಬಿಕ್ಕಿನ ಚರ್ಮವು ಹೇಗಿತ್ತು? ಈ ವ್ಯತ್ಯಾಸಗಳಿಗೆ ಕಾರಣವೇನು? ಇವೆರಡು ಪ್ರಾಣಿಗಳ ಚರ್ಮದಲ್ಲಿ ಯಾವದು ಹೆಚ್ಚು ಛಳಿಯನ್ನು ತಡೆಯುತ್ತದೆ? ಅದು ಹೇಗೆ? ನೀರಿನ ವಿಷಯದಲ್ಲಿ ಈ ಎರಡು ಪ್ರಾಣಿಗಳ ಸ್ವಭಾವಗಳಲ್ಲಿ ಏನು ವ್ಯತ್ಯಾಸಗಳಿರುತ್ತವೆ? [ಈ ವ್ಯತ್ಯಾಸಗಳು ಹೇಗೆ ಚರ್ಮದ ಮೇಲಾಗದ ಸ್ಥಿತಿಯನ್ನವಲಂಬಿಸಿರುತ್ತವೆಂಬದನ್ನು ಹುಡುಗರಿಗೆ ಸ್ಪಷ್ಟವಾಡಬೇಕು.]
ಒಂದೊಂದು ಜಾತಿಯ ನಾಯಿಗಳಿಗೆ ಕೂದಲು ಒಂದೊಂದು ಬಗೆಯಾಗಿರುತ್ತದೆ. ಕೆಲವು ನಾಯಿಗಳ ಕೂದಲು ಉದ್ದವಾಗಿಯೂ, ಕೆಲವು ನಾಯಿಗಳ ಕೂದಲು ತುಂಡಾಗಿಯೂ, ಕೆಲವು ನಾಯಿಗಳ ಕೂದಲು ಸಮವಾಗಿಯೂ, ಕೆಲವು ನಾಯಿಗಳ ಕೂದಲು ಬಿರುಸಾಗಿಯೂ ಇರುತ್ತದೆ.	ಬೇರೆ ಬೇರೆ ಜಾತಿಗಳ ನಾಯಿಗಳ ಕೂದಲುಗಳಲ್ಲಿ ಯಾವ ವ್ಯತ್ಯಾಸಗಳು ಗೋಚರವಾಗುತ್ತವೆ?

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
(೨) ಎದೆ:– ನಾಯಿಯ ಎದೆಯು ಬೆಕ್ಕಿನ ಎದೆಯಿಗಿಂತಲೂ ವಿಶಾಲವಾಗಿರುತ್ತದೆ. ಆದುದರಿಂದ ಬೇಟೆಯಲ್ಲಿ ಹೆಚ್ಚು ಶ್ರಮವನ್ನು ತಡೆಯಬಲ್ಲದು.	ನಾಯಿಯ ಎದೆಗೂ ಬೆಕ್ಕಿನ ಎದೆಗೂ ಏನು ಹೆಚ್ಚು ಕಡಿಮೆ ಇರುತ್ತದೆ? ವಿಶಾಲವಾದ ಎದೆ ಯಿರುವವುಂದ ಅನುಕೂಲವೇನು? [ವಿಶಾಲವಾದ ಎದೆಯಲ್ಲಿ ಶ್ವಾಸಕೋಶಗಳು (ಪುಪ್ಪುಸಗಳು) ಹೆಚ್ಚು ಗಾಳಿಯನ್ನು ಅಡಗಿಸಿಕೊಳ್ಳುತ್ತವೆ.]
(೩) ಕಾಲು:– ನಾಯಿಯ ಕಾಲುಗಳು ಉದ್ದವಾಗಿಯೂ ತೆಳುವಾಗಿಯೂ ಇರುವದರಿಂದ ಅದು ವೇಗವಾಗಿ ಓಡಬಲ್ಲದು. ನಾಯಿಯ ಕಾಲುಗಳು ಬೆಕ್ಕಿನ ಕಾಲುಗಳಷ್ಟು ಗಡುತರವಾದವುಗಳಲ್ಲ.	ವೇಗವಾಗಿ ಓಡಬೇಕಾದರೆ ವಿಶಾಲವಾದ ಎದೆಯಲ್ಲದೆ ಮತ್ತೇನು ಬೇಕಾಗುವದು? ಇವೆರಡು ಪ್ರಾಣಿಗಳ ಕಾಲುಗಳ ಪ್ರಮಾಣದಲ್ಲಿ ಯಾವ ವ್ಯತ್ಯಾಸಗಳು ಕಾಣುತ್ತವೆ?
(೪) ಅಂಗಾಲು:–ನಾಯಿಯ ಅಂಗಾಲಿನಲ್ಲಿ ಮಾಂಸ ಖಂಡಗಳಿರುತ್ತವೆ. ಇವು ಬೆಕ್ಕಿನ ಕಾಲಿನಲ್ಲಿರುವಗಳಿಗಿಂತಲೂ ಕಠಿಣವಾಗಿರುತ್ತವೆ.	ನಾಯಿಯ ಅಂಗಾಲನ್ನು ನೋಡಿದರೆ ಅದು ಹೇಗೆ ಕಾಣುತ್ತದೆ? ಅದಕ್ಕೂ ಬೆಕ್ಕಿನ ಅಂಗಾಲಿಗೂ ಇರುವ ಭೇದವೇನು? ನಾಯಿಯ ಉಗುರುಗಳನ್ನು ನೋಡಿ ಅದು ತನಗೆ
(೫) ಉಗುರುಗಳು:– ನಾಯಿಯ ಉಗುರುಗಳು ಮೊಂಡಾಗಿರುತ್ತವೆ. ಇವು ಯಾವಾಗಲೂ ಹೊರಗೆ ಕಾಣುತ್ತಿರುತ್ತವೆ. ನಾಯಿಯು ಬೆಕ್ಕಿ	ಹೇಗೆ ಕಾಣುತ್ತದೆಂಬುವದನ್ನು ಹುಡುಗರು ಹೇಳಬೇಕು. ನಾಯಿಯ ಉಗುರುಗಳ ರಚನೆಗೂ ಬೆಕ್ಕುಗಳ ಉಗುರುಗಳ ರಚನೆಗೂ ವ್ಯತ್ಯಾಸವೇನು? ನಾಯಿಯು ನಡಿಯುವಾಗ ಸ್ವಲ್ಪ ಸಪ್ಪಳವಾಗುವದಷ್ಟೇ. ಇದಕ್ಕೆ ಕಾರಣವೇನು?

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ನಂತೆ ತನ್ನ ಉಗುರುಗಳನ್ನು ಒಳಕ್ಕೆ ಸೆಳೆದುಕೊಳ್ಳಲಾರದು. ಈ ಉಗುರುಗಳು ನೆಲಕ್ಕೆ ತಗಲುವದರಿಂದ ನಾಯಿಯು ನಡಿಯುವಾಗ ಸ್ವಲ್ಪ ಶಬ್ದವೂ ಕೇಳ ಬರುವುದು. ನಾಯಿಯು ಉಗುರುಗಳಿಂದ ನೆಲವನ್ನು ಅಗಿದು ಹಳ್ಳಗಳನ್ನು ಮಾಡುತ್ತದೆ.	ಇಂತಹ ಬಿರುಸಾದ ಉಗುರು ನಾಯಿಗೆ ಯಾವ ಉಪಯೋಗಕ್ಕೆ ಬರುತ್ತದೆ?
ಬಾಲ:— ನಾಯಿಯ ಬಾಲವು ಬೆಕ್ಕಿನ ಬಾಲದಷ್ಟು ಉದ್ದವಾದದ್ದೂ ಅಲ್ಲ, ದೃಢವಾದದೂ ಅಲ್ಲ. ನಾಯಿಗೆ ಸಂತೋಷ ಸಂಟಾದಾಗಬಾಲವನ್ನಾಡಿಸುದು, ಭಯವುಂಟಾದಾಗ ಬಾಲವನ್ನು ಹಿಂಗಾಲುಗಳ ನಡುವೆ ಸೇರಿಸಿ ಕೊಳ್ಳುತ್ತದೆ.	ನಾಯಿಯ ಬಾಲವನ್ನು ನೋಡಿರೆಂದು ಹೇಳಿ ಅದರ ಪ್ರಮಾಣವನ್ನು ಕುರಿತು ಪ್ರಶ್ನೆಯನ್ನು ಮಾಡಬೇಕು. ನಾಯಿಯಬಾಲಕ್ಕೂ ಬೆಕ್ಕಿನಬಾಲಕ್ಕೂ ವ್ಯತ್ಯಾಸವೇನು? ನಾಯಿಯು ಸಂತೋಷ ಅಥವಾ ಪ್ರೀತಿಯನ್ನು ಬಾಲದಿಂದ ಹೇಗೆ ತಿಳಿಸುತ್ತದೆ? ಅದಕ್ಕೆ ಭಯವೆಂಟಾದಾಗ ಬಾಲವನ್ನು ಹೇಗಿಟ್ಟುಕೊಳ್ಳುತ್ತದೆ?
ನಾಯಿಯಿಂದ ಉಪಯೋಗಗಳು:— ನಾಯಿಗಳು ಮನುಷ್ಯನಿಗೆ ಅನೇಕ ವಿಧಗಳಲ್ಲಿ ಉಪಯೋಗವಾಗುತ್ತವೆ. ಮುಖ್ಯವಾಗಿ ಮನೆಗಳನ್ನು ಕುರಿ	ನಾವು ಮನೆಗಳಲ್ಲಿ ನಾಯಿಗಳನ್ನು ಸಾಕುವದರಿಂದ ಪ್ರಯೋಜನವೇನು? ಹಳ್ಳಿಗಾಡುಗಳಲ್ಲಿ ನಾಯಿಗಳನು ಏತಕ್ಕೆ ಸಾಕುತ್ತಾರೆ?

ವಿಷಯ.	ತಿಳಿಸುವಕ್ರಮ ಮತ್ತುಪ್ರಶ್ನೆಗಳು.
ಯ ಮುಂದೆಗಳನ್ನೂ ಕಾಯುವದಕ್ಕೂ ಬೇಟೆಯಾಡುವದಕ್ಕೂ ಈದೇಶದಲ್ಲಿ ನಾಯಿಗಳನ್ನು ಉಪಯೋಗಿಸುತ್ತಾರೆ. ನಾಯಿಯ ಜಾತಿಯ ಪ್ರಾಣಿಗಳು:— ತೋಳ, ನರಿ.	ನಾಯಿಯ ಜಾತಿಗೆ ಸೇರಿದ ಪ್ರಾಣಿಗಳು ಯಾವವು? [ಹುಡುಗರು ಅವುಗಳನ್ನು ನೋಡದೆ ಇದ್ದರೆ ಅವುಗಳ ಚಿತ್ರಗಳನ್ನು ತೋರಿಸಬೇಕು.] ಇವು ಎಲ್ಲಿ ವಾಸ ಮಾಡುತ್ತವೆ?

ಕಪ್ಪು ಹಲಿಗೆಯ ಮೇಲೆ ಬರೆಯುವ ಸಂಕ್ಷಿಪ್ತ ವಿವರಣೆ.

ನಾಯಿಯ ಅಂಗರಚನೆ.

೧. ಹಲ್ಲು:—ನೊನೆಯುಳ್ಳವು.
೨. ನಾಲಿಗೆ:—ನಯುವಾಗಿಯೂ ತೇವವುಳ್ಳದ್ದಾಗಿಯೂ ಇರುತ್ತದೆ.
೩. ಕಣ್ಣುಗಳು:—ಹಗಲುರಾತ್ರಿ ಒಂದೇ ವಿಧವಾಗಿರುತ್ತವೆ.
೪. ವಿಾಸೆಗಳು:—ಗಿಡ್ಡವಾಗಿರುತ್ತವೆ.
೫. ಎದೆ:—ವಿಶಾಲವಾಗಿರುತ್ತದೆ.
೬. ಕಾಲುಗಳು:—ಉದ್ದವಾಗಿಯೂ ತೆಳುವಾಗಿಯೂ ಇರುತ್ತವೆ.
೭. ಚರ್ಮ:—ಬಿರುಸಾದ ಕೂದಲುಗಳುಳ್ಳದ್ದು.

ನಾಯಿಯ ಅಭ್ಯಾಸಗಳು.

೧. ಬೆವರನ್ನು ಬಿಡುತ್ತಿರುತ್ತದೆ. } ನಾಲಿಗೆಯಿಂದ
೨. ದ್ರವಗಳನ್ನು ಸೇವಿಸುತ್ತದೆ. }
೩. ವಾಸನೆಯಿಂದ ಪ್ರಾಣಿಗಳ ದಾರಿಯನ್ನು ಹಿಡಿಯುತ್ತದೆ. } ಮೂಗಿನಿಂದ
೪. ಆಹಾರವನ್ನು ಕತ್ತರಿಸಿ ತುಂಡು ಮಾಡಿ ನುಂಗುತ್ತದೆ. } ಹಲ್ಲುಗಳಿಂದ.
೫. ನಾಯಿಯು ನೀರನ್ನು ಕಂಡಕೂಡಲೆ ಆಶೆಯಿಂದ ಇಳಿಯುತ್ತವೆ.

ಕರ್ನಾಟಕ ಶಿಕ್ಷಕ ಮಂಡಲ.

ಫೆಬ್ರುವರಿ ತಿಂಗಳ ಶಾಲಾಪತ್ರಿಕದಲ್ಲಿ ಪ್ರಸಿದ್ಧಪಡಿಸಿದ ವಿಜ್ಞಾಪನಾ ಪತ್ರಿಕೆಯ ಮೇರೆಗೆ ಮಾರ್ಚ ತಿಂಗಳ ೧೮ನೇ ತಾರೀಖು ರವಿವಾರದಿವಸ ಇಲ್ಲಿಯ ವಿದ್ಯಾವರ್ಧಕ ಸಂಘದ ಮಂದಿರದಲ್ಲಿ ನಾಲ್ಕು ಜಿಲ್ಲೆಯ ಪ್ರಾಥಮಿಕ ಶಾಲಾಮಾಸ್ತರರ ಸಭೆಯು ನೆರೆದಿತ್ತು. ಸಭೆಗೂಡಿಸಿದವರಲ್ಲದೆ ಮಿ. ಎ. ಜೆ. ಬಾಂಗಿ ಬಿ. ಎ., ಮಿ. ವ್ಹಿ. ಡಿ. ನವಲಗುಂದ ಬಿ. ಎ. ಹಾಗೂ ಮಿ. ಆರ್. ಎಸ್. ಹುಕ್ಕೇರಿ ಎಮ್. ಏ. ಯವರೂ ನಾಲ್ಕು ಜಿಲ್ಲೆಯಿಂದ ಬಂದ ೫೦ ಜನ ಶಿಕ್ಷಕರೂ ಊರೊಳಗಿನ ಶಿಕ್ಷಕಶಿಕ್ಷಿಕೆಯರೂ ಹೈಸ್ಕೂಲ ಟ್ರೇ. ಕಾಲೇಜಗಳ ಮಾಸ್ತರರೂ ಸಭೆಗೆ ಬಂದಿದ್ದರು. ರಾವಸಾಹೇಬ ಕೃಷ್ಣರಾವ ಹುನಗುಂದ ಬಿ. ಎ. ಇವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ಅಧ್ಯಕ್ಷರು ತಮಗೆ ಸಭಿಕರೆಲ್ಲ ಒಮ್ಮನಸಿನಿಂದ ಕೊಟ್ಟ ಬಹುಮಾನಕ್ಕಾಗಿ ಅವರೆಲ್ಲರ ಉಪಕಾರ ಸ್ಮರಿಸಿ ಹೇಳಿದ್ದೇನೆಂದರೆ:—

ದೋಷಯುಕ್ತವಾದ ಪದ್ಧತಿಯಿಂದಲೋ ಶಿಕ್ಷಕರ ದುರ್ಲಕ್ಷದಿಂದಲೋ ಇನ್ನಾವ ಕಾರಣದಿಂದಲೋ ಮೊದಲಿನಂತೆ ಈಗ ವಿದ್ಯಾರ್ಥಿಗಳು ಹೊರಡುವದಿಲ್ಲ, ಎಂಬ ಉದ್ಗಾರಗಳು ಮೇಲಿಂದ ಮೇಲೆ ನಮ್ಮ ಕಿವಿಗೆ ಬೀಳುತ್ತವೆ. ಜನರಾಡುವ ಈ ತರದ ಅಪವಾದದ ಮಾತುಗಳನ್ನು ಕಳೆದುಕೊಳ್ಳಲು ಯತ್ನಮಾಡುವದು ಕನ್ನಡ ಶಿಕ್ಷಕಶಿಕ್ಷಿಕೆಯರ ಆದ್ಯಕರ್ತವ್ಯವಿರುವದು. ಇದಕ್ಕೆ ಯೋಗ್ಯವಾದ ಉಪಾಯವನ್ನು ಕೈಕೊಳ್ಳುವ ಬಗ್ಗೆ ವಿಚಾರಮಾಡುವದಕ್ಕಾಗಿಯೇ ತಾವೆಲ್ಲರೂ ಇಲ್ಲಿ ನೆರೆದಿರುವಿರಿ. ಈಗ ನಡೆದಿರುವ ಶಿಕ್ಷಣಕ್ರಮ, ಅದರಲ್ಲಿ ಶಿಕ್ಷಕರಿಗೆ ಬರತಕ್ಕ ತೊಂದರೆ, ಅದನ್ನು ನೀಗತಕ್ಕ ಉಪಾಯ, ಇಂದಿನ ಸಭೆಯ ಉದ್ದೇಶ ಮುಂತಾದ ವುಗಳನ್ನು ನಮ್ಮ ಮಿತ್ರರಾದ ಮಿ. ಕುಲಕರ್ಣಿಯವರು ನಮಗೆ ಹೇಳುವರು.

ಮಿ ರಾವುರಾವ ಕುಲಕರ್ಣಿ ಇವರು ಅಂದದ್ದು:—ದೇಶದ ಪ್ರಗತಿಗೆ ಪ್ರಾಥಮಿಕ ಶಿಕ್ಷಣದ ವಿಸ್ತಾರವು ಅವಶ್ಯವೋ ಸುಧಾರಿಸಿದ ಶಿಕ್ಷಣದ ಪದ್ಧತಿಯು ಅವಶ್ಯವೋ ಎಂಬ ಬಗ್ಗೆ ನಮ್ಮ ದೇಶದ ಜನರು ಚರ್ಚೆ ನಡಿಸಿರುವರು. ಸರಕಾರದವರು ಅಪೇಕ್ಷಿಸಿದರೆ ಅವರು ಶಾಲೆಗಳ ಸಂಖ್ಯೆ

ಯನ್ನು ಹೆಚ್ಚು ಮಾಡಬಹುದು. ಶಿಕ್ಷಕರನ್ನು ಹೆಚ್ಚಿಸಿ ಅವರ ಪಗಾರವನ್ನೂ ಬೆಳೆಸಬಹುದು. ಆದರೆ ತಕ್ಕ ಪದ್ಧತಿಯಿಂದ ಶಿಕ್ಷಣವು ನಡೆಯುವಂತೆ ಮಾಡುವದು ಸುಲಭವಲ್ಲ. ಯಾಕಂದರೆ ಅದು ಪೂರ್ಣವಾಗಿ ಶಿಕ್ಷಕ ಶಿಕ್ಷಿಕೆಯರನ್ನೇ ಅವಲಂಬಿಸಿರುವದು. ಕುದುರೆಯನ್ನು ನೀರಿರುವಲ್ಲಿಗೆ ಒಯ್ಯಬಹುದು. ಆದರೆ ಅದನ್ನು ನೀರು ಕುಡಿಯಲಿಕ್ಕೆ ಹಚ್ಚವದು ಯಾರಿಗೂ ಸಾಧ್ಯವಿಲ್ಲ, ಎಂದು ಇಂಗ್ಲಿಷ ಭಾಷೆಯಲ್ಲಿ ಒಂದು ನಾಣ್ಣುಡಿಯಿರುವದು. ಅದರಂತೆಯೇ ಶಿಕ್ಷಕ ಶಿಕ್ಷಿಕೆಯರಿಗೆ ಕಲಿಸುವ ಇಚ್ಛೆಯು ಉಂಟಾದ ಹೊರತು ಶಿಕ್ಷಣದಲ್ಲಿ ಸುಧಾರಣೆ ಯಾಗಲಾರದು. ಸರಕಾರದವರು ಬೇಕಾದಷ್ಟು ಉತ್ತಮ ಶಿಕ್ಷಕರನ್ನು ಹಣವೆಚ್ಚ ಮಾಡಿ ನಿಯಮಿಸಿ, ಯೋಗ್ಯ ಪದ್ಧತಿಯಿಂದ ಕಲಿಸಲಿಕ್ಕೆ ಉತ್ತೇಜನ ಕೊಡಬಹುದು. ಆದರೆ ಆಕೆಲಸವನ್ನು ಮಾಡುವವರು ಯಾರು? ನಾವೇ ಅಲ್ಲವೇ? ಭಾವೀ ಕನ್ನಡಿಗರ ಕಲ್ಯಾಣವು ವಿಶೇಷವಾಗಿ ಸದ್ಯದ ಶಿಕ್ಷಕ ಶಿಕ್ಷಿಕೆಯರನ್ನೇ ಅವಲಂಬಿಸಿರುವದು. ತೊದಲು ನುಡಿಯುವ ಮಗುವನ್ನು ನೋಡಿ ತಾಯಿಯು ಹಿಗ್ಗುವಳು ತಂದೆಯು ಆನಂದಪಡುವನು. ಶಾಲೆಯಲ್ಲಿ ತಂದೆತಾಯಂದಿರಿಬ್ಬರ ಕರ್ತವ್ಯವನ್ನೂ ಹೊತ್ತಿರುವ ಶಿಕ್ಷಕ ಶಿಕ್ಷಿಕೆಯರು ತಮ್ಮ ಮುದ್ದು ವಿದ್ಯಾರ್ಥಿಗಳು ಓದುಬರಹಗಳನ್ನು ಕಲಿಯುವದನ್ನು ನೋಡಿ ಅದರಂತೆಯೇ ಆನಂದ ಪಡದಿದ್ದರೆ ಅವರು ಶಿಕ್ಷಣದ ಪವಿತ್ರಕಾರ್ಯವನ್ನು ವಹಿಸಿದ್ದು ವ್ಯರ್ಥವೇಸರಿ. ಶಿಕ್ಷಕರು ವಿದ್ಯಾರ್ಥಿಗಳ ಕಲ್ಯಾಣವನ್ನೇ ಅನುಲಕ್ಷಿಸಿ ಯೋಗ್ಯಪದ್ಧತಿಯಿಂದ ಕಲಿಸಿದರೆ ಅದರಿಂದ ಅವರಿಗೆ ಆನಂದವು ನಿಶ್ಚಯವಾಗಿ ಆಗುವದು; ಹಾಗು ಶಿಕ್ಷಣದಲ್ಲಿಯೆ ಉತ್ತಮ ಪದ್ಧತಿಗಳನ್ನು ಕಂಡುಕೊಳ್ಳಲು ಅವರು ಪ್ರಯತ್ನ ಮಾಡಹತ್ತುವರು.

ಕಲಿಸುವ ಉತ್ತಮ ಮಾದರಿಗಳನ್ನು ತೋರಿಸುವದಕ್ಕಾಗಿಯೂ ಪದ್ಧತಿಯ ಸಂಬಂಧದ ಅಡಚಣಿಗಳನ್ನು ನೀಗುವದಕ್ಕಾಗಿಯೂ ಪ್ರಾಥಮಿಕ ಶಿಕ್ಷಕ ಶಿಕ್ಷಿಕೆಯರ ಒಂದು ಸಂಸ್ಥೆಯಿರುವದು ಅವಶ್ಯಕವು. ಇಂಥ ಸಂಸ್ಥೆಯನ್ನು ಸ್ಥಾಪಿಸಲಿಕ್ಕೆ ನೀವೆಲ್ಲರೂ ನೆರೆದಿರುವಿರಿ. ಈ ಸಂಸ್ಥೆಯ ಉದ್ದೇಶಗಳನ್ನೂ ಕಾರ್ಯಕ್ರಮವನ್ನೂ ರಚನೆಯನ್ನೂ ಕುರಿತು ಮಾಡತಕ್ಕ ಸೂಚನೆಗಳನ್ನು ನಿರ್ದಾಕ್ಷಿಣ್ಯವಿಂದಲೂ ನಿರ್ಭಯದಿಂದಲೂ ಮಾಡಲಿಕ್ಕೆ ತಮ್ಮೆಲ್ಲರಿಗೆ ಪೂರ್ಣ ಸ್ವಾತಂತ್ರ್ಯವಿರುವದು. ನಾನು ಟ್ರೇನಿಂಗಕಾ

ಜೀಜದಲ್ಲಿ ಪ್ರಿನ್ಸಿಪಾಲನಾಗಿದ್ದರೂ ಈ ಸಂಸ್ಥೆಯಲ್ಲಿ ನಿಮ್ಮೊಳಗಿನವನೊಬ್ಬ ನಂತೆ ಕೆಲಸ ಮಾಡಲು ಸಿದ್ಧನಿದ್ದೇನೆ. ನಮ್ಮ ವಿನಂತಿಗೆ ಮಾನಕೊಟ್ಟು ಖರ್ಚು ಮಾಡಿಕೊಂಡು ಇಲ್ಲಿಯವರೆಗೆ ಬಂದು ಶಿಕ್ಷಣದ ವಿಷಯವಾಗಿ ಇರುವ ಉತ್ಸಾಹವನ್ನು ವ್ಯಕ್ತಪಡಿಸಿದ್ದಕ್ಕಾಗಿ ನಿಮ್ಮೆಲ್ಲರಿಗೆ ನಾನು ಅಭಾರಿಯಾಗಿದ್ದೇನೆ.

ಬಳಿಕ ಹೆ. ಟ್ರೇನಿಂಗ ಕಾಲೇಜದ ಅ. ಮಾಸ್ತರರಾದ ವಿ. ವೆಂಕಟರಾವ ಮಗದಾಲ ಇವರು ಸಭೆಗೂಡಿಸಿದ ಉದ್ದೇಶವನ್ನು ವಿವರವಾಗಿ ವರ್ಣಿಸಿದರು ಅವರು ಅಂದದ್ದು :—

ಶಿಕ್ಷಣದಲ್ಲಿ ಪ್ರಾಥಮಿಕ, ಮಧ್ಯಮ, ಉಚ್ಚ ಎಂಬ ಮೂರು ಭಾಗಗಳಿರುವವು. ಇವುಗಳಲ್ಲಿ ಮೊದಲನೆಯದು ಮನೆಯನೆಲಗಟ್ಟಿನಂತೆಯೂ, ಎರಡನೆಯದು ಮಧ್ಯಭಾಗದಂತೆಯೂ, ಮೂರನೆಯದು ಶಿಖರದಂತೆಯೂ ಇರುವವು. ಸಾಮಾನ್ಯವಾಗಿ ಜನರೆಲ್ಲ ಶಿಖರದ ಸೌಂದರ್ಯಕ್ಕೆ ಮೋಹಗೊಂಡು, ನೆಲದಲ್ಲಿ ಅಡಗಿದ್ದರೂ ಇಡಿ ಮಂದಿರಕ್ಕೆ ಆಧಾರವಾಗಿದ್ದ ನೆಲಗಟ್ಟಿನ್ನು ಮರೆತು ಬಿಡುವರು. ಅಂದಕಾಣುವ ಮಂದಿರವು ಬಹುಕಾಲ ಬಾಳಬೇಕಾದರೆ ನೆಲಗಟ್ಟು ಗಟ್ಟಿಯಾಗಿರುವದು ಅವಶ್ಯವು. ಅದರಂತೆ ಮೇ ಪ್ರಾಥಮಿಕ ಶಿಕ್ಷಣವು ಸರಿಯಾಗಿ ದೊರೆತಿದ್ದರೆ ಮಾತ್ರ ಮುಂದಿನ ಶಿಕ್ಷಣವು ಫಲಪ್ರದವಾಗುವದು. ನಮ್ಮ ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರ ಕಾರ್ಯವು ಜನರ ದೃಷ್ಟಿಯಲ್ಲಿ ತುಂಬದಿದ್ದರೂ ವಾಸ್ತವಿಕವಾಗಿ ಅತಿಶಯ ಮಹತ್ವದ್ದಾಗಿರುವದು. ಶಿಕ್ಷಣವು ಜನಾಂಗದ ಉನ್ನತಿಯ ಮೂಲವೇ. ಪ್ರಾಥಮಿಕ ಶಿಕ್ಷಣವು,ಶಿಕ್ಷಣದ ಅಸ್ತಿವಾರವು; ಅಂದ ಮೇಲೆ ಪ್ರಾಥಮಿಕ ಶಿಕ್ಷಕಶಿಕ್ಷಿಕೆಯರ ಜವಾಬದಾರಿಯು ಎಷ್ಟಿರುವದೆಂಬದನ್ನು ವಿಸ್ತರಿಸಿ ಹೇಳಬೇಕಾಗಿಲ್ಲ. ಸದ್ಯಕ್ಕೆ ಹಿಂದುಸ್ತಾನದ ಎಲ್ಲ ಭಾಗಗಳಲ್ಲಿ ಶಿಕ್ಷಣ ವಿಷಯಕ ಚರ್ಚೆಯು ನಡೆಯಹತ್ತಿರುವದ. ಎಲ್ಲ ಸಂಗತಿಗಳಲ್ಲಿಯೂ ಹಿಂದುಳಿದಿರುವದೆಂಬ ಜನಾಪವಾದಕ್ಕೆ ಗುರಿಯಾಗಿರುವ ಈ ನಮ್ಮ ಕರ್ನಾಟಕವು ತಡಮಾಡದೆ ಮುಂದಡಿಯಿಡುವದು ಅವಶ್ಯವು.

ನಮ್ಮ ವಿಜ್ಞಾಪನೆಯನ್ನು ಮನ್ನಿಸಿ ನೀವೆಲ್ಲರೂ ಇಲ್ಲಿಗೆ ಬಂದು

ಮಂಡಲವನ್ನು ಪ್ರತಿಷ್ಠಾಪಿಸಲು ಸಿದ್ಧವಾಗಿರುವಿರಷ್ಟೆ. ಈ ಮಂಡಲ
ಉದ್ದೇಶಗಳಲ್ಲಿ ಬೇರೆ ಬೇರೆ ವಿಷಯಗಳನ್ನು ಕಲಿಸುವ ಪದ್ಧತಿಗಳನ್ನು ಪ್ರ
ತ್ಯಕ್ಷ ಪರೀಕ್ಷಿಸಿ ನಿರ್ಣಯಿಸುವದು ಮುಖ್ಯವಾಗಿರುವದು. ದೊಡ್ಡ ದೊಡ್ಡ
ನಿಬಂಧಗಳನ್ನು ಬರೆದೋದುವ ಬಗ್ಗೆಯೂ ಬೇಸರಿಲ್ಲದೆ ವ್ಯಾಖ್ಯಾನಗಳ
ನ್ನು ಕೊಡುವದರಲ್ಲಿಯೂ ನಮ್ಮ ಜನರಿಗೆ ಹುರುಪು ಬಹಳ. ಕಲಿಸುವ
ದೇ ನಮ್ಮ ಹೋರೆಯೆಂಬದನ್ನು ಶಿಕ್ಷಕರಾದ ನಾವು ಮರತು ಬಿಡುವೆವ
ನಾವೆಲ್ಲರು ಕೂಡಿ ಸ್ಥಾಪಿಸುವ ಈ ಮಂಡಲದಲ್ಲಿ ನಿಬಂಧಗಳನ್ನು ಓದಬಾ
ರದೆಂದೂ ವ್ಯಾಖ್ಯಾನಗಳನ್ನು ಕೊಡಲೇ ಬಾರದೆಂದೂ ನಾನು ಹೇಳುವ
ದಿಲ್ಲ. ಆದರೆ ಅವು ಮುಖ್ಯ ಶಿಕ್ಷಕರು ಹಾಗು ಅವರ ಸಹಾಯಕರು, ಪರಿ
ಕ್ಷಕರು ಮತ್ತು ಪದ್ಧತಿಗಳು ಮುಂತಾದ ವಾದದಿಂದ ಕೊನೆಮುಟ್ಟದ ಪ್ರಶ್ನ
ಗಳ ಬಗ್ಗೆ ಇರಬಾರದು. ಸ್ಲಾಯಿಡ, ಪ್ರಕೃತಿ ವಿಮರ್ಶೆ ಮೊದಲಾದ ನಾ
ತನ ವಿಷಯಗಳು ಅವುಗಳನ್ನು ಕಲಿಸುವ ಪದ್ಧತಿಗಳು ಮುಂತಾದವುಗಳ
ಬಗ್ಗೆ ಇರಬಹುದು.

ಅಸಂಖ್ಯ ಕಾರಣಗಳಿಂದ, ಮುಖ್ಯವಾಗಿ ವಿದ್ಯೆಯಬಗ್ಗೆ ನಾವಾನು
ಜನರು ತೋರಿಸುವ ಅನಾದರದಿಂದ ನಮ್ಮಲ್ಲಿ ಶಿಕ್ಷಕಶಿಕ್ಷಿಕೆಯರಿ
ತಕ್ಕ ಗೌರವವು ಇಲ್ಲದಾಗಿದೆ. ಆದರೂ ಎಷ್ಟೋ ಕನ್ನಡ ಶಿಕ್ಷಕಶಿಕ್ಷಿ
ಯರು ತಮಗಿರುವ ಎಲ್ಲ ಅನನುಕೂಲತೆಗಳನ್ನು ಸಹಿಸಿಕೊಂಡು ಶಿಕ್ಷಣ
ಕಾರ್ಯದಲ್ಲಿ ಮನಸು ಹಾಕಿ ತಮ್ಮ ವಿದ್ಯಾರ್ಥಿಗಳ ಉತ್ಕರ್ಷಕ್ಕಾಗಿ ಮಾ
ಮುಟ್ಟಿ ಯತ್ನಿಸುತ್ತಿರುವದನ್ನು ನಾನು ಪ್ರತ್ಯಕ್ಷ ನೋಡಿರುವೆನು. ಇವರ
ಮಂಡಲದ ಉದ್ದೇಶಗಳನ್ನು ಸಾಂಗಗೊಳಿಸಲಿಕ್ಕೆ ಪ್ರಯತ್ನಿಸಿದರೆ ನವ
ಪ್ರಾಥಮಿಕ ಶಿಕ್ಷಕ ಶಿಕ್ಷಿಕೆಯರ ಯೋಗ್ಯತೆಯು ಪ್ರಕಟವಾಗಿ ಇಡಿ ಕನ್ನ
ಡನಾಡಿಗೆ ಹಿತವಾಗುವದರಲ್ಲಿ ಸಂದೇಹವಿಲ್ಲೆಂದು ನಾನು ನಂಬಿದ್ದೇನೆ.

ನಾವು ಸ್ಥಾಪಿಸಬೇಕೆಂದು ನೆರೆದಿರುವ ಮಂಡಲಕ್ಕೆ ಮಧ್ಯಮ ಪ್ರಾ
ಥಮಿಕ ಶಿಕ್ಷಣ ಕಾರ್ಯದಲ್ಲಿ ತೊಡಗಿರುವ ಶಿಕ್ಷಕರೂ ಸಂಪೂರ್ಣ ಸಹಾನುಭೂ
ತಿಯನ್ನು ತೋರಿಸತಕ್ಕದ್ದು. ಮೂರು ವರ್ಗದ ಶಿಕ್ಷಕರಲ್ಲಿ ಒಬ್ಬರು ಇನ್ನೊ
ಬ್ಬರ ಮೇಲೆ ದೋಷದ ಹೊರೆಯನ್ನು ಚೆಲ್ಲುತ್ತಿರುವರು. ಆದರೆ ಇದರಿಂ
ಪರಸ್ಪರ ತಿರಸ್ಕಾರವು ಮಾತ್ರ ಹುಟ್ಟಿರುವದಲ್ಲದೆ ಏನೂ ಪ್ರಯೋಜನವ
ಗಿಲ್ಲವೆಂಬದನ್ನು ನನ್ನ ಸಹೋದ್ಯೋಗಿಗಳು ಲಕ್ಷ್ಯದಲ್ಲಿಡುವರೆಂದು ಕೋರಿ

ನೇ. ಇತ್ತೀಚೆಲಾಗಿ ಶಾಲೆಗಳಲ್ಲಿ ಕಲಿಸುವ ವಿಷಯಗಳ ಸಂಖ್ಯೆಯು ಬ್ಬಾಗುತ್ತಿರುವದರಿಂದ ಎಲ್ಲರ ಲಕ್ಷವು ವಿಷಯಗಳಕಡೆಗೆ ಎಳೆಯುತ್ತಿವದು. ವಿಷಯಗಳು ಬದಲಾಗುತ್ತ ಹೋದರೂ ಕಲಿಯುವ ವಿದ್ಯಾರ್ಥಿಯು ಮೊದಲಿನಿಂದ ಕಡೆತನಕ ಒಬ್ಬನೇ ಇರುವನೆಂಬದನ್ನು ನೆನಪಿನಲ್ಲಿಟ್ಟರೆ ಮಧ್ಯಮವರ್ಗದ ಶಿಕ್ಷಕರು ಪ್ರಾಥಮಿಕ ಶಿಕ್ಷಕರ ಕಾರ್ಯದಲ್ಲಿ ಹಾನುಭೂತಿಯನ್ನಷ್ಟೇ ಅಲ್ಲ, ಸಂಪೂರ್ಣಸಹಾಯವನ್ನೂ ಒದಗಿಸಿಕೊಡತಕ್ಕದ್ದೆಂಬದು ಸ್ಪಷ್ಟವಾಗುವದು.

ಒಟ್ಟಿನ ಮೇಲೆ ಪ್ರಾ. ಶಿಕ್ಷಕ ಶಿಕ್ಷಿಕೆಯರು ತಮ್ಮ ಕರ್ತವ್ಯದ ಮಹತ್ವವನ್ನೂ ಜವಾಬುದಾರಿಯನ್ನೂ ಅರಿತುಕೊಂಡು ಸದ್ಯಕ್ಕೆ ಕೈಕೊಂಡ ಮಂಡಲಸ್ಥಾಪನೆಯ ಕಾರ್ಯದಲ್ಲಿ ತಮಗೆ ಯಶಸ್ಸು ಬರುವಂತೆಯೂ ನ್ನು ವಿದ್ಯಾರ್ಥಿಗಳ ಕಲ್ಯಾಣವಾಗುವಂತೆಯೂ ಕರ್ನಾಟಕದ ಉತ್ಕರ್ಷವಾಗುವಂತೆಯೂ ಮನಮುಟ್ಟಿ ಕೆಲಸ ಮಾಡುವರೆಂದೂ ಮಧ್ಯಮ ವರ್ಗ ಶಿಕ್ಷಕರು ಇವರಿಗೆ ಕೈಲಾದಷ್ಟು ಸಹಾಯವಾಡುವರೆಂದೂ ನಂಬಿರುನು.

ಈ ಬಳಿಕ ಮಂಡಲದ ಉದ್ದೇಶಗಳನ್ನೂ ಕಾರ್ಯಕ್ರಮವನ್ನೂ ರ್ಚಿಸಿ ಸರ್ವಾನುಮತದಿಂದ ನಿಶ್ಚಯಿಸಿದ್ದಾಯಿತು.

ಮಂಡಲದ ಉದ್ದೇಶಗಳು.

:o:

೧. ಕನ್ನಡ ಪ್ರಾಥಮಿಕ ಶಾಲೆಗಳಲ್ಲಿ ಕಲಿಸುವ ಯೋಗ್ಯಪದ್ಧತಿಗಳನ್ನು ಪ್ರತ್ಯಕ್ಷ ಅನುಭವದಿಂದ ನಿರ್ಣಯಿಸುವದು. ೨. ಭಾವೀ ಶಿಕ್ಷಕ ಶಿಕ್ಷಿಕೆಯರ ಮುಂದೆ ಮಾದರಿಗಾಗಿ ಪಾಠಗಳನ್ನು ಕಲಿಸಿ ತೋರಿಸುವದು. ಶಿಕ್ಷಕ ಶಿಕ್ಷಿಕೆಯರಿಗೆ ತಮ್ಮ ಕೆಲಸದಲ್ಲಿ ಸಹಕಾರಿಯಾಗಿರುವ ಶಿಕ್ಷಣಪಯುಕ ಗ್ರಂಥಗಳನ್ನೂ, ಮಾಹಿತಿಯನ್ನೂ ಒದಗಿಸಿಕೊಡುವದು, ೪. ರ್ನಾಟಕ ವಿದ್ಯಾಭಿವೃದ್ಧಿಗೆ ಸಾಧ್ಯವಿರುವ ಮಟ್ಟಿಗೆ ಸಹಾಯವಾಡುವ ೫. ಮಂಡಲಕ್ಕೆ ಸಮ್ಮತವೆನಿಸುವ ಪದ್ಧತಿಯಿಂದ ವಿದ್ಯಾರ್ಥಿಗಳಿಗೆ ಸುವಂಥ ಒಂದು ಸ್ವತಂತ್ರವಾದ ಶಾಲೆಯನ್ನು ಸ್ಥಾಪಿಸುವದು.

ಮಂಡಲದ ಕಾರ್ಯಕ್ರಮವು.

:(0):

(ಅ) ಪ್ರತಿವರ್ಷ ೨ ಸಾರೆ ಅಂದರೆ ಏಪ್ರಿಲ ಹಾಗು ನವೆಂಬರ

ತಿಂಗಳುಗಳಲ್ಲಿ ಶಿಕ್ಷಕ ಶಿಕ್ಷಕಿಯರ ಸಮ್ಮೇಲನಗಳನ್ನು ಕೂಡಿಸಿ, ಪಾಠಗಳನ್ನು ಕಲಿಸಿ ತೋರಿಸುವ ವ್ಯವಸ್ಥೆ ಮಾಡುವದು.

(ಬ) ಅನುಭವಿಕರೂ ಉತ್ಸಾಹಿಗಳೂ ಆದ ಶಿಕ್ಷಕಶಿಕ್ಷಕಿಯರು ಪಾಠ ಕಲಿಸಿತೋರಿಸುವ ಇಚ್ಛೆಯನ್ನು ತೋರಿಸಿದರೆ ನಡುವೆಯೂ ಅವರಿಗೆ ತಕ್ಕ ಅನುಕೂಲಗಳನ್ನು ಒದಗಿಸಿ ಕೊಡುವದು.

(ಕ) ವಿಶೇಷ ಮಹತ್ವವುಳ್ಳ ಶಿಕ್ಷಣ ವಿಷಯಕ ಪ್ರಶ್ನೆದ ಬಗ್ಗೆ ವಿದ್ವಾಂಸರು ನಿಬಂಧಗಳನ್ನು ಬರೆದು ಓದಲಪೇಕ್ಷಿಸಿದರೆ ಕಾಲಾನುಕೂಲವಿರುವಂತೆ ಸಮ್ಮೇಲನಗಳಲ್ಲಾಗಲಿ ಇತರ ಸಮಯಗಳಲ್ಲಾಗಲಿ ವ್ಯವಸ್ಥೆ ಮಾಡುವದು.

(ಡ) ಶಿಕ್ಷಕ ಶಿಕ್ಷಕಿಯರಿಗೆ ಉಪಯುಕ್ತವಾದ ಕನ್ನಡ, ಮರಾಠಿ ಗ್ರಂಥಗಳ ಒಂದು ಪುಸ್ತಕಾಲಯವನ್ನು ಸ್ಥಾಪಿಸಿ ಮಂಡಲದ ಸಭಾಸದರಿಗೆ ಅವುಗಳನ್ನು ಒದಗಿಸಿಕೊಡುವದು. ಶಿಕ್ಷಣಪದ್ಧತಿಗೆ ಸಂಬಂಧಿಸಿದ ಮಾಹಿತಿಯನ್ನು ದೊರಕಿಸಲಿಕ್ಕೆ ಮಾರ್ಗ ತೋರಿಸುವದು; ಶಿಕ್ಷಕ ಶಿಕ್ಷಕಿಯರಿಗೆ ಉಪಯುಕ್ತ ವಿಷಯಗಳ ಬಗ್ಗೆ ಸಣ್ಣ ಸಣ್ಣ ಪುಸ್ತಕಗಳನ್ನು ಪ್ರಕಟಿಸಿ ಮಂಡಲದ ಸಭಾಸದರಿಗೆ ಹಂಚುವದು. ದ್ರವ್ಯಾನುಕೂಲವು ಒದಗಿದರೆ ಮಂಡಲದಿಂದ ಒಂದು ಶಿಕ್ಷಣ ಪತ್ರಿಕವನ್ನು ಪ್ರಸಿದ್ಧಮಾಡುವದು.

(ಇ) ದ್ರವ್ಯ ಸಹಾಯಮಾಡುವವರೂ ಮಂಡಲಕ್ಕೆ ಸಮ್ಮತವೆನಿಸುವ ಪದ್ಧತಿಯಿಂದಲೇ ಕಲಿಸಲಿಕ್ಕೆ ಸಿದ್ಧರಾದ ಶಿಕ್ಷಕ ಶಿಕ್ಷಕಿಯರೂ ದೊರೆತರೆ ಒಂದು ಶಾಲೆಯನ್ನು ಸ್ಥಾಪಿಸುವದು.

ಮಂಡಲಕ್ಕೆ ಒಬ್ಬ ಅಧ್ಯಕ್ಷರೂ ಇಬ್ಬರು ಉಪಾಧ್ಯಕ್ಷರೂ (ಒಬ್ಬರು ಹೆಂಗಸರು) ಒಬ್ಬ ಕಾರ್ಯದರ್ಶಿ, ಒಬ್ಬ ಕೋಶಾಧ್ಯಕ್ಷ, ೧೪ ಜನ ಕಾರ್ಯ ನಿರ್ವಾಹಕ ಸಭೆಯ ಸಭಿಕರು ಇರಬೇಕೆಂದೂ, ೫೦ ರೂಪಾಯಿ ಇಲ್ಲವೆ ಹೆಚ್ಚು ಹಣವನ್ನು ಕೊಡುವವರು ಆಶ್ರಯದಾತರೆಂದೂ, ೨೫ರಿಂದ ೫೦ ರೂಪಾಯಿಗಳವರೆಗೆ ಕೊಡುವವರು ಆಜೀವ ಸಭಾಸದರೆಂದೂ ೫ರಿಂದ ೨೫ ರೂಪಾಯಿಗಳ ವರೆಗೆ ಕೊಡುವವರು ಸಹಾಯಕರೆಂದೂ ಪ್ರತಿವರ್ಷ ಒಂದು ರೂಪಾಯಿ ಕೊಡುವವರು ಮಂಡಲದ ಸಭಾಸದರೆಂದೂ, ನಿ

ಯಿಸಲ್ಪಟ್ಟಿತು. ಹಾಗು ಮುಂದೆ ಕಾಣಿಸಿದ ಸದ್ಗೃಹಸ್ಥರೂ ಸಭ್ಯಸ್ತ್ರೀಯರೂ ಮಂಡಲಕ್ಕೆ ಸಹಾಯವಮಾಡಲು ಸಮ್ಮತಿಸಿದರು.

೧. ಮಿ. ಏ ಜೆ. ಬಾಂಗಿ. ಪ. ಅ. ಎ. ಇ. ದ. ಭಾಗ

೨. ಮಿ. ಹ್ಹಿ. ಡಿ. ನವಲಗುಂದ ಪೆ. ಅ. ಡೆ. ಎ. ಇ. ಧಾರವಾಡ.

ಮಿಸೆಸ್. ರಮಾಬಾಯಿ, ವೆಂಕಟ ಲಕ್ಷ್ಮಮ್ಮಾ, ಲಿಂಗವ್ವ, ಗದಿಗೆವ್ವ ಬಸಲಿಂಗವ್ವ, ಚಿನಾಬಾಯಿ, ತಿಪ್ಪವ್ವ, ರೇವಕ್ಕ, ಮಲಪುರೆವ್ವ, ಅಕ್ಕವ್ವ, ಕಾಳವ್ವ, ಶಂಕರವ್ವ, ಗಂಗವ್ವ, ಮುಲ್ಲವ್ವ, ಕುಪ್ಪಮ್ಮ, ಚನವೀರವ್ವ, ಮಿಸ್ ಮಾರ್ಸೆಲೀನ ಲೀಮ

ಸಭಾಸದರು.

ಮೇಲೆ ಹೇಳಿದವರಲ್ಲದೆ,

ಮೆಸರ್ಸ ಹುಕ್ಕೇರಿಕರ ಎಮ್. ಏ, ತೆರಗುಂಡಿ ಎಮ್. ಏ. ದಿವೇಕರ ಬಿ. ಏ, ರಾಮಬ್ರುವ್ಹ ಬಿ. ಏ. ಕೋಲ್ಹಟಕರ ಬಿ. ಏ. ಮಗದಾಲ ಬಿ. ಏ. ಪುರೋಹಿತ ಬಿ. ಏ. ಧಾರವಾಡಕರ ಬಿ. ಏ. ತಪ್ಪಿ ಬಿ. ಏ. ಮೊರಬ ಬಿ. ಏ. ಕದಡಿ, ಕಲಿವಾಳ, ಕಾಳೆ, ಪತ್ತಾರ, ಕೊರಬು, ಹಿರೇಗೌಡರ, ಕಟ್ಟಿ ಮನಿ, ಕುರಡಿ, ಬೋಳೆ, ದೇಶಪಾಂಡೆ, ಗಂಗಾಧರ ಮಠ, ಜೋಸಿ, ಜಾತಿ ಗೇರ, ಎಸ್. ಹ್ಹಿ. ಕುಲಕರ್ಣಿ, ಕವರಿ, ಕಟ್ಟಿ, ಸಾವಕಾರ, ಅರ್ಚಿಕ, ಉಧ್ಯಾವಕ, ಚನವನಗೌಡರ, ಕ್ಲಾರ್ಕ ಡಿಸ್ಟ್ರಿಕ್ಟ ಕೋರ್ಟ. ಹ. ಭಿ. ಕುಲಕರ್ಣಿ, ಅವ್ಮಿನಭಾವಿ, ನಾಡಿಗೇರ, ನಾಯಿಕ, ಶೆಟ್ಟಿ, ಜಹಾಗೀರದಾರ, ಸಾವಕಾರ, ಐರಣಿ, ತಾಳೀಕೋಟಿ, ಶಿರಕೋಳ, ಮುರಡೂರ, ವೈದ್ಯ ಮುರಕೀಭಾವಿ, ಕಾಳಪ್ಪನವರ, ದೀಕ್ಷಿತ, ಬುರ್ಗೆ, ದೇಶಪಾಂಡೆ, ಮಿಸೆಸ್ ರೆವ್ವ, ಚನಬಸವ್ವ, ಮಿ. ಹಳೇಪೇಟಿ, ಈ ಜನರು ಮಂಡಲದ ಸಭಾ ದರಾಗಲು ಒಪ್ಪಿಕೊಂಡಿರುವರು.

ಆಜೀವ ಸಭಾಸದರು.

೧. ರಾವಸಾಹೇಬ ಕೆ. ಎಸ್ ಹುನಗುಂದ. ಬಿ. ಎ.

೨. ರಾವಸಾಹೇಬ. ಆರ್ ಎಸ್. ಕುಲಕರ್ಣಿ, ಪ್ರಿನ್ಸಿಪಾಲ. ಟ್ರೇ. ಕಾ. ಧಾರವಾಡ.

೩. ಮಿಸ್. ಎಫ್. ಎಲ್. ಮೆಕಾಫೀ. ಲೇಡೀ ಸು. ಟ್ರೇ. ಕಾ. ಫಾರ್ ವಿಮೆನ್,

ಅಬಳಿಕ ಮಂಡಲದ ಅಧಿಕಾರಸ್ಥರನ್ನು ಸರ್ವಾನುಮತದಿಂದ ಆರಿಸುವದಾಯಿತು.

ಅಧ್ಯಕ್ಷರು.

ಮಿ. ಕೃಷ್ಣರಾವ. ಹುನಗುಂದ ಬಿ. ಎ.

ಉಪಾಧ್ಯಕ್ಷರು.

ಮಿ. ರಾಮರಾವ. ಕುಲಕರ್ಣಿ ಎಲ್. ಸಿ. ಇ.
ಮಿಸ್. ಎಫ್. ಎಲ್. ಮೆಕಾಫಿ.

ಕಾರ್ಯದರ್ಶಿ.

ಮಿ. ವೆಂಕಟರಾವ ಮಗದಲ ಬಿ. ಎ.

ಕೋಶಾಧ್ಯಕ್ಷ.

ಮಿ. ಬೋಧರಾವ ಪುರೋಹಿತ. ಬಿ. ಎ.

ಕಾರ್ಯನಿರ್ವಾಹಕ ಸಭೆಯವರು.

ಮೆಸರ್ಸ ಹುಕ್ಕೇರಿಕರ, ತೆರಗುಂಡಿ, ನವಲಗುಂದ, ಪತ್ತಾರ, (ವಿಜಾಪುರ) ಮುರಕೀಭಾವಿ (ಬೆಳಗಾವ), ಅಮ್ಮಿನಭಾವಿ, (ಧಾರವಾಡ), ಕದಡಿ, ಏರಣಿ, ಕಲಿವಾಳ, ವೈದ್ಯ, ನಾಡಿಗೇರ, ಮಿಸೆಸ ರಮಾಬಾಯಿ, ವೆಂಕಟ ಲಕ್ಷ್ಮವ್ಮಾ, ಲಿಂಗವ್ವ.

ಇನ್ನು ಒಂದು ವಾರದೊಳಗೆ ಕಾರ್ಯನಿರ್ವಾಹಕ ಸಭೆಯವರು ಕೂಡಿ ಮುಂದಿನಕೆಲಸವನ್ನು ಆರಂಭಿಸಬೇಕೆಂದು ಸರ್ವಾನುಮತದಿಂದ ನಿಶ್ಚಿತವಾಯಿತು. ಸಾಮ್ರಾಜ್ಯವು ಯುದ್ಧದಂಥ ಕಠಿಣ ಪ್ರಸಂಗದಲ್ಲಿ ತೊಡಗಿದ್ದರೂ ನಾವೆಲ್ಲರೂ ನಮ್ಮ ನಮ್ಮ ಕರ್ತವ್ಯಗಳನ್ನು ಏನೂ ತೊಂದರೆಗಳಿಲ್ಲದೆ ಮಾಡಲಿಕ್ಕೆ ಆವಶ್ಯವಿರುವ ಶಾಂತತೆಯನ್ನು ನಮ್ಮ ದೇಶಕ್ಕೆ ಒದಗಿಸಕೊಟ್ಟದ್ದಕ್ಕಾಗಿ ಜಾರ್ಜ ಪ್ರಭುಗಳ ಅಭಿನಂದನವನ್ನು ಮಾಡಿ ದೇವರು ಅವರಿಗೆ ಈ ಯುದ್ಧದಲ್ಲಿ ತೀವ್ರವಾಗಿ ಪೂರ್ಣ ಜಯವನ್ನು ಕೊಡಲೆಂದು ಬೇಡಿಕೊಂಡು ಹೆಣ್ಣುಮಕ್ಕಳ ಟ್ರೇ. ಕಾಲೇಜದ ಶಿಕ್ಷಿಕೆಯರು ರಾಷ್ಟ್ರಗೀತವನ್ನು ಅಂದಬಳಿಕ ಸಭಾ ವಿಸರ್ಜನವಾಯಿತು.

ಪತ್ರಗಳ ಸಾರಾಂಶ.

+※:(0):※+

ಗದಗ ತಾಲೂಕ ಹಮ್ಮಗಿಯ ಕನ್ನಡ ಶಾಲೆಯಲ್ಲಿ ತಾರೀಖು ೮|೩|೧೯೧೩ನೇ ದಿವಸ ಕೂಡಿದ ಶಿಕ್ಷಿಕೆಯರ ಸಮ್ಮೇಲನದಲ್ಲಿ ಎಷ್ಟೋ ಉಪಯುಕ್ತ ವಿಷಯಗಳ ಬಗ್ಗೆ ಚರ್ಚೆಯಾಯಿತೆಂತಲೂ, ಆ ಬಗ್ಗೆ ಸವಿಸ್ತರ ರಿಪೋರ್ಟನ್ನು ಮೆ. ಲೇಡೀ ಸು. ಫೀಮೇಲ ಟ್ರೇನಿಂಗ ಕಾಲೇಜ, ಧಾರವಾಡ ಇವರ ಕಡೆಗೆ ಕಳಿಸಿತೆಂತಲೂ, "ಅಡಿವೆಪ್ಪ ಚಿಂತಿ" ಸ್ಕೂಲ ಪಂಚ ಇವರು ತಿಳಿಸುತ್ತಾರೆ.

ಧಾರವಾಡ ಜಿಲ್ಹೆಯ ದೇವಗಿರಿ ಶಾಲೆಯ ಬಕ್ಷಿಸ ಸಮಾರಂಭಕ್ಕೂ ಪುಅರ ಫಂಡಿಗೂ ಕೆಳಗೆ ಬರೆದ ಉದಾರ ಗೃಹಸ್ಥರು ದ್ರವ್ಯದ್ವಾರ ಸಹಾಯ ಮಾಡಿದರೆಂದು, ಅಲ್ಲಿಯ ಅಸಿ. ಮಾಸ್ತರ "ಗಲಗಲಿ" ಎಂಬವರು ತಿಳಿಸುತ್ತಾರೆ.

೧.	ರಾ. ಚನಬಸಪ್ಪ ಅಣ್ಣಾ ಶೆಟ್ಟರ ಪುಅರ ಫಂಡಿಗೆ	೫-೦-೦
೨.	ಮೆ. ೩ನೇ ಅಸಿ. ಕಲೆಕ್ಟರ ಸಾ. ಬಾ. ಸದರ	೨-೦-೦
೩.	ನಾ. ವೆಂಕಣ್ಣಾ ನಾಯಿಕ ರಾಣೇಬೆನ್ನೂರ ಸದರ	೫-೦-೦
೪.	ಊರೊಳಗಿನ ಪ್ರಮುಖರು ಬಕ್ಷಿಸ ಸಮಾರಂಭಕ್ಕೆ	೯-೦-೦
		೨೧-೦-೦

ವಿದ್ಯಾಖಾತೆಯ ನೋಟೀಸುಗಳು.

———:0:———

ಧಾರವಾಡ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರುವ ಸವಂಬರ ತಿಂಗಳ ೧ನೆಯ ತಾರೀಖಿನಿಂದ ೩ನೆಯ ತಾರೀಖಿನವರೆಗೆ ಪ್ರತಿದಿವಸ ಮುಂಜಾನೆ ೧೧॥ ಘಂಟೆಯಿಂದ ನಡೆಯುವದು. ಪರೀಕ್ಷೆಗೆ ಕೂಡ್ರಲಿಚ್ಛಿಸುವ ವಿದ್ಯಾರ್ಥಿನಿಯರು ತಮ್ಮ ಜಿಲ್ಹೆಯ ಡೆಪುಟಿ ಎಜ್ಯುಕೇಶನಲ್ ಇನಸ್ಪೆಕ್ಟರರವರ ಮುಖಾಂತರ ತಮ್ಮ ಅರ್ಜಿಗಳನ್ನು ಅಕ್ಟೋಬರ ತಿಂಗಳ ೧೫ನೇ ತಾರೀಖಿನ ದಿವಸ ಅಥವಾ ಅದಕ್ಕೂ

ಪೂರ್ವದಲ್ಲಿ ನಮಗೆ ಮುಟ್ಟುವಂತೆ ಕಳಿಸತಕ್ಕದ್ದು. ಅರ್ಜಿದಾರರು ತಮ್ಮ ಅರ್ಜಿಯು ಸಂಗಡ ನಡತೆಯ ಬಗ್ಗೆ ಯಾವನೊಬ್ಬ ಸರಕಾರೀ ಅಧಿಕಾರಸ್ತನ ಇಲ್ಲವೆ ವಿದ್ಯಾಖಾತೆಯ ಜವಾಬುದಾರನಾದ ಅಮಲದಾರನ ಸಹಿಯುಳ್ಳ ಒಂದು ಸರಟ್ಟಿಫಿಕೇಟನ್ನು ಕಳಿಸತಕ್ಕದ್ದು. ವಿದ್ಯಾರ್ಥಿನಿಯರು ಪರೀಕ್ಷೆಗೆ ಬರುವಾಗ ತಾವು ಕಲಿಯುತ್ತಿದ್ದ ಶಾಲೆಯಿಂದ ಲೀವ್ಹಿಂಗ ಸರ್ಟಿಫಿಕೇಟನ್ನು ತರತಕ್ಕದ್ದು.

ಪ್ರವೇಶ ಪರೀಕ್ಷೆಯಲ್ಲಿ ಪಾಸಾದವರನ್ನು ಸ್ಕಾಲರಶಿಪ್ಪು ಕೊಟ್ಟು ಕಾಲೇಜದ ಮೊದಲನೇ ವರ್ಷದ ಕ್ಲಾಸಿಗೆ ತೆಗೆದುಕೊಳ್ಳುವೆವು. ಇಂಥ ವಿದ್ಯಾರ್ಥಿನಿಯರು, ಕಾಲೇಜದಲ್ಲಿ ಮೂರು ವರ್ಷ ಕಲಿತನಂತರ ವಿದ್ಯಾಖಾತೆಯಲ್ಲಿ ಕೆಲಸ ಮಾಡಲಿಕ್ಕೆ ತಮ್ಮ ಒಪ್ಪಿಗೆ ಇರುವದೆಂದು ಇವರ ಪಾಲಕರು (ಲಗ್ನವಾಗಲ್ಲಿ ಗಂಡನು, ಇಲ್ಲವೆ ತಂದೆ, ಕಕ್ಕ ಮುಂತಾದವರು) ಕರಾರ ಪತ್ರವನ್ನು ಬರೆದು ಕೊಡಬೇಕಾಗುವದು. ಪ್ರವೇಶ ಪರೀಕ್ಷೆಯಲ್ಲಿ ನಾಪಾಸಾದ ವಿದ್ಯಾರ್ಥಿನಿಯರನ್ನು ಕಾಲೇಜದ ತಯಾರಿ ವರ್ಗಕ್ಕೆ ತೆಗೆದುಕೊಂಡು ಅವರಿಗೆ ಕಡಿಮೆ ಬೆಲೆಯ ಸ್ಕಾಲರಶಿಪ್ಪು ಕೊಡಲಾಗುವದು.

ಸರಕಾರೀ ಸ್ಕಾಲರ ಶಿಪ್ಪು ತೆಗೆದುಕೊಂಡು ತಯಾರಿ ಕ್ಲಾಸಿನಲ್ಲಿ ಅಭ್ಯಾಸ ಮಾಡಲಿಚ್ಛಿಸುವ ವಿದ್ಯಾರ್ಥಿನಿಯರ ಪರೀಕ್ಷೆಯಾದರೂ ತಾರೀಖು ೧ ರಿಂದ ೩ ನೆಯ ನವಂಬರದವರೆಗೆ ಹೆಣ್ಣುಮಕ್ಕಳ ನಾಲ್ಕನೆಯ ಇಯತ್ತೆಯಂತೆ ತೆಗೆದುಕೊಳ್ಳಲ್ಪಡುವದು. ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿನಿಯರಿಗೆ ಸರಕಾರೀ ಸ್ಕಾಲರಶಿಪ್ಪು ದೊರೆಯುವದು. ಸದರಿ ವಿದ್ಯಾರ್ಥಿನಿಯರು ಕಾಲೇಜದ ಅಭ್ಯಾಸವನ್ನು ಮುಗಿಸಿದ ಬಳಿಕ ಸರಕಾರೀ ಶಾಲೆಗಳಲ್ಲಿ ಕೆಲಸ ಮಾಡುವಬಗ್ಗೆ ತಮ್ಮ ಒಪ್ಪಿಗೆಇರುವದೆಂದು ಇವರ ಪಾಲಕರಾದರೂ ಕರಾರು ಬರೆದು ಕೊಡಬೇಕಾಗುವದು.

ಟ್ರೇನಿಂಗ ಕಾಲೇಜ ಫಾರ್ ಲೇಪನ್
ಧಾರವಾಡ, ೨೩-೨-೧೯೧೭.

F. L. McAfee.
Lady Superintendent

ಪ್ರಾಥಮಿಕ ಶಾಲೆಗಳಿಗೋಸ್ಕರ ಮಂಜೂರ ಮಾಡಿದಂಥ ಈ ಕೆಳಗಿನ ಪುಸ್ತಕಗಳ ಪಟ್ಟಿಯನ್ನು ಎಲ್ಲ ಜನರ ತಿಳುವಳಿಕೆಗಾಗಿ ಪ್ರಸಿದ್ಧ ಮಾಡಿರುತ್ತದೆ.

ಕ್ರ. ನಂಬರು.	ಪುಸ್ತಕದ ಹೆಸರು.	ಪುಸ್ತಕವು ಯಾವ ಭಾಷೆಯಲ್ಲಿದೆ.	ಯಾತರ ಬಗ್ಗೆ ಮಂಜೂರ ಮಾಡಿರುತ್ತದೆ.	ಬೆಲೆ. ರು.	ಆ.	ಪೈ.	ಶರಾ.
	ಆರ್. ನರಸಿಂಹಾಚಾರ ಎಮ್. ಏ. ಬೆಂಗಳೂರ.						
೧	'ಕರ್ಣಾಟಕ ಕವಿಚರಿತ್ರೆ' ಅಥವಾ 'ಲಾಯಿಫ್ ಆಫ್ ಕನ್ನಡ ಪೊಏಟ್ಸ್ ವಾಲ್ಯೂಮ ೧.' ಆರ್. ನರಸಿಂಹಾಚಾರ ಮತ್ತು ಎಸ್. ಜೀ. ನರಸಿಂಹಾಚಾರ ಇವರು ಬರೆದದ್ದು.	ಕನ್ನಡ.	ಕನ್ನಡ ಟ್ರೇನಿಂಗ ಕಾಲೇಜುಗಳಲ್ಲಿ ಉಪಯೋಗಿಸುವದಕ್ಕೆ.	೩	೦	೦	
	ಅಬ್ದುಲ್ ಕಾದಿರ ಇಬ್ರಾಹಿಮಜಿ, ಪೂಣಾ ಸಿಟಿ.						
೨	'ಮುಂಬಯಿ ನಡುಗಡ್ಡೆಯ ಸಕಾಶೆಯು' (ಸಕ್ಶಾ-ಇ-ಜಝೀರಾ-ಇ-ಬೊಂಬಾಯಿ.)	ಉರ್ದು.	ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವದಕ್ಕೆ.	೧	೦	೦	

	ಜೋತಿ. ಆರ್.ಎಮ್. ಎಮ್. ಏ. ಎಲ್.ಎಲ್.ಬಿ.						
	ಮುಂಬಯಿ.						
೩	'ಉರ್ದು ಆರೋಗ್ಯ ವಿಜ್ಞಾನ.'	ಉರ್ದು.	ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವದಕ್ಕೆ.	೦	೫	೦
	ಮೌಲವಿ ಅಬ್ದುಸ್ಸತ್ತಾರ ಖಾನ, ಪೂಣಾ ಸಿಟೀ.					
೪	'ಉರ್ದುಕಾ ಕಾಯದಾ ಪಹಿಲಾ ಹಿಸ್ಸಾ, (ಉರ್ದು ಹೊಸ ಮೊದಲನೆಯ ಪುಸ್ತಕ ಭಾಗ ೧.)	,,	ಸದರ.	೦	೦	೬
೫	ಉರ್ದುಕಾ ಕಾಯದಾ ದೂಸರಾ ಹಿಸ್ಸಾ, (ಉರ್ದು ಹೊಸ ಮೊದಲನೆಯ ಪುಸ್ತಕ ಭಾಗ ೨.)	,,	ಸದರ.	೦	೦	೭
	ಏ. ಸಿಯಾನಲಾಲ ಎಂಡ ಸನ್ಸ. ಆಗ್ರಾ.					
೬	'ಉರ್ದು ಕಾಪೀ ಪುಸ್ತಕ ನ. ೧. ಎಮ್. ಏ. ಹಮೀದ ಖಾನ ಇವರಿಂದ ರಚಿತವಾದದ್ದು.	,,	ಸದರ.	೦	೧	೮
೭	ಉರ್ದು ಕಾಪೀ ಪುಸ್ತಕ ನ. ೨. ಎಮ್. ಏ. ಹಮೀದ ಖಾನ ಇವರಿಂದ ರಚಿತವಾದದ್ದು.	,,	ಸದರ.	೦	೧	೦
೮	ಸದರ ನ. ೩.	ಸದರ.	,,	ಸದರ.	೦	೧	೦
೯	ಸದರ. ನ. ೪.	ಸದರ.	,,	ಸದರ.	೦	೧	೦

	ರಾಯ ಸಾಹಿಬ ಎಮ್. ಗುಲಾಬಸಿಂಗ ಎಂಡ ಸನ್ಸ. ಲಾಹೋರ.					
೧೦	ಅಂಕಗಣಿತದ ಚಿಕ್ಕ ಪುಸ್ತಕ ಭಾಗ ೧. (ಹಿಸಾಬ ಕಾ ಕಿತಾಬ ಹಿಸ್ಸಾ-ಇ-ಅವ್ವಲ) ಲಾಲಾ ದೇವೀ ದಯಾಳ ಮತ್ತು ಲಾಲಾ ಶಿವ ದಯಾಳ ಇವರು ರಚಿಸಿದ್ದು.	ಉರ್ದು.	ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವದಕ್ಕೆ.	೦	೪	೪
೧೧	ಅಂಕಗಣಿತದಚಿಕ್ಕಪುಸ್ತಕ. ಭಾಗ ೨ (ಹಿಸಾಬಕಾ ಕಿತಾಬ ಹಿಸ್ಸಾ–ಇ ದುಯ್ಯುಮ್) ಲಾಲಾ ದೇವಿ ದಯಾಳ ಮತ್ತು ಲಾಲಾ ಶಿವದಯಾಳ ಇವರು ರಚಿಸಿದ್ದು.	,,	ಸದರ.	೦	೪	೫
೧೨	ಅಂಕಗಣಿತದ ಚಿಕ್ಕ ಪುಸ್ತಕ. ಭಾಗ ೩ (ಹಿಸಾಬಕಾ ಕಿತಾಬ ಹಿಸ್ಸಾ-ಇ-ಸಿವ್ವುಮ್) ಲಾಲಾ ದೇವೀ ದಯಾಳ ಮತ್ತು ಲಾಲಾ ಶಿವದಯಾಳ ಇವರು ರಚಿಸಿದ್ದು.	,,	ಸದರ.	೦	೪	೫
೧೩	ಸುಧಾರಿಸಿದ ಅಂಕಗಣಿತ- ವ್ಯಾವಹಾರಿಕ ಮತ್ತು ಔಪಪತ್ತಿಕ, ಭಾಗ ೨ ಮತ್ತು ೩. (ಹಿಸಾಬಕಾ ದುಸರಾ ವಾ ತಿಸರಾ ಹಿಸ್ಸಾಅಮಲಿವಾ ಔಹನಿ) ಜಿ. ಎಸ್ ಚವುಲಾ ಎಮ್. ಏ. ಬಿ. ಏ. (ಕಂತಾಬ) ಇವರಿಂದ ರಚಿತವಾದದ್ದು.	,,	ಸದರ.	೦	೩	೬

೧೪	ಸುಧಾರಿಸಿದ ಅಂಕಗಣಿತ-ವ್ಯಾವಹಾರಿಕ ಮತ್ತು ಔಪ ಪತ್ತಿಕ, ಭಾಗ ೪. (ಹಿಸಾಬಕಾ ಚವುಥಾ ಹಿಸ್ಸಾ ಅಮಲಿ ವಾ ಝಿಹನಿ) ಜಿ. ಎಸ್. ಚವುಲಾ. ಎಮ್. ಎ. ಬಿ. ಎ. (ಕ್ಯಾಂಟರ್ಬರಿ) ಇವರಿಂದ ರಚಿತವಾದದು.	ಉರ್ದು.	ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವದಕ್ಕೆ.	೦	೨	೧೦
೧೫	ಸುಧಾರಿಸಿದ ಅಂಕಗಣಿತ- ವ್ಯಾವಹಾರಿಕ ಮತ್ತು ಔಪ ಪತ್ತಿಕ ಭಾಗ ೫ (ಹಿಸಾಬಕಾ ಪಾಂಚವಾ ಹಿಸ್ಸಾ ಅಮಲಿ ವಾ ಝಿಹನಿ) ಜಿ. ಎಸ್. ಚವ್ವುಲಾ. ಎಮ್. ಎ.ಬಿ.ಎ. (ಕ್ಯಾಂಟರ್ಬರಿ) ಇವರಿಂದ ರಚಿತವಾವದ್ದು.	,,	ಸದರ.	೦	೨	೧
೧೬	ಸುಧಾರಿಸಿದ ಅಂಕಗಣಿತ- ವ್ಯಾವಹಾರಿಕ ಮತ್ತು ಔಪ ಪತ್ತಿಕ. ಭಾಗ ೬ ಮತ್ತು ೭. (ಹಿಸಾಬಕಾ ಚಾಟಾ ಔರ ಸಾತವಾ ಹಿಸ್ಸಾ ಅಮಲಿ ವಾ ಝಿಹನಿ) ಜೀ. ಎಸ್. ಚವುಲಾ ಎಮ್. ಎ. ಬಿ. ಎ. (ಕಾಂಟರ್ಬರಿ) ಇವರಿಂದರಚಿತವಾವದ್ದು.	,,	ಸಡರ.	೦	೪	೫
೧೭	ವ್ಯಾವಹಾರಿಕ ಅಂಕಗಣಿತ ಭಾಗ ೧ (ಹಿಸಾಬಕಾ ಪಹಿಲಾ ಹಿಸ್ಸಾ ಅಮಲಿ ವಾ ಝಿಹನಿ) ಜಿ. ಎಸ್. ಚವುಲಾ ಎಮ್. ಎ. ಬಿ. ಎ. (ಕಾಂಟರ್ಬರಿ) ಇವರಿಂದ ರಚಿತವಾದದ್ದು	,,	ಉರ್ದು ಶಾಲೆಗಳ ಲಾಯಬ್ರರಿಗೋಸ್ಕರ	೦	೧	೩

೮	ಕಂಠಿಯನ್ ಪ್ರೈಸ್ ಅಲಾಹಾಬಾದ. ಭಾಷಾಸಾರ ಸಂಗ್ರಹ 'ದೂಸರಾ ಭಾಗ' (ನಾಗರೀ ಸ್ಕ್ರಿಪ್ಟಿಂ) ಸಭಾ ವಿಕ್ಟೊರಿಯ ಸ್ಕೂಲ್ ಮಾಲಿ ನಂ. ೧) ರಾಮು ರಘುನಾಥ ಆಗರವಾಲಾ, ಪಬ್ಲಿಶರ್, ಅಲಾಹಾಬಾದ	ಹಿಂದೀ	ಹಿಂದೀ ಶಾಲೆಗಳಲ್ಲಿ ಉಪಯೋಗಿಸುವಹಕ್ಕೆ.	೦	೪	೦
೯	ಶ್ರೀರಾಜಾಜಾ ಸಕ್ಸೆನಾ ಹಿಂದೀ ಪ್ರೊಫೆಸರ್. ರಾಮಸಾರಾಯಣಲಾಲ ಬುಕ್‌ಸೆಲರ್, ಅಲಾಹಾಬಾದ	,,	,,	೦	೦	೦
೧೦	ಹಿಂದಿಪ್ರವೇಶಿಕಾ, ಚತುರ್ಥೀಯ ಪುಸ್ತಕ ಸ್ವಾಮಿ ಜಗದೀಶ್ವರಾನಂದರಿಂದ ರಚಿತವಾದದ್ದು.	,,	,,	೧	೮	೦
೧೧	ಇಂಗ್ಲಿಷ್ ಹಿಂದೀ ರೀಡರ ನಂ. ೧, ಅಭ್ಯಾಸ ಹಿಂದೀ ಪುಸ್ತಕ ಮೊದಲ ಭಾಗ, ಪ್ರೊಫೆಸರ್ ಡಬ್ಲ್ಯೂ ಡಬ್ಲ್ಯೂ ಪಿಯರ್ಸನ್ ರವರಿಂದ ರಚಿತವಾದದ್ದು.	,,	ಹಡಬರ.	೦	೮	೪

೨೩	‘ಕಿಂಗ ಹಿಂದೀ ರೀಡರ ನ. ೩. ಅಥವಾ ಹಿಂದೀ ಬಾಲ ಬೋಧ ತೀಸರಾ ಭಾಗ, ಚತುರ್ವೇದಿ ದ್ವಾರಕಾ ಪ್ರಸಾದ ಶರ್ಮಾ ಇವರಿಂದ ರಚಿತವಾದದ್ದು.	ಹಿಂದೀ	ಹಿಂದೀ ಶಾಲೆಗಳಲ್ಲಿ ಉಪಯೋಗಿಸುವದಕ್ಕೆ	೦	೧	೦
೨೪	‘ಕಿಂಗ ಹಿಂದೀ ರೀಡರ ನ. ೪. ಅಥವಾ ಹಿಂದೀ ಬಾಲ ಬೋಧ ಚವಥಾ ಭಾಗ, ಚತುರ್ವೇದಿ ದ್ವಾರಕಾಪ್ರಸಾದ ಶರ್ಮಾ ಇವರಿಂದ ರಚಿತವಾದದ್ದು.	,,	ಸದರ.	೦	೩	೬
೨೫	‘ಕಿಂಗ ಹಿಂದೀ ರೀಡರ ನ. ೫. ಅಥವಾ ಹಿಂದೀ ಬಾಲ ಬೋಧ ಪಾಂಚವಾ ಭಾಗ, ಚತುರ್ವೇದಿ ದ್ವಾರಕಾ ಪ್ರಸಾದ ಶರ್ಮಾ ಇವರಿಂದ ರಚಿತವಾದದ್ದು.	,,	ಸದರ.	೦	೪	೬
೨೬	ಹಿಂದೀ ಮಿಡಲ್ ರೀಡರ ಸಾಹಿತ್ಯ ವಿತಾಪ. (ನ್ಯಾಶನಲ್ ಪ್ರೆಸ ಶಿಕ್ಷಣ ಪುಸ್ತಕ ಮಾಲೆ) ಚತುರ್ವೇದಿ ದ್ವಾರಕಾ ಪ್ರಸಾದ ಶರ್ಮಾ ಇವರಿಂದ ರಚಿತವಾದದ್ದು.	,,	ಸದರ.	೦	೮	೦

ಡಿರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನರವರ
ಆಫೀಸು, ಪುಣೆ.
ಜನವರಿ ೧೯೧೭.

A. L. Covernton,

Ag. Director of Public Instruction.

ಶಾಲಾಪತ್ರಕ.

ಪುಸ್ತಕ ೫೩. | ಎಪ್ರೇಲ. ೧೯೧೭. | ಸಂಚಿಕೆ ೪.

ಪೆನಶನ್ ಪಡೆದ ರಾವಬಹಾದ್ದೂರ ವಿನಾಯಕರಾವ ಜೋಶಿ ಬಿ. ಎ. ಯವರ ಸಂಕ್ಷಿಪ್ತ ಚರಿತ್ರೆಯು.

ದಕ್ಷಿಣ ಭಾಗದ ಅಕ್ಕಿಂಗ ಎಜ್ಯುಕೇಶನಲ್ ಇನಸ್ಪೆಕ್ಟರರಾದ ರಾವ ಬಹಾದ್ದೂರ ವಿನಾಯಕರಾವ ಜೋಶಿ ಬಿ. ಏ. ಅವರು ಇದೇ ತಿಂಗಳ ೧೫ನೇ ತಾರೀಖಿನಿಂದ ಪೆನ್‌ಶನ್ ಪಡೆದು, ತಮ್ಮ ಸರಕಾರೀ ಕೆಲಸದಿಂದ ನಿವೃತ್ತರಾದರು. ಶಾಲಾಪತ್ರಕಕ್ಕೆ ವಿಶೇಷವಾಗಿ ಸಂಬಂಧಿಸಿದ ಈ ಮಹನೀಯರ ಅಲ್ಪ ಚರಿತ್ರೆಯನ್ನು ನಮ್ಮ ಪಾಠಕರಿಗೋಸ್ಕರ ಇದರ ತಿಯಲ್ಲಿ ಕೊಡುವೆವು.

ರಾವ ಬ. ವಿನಾಯಕರಾಯರ ಮೂಲ ಪುರುಷರು ರತ್ನಾಗಿರಿ ಜಿಲ್ಲೆಯೊಳಗಿನ "ಪಾಲಸೆಟ್" ಎಂಬ ಊರಲ್ಲಿರುತ್ತಿದ್ದರು. ಅಲ್ಲಿಯೇ ನಮ್ಮ ವಿನಾಯಕರಾಯರು ಸನ್ ೧೮೬೧ನೇ ಇಸವಿಯ ಮೇ ತಿಂಗಳ ೬ನೇ ತಾರೀಖಿನ ದಿವಸ ಜನ್ಮ ತಾಳಿದರು. ಪ್ರಪಂಚದ ಅಡಚಣಿಯ ಮೂಲಕ ಇವರ ಪೂರ್ವಜರು ಬಂಕಾಪೂರ ತಾಲೂಕೆನೊಳಗಿನ ಧುಂಡಶಿಯಲ್ಲಿ ಬಂದು ಇರಹತ್ತಿದರು. ಇವರು ಅಯ್ದಾರು ವರ್ಷದವರಿರುವಾಗಲೇ ಇವರ ತಂದೆಯವರು ತೀರಿಕೊಂಡರು. ಇವರ ಪ್ರಾಥಮಿಕ ಶಿಕ್ಷಣವು ಕರ್ಜಗಿಯ ಕನ್ನಡ ಶಾಲೆಯಲ್ಲಿ ಆದನಂತರ ಮುಂದಿನ ಅಭ್ಯಾಸಕ್ಕಾಗಿ ಇವರು ಧಾರವಾಡಕ್ಕೆ ಬರಬೇಕಾಯಿತು. ಮನೆಯಲ್ಲಿ ಪ್ರಪಂಚ ಸಾಗಿಸಿಕೊಂಡು ಹೋಗುವ ಹಿರಿಯರಿದ್ದಿಲ್ಲ; ಮೇಲೆ ಬಡತನ; ಇಂಥದರಲ್ಲಿ ಇಲ್ಲಿಯ ಹಾಯಸ್ಕೂಲಿನಲ್ಲಿ ವಿನಾಯಕರಾಯರ ಇಂಗ್ಲಿಸ ಅಭ್ಯಾಸಕ್ಕೆ ಪ್ರಾರಂಭವಾಯಿತು.

ಮುಂದೆ ಇವರು ಸನ್ ೧೮೮೯ನೇ ಇಸವಿಯಲ್ಲಿ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ, ಡೆಕ್ಕನ್ ಕಾಲೇಜದಲ್ಲಿ ಸೇರಿದರು. ಈ ಕಾಲಕ್ಕೆ ಕರ್ಜಗಿಯ ಜೋಗಳೇಕರ ಮನೆತನದವರು ಇವರಿಗೆ ಬಹಳ ರೀತಿಯಿಂದ ಸಹಾಯಮಾಡಿದರು. ಅವರ ಉಪಕಾರವನ್ನು ಇವರು ಇನ್ನೂವರೆಗೂ ಮರೆತಿಲ್ಲ. ಕಾಲೇಜದಲ್ಲಿದ್ದಾಗ ಕರ್ನಾಟಕ ವಿದ್ಯಾರ್ಥಿಗಳ ಬೋರ್ಡಿಂಗ ಕ್ಲಬ್ಬಿನಲ್ಲಿ ತಮ್ಮ ಸಹಾಧ್ಯಾಯಿಗಳಿಗೆ ಮಿತವ್ಯಯದ ಒಳ್ಳೇ ಉದಾಹರಣೆಯನ್ನು ಹಾಕಿಕೊಟ್ಟರು. ಅಲ್ಲಿಂದ ಇವರು ಸನ್ ೧೮೯೪ನೇ ಇಸವಿಯಲ್ಲಿ B, A. ಪರೀಕ್ಷೆಯಲ್ಲಿ ಉತ್ತೀರ್ಣರಾದರು.

ವಿನಾಯಕರಾಯರು ಪದವೀಧರರಾಗುವ ಪೂರ್ವದಲ್ಲಿಯೇ ಇವರ ಅಣ್ಣತಮ್ಮಂದಿರೆಲ್ಲರೂ ತೀರಿಕೊಂಡದ್ದರಿಂದ ಪ್ರಪಂಚದ ಯಾವತ್ತೂ ಭಾರವು ಇವರ ಮೇಲೆಯೇ ಬಿತ್ತು. ಆದ್ದರಿಂದ ಇವರು ಮುಂದಿನ ಅಭ್ಯಾಸವನ್ನು ಬಿಟ್ಟುಕೊಟ್ಟು ಜೀವನಾರ್ಥದ ಮಾರ್ಗವನ್ನು ಕಂಡುಕೊಳ್ಳಬೇಕಾಯಿತು.

ಆರಂಭದಲ್ಲಿ ಇವರು ಧಾರವಾಡ ಹೈಸ್ಕೂಲಿನಲ್ಲಿ ಅಸಿ. ಮಾಸ್ತರರ ಕೆಲಸವನ್ನು ಕೈಕೊಂಡರು. ಅಲ್ಲಿ ಕೇವು ದಿವಸ ಉತ್ತಮ ರೀತಿಯಿಂದ ಕೆಲಸ ಮಾಡಿದ ನಂತರ ಸನ್ ೧೮೯೫ನೇ ಇಸವಿಯಲ್ಲಿ ಕುಮಟೆಯ ಆಂಗ್ಲೋ ವ್ಹರ್ನ್ಯಾಕ್ಯುಲರ ಶಾಲೆಯ ಹೆಡ್ ಮಾಸ್ತರರಾದರು. ಅಲ್ಲಿ ಇರುವಾಗ್ಗೆ ಇವರು ಒಳ್ಳೇ ಜನ ಪ್ರಿಯರಾದದ್ದು ಪ್ರಸಿದ್ಧವದೆ. ಪ್ರಕೃತಿಯ ಅಸ್ವಾಸ್ಥ್ಯದ ಮೂಲಕ ಇವರು ಅಲ್ಲಿಂದ ಪುನಃ ಧಾರವಾಡ ಹೈಸ್ಕೂಲಿನ ಗನೇ ಅಸಿ. ಮಾಸ್ತರರಾಗಿ ಬಂದರು. ಈ ಸುಮಾರಿನಲ್ಲಿ ವಿನಾಯಕರಾಯರು ಅರ್ಥಶಾಸ್ತ್ರದ ಪುಸ್ತಕವನ್ನು ಕನ್ನಡಿನಲ್ಲಿ ಪರಿವರ್ತಿಸಿದರು. ಕನ್ನಡ ಭಾಷೆಯಲ್ಲಿ ವಿಶೇಷವಾಗಿ ಪರಿಶ್ರಮವನ್ನು ಮಾಡಿದ್ದರಿಂದ ಇವರಿಗೆ ಕೂಡಲೆ ಧಾರವಾಡ ಟ್ರೇನಿಂಗ ಕಾಲೇಜದ ವ್ಹಾಯಿಸ್ ಪ್ರಿನ್ಸಿಪಾಲರ ಸ್ಥಳವು ದೊರೆಯಿತು. ಅಮೇಲೆ ಬಿಜಾಪುರ ಹೈಸ್ಕೂಲಿನ ಹೆಡ್ ಮಾಸ್ತರರಾಗಿಯೂ ಕಾರವಾರ ಜಿಲ್ಲೆಯ ಡೆ. ಎ ಇ. ರಾಗಿಯೂ ಕೆಲಸ ಮಾಡಿದ ನಂತರ ಸನ್ ೧೯೦೪ ರಲ್ಲಿ ಇವರು ಬೆಳಗಾಂವ ಜಿಲ್ಲೆಯ ಡೆ. ಎ. ಇ. ರಾಗಿ ನಿಯಮಿಸಲ್ಪಟ್ಟರು. ಇಲ್ಲಿನ ಇವರ ಕೆಲಸವು ಆಗಿನ ಎಜ್ಯುಕೇಶ

ನಲ್ ಇನ್‌ಸ್ಪೆಕ್ಟರರಾದ ರಾ. ಬಾ. ಕರಂದೀಕರ ಸಾಹೇಬರ ಮನಸಿಗೆ ವಿಶೇಷವಾಗಿ ಬಂದದರಿಂದ ಆವರು ವಿನಾಯಕರಾಯರನ್ನು ಸನ್ ೧೯೦೮ ನೇ ಇಸವಿಯ ಜುಲ್ಯೆ ತಿಂಗಳಿನ ೧೯ನೇ ತಾರೀಖಿಗೆ ಧಾರವಾಡ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರನ್ನಾಗಿ ಮಾಡಿದರು.

ವಿನಾಯಕರಾಯರ ಕಾಲಕ್ಕೆ ಟ್ರೇನಿಂಗ ಕಾಲೇಜವು ಒಳ್ಳೇ ಭರದಿಂದ ಬೆಳೆಯಿತು. ಕಾಲೇಜದ ಪ್ರತಿಯೊಂದು ಅಂಗದಲ್ಲಿಯೂ ತಕ್ಕನುಟ್ಟಿಗೆ ಸುಧಾರಣೆಯನ್ನು ಮಾಡಿದರು. ಸ್ಲಾಯಿಡ ಪದ್ಧತಿಯ ಶಿಕ್ಷಣವು ಇವರ ಸೂಚನೆಯಿಂದಲೇ ಪ್ರಾರಂಭವಾಯಿತು. ಪ್ರಕೃತಿ ವಿಮರ್ಶೆಯನ್ನು ಕಲಿಸುವದಕ್ಕಾಗಿ ಮೈಸೂರಿನಿಂದ ಒಬ್ಬ ಶಿಕ್ಷಕರನ್ನು ಕರೆಯಿಸಿ, ಆ ಅಭ್ಯಾಸವನ್ನು ಕಾಲೇಜದಲ್ಲಿ ಪ್ರಾರಂಭ ಮಾಡಿದರು. ವಿದ್ಯಾರ್ಥಿಗಳ ಬರಹದಲ್ಲಿ ವಿಶೇಷ ಸುಧಾರಣೆಯಾಯಿತು. ಭೂಗೋಲ ಶಿಕ್ಷಣ ಸಂಬಂಧವ ಉಪಕರಣಗಳನ್ನು ಕಾಲೇಜದಲ್ಲಿಯ ವಿದ್ಯಾರ್ಥಿಗಳಿಂದ ತಯಾರಿಸುವ ಕೆಲಸವು ಇವರ ಕಾಲದಲ್ಲಿ ಒತ್ತರದಿಂದ ನಡೆಯಿತು. ಇವರು ತಮ್ಮ ವಿದ್ಯಾರ್ಥಿಗಳನ್ನು ಒಮ್ಮೆ ಅಲಹಾಬಾದದ ಪ್ರದರ್ಶನಕ್ಕೂ ಮತ್ತೊಮ್ಮೆ ಮದ್ರಾಸಕ್ಕೂ ಕರೆದುಕೊಂಡು ಹೋಗಿದ್ದರು. ಸನ್ ೧೯೧೧ನೇ ಇಸವಿಯಲ್ಲಿ ಕಾಲೇಜದಲ್ಲಿ ಶಿಕ್ಷಣ ವಿಷಯಕ ಪ್ರದರ್ಶನವನ್ನು ಮಾಡಿಸಿ, ನಾಲ್ಕೂ ಜಿಲ್ಲೆಯ ಶಿಕ್ಷಕರಿಗೆ ಶಿಕ್ಷಣದ ದೃಷ್ಟಿಯಿಂದ ಎಷ್ಟೋ ಲಾಭಗಳನ್ನು ಮಾಡಿಕೊಟ್ಟರು. ಇವರ ಕೆಲಸದ ವಿಷಯವಾಗಿ ಆಯಾ ಕಾಲದ ಡಾಯರೆಕ್ಟರ ಸಾ. ರೂ. ಇನ್‌ಸ್ಪೆಕ್ಟರ ಸಾ. ರೂ. ಬೇರೆಯುರೋಪಿಯನ್ ಅಧಿಕಾರಿಗಳೂ ಉತ್ತಮ ಅಭಿಪ್ರಾಯಗಳನ್ನು ಬರೆದಿರುವರು. ಕಾಲೇಜದೊಳಗಿನ ಇವರ ಆಡಳಿತವನ್ನು ನೋಡಿ ಸರಕಾರದವರು ಸನ್ ೧೯೧೬ ನೇ ಇಸವಿಯ ಎಪ್ರೇಲ ತಿಂಗಳಲ್ಲಿ ಇವರಿಗೆ 'ರಾವಬಹಾದ್ದೂರ' ಪದವಿಯನ್ನು ಕೊಟ್ಟು ಜುಲ್ಯೆ ತಿಂಗಳಲ್ಲಿ ಇವರನ್ನು ಬಡ್ತಿ ಎ. ಇ. ದನ್ನಾಗಿ ಮಾಡಿದರು. ಕಾಲೇಜದೊಳಗಿನ ಇವರ ೮ ವರ್ಷದ ಆಳಿಕೆಯು ಇವರ ಕೈಕೆಳಗಿನ ಎಲ್ಲ ನೌಕರರಿಗೂ ವಿದ್ಯಾರ್ಥಿಗಳಿಗೂ ಸುಖಕರವಾಗಿತ್ತು.

ವಿನಾಯಕರಾಯರು ಮಹಾರಾಷ್ಟ್ರೀಯರಾದರೂ ಕರ್ನಾಟಕ
ಲ್ಲಿಯೇ ಹುಟ್ಟಿ, ಕರ್ನಾಟಕದಲ್ಲಿಯೇ ಬೆಳೆದು, ಕರ್ನಾಟಕದಲ್ಲಿಯೇ ವಿದ್
ಭ್ಯಾಸ ಮಾಡಿದವರಾದುದರಿಂದ ಕನ್ನಡ ಭಾಷೆಯ ಬಗ್ಗೆ ಇವರಿಗೆ ವಿಶೇ
ಅಭಿಮಾನವಿರುತ್ತದೆ. ಇವರು, ತಮ್ಮ ವ್ಯಾಸಂಗದಿಂದ ಕನ್ನಡ ಭಾ
ಯಲ್ಲಿ ಒಳ್ಳೇ ಪ್ರಾವೀಣ್ಯವನ್ನು ಪಡೆದಿರುತ್ತಾರೆ. ಆದ್ದರಿಂದ ಇವರು ಮು
ಬಯಿ ಯುನಿವರ್ಸಿಟಿಯ ಎಮ್. ಏ. ಪರೀಕ್ಷೆಯ ಕನ್ನಡ ಪರೀಕ್ಷಕರಾ
ಎಷ್ಟೋ ಸಾರೆ ಆರಿಸಲ್ಪಟ್ಟರು. ಆ ಯುನಿವರ್ಸಿಟಿಯ ಫೆಲೋದ ಬಿ
ಮಾನವಾದರೂ ಇವರಿಗೆ ಬಿಮ್ಮೆ ದೊರೆತಿತ್ತು. 'ಗೃಹವ್ಯವಸ್ಥೆ' ಎಂಬ ಪ್ರ
ಕವನ್ನು ಕನ್ನಡದಲ್ಲಿ ಭಾಷಾಂತರಿಸಿದರು. ಸದ್ಯಕ್ಕೆ ಇವರು ಕರ್ನಾಟ
ವಿದ್ಯಾವರ್ಧಕ ಸಂಘದ ವ್ಯಾಯಿಸ ಪ್ರೆಸಿಡೆಂಟರಿರುವರು.

ವಿನಾಯಕರಾಯರ ಸ್ವಭಾವವು ಮಾದರಿ ತೆಗೆದುಕೊಳ್ಳುವಂಥಾದ
ನುಡಿಯಲ್ಲಿ ಮಿತಿ, ನಡೆಯಲ್ಲಿ ಮಿತಿ, ಉಡಿಗೆಯಲ್ಲಿ ಮಿತಿ, ತೊಡಿಗೆಯ
ಮಿತಿ, ಹೀಗೆ ಎಲ್ಲದರಲ್ಲಿಯೂ ಮಿತಿಯುಳ್ಳವರಾಗಿರುವರು. ನಿಷ್ಪಕ್ಷಪಾ
ತನವು ಇವರ ಸ್ವಭಾವದ ವಿಶೇಷ ಗುಣವು.

ವಿನಾಯಕರಾಯರಿಗೆ ಮೂವರು ಹೆಣ್ಣು ಮಕ್ಕಳೂ ಒಬ್ಬ ಗಂ
ಮಗನೂ ಇರುವರು. ಇವರು ತಮ್ಮ ಪೆನ್‌ಶನ್‌ದ ಕಾಲವನ್ನು ಧಾರವಾ
ದಲ್ಲಿಯೇ ಕಳೆಯಬೇಕೆಂದು ನಿಶ್ಚಯಿಸಿದ್ದಾರೆ. ಬಡತನದಲ್ಲಿ ಹುಟ್ಟಿ ಬಡತ
ದಲ್ಲಿ ಬೆಳೆದು ಸ್ವಪ್ರಯತ್ನದಿಂದಲೇ ಉನ್ನತಸ್ಥಿತಿಗೆ ಏರಿದವರಲ್ಲಿ ನಮ
ವಿನಾಯಕರಾಯರೊಬ್ಬರಾಗಿರುವರು. ಇವರು ಈಗ ರಾ. ಬಾ. ಕರಂ
ಕರರವರು ವಿದ್ಯಾದಾನಕ್ಕಾಗಿ ಮಾಡಿದ ಹಣದ ವ್ಯವಸ್ಥಾಪಕರಿರುವ

ಸಾರಾಂಶ—ಸರಕಾರದವರಿಗೂ ಪ್ರಜೆಗಳಿಗೂ ಬೇಕಾಗಿ ಹೌದೆ
ಕೊಳ್ಳುವಂತೆ ಕೆಲಸಮಾಡಿ ಕೀರ್ತಿಯನ್ನು ಸಂಪಾದಿಸಿದ ಇವರ ಉ
ಹರಣೆಯು ಅನುಕರಣೀಯವಾಗಿದೆ.

ಕಡೆಗೆ, ವಿನಾಯಕರಾಯರು ಬಹುಕಾಲದವರೆಗೆ ವೆನ್‌ಶನ್ನು ಉಪ ಭೋಗಿಸಲೆಂತಲೂ, ಇವರಿಂದ ಸಾರ್ವಜನಿಕ ಹಿತದ ಕೆಲಸಗಳು ವಿಶೇ ಷವಾಗಿ ಜರುಗಲೆಂತಲೂ ಇದಕ್ಕಾಗಿ ಇವರಿಗೂ ಇವರ ಕುಟುಂಬದವ ರಿಗೂ ಜಗದೀಶನು ಆಯುರಾರೋಗ್ಯವನ್ನು ದಯಪಾಲಿಸಲೆಂತಲೂ ಬೇಡಿ ಕೊಂಡು ಈ ಅಲ್ಪ ಚರಿತ್ರೆಯನ್ನು ಮುಗಿಸುವೆವು.

ಚಿಕ್ಕಮಕ್ಕಳ ಶಿಕ್ಷಣದ ವಿಷಯದಲ್ಲಿ ಅವಶ್ಯವಾಗಿ ಲಕ್ಷದಲ್ಲಿಡತಕ್ಕ ಕೆಲವು ಸಂಗತಿಗಳು.

+⊗ : (0) : ⊗+

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು.)

೩. ಚಿಕ್ಕ ಮಕ್ಕಳ ವೃತ್ತಿಯು ಯಾವಾಗಲೂ ಆನಂದವುಳ್ಳದ್ದಿ ರುತ್ತದೆ. ದೊಡ್ಡವರಂತೆ ನಾನಾತರದ ಚಿಂತೆ ಮತ್ತು ದುಃಖಗಳ ಅನು ಭವವು ಅವರಿಗಿರುವದಿಲ್ಲ. ಕಣ್ಣಿಗೆ ಕಾಣುವ ಈ ಯಾವತ್ತು ಸೃಷ್ಟಿಯು ಅವರಿಗೆ ಆನಂದಮಯವಾಗಿ ತೋರುತ್ತದೆ.

ತಾಮಸ ಗುಣವುಳ್ಳ ಶಿಕ್ಷಕರ ಸಹವಾಸದಲ್ಲಿ ದೊಡ್ಡವರಿಗೆ ಸಹ ಇರಲಿಕ್ಕಾಗುವದಿಲ್ಲ. ಚಿಕ್ಕಮಕ್ಕಳು ಹ್ಯಾಗೆ ಇರಬೇಕು? ಚಿಕ್ಕ ಬಾಲಕ ರಲ್ಲಿ ಅನುಕರಣ ಶಕ್ತಿಯು ಪ್ರಬಲವಾಗಿರುವದರಿಂದ ಅವರಲ್ಲಿಯೂ ಈ ಗುಣಗಳು ಸೇರಿ ಅವರೂ ಸೀಡಕಸ್ವಭಾವದವರಾಗುವರು. ಆದ್ದರಿಂದ ಶಾ ಲೆಯಲ್ಲಿ ಸೇರಿದಕೂಡಲೆ ಶಿಕ್ಷಕನು ತನ್ನ ಮನೆತನದ ಚಿಂತೆಯನ್ನುಮರೆತು ಆನಂದ ಮುದ್ರೆಯವನಾಗಿರಬೇಕು. ಆನಂದ ಮತ್ತು ಪ್ರೀತಿಯುಕ್ತ ಶಿಕ್ಷಕ ನ ಸಹವಾಸದಲ್ಲಿರುವ ಬಾಲಕರಿಗೆ ಸೌಖ್ಯವುಂಟಾಗುತ್ತದೆ. ಇದನ್ನು ನೋ ಡಿ ಆ ಶಿಕ್ಷಕನಿಗೂ ಹೆಚ್ಚಿನ ಆನಂದವುಂಟಾಗುತ್ತದೆ.

ದೊಡ್ಡವರು ಆಡುವ ಮಾತಿಗಿಂತಲೂ ಅವರು ಮಾಡುವ ಕೃತಿಗಳ ಕಡೆಗೆ ಚಿಕ್ಕ ಮಕ್ಕಳ ಲಕ್ಷವು ಹೆಚ್ಚಿಗಿರುತ್ತದೆ. ಹಿರಿಯರು ಹ್ಯಾಗೆ ಮಾ ಡುವರೋ ಹಾಗೆ ಮಾಡಬೇಕೆಂಬ ಪ್ರವೃತ್ತಿಯು ಅವರಲ್ಲಿ ಸ್ವಾಭಾವಿಕವಾ

ಗಿ ಇರುತ್ತದೆ. ಸದಾಚರಣವುಳ್ಳ ಶಿಕ್ಷಕನ ವಿಷಯವಾಗಿ ಪೂಜ್ಯಬುದ್ಧಿ ಹುಟ್ಟಿ ಅದರಂತೆ ನಡೆಯಲಿಕ್ಕೆ ಬಾಲಕರು ಯತ್ನ ಮಾಡುತ್ತಾರೆ. ಅದ್ದರಿಂದ ಶಿಕ್ಷಕರು ತಮ್ಮ ವಿದ್ಯಾರ್ಥಿಗಳು ಹ್ಯಾಗೆ ನಡೆಯಬೇಕೆಂದು ಇಚ್ಛಿಸುವರೋ ಅದರಂತೆ ತಾವು ತಪ್ಪದೆ ನಡೆಯಲಿಕ್ಕೆಬೇಕು. ಹೇಳುವದೊಂದು ಮಾಡುವದೊಂದು ಹೀಗೆ ಚಿಕ್ಕ ಬಾಲಕರಿಗೆ ಕಂಡು ಬಂದರೆ ಅದರಿಂದ ಬಹಳೇ ಕೆಟ್ಟ ಪರಿಣಾಮವಾಗುವದು. ಶಿಕ್ಷಕನ ಪೋಷಾಕು ಸಾದಾ ಮತ್ತು ಸ್ವಚ್ಛ ವಿರಬೇಕಲ್ಲದೆ ಅದರಲ್ಲಿ 'ದಂಭದ' ವ್ಯಾಬಲ್ಯವಿರಬಾರದು.

೪. ಚಿಕ್ಕ ಬಾಲಕರ ವಿಷಯವಾಗಿ ಯಾವನಲ್ಲಿ ಪ್ರೇಮವು ಉತ್ಪನ್ನವಾಗುವದಿಲ್ಲವೋ ಅಂಥವನು ಚಿಕ್ಕಮಕ್ಕಳ ಶಿಕ್ಷಕನ ಕೆಲಸವನ್ನು ಕೈಕೊಳ್ಳಲೇಬಾರದು. ಗುರುಶಿಷ್ಯರಲ್ಲಿ ಪ್ರೇಮದ ಅಭಾವವಿದ್ದರೆ ಶಿಕ್ಷಣವು ಸುರಳೀತವಾಗಿ ನಡೆಯುವ ಬಗೆ ಹ್ಯಾಗ? ಚಿಕ್ಕಬಾಲಕರು ಮೃದು ಭಾಷೆಗೆ ಬಹಳ ಮೆಚ್ಚುವರು. ಅವರಾಡುವಂಥ ಭಾಷೆಯಿಂದಲೇ ಅವರ ಕೂಡ ಮಾತನಾಡುತ್ತಿದ್ದರೆ ಅವರು ಒಳ್ಳೇ ಉತ್ಸುಕತೆಯಿಂದ ಕೇಳುವರು. ಶಿಕ್ಷಕನು ಅವರೊಳಗೇ ಕೂಡಿ ತಾನೂ ಅವರೊಳಗಿನವನೊಬ್ಬನು ಎಂಬ ಭಾವನೆಯನ್ನುಉಂಟುಮಾಡಬೇಕು. ಅವರಾಡುವಂಥ ಆಟಗಳಲ್ಲಿಯೂ ಅವರು ಮಾಡುವಂಥ ಇತರ ಕೆಲಸಗಳಲ್ಲಿಯೂ ತಾನುಸೇರಿ ಪ್ರೀತಿಯಿಂದ ಅವರಕೂಡ ನಡೆದರೆ ಕೂಡಲೆ ಒಲಿಯುವರು. ಕೇವಲ ಅಂತಃಕರಣಪೂರ್ವಕವಾಗಿ ಚಿಕ್ಕ ಬಾಲಕರ ಕೂಡ ಪ್ರೇಮದಿಂದ ನಡೆದರೆ ಅವರು ಶಿಕ್ಷಕನ ಮೇಲೆ ಪೂರ್ಣವಿಶ್ವಾಸವುಳ್ಳವರಾಗಿ ಇವನು ಹೇಳಿದ ಕೆಲಸಕ್ಕೆ ಸಂಪೂರ್ಣ ತತ್ಪರರಾಗಿ ನಿಲ್ಲುವರು.

ಪದ್ಯವನ್ನು ಭೋಧಿಸುವಕ್ರಮ.

——:(0):——

ಕೆಳಗಿನ ತರಗತಿಗಳಲ್ಲಿ ಪದ್ಯವನ್ನು ಹ್ಯಾಗೆ ಕಲಿಸಬಹುದೆಂಬ ಬಗ್ಗೆ ಹಿಂದೆ ನವಂಬರ ತಿಂಗಳ ಸಂಚಿಕೆಯಲ್ಲಿ ವಿವೇಚನೆ ಮಾಡಿದೆ. ಮೇಲಿನ ತರಗತಿಗಳ ಬಗ್ಗೆ ಕೆಲವು ಸೂಚನೆಗಳನ್ನು ಮಾಡಿ ಪಳನೆಯ ಪುಸ್ತಕದೊಳಗಿನ ಒಂದು ಪದ್ಯವನ್ನು ಬೋಧಿಸುವ ಕ್ರಮವನ್ನು ಇಲ್ಲಿ ವಾಚಕರಿಗಾಗಿ ಕೊಡುವೆವು.

ಪದ್ಯದಲ್ಲಿ ಬಹಳ ವಿಷಯವು ಸ್ವಲ್ಪ ಮಾತಿನಲ್ಲಿ ವ್ಯವಸ್ಥಿತವಾಗಿ ಡಲ್ಪಟ್ಟಿರುವದರಿಂದಲೂ ವಚನ ಕಾವ್ಯಗಳಂತೆ ಅಭ್ಯೇಯಾಖ್ಯಾತ ುಂತಾದ ಪದಗಳು ಕ್ರಮವಾಗಿ ಇರದೆ ಛಂದಶ್ಶಾಸ್ತ್ರದಂತೆ ಹಿಂದು ುಂದಾಗಿ ಇಡಲ್ಪಟ್ಟಿರುವದರಿಂದಲೂ ಸಂಧಿ ಸಮಾಸ ಕಾರ್ಯಗಳನ್ನು ಚ್ಚಾಗಿ ಮಾಡಿರುವದರಿಂದಲೂ ಪದ್ಯದ ಸಂಪೂರ್ಣ ಭಾವವನ್ನು ತಿಳಿ ುವದು ಕಠಿಣವಾಗುವದು. ಕವಿಯ ಅಭಿಪ್ರಾಯವನ್ನು ವ್ಯಕ್ತಪಡಿಸು ದೇ ಕವಿತಾ ಪಾಠದ ಮುಖ್ಯೋದ್ದೇಶವಾಗಿದೆ. ವಾಕ್ಯಾರ್ಥ ಮಾಡಲು ದಜ್ಞಾನ ಬೇಕು. ಪದಗಳ ಜ್ಞಾನವಿಲ್ಲದಿದ್ದರೆ ಅವುಗಳ ಪರಸ್ಪರ ಸಂಬಂ ಹಾಗು ಅರ್ಥವು ತಿಳಿಯುವದಿಲ್ಲ. ಸಂಬಂಧವು ತಿಳಿಯದೆ ಇದ್ದದ ದ ಪದ್ಯದ ಸ್ವಾರಸ್ಯವು ತಿಳಿಯುವದಿಲ್ಲ. ಬಾಲಕರಿಗೆ ಕವಿತಾಪಾಠಗ ನ್ನು ಕಲಿಸುವಾಗ ಅರ್ಥಜ್ಞಾನದ ಕಡೆಗೇ ವಿಶೇಷ ಲಕ್ಷ್ಯಕೊಡಬೇ ಂದು ಹಿಂದೆ ಒಂದು ಲೇಖದಲ್ಲಿ ಹೇಳಿದೆಯಷ್ಟೇ. ಅದರೆ ಪ್ರೌಢ ವಿದ್ಯಾ ರ್ಥಿಗಳಲ್ಲಿ ಇದಕ್ಕೂ ಹೆಚ್ಚು ವಿಷಯವನ್ನು ತಿಳಿದುಕೊಳ್ಳುವಷ್ಟು ಗ್ರಹಣ ಶಕ್ತಿಯೂ ವಿಚಾರ ಶಕ್ತಿಯೂ ಬೆಳೆದಿರುವದರಿಂದ ಕೇವಲ ಅರ್ಥಜ್ಞಾನ ನ್ನಷ್ಟೇ ಮುಖ್ಯವಾಗಿಟ್ಟುಕೊಳ್ಳದೆ ಅದಕ್ಕೆ ಸಂಬಂಧಪಟ್ಟ ಇತರ ಸಂ ತಿಗಳ ಕಡೆಗೂ ಲಕ್ಷ್ಯಕೊಡಬೇಕಾಗುತ್ತದೆ. ಅಂದರೆ ಪದಚ್ಛೇದ, ಪದಾ ರ್ಥೋಕ್ತಿ, ಸಂಧಿಸಮಾಸಗಳು, ಅನ್ವಯ, ಆಕ್ಷೇಪ ಹಾಗು ಸಮಾಧಾನ, ವಿಷಮಯ, ಪದ್ಯಗಳನ್ನೋದುವ ಕ್ರಮ ಮುಂತಾದವುಗಳ ಬಗ್ಗೆ ವಿಚಾರ ಮಾಡಬೇಕಾಗುತ್ತದೆ.

ಕಲಿಸತಕ್ಕ ಪದ್ಯದ ಹಿಂದಿನ ಸಂಬಂಧವು ವಿದ್ಯಾರ್ಥಿಗಳಿಗೆ ಗೊತ್ತಿ ದ್ದ ಕೇಳಿ ಇಲ್ಲವಾದರೆ ಹೇಳಿ, ಅದರಲ್ಲೇನು ವರ್ಣಿಸಲ್ಪಟ್ಟಿದೆ ಎಂಬದನ್ನು ರಾಚಿಸಬೇಕು. ಆ ಮೇಲೆ ಶಿಕ್ಷಕನು ಪ್ರಸ್ತುತ ಪದ್ಯವನ್ನು ಅರ್ಥಕ್ಕನು ಸಿ, ಸಿಲ್ಲುವಲ್ಲಿ ನಿಂತು, ಧಾಟಿಯಿಂದ ನಿರ್ದೋಷವಾಗಿ ಅಂದು ತೋರಿ ಬೇಕು. ಆರಂಭದಿಂದ ಕೊನೆಯವರೆಗೆ ಒಂದೇ ಸ್ವರವಿರಬಾರದು. ದು ಗಾಯನ ಕಲಾಭಿಜ್ಞರ ಕೆಲಸವೆಂದು ಮೈದೆಗೆಯಬಾರದು. ಸಾಧ್ಯವರೆ ಯತಿಯ ನಿಯಮವನ್ನು ಪಾಲಿಸಬಹುದು. ಪರಂತು ಅರ್ಥವಾಗು ನದ ಕಡೆಗೆ ಲಕ್ಷ್ಯಪೂರೈಸಿದಷ್ಟು ಯತಿಯ ಕಡೆಗೆ ಪೂರಯಿಸಲಾಗದು. ಕ್ರಿಯಾಗಲಿ ಸ್ಥೆಲಾಗಲಿ ಉಚ್ಚಾರ ಮಾಡಿದರೆ ಅರ್ಥ ವ್ಯತ್ಯಾಸವಾಗುವ

ಸಂಭವವಿದ್ದಾಗ, ಅದನ್ನು ಲಕ್ಷಿಸಿ ಶ್ರೋತೃಗಳಿಗೆ ಬೇಗ ಗ್ರಹಿಕೆಯಾ
ಗುವಂತೆ ಓದಿತೋರಿಸಬೇಕು. ಈ ಪ್ರಕಾರ ಶಿಕ್ಷಕನು ಓದಿತೋರಿಸ
ತ್ತಿರುವಾಗ ವಿದ್ಯಾರ್ಥಿಗಳು ಸುಮ್ಮನೆ ಕೇಳುತ್ತಿರಬೇಕು. ಬಳಿಕ ಕೆಳಗ
ಹೇಳಿದಂತೆ ಪದ್ಯದ ಅರ್ಥವನ್ನು ಕಲಿಸಲು ಪ್ರಾರಂಭಿಸಬೇಕು.

ಕ್ರಮಿಕ ಪಠನೆಯ ಪುಸ್ತಕದಲ್ಲಿಯು ಕೆಳಗಿನ ಪದ್ಯವನ್ನು ಕಲಿಸುವ
ದಿದೆ ಎಂದು ತಿಳಿಯುವ.

ಸಿಂಗದ ಕೈಗೆ ಬಿದ್ದ ಹರಿಣಾಂಗನೆವೋಲೆರ್ದೆಗೆಟ್ಟು ರಾಮುಚಂ।
ದ್ರಾಂಗನೆ, ನೀಳ್ದ ಕಣ್ಮಲರ್ಗಳಿಂದುಗೆ ಕಣ್ಣಿನಿಗಳ್, ಪುಡಲ್ತ ಪ।
ಕ್ಷ್ಮಾಂಗಳನೊತ್ತಿ ಕಾರಮುಗಿಲಿಂದಿಳಿತರ್ಪನವೋದಬಿಂದುಜಾ।
ಲಂಗಳೆನಲ್; ಬೆಮರ್ತಳೆನಸುಂ ತನುವಲ್ಲಿ ಮುಗಳ್ನುದೆಂಬಿನಂ ॥ ೧ ॥

ಈ ಪದ್ಯವನ್ನು ಓದಿತೋರಿಸುವಾಗ ಸಿಂಗದ.....ರಾಮುಚಂದ್ರಾಂ
ಗನೆ, ನೀಳ್ದ ..... ಜಾಲಂಗಳೆನಲ್, ಬೆಮರ್ತಳ್.....ಎಂಬಿನಂ
ಈ ಪ್ರಕಾರ ಮೂರುಸ್ಥಳಗಳಲ್ಲಿ ನಿಲ್ಲುತ್ತ ಇಂಪಾಗಿ ಅಂದು ತೋರಿಸಬ
ಹುದು. ನಡುವಿನ ಮಾತು ದೊಡ್ಡದೆನಿಸಿದರೆ, ಕಣ್ಣಿಸಿಗಳ್, ಒತ್ತಿ, ಇವ
ರಡು ಸ್ಥಳಗಳಲ್ಲಿ ನಿಲ್ಲಲಿಕ್ಕೂ ಅಡ್ಡಿಯಿಲ್ಲ. ಈ ಪದ್ಯವನ್ನು ಕಲಿಸಲು
ಪ್ರಾರಂಭಿಸುವ ಪೂರ್ವದಲ್ಲಿ ಹಿಂದಿನ ಪದ್ಯಗಳಲ್ಲಿ ನಡೆದ ಮುಖ್ಯ ಸಂಗ
ತಿಗಳು ಯಾವವು ಎಂಬುದನ್ನು ಹೊರಡಿಸಬೇಕು. ಆ ಮೇಲೆ ರಾವಣನು
ಸೀತೆಯನ್ನು ಬಯ್ಯುವ ಕಾಲಕ್ಕೆ ಸೀತಾದೇವಿಯ ಹೃದಯವು ಹ್ಯಾಗಾಗಿರ
ಬೇಕು? ಎಂದು ಕೇಳಿ ಅದನ್ನೇ ಈ ಪದ್ಯದಲ್ಲಿ ಹೇಳಿರುವನು; ನಾನು ಓದಿ
ತೋರಿಸುತ್ತೇನೆ; ಕೇಳಿರಿ; ಎಂದು ಮೇಲೆ ಹೇಳಿವ ಮೆಟ್ಟುಗಳಲ್ಲಿ ನಿಲ್ಲುತ್ತ
ಮನೋಹರವಾಗಿ ಓದಿತೋರಿಸಬೇಕು.ಆ ಮೇಲೆ ಅದರೊಳಗಿನ ಒಂದೊ
ಮಾತನ್ನು ವಿದ್ಯಾರ್ಥಿಗಳಿಂದ ಓದಿಸಿ ಮುಂದೆ ಸಾಗತಕ್ಕದ್ದು.

ಹ್ಯಾಗಂದರೆ:—'ಸಿಂಗದ ಕೈಗೆಬಿದ್ದ ಹರಿಣಾಂಗನೆವೋಲ್' ಎಂದೂ
ಗೆಟ್ಟು ರಾಮುಚಂದ್ರಾಂಗನೆ' ಇದರೊಳಗಿನ ಬಹಳ ಪದಗಳು ವಿದ್ಯಾರ್ಥಿ
ಗಳಿಗೆ ಪರಿಚಿತವಾದವುಗಳಿರುತ್ತವೆ. ಶಕ್ಯವಿದ್ದ ಮಟ್ಟಿಗೆ ವಿದ್ಯಾರ್ಥಿಗಳಿ
ದಲೇ ಅವುಗಳ ಅರ್ಥವನ್ನು ಹೊರಡಿಸಿಕೊಂಡು ಸಿಂಗ, ಹರಿಣಾಂಗ

ಇವುಗಳ ಅರ್ಥವನ್ನು ಕರೆ ಹಲಿಗೆಯ ಮೇಲೆ ಬರೆಯಬಹುದು. ಹರಿಣಾಂಗನೆ' ಇದರಲ್ಲಿ ಯಾವ ಯಾವ ಶಬ್ದಗಳು ಕೂಡಿವೆ? 'ಸಿಂಗ' ಇದು 'ಸಿಂಹ' ಈ ಶಬ್ದದ ಅಪಭ್ರಂಶವು. ಸಿಂಹದ ಕೈಗೆಬಿದ್ದ ಹೆಣ್ಣು ಚಿಗರಿಯ ಅವಸ್ಥೆಯು ಹ್ಯಾಗಾಗಿರಬೇಕು? ನೀವೇ ಹೇಳಿರಿ? ಅದರ ಗರ್ಜನೆಯನ್ನು ಕೇಳಿದಾಕ್ಷಣವೇ ಚಿಗರಿಯ ಎದೆಯೊಡೆದು ನೀರಾಗುತ್ತದೆ. ಇಲ್ಲಿ ಕವಿಯು ಹೆಣ್ಣು ಚಿಗರಿಯ ದೃಷ್ಟಾಂತವನ್ನೇ ಯಾಕೆ ಕೊಟ್ಟನು? (ಭೀರುಸ್ವಭಾವ, ಸೀತೆ) ಈ ವಾತಿನಲ್ಲಿ 'ಸಿಂಗ' ಯಾರು? 'ಹರಿಣಾಂಗನೆ' ಯಾರು? ಓಲ್, 'ಎರ್ದೆಗೆಡು' ಈ ಶಬ್ದಗಳ ಅರ್ಥವು ನಿಮಗೆ ಗೊತ್ತಿದೆಯೆ? ಇವೇ ಮುಂತಾದ ಪ್ರಶ್ನೆಗಳನ್ನು ಮಾಡಿ, ಹಿಂದು ಮುಂದೆಯಾಗಿದ್ದ ಪದಗಳನ್ನು ಅವರಿಂದಲೇ ಹೊಂದಿಸಿ ಸರಿಮಾಡಿಸಿಕೊಂಡು 'ಸಿಂಹದ ಕೈಗೆ ಬಿದ್ದ ಹೆಣ್ಣು ಚಿಗರಿಯಂತೆ ಸೀತೆಯು ಗಾಬರಿಯಾಗಿ' ಎಂಬ ಅರ್ಥವನ್ನು ಹೇಳಿಸಿಕೊಳ್ಳಬೇಕು.

'ನೀಳ್ದ ಕಣ್ಮಲರ್ಗಳಿಂದುಗೆ ಕಣ್ಬನಿಗಳ್' ಈ ವಾತನ್ನು ಓದಿ, ನಿಮಗೆ ಎಲ್ಲಿ ಕಠಿಣವೆನಿಸುವದು ಹೇಳಿರಿ, ಎಂದು ಒಬ್ಬ ಹುಡುಗನಿಗೆ ತಿಳಿದ ಮಟ್ಟಿಗೆ ಪದಗಳನ್ನು ಹೊಂದಿಸಲಿಕ್ಕೆ ಹೇಳಬೇಕು. ಇದರಲ್ಲಿಯ ಕಠಿಣಶಬ್ದಗಳೆಂದರೆ-ನೀಳ್-ವಿಸ್ತಾರವಾಗು, ಮಲರ್-ಹೂ(ಕಮಲ),ಉಗು-ಹೊರಚಲ್ಲು ಈ ಪ್ರಕಾರ ಇರುವವು. ಇವುಗಳನ್ನು ಕರೆಹಲಿಗೆಯ ಮೇಲೆ ಬರೆದು, ಈಗ ಎಲ್ಲ ಕೂಡಿಸಿಕೊಂಡು ಹೇಳಲಿಕ್ಕೆ ಬಂದೀತೇ ಹ್ಯಾಗೆ ನೋಡು, ಎಂದು ಹೇಳಿಸಿಕೊಳ್ಳಬೇಕು. ಕವಿಗಳು ಕಣ್ಣಿಗೆ ಕಮಲದ ಉಪಮೆಯನ್ನು ಕೊಡುತ್ತಿರುವರೆಂದೂ, ಇಲ್ಲಿ ಹೂ ಎಂದರೆ ವಿಶೇಷವಾಗಿ ಕಮಲವೆಂದೇ ತಿಳಿದುಕೊಳ್ಳಬೇಕೆಂಬದನ್ನೂ ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಬೇಕು. 'ಉಗು' ಎಂದರೇನು? 'ಹೊರಚಲ್ಲಲು' ಅವುಯಾವವು? 'ಕಣ್ಬನಿಗಳ್' ಎಂದರೆ ನಿಮಗೇನು ಗೊತ್ತಾದೀತು? ಇದರಲ್ಲಿ ಯಾವಯಾವ ಶಬ್ದಗಳು ಕೂಡಿ ಯಾವ ಕಾರ್ಯವಾಗಿದೆ? ಇದು ಯಾವಸಮಾಸವು ಗೊತ್ತಿದೆಯೆ ಎಂಬ

ಪ್ರಶ್ನೆಗಳನ್ನು ಕೇಳಿ 'ವಿಸ್ತಾರವಾದ ಕಣ್ಣೆಂಬ ಕಮಲಗಳಿಂದ ಕಣ್ಣೀರು ಗಳು ಹೊರಬಿದ್ದಿಲ್ಲವು' ಎಂಬ ಅರ್ಥವನ್ನು ಹೊರಡಿಸಿಕೊಳ್ಳಬೇಕು. ಕಣ್ಣಾಲರ್, ಕಣ್ಬನಿ, ಇವುಗಳೊಳಗಿನ ಪದಗಳನ್ನು ಬಿಡಿಸುವಾಗಿನ ಭೇದವನ್ನು ಹೇಳಬೇಕು.

ಇದುವರೆಗೆ ಹೇಳಿದ ಎರಡು ಮಾತುಗಳಲ್ಲಿ—'ಸೀತೆಯು ಗಾಬರಿಯಾಗಿ ಆಕೆಯ ಕಣ್ಣುಗಳಿಂದ ಅಶ್ರುಗಳು ಹೊರಬಿದ್ದವು' ಎಂದು ಹೇಳಿದನು. ಇನ್ನುಮುಂದೆ ಕವಿಯು ಆಹನಿಗಳು ಯಾತರಂತೆ ಇದ್ದವು? ಹ್ಯಾಗೆ ಬಂದವು? ಈ ಮುಂತಾದ ಸಂಗತಿಗಳನ್ನು ಹ್ಯಾಗೆ ಮನೋಹರವಾಗಿ ರ್ಣಿಸಿರುವನು ನೋಡಿರಿ, ಎಂದು ಹೇಳಿ ಮುಂದಿನವಾತನ್ನು ಓದಿಸಿಕೊಳ್ಳಬೇಕು.

'ಮಡಲ್ತ ಪಕ್ಷ್ಮಂಗಳನೊತ್ತಿ'-ಹೇಮುಂತ ಶೈಶಿರದ ಮಾಗಿಮಡಲಿಡೆ ಎಂಬಲ್ಲಿ 'ಮಡಲಿಡೆ ಎಂದರೆ ಏನೆಂದು ಅರ್ಥ ಹೇಳುವಿರಿ? ಅಲ್ಲಿ ಧಾತು ಯವದು? ಹಾಗಾದರೆ ಇಲ್ಲಿ 'ಮಡಲ್ತ ಎಂದರೆ ಏನೆಂದು ಅರ್ಥವನ್ನು ಹೇಬಹುದು? 'ಪಕ್ಷ್ಮ' ಎಂದರೆ ಎವೆ ಎಂದು ಕರೆಹಲಿಗೆಯಮೇಲೆ ಬರೆಯಿಸಕು; ಹಬ್ಬಿದ ಎವೆಗಳು ಎಂದರೆ 'ದಟ್ಟಾದ' 'ಮುಚ್ಚಿಲ್ಲವಟ್ಟ' ಎವೆಗಳು ಅಗಳನ್ನು ಒತ್ತಿ ಅಂದರೆ ತೆರೆದು ಒಳಗಿನಿಂದ ಕಣ್ಬನಿಗಳು ಅಷ್ಟು ಜೋರಿನಿಂದ ಬಂದವೆಂಬವನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡಬೇಕು.

"ಕಾರಮುಗಿಲಿಂದಿಳಿತರ್ಪನವೋದ ಬಿಂದು ಜಾಲಂಗಳಿನಲ್"

"ಜಾಲ" ವೆಂದರೆ ಸಮೂಹ, 'ನವೋದ' ಇದರಲ್ಲಿ ಯಾವಯಾ ಶಬ್ದಗಳು ಕೂಡಿವೆ? ಇದನ್ನು ಹೇಳಲಿಕ್ಕಾದೀತೇನು? ಬಂದರೆ ಹೇಳಿ ನೋಡುವಾ. ಬರದಿದ್ದರೆ ಕರೆ ಹಲಿಗೆಯ ಮೇಲೆ ಬರೆದು ತೋರಿಸುವದು. ಕಾರಮುಗಿಲ್—ಎಂದರೆ ಮಳಿಗಾಲದಲ್ಲಿಯ ಮೋಡವು; ಅದರಿಂದ ಇಳಿತರ್ಪನವೋದ ಬಿಂದುಗಳು—ಮಳಿಗಾಲದ ಮೋಡದಿಂದ ಅದೇ ಇಳಿದು ಬರುವ ನೀರಿನ ಹನಿಗಳಂತೆ ಸೀತೆಯ ಕಣ್ಣುಗಳಿಂದ ಬರುವ ಅಶ್ರುಗಳು ಇದ್ದವೆಂದು ಕವಿಯ ಅಭಿಪ್ರಾಯವು ಕನೀನಿಕೆಯು ಕಪ್ಪು ಇರುವದರಿಂದ ಕವಿಯು ಅದನ್ನು ಮೇಘಕ್ಕೆ ಹೋಲಿಸಿರುವನು—ನವೋದ ಬಿಂದುವು, ಶುಭ್ರವೂ ಸ್ವಚ್ಛವೂ ಇರುವದರಿಂದ ಸೀತೆಯ ಅಶ್ರುವಾದರೂ ಶುಭ್ರವೂ

ಸ್ವಚ್ಛವೂ ಆಗಿತ್ತೆಂದು ಹೇಳಬಹುದು. ಅಂದರೆ ಕಾಡಿಗೆ ಮುಂತಾದ್ದರಿಂದ ಕಶ್ಮಲವಾದದ್ದಲ್ಲ.

ಈಗ ಮೂರೂ ಮಾತುಗಳನ್ನು ಕೂಡಿಸಿ ಬಂದನ್ನೇ ಮಾಡಿ ಹೇಳಿ ಅದರ ಭಾವವನ್ನು ವಿದ್ಯಾರ್ಥಿಗಳಿಂದ ಹೊರಡಿಸಬೇಕು. ಅದು ಹ್ಯಾಗೆಂದರೆ:—

ಕಾರಣುಗಿಲಿಂದಿಳಿತರ್ಪ ನವೋದ ಬಿಂದು ಜಾಲಂಗಳಿನಲ್, ಮಡಲ್ತ ಪಕ್ಷ್ಮಂಗಳನೊತ್ತಿ, ನೀಳ್ದ ಕಣ್ಮಲರ್ಗಳಿಂದ ಕಣ್ಣಿಸಿಗಳ್ ಉಗ್ಗೆ— ಈ ಪ್ರಕಾರ ಅನ್ವಯವನ್ನು ಹೇಳಿಸಿಕೊಂಡು— ಮಳೆಗಾಲದ ಮೋಡದಿಂದ ಇಳಿದು ಬರುವ ಸ್ವಚ್ಛವಾದ ನೀರಿನ ಹನಿಗಳ ಸಮೂಹದಂತೆ, ಮುಚ್ಚಿದ ಎವೆಗಳನ್ನು ಜೋರಿನಿಂದ ತೆಗೆದು, ವಿಸ್ತಾರವಾದ ಕಣ್ಣಿನಿಂದ ಕಣ್ಣೀರುಗಳು ಹೊರಚಲ್ಲಲಾಗಿ, ಎಂದು ಅರ್ಥವನ್ನು ಹೇಳಿಸಿಕೊಳ್ಳಬಹುದು.

'ಬೆಮರ್ತಳೆನಸುಂ ತನುವಲ್ಲಿ ಮುಗುಳ್ತುದೆಂಬಿನಂ' ಈ ವಾಕ್ಯದಲ್ಲಿ ಕಠಿಣ ಶಬ್ದಗಳೆಂದರೆ "ಮುಗುಳ್" ಮತ್ತು "ವಲ್ಲಿ". ಮುಗುಳ್ ಎಂದರೆ "ಚಿಗಿ" ವಲ್ಲಿ— ಎಂದರೆ ಬಳ್ಳಿ, ಚಿಗುರು ಇನ್ನೂ ಎಲೆಯ ಅವಸ್ಥೆಯನ್ನು ಹೊಂದಿರಬಾರದು, ಆಗ ಬಳ್ಳಿಯುಚ್ಯಾಗೆ ತೋರುವದೋ ಹಾಗೆ ಸೀತೆಯ ಬೆವರಿನ ಹನಿಗಳು ತೋರಿದುವು ಎಂಬುದು ಕವಿಯ ತಾತ್ಪರ್ಯ. ಇದರಿಂದ ಸೀತೆಯು ಬಳ್ಳಿಯಂತೆ ಬಳಕುತ್ತಿದ್ದಳೆಂದು ಅವಳ ಸೂಕ್ಷ್ಮಶರೀರದ ಬಗ್ಗೆಯೂ ಬೆವರಿನ ಹನಿಗಳ ಬಗ್ಗೆಯೂ ಇರುವ ಕವಿಯ ಆಶಯವನ್ನು ಹೇಳಬಹುದು.

ಈ ಪ್ರಕಾರ ಅರ್ಥವನ್ನು ತಿಳಿಸಿ ಕವಿಸಮಯ ಮುಂತಾದವುಗಳನ್ನು ಆಯಾ ಪ್ರಸಂಗಕ್ಕೆ ತಕ್ಕಂತೆ ಹೇಳಿ, ಕಡೆಗೆ ಪದ್ಯವನ್ನು ಇಂಪಾಗಿ ಅನ್ನಲಿಕ್ಕೆ ವಿದ್ಯಾರ್ಥಿಗಳಿಗೆ ಹೇಳಬೇಕು. ಅಶ್ರುಗಳು ಪಕ್ಷ್ಮಗಳನ್ನು ಒತ್ತಿ ಹೊರಚಲ್ಲಿದುವೆಂದು ಹೇಳಿದ್ದರಿಂದ ಸೀತೆಯ ದುಃಖಾತಿರೇಕವನ್ನೂ, ಅಶ್ರುಗಳನ್ನು ನವೋದಬಿಂದು ಜಾಲಕ್ಕೂ, ಶರೀರವನ್ನು ವಲ್ಲಿಗೂ ಹೋಲಿಸಿ ಹೇಳಿದ್ದರಿಂದ ಅವಳ ಸೂಕ್ಷ್ಮತನವನ್ನೂ ವಿದ್ಯಾರ್ಥಿಗಳಿಗೆ ಚನ್ನಾಗಿ ಬಿಂಬಿಸುವಂತೆ ಹೇಳಬಹುದು. ಭಯಂಕರ ರಾಕ್ಷಸನ ಕೈಯಲ್ಲಿ ಸಿಕ್ಕ ಸೀತೆಗೂ, ಸಿಂಗದ ಕೈಯಲ್ಲಿ ಸಿಕ್ಕ ಹರಿಣಾಂಗನೆಗೂ ಏನೂ ಅಭ್ಯಂತರ ವಿಲ್ಲೆಂಬದನ್ನು ಹೇಳಬೇಕು.

ಸಾರಾಂಶ:—ಒಂದೊಂದು ಪದ್ಯವು ಯಾವಯಾವ ಸ್ವಾರಸ್ಯಗಳನ್ನೊಳಕೊಂಡಿರುವದೋ ಅವೆಲ್ಲವುಗಳನ್ನೂ ತಿಳಿಸಬೇಕಾದುದು ಬೋಧಕನ ಕರ್ತವ್ಯವಾಗಿರುವದು. ಇದರಿಂದ ಶಿಷ್ಯ ವರ್ಗಕ್ಕೆ ಉಂಟಾಗುವ ಲಾಭ, ಉತ್ಸಾಹ, ಅಭಿಮಾನ, ಆಸಕ್ತಿ ಮುಂತಾದವುಗಳು ಇಷ್ಟೇ ಎಂದು ಹೇಳಲಾಸಲ್ಲ. ಆದ್ದರಿಂದ ವಿದ್ಯಾರ್ಥಿಗಳ ಚಿತ್ತಾಕರ್ಷಣವನ್ನು ಮಾಡುವ ರೀತಿಯಿಂದ ನಮ್ಮ ಶಾಲಾಮಾಸ್ತರರು ವಿಷಯವನ್ನು ಬೋಧಿಸಲಿ ಎಂಬ ಉದ್ದೇಶದಿಂದ ಇದೊಂದು ಪದ್ಯವನ್ನು ಕಲಿಸುವ ಮಾದರಿಯನ್ನು ಇಲ್ಲಿ ತೋರಿಸಿರುವೆವು. ಅದನ್ನು ಶಕ್ಯವಿದ್ದ ಮಟ್ಟಿಗೆ ಅನುಕರಣ ಮಾಡಿಬಹುದೆಂದು ಆಶಿಸುವೆವು.

ಬಾಗಲಕೋಟೆಯಲ್ಲಾದ ಶಿಕ್ಷಕರ ಸಮ್ಮೇಲನವು.

——— :o: ———

(ಬರೆದು ಬಂದದ್ದು.)

ಮೊದಲೇ ಗೊತ್ತಾದ ಮೇರೆಗೆ ಮಾರ್ಚ ತಿಂಗಳ ೧೯ ಹಾಗು ೨೦ನೇ ತಾರೀಖಿನ ದಿವಸ ರಾವಸಾ. ಗೋವಾಳರಾವ ಜಮಖಂಡಿ ಗನೇ ಅ. ಡೆ. ಎ. ಇ. ಜಿಲ್ಹಾ ಬಿಜಾಪುರ ಇವರ ಅಧ್ಯಕ್ಷತೆಯ ಕೆಳಗೆ ಬಾಗಲಕೋಟೆಯ ಕನ್ನಡ ಶಾಲೆಯಲ್ಲಿ ಶಿಕ್ಷಕರ ಸಮ್ಮೇಲನವು ಕೂಡಿತ್ತು. ಸಭೆಗೆ ಶಿಕ್ಷಕ ಶಿಕ್ಷಿಕೆಯರು ಕೂಡಿ ೧೫೦ ಜನರು ಬಂದಿದ್ದರು. ಸಮ್ಮೇಲನದ ಸೆಕ್ರೆಟರಿಯವರಾದ ವಿ. ಕುಂಚೂರ ಇವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ "ಪ್ಲೇಗು, ಕಾಲರಾ ಈ ಎರಡೂ ಬೇನೆಗಳು ಈ ಊರಲ್ಲಿದ್ದರೂ ಇಷ್ಟು ಜನ ಶಿಕ್ಷಕರು ಇಲ್ಲಿ ನೆರೆದಿದ್ದನ್ನು ನೋಡಿದರೆ ಶಿಕ್ಷಣದ ವಿಷಯವಾಗಿ ಶಿಕ್ಷಕರಲ್ಲಿರುವ ಉತ್ಸಾಹವು ವ್ಯಕ್ತವಾಗುತ್ತದೆ." ಇ. ಹೇಳಿದನಂತರ "ಕಳೆದ ಸಮ್ಮೇಲನದಿಂದ ಶಾಲೆಯಲ್ಲಿ ಮಾಡಲ್ಪಟ್ಟ ಸುಧಾರಣೆಗಳು" ಎಂಬ ವಿಷಯದ ಮೇಲೆ ಕುಂದರಗಿಯ ಮಾಸ್ತರ ವಿ. ಕೆರೂರ, ಹಾಗು ನೀಲಗುಂದದ ಮಾಸ್ತರ ವಿ. ಸಂಗಮ ಇವರಿಬ್ಬರ ಸಿಬಂಧ ವಾಚನವಾಯಿತು. ಅದರಲ್ಲಿ ಅವರು ಹೇಳಿದ ಮುಖ್ಯಾಂಶಗಳಾವವೆಂದರೆ:—"ಊರ ಜನರ ಸಹಾನುಭೂತಿಯನ್ನು ಸಂಪಾದಿಸಿ ಶಾಲೆ

ಮನೆಯೆನ್ನು ಕಟ್ಟಸೋಣ, ಉಪಕರಣಗಳನ್ನು ದೊರಕಿಸೋಣ, ವಿದ್ಯಾರ್ಥಿಗಳ ಸಂಖ್ಯೆಯನ್ನು ಬೆಳಿಸೋಣ, ಹುಡುಗರಿಗೆ ಇನಾಮು ಕೊಡೋಣ, ಸ್ತ್ರೀ ಶಿಕ್ಷಣದ ಪ್ರಸಾರ ಇವೇ ಮುಂತಾದವುಗಳ ಬಗ್ಗೆ ಹೆಚ್ಚು ಲಕ್ಷ ಕೊಟ್ಟದ್ದಲ್ಲದೆ, ಸಣ್ಣ ಪುಟ್ಟ ಬೇನೆಗಳಿಗೆ ಔಷಧ ಕೊಡೋಣ, ಸಾಂಸರ್ಗಿಕ ರೋಗಗಳು ಹಬ್ಬದಂತೆ ಉಪಾಯ ಮಾಡೋಣ, ಪ್ಲೇಗದ ಪೂರ್ವ ಲಕ್ಷಣಗಳು ತೋರಿದಾಗ ಇನಾಕ್ಯುಲೇಶನದ ಬಗ್ಗೆ ಉಪದೇಶ ಮಾಡೋಣ, ಇವೇ ಮುಂತಾದ ಆರೋಗ್ಯ ಸಂಬಂಧದ ಸುಧಾರಣೆಗಳ ಬಗ್ಗೆಯೂ ಪ್ರಯತ್ನವು ಮಾಡಲ್ಪಟ್ಟಿತು. ನೀಲಗುಂದವು ವಿಜಾಪುರ ಜಿಲ್ಲೆಯ ಮುಲ್ಲಾಡವು. ಅಂಥಲ್ಲಿ ಅಲ್ಲಿಯ ಮಾಸ್ತರರು ಕ್ವಿನಾಯಿನನ್ನು ತರಿಸಿ, ಜನರನ್ನೂ ವಿದ್ಯಾರ್ಥಿಗಳನ್ನೂ ಮಲೇರಿಯಾ ಜ್ವರದಿಂದ ಮುಕ್ತರನ್ನಾಗಿ ಮಾಡಿದರು."

ಆ ಮೇಲೆ ಪೆನಶನರ ಮಹಾಲಕರಿಯವರಾದ ರಾವಸಾ. ಶಂಭು ಶಂಕರ ದಾತಾರ ಇವರು, ವಿದ್ಯಾರ್ಥಿಗಳು ನೀತಿವಂತರಾಗಬೇಕಾದರೆ ಅವರಿಗೆ ಕೆಲಮಟ್ಟಿಗೆ ಧಾರ್ಮಿಕ ಶಿಕ್ಷಣವನ್ನು ಕೊಡಬೇಕು; ಎಂಬ ಆಶಯದ ಭಾಷಣವನ್ನು ಮಾಡಿದರು. ಅನಂತರ ಅಧ್ಯಕ್ಷರು ಹೇಳಿದ್ದೇನಂದರೆ: —"ಆರೋಗ್ಯ ಸುಧಾರಣೆಯ ಬಗ್ಗೆ ಇದುವರೆಗೆ ಚರ್ಚೆಯಾಯಿತು. ಅದರಲ್ಲಿ ಕೆಲವರು ಇದನ್ನು ಅಧಿಕಾರದ ಬಲದಿಂದ ಮಾಡಬೇಕೆಂದು ಹೇಳಿದರು; ಕೆಲವರು ಅದಕ್ಕೆ ವಿರೋಧಿಸಿದರು. ಆದರೆ ಬರೇ ಅಧಿಕಾರದಿಂದಾಗುವ ಸುಧಾರಣೆಯು ನಿಜವಾದ ಸುಧಾರಣೆಯಲ್ಲ. ಅದು ಕೇವಲ ಒತ್ತಾಯವು. ವಿದ್ಯಾರ್ಥಿಗಳ ಮನಸು ಇದರ ಕಡೆಗೆ ತಿರುಗಿ ಅದರಿಂದ ಸುಧಾರಣೆಯಾದರೆ ಅದೇ ನಿಜವಾದ ಸುಧಾರಣೆಯು, ಮಿ. ದಾತಾರ ಇವರು ಹೇಳಿದಂತೆ ವಿದ್ಯಾರ್ಥಿಗಳು ಧರ್ಮದ ಪ್ರಕಾರ ನಡೆಯುವಂತೆ ಮಾಡಿದರೆ ಅವರು ನೀತಿವಂತರಾಗುವರೆಂಬುದರಲ್ಲಿ ಏನೂ ಸಂದೇಹವಿಲ್ಲ. ನೀತಿಶಿಕ್ಷಣವನ್ನು ಹ್ಯಾಗೆ ಕೊಡಬೇಕೆಂಬ ಬಗ್ಗೆ ಸರಕಾರದವರು ಸದ್ಯಕ್ಕೆ ವಿಚಾರ ಮಾಡುತ್ತಿರುವರು."

ಮಧ್ಯಾನ್ಹದಲ್ಲಿ ಮಾದರಿಯ ಪಾಠಗಳು ಕಲಿಸಲ್ಪಟ್ಟ ನಂತರ ಮೊದಲನೇ ದಿವಸದ ಕೆಲಸವು ಮುಗಿಯಿತು.

ಮರುದಿವಸ ೧೧ ಘಂಟೆಗೆ 'ಶಾಲಾಮಾಸ್ತರರ ಕರ್ತವ್ಯ, ಅದರಲ್ಲಿ ಅವರಿಗೆ ಬರುವ ಅಡಚಣೆಗಳು, ಮತ್ತು ಅವುಗಳನ್ನು ನೀಗುವ ಉಪಾಯಗಳು' ಈ ವಿಷಯಗಳ ಮೇಲೆ ನಿಬಂಧ ವಾಚನಗಳಾದವು. ಚರ್ಚೆಯಾದ ನಂತರ, ಅಧ್ಯಕ್ಷರು, —

"ಸಾಧ್ಯವಿರುವ ಶಾಲೆಗಳಲ್ಲಿಯಾದರೂ ಶಿಕ್ಷಕರು ವಾಚನಮಂದಿರಗಳನ್ನು ಸ್ಥಾಪಿಸಬೇಕು. ಹಳ್ಳಿಯ ಮಾಸ್ತರರು ೨-೩ ಕ್ಲಾಸುಗಳಿರುತ್ತವೆಂದು ಪದ್ಧತಿಯನ್ನು ಬಿಡಬಾರದು. ವಿಷಯಗಳು ಹೆಚ್ಚಾಗುವಂತೆ ಇದ್ದರೆ, ಮುಖ್ಯ ಮುಖ್ಯಭಾಗಗಳನ್ನು ಕಲಿಸಬೇಕೇ ಹೊರತು ಸುಲಭ ವಿಷಯಗಳ ಬಗ್ಗೆ ಹೆಚ್ಚು ವೇಳೆಯನ್ನು ಕಳೆಯಬಾರದು ಎಂದು ಹೇಳಿದರು.

ವಿ. ಕುಂಚೂರ ಮಾಸ್ತರರು ಬಾಗಲಕೋಟೆಯಜನರ ವತಿಯಿಂದ, ಬಂದ ಯಾವತ್ತೂ ಜನರಿಗೆ ಫಲಾಹಾರದ ವ್ಯವಸ್ಥೆಯನ್ನು ಮಾಡಿದರು. ಅನಂತರ ಕೆಲವು ಮಾದರಿಯ ಪಾಠಗಳು ಕಲಿಸಲ್ಪಟ್ಟವು. ಕಡೆಗೆ ಅಧ್ಯಕ್ಷರವರ ಸಮಾರೋಪದ ಭಾಷಣವಾಯಿತು. ಮಾಡಿಕೆಯಂತೆ ಬಂದ ಯಾವತ್ತೂ ಜನರಿಗೆ ತಾಂಬೂಲ ಪುಷ್ಪಹಾರಾದಿಗಳು ಕೊಡಲ್ಪಟ್ಟನಂತರ ಸಭೆಯು ವಿಸರ್ಜನೆಯಾಯಿತು.

ಈ ದಿವಸ ಸಂಜೆಯ ೬ ಘಂಟೆಗೆ ಬಾಗಲಕೋಟೆಯ ಪ್ರಸಿದ್ಧ ಡಾಕ್ಟರರಾದ ಇಂಗಳೀಕರ ಇವರು ಯಾವತ್ತೂ ಶಿಕ್ಷಕರನ್ನು ಫಲಹಾರಕ್ಕಾಗಿ ಕರೆದಿದ್ದರು. ಯಾವತ್ತೂ ಶಿಕ್ಷಕರ ವತಿಯಿಂದ ಕಟಗೇರಿಯ ಮಾಸ್ತರರಾದ ವಿ. ಮುರಾಠೆ ಇವರು ಡಾಕ್ಟರಸಾಹೇಬರ ಆಭಾರವನ್ನು ಮನ್ನಿಸಿದರು. ಅವರು ಹೇಳಿದ್ದೇನೆಂದರೆ — 'ಶಿಕ್ಷಕ ವರ್ಗಕ್ಕೆ ಈ ತರಹದ ಮರ್ಯಾದೆಯನ್ನು ಮಾಡಿ ತಮ್ಮ ಉದಾರ ಬುದ್ಧಿಯನ್ನು ವ್ಯಕ್ತ ಪಡಿಸಿದ್ದು, ನನ್ನ ನೋಡುವಿಕೆಯಲ್ಲಿ ಇದೇ ನೊಡಲನೇದು. ಡಾ. ಇಂಗಳೀಕರ ಇವರು ಚಿಕ್ಕಂದಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಕಲಿತದ್ದನ್ನು ಸ್ಮರಿಸಿ, ಪ್ರಾಥಮಿಕ ಶಾಲಾ ಮಾಸ್ತರರಿಗೆ ಈ ಪ್ರಕಾರ ಮರ್ಯಾದೆ ಮಾಡಿದ್ದರಿಂದ ನಾವೆಲ್ಲರೂ ಅವರಿಗೆ ಉಪಕೃತರಾಗಿರುವೆವು.'

ಆಮೇಲೆ ಡಾ. ಇಂಗಳೀಕರ ಇವರು — "ನಾನು ನಿಮಗೆ ಏನನ್ನು ಪೂರೈಸುವದನ್ನು ಮಾಡಿಸದೆ ಇದ್ದರೂ ಇನ್ನಾರಾದರೂ ಮಾಡಿಸಿಯೇ ಮಾಡಿಸುತ್ತಿದ್ದರು. ಇದಕ್ಕೆ ಏನೂ ಸಂಶಯವಿಲ್ಲ. ನೀವು ಕೈಕೊಂಡ ಕೆಲಸವೇ ಅಂಥ ಪವಿತ್ರವಾದದ್ದು. ಯಾವ ಉದ್ಯೋಗಕ್ಕಾದರೂ ಮೊದಲು ಶಿಕ್ಷಣವು

ಬೇಕೇಬೇಕು. ಆದ್ದರಿಂದ ನಮಗೆ ಆರಂಭದಲ್ಲಿ ಕಲಿಸಿದ ಶಿಕ್ಷಕವರ್ಗದ ಉಪಕಾರವನ್ನು ಸ್ಮರಿಸದಿರುವವನು ಕೇವಲ ಕೃತಘ್ನನವು. ನಾನು ನನ್ನ ಕರ್ತವ್ಯವನ್ನೇ ಮಾಡಿದ್ದೇನೆ, ಹೆಚ್ಚಿನದೇನೂ ಇಲ್ಲ " ಎಂದು ಹೇಳಿದರು.

ಅದೇದಿವಸ ರಾತ್ರಿ ಬಾಗಲಕೋಟೆಯ ಶಾಲಾವಿದ್ಯಾರ್ಥಿಗಳು 'ಮುಂಜ ಪಶ್ಚಾತ್ತಾಪ' ಎಂಬ ನಾಟಕ ಪ್ರಯೋಗವನ್ನು ಮಾಡಿ ತೋರಿಸಿದರು.

ಸಂಗಮದಲ್ಲಿ ಕೂಡಿದ ಶಿಕ್ಷಕರ ಸಮ್ಮೇಲನದಲ್ಲಿ ಪುನ ಗುಂದದ ಮಾಮಲೇದಾರರಾದ ರಾವಸಾಹೇಬ ಬಂಡೇರಾವ ಶಿರೋಳಕರ ಇವರು ಮಾಡಿದ ಭಾಷಣವು.

ಶಿಕ್ಷಕ ಜನರು ವಹಿಸಿರುವ ನೀತಿ ಶಿಕ್ಷಣದ ಕಾರ್ಯವು ಬಹು ಗಂಭೀರವುಳ್ಳದ್ದಿರುತ್ತದೆ. ಅದರಂತೆ ಹಳ್ಳಿಯ ಆರೋಗ್ಯ ಸುಧಾರಣೆಯನ್ನು ಮಾಡುವದಾದರೂ ಇದರಷ್ಟೇ ಮಹತ್ವದ್ದಿರುತ್ತದೆ; ಆದ್ದರಿಂದ ಶಿಕ್ಷಕರು ತಾವಿರುವ ಊರುಗಳ ಆರೋಗ್ಯ ಸುಧಾರಣೆಯ ಬಗ್ಗೆ ಜನರಿಗೆ ಉಪದೇಶ ಮಾಡಬೇಕೆಂದು ನನ್ನ ಸೂಚನೆಯದೆ. ಸಮ್ಮೇಲನಕ್ಕಾಗಿ ಬರತಕ್ಕ ಶಿಕ್ಷಕ ಜನರ ಹಾದಿಯ ಖರ್ಚಿನ ಬಗ್ಗೆ ಲೋಕಲ್ ಬೋರ್ಡಿನಿಂದ ಕೆಲವು ಟ್ಯಗಾನರೂ ಹಣದೊರೆಯುವ ಬಗ್ಗೆ ನಾನು ಅದಷ್ಟು ಯತ್ನ ಮಾಡುತ್ತೇನೆ. ಈ ಬಗ್ಗೆ ತಾಲೂಕಿನೊಳಗಿನ ಎಲ್ಲ ಸುಶಿಕ್ಷಿತ ಶ್ರೀಮಂತರಾದರೂ ಸಹಾಯ ಮಾಡಬೇಕೆಂದು ಅವರಿಗೆ ನನ್ನ ವಿನಂತಿಯದೆ. ಕುಶಲರಾದ ಶಿಕ್ಷಕರು ಶಿಕ್ಷಣದ ಕಾರ್ಯದಲ್ಲಿ ತೋರಿಸಿದ ಜ್ಞಾನತನದ ಬಗ್ಗೆಯೂ ವ್ಯಾಪ್ತ ವಿಚಾರವುಳ್ಳ ನಿಬಂಧಗಳನ್ನು ಓದಿದ ಬಗ್ಗೆಯೂ ನಾನು ಆನಂದವುಳ್ಳವನಾಗಿರುತ್ತೇನೆ. ಈಗ ಯುರೋಪಖಂಡದಲ್ಲಿ ನಡೆದಿರುವ ಮಹಾಯುದ್ಧವು ತಮ್ಮೆಲ್ಲರಿಗೆ ಗೊತ್ತಿರುವದಷ್ಟೇ; ಈ ಯುದ್ಧಕ್ಕೆ ಸಹಾಯವಮಾಡುವ ಸದುದ್ದೇಶದಿಂದ ಇದೇ ತಾಲೂಕ ಇಂಗಳಿಗಿ ಗ್ರಾಮದ ತಿಮ್ಮನಗೌಡರು ಎರಡು ಉತ್ತಮ ಎತ್ತುಗಳನ್ನು ಕೊಟ್ಟದ್ದಕ್ಕಾಗಿ ಯಾವದೊಂದು ದೊಡ್ಡ ಸಭೆಯಲ್ಲಿ ಅವರ ಉಪಕಾರ ಮನ್ನಿಸುವ ಬಗ್ಗೆ ಮೈ. ಕಲೆಕ್ಟರ ಸಾ. ಬಹಾದ್ದೂರ ಜಿಲ್ಲಾ ವಿಜಾಪುರ ಇವರಿಂದ ಬರೆದು ಬಂದ ಮೇರೆಗೆ ಈ ಹೊತ್ತಿನ ದಿವಸ ಈವಿದ್ವಜ್ಜನರ ಸಭೆಯಲ್ಲಿ ಅವರನ್ನು ಕರೆಸಿರುತ್ತೇವೆ. ಅವರು

ಮಾಡಿದ ಸಹಾಯಕ್ಕಾಗಿ ನಾವೂ ನಮ್ಮ ದಯಾಳು ಸರಕಾರದವರೂ ತುಂಬಾ ಆಭಾರಿಯಾಗಿದ್ದೇವೆ. ನಮ್ಮ ತಾಲೂಕಿನೊಳಗಿನ ಉಳಿದ ಸಾವುಕಾರ ಜನರಾದರೂ ಇದರಂತೆ ಈ ಪವಿತ್ರಕಾರ್ಯಕ್ಕೆ ಅನೇಕ ರೀತಿಯಿಂದ ಸಹಾಯವನ್ನು ಮಾಡಬೇಕು. ಮತ್ತು ಇಲ್ಲಿ ಕೂಡಿದ ಯಾವತ್ತೂ ಶಿಕ್ಷಕ ಜನರು ತಾವು ಕೆಲಸಮಾಡತಕ್ಕ ಊರುಗಳಲ್ಲಿಯ ಜನರಿಗೆ ಬೋಧಿಸಿ, ಅವರಿಂದ ಜನಸಹಾಯವೂ ದ್ರವ್ಯಸಹಾಯವೂ ದೊರೆಯುವಂತ ಮಾಡಬೇಕೆಂದು ನಮ್ಮ ಅಗ್ರಹದ ಸೂಚನೆಯಿದೆ.

ಸ್ಥಾಯಿಡ ಅಥವಾ ನೂತನ ಹಸ್ತಶಿಕ್ಷಣ ಪದ್ಧತಿ

(ಬರೆದು ಬಂದದ್ದು.)

ಸೃಷ್ಟಿ, ಜೀವನಕ್ರಮ ಮತ್ತು ಕೆಲಸ ಇವುಗಳಲ್ಲಿಯೇ ಎಲ್ಲ ತರದ ಶಿಕ್ಷಣದ ಅಂಕುರಗಳು ಕಂಡುಬರುತ್ತವೆ. ಮನುಷ್ಯನಿಗೆ ಜ್ಞಾನವು ಅವಶ್ಯವಾದದ್ದು. ಯಾಕಂದರೆ ಅವನು ಜೀವನ ಕ್ರಮದಲ್ಲಿ ಅನೇಕ ತೊಂದರೆಗಳೊಳಗಿಂದ ಪಾರಾಗಬೇಕಾಗುತ್ತದೆ. ಕೇವಲ ಜ್ಞಾನದಿಂದಲೇ ಅವನ ಕೆಲಸವು ಸಾಗುವದಿಲ್ಲ. ಅವನಲ್ಲಿ ಶರೀರ ಸಾಮರ್ಥ್ಯವಾದರೂ ಬಹಳ ಮಟ್ಟಿಗೆ ಬೇಕಾಗುವದು. ಈ ಎರಡು ಅವಶ್ಯಕವಾದ ಸಂಗತಿಗಳಲ್ಲಿ ಶಾರೀರಿಕ ಅನುಕೂಲತೆಗಳೇ ಬಹಳ ಮಹತ್ವದವು. ಇವುಗಳ ಸಹಾಯದಿಂದಲೇ ಅವನು ತನಗೆ ಬೇಕಾಗಿದ್ದ ಜ್ಞಾನದ ವರ್ಣಮಾಲೆಯನ್ನು ಕಲಿಯಲಾರಂಭಿಸುತ್ತಾನೆ. ಮನುಷ್ಯನು ಶಿಲ್ಪಿಗ ನಾಗುವ ಪೂರ್ವದಲ್ಲಿ ಬಹಳ ದಿವಸಗಳವರೆಗೆ ಕೆಲಸಗಾರನಾಗಿರಬೇಕಾಗುತ್ತದೆ. ಪೂರ್ಣವಿಚಾರಯುಕ್ತನಾಗುವ ಪೂರ್ವದಲ್ಲಿ ಅನೇಕ ಕೆಲಸಗಳಲ್ಲಿ ಸ್ವತಃ ತೊಡಗಬೇಕಾಗುತ್ತದೆ. ಸರ್ವದಾ ಮನುಷ್ಯನು ಪ್ರಾಣಿವರ್ಗಕ್ಕೆ ಸೇರಿದವನಾದರೂ ಅವನ ವಿಶ್ರಾಮಕಾಲದಲ್ಲಿ ಮಾತ್ರ ಅವನು ತತ್ವಜ್ಞಾನಿಯೂ ಶಾಸ್ತ್ರಜ್ಞನೂ ಆಗಿರುವನು. ಈ ಎಲ್ಲಸಂಗತಿಗಳಿಂದ ಇಂದ್ರಿಯ ಶಿಕ್ಷಣವೇ ಮಾನಸಿಕ ಶಿಕ್ಷಣದ ಮೂಲಾಧಾರವಾಗಿದೆಯೆಂದು ಹೇಳಬಹುದು. ಮನುಷ್ಯಪ್ರಾಣಿಯ ಸುಧಾರಣೆಯಲ್ಲಿ ಇಂದ್ರಿಯಗಳೇ ಬಹಳ ಸಹಾಯವನ್ನುಂಟು ಮಾಡಿರುವವು. ಪೂರ್ವಕಾಲದಲ್ಲಿ ಮನುಷ್ಯಪ್ರಾಣಿಯ ಶಿಕ್ಷಣದಲ್ಲಿ ನೇಗಿಲವೇ ಮೊದಲನೆಯ ಮೆಟ್ಟು ಆಗಿತ್ತು; ತತ್ವಜ್ಞಾನವು ಕೊನೆಯದಾಗಿತ್ತು. (ಮುಂದೆ ಸಾಗುವದು.)

ಪ್ರಕೃತಿ ಪಾಠಗಳು.

(ಮಾರ್ಚ ತಿಂಗಳಿಂದ ಮುಂದೆ ಸಾಗಿದ್ದು.)

ನಾಯಿ ಮತ್ತು ಬೆಕ್ಕು ಇವುಗಳ ಪರಸ್ಪರ ವ್ಯತ್ಯಾಸಗಳು.

ಶಿಕ್ಷಕರಿಗೆ ಸೂಚನೆ:—ಈ ಎರಡು ಪ್ರಾಣಿಗಳ ಅಂಗರಚನೆಯನ್ನೂ, ಸ್ವಭಾವಗಳನ್ನೂ ಹುಡುಗರು ತಿಳಿದ ಮೇಲೆ ಈ ಎರಡು ಪ್ರಾಣಿಗಳನ್ನು ಪರಸ್ಪರ ಹೋಲಿಸುವದಕ್ಕೆ ಒಂದು ಪಾಠವನ್ನಿಟ್ಟುಕೊಳ್ಳಬಹುದು. ಆದರಲ್ಲಿ ಅನುಕ್ರಮವಾಗಿ ಇವುಗಳ ಅಂಗರಚನೆ, ಅಭ್ಯಾಸಗಳು ಇವುಗಳಲ್ಲಿರುವ ವ್ಯತ್ಯಾಸಗಳನ್ನು ಹುಡುಗರಿಂದ ಹೇಳಿಸಬೇಕು.

ಅಂಗ, ಅಥವಾ ಅಭ್ಯಾಸ.	ಬೆಕ್ಕು.	ನಾಯಿ.
ತಲೆ.	ದುಂಡಾಗಿರುತ್ತದೆ.	ಸೀಟಾಗಿರುತ್ತದೆ.
ಮೂಗು.	ಮೋಟಾಗಿರುತ್ತದೆ.	ಮೊನೆಯಾಗಿರುತ್ತದೆ.
ಕಣ್ಣು.	ಹಗಲಿನಲ್ಲಿ ಕಣ್ಣಿನಲ್ಲಿ ಗುಡ್ಡು ಒಂದೇ ರೇಖೆಯಂತಿದ್ದು ರಾತ್ರಿಯಲ್ಲಿ ದುಂಡಾಗಿರುತ್ತದೆ. ರಾತ್ರಿಯಲ್ಲಿ ಹೆಚ್ಚು ದೃಷ್ಟಿಯುಳ್ಳದ್ದು.	ಹಗಲಿನಲ್ಲೂ ರಾತ್ರಿಯಲ್ಲೂ ಒಂದೇ ವಿಧವಾಗಿರುತ್ತದೆ. ಹಗಲು ಮಾತ್ರವೇ ಹೆಚ್ಚು ದೃಷ್ಟಿಯುಳ್ಳದ್ದು.
ಮೀಸೆಗಳು.	ಉದ್ದವಾಗಿಯೂ ದೃಢವಾಗಿಯೂ ಇರುತ್ತವೆ. ಕತ್ತಲೆಯಲ್ಲಿ ದಾರಿಯನ್ನು ತಿಳಿಸುವದಕ್ಕೆ ಸಹಾಯಕವಾಗಿರುತ್ತವೆ.	ಮೋಟಾಗಿರುತ್ತವೆ. ದೃಢವಾಗಿಲ್ಲ. ಯಾವ ಉಪಯೋಗಕ್ಕೂ ಬರುವದಿಲ್ಲ.
ದವಡೆಗಳು.	ಬಲವಾಗಿರುತ್ತವೆ. ಅವುಗಳಿಗೆ ಪಾರ್ಶ್ವಚಲನೆಯಿಲ್ಲ.	ಬಲವಾಗಿರುತ್ತವೆ. ಅವುಗಳಿಗೆ ಪಾರ್ಶ್ವಚಲನೆಯಿಲ್ಲ.
ಹಲ್ಲುಗಳು.	ಹರಿತವಾಗಿಯು, ಬಲವಾಗಿಯೂ ಇರುತ್ತವೆ. ಕಡಿಯುವದಕ್ಕೂ ಸೀಳುವದಕ್ಕೂ ತಕ್ಕಂತೆ ಇರುತ್ತವೆ.	ಹರಿತವಾಗಿಯೂ, ಬಲವಾಗಿಯೂ ಇರುತ್ತವೆ. ಕಡಿಯುವದಕ್ಕೂ, ಸೀಳುವದಕ್ಕೂ ತಕ್ಕಂತೆ ಇರುತ್ತವೆ.

ಅಂಗ, ಅಥವಾ ಅಭ್ಯಾಸ.	ಬೆಕ್ಕು.	ನಾಯಿ.
ನಾಲಿಗೆ.	ಒರಟಾಗಿಯೂ ಒಣಗಿದ್ದಾಗಿಯೂ ಇರುತ್ತದೆ. ಅದರಿಂದ ದ್ರವಗಳನ್ನು ಸೇವಿಸುತ್ತವೆ.	ನಯವಾಗಿಯೂ, ತೇವವುಳ್ಳದ್ದಾಗಿಯೂ ಇರುತ್ತದೆ. ಅದರಿಂದ ದ್ರವಗಳನ್ನು ಸೇವಿಸುತ್ತದೆ.
ಚರ್ಮ.	ಚರ್ಮದ ಮೇಲೆ ತುಪ್ಪಟವಿರುತ್ತದೆ.	ಕೂದಲಿರುತ್ತದೆ.
ಎದೆ.	ವಿಶಾಲವಾಗಿಲ್ಲ.	ವಿಶಾಲವಾದದ್ದು.
ಕಾಲು.	ಉದ್ದವಾಗಿಲ್ಲ. ಆದುದರಿಂದ ಅದು ಹೆಚ್ಚಾಗಿ ಓಡಾಡುವದಕ್ಕೆ ಒದಂಬಡುವದಿಲ್ಲ.	ಉದ್ದವಾಗಿರುತ್ತದೆ. ಎಷ್ಟು ಓಡಾಡಿದರೂ ದಣಿಯುವದಿಲ್ಲ.
ಅಂಗಾಲು.	ಅದರಲ್ಲಿ ಮಾಂಸಖಂಡಗಳಿರುತ್ತವೆ.	ಅದರಲ್ಲಿ ಮಾಂಸಖಂಡಗಳಿರುತ್ತವೆ. ಸ್ವಲ್ಪ ಕಠಿಣವಾಗಿರುತ್ತವೆ.
ಉಗುರುಗಳು.	ಉಗುರುಗಳನ್ನು ಯಾವಾಗಲೂ ಹೊರಗೆಬಿಟ್ಟುಕೊಂಡಿರುವದಿಲ್ಲ. ಜೀಕಾಡಾಗ ಮಾತ್ರ ಹೊರಗೆ ಬಿಟ್ಟುಕೊಳ್ಳುವದಕ್ಕೆ ತಕ್ಕ ಹಾಗೆ ಅವುಗಳ ರಚನೆಯು ಏರ್ಪಟ್ಟಿರುತ್ತದೆ.	ಉಗುರುಗಳು ಯಾವಾಗಲೂ ಹೊರಗೆ ಕಾಣುತ್ತಿರುತ್ತವೆ. ಅವುಗಳನ್ನು ಸೆಳೆದುಕೊಳ್ಳಲಾರದು
ಬಾಲ.	ಉದ್ದವಾಗಿಯೂ ದೃಢವಾಗಿಯೂ ಇರುತ್ತದೆ.	ಉದ್ದವಾಗಿಲ್ಲ.
ಬೇಟೆಯಾಡುವ ಕಾಲ.	ರಾತ್ರಿ.	ಹಗಲು
ಬೇಟೆಯಾಡುವರೀತಿ.	ಹೊಂಚು ಹಾಕುತ್ತಿದ್ದು ಹಿಡಿಯುತ್ತದೆ.	ಅಟ್ಟಿಕೊಂಡು ಹೋಗಿ ಹಿಡಿಯುತ್ತವೆ.
ಮುಖ್ಯ ಸ್ವಭಾವ.	ವಾಸಮಾಡುವ ಸ್ಥಳಗಳಲ್ಲಿ ಹೆಚ್ಚು ವಿಸ್ವಾಸವುಳ್ಳದ್ದು. ತಂತ್ರವುಳ್ಳದ್ದು.	ಒಡೆಯನ ವಿಷಯದಲ್ಲಿ ಬಹಳ ಪ್ರೀತಿಯನ್ನು ತೋರಿಸುತ್ತದೆ. ನಂಬಿಗೆಯುಳ್ಳ ಪ್ರಾಣಿ.

ಎತ್ತು, ಆಕಳುಗಳು.

ಹಿಂದಿನ ಪಾಠಗಳಿಂದ ಬೆಕ್ಕು, ನಾಯಿ, ಇವು ನಮಗೆ ಬಹಳ ಉಪಯೋಗಕರವಾದ ಪ್ರಾಣಿಗಳೆಂದು ತಿಳಿದೆವು. ಇವುಗಳಿಗಿಂತಲೂ ಹೆಚ್ಚು ಉಪಯೋಗವುಳ್ಳವುಗಳಾಗಿರುವದು ಮಾತ್ರವಲ್ಲದೆ ನಮಗೆ ಅನೇಕ ಕೆಲಗಳಿಗೆ ಅವಶ್ಯಕವಾಗಿ ಇದ್ದೇ ಇರಬೇಕಾದ ಪ್ರಾಣಿಗಳು ಕೆಲವು ಇರುವೆ. ಇಂಡಿಯದೇಶದಲ್ಲಿ ವಾಸಮಾಡುವ ಜನರು ಎತ್ತು-ಆಕಳುಗಳನ್ನು ನಾವ ಯಾವ ಕೆಲಸಗಳಲ್ಲಿ ಉಪಯೋಗಿಸುತ್ತಾರೆಂಬುವದು ಸಾಧಾರಣವಾಗಿ ಎಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ಈ ದೇಶದ ಜನರ ಮುಖ್ಯ ಜೀವನೋಪಾಯವಾದ ಕೃಷಿಕರ್ಮಕ್ಕೆ ಈ ಪ್ರಾಣಿಗಳು ಅತ್ಯಂತ ಅವಶ್ಯಕವಾದವು. ದೊಡ್ಡ ಊರುಗಳಲ್ಲಿ ಎತ್ತುಗಳು ಬಂಡಿಗಳನ್ನು ಎಳೆಯುವದು, ಆಕಳುಗಳು (ಹಸುಗಳು) ಹಾಲು, ಮೊಸರು, ತುಪ್ಪ, ಮೊದಲಾದ ಆಹಾರ ಪದಾರ್ಥಗಳನ್ನು ಒದಗಿಸುವದು ಇವು ಎಲ್ಲ ಪಟ್ಟಣನಿವಾಸಿಗಳಿಗೆ ಪರಿಚಿತವಾಗಿರುವಸಂಗತಿಗಳು. ಗ್ರಾಮಗಳಲ್ಲಿರುವ ಹುಡುಗರ ವಿದ್ಯಾಭ್ಯಾಸದಲ್ಲಿ ದನಗಳನ್ನು ಸಾಕುವಕ್ರಮವು ಒಂದು ಮುಖ್ಯಾಂಶಭಾಗವಾಗಿರಬೇಕೆಂದು ಹೇಳುವದಕ್ಕೆ ತಡಯಿಲ್ಲ. ಅವರಿಗೆ ಈ ವಿಷಯದಲ್ಲಿ ಸರಿಯಾದ ಜ್ಞಾನವಿಲ್ಲದರಿಂದ ಅವರು ಈ ಮೂಕ ಪ್ರಾಣಿಗಳನ್ನು ಅನೇಕ ವಿಧವಾದ ಹಿಂಸೆಗಳಿಗೆ ಗುರಿಮಾಡುತ್ತಾರೆ. ಶಿಕ್ಷಣದ ಕೆಲಸವನ್ನು ಕೈಗೊಳ್ಳುವವರು ಮಕ್ಕಳಲ್ಲಿ ಈ ಪ್ರಾಣಿಗಳ ವಿಷಯಕವಾದ ಸಹಾನುಭೂತಿಯನ್ನುಂಟುಮಾಡುವದನ್ನು ಲಕ್ಷ್ಯದಲ್ಲಿಡಬೇಕು.

ಹುಡುಗರು ಈ ಪ್ರಾಣಿಗಳ ವಿಮರ್ಶೆಯನ್ನು ನಡಿಸುವಾಗ ಒಂದು ಮಹತ್ವದ ಸಂಗತಿಯು ಅವರ ಅನುಭವಕ್ಕೆ ಬರುವದು. ನಾವು ಪ್ರೀತಿಸರಿಯಾಗಿ ನೋಡಿಕೊಳ್ಳುವದರಿಂದ ಎಂಥ ದೊಡ್ಡ ಪ್ರಾಣಿಯನ್ನು ಪೂರ್ಣವಾಗಿ ಸ್ವಾಧೀನಮಾಡಿಕೊಳ್ಳುತ್ತೇವೆ ಎಂಬುವದೇ.

ಆಕಳು, ಎಮ್ಮೆ, ಆಡು (ಮೇಕೆ, ಹೋತ) ಕುರಿ, ಜಿಗರೇ (ಜಿಂಕೆ) ಗಳ ಅವಯವ ನಿರ್ಮಾಣವು ಒಂದೇ ಬಗೆಯಾಗಿರುತ್ತದೆ. ಇವೆ ಸಸ್ಯಾಹಾರದಿಂದ ಜೀವಿಸುವ ಪ್ರಾಣಿಗಳು. ಬೆಕ್ಕು, ನಾಯಿ ಈ

ಎರಡು ಜಾತಿಗಳಿಗೆ ಸೇರಿದ ಜಂತುಗಳೆಲ್ಲವೂ ಮಾಂಸಾಹಾರಿಗಳಾದದ್ದರಿಂದ, ಮಾಂಸವನ್ನು ಸಂಪಾದಿಸುವದಕ್ಕೂ, ಅದನ್ನು ತಿನ್ನುವದಕ್ಕೂ ತಕ್ಕಂತೆ ಅವುಗಳ ಅವಯವಗಳಗಳು ನಿರ್ಮಿಸಲ್ಪಟ್ಟಿವೆ. ಆಕಳು, ಎತ್ತು ಇವು ಹುಲ್ಲು, ಕಡ್ಡಿ, ಹುರಳಿ, ಹತ್ತಿಯ ಬೀಜ, ಮೊದಲಾದವುಗಳನ್ನು ತಿಂದು ಬದಕುವದರಿಂದ, ಈ ಪ್ರಾಣಿಗಳ ಅಂಗರಚನೆಯು ಮಾಂಸ ಭಕ್ಷಕಗಳಿಗಿಂತ ಭಿನ್ನವಾಗಿರುತ್ತದೆ.

ಮೆಲಕಾಡಿಸುವದು:—ಆಕಳು, ಎಮ್ಮೆ, ಕುರಿ, ಜಿಗರೆ, ಮೊದಲಾದ ಪ್ರಾಣಿಗಳ ಸ್ವಭಾವದಲ್ಲಿ ಒಂದು ವಿಶೇಷವಾದ ಸಂಗತಿಯು ಎಲ್ಲರಿಗೂ ಸುಲಭವಾಗಿ ಗೋಚರವಾಗುವುದು. ಈ ಪ್ರಾಣಿಗಳು ಎಲ್ಲಾದರೂ ಮಲಗಿ ಕೊಂಡಾಗಲಿ ಅಥವಾ ನಿಂತುಕೊಂಡಾಗಲಿ ಇರುವಾಗ ನಾಯಿ, ಬೆಕ್ಕು ಇವುಗಳಹಾಗೆ ಇರದೆ, ದವಡೆಗಳನ್ನು ಅಡಿಸುತ್ತ ಆಹಾರವನ್ನು ಅಗಿಯುತ್ತಿರುತ್ತವೆ. ಆಕಳು ಮೇಯುತ್ತಿರುವಾಗ ತನಗೆ ಬೇಕಾದ ಮೇವನ್ನು ಆರಿಸಿ ತಿನ್ನದೆ, ಬಹಳ ಜಾಗ್ರತೆಯಾಗಿ ನುಂಗುವದು. ಅನಂತರ ಎಲ್ಲಾದರೂ ಒಂದು ಸ್ಥಳಕ್ಕೆ ಹೋಗಿ ಸೇರಿ ತಾನು ಅವಸರದಿಂದ ನುಂಗಿದ ಆಹಾರವನ್ನು ಬಾಯಿಗೆ ತಂದುಕೊಂಡು, ಚನ್ನಾಗಿ ಅಗಿದು ಪುನಃ ನುಂಗುವದು. ಆಕಳಿನ ಈ ಸ್ವಭಾವವನ್ನೇ ಮೆಲಕಾಡಿಸುವದೆಂದು ಹೇಳುತ್ತೇವೆ. ಆಕಳು, ಎಮ್ಮೆ, ಮೊದಲಾದವು ಏಕೆ ಮೆಲಕಾಡಿಸುತ್ತವೆ?

ಸ್ವಾಭಾವಿಕ ಸ್ಥಿತಿಯಲ್ಲಿರುವಾಗ ಈ ಪ್ರಾಣಿಗಳೆಲ್ಲವೂ ಗುಡ್ಡಗಾಡುಗಳಲ್ಲಾಗಲಿ, ಅಥವಾ ಕಾಡುಗಳ ಸಮೀಪದಲ್ಲಿರುವ ಬೈಲುಗಳಲ್ಲಾಗಲಿ ಹುಲ್ಲನ್ನು ಮೇಯುತ್ತವೆ. ಅಂತಹ ಪ್ರದೇಶಗಳಲ್ಲಿ, ಹುಲಿ, ಸಿಂಹ ಮೊದಲಾದ ಕ್ರೂರ ಜಂತುಗಳ ಬಾಧೆಯಿರುವದರಿಂದ ದನಗಳು ಒಂದು ಕಡೆಯಲ್ಲಿ ನಿಂತು ಸಾವಕಾಶವಾಗಿ ಆಹಾರವನ್ನು ತಿನ್ನುವದರಲ್ಲಿ ಅಪಾಯವು ಹೆಚ್ಚು. ಆದುದರಿಂದ ಅವು ತಮ್ಮ ಮೇವನ್ನು ಸಾಧ್ಯವಾದಷ್ಟು ತ್ವರೆಯಿಂದ ತೀರಿಸಿಕೊಂಡು ರಕ್ಷಣಸ್ಥಾನವನ್ನು ಸೇರಬೇಕು. ಈ ಸ್ವಭಾವಕ್ಕೆ ತಕ್ಕ ಹಾಗೆ ಈ ಪ್ರಾಣಿಗಳ ಶರೀರವಲ್ಲಿ ನಾಲ್ಕು ಜೀರ್ಣಕೋಶಗಳಿರುತ್ತವೆ. ಮೆಲಕಾಡಿಸುವ ಎಲ್ಲ ಪ್ರಾಣಿಗಳ ಅಂಗರಚನೆಯು ಒಂದೇ ವಿಧವಾಗಿರುತ್ತದೆ.

ಆಕಳ ಶರೀರ:—ಆಕಳ ಶರೀರವು ದೊಡ್ಡದಾಗಿಯೂ ಮತ್ತು ಭಾರವಾದದ್ದಾಗಿಯೂ ಇರುವದರಿಂದ ನಾಯಿ, ಬೆಕ್ಕು ಮೊದಲಾದವುಗಳ ಹಾಗೆ ವೇಗದಿಂದ ಓಡಲಾರದು. ಸಾವಕಾಶದಿಂದ ನಡೆಯುವದೇ ಅದಕ್ಕೆ ಸ್ವಾಭಾವಿಕವಾದ ಚಲನೆಯು.

ತಲೆ:—ಆಕಳ ತಲೆಯು ಉದ್ದವಾಗಿಯೂ ಅಗಲವಾಗಿಯೂ ಇರುತ್ತದೆ.

ಕೊಂಬುಗಳು (ಕೋಡುಗಳು):—ಮೇಲೆ ಹೇಳಿದ ಮೆಲಕಾಡಿಸುವ ಪ್ರಾಣಿಗಳ ಅಂಗಗಳಲ್ಲಿ ಕೊಂಬು (ಕೋಡು) ವಿಶೇಷವಾದದ್ದು. ಇದು ಸ್ವಲ್ಪ ಬಾಗಿದ್ದು ಇದರ ತುದಿಯು ಮೊನೆಯುಳ್ಳದ್ದಾಗಿರುತ್ತದೆ. ಅದರ ಶತ್ರುಗಳಿಂದ ರಕ್ಷಿಸಿಕೊಳ್ಳುವದಕ್ಕೆ ಈ ಕೊಂಬುಗಳೇ ಸಾಧನಗಳು. ಆಕಳ ಕೋಡುಗಳು ಒಳಗೆ ಪೊಳ್ಳಾಗಿರುತ್ತವೆ. ಅವುಗಳೊಳಗೆ ಅದೇ ಆಕಾರದ ಎಲುವು ವ್ಯಾಪಿಸಿರುತ್ತದೆ.

ಹಲ್ಲುಗಳು:—ಆಕಳ ಹಲ್ಲುಗಳು ಅದರ ಆಹಾರಕ್ಕೆ ತಕ್ಕದ್ದಾಗಿರುತ್ತವೆ. ಹುಲ್ಲು, ಕಡ್ಡಿ, ಮೊದಲಾದವುಗಳನ್ನು ಅಗಿದು ತಿನ್ನುವದಕ್ಕೆ ತಕ್ಕಹಾಗೆ ಎರಡು ದವಡೆಗಳಲ್ಲಿಯೂ ವಿಶಾಲವಾದ ಪಾರ್ಶ್ವದಂತಗಳಿರುತ್ತವೆ. ಆಕಳು ಮಾಂಸಾಹಾರಿಯಲ್ಲವಾದುದರಿಂದ ಅದಕ್ಕೆ ನಾಯಿ, ಬೆಕ್ಕು ಇವುಗಳಿಗೆ ಇರುವ ಹಾಗೆ ಕೋರೆ ಹಲ್ಲುಗಳಿಲ್ಲ. ಆಕಳ ಕೆಳ ದವಡೆಯ ಮುಂಭಾಗದಲ್ಲಿ ಆರು ಹಲ್ಲುಗಳಿರುತ್ತವೆ. ಮೇಲಿನ ದವಡೆಯ ಮುಂಭಾಗದಲ್ಲಿ ಹಲ್ಲುಗಳು ಇಲ್ಲದೆ ಬಿರುಸಾದ ರಬ್ಬರಿನಂತಿರುವ ಮಾಂಸ ಖಂಡವಿರುತ್ತದೆ. ಆಕಳು ಮೇಯುತ್ತಿರುವಾಗ ಹುಲ್ಲನ್ನಾಗಲಿ, ದಂಟನ್ನಾಗಲಿ, ದವಡೆಗಳ ಮುಂಭಾಗದಿಂದ ಹಿಡಿದು ಕೀಳುವದೇ ಹೊರತು ಕಡಿಯುವದಿಲ್ಲ.

ಮೂಗು:—ಆಕಳ ಮೂಗಿನ ಹೊಳ್ಳೆಗಳು ಅಗಲವಾಗಿರುತ್ತವೆ. ಈ ಪ್ರಾಣಿಗೆ ವಾಸನೆಯನ್ನು ಹಿಡಿಯುವದರಲ್ಲಿ ಸಾಮರ್ಥ್ಯವು ಹೆಚ್ಚು. ಈ ವಾಸನೆಯ ಶಕ್ತಿಯಿಂದ ತನಗೆ ಬರುವ ಅಪಾಯವನ್ನು ಮುಂಚಾಗಿಯೇ ತಿಳಿದು ಓಡಿಹೋಗುವದಕ್ಕೆ ಪ್ರಯತ್ನವಾಡುತ್ತದೆ.

ಕಣ್ಣು:—ಇವು ನಮ್ಮ ಕಣ್ಣುಗಳಂತೆ ಮುಖದ ಮುಂಭಾ
ಯೇ ಇರದೆ ಸ್ವಲ್ಪ ಪಾರ್ಶ್ವದಲ್ಲಿರುವದರಿಂದ ಇದರ ದೃಷ್ಟಿಯು
ಗಳಲ್ಲಿಯೂ ವ್ಯಾಪಿಸುತ್ತದೆ. ಕಣ್ಣುಗಳು ದೊಡ್ಡವಾಗಿಯೂ ಇವೆ.

ಕಿವಿಗಳು:—ಇವು ತಲೆಯ ಪಾರ್ಶ್ವಗಳಲ್ಲಿರುತ್ತವೆ. ಇವುಗ
ಟೇಕಾದಾಗ ಮೇಲಕ್ಕೂ ಕೆಳಗೂ ಅಡಿಸಬಲ್ಲದು.

ಚರ್ಮ:—ಆಕಳಚರ್ಮವು ಬಹಳ ಮಂದವಾಗಿದ್ದು;
ಮೇಲೆ ಮೋಟಾದ ಕೂದಲಿರುತ್ತದೆ.

ಕಾಲು:—ಎತ್ತು ಆಕಳುಗಳ ನಾಲ್ಕು ಕಾಲುಗಳು ಒಂದೇ
ವಾಗಿರುತ್ತವೆ ಇವುಗಳ ಅಂಗಾಲುಗಳು ಅಥವಾ ಪಾದಗಳು ಮು
ಲ್ಲಿ ಸೀಳಿರುತ್ತವೆ. ಆಕಳ ಒಂದೊಂದು ಪಾದಕ್ಕೂ ನಾಲ್ಕು ಬೆರಳು
ರುತ್ತವೆ. ಹಿಂಭಾಗದಲ್ಲಿರುವ ಬೆರಳುಗಳು ಮೋಟಾಗಿದ್ದು ಆಕಳು
ಯುವಾಗ ನೆಲವನ್ನು ಸೋಕುವದಿಲ್ಲ. ಮುಂಭಾಗದಲ್ಲಿ ಕೊಂಬಿನ
ಬಿರುಸಾದ ಕವಚವಿರತ್ತದೆ. ಆಕಳ ಪಾದಗಳಿಗೆ ಕೊಳಗಗಳೆಂಬ (ಖ
ಹೆಸರು. ಮೆಲಕಾಡಿಸುವ ಎಲ್ಲ ಪ್ರಾಣಿಗಳ ಪಾದಗಳು ಏಕರೀತಿಯ
ರುತ್ತವೆ. ಈ ಪ್ರಾಣಿಗಳಿಗೆ ಈ ಬಗೆಯಾದ ಪಾದಗಳು ಏತಕ್ಕಿರಬೇ
ದನಗಳಿಗೆ ಬೇಕಾದ ಹಸಿಯ ಹುಲ್ಲು ಸಾಧಾರಣವಾಗಿ ತೇವವುಳ್ಳ ಸ್ಥ
ಗಳಲ್ಲಿ ಬೆಳೆಯುತ್ತದೆ. ಇಂತರ ಸ್ಥಳಗಳಲ್ಲಿ ಈ ಪ್ರಾಣಿಗಳ ಕಾಲುಗ
ನೆಲದಲ್ಲಿ ಇಳಿಯ ಬೀಳದೆ ಇರಬೇಕು. ಈ ಕಾರಣದಿಂದಲೆ ಇವು
ಪಾದಗಳು ಸೀಳಿರುತ್ತವೆ.

ಬಾಲ:— ಆಕಳ ಬಲವು ಬಹಳ ಉದ್ದವಾಗಿರುತ್ತದೆ. ಇದ
ತುದಿಯಲ್ಲಿ ಕೂದಲು ಹೆಚ್ಚಾಗಿದ್ದು ಒಂದು ಕುಚ್ಚಿನಂತೆ (ಗೊಂಡೆಯ
ತೆ) ಇರುತ್ತದೆ. ಈ ಬಾಲವನ್ನು ಬೀಸುವದರಿಂದ ನೊಣಮೊದಲಾದ
ಗಳನ್ನು ಅಟ್ಟಿ ಅವುಗಳ ಬಾಧೆಯನ್ನು ತಪ್ಪಿಸಿಕೊಳ್ಳುತ್ತದೆ.

ಆಕಳ ಸ್ವಭಾವ ಮತ್ತು ಅದರಿಂದ ಉಪಯೋಗಗಳು:— ಆಕಳು ಬಹಳ ಸಾಧುವಾದಪ್ರಾಣಿಯಾಗಿರುತ್ತದೆ. ಸಣ್ಣ ಮಕ್ಕಳು ಕೂಡ ಅದರ ಹತ್ತರ ಧೈರ್ಯವಾಗಿ ಹೋಗಿ ಅದನ್ನು ಮುಟ್ಟುವ ಹುದು.

ಎತ್ತು ಆಕಳುಗಳು ಇವು ಬದುಕಿರುವಾಗ ನಮಗೆ ಯಾವ ಯಾವ ಕೆಲಸಗಳಿಗೆ ಉಪಯೋಗವಾಗುತ್ತವೆ. ಎಂಬುವದನ್ನು ಹಿಂದೆ ತಿಳಿಸಿರುತ್ತದೆ. ಅವು ಸತ್ತಮೇಲೂ ಅವುಗಳ ಶರೀರದ ಭಾಗಗಳು ಅನೇಕ ಪ್ರಕಾರವಾಗಿ ಉಪಯೋಗಿಸಲ್ಪಡುತ್ತಿದೆ. ಮಾಂಸಾಹಾರಿಗಳು ಇವುಗಳ ಮಾಂಸವನ್ನು ತಿನ್ನುತ್ತಾರೆ. ಅವುಗಳ ಚರ್ಮದಿಂದ ಬಗೆ ಬಗೆಯ ಸಾಮಾನುಗಳು ತಯಾರಾಗುತ್ತವೆ. ಇವುಗಳ ಕೊಂಬುಗಳಿಂದ ಬಾಚಣಿಗೆ, ಚಾಕು (ಜೂರಿ) ಗಳ ಹಿಡಿಕೆ ಮೊದಲಾದವುಗಳನ್ನು ಮಾಡುತ್ತಾರೆ. ಇವುಗಳ ಎಲವುಗಳಿಂದ (ಮೊಳೆಗಳಿಂದ) ಗುಂಡಿ ಮೊದಲಾದವುಗಳನ್ನು, ಇವುಗಳ ಕಾಲಿನ ಉಗುರುಗಳಿಂದ ಒಂದು ಬಗೆಯೆದ ಅಂಟನ್ನು, ಇವುಗಳ ಕೊಬ್ಬಿನಿಂದ ಮೇಣದಬತ್ತಿ (ಕ್ಯಾಂಡಲ್) ಸಾಬೂನು ಮೊದಲಾದವುಗಳನ್ನು ಮಾಡುವದಕ್ಕೆ ಉಪಯೋಗಿಸುತ್ತಾರೆ.

ಪಾಠಗಳ ಟಿಪ್ಪಣಿ.

ಪಾಠದ ವಿಷಯ—ಎತ್ತು ಆಕಳುಗಳು ಇವುಗಳ ಅಂಗರಚನೆ ಮತ್ತು ಸ್ವಭಾವಗಳು.

ಕಲಿಯುವ ಹುಡುಗರ ವಯಸ್ಸು—೯, ೧೦. (೩, ೪, ಇಯತ್ತೆ ಅಥವಾ ವರ್ಗದ ಹುಡುಗರು.)

ಪಾಠಗಳ ಕಾಲ—೪೦ ನಿಮಿಷಗಳ ೨ ಪಾಠಗಳು. (ಬೆಕ್ಕಿನ ಪಾಠದ ಹಾಗೆಯು ಇದನ್ನೂ ಭಾಗಗಳನ್ನಾಗಿ ಮಾಡಿಕೊಳ್ಳಬೇಕು.)

ಉದ್ದೇಶ ಮತ್ತು ಉಪಕರಣ—ಎತ್ತು ಆಕಳುಗಳು, ಬೈಲುಗಳಲ್ಲಿ ಹುಲ್ಲನ್ನು ಮೇಯುತ್ತಿರುವಾಗಲೂ ವಿಶ್ರಾಂತಿಗಾಗಿ ಮಲಗಿರುವಾಗಲೂ ಇವಗಳನ್ನು ಹುಡುಗರು ಹಲವು ವೇಳೆಗಳಲ್ಲಿ ನೋಡಬೇಕು. ಪಾಠಗಳ ದಿನಗಳಲ್ಲಿ ಈ ಪ್ರಾಣಿಗಳನ್ನು ಶಾಲೆಯ ಹೊರಗೆ ತಂದು ಅವಗಳ ಅಂಗರಚನೆಯ ವಿಚಾರವನ್ನು ನಡಿಸಬಹುದು. (ಈ ಜಾತಿಯ ಪ್ರಾಣಿಗಳ ಜೀರ್ಣಕೋಶಗಳ ವಿಶೇಷಸ್ಥಿತಿಯನ್ನು ತಿಳಿಸಲು ಚಿತ್ರಗಳನ್ನು ಉಪಯೋಗಿಸ ಬಹುದು.

ಮೊದಲನೇ ಭಾಗ.

ವಿಷಯ.	ಕಲಿಸುವ ಕ್ರಮ ಮತ್ತು ಪ್ರಶ್ನೆಗಳು.
ಆಕಳ ಶರೀರ:—ಆಕಳ ಶರೀರವು ನಾಯಿ, ಬೆಕ್ಕು ಮೊದಲಾದವುಗಳ ಶರೀರಕ್ಕಿಂತ ಬಹಳ ದೊಡ್ಡದಾಗಿರುತ್ತದೆ. ಅದು ಸಾಧಾರಣವಾಗಿ ೪ ಅಡಿಗಳಷ್ಟು ಎತ್ತರವಿರುತ್ತದೆ.	ಶಾಲೆಯ ಹೊರಗೆ ಅನುಕೂಲವಾದ ಸ ಳದಲ್ಲಿ ಒ ದು ಎತ್ತು ಅಥವಾ ಆಕಳನ್ನು ತಂದು ಹುಡುಗರನ್ ಅದರ ಸುತ್ತಲೂ ನಿಲ್ಲಿಸಿ ಅದರ ಒಟ್ಟು ಆಕಾರವನ್ ನೋಡಿರೆಂದು ಹೇಳಬೇಕು ಒಬ್ಬ ಹುಡುಗನನ್ನು ಅದ ಸವಿೂಪಕ್ಕೆ ಕರೆದು ಅವನಿಂದ ಆಕಳು ಎಷ್ಟು ಎತ್ತ ವಾದ ಪ್ರಾಣಿ ಎಂಬುವದನ್ನು ಹೇಳಿಸಬೇಕು. ಆಕ ಪ್ರಮಾಣಕ್ಕೂ ನಾಯಿಯ ಪ್ರಮಾಣಕ್ಕೂ ಯಾವ ತಾ ತಮ್ಯವಿರುತ್ತದೆ.?
(ಅ) ತಲೆ:-ಆಕಳ ತಲೆಯು ಉದ್ದವಾಗಿಯೂ ಅಗಲವಾಗಿಯೂ ಇರುತ್ತದೆ.	ಆಕಳ ತಲೆಯನ್ನು ಲಕ್ಷಿಸಿರೆಂದು ಹೇಳಿ ಅದರ ಆಕ ರ, ಪ್ರಮಾಣ ಇವುಗಳನ್ನು ಹುಡುಗರಿಂದ ಹೊರಡಿಸ ಬೇಕು?
(೧) ಕೊಂಬುಗಳು (ಕೋಡುಗಳು):— ಆಕಳತಲೆಯಲ್ಲಿ ಕೊಂಬುಗಳಿ(ಕೋಡುಗಳು)ರುತ್ತವೆ. ಇವು ಸಪ್ಪ ಬಾಗಿದ್ದು ಇವಗಳ ತುದಿಯು ಮೊನೆಯುಳ್ಳದ್ದಾಗಿರುತ್ತದೆ. ಅದರ ಶತ್ರುಗಳಿಂದ ರಕ್ಷಿಸಿಕೊಳ್ಳುವದಕ್ಕೆ ಈ ಕೋಡುಗಳೇ ಸಾಧನಗಳು.	ಬೆಕ್ಕು, ನಾಯಿ, ಇವುಗಳ ತಲೆಗಳಲ್ಲಿಲ್ಲದ ಯಾವ ಅಂಗವು ಆಕಳ ತಲೆಯಲ್ಲಿ ಕಂಡು ಬರುವದು? ಈ ಪ್ರಶ್ನೆಯ ಸಹಾಯದಿಂದ ಆಕಳ ಕೊಂಬು ಅಥವಾ ಕೋ ಡಿನ ವಿಚಾರಕ್ಕೆ ಬರಬೇಕು. ಇದು ಹೇಗಿರುತ್ತದೆ! ಕೋಡುಗಳಿಂದ ಆಕಳಿಗೆ ಉಪಯೋಗವೇನು? ಆಕ ಳಲ್ಲದೆ ಬೇರೆ ಯಾವ ಪ್ರಾಣಿಗಳಿಗೆ ಕೋಡುಗಳಿರುತ್ತವೆ!

ಲಕ್ಕುಂಡಿಯಲ್ಲಾದ ಶಿಕ್ಷಕರ ಸಮ್ಮೇಲನವು.

———:o:———

(ಫೆಬ್ರುವರಿ ತಿಂಗಳಿನಿಂದ ಮುಂದೆ ಸಾಗಿದ್ದು)

ಮ್ಯುನಸಿಪಲ್ ಮತ್ತು ಲೋಕಲ್‌ಬೋರ್ಡ ಶಾಲೆಗಳಿಂದ ಸುಮಾರು ೮೫ ಜನ ಮಾಸ್ತರರೂ, ಗದಗ ಶಾಲೆಯ ಡ್ರಿಲ್ ಮಾಡುವ ೫೦ ಹುಡುಗರೂ, ಕಸರತ್ತು ಮಾಡುವ ೧೦ ಹುಡುಗರೂ ಸಮ್ಮೇಲನಕ್ಕೆ ಬಂದಿದ್ದರು. ಮಿ. ಬಾಳೇಕುಂದ್ರಿ ಸಾ. ಡಿ. ಡೆ. ಕಲೆಕ್ಟರರವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ಕಾರ್ಯಕ್ರಮದಂತೆ ಮೊದಲಿನ ದಿವಸದ (ತಾ. ೨೨–೧೨–೧೭) ಸಮ್ಮೇಲನದ ಕೆಲಸವು ಮುಗಿದನಂತರ ಅಧ್ಯಕ್ಷರವರ ಭಾಷಣ ವಾಯಿತು. ಅವರು ಅಂದದ್ದೇನೆಂದರೆ: —

"ಈ ಹೊತ್ತು ನೂರಾರು ಜನ ಮಾಸ್ತರರು ಒತ್ತಟ್ಟಿಗೆ ಸೇರಿ ಪರಸ್ಪರರಿಗೆ ತಮ್ಮ ಅನುಭವದ ಲಾಭ ಮಾಡಿಕೊಡುವದನ್ನು ನೋಡಿ ನನಗೆ ಅತ್ಯಾನಂದವಾಗಿದೆ. ಇಂಥ ಸಭೆಗಳು ಪ್ರತಿವರ್ಷ ನಡೆಯುವಂತೆ ಉತ್ತೇಜನ ಕೊಡುವದು ಅವಶ್ಯವು. ಈ ಸಮ್ಮೇಲನಗಳನ್ನು ಕೂಡಿಸುವದರಿಂದ ಶಿಕ್ಷಕರ ಶಿಕ್ಷಣ ಪದ್ಧತಿಯು ಸುಧಾರಿಸುವದು. ಭಾವೀ ರಾಷ್ಟ್ರವಂತೂ ಅವರ ಕೈಯ್ಯಲ್ಲಿಯೇ ಇರುವದರಿಂದ ಅದೂ ಸುಧಾರಿಸುವದು. ಇಂಥ ಸಮ್ಮೇಲನಗಳನ್ನು ಪ್ರಚಾರದಲ್ಲಿ ತಂದ ಬಗ್ಗೆ ಶಿಕ್ಷಣ ಖಾತೆಯ ಅಧಿಕಾರಿಗಳನ್ನು ನಾನು ಬಹಳವಾಗಿ ಶ್ಲಾಘಿಸುತ್ತೇನೆ. ಸಮ್ಮೇಲನಗಳು ಆಗ ಹತ್ತಿ ಸುಮಾರು ಎರಡು ವರ್ಷಗಳಾದವು. ಈ ಅವಧಿಯಲ್ಲಿ ಹತ್ತೆಂಟು ಕಡೆಗೆ ಸಮ್ಮೇಲನಗಳು ಕೂಡಿದವು. ಅವುಗಳಲ್ಲಿ ಬಂದಕ್ಕಾದರೂ ಹೋಗಲಿಕ್ಕೆ ನನಗೆ ಅವಕಾಶವು ದೊರಯಲಿಲ್ಲ. ಈಗ ಮಾತ್ರ ಮಿ. ಪರ್ವತೀಕರ ಅ. ಡೆ. ಎ. ಇ. ಧಾರವಾಡ ಇವರಿಂದ ನನ್ನ ಕುತೂಹಲವು ಪೂರ್ಣವಾಯಿತು. ಅದ್ದರಿಂದ ಈ ಬಗ್ಗೆ ನಾನು ಮಿ. ಪರ್ವತೀಕರ ಇವರಿಗೆ ಅಭಾರಿಯಾಗಿದ್ದೇನೆ. ಶಿಕ್ಷಕರ ಶಿಕ್ಷಣ ಪದ್ಧತಿಯು ಸುಧಾರಿಸಿ ವಿದ್ಯಾಖಾತೆಯು ಅಭಿವೃದ್ಧಿಯನ್ನು ಹೊಂದಲಿಕ್ಕೆ ನನ್ನಿಂದ ಏನಾದರೂ ಸಹಾಯವಾಗುವಂತಿದ್ದರೆ ಅದನ್ನು ಕೂಡಲೆ ಒದಗಿಸಿಕೊಡಲಿಕ್ಕೆ ನಾನು ಸಿದ್ಧನಿದ್ದೇನೆ. ಈ ಬಗ್ಗೆ ವಿದ್ಯಾಖಾತೆಯ ಅಧಿಕಾರಿಗಳೂ ಪ್ರತಿಯೊಬ್ಬ ಮಾಸ್ತರನೂ

ನನ್ನಿಂದಾಗಬಹುದಾದ ಸಹಾಯವನ್ನು ಅವಶ್ಯವಾಗಿ ಕೇಳಬಹುದು." ಈ ಪ್ರಕಾರ ಭಾಷಣವಾದನಂತರ ಆ ದಿವಸದ ಕೆಲಸವು ಮುಗಿಯಿತು.

ಮರುದಿವಸ ಅನುಭವಿಕರಾದ ಶಿಕ್ಷಕರು ಅನೇಕ ವಿಷಯಗಳನ್ನು ಕಲಿಸಿ ತೋರಿಸಿದರು. ಆ ದಿವಸದ ಅಧ್ಯಕ್ಷರಾದ ಮಿ. ಪರ್ವತೀಕರ ಅ. ಡಿ. ಎ. ಇ. ಇವರು "ಮಲೇರಿಯಾ" ದ ಬಗ್ಗೆ ಏಳನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಒಂದು ಪಾಠವನ್ನು ಕಲಿಸಿ ತೋರಿಸಿದ್ದಲ್ಲದೆ, ನಾರು ಹುಣ್ಣಿನ ಬಗ್ಗೆ ಒಂದು ವ್ಯಾಖ್ಯಾನವನ್ನು ಕೊಟ್ಟರು. ಅಮೇಲೆ ಹೆಣ್ಣು ಮಕ್ಕಳು "ಹಾಲಿನ ಸ್ವಚ್ಛತೆ" ಯ ಬಗ್ಗೆ ಸಂಭಾಷಣವನ್ನು ಮಾಡಿದರು.

ತರುವಾಯ ಕಾರ್ಯದರ್ಶಿಗಳಾದ ಸುರಗೀಮಠ ಇವರು ಎಲ್ಲ ಸಭಿಕರ ಹಾಗು ಅಧ್ಯಕ್ಷರ ಆಭಾರ ಮನ್ನಿಸಿ, ಸಮ್ಮೇಲನಕ್ಕಾಗಿ ಬಂದ ಶಿಕ್ಷಕರ ಊಟದ ವ್ಯವಸ್ಥೆಯನ್ನು ಮಾಡಿಕೊಟ್ಟ ಮೆ. ರಾ. ಬಸವಲಿಂಗಪ್ಪ ಕುಲಕರ್ಣಿ ಹಾಗು ತೋಟಪ್ಪ ಶಟ್ಟರ ಮತ್ತು ಮೆ. ರಸೂಲ ಸಾ. ಯರಗುಡಿ ಇವರ ಉಪಕಾರವನ್ನು ಸ್ಮರಿಸಿದರು.

ಬಳಿಕ ವಿದ್ಯಾರ್ಥಿಗಳು ರಾಷ್ಟ್ರಗೀತವನ್ನು ಅಂದ ನಂತರ ಸಭೆಯು ವಿಸರ್ಜನೆಯಾಯಿತು.

ಧಾರ್ಮಿಕ ಶಿಕ್ಷಣದ ಮಹತ್ವ.

(ಬರೆದು ಬಂದದ್ದು.)

ತನ್ನ ಕುಟುಂಬದ ಇಲ್ಲವೆ ತನ್ನ ದೇಶದುನ್ನತಿಯಾಗಬೇಕಾದರೆ ಶಿಕ್ಷಣದವಶ್ಯಕತೆಯು ಬೇಕು. ಯಾವ ಶಿಕ್ಷಣದಿಂದ ದೇಶೋನ್ನತಿಯಾಗಿ ಪ್ರಜೆಗಳಿಗೆ ಶಾಂತಿ ಸುಖಗಳು ದೊರೆಯುವವೋ ಅದಕ್ಕೇ ಶಿಕ್ಷಣವೆನ್ನಬೇಕು. ಶಿಕ್ಷಣದ ಸಹಾಯದಿಂದ ಮನುಷ್ಯನು ಬೇಕಾದ ಕಾರ್ಯವನ್ನು ಮಾಡಬಲ್ಲನು. ಒಬ್ಬ ಮನುಷ್ಯನಿಗೆ ಒಂದು ಶಿಕ್ಷಣವನ್ನು ಕೊಟ್ಟರೆ ಅವನಿಗೆ ಅದರ ಪರಿಣಾಮವಾಗದೆ ಎಂದೂ ಇರಲಿಕ್ಕಿಲ್ಲ; ಆದರೆ ಆ ಶಿಕ್ಷಣವು ಮನುಷ್ಯನ ಶಾಂತಿ ಸುಖಗಳನ್ನನುಸರಿಸಿರಬೇಕು. ಶಿಕ್ಷಣವು ಮು

ಖ್ಯವಾಗಿ ಎರಡು ವಿಧವಾಗಿರುವದು. ಮೊದಲನೇದು ಸಾಮಾಜಿಕ ಶಿಕ್ಷಣವು, ಮತ್ತೊಂದು ಧಾರ್ಮಿಕ ಶಿಕ್ಷಣವು. ಸಾಮಾಜಿಕ ಶಿಕ್ಷಣವೆಂದರೆ ಎಲ್ಲರಿಗೂ ಒಂದೇ ವಿಧವಾಗಿ ಕೊಡಲ್ಪಡುವ ಶಿಕ್ಷಣವು. ಧಾರ್ಮಿಕ ಶಿಕ್ಷಣವೆಂದರೆ ಅವರವರ ಧರ್ಮಕ್ಕನುಕೂಲವಾಗಿ ಕೊಡಲ್ಪಡುವ ಶಿಕ್ಷಣವು. ಇವೆರಡರಲ್ಲಿ ಮೊದಲನೇ ಶಿಕ್ಷಣದಿಂದ ಸಮಾಜದಲ್ಲಿ ಐಕ್ಯ ಮೊದಲಾದ ಗುಣಗಳು ಬೆಳೆದರೂ ಅದು ಅವರ ಧರ್ಮಕ್ಕೆ ಹಾನಿಯನ್ನುಂಟುಮಾಡುವದಾಗಿದೆ. ಈ ಶಿಕ್ಷಣದ ಪ್ರಚಾರವು ಈಗಿನ ಕಾಲದಲ್ಲಿ ಬಲವತ್ತರವಾಗಿ ನಡೆದಿರುವರಿಂದ ಧಾರ್ಮಿಕ ಶಿಕ್ಷಣದ ಸುಳಿವೇ ಇಲ್ಲದಾಗಿದೆ. ಪೂರ್ವಕಾಲದಲ್ಲಿ ಅವರವರ ಧರ್ಮಕ್ಕನುಕೂಲವಾಗಿ ಶಿಕ್ಷಣವನ್ನು ಕೊಡುತ್ತಿದ್ದರು ಅದು ಆಗಿನ ಕಾಲದಲ್ಲಿ ಸುಖಕರವಾಗಿ ಪರಿಣಮಿಸಿದ್ದರೂ ಮುಂದೆ ಅದರ ಪರಿಣಾಮವು ಉತ್ತಮವಾಗಲಿಲ್ಲ. ಯಾಕಂದರೆ ಮೊದಲಿನ ಜನರು ಧಾರ್ಮಿಕ ಶಿಕ್ಷಣವು ದೇಶೋನ್ನತಿಗೆ ಮುಖ್ಯ ಕಾರಣವೆಂದು ತಿಳಿದು ಅವರು ಆ ಶಿಕ್ಷಣವನ್ನು ಹೊಂದಿ ತಮ್ಮ ತಮ್ಮ ಧರ್ಮಕ್ಕನುಸರಿಸಿ ನಡೆಯುತ್ತಿದ್ದರಾದ್ದರಿಂದ ಆ ಕಾಲಕ್ಕೆ ಅದು ಯೋಗ್ಯವಾಗಿಯೇ ಪರಿಣಮಿಸುತ್ತಿತ್ತು. ಆದರೆ ಈಗಿನ ಕಾಲದಲ್ಲಿ ಅದರ ಮಹತ್ವವನ್ನು ತಿಳಿಯದ ಜನರು ಅದನ್ನು ಹೀಯಾಳಿಸಿ ಅದಕ್ಕೆ ಸ್ಥಳವನ್ನು ಕೊಡಲಿಲ್ಲ. ಆದರೆ ಧಾರ್ಮಿಕಶಿಕ್ಷಣದ ಫಲಿತಾಂಶವನ್ನು ತಿಳಿದು ನೈತಿಕ ದೃಷ್ಟಿಗನುಸರಿಸಿ ಶಿಕ್ಷಣವನ್ನು ಕೊಟ್ಟರೆ ಅದರ ಉತ್ತಮ ಪರಿಣಾಮವು ಈಗಿನ ಕಾಲದಲ್ಲಿಯೂ ಆಗಬಹುದು ಧಾರ್ಮಿಕ ಶಿಕ್ಷಣಕ್ಕೆ ಮಹತ್ವವಿದ್ದಷ್ಟು ಸಾಮಾಜಿಕ ಶಿಕ್ಷಣಕ್ಕಿರುವದಿಲ್ಲ. ಧಾರ್ಮಿಕ ಶಿಕ್ಷಣದಿಂದ ಇಹದಲ್ಲಿ ಸುಖವು ದೊರೆಯುವಂತೆ ಪರಲೋಕದಲ್ಲಿಯೂ ಸುಖವು ದೊರೆಯುವದು. ವಿದ್ಯಾಧರ್ಮೇಣಶೋಭತೆ ॥ ಎಂಬ ವ್ಯಾಸಮಹರ್ಷಿಗಳ ವಾಕ್ಯದಂತೆ ಶಿಕ್ಷಣವು ಧರ್ಮಕ್ಕನುಕೂಲವಾಗಿರಬೇಕು. ಧಾರ್ಮಿಕ ಶಿಕ್ಷಣದಿಂದ ಬೇಕಾದ ಸುಧಾರಣೆಯನ್ನು ಮಾಡಬಹುದು. ಸಾಮಾಜಿಕ ಶಿಕ್ಷಣದಕೂಡ ಧಾರ್ಮಿಕ ಶಿಕ್ಷಣವನ್ನು ಕೊಟ್ಟರಂತೂ ದೇಶೋನ್ನತಿಗೆ ಅತ್ಯಂತ ಸಹಾಯವಾಗುವದು. ಆದರೆ ಧಾರ್ಮಿಕ ಶಿಕ್ಷಣವು ಪಕ್ಷಪಾತದ್ದಾಗಿರದೆ ಸಾಮಾನ್ಯವಾಗಿ ತಮ್ಮ ಧರ್ಮದ ಮೂಲ ತತ್ವಗಳನ್ನನುಸರಿಸಿರಬೇಕು. ಕಾಶಿಯಲ್ಲಿ ಸ್ಥಾಪಿಸಿದ ವಿಶ್ವ ವಿದ್ಯಾಲಯದ ಮುಖ್ಯೋದ್ದೇಶವಾದರೂ ಇದೇ ಇ

ರುವದು. ಆದರೆ ಆ ವಿದ್ಯಾಲಯದ ಉದ್ದೇಶಕ್ಕನುಸರಿಸಿ ಉಳಿದ ಎಲ್ಲ ವಿದ್ಯಾಲಯಗಳಲ್ಲಿ ಈ ತರದ ಶಿಕ್ಷಣವು ದೊರೆತರೆ ನಮ್ಮ ಭಾವೀ ಉನ್ನತಿಗೆ ಒಂದು ದೊಡ್ಡ ಸಾಧನವಾಗುವದು. ಧಾರ್ಮಿಕ ಶಿಕ್ಷಣದಿಂದ ರಾಜಭಕ್ತಿ-ಗುರು ಸೇವಾ-ಶಾಂತಿ-ವಿಲಕ್ಷಣ ವಿಚಾರ ಸರಣಿಗಳು ಹುಟ್ಟುವಂತೆ ಸಾಮಾಜಿಕ ಶಿಕ್ಷಣದಿಂದ ಹುಟ್ಟುವದಿಲ್ಲ. ಈ ವಿಷಯವಾಗಿ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಕೆಲವರು ಧಾರ್ಮಿಕ ಶಿಕ್ಷಣದಿಂದ ದೇಶಾಭಿಮಾನವಿಲ್ಲದಂತಾಗಿ ದೇಶೋನ್ನತಿಗೆ ವಿಘ್ನವಾಗುವದೆಂದೆನ್ನುವರು. ಇದು ತಪ್ಪು ತಿಳುವಳಿಕೆಯು; ಯಾಕಂದರೆ ತಮ್ಮ ದೇಶವು ತಮ್ಮ ಧರ್ಮಕ್ಕನುಸರಿಸಿರುವದೋ ಪರಧರ್ಮಕ್ಕನುಸರಿಸಿರುವದೋ ಎಂಬದನ್ನು ಸ್ವಲ್ಪ ವಿಚಾರಮಾಡಿ ನೋಡಿದರೆ ಅದರ ಫಲಿತಾಂಶವು ಯಾವ ಶಿಕ್ಷಣದಲ್ಲಿರುವದೆಂಬದು ಅವರಿಗೆ ಗೊತ್ತಾಗುವದು. ಧಾರ್ಮಿಕ ಶಿಕ್ಷಣದಿಂದ ದೇಶೋನ್ನತಿಯಾದಷ್ಟು ಸಾಮಾಜಿಕ ಶಿಕ್ಷಣದಿಂದಾಗಲಾರದು. ಸಾಮಾಜಿಕ ಶಿಕ್ಷಣ ಹೊಂದಿ ತಮ್ಮ ಧರ್ಮವನ್ನು ಬಿಟ್ಟು ಮತ್ತೊಂದು ಧರ್ಮದಲ್ಲಿ ಸೇರಿದ ಕೋಟ್ಯವಧಿ ಜನರನ್ನು ಈಗಲೂ ಕಣ್ಣಾರೆ ಕಾಣಬಹುದು. ಆದರೆ ಧಾರ್ಮಿಕ ಶಿಕ್ಷಣಹೊಂದಿದ ಮನುಷ್ಯನು ತನ್ನ ಧರ್ಮ ಜಾಗ್ರತೆಗಾಗಿ ತನ್ನ ದೇಶದಭಿಮಾನವನ್ನು ವಹಿಸಬೇಕಾಗುವದು. ಸಾಮಾಜಿಕ ಶಿಕ್ಷಣ ಹೊಂದಿ ತಮ್ಮ ಧರ್ಮ ಸ್ವರೂಪವು ಗೊತ್ತಿಲ್ಲದಿದ್ದರೆ ಮಾಡುವದೇನು? ಧಾರ್ಮಿಕ ಶಿಕ್ಷಣದಿಂದ ಸಾಮಾಜಿಕ ಸೇವೆಯನ್ನು ಮಾಡಲಿಕ್ಕೆ ಅನುಕೂಲವಾದಷ್ಟು ಸಾಮಾಜಿಕ ಶಿಕ್ಷಣದಿಂದಾಗಲಾರದು. ಈಗಿನ ಕಾಲದಲ್ಲಿ ಈ ತರದ ಸಾಮಾಜಿಕ ಶಿಕ್ಷಣದಿಂದ ತಮಗೆ ಕಲಿಸಿದ ವಿದ್ಯಾಗುರುಗಳ ಗೌರವವನ್ನು ಕೂಡಾ ಮರೆತು ಬಿಟ್ಟಿರುವರು. ಅಂದ ಮೇಲೆ ರಾಜಭಕ್ತಿ ಮೊದಲಾದ ಗುಣಗಳ ಪಾಡೇನು? ಈಗಿನ ಸಾಲೆಗಳಲ್ಲಿ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಕಲಿತಷ್ಟು ಗುರುಭಕ್ತಿ–ರಾಜಭಕ್ತಿ–ಧರ್ಮದಲ್ಲಿ ಶ್ರದ್ಧೆ ಮೊದಲಾದ ಗುಣಗಳನ್ನು ಬಿಡಲಿಕ್ಕೆ ಹತ್ತಿರುವರು. ಆದ್ದರಿಂದ ಪ್ರತಿಯೊಬ್ಬ ಶಿಕ್ಷಕನು ತಮ್ಮ ವಿದ್ಯಾರ್ಥಿಗಳ ಮನಸ್ಸಿನ ವೃತ್ತಿಯನ್ನು ಧಾರ್ಮಿಕ ಶಿಕ್ಷಣದ ಕಡೆಗೆ ಎಳೆದು, ಪಠ್ಯದ ಪದಾರ್ಥಗಳಿಂದ ಹೊಲಸಾದ ಕನ್ನಡಿಯನ್ನು ಸ್ವಚ್ಛವಾಗಿಟ್ಟುಕೊಂಡರೆ ತನ್ನ ಮುಖವು ಸ್ವಚ್ಛವಾಗಿ ಕಾಣುವಂತೆ, ವಿದ್ಯಾರ್ಥಿಗಳ ಮನಸನ್ನು ಪ್ರಸನ್ನವಾಗಿಟ್ಟುಕೊಂಡರೆ ಅವರಲ್ಲಿ ಧಾರ್ಮಿಕ ವಿಷ

ಯುವು ಸ್ವಚ್ಛವಾಗಿ ಪರಿಣಮಿಸಿ ಶಿಕ್ಷನಿಗೂ ವಿದ್ಯಾರ್ಥಿಗಳಿಗೂ ಕಲ್ಯಾಣವಾಗಿ ದೇಶೋನ್ನತಿಗೂ ಮುಖ್ಯ ಸಾಧನವಾಗುವದು. ಉಪ್ಪಿಲ್ಲದ ಅಡಿಗೆಯು ನಿಸ್ಸಾರವಿರುವಂತೆ ಧಾರ್ಮಿಕ ತತ್ವವಿಲ್ಲದ ಶಿಕ್ಷಣವಾದರೂ ನಿಸ್ಸಾರವಿರುವದು. ಊಟದಲ್ಲಿ ಇಚ್ಛೆ ಇಲ್ಲದ ರೋಗಿಗೆ ವೈದ್ಯನು ಔಷಧ ಕೊಟ್ಟು ಊಟದಲ್ಲಿ ಇಚ್ಛೆಯನ್ನು ಹುಟ್ಟಿಸುವಂತೆ ಗುರುಭಕ್ತಿ—ರಾಜಭಕ್ತಿ—ದೇಶಾಭಿಮಾನವಿಲ್ಲದ ಮನುಷ್ಯನಲ್ಲಿ ಧಾರ್ಮಿಕ ಶಿಕ್ಷಣದಿಂದ ಅವುಗಳನ್ನು ವೃದ್ಧಿಗೆ ತರಬಹುದು. ಸಾರಾಂಶ—ಧರ್ಮಕ್ಕನುಕೂಲವಾದ ಶಿಕ್ಷಣವೇ ದೇಶೋನ್ನತಿಗೂ ಪ್ರಜೆಗಳಿಗೂ ಇಹಪರಗಳಲ್ಲಿ ಸುಖವನ್ನೂ ಶಾಂತಿಯನ್ನೂ ಹುಟ್ಟಿಸುವದು; ಆದ್ದರಿಂದ ಪ್ರತಿಯೊಬ್ಬ ಶಿಕ್ಷಕನು ಧಾರ್ಮಿಕ ಶಿಕ್ಷಣದ ಕಡೆಗೆ ಹೆಚ್ಚು ದೃಷ್ಟಿಯನ್ನಿಡಬೇಕೆಂದು ವಿನಂತಿಯುಂಟು.

ಶ್ರೀ ನೀಲಕಂಠ ಶಿವಾಚಾರ್ಯ ಹೂಲಿ

ಶ್ರೀ ಕ್ಷೇತ್ರ ಕಾಶಿ.

ಪತ್ರವ್ಯವಹಾರ.

ಮೆ. ಕನ್ನಡ ಶಾಲಾಪತ್ರಿಕೆಯ ಸಂಪಾದಕರವರ ಸನ್ನಿಧಿಗೆ:—

ಏ. ವಿ.

ನನ್ನ ಸಣ್ಣ ಹುಡುಗನಿಗೆ ಕಲಿಸುತ್ತ ಕುಳಿತಾಗ್ಗೆ ನೆನಪಿಗೆ ಬಂದ ಸಂಗತಿಯನ್ನು ಬರೆದು ತಮ್ಮ ಕಡೆಗೆ ಕಳಿಸಿರುವೆನು. ಇದು ಚಿಕ್ಕವು ಕ್ಕಳ ಅಂಕಲಿಪಿಯಲ್ಲಿ ಇರತಕ್ಕದ್ದು. ಯಾವದಾದರೂ ಅಂಕಲಿಪಿಯಲ್ಲಿ ಇದ್ದರೆ ಮುದ್ರಿಸಬಾರದು. ಇಲ್ಲದಿದ್ದರೆ ಒತ್ತಕ್ಷರದ ಬಗ್ಗೆ ಉಪಯುಕ್ತವಾದ ಈ ಸೂಚನೆಯನ್ನು ಮುದ್ರಿಸುವಿರೆಂದು ಆಶಿಸುವೆನು

೧, ೨, ೩, ೪, ೫, ೬, ೭, ೮,

೧. ಇದು "ಗ" ಕಾರದ ಒತ್ತು. ೨, ಇದು "ತ" ಕಾರದ ಒತ್ತು. ೩, ಇದು "ನ" ಕಾರದ ಒತ್ತು. ೪. ಇದು "ಳ" ಕಾರದ ಒತ್ತು.

೫. ಇದನ್ನು ಮೇಲೆ ಮಾರುತಿಯ ಬಾಲದಂತೆ ಎಳೆದರೆ 'ಕನ್ನಡ "ಶ್ರಿ ಆಗುವದು. ೬. ಇದು "ಮು" ಕಾರದ ಒತ್ತು. ೭. ಇದು "ಯ ಕಾರದ ಒತ್ತು. ೮. ಇದು "ವ" ಕಾರದ ಒತ್ತು. ೯. ಇದು ರೇ ಇಲ್ಲವೆ ಆರ್ಕಾವಳಿ.

ಯಮ್ಮಿನಗಟ್ಟಿ
೧೮–೩–೧೭

ನರಸಿಂಹಾಚಾರ್ಯ ಪುಣೇಕರ,
(ಕಾವ್ಯಾನಂದ.)

ಪತ್ರಗಳಸಾರಾಂಶ.

ಗದಗ ತಾಲೂಕ ನಾಗಾವೀ ಶಾಲೆಯು ಒಕ್ಸಿಸ ಸಮಾರಂಭಕ್ಕ ಊರೊಳಗಿನ ಸಭ್ಯಗೃಹಸ್ಥರು ೧೫ ರೂ. ಗಳನ್ನು ಕೂಡಿಸಿಕೊಟ್ಟರೆಂದ "ಪ್ರಭಯ್ಯಾ ಮರಿದೇವರವ.ಠ" ಎಂಬವರು ತಿಳಿಸುತ್ತಾರೆ.

ಹೊನ್ನಾವರ ತಾಲೂಕ ತೊಪ್ಪಲಕೇರಿ ಗ್ರಾಮದ ಶಾಲಾ ಪಂಚರ ಪ್ರಮುಖರಾದ ಮ. ಹೊಸಬಯ್ಯ ದೇವನಾಯಕ ಎಂಬವರು, ಸ್ವ ೬೦ ರೂ. ೮. ಆಣೆಗಳನ್ನು ಖರ್ಚುಮಾಡಿ, ಶಾಲೆಯ ಮುಂದಿನ ಅಂಗಳ ಕಲ್ಲಿನ ಅವಾರ, ಉತ್ತಮವಾದ ಹಾದಿಗಳನ್ನು ಮಾಡಿಸಿಕೊಟ್ಟರೆಂತಲ. ಇದು ಅವರಿಗೆ ಭೂಷಣವೆಂತಲೂ ಆ ಶಾಲೆಯ ಶಾಸ್ತರರು ಬರೆಯ ತ್ತಾರೆ.

"ತಾರೀಖು ೧೮–೧೧–೧೪ನೇ ದಿವಸ ಸ್ಥಾಪನೆಯಾದ ಗಾಡಗೋ (ತಾ. ರೋಣ) ಶಾಲೆಯ ಇಮಾರಾತು ಅಗದೀ ಸಣ್ಣದಿದ್ದುದರಿಂದ ಬಹಳ ಅಡಚಣಿಯಾಗುತ್ತಿತ್ತು. ಮೆ. ಬಾಳೇಕುಂದ್ರಿ ಸಾ. ಡಿ. ಡೆ. ಕಲೆಕ್ಟ ಇವರು ಶ್ರೀಮಂತ ಇನಾಮದಾರರಿಗೂ ಸ್ಕೂಲ ಪಂಚರಿಗೂ ಇವ ರತು ಬೆಳಿಸಿಕೊಡುವ ಬಗ್ಗೆ ಸೂಚನೆ ಮಾಡಿದ ಪ್ರಕಾರ, ಸಧರಿಯವರ ವರ್ಗಣಿಯಿಂದ ಹಣ ಕೂಡಿಸಿ ಮೊದಲಿನ ಇಮಾರತಿಗೆ ಹೊಂದಿಯೆ

೬೦ ಹುಡುಗರಿಗೆ ಸಾಲುವಷ್ಟು ಹೊಸ ಇಮಾರತನ್ನು ಕಟ್ಟಿಸಿಕೊಟ್ಟಿರುವರು. ಇದು, ಸಾಹೇಬ ಬಹಾದ್ದೂರವರಿಗೂ ಸಧನರಿಗೂ ಭೂಷಣವೇ ಸರಿ" ಎಂದು ಆ ಶಾಲೆಯ ಮಾಸ್ತರರು ಬರೆಯುತ್ತಾರೆ.

"ಗದಗ ಸೆಂಟ್ರಲ್ ಸ್ಕೂಲಿನಲ್ಲಿ ವಾಚನಾಲಯವು ಸ್ಥಾಪಿತವಾಗಿದ್ದು ಅದರ ೧ನೇ ವಾರ್ಷಿಕ ಸಮಾರಂಭವು ತಾ. ೨—೨—೧೩ನೇ ದಿವಸ ರಾ. ಬ. ಬಾಳೇಕುಂದ್ರಿ ಡಿ. ಡೆ. ಕಲೆಕ್ಟರರವರ ಅಧ್ಯಕ್ಷತೆಯ ಕೆಳಗೆ ನೆರವೇರಿತು. ರಾವಬ. ರೊದ್ದರಾಯರೂ, ರಾವಸಾ. ಪರ್ವತೀಕರ ಅ. ಡೆ. ಯವರೂ ಸಮಾರಂಭಕ್ಕೆ ಬಂದಿದ್ದರು. ವಾಚನಾಲಯದ ಅವಶ್ಯಕತೆಯನ್ನೂ ಅದರಿಂದಾಗುವ ಲಾಭಗಳನ್ನೂ ಕುರಿತು ಹೆ. ಮಾಸ್ತರ ತಲವಾಯಿ ಇವರು ಒಂದು ನಿಬಂಧವನ್ನು ಓದಿದರು. ವಾಚನಾಲಯದ ವ್ಯವಸ್ಥೆಯನ್ನು ನೋಡಿ ಉಭಯ ರಾವಬಹಾದ್ದೂರವರು ಸಂತೋಷಭರಿತರಾದರು. ಮತ್ತು ಅಧ್ಯಕ್ಷರು ಯಾವದೊಂದು ಪುಸ್ತಕ ಕೊಳ್ಳಲಿಕ್ಕೆಂದು ೫ ರೂ. ಗಳನ್ನು ಕೊಟ್ಟರು" ಇವೇ ಮುಂತಾದ ಸಂಗತಿಗಳನ್ನು ಮಿ. ಪ. ಕೇ. ರಂಗಾಪುರ ಎಂಬವರು ತಿಳಿಸುತ್ತಾರೆ.

ಸಾಭಾರ ಸ್ವೀಕಾರ.

೧. **ಡೆಕ್ಕನ್ ಕಾಲೇಜ ಕ್ವಾರ್ಟರ್ಲಿ:**—ವರ್ಷ: ೨೪. ಸಂಚಿಕೆ ೩।೪, ಸಂಪಾದಕ, ಬಿ ಎಮ್. ಪಾಟೀಲ B. A. ದಕ್ಷಿಣಾಫೆಲೋ. ಪುಟ ಸಂಖ್ಯೆ ೧೩೦, ಬೆಲೆ ೧ ರೂ.

ಈ ಪತ್ರಿಕೆಯು ಹೊರಡಹತ್ತಿ ಇಂದಿಗೆ ೨೪ ವರ್ಷಗಳಾದವು. ಅಂದಿನಿಂದ ಇಂಗ್ಲಿಷಿನಲ್ಲಿಯೂ ಮರಾಠಿಯಲ್ಲಿಯೂ ಆ ಕಾಲೇಜದ ವಿದ್ಯಾರ್ಥಿಗಳಿಂದ ಲೇಖಗಳು ಬರೆಯಲ್ಪಡುತ್ತಿರುವವು. ಈಗ ಆರೇಳು ವರ್ಷಗಳ ಹಿಂದೆ ನಮ್ಮ ಕರ್ನಾಟಕದ ವಿದ್ಯಾರ್ಥಿಗಳಲ್ಲಿಯೂ ಸ್ಫೂರ್ತಿಯುಂಟಾಗಿ, ಅವರಿಂದ ಕ್ರಮಶಃ ಲೇಖಗಳುಬರಹತ್ತಿದವು. ಈಗ ಆ ಪತ್ರಿಕೆಯು ನಾಲ್ಕನೇ ಪಾಲು ಸ್ಥಳವನ್ನು ನಮ್ಮ ಕನ್ನಡ ಭಾಷೆಯು ವ್ಯಾಪಿಸಿದ್ದನ್ನು ನೋಡಿ ನಮಗೆ ಒಳ್ಳೇ ಅಭಿಮಾನವೆನಿಸುತ್ತದೆ. ವಿದ್ಯಾರ್ಥಿಗಳ

ಲೇಖನಿಯಿಂದಿಳಿದ ಈ ಲೇಖಗಳು ಬಳ್ಳೇ ವಿಜಸ್ವಿಯುಳ್ಳವುಗಳಾಗಿರುವವು
ಕಾಲಕ್ಕನುಸರಿಸಿ ಸ್ವತಂತ್ರ ವಿಚಾರದಿಂದ ಬರೆಯಲ್ಪಟ್ಟಿರುವ ಲೇಖಗಳ
ಆರಿಸಲ್ಪಟ್ಟಿರುವವು ಭಾಷೆಯು ಲಲಿತವಾಗಿದೆ. "ಕಲಿಯುಗ"ದ ಬಗ
ಕೊಟ್ಟ ಪದ್ಯಗಳಾದರೂ ಸರಳವೂ ಸುಬೋಧವೂ ಆಗಿರುವವು. ನಾರಾ
ಶ:—ಡೆಕ್ಕನ ಕಾಲೇಜದೊಳಗಿನ ನಮ್ಮ ಕರ್ಣಾಟಕ ಬಂಧುಗಳು ಕ
ಕೊಂಡ ಈ ಕಾರ್ಯವು ಸ್ತುತ್ಯವಾದದ್ದಿದ್ದು, ಬಳ್ಳೇ ಬೆಳಿಗೆಯ ಸ್ಥಿತಿಯ
ಲ್ಲಿದೆ. ಅಭಿಮಾನವುಳ್ಳ ನಮ್ಮ ಶಿಕ್ಷಕವರ್ಗವು ಈ ಪತ್ರಿಕೆಯನ್ನು ತ
ಸಿ ಓದಬೇಕೆಂದು ನಮ್ಮ ಸೂಚನೆಯಿದೆ. ನಮ್ಮ ಕಡೆಗೆ ಈ ಸಂಚಿ
ಯನ್ನು ಕಳಿಸಿದ್ದಕ್ಕಾಗಿ ಆ ಸಂಪಾದಕರ ಆಭಾರವನ್ನು ಮನ್ನಿಸಿ, ಈ
ಪತ್ರಿಕೆಯು ಇನ್ನೂ ಹೆಚ್ಚು ವೈವಿಧ್ಯತೆಯನ್ನು ಪಡೆಯಲೆಂದು ಹಾರೈಸ
ವೆವು.

---

೨. ಬೆಂಗಳೂರಿನಲ್ಲಿನ ವಿಜ್ಞಾನ ಪ್ರಚಾರಿಣೀ ಸಮಿತಿಯವರಿಂ
ಹೊರಡುವ ಮಾಸ ಪತ್ರಿಕೆಯ ಪ್ರಥಮ ವರ್ಷದ ಪ್ರಥಮ ಸಂಚಿಕೆಯ
ನಮ್ಮ ಕಡೆಗೆ ಬಂದಿದೆ. ಅದನ್ನು ನಾವು ಅತ್ಯಾದರದಿಂದ ಸ್ವೀಕರಿಸುವೆ
'ವಿಜ್ಞಾನ' ಪತ್ರಿಕೆಯ ಉದ್ದೇಶವು, ಸಾಮಾನ್ಯ ಜನರಲ್ಲಿ ಶಾಸ್ತ್ರೀಯ ವಿ
ಯದ ಜ್ಞಾನವನ್ನು ಹಬ್ಬುಗೊಳಿಸುವದಿರುತ್ತದೆ. ಅದಕ್ಕೆ ತಕ್ಕಂತೆ ಈ
ಸಂಚಿಕೆಯಲ್ಲಿ ಬಂದ ಸಸ್ಯಾಹಾರಗಳು, ಸೊಳ್ಳೆಯ ಕಾಟ, ಆರ್ಕಿಮಿ
ಸನ ಚರಿತ್ರೆ ಮುಂತಾದ ಲೇಖಗಳು ಬಳ್ಳೇ ಬೋಧಕಗಳಾಗಿವೆ. 'ವಿ
ಧ ವಿಜ್ಞಾನ ವಿಷಯ ಸಂಗ್ರಹ" ವಂತೂ ನಮ್ಮ ಶಿಕ್ಷಕ ವರ್ಗಕ್ಕೆ ಅತ್ಯು
ಯುಕ್ತವಾಗಿದೆ. ಮುದ್ರಣವು ಮುದ್ದಾಗಿದೆ. ಸರ್ವಾಂಗ ಸುಂದರ
ದ ಈ ಮಾಸ ಪತ್ರಿಕೆಯು ಯಾವತ್ತು ಶಾಲಾಮಾಸ್ತರರೂ ವಾಚನ ಮ
ದಿರಗಳ ಸೆಕ್ರೆಟರಿಗಳೂ ತರಿಸಲು ಯೋಗ್ಯವಾಗಿದೆ. ಚಂದಾಮೊಬಲ
ವರ್ಷಕ್ಕೆ ಅಂಚೇ ವೆಚ್ಚ ಸೇರಿ ಮೂರು ರೂಪಾಯಿ.

ಎ. ಶಾ. ಪ.

ಶಾಲಾಪತ್ರಕ.

ಪುಸ್ತಕ ೫೩. | ಮೇ ೧೯೧೭. | ಸಂಚಿಕೆ ೫.

ಮಹತ್ವದ ಸರ್ಕ್ಯೂಲರ.

ಈ ವೊದಲು ನಮ್ಮ ವಾಚಕರಾದ ಶಿಕ್ಷಕರಿಗೆ ಮೇಲಿಂದ ಮೇಲೆ ತಮ್ಮ ರಾಜಕೀಯ ಹಾಗು ಸಾಮಾಜಿಕ ಕರ್ತವ್ಯಗಳ ಬಗ್ಗೆ ಎಚ್ಚರಿಕೆಯನ್ನು ಕೊಡುತ್ತ ಬಂದಿರುವೆವು. ಅವುಗಳಲ್ಲಿ ಸದ್ಯದ ಮಹಾಯುದ್ಧದಲ್ಲಿ ಮಾಡತಕ್ಕಂಥ ಕರ್ತವ್ಯವು ಎಲ್ಲ ರೀತಿಯಿಂದಲೂ ಮಹತ್ವದ್ದಾದ್ದರಿಂದ ಅದರ ಬಗ್ಗೆ ಈ ಸಂಚಿಕೆಯನ್ನು ಸಂಪೂರ್ಣವಾಗಿ ಉಪಯೋಗಿಸಬೇಕೆಂದು ಯೋಚಿಸಿರುವೆವು.

ಸದ್ಯದಯುದ್ಧದಲ್ಲಿ ಎಲ್ಲಕಡೆಗೂ ನಮ್ಮ ಸಾರ್ವಭೌಮರವರಿಗೆ ಜಯವು ದೊರೆಯಹತ್ತಿದೆ. ಅದರೆ ಅದರಲ್ಲಿ ಸಂಪೂರ್ಣವಾಗಿ ಜಯವು ಬಂದು ಈ ಯುದ್ಧವು ತೀವ್ರವಾಗಿ ಮುಗಿಯುವದು ಎಲ್ಲರಿಗೂ ಹಿತಕರವಾದ ಸಂಗತಿಯಾಗಿದೆ. ಈ ಯುದ್ಧದಲ್ಲಿ ನಮ್ಮ ಬಾದಶಹರವರಿಗೆ ಪ್ರತಿದಿವಸ ಏಳುಕೋಟಿ ರೂಪಾಯಿಗಳ ಖರ್ಚ ಬರುತ್ತದೆ. ಇಷ್ಟು ರೂಪಾಯಿಗಳೆಂದರೆ ಎಷ್ಟೆಂಬ ಕಲ್ಪನೆಯು ಸಹ ನಮ್ಮಲ್ಲಿಯ ಸಾಧಾರಣ ಜನರಿಗೆ ಆಗಲಿಕ್ಕಿಲ್ಲ. ಸಂಯುಕ್ತ ಪಕ್ಷದ ಬೇರೆ ಬೇರೆ ರಾಷ್ಟ್ರಗಳಿಗೆ ಬೇಕಾಗುವ ಮದ್ದು ಗುಂಡು ಮುಂತಾದ ಯುದ್ಧದ ಸಾಮಗ್ರಿಗಳನ್ನು ಒದಗಿಸಿಕೊಡುವದಕ್ಕಾಗಿ ಬೇಕಾಗುವ ದ್ರವ್ಯವು ಬೇರೆ. ಈ ಯುದ್ಧದಲ್ಲಿ ರಾಜನಿಷ್ಠೆಯುಳ್ಳ ಎಷ್ಟೋ ಸೈನಿಕರು ನಾಶವಾದರು. ಈ ಪ್ರಕಾರದ ಅರ್ಥಹಾನಿ ಪ್ರಾಣಹಾನಿಗಳು ಒಂದೇ ಸವನೇ ನಡೆದಿರುವದರಿಂದ ರಾಜ್ಯದ ಅಂತಃಸುಧಾರಣೆಯನ್ನು ಮಾಡಲಿಕ್ಕೆ ನಮ್ಮ ರಾಜರಿಗೆ ಅವಕಾಶವು ಇಲ್ಲದಾಗಿದೆ. ನಮ್ಮ ಸುಖಕ್ಕಾಗಿ ಇಂಗ್ಲಂಡದಿಂದ ಬರುವ ಸಾಮಾನುಗಳ ಪೂರ್ತಿಕೆಯು ಕಡಿಮೆಯಾಗಿದೆ. ಇಂಗ್ಲಿಷ ಸೈನಿಕರ ಕೂಡ ನಮ್ಮ ಹಿಂದೂ ಸೈನಿಕರಾದರೂ ಯುದ್ಧಕ್ಷೇತ್ರಕ್ಕೆ ಹೋಗಿದ್ದಾರೆ. ಅವರೆಲ್ಲರೂ ಪಡುವ ಕಷ್ಟವಾದರೂ ಕಡಿಮೆಯಿಲ್ಲ.

ಲೇಖನಿಯಿಂದಿಳಿದ ಈ ಲೇಖನಗಳು ಬಳ್ಳೇ ಪೂಜಸ್ಥಿಯುಳ್ಳವುಗಳಾಗಿರುವ
ಕಾಲಕ್ಕನುಸರಿಸಿ ಸ್ವತಂತ್ರ ವಿಚಾರದಿಂದ ಬರೆಯಲ್ಪಟ್ಟಿರುವ ಲೇಖನಗಳ
ಆರಿಸಲ್ಪಟ್ಟಿರುವವು ಭಾಷೆಯು ಲಲಿತವಾಗಿದೆ. "ಕಲಿಯುಗ"ದ ಬಗ್
ಕೊಟ್ಟ ಪದ್ಯಗಳಾದರೂ ಸರಳವೂ ಸುಬೋಧವೂ ಆಗಿರುವವು. ಸಾರಾ
ಶ:—ಡೆಕ್ಕನ ಕಾಲೇಜಿನೊಳಗಿನ ನಮ್ಮ ಕರ್ಣಾಟಕ ಬಂಧುಗಳು ಕ
ಕೊಂಡ ಈ ಕಾರ್ಯವು ಸ್ತುತ್ಯವಾದದ್ದಿದ್ದು, ಬಳ್ಳೇ ಬೆಳಿಗೆಯ ಸ್ಥಿತಿಯ
ಲ್ಲಿದೆ. ಅಭಿಮಾನವುಳ್ಳ ನಮ್ಮ ಶಿಕ್ಷಕವರ್ಗವು ಈ ಪತ್ರಿಕೆಯನ್ನು ತ
ಸಿ ಓದಬೇಕೆಂದು ನಮ್ಮ ಸೂಚನೆಯದೆ. ನಮ್ಮ ಕಡೆಗೆ ಈ ಸಂಚಿ
ಯನ್ನು ಕಳುಸಿದ್ದಕ್ಕಾಗಿ ಆ ಸಂಪಾದಕರ ಅಭಾರವನ್ನು ಮನ್ನಿಸಿ, ಈ
ಪತ್ರಿಕೆಯು ಇನ್ನೂ ಹೆಚ್ಚು ಪ್ರಸನ್ನತೆಯನ್ನು ಪಡೆಯಲೆಂದು ಹಾರೈಸು
ವೆವು.

೨. ಬೆಂಗಳೂರಿನಲ್ಲಿನ ವಿಜ್ಞಾನ ಪ್ರಚಾರಿಣೀ ಸಮಿತಿಯವರಿ
ಹೊರಡುವ ಮಾಸ ಪತ್ರಿಕೆಯ ಪ್ರಥಮ ವರ್ಷದ ಪ್ರಥಮ ಸಂಚಿಕೆಯ
ನಮ್ಮ ಕಡೆಗೆ ಬಂದಿದೆ. ಅದನ್ನು ನಾವು ಅತ್ಯಾದರದಿಂದ ಸ್ವೀಕರಿಸುವೆ
'ವಿಜ್ಞಾನ' ಪತ್ರಿಕೆಯ ಉದ್ದೇಶವು, ಸಾಮಾನ್ಯ ಜನರಲ್ಲಿ ವೈಜ್ಞಾನೀಯ ವಿ
ಯದ ಜ್ಞಾನವನ್ನು ಹಬ್ಬುಗೊಳಿಸುವದಿರುತ್ತದೆ. ಅದಕ್ಕೆ ತಕ್ಕಂತೆ ಈ
ಸಂಚಿಕೆಯಲ್ಲಿ ಬಂದ ಸಸ್ಯಾಹಾರಗಳು, ಸೊಳ್ಳೆಯ ಕಾಟ, ಆರ್ಕಿವಿ
ಸನ ಚರಿತ್ರೆ ಮುಂತಾದ ಲೇಖನಗಳು ಬಳ್ಳೇ ಬೋಧಕಗಳಾಗಿವೆ. "ವಿ
ಧ ವಿಜ್ಞಾನ ವಿಷಯ ಸಂಗ್ರಹ" ವಂತೂ ನಮ್ಮ ಶಿಕ್ಷಕ ವರ್ಗಕ್ಕೆ ಅತ್ಯ
ಯುಕ್ತವಾಗಿದೆ. ಮುದ್ರಣವು ಮುದ್ದಾಗಿದೆ. ಸರ್ವಾಂಗ ಸುಂದರ
ದ ಈ ಮಾಸ ಪತ್ರಿಕೆಯು ಯಾವತ್ತು ಶಾಲಾಮಾಸ್ತರರೂ ಮಾಡಿನ ವಿ
ದಿರಗಳ ಸೆಕ್ರೆಟರಿಗಳೂ ತರಿಸಲು ಯೋಗ್ಯವಾಗಿದೆ. ಚಂದಾವೊಬ್ಬ
ವರ್ಷಕ್ಕೆ ಅಂಚೇ ವೆಚ್ಚ ಸೇರಿ ಮೂರು ರೂಪಾಯಿ.

ಎ. ಪಿ. ಪ.

ಶಾಲಾಪತ್ರಕ.

ಪುಸ್ತಕ ೫೩.	ಮೇ ೧೯೧೫.	ಸಂಚಿಕೆ ೫.

ಮಹತ್ವದ ಸರ್ಕ್ಯೂಲರ.

ಈ ಮೊದಲು ನಮ್ಮ ವಾಚಕರಾದ ಶಿಕ್ಷಕರಿಗೆ ಮೇಲಿಂದ ಮೇಲೆ ತಮ್ಮ ರಾಜಕೀಯ ಹಾಗು ಸಾಮಾಜಿಕ ಕರ್ತವ್ಯಗಳ ಬಗ್ಗೆ ಎಚ್ಚರಿಕೆಯನ್ನು ಕೊಡುತ್ತ ಬಂದಿರುವೆವು. ಅವುಗಳಲ್ಲಿ ಸದ್ಯದ ಮಹಾಯುದ್ಧದಲ್ಲಿ ಮಾಡತಕ್ಕಂಥ ಕರ್ತವ್ಯವು ಎಲ್ಲ ರೀತಿಯಿಂದಲೂ ಮಹತ್ವದ್ದಾದ್ದರಿಂದ ಅದರ ಬಗ್ಗೆ ಈ ಸಂಚಿಕೆಯನ್ನು ಸಂಪೂರ್ಣವಾಗಿ ಉಪಯೋಗಿಸಬೇಕೆಂದು ಯೋಚಿಸಿರುವೆವು.

ಸದ್ಯದಯುದ್ಧದಲ್ಲಿ ಎಲ್ಲಕಡೆಗೂ ನಮ್ಮ ಸಾರ್ವಭೌಮರವರಿಗೆ ಜಯವು ದೊರೆಯಹತ್ತಿದೆ. ಆದರೆ ಅದರಲ್ಲಿ ಸಂಪೂರ್ಣವಾಗಿ ಜಯವು ಬಂದು ಈ ಯುದ್ಧವು ಶೀಘ್ರವಾಗಿ ಮುಗಿಯುವದು ಎಲ್ಲರಿಗೂ ಹಿತಕರವಾದ ಸಂಗತಿಯಾಗಿದೆ. ಈ ಯುದ್ಧದಲ್ಲಿ ನಮ್ಮ ಬಾದಶಹರವರಿಗೆ ಪ್ರತಿದಿವಸ ಸುಳುಕೋಟಿ ರೂಪಾಯಿಗಳ ಖರ್ಚು ಬರುತ್ತದೆ. ಇಷ್ಟು ರೂಪಾಯಿಗಳೆಂದರೆ ಎಷ್ಟೆಂಬ ಕಲ್ಪನೆಯು ಸಹ ನಮ್ಮಲ್ಲಿಯ ಸಾಧಾರಣ ಜನರಿಗೆ ಆಗಲಿಕ್ಕಿಲ್ಲ. ಸಂಯುಕ್ತ ಪಕ್ಷದ ಬೇರೆ ಬೇರೆ ರಾಷ್ಟ್ರಗಳಿಗೆ ಬೇಕಾಗುವ ಮದ್ದು ಗುಂಡು ಮುಂತಾದ ಯುದ್ಧದ ಸಾಮಗ್ರಿಗಳನ್ನು ಒದಗಿಸಿಕೊಡುವದಕ್ಕಾಗಿ ಬೇಕಾಗುವ ದ್ರವ್ಯವು ಬೇರೆ. ಈ ಯುದ್ಧದಲ್ಲಿ ರಾಜನಿಷ್ಠೆಯುಳ್ಳ ಎಷ್ಟೋ ಸೈನಿಕರು ನಾಶವಾದರು. ಈ ಪ್ರಕಾರದ ಅರ್ಥಹಾನಿ ಪ್ರಾಣಹಾನಿಗಳು ಹೀಂಟೇ ಸವನೇ ನಡೆದಿರುವದರಿಂದ ರಾಜ್ಯದ ಅಂತಃಸುಧಾರಣೆಯನ್ನು ಮಾಡಲಿಕ್ಕೆ ನಮ್ಮ ರಾಜರಿಗೆ ಅವಕಾಶವು ಇಲ್ಲದಾಗಿದೆ. ನಮ್ಮ ಸುಖಕ್ಕಾಗಿ ಇಂಗ್ಲಂಡದಿಂದ ಬರುವ ಸಾಮಾನುಗಳ ಪೂರ್ತಿಕೆಯು ಕಡಿಮೆಯಾಗಿದೆ. ಇಂಗ್ಲಿಷ ಸೈನಿಕರ ಕೂಡ ನಮ್ಮ ಹಿಂದೂ ಸೈನಿಕರಾದರೂ ಯುದ್ಧಕ್ಷೇತ್ರಕ್ಕೆ ಹೋಗಿದ್ದಾರೆ. ಅವರೆಲ್ಲರೂ ಪಡುವ ಕಷ್ಟವಾದರೂ ಕಡಿಮೆಯಿಲ್ಲ.

ಈ ಎಲ್ಲ ಸಂಗತಿಗಳಿಂದ ವಿಚಾರಮಾಡಲು ಸದ್ಯದ ಮಹಾಯು
ವು ಅದಷ್ಟು ತೀವ್ರವಾಗಿ ಮುಗಿಯುವಬಗ್ಗೆ ಪ್ರತಿಯೊಬ್ಬರು ಪ್ರಯತ್ನಿ
ಡುವದು ವಿಹಿತವು. ಈ ಕಾರ್ಯವು ಪೂರ್ಣವಾಗಲಿಕ್ಕೆ ಮುಖ್ಯವಾಗಿ ಜ
ಸಹಾಯ, ದ್ರವ್ಯಸಹಾಯ ಇವೆರಡು ಅವಶ್ಯವಾಗಿರುವವು. ಅದರಲ್ಲಿ ದ್ರ
ದ ಸಾಹಸ್ಯ ಪೂರ್ಯಕೆಯಾಗುವದಂತೂ ಹೆಚ್ಚಿನಕೆಲಸವು. ಎಲ್ಲರೂ ಯು
ಕ್ಕೆ ಹೋಗುವದು ಸಾಧ್ಯವಲ್ಲದಿದ್ದರೂ ದ್ರವ್ಯದ್ವಾರ ಸಹಾಯಮಾಡುವ
ಯಾವತ್ತೂ ಪ್ರಜೆಗಳಿಗೂ ಸುಲಭಸಾಧ್ಯವಿದೆ. ಆದ್ದರಿಂದ ಹಿಂದುಸ್ಥಾನ
ಪ್ರತಿಯೊಬ್ಬ ನಿವಾಸಿಯು ದ್ರವ್ಯದ್ವಾರದಿಂದಾದರೂ ಸರಕಾರಕ್ಕೆ ಸಹಾ
ಮಾಡುವದು ಅವನ ಕರ್ತವ್ಯವಾಗಿದೆ. ಈ ಮಹಾಯುದ್ಧದ ಖರ್ಚಿಗಾ
ಹಿಂದುಸ್ಥಾನ ಸರಕಾರದವರು ಇಲ್ಲಿ ೧೫೦ ಕೋಟಿ ರೂಪಾಯಿಗಳ ಸಾ
ವನ್ನು ತೆಗೆದು ನಮ್ಮ ಬಾದಶಹರವರಿಗೆ ಕೊಡತಕ್ಕವರಿದ್ದಾರೆ. ಈ ಹ
ವನ್ನು ಕೂಡಿಸುವಬಗ್ಗೆ ನಮ್ಮ ಶಿಕ್ಷಕರಾದರೂ ಕೈಲಾದಮಟ್ಟಿಗೆ ಯ
ಮಾಡಬೇಕೆಂದು ನಾವು ಆಗ್ರಹದಿಂದ ಸೂಚಿಸುತ್ತೇವೆ. ಸರಕಾರದವ
ಬಡ್ಡಿಯಂತೆ ಸಾಲವನ್ನು ತೆಗೆದುಕೊಳ್ಳುವದರಿಂದ, ಸ್ವಾರ್ಥ ಸಾಧಿಸಿಕೊ
ಡು ರಾಷ್ಟ್ರಕಾರ್ಯವನ್ನು ಮಾಡುವ ಉತ್ತಮ ಸಂಧಿಯು ಬಂದಿದೆ. ಆ
ರಿಂದ ಶಿಕ್ಷಕರು ತಾವಿರುವ ಊರಲ್ಲಿ ಈ ಬಗ್ಗೆ ಸಭೆ ನೆರೆಯಿಸಿ ಊರವ
ಗೂ ತಮ್ಮ ವಿದ್ಯಾರ್ಥಿಗಳಿಗೂ ಸಾಲಗಳ ಬೇರೆ ಬೇರೆ ಪ್ರಕಾರಗಳನ್ನು
ಅವುಗಳಿಂದಾಗುವ ವಿಶೇಷತರವಾದ ಲಾಭಗಳನ್ನೂ ಚನ್ನಾಗಿ ತಿಳಿಸಿ ಹೇ
ಬೇಕು. ಎಷ್ಟು ರೂಪಾಯಿಗಳನ್ನು ಕೊಟ್ಟು ಯಾವ ಸರ್ಟಿಫಿಕೇಟನ್ನು
ಪಡೆಯಬಹುದು? ಮತ್ತು ಅದನ್ನು ಎಲ್ಲಿ ಪಡೆಯಬಹುದು? ಈ ಮುಂತಾ
ಸಂಗತಿಗಳು ಹಳ್ಳಿಯೊಳಗಿನ ಸಾಮಾನ್ಯ ಜನರಿಗೆ ಬಂದು ವೇಳೆ ಗೊತ್ತಾ
ಗದೆ ಇರುವ ಸಂಭವವುಂಟು. ಅಂಥವರಿಗೆ ಬೇಕಾದ ಅನುಕೂಲತೆಗಳನ್ನ
ನಮ್ಮ ಶಿಕ್ಷಕರು ಮಾಡಿಕೊಡಬೇಕು. ಅರಿಯದವರನ್ನು ಪೋಸ್ಟಆಫೀ
ಸಿಗೆ ಕರಕೊಂಡು ಹೋಗಿ ರೂಪಾಯಿಕೊಟ್ಟು ಸರ್ಟಿಫಿಕೇಟು ಪಡೆಯ
ವಂತೆ ಮಾಡಬೇಕು. ಈ ವಾರಲೋನದಿಂದಾಗುವ ಲಾಭಗಳನ್ನು ತಿಳಿಸ
ವದಕ್ಕಾಗಿ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಅಂಥ ಲೆಖ್ಖಗಳನ್ನು ದಿನಾ
ಹೇಳುವ ಪರಿಪಾಠವಿಡಬೇಕು. ಹ್ಯಾಗೂ ಳನೇ ಇಯತ್ತೆಯಿಂದ ಮೇಲಿ
ಇಯತ್ತೆಯವರಿಗೆ ಬಡ್ಡಿಯ ಲೆಖ್ಖಗಳನ್ನು ಹೇಳಲೇಬೇಕಾಗುತ್ತದೆ. ಅಂ

ವಿದ್ಯಾರ್ಥಿಗಳಿಗೆ ಹೇಳಬೇಕಾದ ವಾರ್‌ಲೋನ ಸಂಬಂಧದ ಕೆಲವು ಗಣಿತದ ಉದಾಹರಣಗಳನ್ನು ನಾದರಿಗಾಗಿ ಮುಂದೆ ಕೊಟ್ಟಿರುವೆವು. ಶಿಕ್ಷಕರು ಅವುಗಳನ್ನೂ ಅಂಥ ಇನ್ನೂ ಕೆಲವು ಉದಾಹರಣೆಗಳನ್ನೂ ತಮ್ಮ ವಿದ್ಯಾರ್ಥಿಗಳಿಂದ ಮಾಡಿಸಬೇಕು.

ಶಿಕ್ಷಕರು ವಿದ್ಯಾರ್ಥಿಗಳಿಗೂ ಊರವರಿಗೂ ಉಪದೇಶ ಮಾಡುವ ಪೂರ್ವದಲ್ಲಿ ತಾವು ಪ್ರತಿಯೊಬ್ಬರು ಏನಿಲ್ಲೆಂದರೂ ಒಂದೊಂದು ಪೋಸ್ಟಿನ ಸರ್ಟಿಫಿಕೇಟನ್ನು ತೆಗೆದುಕೊಂಡರೆ, ಜನರ ಮನಸಿನ ಮೇಲೆ ಒಳ್ಳೇ ಪರಿಣಾಮವಾಗುವದು. ಧಾರವಾಡ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳು ಬೇಸಿಗೆಯ ಸೂಟಗಾಗಿ ಹೊರಡುವ ಪೂರ್ವದಲ್ಲಿ ಸಭೆನೆರೆಯಿಸಿ, ತಮ್ಮಲ್ಲಿ ಪ್ರತಿಯೊಬ್ಬರು ಹತ್ತುರೂಪಾಯಿಗಳ ಒಂದೊಂದು ಪೋಸ್ಟಿನ ಸರ್ಟಿಫಿಕೇಟನ್ನು ತೆಗೆದುಕೊಳ್ಳಲು ಇಚ್ಛೆಯುಳ್ಳವರಿರುವೆವೆಂಬದನ್ನು ವ್ಯಕ್ತಪಡಿಸಿ ಅದರಂತೆ ಹಣವನ್ನು ಕೊಟ್ಟುಹೋದರು. ಇದರಂತೆ ಬೇರೆ ಶಾಲೆಯೊಳಗಿನ ಪ್ರತಿಯೊಬ್ಬ ಪ್ರಬುದ್ಧ ವಿದ್ಯಾರ್ಥಿಯೂ ಒಂದೊಂದು ಪೋಸ್ಟಿನ ಸರ್ಟಿಫಿಕೇಟನ್ನು ತೆಗೆದುಕೊಳ್ಳುವಂತೆ ಶಿಕ್ಷಕರು ಉಪದೇಶಮಾಡಬೇಕು. ತೀರ ಬಡವರಾದ ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬರು ಒಂದೊಂದು ಸರ್ಟಿಫಿಕೇಟನ್ನು ತೆಗೆದುಕೊಳ್ಳಲು ಶಕ್ತರಿಲ್ಲದಿದ್ದರೆ ೩।೪ ಜನರಾದರೂ ಕೂಡಿ ಒಂದೊಂದು ಸರ್ಟಿಫಿಕೇಟನ್ನು ತೆಗೆದುಕೊಳ್ಳುವಂತೆ ಉಪದೇಶ ಮಾಡಬೇಕು. ಇನಾಮು ಅಥವಾ ಬೇರೆ ಕಾರಣಗಳ ಸಲುವಾಗಿ ಹಣವನ್ನು ಕೂಡಿಸಿಟ್ಟು ಯಾವಾಗಾದರೊಮ್ಮೆ ಖರ್ಚು ಮಾಡುವಂಥವರಿಗೆ, ಈ ವಾರಲೋನ ಬಾಂಡುಗಳು ಒಳ್ಳೇ ಅನುಕೂಲವಾಗಿರುವವು. ಮಕ್ಕಳ ವಿದ್ಯಾಭ್ಯಾಸ, ಲಗ್ನ, ಮುಂಜಿ ಮುಂತಾದ್ದರ ದೆಸೆಯಿಂದ ಹಣವನ್ನು ತೆಗೆದು ಇಡುವಂಥವರಿಗಂತೂ, ಸ್ವಲ್ಪ ಹಣದಿಂದ ಮುಂದೆ ಹೆಚ್ಚು ಹಣವು ದೊರೆತು, ಆಹಣವು ಸುರಕ್ಷಿತವಾಗಿ ಒತ್ತಟ್ಟಿಗೆ ಉಳಿಯುವದರಿಂದ ಒಳ್ಳೇಲಾಭವಾಗುವದು

ಸರಕಾರೀ ನೌಕರರಿಗೆ ವಿಶೇಷ ಅನುಕೂಲವಾಗಬೇಕೆಂದು, ಈ ಸಾಲವನ್ನು ಹತ್ತುಕಂತಗಳಿಂದ ಅವರ ಪಗಾರದೊಳಗಿಂದ ಮುರಕೊಂಡು ತಿರುಗಿಮುಟ್ಟಿಸಲಿಕ್ಕೂ ಸರಕಾರದವರು ಒಪ್ಪಿಕೊಂಡಿರುತ್ತಾರೆ. ಯಾವ ನೌಬ್ಬ ಮಾಸ್ತರನು ೧೦ ರೂ. ದ ಸರ್ಟಿಫಿಕೇಟ ತೆಗೆದುಕೊಳ್ಳಲಿಕ್ಕೆ ಇಚ್ಛಿಸಿದರೆ ಅವನು ಪ್ರತಿತಿಂಗಳಿಗೆ ೦-೧೦-೪ ರೂ. ಮಾತ್ರ ಕೊಟ್ಟರೆ ಸಾಕು.

ಪ್ರತಿಯೊಂದು ಶಾಲೆಯಲ್ಲಿ ವಾರಕ್ಕೊಮ್ಮೆ ಸಭೆನೆರೆಯಿಸಿ ಟೀಚರ್ಸವಾರ
ಲೋನ ಅಸೋಸಿಏಶನ್, ವಿದ್ಯಾರ್ಥಿಗಳ ವಾರಲೋನ ಅಸೋಸಿಯೇಶನ್
ಮುಂತಾದವುಗಳನ್ನು ಸ್ಥಾಪಿಸಿ ಹಣಕೂಡಿಸುವಬಗ್ಗೆ ಯತ್ನಮಾಡಬೇಕು.

ಇಂಡಿಯನ್ ವಾರಲೋನ.

ಜರ್ಮನಿಯ ಅನ್ಯಾಯದ ಕೃತಿ ಮತ್ತು ದುಷ್ಟಹೇತುಗಳ ಮೂಲಕ
ವಾಗಿ ಸದ್ಯದ ಯುದ್ಧವು ಉತ್ಪನ್ನವಾಗಿದೆ ಎಂಬದು ನಿಮ್ಮೆಲ್ಲರಿಗೆ ಗೊತ್ತಿದ್ದ
ಮಾತೇ ಸರಿ. ಈ ಯುದ್ಧದ ಭಯಂಕರ ಪರಿಣಾಮಗಳನ್ನು ಯುದ್ಧದಲ್ಲಿ
ತೊಡಗಿದ ರಾಷ್ಟ್ರದವರಲ್ಲದೆ ಬೇರೆಯವರೂ ಅನುಭವಿಸಬೇಕಾಗಿದೆ. ಇದ
ರಿಂದ ವ್ಯಾಪಾರವೂ, ಕಲಾಕೌಶಲ್ಯಗಳೂ ನಿಂತು ಹೋಗಿವೆ. ಕೋಟ್ಯವಧಿ
ಜನರು ಈ ಯುದ್ಧದ ಸಲುವಾಗಿ ತಮ್ಮ ಶರೀರ ಸಂಪತ್ತುಗಳನ್ನು ಕಳ
ಕೊಂಡಿದ್ದಾರೆ. ಕಲಾಕೌಶಲ್ಯದಲ್ಲಿಯೂ ಸತ್ಯವಂತಿಕೆಯಲ್ಲಿಯೂ ಅಗತಕ್ಕ
ಇಡೀ ಭೂಮಂಡಲದ ಪ್ರಗತಿಯು ಕುಂಠಿತವಾಗುವ ದುರ್ಧರ ಪ್ರಸಂಗವು
ಬಂದೊದಗಿದೆ. ಜರ್ಮನಿಯು ಬ್ರಿಟಿಶರನ್ನು ಈ ಯುದ್ಧಕ್ಕೆ ಜುಲುಮೆಯಿಂದ
ಬರಮಾಡಿದ್ದರಿಂದಲೇ ಜಗತ್ತಿಗೆ ಈ ತರಹದ ದುರವಸ್ಥೆಯು ಉಂಟಾಗಿದೆ
ನಮ್ಮ ಬಾದಶಹರವರು ಸತ್ಪಕ್ಷ ಸಮರ್ಥನೆಕ್ಕಾಗಿಯೂ ಸಣ್ಣ ರಾಷ್ಟ್ರಗಳ
ರಕ್ಷಣೆಗಾಗಿಯೂ ಈ ಯುದ್ಧವನ್ನು ಕೈಕೊಳ್ಳಬೇಕಾಯಿತು. ನಮ್ಮ ಪಕ್ಷ
ವು ನ್ಯಾಯವಾದದ್ದೂ ಸತ್ಯಕ್ಕನುಸರಿಸಿದ್ದೂ ಇರುವದರಿಂದ ನಮ್ಮ ಸರಕಾ
ರಕ್ಕೆ ತೀವ್ರವಾಗಿ ಸಂಪೂರ್ಣಜಯವು ದೊರೆಯುವದರ ಸಲುವಾಗಿ ಎಲ್ಲರೀತಿ
ಯಿಂದಲೂ ಸಹಾಯಮಾಡುವದು ಬ್ರಿಟಿಶ ಸಾಮ್ರಾಜ್ಯದೊಳಗಿನ ಪ್ರತಿ
ಯೊಬ್ಬ ನಾಗರಿಕನ ಕರ್ತವ್ಯವಾಗಿರುತ್ತದೆ. ಇಂಥ ಜಯವನ್ನು ಸಂಪಾದಿಸಿದ
ಹೊರತು ಸ್ಥಿರವಾದ ಮತ್ತು ನಿಜವಾದ ಶಾಂತತೆಯು ಜಗತ್ತಿನಲ್ಲೆಲ್ಲ ಉ
ಯಿಸುವದು ಕಷ್ಟವು.

ಈ ಯುದ್ಧವು ಹಿಂದುಸ್ಥಾನದ ದಂಡೆಯಿಂದ ಬಹಳದೂರ ನಡೆದಿರ
ವದರಿಂದ ಇದರ ಭಯಂಕರ ಪರಿಣಾಮಗಳು ಪೂರ್ಣವಾಗಿ ಇಲ್ಲಿಯ ಜ
ನರಿಗೆ ತಿಳಿಯುವದಿಲ್ಲ. ಇಂಡಿಯಾದ ಎಷ್ಟೋ ವೀರರು ಈ ಸಾಮ್ರಾಜ್ಯದ
ಸಮರಾಂಗಣದಲ್ಲಿ ಹೊಕ್ಕು ಎಷ್ಟೋ ಉಪಯುಕ್ತವಾದ ಕಾರ್ಯಗಳನ್ನು

ಮಾಡಿರುವರೆಂಬದು ನಿಜವು; ಪರಂತು ಈ ಸಾಮ್ರಾಜ್ಯದೊಳಗಿನ ಯಾವ ತ್ತೂ ಜನರಿಗೆ ಈ ಪ್ರಕಾರದ ಸಹಾಯವನ್ನು ಮಾಡುವ ಪ್ರಸಂಗವು ಬರ ಲಾರದು. ಆದರೂ ಈ ಬ್ರಿಟಿಶ ಸಾಮ್ರಾಜ್ಯದೊಳಗಿನ ಪ್ರತಿಯೊಬ್ಬ ವ್ಯಕ್ತಿ ಯು ಬಂದಿಲ್ಲಿಂದು ರೀತಿಯಿಂದ ಸಹಾಯ ಮಾಡಲು ಇಚ್ಛಿಸುತ್ತಿರುವನು. ಹಿಂದುಸ್ಥಾನದೊಳಗಿನ ಪ್ರತಿಯೊಬ್ಬ ವ್ಯಕ್ತಿಯ ಅಂತಃಕರಣದಲ್ಲಿ ಈ ಪ್ರ ಕಾರದ ಸದಿಚ್ಛೆಯು ಇದ್ದದ್ದನ್ನು ಈ ಇಂಡಿಯನ್ ವಾರಲೋನವು ಚ ನ್ನಾಗಿ ವ್ಯಕ್ತಪಡಿಸುತ್ತದೆ.

ಆಯುಧಗಳು, ಮದ್ದು, ಗುಂಡುಗಳು ಮತ್ತು ಜೀರೆ ಯುದ್ಧೋಪ ಯುಕ್ತ ಸಾಧನಗಳು ಇವುಗಳಿಗೆ ಈಗ ಬಹಳೇ ಬೆಲೆಯು ಬೀಳುತ್ತದೆ. ಮತ್ತು ಆ ಯುದ್ಧದ ಸಾಮಗ್ರಿಗಳು ಬಹಳೇ ದೊಡ್ಡ ಪ್ರಮಾಣದಿಂದ ಬೇ ಕಾಗಿರುತ್ತವೆ. ಒಂದೇ ಒಂದು ದೊಡ್ಡ ತೋಪಿನ ಗುಂಡಿನ ಬೆಲೆಯು ಹತ್ತು ಸಾವಿರ ರೂಪಾಯಿ ಇರುತ್ತದೆ. ಅದ್ದರಿಂದ ಈಗಿನ ಕಾಲದಲ್ಲಿ, ಯುದ್ಧದ ಖರ್ಚು ಅಪರಿಮಿತವಾಗಿರುತ್ತದೆ. 'ದ್ರವ್ಯವು ಯುದ್ಧದ ಜೀವವು' ಎಂಬ ಇಂಗ್ಲಿಷ ಗಾದೆಯು ಯಾತಾರ್ಥವಿದೆ. ಯಾಕಂದರೆ ಅದರಿಂದಲೇ ನಮ್ಮ ವೀರರಿಗೆ ಬಿಳ್ಳೇ ಹುರುಪು ಬರುತ್ತದೆ. ಸರಕಾರದವರು ಯುದ್ಧ ವನ್ನು ಅದಷ್ಟು ತೀವ್ರವಾಗಿ ಮುಗಿಸುವ ಇಚ್ಛೆಯುಳ್ಳವರಾಗಿದ್ದಾರೆ. ಅದನ್ನು ಕೊನೆಗಾಣಿಸುವದಕ್ಕಾಗಿಯೇ ಸಾಕಷ್ಟ ದ್ರವ್ಯವು ಬೇಕಾಗಿದೆ. ಶತ್ರುಪಕ್ಷದವರಿಗಿಂತ ನಮ್ಮ ಸೈನಿಕರಿಗೆ ಹೆಚ್ಚು ಆಯುಧಗಳನ್ನು ಪೂರೈ ಸಿಕೊಡುವದಕ್ಕಾಗಿ ಸರಕಾರದವರು ನಮ್ಮೆಲ್ಲರಿಗೆ ಸಾಲದಂತೆ ಹಣ ವನ್ನು ಕೇಳಹತ್ತಿರುವರು.

ಹಿಂದುಸ್ಥಾನದೊಳಗಿನ ಸಣ್ಣ ದೊಡ್ಡ ಸ್ಥಿತಿಯೊಳಗಿನ ಎಲ್ಲ ಜನರಿ ಗೆ ಸರಕಾರಕ್ಕೆ ಸಹಾಯಮಾಡುವ ಉತ್ತಮ ಸಂಧಿಯೂ ,ತಾವು ರಾಜನಿ ಷ್ಠರೂ, ದೇಶಾಭಿಮಾನಿಗಳೂ ಎನ್ನಿಸಿಕೊಳ್ಳುವ ಉತ್ತಮ ಸಮಯವೂ ಒದಗಿದೆ. ಅದ್ದರಿಂದ ಇಂಥ ಪ್ರಸಂಗದಲ್ಲಿ ಶಕ್ಯವಿದ್ದಮಟ್ಟಿಗೆ ಸಹಾಯ ಮಾ ಡುವದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ.

ಯುದ್ಧದ ನಿಮಿತ್ತವಾಗಿ ಸರಕಾರಕ್ಕೆ ಕೆಳಗೆ ಹೇಳಿದ ಮೂರು ಪ್ರಕಾ ರಗಳಿಂದ ಸಾಲವನ್ನು ಕೊಡಬಹುದು,

೧. ಹಣವನ್ನು ಸಾಲವಾಗಿ ಕೊಡೋಣ: — ೯೫ ರುಪಾಯಿಗಳನ್ನು ಕೋಖಕೊಡುವದರಿಂದ ೧೦೦ಕ್ಕೆ ೧ ವರ್ಷಕ್ಕೆ ೫ಬಡ್ಡಿಯು ದರವುಳ್ಳ ೧೦೦ ರೂಪಾಯಿಗಳ ಸಿಕ್ಯೂರಿಟೀಪತ್ರವು ದೊರೆಯುವದು. ಸರಕಾರದವರು ಆ ನೂರು ರೂಪಾಯಿಗಳನ್ನು ತಿರುಗಿ ಮುಟ್ಟಿಸುವವರೆಗೆ ೧೦೦ಕ್ಕೆ ೫ರಂತೆ ಬಡ್ಡೀ ಕೊಡುತ್ತೇವೆಂದು ಲೇಖಮೂಲಕ ವಚನವನ್ನು ಕೊಡುವರು. ಇದರಿಂದ ನಿಜವಾಗಿ ದೊರೆಯುವ ಬಡ್ಡಿಯು ೧೦೦ ರೂಪಾಯಿಗಳಿಗೆ ತಿಂಗಳಿಗೆ ೭ ಆಣೆ ಗಿಂತ ಹೆಚ್ಚು ಇಲ್ಲವೆ ನೂರಕ್ಕೆ ವರ್ಷಕ್ಕೆ ೫½ಕ್ಕಿಂತ ಹೆಚ್ಚು ಆಗುವದು. ೧೫ವರ್ಷಗಳನಂತರ ಮತ್ತು ೨೦ ವರ್ಷಗಳಿಗಿಂತ ಮೊದಲು ಈ ಸಾಲದರಕಮು ತಿರುಗಿ ಮುಟ್ಟಿಸಲ್ಪಡುವದು. ಅಷ್ಟು ಮುದ್ದತಿನೊಳಗಾಗಿಯೇ ಸಾಲಕೊಟ್ಟವನುಷ್ಯನಿಗೆ ಹಣದ ಅವಶ್ಯಕತೆಯುಂಟಾದರೆ ಅವನು ಪತ್ರವನ್ನು ಪೇಟೆಯಲ್ಲಿ ಮಾರಬಹುದು. ಆಪತ್ರದಬೆಲೆಯುಕಡಿಮೆಯಾಗದೆ ಇರುವಬಗ್ಗೆ ಸರಕಾರದವರು ವಿಶೇಷ ಪ್ರಕಾರದ ವ್ಯವಸ್ಥೆಯನ್ನು ಮಾಡುವರು.

೨ ಮಾರಬಾಂಡುಗಳನ್ನು ಕೊಂಡುಕೊಳ್ಳೋಣ:—ಯಾವನೊಬ್ಬನಿಗೆ ತನ್ನ ಹಣವು ತೀವ್ರದೊರೆಯಬೇಕೆಂಬ ಇಚ್ಛೆ ಇದ್ದರೆ, ಅತನು ನೂರು ರೂಪಾಯಿಗಳ ಬಾಂಡುಗಳನ್ನು ಕೊಂಡುಕೊಳ್ಳಬಹುದು. ೧೦೦ಕ್ಕೆ ೫½ ಬಡ್ಡಿಯುಳ್ಳ ಅಥವಾ ತಿಂಗಳಿಗೆ ೭ಆಣೆ ಳಪ್ಪೆ ಬಡ್ಡಿಯುಳ್ಳ ೧೦೦ ರೂಪಾಯಿಗಳ ಬಾಂಡುಗಳನ್ನು ಕೊಂಡುಕೊಳ್ಳಬಹುದು. ೧೦೦ ರೂಪಾಯಿಗಳನ್ನು ಕೊಟ್ಟರೆ ೧೦೦ ರೂ.ಗಳ ಬಾಂಡು ಸಿಗುವದು. ಹೀಗೆದಹಣವು ಮೂರು ಅಥವಾ ಐದು ವರ್ಷಗಳಲ್ಲಿ ತಿರುಗಿ ಕೊಡಲ್ಪಡುವದು.

೩. ಪೋಸ್ಟ ಆಫೀಸಿನ ಕ್ಯಾಶ ಸರ್ಟಿಫಿಕೇಟುಗಳನ್ನು ಕೊಳ್ಳುವದು:— ಬಹಳ ಸಣ್ಣ ರಕಮಿನಿಂದ ಈ ಸರ್ಟಿಫಿಕೇಟುಗಳನ್ನು ಕೊಳ್ಳಬಹುದು. ಸೇವ್ಹಿಂಗ ಬ್ಯಾಂಕಿನ ಕೆಲಸ ನಡೆಯುವ ಪೋಸ್ಟ ಆಫೀಸ ಇದ್ದ ಪ್ರತಿಯೊಂದು ಗ್ರಾಮದಲ್ಲಿ ಇವುಗಳನ್ನು ಸನ್ ೧೯೧೫ನೇ ಇಸ್ವಿಯ ಎಪ್ರೇಲ ತಿಂಗಳ ೧ನೇ ತಾರೀಖಿನಿಂದ ಹಣಕೊಟ್ಟು ಪಡೆಯಬಹುದು. ಇವುಗಳ ಬೆಲೆಯ ವಿವರವು ಕೆಳಗೆ ಬರೆದಂತೆ:—

(೧) ೧೦೦ರೂ. ದ ಸರ್ಟಿಫಿಕೇಟಿಗೆ ಕೊಡಬೇಕಾದ ರಕಮು. ೭-೧೨-೦

(೨.) ೨೦ ರೂ. ೧೫-೯-೦

(೩) ೫೦ ರೂ. ೩೮-೧೨-೦

(೪.) ೧೦೦ ರೂ. ೭೭-೮-೦

ಈ ಸರ್ಟಿಫಿಕೇಟಿನ ಪೂರ್ಣ ರಕಮು ೫ನೇ ವರ್ಷದ ಕಡೆಯಲ್ಲಿ ೂರೆಯುವದು. ಈರೀತಿ ಹಣವನ್ನು ಹಾಕುವದರಿಂದ ಸದ್ಯಕ್ಕೆ ೭ರೂ.೧೨ ಣೆಗಳನ್ನು ಕೊಡುವವರಿಗೆ ೫ವರ್ಷಗಳ ಮೇಲೆ ೧೦೦ ರೂಪಾಯಿಗಳು ದೊ ಯುವಂಥ ಸರ್ಟಿಫಿಕೇಟುಗಳು ಸಿಗುವವು. ಆದ್ದರಿಂದ ಅವರಿಗೆ೫ ವರ್ಷ ಳಲ್ಲಿ ೩ರೂ. ೪ಆಣೆ ಬಡ್ಡಿಯು ದೊರೆತಂತಾಯಿತು. ಇದರಿಂದ ಬಡ್ಡೀ ರವು ೧೦೦ಕ್ಕೆ ೧ವ.ಕ್ಕೆ೫ಕ್ಕಿಂತ ಹೆಚ್ಚು ಇಲ್ಲವೆ ತಿಂಗಳಿಗೆ ೭ಆಣೆ ೪ಪೈ ಗಿಂತ ಹೆಚ್ಚು ಬೀಳುವದು. ಇದರಲ್ಲಿ ಹಾಕಿದ ಹಣವು ೫ವರ್ಷಗಳ ಳಗಾಗಿ ದೊರೆಯಬೇಕೆಂದು ಯಾರಾದರೂ ಇಚ್ಛಿಸಿದರೆ ಅವರು ಅದನ್ನು ೀಕಾದಾಗ ಪಡೆಯಬಹುದು, ಒಂದು ವರ್ಷದ ನಂತರ ಬೇಡುವವರಿಗೆ ಲವು ಬಡ್ಡಿಸಹಿತ ದೊರೆಯುವದು.

ವಾರಬಾಂಡು ಹಾಗು ಪೋಸ್ಟ ಆಫೀಸ ಕ್ಯಾಶ ಸರ್ಟಿಫಿಕೇಟುಗಳಿಗಾ ಹಾಕುವ ಹಣಕ್ಕೆ ಯಾವ ಪ್ರಕಾರದ್ದೂ ವ್ಯಾಪ್ತಿಯು ಕರವು ಬೀಳಲಾ ದು. ವಾರ ಬಾಂಡುಗಳಲ್ಲಿಯೂ ವಾರಲೋನಗಳಲ್ಲಿಯೂ ಹಣವನ್ನು ಹಾ ುವವರು ಅದನ್ನು ಕಂತಗಳಿಂದ ಕೊಡಬಹುದು. ಹಿಂದಕ್ಕೆ ೩,೩||, ೪ ದ ದಿಂದ ಸರಕಾರಕ್ಕೆ ಸಾಲವನ್ನು ಕೊಟ್ಟವರು ಬದಲುಮಾಡಿ ಈ ಹೊಸ ಂಡಿಯನ್ ವಾರಲೋನದಲ್ಲಿ ಹಣವನ್ನು ಹಾಕುವದಕ್ಕೆ ಹೆಚ್ಚು ಅನುಕೂ ತೆಗಳನ್ನು ಮಾಡಿರುತ್ತದೆ.

ವಾರಲೋನ ಇಲ್ಲವೆ ವಾರಬಾಂಡುಗಳಿಗಾಗಿ ಹಣವನ್ನು ಪೋಸ್ಟ ಫೀಸುಗಳಲ್ಲಿ ಕೊಡಬಹುದು. ಆದರೆ ಕೊಡತಕ್ಕ ರಕಮು ಯಾವದೊಂ ಪ್ರಕಾರದ ಸಾಲದ ಸಂಬಂಧದಿಂದ ೫೫ ರೂಪಾಯಿಗಳಿಗಿಂತ ಕಡಿಮೆ ೫೦೦ ರೂಪಾಯಿಗಳಿಗಿಂತ ಹೆಚ್ಚು ಇರಕೂಡದು. ಈ ಸಾಲವನ್ನು ುಟ್ಟಿಸುವದಕ್ಕಾಗಿ ಹಿಂದುಸ್ಥಾನ ಸರಕಾರದವರು ಬದ್ಧರಾಗಿದ್ದಾರೆ. ದ್ದರಿಂದ ಸರಕಾರದವರು ಈ ಸಾಲವನ್ನು ಮುಟ್ಟಿಸಲಾರರೆಂಬ ಭಾವ ಯನ್ನು ಯಾರೂ ಮನಸಿನಲ್ಲಿ ತರಲು ಕಾರಣವಿಲ್ಲ. ಯಾಕಂದರೆ ಹಿಂದು

ಸ್ಥಾನ ಸರಕಾರದವರು ತನ್ನ ಹಿಂದುಸ್ಥಾನದ ಇಡೀ ಉತ್ಪನ್ನದೊಳಗಿಂ ದಲೇ ತಿರುಗಿ ಮುಟ್ಟಿಸಲಿಕ್ಕೆ ಸಿದ್ಧರಿದ್ದಾರೆ. ಇದಕ್ಕೂ ಸುರಕ್ಷಿತವಾದಂಥ ಠೇವು ಬೇರೆ ಯಾವದೂ ಇಲ್ಲ. ಒಡ್ಡೀದರವು ಅತ್ಯುತ್ತಮವಾದದ್ದಿದ್ದು ಒಳ್ಳೇ ನಿಯಮದಿಂದ ಕೊಡಲ್ಪಡುತ್ತದೆ. ಇದರಲ್ಲಿ ಯಾವಪ್ರಕಾರದ್ದೂ ಭಯವು ಇರುವದಿಲ್ಲ. ಕರಾರುಗಳು ಒಳ್ಳೇ ಅನುಕೂಲವಿರುವವು. ಅತಿಶಯ ಬಡವನಾದ ಮನುಷ್ಯನಿಗೆ ಸಹ ತನ್ನ ಹಣವನ್ನು ಹಾಕಲಿಕ್ಕೆ ಇದರಿಂದ ಅನುಕೂಲವಾಗಿದೆ. ಇಂಡಿಯನ್ ವಾಲೋನದಿಂದ ಸ್ವಾರ್ಥವೂ ರಾಷ್ಟ್ರದ ಹಿತವೂ ಕೂಡಿಯೇ ಸಾಧಿಸುವ ಉತ್ತಮ ಸಂಧಿಯು ಬಂದೊದಗಿದೆ.

'ಹನಿಗೆ ಹನಿ ಕೂಡಿದರೆ ಹಳ್ಳ' ಎಂಬ ತತ್ವವು ಮಹತ್ವದ್ದೂ ನೆನಪಿನಲ್ಲಿಡತಕ್ಕದ್ದೂ ಇರುತ್ತದೆ. ವಾರಲೋನಿನಲ್ಲಿ ಹಾಕಲ್ಪಡುವ ಪ್ರತಿಯೊಂದು ತರದ ಹಣವು ಎಷ್ಟೇಕಡಿಮೆ ಪ್ರಮಾಣದಿಂದ ಇದ್ದರೂ ಎಲ್ಲವೂ ಒಟ್ಟುಗೂಡಿ ಆಗುವ ಹಣವು ಬಹಳೇ ದೊಡ್ಡದಾಗುವದು. ಸಂಸ್ಥಾನಿಕನಾಗಲಿ, ಬಡಬಿಕ್ಕಲಿಗನಾಗಲಿ, ದೊಡ್ಡಸ್ಥಿತಿಯವನಾಗಲಿ, ಸಣ್ಣಸ್ಥಿತಿಯವನಾಗಲಿ, ತನ್ನ ಯೋಗ್ಯತಾನುಸಾರವಾಗಿ ಹಣವನ್ನು ಹಾಕಲಿಕ್ಕೆ ಬೇಕು. ನೀವೆಲ್ಲರೂ ಕೈಲಾದಷ್ಟು ಯತ್ನ ಮಾಡಿ ಹಣವನ್ನು ಉಳಿಸಿ, ಈ ಮೂರರಲ್ಲಿ ಯಾವದೊಂದು ವಿಧದಿಂದ ಸರಕಾರಕ್ಕೆ ಸಾಲವನ್ನು ಕೊಡಿರಿ. ಮತ್ತು ನಿಮ್ಮ ಸುತ್ತಲಿರುವ ಪ್ರತಿಯೊಬ್ಬ ಮನುಷ್ಯನಿಗೆ ಈ ಪ್ರಕಾರ ಮಾಡುವದಕ್ಕೆ ಉಪದೇಶಮಾಡಿರಿ. ಇದರಲ್ಲಿ ನಿಮ್ಮ ಹಿತವದೆ. ಹೀಗೆ ಮಾಡುವದಕ್ಕೆ ನೀವು ಕರ್ತವ್ಯದಿಂದ ಬದ್ಧರಾಗಿರುವಿರಿ.

ವಾರಲೋನ ಸಂಬಂಧದ ಗಣಿತದ ಉದಾಹರಣಗಳು.

೧. ಅತಿಶಯ ಲಾಭಕರವಾದ ವ್ಯಾಪಾರವುಳ್ಳ ವಾರಲೋನ ಸಂಬಂಧದ ಠೇವಿನಲ್ಲಿ ನಾನು ಹೋದವರ್ಷ ೧೦೦ ರೂಪಾಯಿಗಳನ್ನು ಇಟ್ಟಿದ್ದೆನು. ಆದರೆ ಈಗ ನಾನು ಆ ರಕಮನ್ನು ಎಷ್ಟುತರದ ಠೇವುಗಳಲ್ಲಿ ಇಡಬಹುದು?

೨. ವಾರಲೋನದ ಬಗ್ಗೆ ೧೦೦ಕ್ಕೆ ೫ ದರದ ೫೫ ಭಾವದ ಠೇವಿನಲ್ಲಿ ಹಣವನ್ನು ಹಾಕಿ ಪತ್ರಗಳನ್ನು ನನ್ನ ಹತ್ತರ ಇಟ್ಟುಕೊಳ್ಳುವದು ಹೆಚ್ಚು

ಲಾಭದಾಯಕವೋ ಸುರಕ್ಷಿತೆಯ ಸಲುವಾಗಿ ಅವುಗಳನ್ನು ಸರಕಾರದಲ್ಲಿ ಡುವದು ಹೆಚ್ಚು ಲಾಭಕರವೋ? ಎರಡನೆಯ ರೀತಿಯಿಂದ ಆಗುವ ಲಾಭ ವೇನು?

೩. ನಮ್ಮ ಹಳ್ಳಿಯ ಚಿನಿವಾಲನು ವಾರಲೋನಿನ ಬಗ್ಗೆ ೯೫೦ ರೂ ಬಾಯಿಗಳನ್ನು ೧೦೦ಕ್ಕೆ ೫ ದರದ ೯೫ ಭಾವದ ಠೇವಿನಲ್ಲಿ ಹಾಕಿ ಪತ್ರಗಳ ನ್ನು ತನ್ನ ಹತ್ತರ ಇಟ್ಟುಕೊಳ್ಳುತ್ತಾನೆಂದೂ, ಎರಡನೆಯ ಹಳ್ಳಿಯ ಮು ತ್ತೊಬ್ಬ ಚಿನಿವಾಲನು ಅಷ್ಟೇ ರಕಮನ್ನು ಅದೇ ದರದ ಅದೇ ಭಾವದ ಠೇವಿನಲ್ಲಿ ಹಾಕಿ ಪತ್ರಗಳನ್ನು ಸರಕಾರದಲ್ಲಿ ಇಡುತ್ತಾನೆಂದೂ ತಿಳಿ. ಇದ ರಿಂದ ಎರಡನೆಯ ಹಳ್ಳಿಯ ಚಿನಿವಾಲನಿಗಾದ ಲಾಭವೆಷ್ಟು?

೪. ನಾನು ವಾರಲೋನಿನ ಬಗ್ಗೆ ೧೦೦ಕ್ಕೆ ೫ ದರದ ೯೫ ಭಾವದ ಠೇವಿನಲ್ಲಿ ೯೫೦೦ ರೂಪಾಯಿಗಳನ್ನು ಇಡುತ್ತೇನೆ, ನನ್ನ ತಮ್ಮನು ಅಷ್ಟೇ ರಕಮನ್ನು ಹಾಕಿ ೧೦೦ಕ್ಕೆ ೫½ ದರದ, (ಉತ್ಪನ್ನದ ಮೇಲಿನ ಕರವಿಲ್ಲದ) ವಾರ ಬಾಂಡುಗಳನ್ನು ತೆಗೆದುಕೊಳ್ಳುತ್ತಾನೆ; ನಮ್ಮಿಬ್ಬರಲ್ಲಿಯ ಆದಾಯಗ ಳ ಅಂತರವೇನು?

೫. ಈಗ ೭ ರೂ. ೧೨ ಆ. ಗಳನ್ನು ಸರಕಾರದವರಿಗೆ ಕೊಟ್ಟರೆ ಇನ್ನು ೫ ವರ್ಷಗಳಾದಮೇಲೆ ಅವರು ತಿರುಗಿ ೧೦ ರೂ. ಗಳನ್ನು ಕೊಡ ಲೊಪ್ಪುತ್ತಾರೆ. ಆದರೆ ಬಡ್ಡಿಯ ದರವೇನು?

೬. ಮೇಲಿನ ದರದಂತೆ ೫ ವರ್ಷಗಳಾದ ಮೇಲೆ ೫೦ ರೂ. ಗಳು ದೊರೆಯ ಬೇಕಾದರೆ ಈಗ ನಾವು ಸರಕಾರಕ್ಕೆ ಎಷ್ಟು ಹಣವನ್ನು ಸಾಲ ವಾಗಿ ಕೊಡಬೇಕು?

೭. ಆದರಂತೆ ೫೦–೧೦೦ ರೂಪಾಯಿಗಳು ದೊರೆಯ ಬೇಕಾದರೆ ಈಗ ಎಷ್ಟೆಷ್ಟು ರೂ. ಗಳನ್ನು ಕೊಡಬೇಕು?

೮. ಪೋಸ್ಟ ಆಫೀಸಿನ ೫ ವರ್ಷ ಮುದ್ದತಿನ ೧೦ ರೂ. ಗಳ ಬಂ ದು ಸೆಕ್ಯೂರಿಟಿಯನ್ನು ಕೊಂಡಿರುವಿ ಎಂತಲೂ, ಕೆಲವು ತಿಂಗಳುಗಳಾದ ಬಳಿಕ ನಿನಗೆ ಜಡ್ಡು ಆಯಿತೆಂತಲೂ ತಿಳಿ. ಆಗ ನಿನ್ನ ಹಣವು ನಿನಗೆ ಕೂಡಲೆ ದೊರೆಯಬೇಕೆಂದು ಇಚ್ಛಿಸಿದರೆ ನಿನಗೆ ಅದು ದೊರೆಯಬ ಹುದೋ?

೯. ಆ ಕೊಂಡ ಠೇವಿನ ವತ್ರದ ಬಗ್ಗೆ ಬಂದು ವರ್ಷದಲ್ಲಿ ನಿನಗೆ ಎಷ್ಟು ಹಣದೊರೆಯುವದು?

೧೨. ಒಂದು ವರ್ಷದ ಮೇಲೆ ನಿನ್ನ ಪತ್ರದ ಬದಲು ರೂಪಾಯಿಗಳನ್ನು ಪಡೆಯಬೇಕೆಂದು ಇಚ್ಛಿಸಿದರೆ ಅದಕ್ಕೆ ಬಡ್ಡಿಯು ದೊರೆಯುವದೋ? ನಿನಗೆ ೭-೧೨-೦ ರೂ. ಗಳಿಗೆಷ್ಟು ದೊರೆಯುವದ.?

೧೧ ಸರಕಾರದಲ್ಲಿ ನೀವು ಹಣವನ್ನು ಹೆಚ್ಚು ಕಾಲ ಇಟ್ಟರೆ ನಿಮಗೆ ಅದೇ ದರದಂತೆ ಬಡ್ಡಿಯು ದೊರೆಯುವದೋ ಅಥವಾ ಅದಕ್ಕೂ ಹೆಚ್ಚು ದರದಿಂದಲೋ?

೧೩. ಹೆಚ್ಚಿಗಿದ್ದರೆ ಎಷ್ಟು? ಎರಡನೆಯ ವರ್ಷದಲ್ಲಿ? ಎರಡನೆಯ ವರ್ಷದ ಪ್ರತಿಮೂರು ತಿಂಗಳಿಗೆ ಎಷ್ಟು? ಪ್ರತಿಮೂರು ತಿಂಗಳಿಗೆ ಎಷ್ಟರಂತೆ ಹೆಚ್ಚಾಗುವದು?

೧೪. ಮೂರನೆಯ ವರ್ಷದಲ್ಲಿ ಎಷ್ಟು? ಮೂರನೆಯ ವರ್ಷದ ಪ್ರತಿಮೂರು ತಿಂಗಳಿಗೆ ಎಷ್ಟು? ಪ್ರತಿಮೂರು ತಿಂಗಳಿಗೆ ಎಷ್ಟು ಹೆಚ್ಚು? ಎರಡನೆಯ ವರ್ಷದ ಮೂರು ತಿಂಗಳ ಪ್ರಮಾಣಕ್ಕಿಂತ ಮೂರನೆಯ ವರ್ಷದ ಮೂರು ತಿಂಗಳ ಪ್ರಮಾಣವು ಹೆಚ್ಚಿದೆಯೋ?

೧೪ ನಾಲ್ಕನೆಯ ವರ್ಷದಲ್ಲಿ ಎಷ್ಟು? ನಾಲ್ಕನೆಯ ವರ್ಷದಲ್ಲಿ ಪ್ರತಿಮೂರು ತಿಂಗಳಿಗೆ ಎಷ್ಟು? ಮೂರನೆಯ ವರ್ಷಕ್ಕಿಂತ ಎಷ್ಟು ಹೆಚ್ಚು? ಅಥವಾ ಎರಡನೆಯ ವರ್ಷಕ್ಕಿಂತ ಎಷ್ಟು ಹೆಚ್ಚು?

೧೫. ಐದನೆಯ ವರ್ಷದಲ್ಲಿ ಎಷ್ಟು ಬಡ್ಡಿ ಬರುವದು? ಪ್ರತಿಮೂರು ತಿಂಗಳಿಗೆ ಎಷ್ಟು? ನಾಲ್ಕನೆಯ ವರ್ಷಕ್ಕಿಂತ ಎಷ್ಟು ಹೆಚ್ಚು?

೧೬. ನೀನು ಈಗ ಕೊಟ್ಟ ೭-೧೨-೦ರೂ.ಗಳಿಗೆ ೫ ವರ್ಷಗಳನಂತರ ೧೦ ರೂ. ಗಳು ದೊರೆಯುತ್ತವೆ. ಅಸಲು ಪ್ರತಿವರ್ಷಕ್ಕೆ ಪ್ರತಿಮೂರು ತಿಂಗಳಿಗೆ ಹ್ಯಾಗೆ ಹೆಚ್ಚುತ್ತದೆಂಬದನ್ನು ಕರಿಹಲಿಗೆಯ ಮೇಲೆ ಕೋಷ್ಟಕ ಹಾಕಿ ತೋರಿಸು.

೧೭ ಅದರಂತೆ ೩೦ರೂ. ೫೦ರೂ. ೧೦೦ರೂ. ಗಳ ಪ್ರೋಸ್ಪಿನ ಸರ್ಟಿಫಿಕೇಟುಗಳ ರಕಮುಗಳಾದರೂ ಹ್ಯಾಗೆ ಹೆಚ್ಚುತ್ತ ಹೋಗುವವೆಂಬದನ್ನು ಕರಿ ಹಲಿಗೆಯಮೇಲೆ ಮೇಲಿನಂತೆ ತೋರಿಸು.

೧೮. ಅಂದಮೇಲೆ ೭ರೂ. ೧೨ಆ. ಗೆ ಮೊದಲನೆಯ ವರ್ಷಕ್ಕೆ ೫ಆ. ೨ನೆ ವರ್ಷಕ್ಕೆ ೬ಆ. ೩ನೆಯ ವರ್ಷಕ್ಕೆ ೭ಆ. ೪ನೆಯ ವರ್ಷಕ್ಕೆ ೮ಆ. ೫ನೆಯ ವರ್ಷಕ್ಕೆ ೧೦ಆ. ಬಡ್ಡಿ ಬರುವದೆಂದು ನಿಮಗೆ ಕಂಡುಬಂತು.

ಆದರೆ ದುಪ್ಪಟ್ಟು ಹಣವನ್ನು ಕೊಟ್ಟು ೨೦ರೂ. ಗಳ ಸರ್ಟಿಫಿಕೇಟು ತೆಗೆದುಕೊಂಡರೆ ಮುಂದೆ ಪ್ರತಿವರ್ಷ ಬಡ್ಡಿಯು ಹ್ಯಾಗೆ ಹೆಚ್ಚುತ್ತ ಹೋಗುವದು?

೧೯. ೫೦ರೂ. ಗಳ ಸರ್ಟಿಫಿಕೇಟು ತೆಗೆದುಕೊಂಡರೆ ಬಡ್ಡಿಯು ಹ್ಯಾಗೆ ಹೆಚ್ಚಾಗುವದು?

೨೦. ೧೦೦ರೂಪಾಯಿಗಳ ಒಂದು ಸರ್ಟಿಫಿಕೇಟು ತೆಗೆದುಕೊಂಡರೆ?

೨೧. ೭ರೂ. ೧೨ಆಣೆಗಳಿಗೆ ಮೊದಲನೇ ವರ್ಷದ ಪ್ರತಿಮೂರು ತಿಂಗಳಿಗೆ ೧೪ ಆಣೆ, ಎರಡನೇ ವರ್ಷದ ಪ್ರತಿ ಮೂರು ತಿಂಗಳಿಗೆ ೧೫ಆಣೆ ಮೂರನೇ ವರ್ಷದ ಪ್ರತಿಮೂರು ತಿಂಗಳಿಗೆ ೧೬ ಆಣೆ, ನಾಲ್ಕನೇ ವರ್ಷದ ಪ್ರತಿಮೂರು ತಿಂಗಳಿಗೆ ೧ ಆಣೆ, ಐದನೇ ವರ್ಷದ ಪ್ರತಿ ಮೂರು ತಿಂಗಳಿಗೆ ೧೪ಆಣೆ ಬಡ್ಡಿ ಬೀಳುವದೆಂಬದನ್ನೂ ನೀವು ತೋರಿಸಬೇಕು.

ಇದರಂತೆ ಇವುಗಳ ದುಪ್ಪಟ್ಟು ಹಣವಿದ್ದರೆ ಬಡ್ಡಿಯು ಹ್ಯಾಗೆ ಬೀಳುವದು?

೨೨. ಐದುಪಟ್ಟು ಹಣವಿದ್ದರೆ ಎಷ್ಟು ಬಡ್ಡಿಯಾಗುವದು?

೨೩. ಹತ್ತು ಪಟ್ಟು ಹಣವಿದ್ದರೆ ಎಷ್ಟು ಬಡ್ಡಿಯಾಗುವದು?

೨೪. ವಾರಲೋನ ಮತ್ತು ವಾರ ಬಾಂಡುಗಳನ್ನು ಕೊಳ್ಳಲಿಕ್ಕೆ ಹಣವನ್ನು ಬೆಮ್ಮಲೆ ಕೊಡಬೇಕಾಗುವದೋ? ಇಲ್ಲವಿದ್ದರೆ, ವಾರಲೋನಿನ ಕಂತಗಳಾವವು? ೧ನೇ ಕಂತಯಾವದು ಮತ್ತು ಅದನ್ನು ಎಂಬ ಕೊಡತಕ್ಕದ್ದು ಇವರಂತೆ ೨ನೇ ೩ನೇ ೪ನೇ ೫ನೇ ಕಂತಗಳಾವವು? ಮತ್ತು ಪ್ರತಿಯೊಂದು ಕಂತನ್ನು ಎಂದೆಂದು ಕೊಡತಕ್ಕದ್ದು?

೨೫. ಸನ್ ೧೯೨೦ ಹಾಗು ೧೯೨೯ನೇ ಇಸವಿಯ ವಾರಬಾಂಡುಗಳ ಕಂತಗಳಾವವು?

೨೬. ಮುಖ್ಯವಾಗಿ ಯಾವವರ್ಗದ ಜನರ ಸಲುವಾಗಿ ಈ ಕಂತಗಳ ವ್ಯವಹಾರವು ಮಾಡಲ್ಪಟ್ಟಿದೆ, ನಿಮಗೆ ಗೊತ್ತಿದೆಯೋ?

೨೭. ಪೋಸ್ಟ ಆಫೀಸಿನ ಸರ್ಟಿಫಿಕೇಟುಗಳು ಮುಖ್ಯವಾಗಿ ಯಾರ ಉಪಯೋಗಕ್ಕಾಗಿ ಇರುತ್ತವೆ?

೨೮. ಪ್ರತಿಯೊಂದು ಬೇರೆ ಬೇರೆ ತರದ ವ್ಯವಸ್ಥೆಯಿಂದ ಸರಕಾರಕ್ಕೆ ಆಗುವ ಲಾಭವೇನು?

೯೯. ಮತ್ತು ಈ ವ್ಯವಸ್ಥೆಯಿಂದ ಜನರಿಗಾಗುವ ಲಾಭವೇನು?

೧೦. ಪೋಸ್ಟಆಫೀಸಸೆವ್ಹಿಂಗಬ್ಯಾಂಕಿನ ವಾಡಿಕೆಯ ಬಡ್ಡಿಯುದರ ವೇನು? ಮತ್ತು ಮುಂಬಯಿ ಸೇವ್ಹಿಂಗ ಬ್ಯಾಂಕಿನ ವಾಡಿಕೆಯ ಬಡ್ಡಿಯ ದರ ವೇನು?

೧೧. ಅಂದಮೇಲೆ ಸರಕಾರದವರು ವಾರಲೋನಿನ ಸಲುವಾಗಿ ಈಗ ಹೆಚ್ಚಿದರದ ಬಡ್ಡಿಯನ್ನು ಯಾಕೆ ಸೋಸುತ್ತಾರೆ? (ಕೊಡುತ್ತಾರೆ)

೧೨. ಯುದ್ಧವು ಮುಗಿದ ನಂತರ ಹಣವು ಕೊಡದೆ ಉಳಿಯುವ ದೋ? ಇಲ್ಲದಿದ್ದರೆ ಎಲ್ಲ ಕಡೆಗೂ ಸಿಕ್ಯುರಿಟಿಗಳ ಬಡ್ಡಿಯ ದರವು ಬಹು ಶಃ ಇಳಿಯುವದಿಲ್ಲವೋ? ವಾರಲೋನಕ್ಕಾಗಿ ಹಣಕೊಟ್ಟವರಿಗೆ ವಿಶೇಷ ವಾಗಿ ಯಾವ ಅನುಕೂಲವಾಗುವದು? ಮುಂದೆ ಮೂವತ್ತು ವರ್ಷಗಳವ ರೆಗೆ ಬಡ್ಡಿಯ ದರವು ಅಲ್ಪ ಸ್ವಲ್ಪ ಇಳಿದರೂ ಅವರು ತಮ್ಮ ಮುಂದಿನ ಕಂತಗಳ ಲಾಭವನ್ನು ಉಪಭೋಗಿಸಲಿಕ್ಕೆ ಹತ್ತುವರು.

೧೩ ಪೋಸ್ಟಆಫೀಸಿನ ಸರ್ಟಿಫಿಕೇಟುಗಳೆಂದರೆ ಯಾವವು? ಅವ ನಿಜವಾಗಿ ಕೂಡಲೆ ಬಡ್ಡಿ ಸಹಿತವಾಗಿ ಕೊಡತಕ್ಕ ಹುಂಡಿಗಳಲ್ಲವೇ? ಅವು ಗಳಿಗೂ ಹುಂಡಿಗಳಿಗೂ ಏನಾದರೂ ಹೆಚ್ಚು ಕಡಿಮೆ ಇದೆಯೋ? ಇದ್ದರ ಅದು ಯಾವದು?

೧೪. ಮೂರುವರ್ಷ ಮತ್ತು ಐದು ವರ್ಷಗಳ ವಾರಬಾಂಡುಗಳಂ ದ ಮುಖ್ಯವಾಗಿ ಆಗುವ ಲಾಭವೇನು?

೧೫. ೩ ಅಥವಾ ೫ ವರ್ಷಗಳನಂತರ ತಮ್ಮ ಮಕ್ಕಳ ಮುಂಜಿ, ಲಗ್ನ ಅಥವಾ ವಿದ್ಯಾಭ್ಯಾಸಗಳಿಗಾಗಿ ಒಟ್ಟಿಗೆ ಬಹಳ ಹಣ ದೊರ ಯಬೇಕೆಂದು ಇಚ್ಛಿಸುವವರಿಗೆ ಈ ವಾರ ಬಾಂಡುಗಳು ಒಳ್ಳೇ ಸಹಾ ಯಕಾರಿಗಳಾಗುವದಿಲ್ಲವೋ?

೧೬. ಉದಾಹರಣಾರ್ಥವಾಗಿ— ನನಗೆ ೧೨ ವರ್ಷದ ಒಬ್ಬ ಮಗ ಳಿದ್ದಾಳೆ; ಮೂರು ಅಥವಾ ಐದುವರ್ಷಗಳ ನಂತರ ನಾನು ಅವಳ ಲಗ್ನವ ನ್ನು ಮಾಡಬೇಕಾಗಿದೆ. ಅವಳ ಲಗ್ನಕ್ಕಾಗಿ ನಾನು ಏನಿಲ್ಲೆಂದರೂ ೧೦೦೦ ರೂ. ಗಳನ್ನು ಖರ್ಚು ಮಾಡಬೇಕಾಗುವದು, ಮೂರು ಅಥವಾ

ಐದುವರ್ಷಗಳ ನಂತರ ನನಗೆ ೧೦೦೦ ರೂಪಾಯಿಗಳು ದೊರೆಯಬೇಕಾದರೆ ೧೯೫೦ ಅಥವಾ ೧೯೫೨ನೇ ಇಸವಿಯಲ್ಲಿ ಹಣವು ದೊರೆಯಬೇಕಾದ ವಾರ ಬಾಂಡುಗಳ ಬಗ್ಗೆ ಈಗ ಪ್ರತ್ಯೇಕವಾಗಿ ಎಷ್ಟು ಹಣವನ್ನು ಹಾಕಬೇಕಾಗುವದು?

೩೭. ಅಥವಾ ಐದುವರ್ಷಗಳ ಮೇಲೆ ೧೦೦೦ ರೂ. ಗಳನ್ನು ಪಡೆಯಬೇಕಾದರೆ ಈಗ ಪೋಸ್ಟಆಫೀಸಿನ ಸರ್ಟಿಫಿಕೇಟುಗಳನ್ನು ಕೊಳ್ಳಲಿಕ್ಕೆ ಎಷ್ಟು ರೂಪಾಯಿಗಳನ್ನು ಕೊಡಬೇಕು?

೩೮. ೧೦೦ ರೂಪಾಯಿಗಳಿಗಿಂತ ಕಡಿಮೆ ರೂಪಾಯಿಗಳನ್ನು ವಾರಲೋನಕ್ಕಾಗಿ ಹಾಕಲಿಕ್ಕೆ ಬರುವದಿಲ್ಲವೋ? ಬರದಿದ್ದರೆ ಅಗದೀ ಕಟ್ಟಕಡೆಯ ರಕಮುಯಾವದು? ಮತ್ತು ಅದನ್ನು ಎಲ್ಲಿಕೊಡಬೇಕು?

ಶಾಲೆಯಲ್ಲಿ ಇವುಗಳನ್ನೂ ಇದೇ ಮಾದರಿಯ ಇನ್ನೂ ಅನೇಕ ಉದಾಹಾರಣೆಗಳನ್ನೂ ಪ್ರತಿಯೊಬ್ಬ ಶಿಕ್ಷಕನು ತನ್ನ ವಿದ್ಯಾರ್ಥಿಗಳಿಗೆ ಹೇಳಿ ರೂಢೀಮಾಡಿಸಬೇಕು. ದೇಶಭಾಷೆಯ ನಾಲ್ಕನೆಯ ಇಯತ್ತೆಯಿಂದಲೇ ಬಡ್ಡಿಯಲೆಖ್ಖಗಳು ಪ್ರಾರಂಭವಾಗುವದರಿಂದ ಆ ಇಯತ್ತೆಯಿಂದ ಮೇಲಿನ ಯಾವತ್ತು ಇಯತ್ತೆಗಳ ವಿದ್ಯಾರ್ಥಿಗಳಿಗೆ ಈ ಮಾದರಿಯ ಉದಾಹರಣೆಗಳನ್ನು ಹೇಳಿದರೆ ಅವರು ಸಹಜವಾಗಿ ತಿಳಿದುಕೊಳ್ಳುವರು. ನಾಲ್ಕನೇಇಯತ್ತೆಯಲ್ಲಿ ಸರಳಬಡ್ಡಿಯ ಉದಾಹರಣಗಳಿಗೆ ಹೋಲಿಸಿ ಹೇಳಬೇಕು. ಮೇಲಿನ ಕ್ಲಾಸುಗಳಲ್ಲಿಯೂ ಆಂಗ್ಲೋವ್ಹರ್ನ್ಯಾಕ್ಯುಲರ ಶಾಲೆಗಳಲ್ಲಿಯೂ ಇದಕ್ಕೂ ಹೆಚ್ಚು ವಿಚಾರಯುಕ್ತ ಉದಾಹರಣಗಳನ್ನು ಬಿಡಿಸಲಿಕ್ಕೆ ಹಚ್ಚಬೇಕು.

ಇನಸ್ಪೆಕ್ಟಿಂಗ ಆಫೀಸರರೂ, ಹೆಚ್ಚಿನಪಗಾರದ ದೇಶಭಾಷೆಯ ಶಾಲಾ ಮಾಸ್ತರರೂ, ಮಧ್ಯಮತರಗತಿಯ ಶಿಕ್ಷಕರೂ ವಾರದಲ್ಲಿ ಒಮ್ಮೆಯಾದರೂ ವಾರಲೋನದ ನಿಜವಾದ ಉದ್ದೇಶವನ್ನೂ ಅದರಿಂದಾಗುವ ಲಾಭಗಳನ್ನೂ ಎಲ್ಲ ವಿದ್ಯಾರ್ಥಿಗಳಿಗೆ ಚನ್ನಾಗಿ ತಿಳಿಸಿ ಹೇಳಬೇಕು.

"ಕ್ರಾನಿಕಲ್" ಎಂಬ ಮುಂಬಯಿಯ ದೈನಿಕ ಪತ್ರದ ಎಡಿಟರರಿಗೆ ಮುಂಬಯಿಯ ಗವರ್ನರರಾದ ನೇಕನಾಮದಾರ ಲಾರ್ಡ್ ಉಯಿಲಿಂಗಡನ್ನ ಸಾಹೇಬರವರು ವಾರಲೋನ ಸಂಬಂಧದಿಂದ ಬರೆದ ಪತ್ರದ ಸರಾಂಶವು.

"ಈವಾರಲೋನವು ಶ್ರೀಮಂತರಿಗೂ ಬಡವರಿಗೂ ಕೂಡಿಯೇ ಉಪಯೋಗವಾಗುವಂಥ ಲಾಭಕರವಾದ ಠೇವು ಇಡುವ ಮಾರ್ಗವಾಗಿರುತ್ತದೆ. ನಿಮ್ಮ ವಾಚಕಜನರೆಲ್ಲರು ಕೇವಲ ಅರ್ಥಲಾಭದ ದೃಷ್ಟಿಯಿಂದ ಇದರಲ್ಲಿ ಹಣವನ್ನು ಹಾಕದೆ, ಸ್ವಾಭಿಮಾನ, ಸ್ವದೇಶಾಭಿಮಾನ, ಸ್ವಕರ್ತವ್ಯ ಮುಂತಾದವುಗಳನ್ನು ಮನಸಿನಲ್ಲಿ ತಂದು, ಈ ಯುದ್ಧಕ್ಕೆ ಸಹಾಯ ಮಾಡುವ ಉದ್ದೇಶದಿಂದಲೇ ಈಗ ಸಾಲವನ್ನು ಕೊಡುವರೆಂದು ನಾನು ನಂಬುತ್ತೇನೆ. ಇಂಗ್ಲಿಸ ಸಾಮ್ರಾಜ್ಯದ ಮತ್ತು ತತ್ಪಕ್ಷದ ಪ್ರತಿಯೊಂದು ಭಾಗದವರು ದ್ರವ್ಯ ಹಾಗೂ ರಕ್ತ ಇವುಗಳ ಆಹುತಿಯನ್ನು ಅತಿದೊಡ್ಡ ಪ್ರಮಾಣದಿಂದ ಮಾಡಿರುವದರಿಂದ ಹಿಂದುಸ್ಥಾನವು ಜರ್ಮನಿಯ ರಾಕ್ಷಸೀಕೃತ್ಯಗಳಿಂದ ಸುರಕ್ಷಿತವಾಗಿ ಉಳಿದದೆ; ಅಲ್ಲದೆ ಅದರೊಳಗಿನ ಜನರ ಶಾಂತತೆ, ಉತ್ಕರ್ಷಗಳು ಯಥಾಪ್ರಕಾರ ನಡೆದಿರುತ್ತವೆ. ಆದ್ದರಿಂದ, ಈ ಸಂಯುಕ್ತ ಪಕ್ಷದವರಿಗೆ ಸಂಪೂರ್ಣ ಜಯವು ಪ್ರಾಪ್ತವಾಗುವದಕ್ಕಾಗಿಯೂ, ಭೂಮಂಡಲವನ್ನೇ ತನ್ನ ಆಧೀನದಲ್ಲಿ ತೆಗೆದುಕೊಳ್ಳಬೇಕೆಂಬ ಜರ್ಮನಿಯ ಮಹತ್ವಾಕಾಂಕ್ಷೆಯನ್ನು ಮುರಿಬಡಿಯುವದಕ್ಕಾಗಿಯೂ, ಸುಧಾರಿಸಿದ ಭಾಗದಲ್ಲೆಲ್ಲ ಶಾಂತತೆಯನ್ನೂ, ಸುರಕ್ಷಿತತೆಯನ್ನೂ ಉಳಿಸುವದಕ್ಕಾಗಿಯೂ ನಮ್ಮಲ್ಲಿ ಪ್ರತಿಯೊಬ್ಬನು ತನ್ನಲ್ಲಿದ್ದ ಹಣವನ್ನೆಲ್ಲ ವಾರಲೋನಕ್ಕಾಗಿ ಕೊಡಬಾರದೇನು? ಸಾರ್ವಜನಿಕ ಹಿತೈಷಿಯಾದಂಥ, ದೇಶಾಭಿಮಾನಿಯಾದಂಥ ಪ್ರತಿಯೊಬ್ಬ ನಾಗರಿಕನು ಈ ಬಗ್ಗೆ ತಾನು ಸರಕಾರಕ್ಕೆ ಋಣಿಯಾಗಿದ್ದೇನೆಂದು ಒಪ್ಪಿಕೊಂಡು ಅದರಿಂದ ಮುಕ್ತನಾಗುವದಕ್ಕಾಗಿ ಸಾಲವನ್ನು ಕೊಡುವದಕ್ಕೆ ಇಚ್ಛಿಸುವದಿಲ್ಲವೋ? ನಮ್ಮ ಇಲಾಖೆಯು ಹಿಂದುಸ್ಥಾನದಲ್ಲಿ ನಡೆಯುವಂಥ ಯಾವತ್ತೂ ಮಹತ್ವದ ಪ್ರಗತಿಯ ಕಾರ್ಯಗಳಲ್ಲಿ "ಮುಂಬಯಿ ಇಲಾಖೆಯು ಮೊದಲನೇದು" ಎಂಬ ಅನ್ವರ್ಥವನ್ನು ಪಡೆದಿರುತ್ತದೆ. ಆದ್ದರಿಂದ ಮುಂಬಯಿಯ ನಾಗರಿಕರಮುಂದೆ ಬಂದ ಈ ಪ್ರಶ್ನೆಯ ವಿಷಯವಾಗಿ ಅವರು ತಮ್ಮ ಪೂರ್ವಜರ ಅಭಿಮಾನವನ್ನು ಕಾಯ್ದುಕೊಳ್ಳುವರೆಂದು ನನಗೆ ಪೂರ್ಣ ನಂಬಿಗೆಯದೆ.

ವಾರಲೋನವನ್ನು ಕೊಡುವಬಗ್ಗೆ ೧೨ ಸಬಲ ಕಾರಣಗಳು.

ಔದ್ಯೋಗಿಕ ಪ್ರಗತಿಯಲ್ಲಿ ಮುಖಂಡರಾದ, ಮುಂಬಯಿಯ "ಟಾಟಾ ಎಂಡ ಸನ್ಸ್" ಕಂಪನಿಯ ಮುಖ್ಯಸ್ಥರಾದ, ಸರ ದೊರಾಬ ಟಾಟಾ ಇವರು ವಾರಲೋನ ಸಂಬಂಧದಿಂದ ಹೇಳುವ ಸಬಲವಾದ ಹನ್ನೆರಡು ಕಾರಣಗಳನ್ನು ಕೆಳಗೆ ಕೊಟ್ಟಿದ್ದೇವೆ.

ಟಾಟಾ ಎಂಡ ಸನ್ಸರವರು ವಾರ ಲೋನಕ್ಕಾಗಿ ೧ಕೋಟಿ ರೂಪಾಯಿಗಳ ಸಾಲವನ್ನು ಸರಕಾರದವರಿಗೆ ಕೊಟ್ಟಿರುತ್ತಾರೆ.

೧. ಈ ಯುದ್ಧವು ಬ್ರಿಟನದವರದಿದ್ದಂತೆ ನಮ್ಮದೂ ಆಗಿರುತ್ತದೆ. ಯಾಕಂದರೆ ಬ್ರಿಟಿಶ ಸಾಮ್ರಾಜ್ಯದೊಳಗಿನ ಪದಕರೂಪವಾದ ಹಿಂದು ಸ್ಥಾನವೆಂಬ ರತ್ನವನ್ನು ಹರಣಮಾಡುವ ಉದ್ದೇಶದಿಂದ ಜರ್ಮನಿಯವರು ಬಹಳ ವರ್ಷದಿಂದ ಇಲ್ಲಿಗೆ ಬರುವ ಮಾರ್ಗವನ್ನು ಶೋಧಿಸ ಹತ್ತಿರುತ್ತಾರೆ. "ಅಗ್ಜ ಬರ್ಗರ ಝೀಟಂಗ" ಎಂಬ ಜರ್ಮನ ವೃತ್ತ ಪತ್ರದಲ್ಲಿ ಬರೆದಿರುವದೇನಂದರೆ:— ಜರ್ಮನ ನಾವಿಕರು ಯುದ್ಧವನ್ನು ಮಾಡುವದಕ್ಕೆ ಅತ್ಯಾತುರರಾಗಿರುತ್ತಾರೆ. "ಏಳಲಿ, ಬೀಳಲಿ" ಸಾಯುವವರೆಗೆ ಯುದ್ಧವನ್ನು ಮಾಡುವ ದೃಢ ನಿಶ್ಚಯವನ್ನು ಮಾಡಿದ್ದಾರೆ.

ಭೂಮಧ್ಯಸಮುದ್ರ, ಹಾಗು ಸುವೇಝು ಕಾಲುವೆಗಳಲ್ಲಿ ಪ್ರವಾಸ ಮಾಡುವದಕ್ಕೂ, ಬೇರೆ ವಸಾಹತುಗಳಿಗೆ ಹೋಗುವದಕ್ಕೂ ಜರ್ಮನ ರಾಷ್ಟ್ರದವರಿಗೆ ಯಾವತರಹದ್ದೂ ಅತಂಕವಿರಬಾರದೆಂಬದೇ ಅವರ ಮುಖ್ಯಧ್ಯೇಯವಾಗಿರುತ್ತದೆ.

೨. ನಮ್ಮ ಕುಟುಂಬ ಸಂರಕ್ಷಣೆಯ ಸಲುವಾಗಿ ನಮ್ಮಲ್ಲಿ ಪ್ರತಿಯೊಬ್ಬರು ಟೊಂಕ ಕಟ್ಟಿ ನಿಲ್ಲತಕ್ಕದ್ದು. ಮತ್ತು ಹಣವನ್ನು ಕೊಡತಕ್ಕದ್ದು. ನಾವುಕೊಟ್ಟ ಪ್ರತಿಯೊಂದು ರೂಪಾಯಿಯು ಹಿಂದುಸ್ಥಾನದ ಸುರಕ್ಷಿತೆಯನ್ನೂ ಭದ್ರತೆಯನ್ನೂ ಸ್ಥಿರಪಡಿಸುತ್ತದೆ.

೩ ಯಾವದೇ ರಾಷ್ಟ್ರವಿರಲಿ, ಅದರ ಘಟನೆಯು ಸ್ವಾವಲಂಬನೆ, ಸ್ವಾಥತ್ಯಾಗ ಮುಂತಾದ ತತ್ವಗಳಿಗನುಸರಿಸಲಿಕ್ಕೆ ಬೇಕು, ಹಿಂದುಸ್ಥಾನವು ಈ ತತ್ವಕ್ಕೆ ಅಪವಾದವಾಗಲಾರದು.

೪. ಪ್ರತಿಯೊಂದು ಸಣ್ಣದೊಡ್ಡ ದೇಶದ ರಾಷ್ಟ್ರೀಯ ಸ್ವಾತಂತ್ರ್ಯ ಹಾಗು ಹಕ್ಕುಗಳನ್ನು ಕಾಯ್ದು ಕೊಳ್ಳಲಿಕ್ಕೂ, ತನಗೆ ಅನುಕೂಲವಾದ ಮಾರ್ಗದಿಂದ ಸುಧಾರಿಸುವದಕ್ಕೂ ಈ ಯುದ್ಧವು ಕೈಕೊಳ್ಳಲ್ಪಟ್ಟಿರುತ್ತದೆ.

೫. ಬರೇ ಸೈನಿಕರಿಂದ ಯುದ್ಧವು ನಡೆಯಲಾರದು. ಯುದ್ಧದಲ್ಲಿ ಯಶಸ್ಸುಂಟಾಗಲಿಕ್ಕೆ ಜನಸಹಾಯವೂ ಧನಸಹಾಯವೂ, ಕೂಡಿಯೇಬೇಕಾಗುವವು. ನಾವು ಹೆಚ್ಚೆಚ್ಚು ಹಣಕೊಟ್ಟಂತೆ ಬ್ರಿಟಿಶ ಹಾಗು ಹಿಂದೀ ಸೈನಿಕರ ಅನವಶ್ಯಕವಾದ ಮರಣವನ್ನು ಹೆಚ್ಚೆಚ್ಚು ತಪ್ಪಿಸಿದಂತಾಗುತ್ತದೆ.

೬ ಬ್ರಿಟಿಶ ಹಡಗುಪಡೆಯ ಕೃಪಾಪ್ರಸಾದದಿಂದ ನಾವು ಈಗ ಅನುಭವಿಸುವ ಹಾಗು ಹಿಂದೆ ಅನುಭವಿಸಿದ ಸುರಕ್ಷಿತೆಯ ಬಗ್ಗೆ ನಾವು ಋಣಿಗಳಾಗಿದ್ದೇವೆ ನಾವು ಈಗ ಕೊಡತಕ್ಕ ಸಾಲದಿಂದ ಆ ಋಣದ ಕೆಲವಂಶವಾದರೂ ತೀರಬಹುದು.

೭ ಲಾಭದ ದೃಷ್ಟಿಯಿಂದ ಕೊಡತಕ್ಕ ಸಾಲವಾದರೂ ಸುರಕ್ಷಿತವಾದದ್ದೂ, ಸುವಿಚಾರವುಳ್ಳದ್ದೂ ಆಗಿರುತ್ತದೆ.

೮. ಭೂಮಂಡಲದೊಳಗಿನ ಯಾವ ಸರಕಾರವೂ ಇಂಥ ಪರಿಸ್ಥಿತಿಯಲ್ಲಿ ಇಂಥಾ ಲಾಭಕರವಾದ ಸಾಲವನ್ನು ತೆಗೆದಿದ್ದಿಲ್ಲ.

೯. ಇದು ನಿಜವಾಗಿ ಹಿಂದೂ ರಾಷ್ಟ್ರೀಯ ಸಾಲವೆಂದು ಹೇಳಬಹುದು.

೧೦. ಈ ಯುದ್ಧದಿಂದ ಮುಂದೆ ಯುದ್ಧಗಳು ಕಟ್ಟಾಗುತ್ತವೆ. ವ್ಯವಹಾರೋದ್ಯೋಗಗಳಿಗೆ ಯುದ್ಧಗಳಿಂದಾಗುವ ಹಾನಿಯನ್ನು ಈ ಸಾಲದಿಂದ ನಿಲ್ಲಿಸಲಿಕ್ಕೆ ಆಗುವದು .

೧೧. ಯುದ್ಧವು ಈಗ ತೀರ ನಿಕರಕ್ಕೆ ಬಂದಿದೆ. ಜಯದ ಪರಡಿಯು ನಮ್ಮ ಕಡೆಗೆ ಒಲಿದಿದೆ. ಶತ್ರುಗಳ ವ್ಯೂಹವು ಭೇದಿಸಲ್ಪಟ್ಟಿದೆ. ಆದ್ದರಿಂದ ನಾವೆಲ್ಲರೂ ಕೂಡಿ ಅದನ್ನು ಮತ್ತಿಷ್ಟು ಸಿಥಿಲು ಮಾಡಲಿಕ್ಕೆ ಯತ್ನವನ್ನು ಮಾಡೋಣ. ನಾವು ಕೊಟ್ಟ ಪ್ರತಿಯೊಂದು ರೂಪಾಯಿಯಿಂದ ಜಯವು ಸಮೀಪಿಸುವದು.

೧೨. ಹಾಲಂಡದೊಳಗಿನ ಒಬ್ಬ ಚಿಕ್ಕ ಹುಡುಗನು ಆದೇಶದ ಒಡ್ಡಿನೊಳಗಿನ ಬಿಂದು ಸಣ್ಣ ತೂತಿನಲ್ಲಿ ತನ್ನ ಬೆರಳನ್ನು ಇಟ್ಟು ತನ್ನ ದೇಶದ ಕೋಟ್ಯವಧಿ ಜನರ ಸಂಪತ್ತನ್ನೂ, ಪ್ರಾಣವನ್ನೂ ಉಳಿಸಿದನು.

ಅದರಂತೆ ಇಂಡಿಯಾದವರು ಕೊಡತಕ್ಕ ೧೫೦ ಕೋಟಿ ರೂಪಾಯಿಗಳನ್ನು ಸದ್ಯಕ್ಕೆ ಬ್ರಿಟನದವರು ಮಾಡುವ ದೊಡ್ಡ ಸ್ವಾರ್ಥತ್ಯಾಗಕ್ಕೆ ಹೋಲಿಸಿ ನೋಡಿದರೆ ಇದು ಅಲ್ಪ ಪ್ರಮಾಣದ್ದಾದರೂ ಈ ಪ್ರಸಂಗದಲ್ಲಿ ಅದು ಬ್ರಿಟಿಶಸಾಮ್ರಾಜ್ಯ ಹಾಗು ಅದರ ಅಂತರ್ಗತಭಾಗಗಳನ್ನು ಉಳಿಸಿಕೊಳ್ಳುವ ಕೆಲಸದಲ್ಲಿ ಒಳ್ಳೇ ಮಹತ್ವದ್ದಾಗಿ ಪರಿಣಮಿಸುವದು.

ವಾರ ಲೋನ ಸಂಬಂಧದ ಸರಕಾರೀ ಠರಾವು.

ಹಿಂದುಸ್ಥಾನದ ಯುದ್ಧದ ಸಂಬಂಧದ ಸಾಲವ್ರ.

ನಗದು ಸಿಕ್ಕಿದ ಎಲ್ಲ ವರ್ಗಣಿಯು ಮಲಿಕ್ ಮುಅಝುಮ್‌ರವರ ಸರಕಾರಕ್ಕೆ ಯುದ್ಧವನ್ನು ನಡಿಸಲಿಕ್ಕೆ ಕೊಡಲಾದೀತು.

ಸನ್ ೧೯೨೯–೧೯೪೨ನೇ ಇಸವಿಗಳ ಶೇಕಡಾ ೫ ಬಡ್ಡಿಯುಳ್ಳ ಯುದ್ಧದ ಸಂಬಂಧದ ಸಾಲವು

ಸನ್ ೧೯೩೦ನೇ ಇಸವಿಯ ಶೇಕಡಾ ೫॥ ಬಡ್ಡಿಯುಳ್ಳ ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೩೨ನೇ ಇಸವಿಯ ಶೇಕಡಾ ೫॥ ಬಡ್ಡಿಯುಳ್ಳ ಯುದ್ಧದ ಸಂಬಂಧದ ಬಾಂಡುಗಳು.

ಪೋಸ್ಟ ಆಫೀಸಿನ ೫ ವರ್ಷದ ನಗದು ಸರ್ಟಿಫಿಕೇಟುಗಳು (ಸನ್ ೧೯೧೫–೧೯೪೨ನೇ ಇಸವಿಯ ಬಗ್ಗೆ ತೆಗೆದಂಥವು)

ಅಸಲು ಮತ್ತು ಬಡ್ಡಿಯ ಬಗ್ಗೆ ಹಿಂದುಸ್ಥಾನ ಸರಕಾರದ ಉತ್ಪನ್ನ ಮತ್ತು ಮಹಸೂಲು ತಾರಣವಿರುವದು.

೧. ಯುದ್ಧದ ಸಂಬಂಧದ ಸಾಲ, ಸನ್ ೧೯೨೯–೧೯೪೨.

ಹೊರಡಿಸಿದ ವೇಳೆಯ ಕಿಮ್ಮತ್ತು : ಈ ಕೆಳಗೆ ಬರೆದಂತೆ ಶೇಕಡಾ ೯೫ ರೂಪಾಯಿ ಕೊಡಬೇಕು.

ಒಂದೇ ವೇಳೆಗೆ ಸಂಪೂರ್ಣ ಕೊಡಬೇಕಾದ ರಕಮುಗಳಿಗೆ: ಅರ್ಜಿ ಮಾಡಿದಾಗ ಶೇಕಡಾ ೯೫ ರೂಪಾಯಿ.

ಹಪ್ತೆಯಿಂದ ಕೊಡಬೇಕಾದ ರಕಮುಗಳಿಗೆ: ಅರ್ಜಿ ಮಾಡಿದಾಗ ಶೇಕಡಾ ೧೫ ರೂಪಾಯಿ ಮತ್ತು ಉಳಿದ ಬಾಕಿ ರಕಮನ್ನು ೪ ತಿಂಗಳ ಗಟ್ಟಿಲೆಯ ಹಪ್ತೆಯಿಂದ ಶೇಕಡಾ ೨೦ ರೂಪಾಯಿ

ಯುಂತೆ ಪ್ರತಿಯೊಂದು ಹಪ್ತೆಯನ್ನು ಈ ಅರ್ಜಿ ಮಾಡಿದ ತಿಂಗಳ ನಂತರ ಬರುವ ಕ್ರಮೇಣ ಮೊದಲನೇ, ಎರಡನೇ, ಮೂರನೇ ಮತ್ತು ನಾಲ್ಕನೇ ತಿಂಗಳುಗಳ ೧೫ನೇ ತಾರೀಖಿಗೆ ಅಥವಾ, ಆ ದಿವಸವು ರವಿವಾರವಿದ್ದರೆ, ೧೬ನೇ ತಾರೀಖಿಗೆ ಕೊಡಬೇಕು.

ಬಡ್ಡಿ: ಪ್ರತಿವರ್ಷ ಫೆಬ್ರುವರಿ ೧೫ನೇ ತಾರೀಖಿಗೆ ಮತ್ತು ಆಗಸ್ಟ ೧೫ನೇ ತಾರೀಖಿಗೆ ಶೇಕಡಾ ೫ ರೂಪಾಯಿ ಕೊಡಲ್ಪಡುವದು.

ಸಾಲ ತೀರಿಸುವ ತಾರೀಖು:—ಮುಂಚೆಯೇ ತೀರಿಸದಿದ್ದಲ್ಲಿ, ಸನ್ ೧೯೨೯-೧೯೪೬ನೇ ಇಸವಿಗಳ ಯುದ್ಧದ ಸಂಬಂಧದ ಸಾಲವು ಸನ್ ೧೯೪೬ನೇ ಇಸವಿಯ ಆಗಸ್ಟ ತಿಂಗಳಿನ ೧೫ನೇ ತಾರೀಖಿನ ದಿವಸ ಹೆಚ್ಚು ಕಡಿಮೆ ಮಾಡದೇ ಅದೇ ಬೆಲೆಗೆ ತಿರುಗಿ ಕೊಡಲ್ಪಡುವದು: ಆದರೆ ಹಿಂದುಸ್ಥಾನ ಸರಕಾರದವರು, ಸನ್ ೧೯೨೯ನೇ ಇಸವಿಯ ಆಗಸ್ಟ ತಿಂಗಳಿನ ೧೫ನೇ ತಾರೀಖಿನ ದಿವಸ ಅಥವಾ ತದನಂತರ ಇಂಡಿಯಾದ ಗ್ಯಾಝೆಟಿನಲ್ಲಿ ಮೂರು ಕ್ಯಾಲೆಂಡರ ತಿಂಗಳಿನ ನೋಟೀಸನ್ನು ಕೊಟ್ಟು ಏನೂ ಹೆಚ್ಚು ಕಡಿಮೆ ಮಾಡದೇ ಅದೇ ಬೆಲೆಗೆ ಆ ಸಾಲವನ್ನು ಅಥವಾ ಅದರ ಯಾವದಾದರೂ ಭಾಗವನ್ನು ತಿರುಗಿ ಕೊಡುವ ಹಕ್ಕನ್ನು ತಾವು ಇಟ್ಟುಕೊಂಡಿದ್ದಾರೆ.

ಸಿಂಕಿಂಗ್ ಫಂಡು:—ಸನ್ ೧೯೨೯-೧೯೪೬ನೇ ಇಸವಿಗಳ ಯುದ್ಧದ ಸಂಬಂಧದ ಸಾಲದ ಪೇಟೆ ಬೆಲೆಯು ಕಡಿಮೆಯಾಗದಂತೆ ತಜವೀಜು ಮಾಡುವ ಬಗ್ಗೆ, ಹಿಂದುಸ್ಥಾನ ಸರಕಾರದವರು, ಯಾವ ಯಾವ ವೇಳೆಗೆ ಪೇಟೆ ಬೆಲೆಯು ಸಾಲ ತೆಗೆದ ವೇಳೆಯ ಬೆಲೆಗಿಂತ ಕಡಿಮೆಯಾಗುವದೋ ಆಗ, ಆ ಸಾಲದ ಸೆಕ್ಯುರಿಟಿಗಳನ್ನು ಕೊಂಡುಕೊಂಡು ಅವನ್ನು ರದ್ದು ಮಾಡುವ ಬಗ್ಗೆ ಉಪಯೋಗಿಸಲ್ಪಡುವ ಒಂದು ಫಂಡನ್ನು ಸ್ಥಾಪಿಸುವೆಗೋಸ್ಕರ, ಸನ್ ೧೯೨೯-೧೯೪೬ನೇ ಇಸವಿಗಳ ಯುದ್ಧದ ಸಂಬಂಧದ ಸಾಲದ ರಕಮಿನ ಶೇಕಡಾ ೧॥ ರಕಮಿನಷ್ಟು ದರವರ್ಷ ಪ್ರತ್ಯೇಕವಾಗಿಡಲಿಕ್ಕೆ ಒಪ್ಪಿ ಕೊಂಡಿದ್ದಾರೆ.

೩. ಸನ್ ೧೯೨೦ನೇ ಇಸವಿಯ ಯುದ್ಧದ ಸಂಬಧದ ಬಾಂಡುಗಳು ಮತ್ತು ಸನ್ ೧೯೩೪ನೇ ಇಸವಿಯ ಯುದ್ಧದ ಸಂಬಂಧದ ಬಾಂಡುಗಳು.

(ಪ್ರಾಪ್ತಿಯ ಮೇಲಿನ ಕರವು ಲಾಗೂ ಇರುವದಿಲ್ಲ.)

ಹೊರಡಿಸಿದ ವೇಳೆಯ ಕಿಮ್ಮತ್ತು: ಈ ಕೆಳಗೆ ಬರೆದಂತೆ ಶೇಕಡಾ ೧೦೦ ರೂಪಾಯಿ ಕೊಡಬೇಕು.

ಒಂದೇ ವೇಳೆಗೆ ಸಂಪೂರ್ಣ ಕೊಡಬೇಕಾದ ರಕಮುಗಳಿಗೆ: ಅರ್ಜಿ ಮಾಡಿದಾಗ ಶೇಕಡಾ ೧೦೦ ರೂಪಾಯಿ.

ಹಪ್ತೆಯಿಂದ ಕೊಡಬೇಕಾದ ರಕಮುಗಳಿಗೆ: ಅರ್ಜಿ ಮಾಡಿದಾಗ ಶೇಕಡಾ ೨೦ ರೂಪಾಯಿ ಮತ್ತು ಉಳಿದ ಬಾಕಿ ರಕಮನ್ನು ೪ ತಿಂಗಳಗಟ್ಟಲೆಯ ಹಪ್ತೆಯಿಂದ ಶೇಕಡಾ ೨೦ ರೂಪಾಯಿಯಂತೆ ಪ್ರತಿಯೊಂದು ಹಪ್ತೆಯನ್ನು ಈ ಅರ್ಜಿ ಮಾಡಿದ ತಿಂಗಳ ನಂತರ ಬರುವ ಕ್ರಮೇಣ ಮೊದಲನೇ, ಎರಡನೇ, ಮೂರನೇ ಮತ್ತು ನಾಲ್ಕನೇ ತಿಂಗಳುಗಳ ೧೫ನೇ ತಾರೀಖಿಗೆ ಅಥವಾ, ಆ ದಿವಸವು ರವಿವಾರವಿದ್ದರೆ, ೧೬ನೇ ತಾರೀಖಿಗೆ ಕೊಡಬೇಕು.

ಟಿಪ್ಪಣಿ: ಪ್ರತಿವರ್ಷ ಫೆಬ್ರುವರಿ ೧೫ ನೇ ತಾರೀಖಿಗೆ ಮತ್ತು ಆಗಪ್ಪ ೧೫ನೇ ತಾರೀಖಿಗೆ ಶೇಕಡಾ ೫॥ ರೂಪಾಯಿ ಕೊಡಲ್ಪಡುವದು.

ಸಾಲ ತೀರಿಸುವ ತಾರೀಖು: ಸನ್ ೧೯೨೦ನೇ ಇಸವಿಯ ಯುದ್ಧದ ಸಂಬಂಧದ ಬಾಂಡುಗಳು ಸನ್ ೧೯೩೦ನೇ ಇಸವಿಯ ಆಗಪ್ಪ ತಿಂಗಳ ೧೫ನೇ ತಾರೀಖಿಗೆ ತಿರುಗಿ ಕೊಲ್ಪಡುವವು, ಸನ್ ೧೯೨೨ನೇ ಇಸವಿಯ ಯುದ್ಧ ಸಂಬಂಧದ ಬಾಂಡುಗಳು ಸನ್ ೧೯೩೨ನೇ ಇಸವಿಯ ಆಗಪ್ಪ ತಿಂಗಳ ೧೫ನೇ ತಾರೀಖಿಗೆ ತಿರುಗಿ ಕೊಡಲ್ಪಡುವವು.

೩. ಪೋಸ್ಟ-ಆಫೀಸಿನ ೫ ವರ್ಷದ ನಗದೀ ಸರ್ಟಿಫಿಕೇಟುಗಳು.

(ಪ್ರಾಪ್ತಿಯ ಮೇಲಿನ ಕರವು ಲಾಗೂ ಇರುವದಿಲ್ಲ.)

೧೦ ರೂಪಾಯಿ, ೨೦ ರೂಪಾಯಿ, ೫೦ ರೂಪಾಯಿ ಮತ್ತು ೧೦೦ ರೂಪಾಯಿಗಳ ಬಗ್ಗೆ.

ಹೊರಡಿಸಿದ ೫ ವರ್ಷಗಳ ನಂತರ ತಿರುಗಿ ಕೊಡಲ್ಪಡುವವು.

ಹೊರಡಿಸಿದ ವೇಳೆಯ ಕಿಮ್ಮತ್ತು:

೭-೧೨ ರೂ., ೧೫-೮ ರೂ., ೩೮-೧೨ ರೂ., ಮತ್ತು ೭೬-೨೪ ರೂಪಾಯಿ.

ಈ ಸರ್ಟಿಫಿಕೇಟುಗಳನ್ನು, ಸಾಲದ ಸಂಬಂಧದ ಜಾಹೀರ್‌ನಾಮೆ
ಯಲ್ಲಿ ಠರಾಯಿಸಿದ ದರದಂತೆ ಈ ಐದು ವರ್ಷದ ಮುದ್ದತಿನೊಳಗೆ ಯಾವ
ವೇಳೆಯಲ್ಲಿ ಆದರೂ ಹೊರಡಿಸಿದ ಪೋಸ್ಟ ಆಫೀಸಿನಲ್ಲಿ ಸಹ ವಟಾಯಿಸ
ಬಹುದು.

೧. ಸನ್ ೧೯೨೯–೧೯೪೬ನೇ ಇಸವಿಗಳ ಯುದ್ಧದ ಸಂಬಂಧದ
ಸಾಲದ ಬಾಬತು ಸೆಕ್ಯುರಿಟಿಗಳನ್ನು, ಸನ್ ೧೯೩೦ನೇ ಇಸವಿಯ ಯುದ್ಧ
ದ ಸಂಬಧದ ಬಾಂಡುಗಳನ್ನು ಮತ್ತು ಸನ್
ಸೆಕ್ಯುರಿಟಿಗಳ ನಮೂನೆ. ೧೯೩೯ನೇ ಇಸವಿಯ ಯುದ್ಧದ ಸಂಬಂಧದ
ಬಾಂಡುಗಳನ್ನು ಅರ್ಜಿದಾರನ ಖುಷಿಯಂತೆ (ಇದನ್ನು ಅವನ ಅರ್ಜಿಯಲ್ಲಿ
ಬರೆಯಬೇಕು) ಈ ಕೆಳಗೆ ಕೊಟ್ಟ ನಮೂನೆಗಳಲ್ಲಿ ಕೊಡಲಾಗುವದು.

(೧) ಇನ್‌ಸ್ಕ್ರಿಬ್ಡ್ ಸ್ಟೊಕ್ ಸರ್ಟಿಫಿಕೇಟು.... ಡಸ್ಟ್ರೈವಜು ಮಾ
ಡಿ ಬೇರೆಯವರಿಗೆ ಕೊಡಬಹುದು.

(೨) ಪ್ರೊವಿಸರಿ ನೋಟುಗಳು .... ಅವುಗಳ ಮೇಲೆ ಮುದ್ರೆ
ಲಾಸು ಮಾಡಿ ಬೇರೆಯವ
ರಿಗೆ ಕೊಡಬಹುದು.

(೩) ಬೆರರ್ ಬಾಂಡುಗಳು .... ಸ್ವಾಧೀನ ಮಾಡಿ ಬೇರೆ
ಯವರಿಗೆ ಕೊಡಬಹುದು.

ತಮ್ಮ ಖುಷಿಯನ್ನು ಯಾವದೂ ತರದಲ್ಲಿ ನಿರ್ದಿಷ್ಟ ಮಾಡದೇ ಇದ್ದ
ಲ್ಲಿ, ವೊಟ್ಟವೊದಲು, ಸೆಕ್ಯುರಿಟಿಗಳನ್ನು ಇನ್‌ಸ್ಕ್ರಿಬ್ಡ್ ಸ್ಟೊಕ್ ಸರ್ಟಿ
ಫಿಕೇಟುಗಳ ನಮೂನೆಯಲ್ಲಿ ಕೊಡಲಾದೀತು.

೨ ಸನ್ ೧೯೩೦ನೇ ಇಸವಿಯ ಯುದ್ಧದ ಸಂಬಂಧದ ಬಾಂಡುಗಳ
ಮತ್ತು ಸನ್ ೧೯೩೯ನೇ ಇಸವಿಯ ಯುದ್ಧದ ಸಂಬಧದ ಬಾಂಡುಗಳ
ಬಡ್ಡಿಗೆ ಪ್ರಾಪ್ತಿಯ ಮೇಲಿನ ಕರವು ಲಾಗೂ ಇ
ಪ್ರಾಪ್ತಿಯುಮೇಲಿನ ಕರ. ಲಿಕ್ಕಿಲ್ಲ; ಆದರೆ ಜಾದಾಕರವು ಲಾಗೂ ಇರುವದು

ಸನ್ ೧೯೨೯-೧೯೪೬ನೇ ಇಸವಿಗಳ ಯುದ್ಧದ ಸಂಬಂಧದ ಸಾ
ಗಳ ಮೇಲಿನ ಬಡ್ಡಿಗೆ ಪ್ರಾಪ್ತಿಯ ಮೇಲಿನ ಕರವು ಅಥವಾ ಜಾದಾ ಕರವ
ಲಾಗೂ ಇರುವದು ಪ್ರಾಪ್ತಿಯ ಮೇಲಿನ ಕರವು ಪ್ರಾಪ್ತಿಯ ಮೇಲಿನ ಕರ

ವಿಷಯದ ಅಕ್ಟಿನ ಎರಡನೇ ವರಿಷ್ಟಿನ ೩ನೇ ಭಾಗದೊಳಗಿನ ಶರ್ತುಗಳನ್ವಯ ಠರಾಯಿಸಲ್ಪಡುವದು.

೩. ಕೊಂಡುಕೊಂಡ ಹಿಂದುಸ್ಥಾನ ಸರಕಾರದ ಪ್ರತಿಯೊಂದು ಸನ್ ೧೯೨೯–೧೯೪೨ನೇ ಇಸವಿಗಳ ಯುದ್ಧದ ಸಂಬಂಧದ ಸಾಲದ ಪ್ರತಿ ೧೦೦ ರೂಪಾಯಿಯ (ಹೆಸರಿನ) ಸಾಲವನ್ನು, ಶೇಕಡಾ ಮೂರರಂತೆ ಬಡ್ಡಿಯುಳ್ಳ ಶೇಕಡಾ ೩॥ ರೂಪಾಯಿ ಬಡ್ಡಿಯುಳ್ಳ ರೂಪಾಯಿ ಸಾಲುಗಳ ಕೈಕಿ ಯಾವದಾದರೂ ಸಾಲಕ್ಕೆ, ಅಥವಾ ಸನ್ ೧೯೩೬–೧೯೪೨ನೇ ಇಸವಿಯ ಶೇಕಡಾ ೪ ಬಡ್ಡಿಯುಳ್ಳ ಬದಲಾಯಿಸಿ ಕೊಳ್ಳಬಹುದಾದ ೧೩೦ ರೂಪಾಯಿಗಳ (ಹೆಸರಿನ) ಸಾಲಕ್ಕೆ, ವರ್ಗಣಿದಾರನು ಬದಲಾಯಿಸಬಹುದು, ಮತ್ತು ಅವುಗಳ ಬದಲಾಗಿ ಸನ್ ೧೯೨೯–೧೯೪೨ನೇ ಇಸವಿಗಳ ಯುದ್ಧದ ಸಂಬಂಧದ ಸಾಲವನ್ನು —

ಬದಲಾಯಿಸಿದ ಶೇಕಡಾ ಮೂರು ರೂಪಾಯಿ ಬಡ್ಡಿಯುಳ್ಳ ಸಾಲದ ಪ್ರತಿ ೧೦೦ ರೂಪಾಯಿಯ (ಹೆಸರಿನ) ಬದಲಾಗಿ ಯುದ್ಧದ ಸಂಬಂಧದ ಸಾಲ (ಹೆಸರಿನ) ೬೫ ರೂಪಾಯಿ

ಬದಲಾಯಿಸಿದ ಶೇಕಡಾ ಮೂರುವರೆ ಬಡ್ಡಿಯುಳ್ಳ ಸಾಲದ ಪ್ರತಿ ೧೦೦ ರೂಪಾಯಿಯ(ಹೆಸರಿನ) ಬದಲಾಗಿ ಯುದ್ಧದ ಸಂಬಂಧದ ಸಾಲ (ಹೆಸರಿನ) ೬೬ ರೂಪಾಯಿ

ಬದಲಾಯಿಸಬಹುದಾದ ಬದಲಾಯಿಸಿದ ಶೇಕಡಾ ೪ ಬಡ್ಡಿಯುಳ್ಳ ಸಾಲದ ಪ್ರತಿ ೧೦೦ ರೂಪಾಯಿಯ (ಹೆಸರಿನ) ಬದಲಾಗಿ ಯುದ್ಧದ ಸಂಬಂಧದ ಸಾಲ (ಹೆಸರಿನ) ೯೨ ರೂಪಾಯಿ.

ಈ ದರದಂತೆ ಪಡೆಯಬಹುದು, ಮತ್ತು ನೂರು ರೂಪಾಯಿಯಿಂದ ಭಾಗಿಸಲಿಕ್ಕೆ ಬರುವಂಥ ಬರೇಬರಿ ರಕಮನ್ನು ಮಾಡಲಿಕ್ಕೆ ಆವಶ್ಯವಿರಬಹುದಾದ ಯುದ್ಧದ ಸಂಬಂಧದ ಸಾಲದ ಇನ್ನೂ ಹೆಚ್ಚಿಗೆ ರಕಮನ್ನೂ, ಈ ಹೆಚ್ಚಿಗೆ ರಕಮನ್ನು (ಇದರೊಳಗಿಂದ ಪ್ರತಿರೂಪಾಯಿಯಿಂದ ಒಂದು ಪಾಯಿಯನ್ನು ಕಳೆದು) ನಗದಾಗಿ ಕೊಡಬೇಕೆಂಬ ಶರತ್ತಿಗೊಳಪಟ್ಟು, ಪಡೆಯಬಹುದು.

೪. ಬದಲಾಯಿಸಿಕೊಳ್ಳುವ ಹಕ್ಕುಗಳನ್ನು, ಸನ್ ೧೯೩೬ ನೇ ಇಸವಿಯ ನೊವ್ಹೆಂಬರ ೧ನೇ ತಾರೀಖಿನ ನಂತರ ಆದರೆ ೧೫ನೇ ಇಸವಿಯ

ಬದಲಾಯಿಸುವ ಹಕ್ಕುಗಳು.

ಜನವರಿ ತಿಂಗಳ ೧೫ನೇ ತಾರೀಖಿಗಿಂತ ಮೊದಲು ಯಾವದಾದರೂ ಮೇಳ
ಯಲ್ಲಿ ನಡಿಸಬಹುದು. ಒದಲಾಯಿಸುವ ವಾರಂಟುಗಳು ಬೆಚನೀ ಇರುವ
ವು ಮತ್ತು ಅವು ಬೆರರ್ ಫಾರ್ಮಿನಲ್ಲಿ ಕೊಡಲ್ಪಡುವವು.

೫. ಒದಲಾಯಿಸಿ ತೆಗೆದ ಸನ್ ೧೯೨೯–೪೦ನೇ ಇಸವಿಗಳ ಯುದ್ಧ
ದ ಸಂಬಂಧದ ಸಾಲಗಳ ಸೆಕ್ಯುರಿಟಿಗಳಿಗೆ ಸನ್ ೧೯೧೪ನೇ ಇಸವಿಯ
ಆಗಷ್ಟ ತಿಂಗಳ ೧೫ನೇ ತಾರೀಖಿನಿಂದ ಬಡ್ಡೀ ಸುರು ಆಗುವದು. ಮೇಲಿನ
ಮೂರನೇ ರಕವಿನನ್ವಯ ಕೊಟ್ಟ ನಗದು ರಕಮುಗಳ ಬಾಬತಿನಲ್ಲಿ
ಪ್ರತ್ಯೇಕವಾಗಿ ಬಡ್ಡಿ ಕೊಡಲ್ಪಡಲಿಕ್ಕಿಲ್ಲ.

೬. ಸನ್ ೧೯೨೯–೪೦ನೇ ಇಸವಿಗಳ ಯುದ್ಧದ ಸಂಬಂಧದ ಸಾಲ
ಗಳು, ಸನ್ ೧೯೩೦ನೇ ಇಸವಿಯ ಯುದ್ಧದ ಸಂಬಂಧದ ಬಾಂಡುಗಳು,
ಮತ್ತು ಸನ್ ೧೯೩೪ನೇ ಇಸವಿಯ ಯುದ್ಧದ ಸಂಬಂಧದ ಬಾಂಡುಗಳು
ಇವುಗಳನ್ನು ಧಾರಣ ಮಾಡುವವನಿಗೆ, ಮುಂದೆ ಹಿಂದುಸ್ಥಾನ ಸರಕಾರ
ದವರು ತೆಗೆಯಬಹುದಾದ ಯಾವದಾದರೂ ಸಾಲದಲ್ಲಿ ತಾನು ಧಾರಣ
ಮಾಡಿದ ಈ ಸಾಲಗಳನ್ನು ವರ್ಗಾಯಿಸಲಿಕ್ಕೆ ಅಧಿಕಾರ ದೊರೆಯಲಿಕ್ಕಿಲ್ಲ.

೭. ಯುದ್ಧದ ಸಂಬಂಧದ ಸಾಲ, ಸನ್ ೧೯೨೯–೧೯೪೭, ಯುದ್ಧ
ದ ಸಂಬಂಧದ ಬಾಂಡುಗಳು, ಸನ್ ೧೯೩೭ (ಫೋಷ್ಟ– ಆಫೀಸಿನ ಮೂ
ಖಾಂತರ ವರ್ಗಾಯಿಸಲ್ಪಡುವ ಅರ್ಜಿಗಳನ್ನು ಹೊರ್ತುಪಡಿಸಿ),
ಅರ್ಜಿಗಳು. ಇವುಗಳ ಬಗ್ಗೆ ಮಾಡಲ್ಪಡುವ ಅರ್ಜಿಗಳನ್ನು, ಸನ್
೧೯೧೭ನೇ ಇಸವಿಯ ಮಾರ್ಚ ತಿಂಗಳ ೧೫ನೇ ತಾರೀಖು ಗುರುವಾರದಿಂದ
ಸನ್ ೧೯೧೭ನೇ ಇಸವಿಯ ಜೂನ್ ತಿಂಗಳ ೧೫ನೇ ತಾರೀಖು ಶುಕ್ರವಾರ
ದ ವರೆಗೆ ಯಾವದಾದರೂ ದಿವಸದಲ್ಲಿ ಈ ಕೆಳಗಿನ ಯಾರಾದರೂ ಅವ
ದಾರರ ಅಥವಾ ಮನುಷ್ಯರ ಕಡೆಗೆ ಸಾದರ ಮಾಡಬಹುದು:—

(೧) ಕಂಟ್ರೋಲರ್ ಆಫ್ ಕರನ್ಸಿ, ಕಲಕತ್ತಾ, ಇವನ ಕಡೆಗೆ, ಅಥ
ವಾ ಯಾವನಾದರೂ ಪ್ರಾವ್ಹಿನ್ಶಿಯಲ್ ಅಕೌಂಟಂಟ್ ಜನರ
ಲ್ ಅಥವಾ ಕಂಟ್ರೋಲರ್, ಇವರ ಕಡೆಗೆ.

(೨) ಬಂಗಾಳ, ಮುಂಬಯಿ ಮತ್ತು ಮದ್ರಾಸು ಬ್ಯಾಂಕುಗಳ ಸೆಕ್ರೆ
ಟರಿಯರ ಮತ್ತು ಟ್ರೈಝುರರ ಕಡೆಗೆ, ಅವರ ಮುಖ್ಯ ಕಚೇರಿ
ಗಳಲ್ಲಿ, ಅಥವಾ ಇಂಥ ಬ್ಯಾಂಕುಗಳ ಏಜಂಟರ ಕಡೆಗೆ ಹಿಂ
ದುಸ್ಥಾನದೊಳಗಿನ ಯಾವದಾದರೂ ಬ್ರಾಂಚಿನಲ್ಲಿ, ಮತ

(೩) ಜಿಲ್ಲೆಯ ಹೆಡ್‌ಕ್ವಾರ್ಟರ್ಸ್‌ಗಳಲ್ಲಿಯ ಸರಕಾರೀ ಟ್ರೆಝುರಿಗಳು ತಾಬೆಯಲ್ಲಿರುವ ಅಮಲದಾರರ ಕಡೆಗೆ.

೮. ನೂರು ರೂಪಾಯಿಯ ರಕಮಿನ ಬಗ್ಗೆ ಅಥವಾ ನೂರರಿಂದ ವಿಭಾಗಿಸಲಿಕ್ಕೆ ಬರುವಂಥ ರಕಮುಗಳ ಬಗ್ಗೆ ಅರ್ಜಿಗಳನ್ನು ಮಾಡಬೇಕು.

೯. ೧೦೦ ರೂಪಾಯಿಯ ರಕಮಿನಬಗ್ಗೆ ಮಾಡಲ್ಪಡುವ ಅರ್ಜಿಗಳ ಸಂಗಡ, ಮಾತ್ರ, ಎಲ್ಲ ಬಾಬತುಗಳಲ್ಲಿ, ಅವುಗಳ ಪೂರ್ಣ ರಕಮನ್ನು ಕೊಡಬೇಕು, ಅಂದರೆ, ಯುದ್ಧದ ಸಂಬಧದ ಸಾಲ, ಸನ್ನೆ ೧೯೨೯–೧೯೪೬, ಇದರ ಬಾಬತಿನಲ್ಲಿ ರೂಪಾಯಿ ೯೫ನ್ನೂ, ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೩೦ ಮತ್ತು ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೩೭, ಇವುಗಳ ಬಾಬತಿನಲ್ಲಿ ೧೦೦ ರೂಪಾಯಿಯನ್ನೂ ಕೊಡಬೇಕು.

೧೦. ಯುದ್ಧದ ಸಂಬಂಧದ ಸಾಲ, ಸನ್ ೧೯೨೯– ೧೯೪೬, ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೩೦ ಅಥವಾ ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೩೭, ಇವುಗಳಲ್ಲಿ ೨೦೦ ಅಥವಾ ಹೆಚ್ಚು ರೂಪಾಯಿಯ ರಕಮುಗಳ ಬಗ್ಗೆ ಮಾಡಲ್ಪಡುವ ಅರ್ಜಿಗಳು:—

(ಅ) ಪೂರ್ಣವಾಗಿ ಹಣ ಕೊಡಬೇಕಾದ ರಕಮುಗಳ ಬಗ್ಗೆ, ಅಥವಾ

(ಬ) ಹಪ್ತೆಯಿಂದ ಕೊಡಬೇಕಾದ ರಕಮುಗಳ ಬಗ್ಗೆ, ಇರಬಹುದು.

೧೧. ಮಾನ್ಯ ಮಾಡಲ್ಪಟ್ಟ ಬ್ಯಾಂಕರರಿಗೆ ಮತ್ತು ದಲಾಲರಿಗೆ, ಅವರ ಮುದ್ರೆ ಇರುವಂಥ ನಗದೀ ಅರ್ಜಿಗಳ ಸಂಬಂಧದಿಂದ ಮಾಡಿದ ರಕಮುಗಳ ಮೇಲೆ ಶೇಕಡಾ ೧ ರಷ್ಟು ದಲಾಲಿಯು ಕೊಡಲ್ಪಡುವದು, ಆದರೆ ಪೋಸ್ಟ ಆಫೀಸಿನ ಮುಖಾಂತರ ಬಂದ ಅರ್ಜಿಗಳ ಬಾಬತಿನಲ್ಲಿ (ಇವುಗಳಲ್ಲಿ ಪೋಸ್ಟ ಆಫೀಸಿನ ೫ ವರ್ಷದ ನಗದೀ ಸರ್ಟಿಫಿಕೇಟುಗಳು ಸಹ ಬರುತ್ತವೆ,) ಅಥವಾ ಬದಲಾಯಿಸುವ ಬಗ್ಗೆ ಮಾಡಲ್ಪಡುವ ಅರ್ಜಿಗಳ ಬಾಬತಿನಲ್ಲಿ ಇಂಥ ದಲಾಲಿಯು ಕೊಡಲ್ಪಡಲಿಕ್ಕಿಲ್ಲ.

ದಲಾಲಿ

ಅರ್ಜಿಯು ನಮೂನೆಗಳನ್ನು ಅಕೌಂಟಂಟ್ ಜನರಲ್ಲನ ಅಥವಾ ಯಾವನಾದರೂ ಬ್ಯಾಂಕಿನ ಅಥವಾ ದಲಾಲನ ಅಥವಾ ಯಾವದಾದರೂ ಡಿಸ್ಟ್ರಿಕ್ಟ್ ಟ್ರೆಝುರಿಯ ಕಡೆಯಿಂದ ಪಡೆಯಬಹುದು.

ಪೋಸ್ಟ್ ಆಫೀಸ ಸೆಕ್ಯನು.

(ಪೋಸ್ಟ್ ಆಫೀಸಿನ ಮುಖಾಂತರ ಮಾಡಲ್ಪಡುವ ಅರ್ಜಿಗಳ ಸಂಬಂಧದಿಂದ ವಿಶೇಷ ಠರಾವುಗಳು.)

೧೨. ಯುದ್ಧದ ಸಂಬಂಧದ ಸಾಲ, ಸನ್ ೧೯೨೯–೧೯೪೭, ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೪೦, ಮತ್ತು ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೪೨, ಇವುಗಳ ಬಗ್ಗೆ ಮಾಡುವ ಅರ್ಜಿಗಳು ಸಹ, ಸೇವಿಂಗ್ಸ್ ಬ್ಯಾಂಕಿನ ಕೆಲಸ ಮಾಡಲಿಕ್ಕೆ ಅಧಿಕಾರವಿರುವ ಯಾವ ದಾದರೂ ಪೋಸ್ಟ್ ಆಫೀಸಿನಲ್ಲಿ ಸನ್ ೧೯೧೬ನೇ ಇಸವಿಯ ಮಾರ್ಚ್ ತಿಂಗಳ ೧೫ನೇ ತಾರೀಖಿನ ಗುರುವಾರದಿಂದ ಸನ್ ೧೯೧೬ನೇ ಇಸವಿಯ ಅಕ್ಟೋಬರ್ ತಿಂಗಳ ೧೫ನೇ ತಾರೀಖಿನ ಸೋಮವಾರದ ವರೆಗೆ, ಯಾವ ನಾದರೂ ಮನುಷ್ಯನ ಕಡೆಯಿಂದ(ಬಳಿಕ ಅವನು ಈ ಮುಂಚೆ ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿ ಹಣ ಇಟ್ಟವನಿರಲಿ ಅಥವಾ ಇಲ್ಲದಿರಲಿ), ಈ ಕೆಳಗಿನ ರಕಮುಗಳಲ್ಲಿ ಹೇಳಿದ ಶರ್ತುಗಳಿಗೊಳಪಟ್ಟು, ತೆಗೆದು ಕೊಳ್ಳಲ್ಪಡುವವು.

ಪರಮಾವಧಿಯು ಮತ್ತು ಕಡಿಮೆಯಲ್ಲಿ ಕಡಿಮೆ ರಕಮುಗಳು.

೧೩. ಪೋಸ್ಟ್ ಆಫೀಸಿನ ಮುಖಾಂತರ ಮಾಡುವ ಅರ್ಜಿಗಳನ್ನು ೨೫ ರೂಪಾಯಿಯ ಅಥವಾ ಅದರಿಂದ ಭಾಗಿಸಲಿಕ್ಕೆ ಬರುವಂಥ ಯಾವ ವಾದರೂ ರಕಮುಗಳ ಬಗ್ಗೆ ಮಾಡಬೇಕು. ಒಬ್ಬನೇ ಮನುಷ್ಯನು ಈ ಜಾಹೀರನಾಮೆಯನ್ವಯ ಒಟ್ಟಿಗೆ ೨೦,೫೦೦ ರೂಪಾಯಿಗಿಂತ ಹೆಚ್ಚಿನ ರಕಮಿನ ಬಗ್ಗೆ ಅರ್ಜಿ ಮಾಡಬಾರದು. ಅಥವಾ ಅದಕ್ಕಿಂತ ಹೆಚ್ಚು ರಕಮನ್ನು ಪೋಸ್ಟ್ ಆಫೀಸಿನ ಮುಖಾಂತರ ಧಾರಣ ಮಾಡಬಾರದು; ಮತ್ತು ಇದರ ಪೈಕಿ ೬೫೦೦ ರೂಪಾಯಿಗಿಂತ ಹೆಚ್ಚಿನ ರಕಮು, ಯುದ್ಧದ ಸಂಬಂಧದ ಸಾಲ, ಸನ್ ೧೯೨೯-೧೯೪೭ನೇ ಇಸವಿ ಇದರಲ್ಲಿ ಇರಬಾರದು; ರೂಪಾಯಿ ೬೫೦೦ರ ಕ್ಕಿಂತ ಹೆಚ್ಚಿನ ರಕಮು, ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೪೦, ಇದರಲ್ಲಿ ಮತ್ತು ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೪೨, ಇದರಲ್ಲಿ, ಪ್ರತಿಪ್ರತ್ಯೇಕವಾಗಿ ಅಥವಾ ಒಟ್ಟಾಗಿ ಇರಬಾರದು; ಮತ್ತು ೬೫೦೦ ರೂಪಾಯಿಗಿಂತ ಹೆಚ್ಚಿನ

ರಕಮು, ಪೋಸ್ ಆಫೀಸಿನ ೫ ವರ್ಷದ ನಗದೀ ಸರ್ಟಿಫಿಕೇಟುಗಳಲ್ಲಿ ಇರಬಾರದು—೨೩ನೇ ರಕಮು ನೋಡಿರಿ.

ಟೀಪು(೧).—ಈ ಜಾಹೀರನಾಮೆಯನ್ವಯ ಪೋಸ್ಟ್ ಆಫೀಸಿನ ಮುಖಾಂತರ ಅರ್ಜಿಗಳನ್ನು ಮಾಡಲಿಕ್ಕೆ, ಮುಂಚೆಯೇ ಪೋಸ್ಟ್ ಆಫೀಸಿನ ಮುಖಾಂತರವಾಗಿ ಪಡೆದ ಇತರಯಾವವಾದರೂ ಸಿಕ್ಯೂರಿಟಿಗಳು ಇದ್ದರೂ ಇಲ್ಲದಿದ್ದರೂ ಕೂಡ, ಸರವಾನಗಿ ಸಿಗುವದು.

(೨) ಬದಲಾಯಿಸಿ ಪಡೆದ, ಹುಟ್ಟಿದ ಸಂಬಂಧದ ಸಾಲ, ಸನ್ ೧೯೨೯–೧೯೪೭, ಇದರ ರಕಮುಗಳು, ಈ ಮೇಲಿನ ಮರ್ಯಾದೆಗಳನ್ನು ಲಾಗೂ ಮಾಡುವಲ್ಲಿ ಲೆಕ್ಕಿದಲ್ಲಿ ತೆಗೆದುಕೊಳ್ಳಲ್ಪಡಲಿಕ್ಕಿಲ್ಲ.

೧೪. ಯಾವ ರಕಮುಗಳ ಬಗ್ಗೆ ಅರ್ಜಿ ಮಾಡಿರುವದೋ ಆ ರಕಮುಗಳನ್ನು ಅರ್ಜಿಯ ಸಂಗಡಲೇ ಪೂರ್ಣವಾಗಿ ಕೊಡಬೇಕು. ಮತ್ತು ಅವನ್ನು ಹಪ್ತೆಗಳಿಂದ ಕೊಡಬಾರದು. ಆದರೆ ಒಬ್ಬನೇ ಮನುಷ್ಯನು ತಾನು ಮಾಡಿದ ಒಟ್ಟು ಅರ್ಜಿಗಳ ಸಂಖ್ಯೆಯು ೧೫ನೇ ರಕಮಿನಲ್ಲಿ ಠರಾಯಿಸಿದ ಮರ್ಯಾದೆಗಳಿಗೆ ವಿರಾರದಿದ್ದರೆ ಮಾತ್ರ, ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಮಾಡಬಹುದು.

ಕೊಡಬೇಕಾದ ರಕಮುಗಳು.

೧೫. ಹಿಂದಿನ ರಕಮಿನಲ್ಲಿ ಹೇಳಿದಂತೆ ಕೊಡಬೇಕಾದ ರಕಮುಗಳನ್ನು ಈ ಕೆಳಗಿನ ರೀತಿಗಳ ಪೈಕಿ ಯಾವದೊಂದು ರೀತಿಯಲ್ಲಿ ಅಥವಾ ಅಂಶತಃ ಪ್ರತಿಯೊಂದು ರೀತಿಯಲ್ಲಿ ಕೊಡಬಹುದು:—

ಹಣಕೊಡುವ ರೀತಿಯು.

(೫) ಸೇವಿಂಗ್ಸ್ ಬ್ಯಾಂಕಿನಲ್ಲಿ ಅರ್ಜಿದಾರನ ಖಾತೆಗೆ (ಇದ್ದರೆ) ಜಮಾ ಇದ್ದ ಯಾವದಾದರೂ ನಗದು ಶಿಲ್ಲಕು ರಕಮಿನಿಂದ ವರ್ಗಾಯಿಸಿ;

(೬) ನಾಣ್ಯದಿಂದ ಅಥವಾ ಕರನ್ಸಿ ನೋಟುಗಳಿಂದ ಹಣಕೊಟ್ಟು, ಅಥವಾ ಯಾವದೊಂದು ಮಾನ್ಯ ಮಾಡಲ್ಪಟ್ಟ ಬ್ಯಾಂಕು ಇರುವ ಸ್ಥಳದ ಮುಖ್ಯ ಪೋಸ್ಟ್ ಮಾಸ್ತರನ ಹೆಸರಲ್ಲಿ ಅಂಥ ಬ್ಯಾಂಕಿನ ಮೇಲೆ ತೆಗೆದ ಕ್ರಾಸ್‌ಡ್ ಚೆಕ್ಕಿನಿಂದ

೧೬. ಪೋಸ್ಟ್ ಆಫೀಸಿನ ಮುಖಾಂತರ ಮಾಡಿದ ಅರ್ಜಿಗಳ ಸಂಬಂಧದ ಸಿಕ್ಯುರಿಟಿಗಳು ಪ್ರಾಮಿಸರಿ ನೋಟುಗಳ ನಮೂನೆಯಲ್ಲಿ ಅಥವಾ ಸ್ಟಾಕು ಸರ್ಟಿಫಿಕೇಟುಗಳ ನಮೂನೆಯಲ್ಲಿ ತೆಗೆಯಲ್ಪಡುವವು. ಈ ರೀತಿಯಲ್ಲಿ ತೆಗೆದ ಸಿಕ್ಯುರಿಟಿಗಳನ್ನು ಅಕೌಂಟಂಟ ಜನರಲ್, ಪೋಸ್ಟ್‌ಸ ಮತ್ತು ಟೆಲಿಗ್ರಾಫ್ಸ್ ಇವರ ಕಾವಲಿನಲ್ಲಿಡಬಹುದು.

ಸಿಕ್ಯುರಿಟಿಗಳು.

೧೭. ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೩೦ ಮತ್ತು ಯುದ್ಧದ ಸಂಬಂಧದ ಬಾಂಡುಗಳು ಸನ್ ೧೯೩೨, ಇವುಗಳ ಮೇಲಿನ ಬಡ್ಡಿಯ ಮೇಲೆ ಪ್ರಾಪ್ತಿಯ ಮೇಲಿನ ಕರವು ವಸೂಲು ಮಾಡಲ್ಪಡಲಿಕ್ಕಿಲ್ಲ. ಯುದ್ಧದ ಸಂಬಂಧದ ಸಾಲ, ಸನ್ ೧೯೩೯—೧೯೪೭, ಇದರ ಸಿಕ್ಯುರಿಟಿಗಳ ಮೇಲೆ, ಅವನ್ನು ಅಕೌಂಟಂಟ ಜನರಲ್ ಪೋಸ್ಟ್‌ಸ ಮತ್ತು ಟೆಲಿಗ್ರಾಫ್ಸ್, ಇವರ ಸಂಗಡ ಅವಾನತು ಇಟ್ಟರೆ, ಮತ್ತು ಅವು ಆ ರೀತಿಯಲ್ಲಿ ಅವಾನತಿಡಲ್ಪಟ್ಟಿರುವ ವರೆಗೆ, ಪ್ರಾಪ್ತಿಯ ಮೇಲಿನ ಕರವು ಮುದ್ದಾಮು ವಸೂಲು ಮಾಡಲ್ಪಡಲಿಕ್ಕಿಲ್ಲ.

ಪ್ರಾಪ್ತಿಯಮೇಲಿನ ಕರವು.

೧೮. ಯುದ್ಧದ ಸಂಬಂಧದ ಸಾಲ, ಸನ್ ೧೯೩೯–೧೯೪೭, ಇದರ ಬಗ್ಗೆ ಪೋಸ್ಟ್ ಆಫೀಸಿನ ಮುಖಾಂತರ ಅರ್ಜಿ ಮಾಡುವ ಮನುಷ್ಯನಿಗೆ ಒಂದು ಬೇಚಕನೀ ಬದಲಾಯಿಸಬಹುದಾದ ವಾರಂಟ (ಬದಲಾಯಿಸುವ ಬಗ್ಗೆ ಮಾಡಲ್ಪಡುವ ಅರ್ಜಿಯ ನಮೂನೆಗಳ ಸಹಿತ) ಕೊಡಲ್ಪಡುವದು, ಮತ್ತು ಇದರ ಮೂಲಕ ಅವನಿಗೆ ಮೇಲಿನ ೩ನೇ ರಕಮಿನಲ್ಲಿ ನಿರ್ದಿಷ್ಟ ಮಾಡಿದ ಹಕ್ಕುಗಳನ್ನು ನಡಿಸಲಿಕ್ಕೆ ಅಧಿಕಾರ ಸಿಗುವದು.

ಬದಲಾಯಿಸೋಣ.

೧೯. ಶೇಕಡಾ ಮೂರು ಅಥವಾ ಮೂರುವರೆ ಬಡ್ಡಿಯಿಳ್ಳ ರೂಪಾಯಿಯ ಸಾಲಗಳ, ಅಥವಾ ಶೇಕಡಾ ೪ರ ಬಡ್ಡಿಯ ಬದಲಾಯಿಸಿಕೊಳ್ಳಬಹುದಾದ ಸಾಲ, ಸನ್ ೧೯೬೬– ೧೭, ಇದರ ಸಿಕ್ಯುರಿಟಿಗಳು, ೩ನೇರಕಮಿನಲ್ಲಿ ಉಲ್ಲೇಖ ಮಾಡಿದ ನಗದಾಗಿ ಕೊಟ್ಟ ಹಣಕ್ಕೆ (ಇದ್ದರೆ) ಜಪ್ತಿಪಟ್ಟು, ಯಾವ ಬಾಬತುಗಳಲ್ಲಿ ಬದಲಾಯಿಸುವ ಬಗ್ಗೆ ಸಾನರ ಮಾಡಿದ ಸಿಕ್ಯುರಿ

ಗಳು, ಅಕೌಂಟಂಟ್ ಜನರಲ್, ಪೋಸ್ಟ್ಸ ಮತ್ತು ಟೆಲಿಗ್ರಾಫ್ಸ, ಇವನ ಮುಖಾಂತರವಾಗಿ, ಸನ್ ೧೯೧೬ನೇ ಇಸವಿಯ ನವಂಬರ್ ತಿಂಗಳ ೧ನೇ ತಾರೀಖಿನ ನಂತರ ಮತ್ತು ಸನ್ ೧೯೧೭ನೇ ಇಸವಿಯ ಜನವರಿ ತಿಂಗಳ ೧ನೇ ತಾರೀಖಿನ ಮುಂಚೆ, ಬದಲಾಯಿಸುವವನ ಸಂಗಡ ಮುಂಚೆಯೇ ಕೂಡಿಸಿರುವವೋ, ಅಥವಾ ಅವರಿಂದ ಮುಂಚೆಯೇ ವಾರತೆಗೆದುಕೊಳ್ಳಿಟ್ಟಿರುವವೋ ಅಂಥ ಎಲ್ಲ ಬಾಬತುಗಳಲ್ಲಿ ಯಾವದಾದರೂ ಪೋಸ್ಟ್ ಆಫೀಸ್ ಸೇವಿಂಗ್ ಬ್ಯಾಂಕಿನ ಆಫೀಸಿನಲ್ಲಿ,

(ಅ) ಆಗತ್ಯವಾಗಿ ಬದಲಾಯಿಸಬೇಕಾದ ವಾರಂಟುಗಳನ್ನು (ಬಳಿಕ ಆವ ಪೋಸ್ಟ್ ಆಫೀಸಿನ ಮುಖಾಂತರ ಸಿಕ್ಕಿರಲಿ ಅಥವಾ ಇಲ್ಲದಿರಲಿ) ಮತ್ತು ಬದಲಾಯಿಸುವ ಬಗ್ಗೆ ಮಾಡುವ ಅರ್ಜಿಯ ನಮೂನೆಯನ್ನು ಯೋಗ್ಯವಾಗಿ ತುಂಬಿಸಿ ಸಾದರ ಮಾಡಿದ ಬಳಿಕ; ಮತ್ತು

(ಬ) ಅಕೌಂಟಂಟ್ ಜನರಲ್, ಪೋಸ್ಟ್ಸ ಮತ್ತು ಟೆಲಿಗ್ರಾಫ್ಸ, ಇವನ ಹೆಸರಲ್ಲಿ ಮುಖಲಾಸಿ ಮಾಡಿದ ಸಿಕ್ಯುರಿಟಿಗಳನ್ನು (ಇದ್ದರೆ) ಸಾದರ ಮಾಡಿದ ಬಳಿಕ, ಪೋಸ್ಟ್ ಆಫೀಸಿನಿಂದ ಬದಲಾಯಿಸಲ್ಪಡುವವು.

ಅರ್ಜಿಯ ನಮೂನೆಗಳನ್ನು ಯಾವದಾದರೂ ಪೋಸ್ಟ್ ಆಫೀಸಿನಿಂದ ಪಡೆಯಬಹುದು.

ಪೋಸ್ಟ್ ಆಫೀಸಿನ ೫ ವರ್ಷದ ನಗದೀ ಸರ್ಟಿಫಿಕೇಟಗಳು.

೨೦. ಸಾಲ ತೆಗೆದ ೫ ವರ್ಷಗಳ ನಂತರ ಕೊಡಬೇಕಾದ ರೂ. ೧೦, ೫೦ ಮತ್ತು ೧೦೦ರ ಬಗ್ಗೆ ಸರ್ಟಿಫಿಕೇಟುಗಳು.

೨೦. ಸನ್ ೧೯೨೬ನೇ ಇಸವಿಯ ಎಪ್ರೀಲ್ ತಿಂಗಳ ೧ನೇ ತಾರೀದಿನ ಮತ್ತು ಅನಂತರ ಯಾವದಾದರೂ ವೇಳೆಯಲ್ಲಿ ಸೇವಿಂಗ್ಸ ಬ್ಯಾಂಕಿನ ಕೆಲಸ ಮಾಡುವ ಎಲ್ಲ ಪೋಸ್ಟ್ ಆಫೀಸುಗಳಲ್ಲಿ ಪೋಸ್ಟ್ ಆಫೀ ೫ ವರ್ಷದ ನಗದೀ ಸರ್ಟಿಫಿಕೇಟುಗಳನ್ನು ಪಡೆಯಬಹುದು.

೨೧. ಈ ಸರ್ಟಿಫಿಕೇಟುಗಳು ೪ ಹೆಸರಿನಿಂದ ಕರೆಯಲ್ಪಡುವವು:—

ರೂ. ೬—೧೨ಕೊಟ್ಟ ಬಳಿಕ ಸಿಗುವ ರೂ. ೧೦.
,, ೧೫—೪ ,, ,, ,, ,, ೨೦.
,, ೩೮—೧೪ ,, ,, ,, ,, ೫೦.
,, ೬೬—೪ ,, ,, ,, ,, ೧೦೦.

೨೨. ಸರ್ಟಿಫಿಕೇಟನಲ್ಲಿ ತೋರಿಸಿದ ಪೂರ್ಣ ರಕಮನ್ನು ಅದನ್ನು ತೆಗೆದ ೫ ವರ್ಷಗಳ ನಂತರ ಕೊಡಬೇಕಾಗುವದು. ಆದರೆ ಸದರಿ ೫ವರ್ಷಗಳ ಮುದತಿನೊಳಗೆ ಯಾವದಾದರೂ ವೇಳೆಯಲ್ಲಿ ಸದರಿ ಧಾರಣ ಮಾಡುವವನು, ಸಾಲದ ಸಂಬಂಧದ ಜಾಹೀರನಾಮೆಯಲ್ಲಿ ತರಾಯಿಸಿದ ದರಗಳಿಂದ ನೆಗದಾಗಿ ಹಣಕೊಡಲಿಕ್ಕೆ ಬಾಧ್ಯನಾಗುವನು.

೨೩. ಯಾವನಾದರೂ ಒಬ್ಬನೇ ಮನುಷ್ಯನು ಧಾರಣ ಮಾಡಬಹುದಾದ ಸರ್ಟಿಫಿಕೇಟುಗಳ ಪರಮಾವಧಿಯ ಜೆಲೆಯು ರೂ. ೬೫೦೦ ಕ್ಕಿಂತ ಹೆಚ್ಚಿರಬಾರದು: ಬಳಿಕ ಅವನು ಪೋಸ್ಟ್ ಆಫೀಸಿನ ಮುಖಾಂತರ ಪಡೆದ ಶೇಕಡಾ ೩ ರ ಬಡ್ಡಿಯುಳ್ಳ, ಶೇಕಡಾ ೩½ ಯ ಬಡ್ಡಿಯುಳ್ಳ, ಅಥವಾ ಶೇಕಡಾ ೪ ರ ಬಡ್ಡಿಯುಳ್ಳ ರೂಪಾಯಿಯ ಸಾಲಗಳು ಅಥವಾ ಯುದ್ಧದ ಸಂಬಂಧದ ಸಾಲ, ಸನ್ ೧೯೨೯-೧೯೪೭, ಇದು ಅಥವಾ ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೩೦ ಅಥವಾ ಯುದ್ಧದ ಸಂಬಂಧದ ಬಾಂಡುಗಳು, ಸನ್ ೧೯೩೭ ಇವು ಅವನಿಂದ ಧಾರಣ ಮಾಡಲ್ಪಟ್ಟರೆ ಚಿಂತೆಯಿಲ್ಲ.

೨೪. ಈ ಸರ್ಟಿಫಿಕೇಟುಗಳನ್ನು, ಅವನ್ನು ತೆಗೆದ ಪೋಸ್ಟ್ ಆಫೀಸು ಇರುವ ಸರ್ಕಲಿನ ಪೋಸ್ಟ್ ಮಾಸ್ತರ ಜನರಲ್ಲನ ಪರವಾನಗಿಯ ಹೊರತು, ಬೇರೆಯವರ ಹೆಸರಲ್ಲಿ ಮಾಡಿಕೊಡಬಾರದು.

೨೫. ಈ ಸರ್ಟಿಫಿಕೇಟುಗಳ ಬಗ್ಗೆ ಮಾಡಬೇಕಾದ ಅರ್ಜಿಗಳ ನಮೂನೆಗಳು ಯಾವದಾದರೂ ಪೋಸ್ ಆಫೀಸಿನಲ್ಲಿ ದೊರೆಯುವವು.

(True Translation)
M. K. Shaikh,
Oriental Translator to Government.

ವಿದ್ಯಾಖಾತೆಯ ನೋಟೀಸುಗಳು.

ನೇಹಬ್ಬಾನ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾ. ಬಹಾದ್ದೂರ ದಕ್ಷಿಣ ಭಾಗ ಇವರ ಇಂಗ್ರೇಜೀ ಪತ್ರ ನಂಬರ $\frac{೧೧೬}{೧೧-೪-೧೭}$ನೇ ಪ್ರಕಾರ ಪ್ರಸಿದ್ಧ ಪಡಿಸುವದೇನಂದರೆ: —

'ರಾವಸಾಹೇಬ ಯು. ರಾಮರಾವ ಹಾವರಡೇನ ಲ್ಯಾಂಡಸರ್ವಗೇಟ ಇ. ಸಿ. ಮದ್ರಾಸ' ಇವರು ಕನ್ನಡದಲ್ಲಿ ಬರೆದ 'ಫರ್ಸ್ಟ ಬಿಡ ಇನ್ ಎಕ್ಸಿ ಶೆಂಟ್ಸ' ಬೆಲೆ ೮ ಆಣೆ. ಈ ಪುಸ್ತಕವನ್ನು ಪ್ರಾಥಮಿಕಶಾಲೆ ಹಾಗು ಟ್ರೇನಿಂ ಗ ಕಾಲೇಜುಗಳ ಲಾಯಬ್ರರಿಗಳಿಗೂ ಇನಾಮಿಗೂ ಮಂಜೂರ ಮಾಡಿರು ತ್ತದೆ.

ಧಾರವಾಡ ಟ್ರೇ. ಕಾಲೇಜ
೩೫-೪-೧೭

R. S. Kulkarni,
Principal.

'ಜೀವಿದತ್ತಶರ್ಮಾ' ಕಿಂಡರಗಾರ್ಟನ ಕಾರ್ಯಾಲಯ ಭಾವಳಿ, ಜಿಲಾ ನೈನಿತಾಲ ಇವರ 'ಕಿಂಡರಗಾರ್ಟನ ಪೆಟ್ಟಿಗೆ ನಂಬರ ೯' ಬೆಲೆ ೯ ಆಣೆ. ಇದನ್ನು ಉರ್ದು ಶಾಲೆಗಳ ಉಪಯೋಗಕ್ಕಾಗಿ ಮಂಜೂರ ಮಾಡಿರುತ್ತದೆ.

Office of the Director of Public Instruction Poona, 12-4-17.

(*Sd.*) **K. G. Joshi.**
For Director of Public Instruction

ಜಾಹೀರಾತು ನಂಬರು ೧೬೭೧೪.

ಸನ್ ೧೯೧೭ನೆಯ ಇಸವಿಯ ಜಾನೇವಾರಿ ತಿಂಗಳ "ಇಂಡಿಯನ್ ಎಜ್ಯುಕೇಶನ್" ಎಂಬ ಮಾಸಿಕ ಪುಸ್ತಕದ ೩೮ನೆಯ ಪುಟದಲ್ಲಿ ಪ್ರಕಟ ಪಡಿಸಿದ ಈ ಆಫೀಸಿನ ನಂಬರ ೧೩೫೦೦ ತಾರೀಖು ೯-೧೨-೧೯೧೬ನೇ ಸಾಹಾರಾತಿಗೆ ಸಂಬಂಧಿಸಿ ಪ್ರಕಟಿಸಲ್ಪಡುವ ಈ ಜಾಹೀರಾತಿನ ಮೂಲಕ ತಿಳಿಸುವದೇನಂದರೆ ಮ್ಯಾಕ್‌ಮಿಲನ ಎಂಡ ಕಂಪನಿ, ಮುಂಬಯಿ ಇವರ ಅರಿಕೆಯ ಮೇರೆಗೆ ಸದ್ಯಕ್ಕೆ ಸಿಲಕು ಇದ್ದ ಅಥವಾ ಇನ್ನು ಮುಂದೆ ಪೂರೈ ಸಲ್ಪಡುವ ವಿದ್ಯಾಖಾತೆಯಿಂದ ಮಂಜೂರಾದ ಪರಿಂದ ಕೆಳಗಿನ ಅರಿ

ವೆಯ ರಟ್ಟಿನ ದೇಶ ಭಾಷೆಯ ಕ್ರಮಿಕ ಪುಸ್ತಕಗಳನ್ನು ಕಾಗದದ ರಟ್ಟಿ
ಪುಸ್ತಕಗಳ ಬಗ್ಗೆ ಈಗ ಮಂಜೂರು ಮಾಡಿದ ಬೆಲೆಗೆ ಈ ಕೆಳ
ಯಾದಿಯಲ್ಲಿ ತೋರಿಸಿದಂತೆ ಮಾರಬಹುದೆಂದು ಸರಕಾರದವ
ಮಂಜೂರು ಮಾಡಿರುತ್ತಾರೆ.

ಅರಿವೆಯ ರಟ್ಟಿನ ಪುಸ್ತಕಗಳು.	ಅರಿವೆಯ ರಟ್ಟಿನ ಪುಸ್ತಕಗಳ ಸದ್ಯದ ಬೆಲೆ.			ಅರಿವೆಯ ರಟ್ಟಿನ ಪುಸ್ತಗಳ ಬಗ್ಗೆ ಮುಂದೆ ಇಡಬೇಕಾದ ಬೆಲೆ.			ಶರಾ.
	ರು.	ಆ.	ಪೈ	ರು.	ಆ.	ಪೈ.	
೨ನೆಯ ಪುಸ್ತಕ ...	೦	೩	೦	೦	೩	೬	
೩ನೆಯ ಪುಸ್ತಕ ...	೦	೪	೦	೦	೫	೦	
೪ನೆಯ ಪುಸ್ತಕ ...	೦	೫	೦	೦	೬	೬	
೫ನೆಯ ಪುಸ್ತಕ ..	೦	೬	೦	೦	೭	೦	
೬ನೆಯ ಪುಸ್ತಕ ...	೦	೭	೦	೦	೮	೦	

ಬುಕ್ ಸೆಲರರಿಗೆ ಕೊಡತಕ್ಕ ಕಮಿಶನಿನ ದರವಾದರೂ ಕಾಗದದ
ರಟ್ಟಿನ ಪುಸ್ತಕಗಳಿಗೆ ಕಡಿಮೆ ಮಾಡಲ್ಪಟ್ಟಂತೆ ೧೦೦ಕ್ಕೆ ೫ರಂತೆ ಕಡಿಮೆ
ಮಾಡಲ್ಪಡುವದು.

ಡಿರೆಕ್ಟರ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಶನ
ಇವರ ಆಫೀಸು, ಪೂಣೆ.
ತಾ ೨೦-೩-೧೯೧೭ ಇ.

(*Sd*) A. L. Coverntor
Ag. Director of Publi
Instructio

ಬೆಲ್ಜಿಯನ್ ಅನಾಥ ಹುಡುಗರ ಬಗ್ಗೆ ವಸೂಲಾದ ಹಣವು.

(೩ನೇ ಪುರವಣಿ ಯಾದಿಯು.)

ವಿಜಾಪುರ ಜಿಲ್ಲೆ.

ಲೋಕಲ್‌ಬೋರ್ಡ:— ಸಿಂದಗಿ ಕನ್ನಡ ೧೦-೮-೦,
ಗಲಗ ೧-೧-೦, ಸಿಂದಗಿ ಫೇಡ ೧-೧-೦, ಸಿಂದಗಿ ಉರ್ದು ೧-೧-೦,

ತು ೧೩-೧೧-೦, ಮು. ಆ. ಕ. ಮುಂತಾದ್ದು ವಜಾ ೦-೬-೦, ನಿವಳ ೧೩-೫-೦. ರೂ.

ಎರಡನೇ ಪುರವಣಿಯಾದಿಯ ಪ್ರಕಾರ

ಈ ಜಿಲ್ಲೆಯ ಒಟ್ಟು.....೨೫೨೪-೧೦-೪

ಈ (ಮೂರನೇ ಪುರವಣಿ) ಯಾದಿಯಂತೆ ೧೩- ೫-೦

ಅಂತು — ೨೫೩೭-೧೫-೪

ಮ್ಯುನಸಿಪಾಲಿಟಿ:— ಬಾಗಲಕೋಟ — ಇಂಗ್ಲಿಷ, ಕನ್ನಡ, ಮರಾಠೀ, ಮತ್ತು ಉರ್ದು ಶಾಲೆಗಳಿಂದ ಕೂಡಿ ನಾಟಕದ ಬಗ್ಗೆ. (ಮು. ಆ. ಕ. ಕಳೆದು.) ರೂ..... ೧೯೯-೧೧-೩

ಗರ್ಲ್‌ಸ್ಕೂಲ.... ೧೧-೧೨-೯

ಧೇಡ ಸ್ಕೂಲ (ವರ್ಗಣೆ).... ೩-೧೧-೦

ಮರಾಠೀಶಾಲೆ (ಜೇರೆವರ್ಗಣೆ).... ೩-೧೧-೩

ಅಂತುರೂ. — ೨೧೪-೧೪-೩

ಇಲಕ್ಕಲ್ಲ:— ಯಾವತ್ತೂ ಶಾಲೆಗಳಿಂದಲೂ ಊರೊಳಗಿನ ಸಭ್ಯ ಗೃಹಸ್ಥರಿಂದಲೂ ಕೂಡಿ ಬಂದದ್ದು ರೂ ೬೧-೧೨-೬

ಮು. ಆ. ಕ. ಇತ್ಯಾದಿ ವಜಾ.... ೧-೧೨-೬

ಅಂತು. ರೂ. — ೬೦-೦-೦

ಬಿಜಾಪುರ:— ಮ್ಯುನಸಿಪಾಲಿಟಿ ಹದ್ದಿನೊಳಗಿನ ಯಾವತ್ತೂ ಶಾಲೆಗಳಿಂದಲೂ, ಹೈಸ್ಕೂಲಿನಿಂದಲೂ ಕೂಡಿ ಬಂದದ್ದು. (ನಾಟಕ ಮುಂತಾದ್ದರಬಗ್ಗೆ) ರೂ.—೪೦೦-೦-೦

ಗಳೇದಗುಡ್ಡ:— ನಾಟಕದ ಬಗ್ಗೆ ವಸೂಲಾದ ಹಣ.

ರೂ.....೭೫-೧-೦

ನಾಟಕದ ದಿವಸ ಕಟ್ಟಿಗೆಯ ಸಾವಾನುಗಳಬಗ್ಗೆ
ಯೂ ಮಿಠಾಯಿ. ಮು. ಆ. ಕ. ಮುಂತಾದ್ದರ
ಬಗ್ಗೆಯೂ ಕೂಡಿ ಖರ್ಚಾದದ್ದು. ೨೫-೧-೦

ಮು. ಆ. ದ್ವಾರ ಕಳೆಸಿದ ರೂ. — ೫೦-೦-೦

ಪುರವಣಿ.

——(:0:)——

೧. ಬಾಗೇವಾಡಿ ತಾಲೂಕ:— ಯರನಾಳ. ೨_೦_೦.
ಅಂತು, ೨_೦_೦

೨. ಬಿಜಾಪುರ ತಾಲೂಕ:— ಕಾಖಂಡಿಕಿ ೨_೧೫_೦,
ಅಂಕಲಗಿ ೦_೧೪,_೦ ಅಂತು ರೂ ೩_೧೩_೦

೩. ಇಂಡೀತಾಲೂಕ:— ಸಿರೇಬೇವನೂರ ೧_೦_೦, ರೇವತಗಾ
೧_೮_೦, ರೋಡಗಿ ೧_೦_೦, ಶಿರಶಾಡ ೨_೦_೦, ಭ.ಯಾ
೩_೦_೦, ಹತ್ತಳ್ಳಿ ೧ ೦_೦, ನಂದರಗಿ ೧_೦_೦ ಅಂತು
ರೂ. ೧೦_೮_೦.

೪. ಸಿಂದಗಿ ತಾಲೂಕ:— ಕೋರವಾರ ೧೦_೦_೦, ಯಂಕಂಚ
೨_೦_೦, ಕೊಕಟನೂರ ೧_೦_೦, ಶೈನೂರ ೧_೮_೦
ಗಣಿಹಾರ ೦_೩_೦ ಅಂತು ರೂ. ೧೪_೧೫_೦.

೫. ಗಾವಠೀಶಾಲೆ;— ಸಂಕನಾಳ (ಬಾಗೇವಾಡಿ) ೧_೧೫_೦.
ಅಂತು ರೂ. ೧_೧೫_೦
ಒಟ್ಟು ರೂಪಾಯಿ ೩೩_೩_೦

ಕರ್ನಾಟಕ ಶಿಕ್ಷಕ ಮಂಡಲ, ಧಾರವಾಡ.

ಮಂಡಲಕ್ಕೆ ಸಭಾಸದರಾಗಲು ಒಪ್ಪಿಕೊಂಡು ಬರೆದು ತಿಳಿಸಿ, ಹ
ವನ್ನು ಕಳಿಸಿದ ಶಿಕ್ಷಕ ಶಿಕ್ಷಕಿಯರಿಗೆ ಪ್ರತ್ಯೇಕವಾಗಿ ಬರೆಯುವದಾಗಿ
ಅವರೆಲ್ಲರ ಉದಕಾರವನ್ನು ಸ್ಮರಿಸುವೆನು. ಬರುವ ಸಂಮೇಲನದಲ್ಲಿ (ಜೂ
ತಿಂಗಳ ೧೫ನೇ ೨೫ನೇ ತಾರೀಖು) ಸ್ವಂತ ಬಂದಾಗ ಹಣಕೊಡಲಿಚ್ಛಿಸುವವ
ಸಭಾಸದರಾಗುವ ಬಗ್ಗೆ ಮೊದಲೇ ತಿಳಿಸುವರೆಂದು ಕೋರುತ್ತೇನೆ. ಮತ್
ಜೂನತಿಂಗಳ ೧೫ನೇ ೨೫ನೇ ತಾರೀಖಿನ ದಿವಸ ನೆರೆಯುವ ಸಮ್ಮೇಲನ
ಎಲ್ಲರೂ ಬರುವಿರೆಂದು ಪ್ರಾರ್ಥಿಸುತ್ತೇನೆ.

ಧಾರವಾಡ.
೪–೫–೧೬

V. N. Magda
ಕಾರ್ಯದರ್ಶಿ

ಸಿದ್ಧನಾಥ ವಾಚನ ಮಂದಿರ
ಮೋ. ಜಿ. ಧಾರವಾಡ.

ಶಾಲಾ ಪತ್ರಿಕೆ.

ಪುಸ್ತಕ ೫೩. | ಜೂನ ೧೯೧೭. | ಸಂಚಿಕೆ ೬.

ಸ್ಫುಟ ವಿಷಯಗಳು.

ಹೊಸ ಡಾಯರೆಕ್ಟರರು:—ನಾವುದಾರ ಶಾರ್ಪ್‌ಸಾಹೇಬರ ಮರಣದಿಂದ ತೆರವಾದ ಅವರ ಸ್ಥಳಕ್ಕೆ ಬ್ರಹ್ಮದೇಶದ ಡಾಯರೆಕ್ಟರರಾಗಿದ್ದ ಮೆ. ಜೀ. ಜೀ. ಕಾವ್ಸರಂಟನ್ ಸಾಹೇಬರು ನಮ್ಮ ಇಲಾಖೆಯ ವಿದ್ಯಾ ಖಾತೆಯ ಡಾಯರೆಕ್ಟರರಾಗಿ ಬಂದಿರುವರು. ಇವರು ಬ್ರಹ್ಮದೇಶದಲ್ಲಿ ಸುಮಾರು ೧೧ ವರ್ಷ ಡಾಯರೆಕ್ಟರರಾಗಿದ್ದು, ಅಲ್ಲಿ ಎಷ್ಟೋ ಸುಧಾರಣೆಗಳನ್ನು ಮಾಡಿ ಕೀರ್ತಿಯನ್ನು ಸಂಪಾದಿಸಿರುವರು. ಸಾಹೇಬ ಬಹಾದ್ದೂರವರು ನಮಗೆ ಅಪರಿಚಿತರಲ್ಲ. ಬ್ರಹ್ಮದೇಶಕ್ಕೆ ಹೋಗುವ ಮೊದಲು ನಮ್ಮ ಇಲಾಖೆಯಲ್ಲಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರ, ಅಸಿಸ್ಟಂಟ ಡಾಯರೆಕ್ಟರ, ಮುಂತಾದ ದೊಡ್ಡ ದೊಡ್ಡ ಅಧಿಕಾರದ ಮೇಲಿದ್ದರು. ಇವರು, ಉತ್ತರಭಾಗದ ಎ. ಇ. ರಾಗಿದ್ದಾಗ ದೇಶಭಾಷೆಯ ಕ್ರಮಿಕ ಪುಸ್ತಕಗಳನ್ನು ಸುಧಾರಿಸಿ ಬರೆಯುವ ಕೆಲಸಕ್ಕಾಗಿ ನಿಯಮಿಸಿದ ಕಮೀಟಿಯ ಅಧ್ಯಕ್ಷರಾಗಿದ್ದರು. ಆ ಕೆಲಸವನ್ನು ಒಳ್ಳೇ ದಕ್ಷತೆಯಿಂದಲೂ ಜಾಗ್ರತೆಯಿಂದಲೂ ನೆರವೇರಿಸಿ ಅದರಲ್ಲಿ ಒಳ್ಳೇ ಲೌಕಿಕವನ್ನು ಸಂಪಾದಿಸಿದರು. ವಸ್ತುಪಾಠಗಳನ್ನು ಕಲಿಸುವ ಸಂಬಂಧದಿಂದಲೂ, ಶಿಕ್ಷಣದ ಇತರ ವಿಷಯಗಳನ್ನು ಕಲಿಸುವ ಸಂಬಂಧದಿಂದಲೂ ಪ್ರಾಥಮಿಕ ಶಾಲಾಮಾಸ್ತರರಿಗೆ ಉಪಯುಕ್ತವಾದ "ಶಿಕ್ಷಕರಿಗೆ ಸೂಚನೆಗಳು" ಎಂಬ ಪುಸ್ತಕವನ್ನು ಇವರೇ ಬರೆದಿರುವರು. ಪ್ರಾಥಮಿಕ ಶಿಕ್ಷಣದ ಬಗ್ಗೆ ಇವರು ಒಳ್ಳೇ ಅನುಭವಿಕರಾದ್ದರಿಂದ ಇವರ ನೇಮಣೂಕದಿಂದ ನಮ್ಮ ಖಾತೆಯೊಳಗಿನ ಯಾವತ್ತೂ ಜನರಿಗೂ ಆನಂದವಾಗಿದೆ. ಇವರ ಹೊಸ ಆಳಿಕೆಯು ಯಶಸ್ವಿಯಾಗಿ ಶಾಲಾಖಾತೆಯಲ್ಲಿ ಅನೇಕ ಸುಧಾರಣೆಗಳುಂಟಾಗಿ ಉತ್ತರೋತ್ತರ ಅಭಿವೃದ್ಧಿಯಾಗಲೆಂದು ಹಾರೈಸುವೆವು.

ಕರ್ನಾಟಕ ಶಿಕ್ಷಕ ಮಂಡಲ:–ತನ್ನ ನೆರೆಯ ಪ್ರಾಂತಗಳಿಗಿಂ
ಎಲ್ಲರೀತಿಯಿಂದಲೂ ಹಿಂದೆ ಬಿದ್ದ ಕರ್ನಾಟಕವನ್ನು ಮುಂದೆ ತರು
ಬಗ್ಗೆ ಕರ್ನಾಟಕದೊಳಗಿನ ತರುಣ ಉತ್ಸಾಹೀ ಜನರು ಹಗಲಿರುಳ
ಪ್ರಯತ್ನಮಾಡುತ್ತಿರುವರೆಂಬದು ಅತಿ ಆನಂದದ ಸಂಗತಿಯು. ಕರ್ನಾ
ಟಕ ವಿದ್ಯಾವರ್ಧಕ ಸಂಘವು ಮಾಸಪತ್ರಿಕೆಯ ದ್ವಾರದಿಂದಲೂ, ಉ
ನ್ಯಾಸ, ಗ್ರಂಥಪ್ರಸಾರಗಳ ದ್ವಾರದಿಂದಲೂ ಕರ್ನಾಟಕದ ಜನರ
ಎಂದಿನಂತೆ ವಿದ್ಯಾವೃತವನ್ನು ಸಾನಮಾಡಿಸುತ್ತಿರುವದು. ಬೆಂಗಳೂ
ನ ಸಾಹಿತ್ಯ ಪರಿಷತ್ತು ಕರ್ನಾಟಕ ಭಾಷಾಸಾಹಿತ್ಯದ ಸಮಾಚಾರ
ನ್ನು ಒಳ್ಳೇರೀತಿಯಿಂದ ನೋಡಿಕೊಳ್ಳುತ್ತಿರುವದು. ಮುಂಬಯಿಯಲ್ಲಿಯ
ಕರ್ನಾಟಕ ಸಭೆಯು ಶಿಕ್ಷಣದ ಕೇಂದ್ರಸ್ಥಾನದಲ್ಲಿದ್ದು, ಕನ್ನಡಿಗರ
ಐಕ್ಯವನ್ನುಂಟುಮಾಡಲಿಕ್ಕೆ ಹೆಣಗುತ್ತಿರುವದು. ಧಾರವಾಡದಲ್ಲಿಯ
ಕರ್ನಾಟಕ ಇತಿಹಾಸ ಮಂಡಲವು, ತಾಮ್ರಪಟ, ತಾಡವಾಲೆ, ಹಾಳ
ದೇಗುಲಗಳಲ್ಲಿ ದೊರೆಯುವ ಶಿಲಾಲೇಖ ಮುಂತಾದವುಗಳ ಆಧಾರದಿಂ
ನಮ್ಮ ಪ್ರಾಂತದ ಪುರಾತನದ ಇತಿಹಾಸವನ್ನು ಕಂಡು ಹಿಡಿಯಲಿ
ಎಡೆಬಿಡದೆ ಯತ್ನಿಸುತ್ತಿರುವದು. ಇದರ ಉತ್ಪಾದಕರಾದ ಶ್ರೀಯು
ಆಲೂರರವರು ಈ ವಿಷಯದಲ್ಲಿ ಬಹ್ವಂಕಣರಾಗಿದ್ದು ಅವರ ಪರಿ
ಮದಿಂದ ಈಗ ಎಷ್ಟೋ ಸಂಗತಿಗಳು ಪ್ರಸಿದ್ಧವಾಗಿವೆ. ಈ ಬ
ಅವರು ಪ್ರಕಟಿಸಿದ ಮಂಡಲದ ಪ್ರಥಮ ವಾರ್ಷಿಕ ರಿಪೋರ್ಟನ
ವಾಚಕರು ಓದಬಹುದೆಂದು ನಾವು ಸೂಚಿಸುತ್ತೇವೆ.

ಈ ಪ್ರಕಾರ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಅನೇ
ರೀತಿಯಿಂದ ಸುಧಾರಣೆಯು ನಡೆದಿರಲು, ಶಿಕ್ಷಣವಿಷಯಕವಾದ ಸ್ವತ
ತ್ರ ಸಂಸ್ಥೆಯು ಒಂದೂ ಇದ್ದಿಲ್ಲ ಇದನ್ನು ಕಂಡು ಶಿಕ್ಷಣದ ವಿಷಯ
ಲ್ಲಿ ಪ್ರಾಥಮಿಕ ಶಿಕ್ಷಕರಿಗೆ ಒದಗಬಹುದಾದ ತೊಂದರೆಗಳಾವ
ಅವುಗಳನ್ನು ನೀಗುವ ಬಗೆ ಹ್ಯಾಗೆ? ಇವೇ ಮುಂತಾದ ಸಂಗತಿಗ
ಬಗ್ಗೆ ವಿಚಾರ ಮಾಡುವ ಕುರಿತು, ಪ್ರಾಥಮಿಕ ಶಾಲಾಧ್ಯಾಪಕರ
ಒಂದುಗೂಡಿ "ಕರ್ನಾಟಕ ಶಿಕ್ಷಕ ಮಂಡಲ" ಎಂಬ ಹೆಸರಿನದೊಂ
ಸ್ವತಂತ್ರ ಸಂಸ್ಥೆಯನ್ನು ಸ್ಥಾಪಿಸಿರುವರಷ್ಟೇ; ಅದರ ಪ್ರಥಮ ವಾರ್ಷಿ
ಸಮ್ಮೇಲನವು ಇದೇತಿಂಗಳ ೧೯೫ ೨೦೫ ತಾರೀಖಿನ ದಿವಸ ಬೀ. ಕ

ದ ಮುಂದಿರದಲ್ಲಿ ಒಳ್ಳೇ ವಿಜೃಂಭಣೆಯಿಂದ ನೆರವೇರಿತು. ಅದರಲ್ಲಿ ಎಷ್ಟೋ ಶಿಕ್ಷಕರು ಪಾಠಗಳನ್ನು ಕಲಿಸಿ ತೋರಿಸಿದರು. ಎಷ್ಟೋ ಶಿಕ್ಷಕರು ತಮ್ಮ ಮೇಲಧಿಕಾರಿಗಳ ಮುಂದೆ ಹೇಳಲಿಕ್ಕಾಗಿಸಂಘ ಅಡಚಣೆಗಳನ್ನು ಸಭೆಯ ಮುಂದೆ ಇಟ್ಟರು. ದೂರ ದೂರದಿಂದ ಬಂದ ಶಿಕ್ಷಕರ ಆನಂದ ಮುದ್ರೆಯಿಂದ ಅವರಲ್ಲಿರುವ ವಿಷಯ ಪ್ರಿಯತೆಯೂ, ಕೇಳಿದ ಅಡಚಣೆಗಳಿಗೆ ತತ್ಕಾಲಕ್ಕೆ ಉಪಾಯಗಳನ್ನು ಸೂಚಿಸಲಿಕ್ಕೆ ಉತ್ತುರರಾದ ಮುಂಡಲದ ಚಾಲಕರಲ್ಲಿರುವ ಹುರುಪೂ ವ್ಯಕ್ತವಾಗಿ ತಲೆದೋರುತ್ತಿದ್ದವು. ಇಂಥ ಸಂಸ್ಥೆಗಳು ನಮ್ಮ ಪ್ರಾಂತದಲ್ಲಿ ಈಗ ಅವಶ್ಯವಾಗಿ ಬೇಕಾಗಿರುವವು. ಈ ಮುಂಡಲವು ಕೈಕೊಂಡ ಕಾರ್ಯವು ಸ್ತುತ್ಯವಾದದ್ದಿದ್ದು, ಅದರಲ್ಲಿ ಅದಕ್ಕೆ ಸಂಪೂರ್ಣವಾಗಿ ಯಶವು ಬರಲೆಂದು ಆಶಿಸುವೆವು.

ವಾರಲೋನಡೇ—ಮೆ. ಡಾಯರೆಕ್ಟರ ಸಾ. ಬಹದ್ದೂರವರ ಹುಕುಮಿನ ಮೇರೆಗೆ ಇದೇ ತಿಂಗಳ ೧೪ನೇ ತಾರೀಖಿನ ದಿವಸ ಟ್ರೇ. ಕಾಲೇಜದಲ್ಲಿ ವಾರಲೋನದ ನಿಮಿತ್ತ ಮನೋರಂಜಕವಾದ ಆಟನೋಟಗಳಾದವು. ಟ್ರೇ. ಕಾಲೇಜ ಹಾಗು ಪ್ರ್ಯಾಕ್ಟಿಸಿಂಗಸ್ಕೂಲಿನ ವಿದ್ಯಾರ್ಥಿಗಳಿಂದಲೂ, ಯಾವತ್ತು ಶಿಕ್ಷಕರಿಂದಲೂ ಕೂಡಿ ಸುಮಾರು ೬೫ ರೂಪಾಯಿ ವಸೂಲಾಗಿದ್ದು ಪೋಸ್ಟಿನ ಸರ್ಟಿಫಿಕೇಟುಗಳನ್ನು ತೆಗೆದು ಕೊಂಡಿರುತ್ತದೆ.

ಶಾಲೆಯೊಳಗಿನ ಶಿಸ್ತು.

ಉತ್ತಮಶಿಸ್ತು ಇದು ಯಾವತ್ತೂ ಶಿಕ್ಷಣದ ಮೂಲವು. ಶಿಸ್ತು ಇಲ್ಲದಿರುವ ಶಾಲೆಯು ಶಿಕ್ಷಣಸಂಸ್ಥೆಯೇ ಅಲ್ಲ. ಶಿಸ್ತು ಇರುವ ಶಾಲೆಯೊಳಗಿನ ಹುಡುಗರು ಅಲ್ಲಿಯ ನಿಯಮಗಳನ್ನು ಆನಂದದಿಂದ ಪಾಲಿಸು

ವರು. ತಮ್ಮ ಕೆಲಸವನ್ನು ವ್ಯವಸ್ಥಿತರೀತಿಯಿಂದಲೂ ನಿಯಮಿತ
ದಿಂದಲೂ ಮಾಡುವರು. ಯಾವಾಗಲೂ ಉದ್ಯೋಗವಾಡುವದರಿಂ
ಟೀ ಇವರಿಗೆ ಆನಂದವಾಗುತ್ತದೆ. ಸುಮ್ಮನೆ ಕೂಡ್ರುವದು ಇ
ಗೆ ತ್ರಾಸವೆನಿಸುತ್ತದೆ. ಸುಳ್ಳುಹೇಳುವದೆಂದರೆ ಇವರ ಜೀವದ ಸುತ್ತ
ಬರುತ್ತದೆ. ಒಂದು ವೇಳೆ ತಪ್ಪು ಆದರೆ ಸಂತೋಷದಿಂದ ಒಪ್ಪಿಕ
ಳ್ಳುವರು.

ಶಿಸ್ತು ಇಲ್ಲದ ಶಾಲೆಯಲ್ಲಿ ಕೇವಲ ಇದರ ವಿಪರೀತಸ್ಥಿತಿಯ
ಕಂಡುಬರುವದು. ಇಂಥಲ್ಲಿಯ ವಿದ್ಯಾರ್ಥಿಗಳು ವೇಳೆಗೆ ಸರಿಯಾ
ಬಂದು ತಮ್ಮ ಕೆಲಸಗಳನ್ನು ವ್ಯವಸ್ಥಿತರೀತಿಯಿಂದ ಮಾಡುವದಿ
ಕ್ಲಾಸ ನಡೆದಿರುವಾಗ ಸಹ ಎಷ್ಟೋ ಹುಡುಗರು ಬೇರೆ ಕಡೆಗೆ ಲಕ್ಷಕ
ಡುತ್ತಿರುತ್ತಾರೆ. ಕೆಲವರು ತಮ್ಮ ತಮ್ಮೊಳಗೆ ಚೇಷ್ಟೆಮಾಡುತ್ತಿರುತ
ರೆ. ಶಿಕ್ಷಕನು ಏನಾದರೊಂದು ಪ್ರಶ್ನವನ್ನು ಕೇಳಿದರೆ, ಕೇಳಿದವ
ನ್ನು ಬಿಟ್ಟು ಯಾವನೊಬ್ಬನು ಇಲ್ಲವೆ ಒಮ್ಮೆಲೆ ಅನೇಕ ಜನರು ಉತ್ತ
ವನ್ನು ಕೊಡುವ ವಹಿವಾಟವು ಇಂಥ ಶಾಲೆಯಲ್ಲಿ ಇರುತ್ತದೆ. ಇಂ
ಶಾಲೆಗಳೊಳಗಿನ ವಿದ್ಯಾರ್ಥಿಗಳಲ್ಲಿ ವಿನಯ, ಆಜ್ಞಾಪಾಲನ, ಸ್ವಾ
ಮಾನ ಮುಂತಾದ ಗುಣಗಳು ಇಲ್ಲದಂತಾಗುತ್ತವೆ.

ನಿಜವಾಗಿ ನೋಡಿದರೆ ಹುಡುಗರಿಗೆ ಶಿಸ್ತು ಸೇರುವದಿಲ್ಲಿಂತ
ವಿದ್ಯಾರ್ಥಿಗಳಿಗೆ ಚಟವು ಬೀಳುವ ವರೆಗೆ ನಿಯಮದಿಂದ ನಡೆಯುವದ
ಸ್ವಲ್ಪ ಕಠಿಣವೆನಿಸುತ್ತದೆ ಶಾಲೆಯಲ್ಲಿ ಕಳೆಯುವ ವಿದ್ಯಾರ್ಥಿಯ
ಪ್ರತಿದಿವಸದ ೫-೬ ತಾಸು ಬಹಳೇ ಮಹತ್ವದ್ದಿರುತ್ತದೆ. ಈ ವೇ
ಯಲ್ಲಿ ದೊರೆಯುವ ಶಿಕ್ಷಣದ ಮೇಲೆಯೇ ಅವರ ಸುಖ ದುಃಖಗಳ
ಅವಲಂಬಿಸಿರುತ್ತವೆ. ಶಾಲೆಯಲ್ಲಿ ಶಿಸ್ತು ಇಲ್ಲದಿದ್ದರೆ ಈ ವೇಳೆಯ
ಶಿಕ್ಷಕನಿಗೂ ವಿದ್ಯಾರ್ಥಿಗಳಿಗೂ ತ್ರಾಸದಾಯಕವೆನಿಸುತ್ತದೆ. ಆದ
ರಿಂದ ಶಿಸ್ತು ಕಾಯ್ದುಕೊಳ್ಳುವದರ ಕಡೆಗೆ ನಮ್ಮ ಶಿಕ್ಷಕ ವರ್ಗದ
ಮೊದಲು ಲಕ್ಷಕೊಟ್ಟೇತೆಂದು ನಾವು ಆಶಿಸುತ್ತೇವೆ.

ಶಾಸ್ತ್ರೀಯ ಪ್ರಯೋಗಗಳು.

ಪ್ರಾಥಮಿಕ ಶಾಲಾಧ್ಯಾಪಕರು ಸಾಮಾನ್ಯವಾಗಿ ಕಂಡು ಕೇಳಿ ವ ಪ್ರಯೋಗಗಳನ್ನು ಇಲ್ಲಿ ಹೇಳುವದು ನಮ್ಮ ಉದ್ದೇಶವಿರುವದಿ ಮನೋರಂಜಕವಾಗಿಯೂ ಉಪಯುಕ್ತವಾಗಿಯೂ ಇರುವ ಕೆಲವು ೂಸ ಪ್ರಯೋಗಗಳನ್ನು ಮಾತ್ರ ಇಲ್ಲಿ ಕೊಡುವೆವು. ಯಾವದೊಂದು ಪಯವನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವು ಯಾರಲ್ಲಿ ಉಂ ತ್ತದೆಯೋ ಆವರಿಗೆ ಆವಿಷಯವು ಅರ್ಥ ಸಾಧಿಸಿತೆನ್ನಲಿಕ್ಕೆ ಅಡ್ಡಿಯಿ ಅದರಂತೆ ನಾವು ಹೇಳತಕ್ಕ ಪ್ರಯೋಗಗಳಿಂದಲೂ ಇತರ ಕೆಲವು ೂಚನೆಗಳಿಂದಲೂ ಶಾಸ್ತ್ರೀಯ ವಿಷಯದ ಪ್ರೀತಿಯು ಕೆಂಚಿತ್ತಾದ ೂ ಹೆಚ್ಚಾದರೆ ನಮ್ಮ ಕಾರ್ಯವು ಸಫಲವಾಯಿತೆಂದು ನಾವು ತಿಳಿ ುವೆವು.

ಟ್ರೇನಿಂಗ ಕಾಲೇಜದಂಥ ದೊಡ್ಡ ಸಂಸ್ಥೆಯಲ್ಲಿ ದೊರೆಯ ಬಹು ಾದ ಸಾಮಾನುಗಳು ಪ್ರಾಥಮಿಕ ಶಾಲೆಗಳಲ್ಲಿ ದೊರೆಯಲಾರವು. ಆದ ೂ ಎಪ್ಪೋ ಸಾಮಾನುಗಳನ್ನು ಸ್ವಲ್ಪ ಬೆಲೆಯೊಳಗೆ ತಯಾರಿಸಿಕೊಳ್ಳ ಹುದು. ಸಾಮಾನುಗಳು ಸಾದಾತರದವಿದ್ದರೆ ಒಳ್ಳೇದು. ಉದಾ: ಂಟಾಕೃತಿಯ ಪಾತ್ರೆಯು ಬೇಕಾಗಿದ್ದರೆ ಒಂದು ಬಾಟ್ಲಿಯ ಬುಡವ ತೆಗೆದು ಅದರ ಬಾಯಿಗೆ ಒಂದು ಬೆಣೆಯನ್ನು ಕೂಡ್ರಿಸಿದರೆ ಉತ್ತಮ ರದ ಘಂಟಾಕೃತಿಯ ಪಾತ್ರೆಯು ತಯಾರಾಗುತ್ತದೆ. ಈ ರೀತಿಯಿಂದ ಯಾರಿಸಿದ ಪಾತ್ರೆಯು ದೊಡ್ಡ ಕಂಪನಿಗಳಲ್ಲಿ ಮೂರು ನಾಲ್ಕು ರೂಪಾ ು ಬೆಲೆ ಬೀಳುವ ಪಾತ್ರೆಯಷ್ಟೇ ಉಪಯುಕ್ತವುಳ್ಳದ್ದಾಗುತ್ತದೆ. ಮೇಲಾಗಿ ಆಂಥ ಪಾತ್ರೆಯಿಂದ ಮಾಡಿದ ಪ್ರಯೋಗದಲ್ಲಿ ಏನೊಂದು

"ಜಾದು" ಇಲ್ಲವೆಂದು ಹುಡುಗರು ತಿಳಿದು ಶಾಸ್ತ್ರೀಯ ತತ್ವವನ್ನು ಹೆಚ್ಚ
ದೃಢವಾಗಿ ತಿಳಿದು ಕೊಳ್ಳುತ್ತಾರೆ.

ಆಕೃತಿಗಳನ್ನು ತೆಗೆದು ತೋರಿಸುವ ಅನುಕೂಲತೆಗಳಿಲ್ಲದ್ದರಿಂ
ಅವುಗಳನ್ನು ಇಲ್ಲಿ ಕೊಟ್ಟಿರುವದಿಲ್ಲ.

ಪ್ರಯೋಗ ೧.

(ಅ) ಕಾರ್ಬಾನಿಕ್ ಆಸಿಡ್‌ಗ್ಯಾಸವು ಹವೆಗಿಂತಲೂ ಜ
ವಾದದ್ದು:—ಈ ವಾಯುವನ್ನು ಒಂದು ಅಗಲವಾದ ಬ
ಯುಳ್ಳ ಪಾತ್ರೆಯಲ್ಲಿ ತುಂಬಿ (ಘಂಟಾಕೃತಿಯ ಪಾತ್ರೆಯನ್ನ
ತಕ್ಕೊಳ್ಳಬಹುದು) ಅದರಲ್ಲಿ ಒಂದು ಸಬಕಾರದ ನೀ
ನಿಂದ ಮಾಡಿದ ಗುಳ್ಳೆಯನ್ನು ಚಲ್ಲಿದರೆ ಅದು ಜಡವಾ
ವಾಯುವಿನ ಮೇಲೆ ತೇಲಾಡುವದು. ಈ ಕಾರ್ಬಾನಿಕ್
ಆಸಿಡ್‌ಗ್ಯಾಸದಲ್ಲಿ ಹೈಡ್ರೋಕ್ಲೋರಿಕ್ ಆಸಿಡದ ಅಥವ
ಸಲ್ಫ್ಯೂರಿಕ್ ಆಸಿಡದ ಕಣಗಳಿದ್ದರೆ ಸಬಕಾರದ ಗುಳ್ಳೆಯ
ಕೂಡಲೆ ಒಡೆದು ಹೋಗುತ್ತದಾದ್ದರಿಂದ ಆ ವಾಯುವನ್ನ
ತುಂಬುವ ಮೊದಲು ಅದನ್ನು ನೀರಿನೊಳಗಿಂದ ಹಾಯಿಸತಕ್
ದ್ದು.

(ಬ) ನಲಿಕಾಯಂತ್ರದಸಹಾಯದಿಂದ (ಸ್ಪೈಫನ್‌ದಸಹಾಯದಿಂದ
ನೀರನ್ನು ಎಳೆದುಕೊಳ್ಳಲಿಕ್ಕೆ ಬರುವಂತೆ ಕಾರ್ಬಾನಿಕ್ ಆ
ಡಗ್ಯಾಸವನ್ನಾದರೂ ಎಳೆದುಕೊಳ್ಳಬಹುದು. ನಲಿಕಾಯಂತ್ರ
ದ ಒಂದು ತುದಿಯನ್ನು ಈ ವಾಯುವನ್ನು ತುಂಬಿದ ಪಾತ್ರೆ
ಯಲ್ಲಿ ಹಾಕಿ ಇನ್ನೊಂದು ತುದಿಗೆ ಬಾಯಿಹಚ್ಚಿ ಸ್ವಲ್ಪ ಹೀ
ಯನ್ನು ಸೇದಿಕೊಂಡರೆ ಜಡವಾದ ಕಾರ್ಬಾನಿಕ್ ಆಸಿಡ್
ಗ್ಯಾಸವು ಒಂದೇ ಸವನೆ ಹರಿಯುವದು. ಈ ಹರಿಯುವ
ವಾಯುವನ್ನು ಸುಣ್ಣದ ನೀರಿನ ಸಹಾಯದಿಂದ ಪರೀಕ್ಷಿಸ
ಬಹುದು.

ಪ್ರಯೋಗ ೨.

(ಅ) **ಹೈಡ್ರೋಜನವು ಹವೆಗಿಂತಲೂ ಹಗುರಾದದ್ದು:—** ಮೇಲೆ ಹೇಳಿದ ನಲಿಕಾ ಯಂತ್ರದ ಸಹಾಯದಿಂದ ತೋರಿಸಬಹುದು.

(ಬ) ಸಬಕಾರದ ನೀರಿನ ಗುಳ್ಳೆಗಳನ್ನು ಈ ವಾಯುವಿನಿಂದ ತುಂಬಿದರೆ ಒಳ್ಳೇ ಜೋರಿನಿಂದ ಮೇಲಕ್ಕೆ ಹೋಗುತ್ತವೆ. ಈ ವಾಯುವು ಬಹಳ ಹಗುರಿರುವದರಿಂದ ಗುಳ್ಳೆಗಳು ದೊಡ್ಡವಾಗುವಷ್ಟರಲ್ಲಿಯೇ ಮೇಲಕ್ಕೆ ಎಳೆಯುವ ಶಕ್ತಿಯು ಹೆಚ್ಚಾಗಿ ಅವು ನಲಿಕೆಯಿಂದ ಹರಿದುಕೊಂಡು ಹೋಗುತ್ತವೆ. ಗುಳ್ಳೆಗಳು ದೊಡ್ಡವಾಗಬೇಕಾದರೆ ಮೊದಲು ಅದರಲ್ಲಿ ನಮ್ಮ ಉಚ್ಛ್ವಾಸದ ಹವೆಯನ್ನು ಸ್ವಲ್ಪ ತುಂಬಿ ನಂತರ ಹೈಡ್ರೋಜನವನ್ನು ತುಂಬಿದರೆ ಗುಳ್ಳೆಗಳು ಸಾಕಷ್ಟು ದೊಡ್ಡವಾಗಿ ಸಾವಕಾಶವಾಗಿ ಗಾಂಭೀರ್ಯದಿಂದ ಮೇಲಕ್ಕೆ ಹೋಗುತ್ತವೆ. ದೊಡ್ಡವಾದ ಮತ್ತು ಬಹಳ ಹೊತ್ತು ಬಾಳುವ ಗುಳ್ಳೆಗಳು ಎಲ್ಲಾ ತರದ ಸಬಕಾರದ ನೀರಿನಿಂದ ತಯಾರಾಗುವದಿಲ್ಲ. ಕೆಳಗೆ ಹೇಳಿದ ಕೃತಿಯಿಂದ ಉತ್ತಮ ತರದ ಸಬಕಾರದ ನೀರು ತಯಾರಾಗುತ್ತದೆ.

೧ ತೊಲಿ ಸೋಡಿಯಮ್ ಓಲಿಯೇಟ್ ಎಂಬ ಪದಾರ್ಥವನ್ನು ೪೦ ತೊಲಿ ನೀರಿನಲ್ಲಿ ಹಾಕಿ ಒಂದೆರಡು ದಿನ ಹಾಗೆಯೇ ಇಡತಕ್ಕದ್ದು. ಅಂದರೆ ಆ ಪದಾರ್ಥವು ನೀರಿನಲ್ಲಿ ವಿಲೀನವಾದ ಮೇಲೆ ಆ ಮಿಶ್ರಣಕ್ಕೆ ೧೦ ತೊಲಿ ಗ್ಲೀಸರೀನ್ ಎಂಬ ಪದಾರ್ಥವನ್ನು ಬೆರೆಸಿ ಚನ್ನಾಗಿ ಅಗಲಾಡಿಸಿ ಇನ್ನೆರಡು ದಿವಸಗಳ ತನಕ ಕತ್ತಲೆಯೊಳಗೆ ಇಡತಕ್ಕದ್ದು. ನಂತರ ಮೇಲೆ ನಿಂತಿರುವ ತಿಳಿ ನೀರನ್ನು ಬೇರೊಂದು ಪಾತ್ರೆಯೊಳಗೆ ತಕ್ಕೊಂಡು ಅದಕ್ಕೆ ಒಂದು ಹನಿ ಎಮೋನಿಯಾ ಸೊಲ್ಯೂಶನ್‌ವನ್ನು ಹಾಕಿ ಸ್ವಲ್ಪ ಅಗಲಾಡಿಸತಕ್ಕದ್ದು. ಇದನ್ನು ಕಾಜಿ

ನ ಬೆಣ್ಣೆಯುಳ್ಳ ಪಾತ್ರೆಯಲ್ಲಿ ಹಾಕಿ ಕತ್ತಲೆಯೊಳಗೆ ಇಟ್ಟರೆ ವರ್ಷಾವಧಿ ಬಾಳಬಹುದು.

ಪ್ರಯೋಗ ೩.

ಹೈಡ್ರೋಜನದ ಮುಖ್ಯವಾದ ಮೂರು ಗುಣಧರ್ಮಗಳನ್ನು ಈ ಕೆಳಗಿನ ಒಂದೇ ಪ್ರಯೋಗದಿಂದ ತೋರಿಸಬಹುದು. ಒಂದು ತಳವನ್ನು ತೆಗೆದ ಬಾಟ್ಲಿಯ ಸಣ್ಣಬಾಯಿಗೆ ಒಂದು ಸಣ್ಣ ಅರಸಿನಾರಾದ ಕೊಳವೆಯನ್ನು ಹಚ್ಚಿದ ಬೆಣೆಯನ್ನು ಕೂಡ್ರಿಸಿ ರಬ್ಬರದ ಕೊಳವೆಯ ಸಹಾಯದಿಂದ ಹೈಡ್ರೋಜನವು ಹೊರಡುವ ಪಾತ್ರೆಗೆ ಸಂಬಂಧ ಪಡಿಸಿ ಕೆಲವು ಹೊತ್ತಿನ ವರೆಗೆ ಮೇಜಿನ ಮೇಲೆ ಇಡತಕ್ಕದ್ದು. ಹೈಡ್ರೋಜನವು ಮೇಲ್ಭಾಗದಲ್ಲಿ ಒಟ್ಟಾಗುತ್ತ ಬಂದಂತೆ ಅದರೊಳಗಿನ ಹವೆಯು ಬುಡಭಾಗದಿಂದ ಹೊರಟು ಹೊರಗೆ ಹೋಗುತ್ತದೆ. ಹೈಡ್ರೋಜನವು ಬುಡಭಾಗದಿಂದ ಹೊರಡಲಿಕ್ಕೆ ಪ್ರಾರಂಭವಾದ ಕೂಡಲೆ ರಬ್ಬರದ ಕೊಳವೆಯನ್ನು ತೆಗೆದು ಘಂಟಾಕೃತಿಯ ಪಾತ್ರೆಯನ್ನು ಎತ್ತಿಹಿಡಿದು ಸಣ್ಣಬಾಯಿಗೆ ಉರಿ ಹಚ್ಚಿದರೆ ಹೈಡ್ರೋಜನವು ಶಾಂತರೀತಿಯಿಂದ ಉರಿಯುತ್ತದೆ. ಹೈಡ್ರೋಜನವು ಮೇಲಕ್ಕೆ ಹೋದಂತೆ ಹವೆಯು ಅದರ ಸ್ಥಳವನ್ನು ಬುಡದಲ್ಲಿ ಆಕ್ರಮಿಸಿ ಹೈಡ್ರೋಜನದ ಸಂಗಡ ಬೆರೆತು ಹಾರುವಂಥ ಮಿಶ್ರಣವನ್ನುಂಟು ಮಾಡುತ್ತದೆ. ಸ್ವಲ್ಪ ಹೊತ್ತಿನಲ್ಲಿಯೇ ಹೈಡ್ರೋಜನದ ಉರಿಯು ಪಾತ್ರೆಯ ಒಳಗೆ ಸೇರಿ ಆ ಮಿಶ್ರಣಕ್ಕೆ ಉರಿಹಚ್ಚಿ " ಡಭ್" ಎಂಬ ದೊಡ್ಡಸಪ್ಪಳವನ್ನುಂಟು ಮಾಡುತ್ತದೆ. ಈ ಪ್ರಯೋಗದಿಂದ ಹೈಡ್ರೋಜನವು ಹವೆಗಿಂತ ಹಗುರಾದದ್ದೆಂತಲೂ ಉರಿಯುವಂಥ ವಾಯುವೆಂತಲೂ ಹವೆಯೊಡನೆ ಬೆರೆತರೆ ಹಾರುವ ಮಿಶ್ರಣವನ್ನುಂಟು ಮಾಡುತ್ತದೆಂತಲೂ ತಿಳಿಯುತ್ತದೆ.

(ಮುಂದೆ ಸಾಗುವದು.)

R. K. Naik,

ಕರ್ನಾಟಕ ಶಿಕ್ಷಕ ಮಂಡಲ.

ಸಮ್ಮೇಲನವರ್ಣನೆ.

(ಬರೆದು ಬಂದದ್ದು)

ಮೊದಲೇ ನೊತ್ತಾದ ಮೇರೆಗೆ ಕರ್ನಾಟಕ ಶಿಕ್ಷಕ ಮಂಡಲದ ಪರಿಷತ್ತು ತಾರೀಖು ೧೯ನೆಯ ಜೂನ ಸನ್ ೧೯೧೨ನೇ ಇಸವಿಯ ದಿವಸ ಧಾರವಾಡ ಟ್ರೇನಿಂಗ ಕಾಲೇಜಿನ ಮಂದಿರದಲ್ಲಿ ಕೂಡಿತ್ತು. ರಾವಬಹಾದ್ದೂರ ರೊದ್ದರಾಯರು ಕಾರ್ಯದರ್ಶಿಗಳ ವಿನಂತಿಗೆ ಮಾನಕೊಟ್ಟು, ಅಧ್ಯಕ್ಷಸ್ಥಾನವನ್ನು ಅಲಂಕರಿಸಿದ್ದರು. ಈ ಜಿಲ್ಹೆಯ ಕಲೆಕ್ಟರರಾದ ಮಿ. ಇ. ಜಿ ಟರ್ನರ ಸಾಹೇಬ ಬಹಾದ್ದೂರವರು ದೊರೆಸಾನಿಯವರೊಡನೆ ಸಭೆಗೆ ದಯಮಾಡಿಸಿದ್ದರು. ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರಾದ ಮಿ. ರಾಲಿನ್‌ಸನ್ ಸಾ. ರವರೂ ಅವರ ಲೇಡಿಯವರೂ ಸಾಂಗಲೀ ಸಂಸ್ಥಾನದ ಅ. ಡೆ ಎ. ಇ. ರಾದ ಮಿ. ಜೀ. ವ್ಹಿ. ಕುಲಕರ್ಣಿಯವರೂ ಸಭೆಗೆ ಆಗಮಿಸಿದ್ದು ವಿಶೇಷ ಆನಂದದ ಸಂಗತಿಯಾಗಿದೆ. ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಮಿ. ಹುನಗುಂದಸಾಹೇಬರೂ ಟ್ರೇನಿಂಗ ಕಾಲೇಜಿನ ಪ್ರಿನ್ಸಿಪಾಲರಾದ ರಾವಸಾ॥ ಕುಲಕರ್ಣಿರಾಯರೂ ಹೆ. ಟ್ರೇನಿಂಗಕಾಲೇಜಿನ ಲೇಡೀ ಸು. ರಾದ ಮಿಸ್ ಮೆಕಾಫಿಯವರೂ, ಧಾರವಾಡ ಹೈಸ್ಕೂಲಿನ ಹೆಡ್ ಮಾಸ್ತರರಾದ ಮಿ. ಚಂದಾವರಕರರವರೂ, ಧಾರವಾಡ ಜಿಲ್ಹೆಯ ಡೆ. ಎ. ಇ ರಾದ ಪೆರೂರರಾಯರೂ ಸಭೆಗೆ ದಯಮಾಡಿಸಿದ್ದರು. ಇದಲ್ಲದೆ ಟ್ರೇನಿಂಗಕಾಲೇಜ ಹಾಗು ಹೈಸ್ಕೂಲುಗಳ ಬಹುತರ ಎಲ್ಲ ಶಿಕ್ಷಕರೂ, ಧಾರವಾಡದೊಳಗಿನ ಯಾವತ್ತು ಶಿಕ್ಷಕ ಶಿಕ್ಷಿಕೆಯರೂ, ಧಾರವಾಡ ಜಿಲ್ಹೆಯಿಂದ (೧೨೦) ಜನ ಶಿಕ್ಷಕರೂ ಬೆಳಗಾವ ಜಿಲ್ಹೆಯಿಂದ(೨೫)ಜನ ಶಿಕ್ಷಕರೂ ವಿಜಾಪುರ ಜಿಲ್ಹೆಯಿಂದ (೧೫)ಜನ ಶಿಕ್ಷಕರೂ ಸಭೆಗೆ ಹಾಜರ ಇದ್ದರು. ಸುಮಾರು ೩೫ ಜನ ಶಿಕ್ಷಿಕೆಯರು ಹೊರಗಿನಿಂದ ಸಭೆಗೆ ಬಂದಿದ್ದರು. ಸಮ್ಮೇಲನದಲ್ಲಿ ಒಟ್ಟಿಗೆ ಸುಮಾರು ನಾನೂರು ಜನರಿದ್ದರು.

ರಾವಬಹಾದ್ದೂರ ರೊದ್ದರವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಅಂದದ್ದೇನಂದರೆ: —"ಯಾವತ್ತೂ ಉದ್ಯೋಗಗಳಲ್ಲಿ ಶಿಕ್ಷಣ ವ್ಯವಸಾಯವೇ ಮಿಗಿಲಾದದ್ದು. ಭಾವೀರಾಷ್ಟ್ರವಾಗತಕ್ಕ ಚಿಕ್ಕ ಮಕ್ಕಳನ್ನು ಯೋಗ್ಯವಾದ ನಾಗರಿಕರನ್ನಾಗಿ ಮಾಡುವದು ಶಿಕ್ಷಕವರ್ಗದ ಕರ್ತವ್ಯವಾಗಿದೆ.

ಅದುದರಿಂದ ಯಾವ ಪದ್ಧತಿಯಿಂದ ಬಾಲಕರ ಶಿಕ್ಷಣವು ಸುಸೂತ್ರವಾಗಿ ಸಾಗಿ, ಅವರು ಬುದ್ಧಿವಂತರೂ, ಸುದೃಢರೂ, ಸುಶೀಲರೂ ಆಗಬಹುದೆಂಬದನ್ನು ನಿರ್ಣಯಿಸುವದು ಇಷ್ಟವೂ ಅವಶ್ಯಕವೂ ಆದ ಮಾತು. ಈ ಮಂಡಲದಲ್ಲಿ ಅನುಭವಿಕರಾದ ಅನೇಕ ಶಿಕ್ಷಕ ಶಿಕ್ಷಕಿಯರು ಒಂದೇ ಕಡೆಯಲ್ಲಿ ನೆರೆದು ಬೇರೆ ಬೇರೆ ವಿಷಯಗಳನ್ನು ಕಲಿಸಿ ತೋರಿಸುವದರಿಂದ ಆಯಾವಿಷಯದ ಶಿಕ್ಷಣಪದ್ಧತಿಯಲ್ಲಿ ಕಂಡುಬರುವ ಗುಣಗಳನ್ನು ಇತರರು ಅನುಕರಣ ಮಾಡಲು ಅನುಕೂಲವಾಗುವದು. ಈ ಪ್ರಕಾರದ ಸಮ್ಮೇಲನಗಳು ಬೇರೆ ಬೇರೆ ಜಿಲ್ಲೆಗಳಲ್ಲಿ ನಡೆಯುತ್ತಿರುವವು. ಆದರೆ ಅಲ್ಲಿ ಅಧ್ಯಕ್ಷರಾಗಿರುವ ಒಬ್ಬ ಡಿ. ಎ. ಇನಸ್ಪೆಕ್ಟರರು ಹಾಗು ಆ ಊರ ಸುತ್ತುಮುತ್ತಲಿನ ಕೆಲಜನ ಶಿಕ್ಷಕರು ಇಷ್ಟೇ ಜನರಿರುವರ; ಇಲ್ಲಿ ಬೇರೆ ಬೇರೆ ಅಧಿಕಾರಸ್ಥರೂ, ಅನುಭವಿಕರಾದ ವಿದ್ವಾಂಸರೂ, ಎಲ್ಲ ಜಿಲ್ಲೆಗಳ ಶಿಕ್ಷಕ ಶಿಕ್ಷಕಿಯರೂ ಒಂದೇ ಕಡೆಯಲ್ಲಿ ಸೇರುವದರಿಂದ ಬೇರೆ ಬೇರೆ ಜಿಲ್ಲೆಗಳಲ್ಲಿ ನೆರೆಯುತ್ತಿರುವ ಸಮ್ಮೇಲನಗಳಿಗಿಂತಲೂ ಇದು ಹೆಚ್ಚು ಮಹತ್ವದ್ದೆಂಬದರಲ್ಲಿ ಏನೂ ಸಂದೇಹವಿಲ್ಲ. ಇಂತಹ ಸಮ್ಮೇಲನಗಳು ಹೆಚ್ಚಾಗಿ ಕೂಡುತ್ತಿದ್ದಷ್ಟು ದೇಶಕ್ಕೆ ಕಲ್ಯಾಣವೇ ಆಗುವದು. ಈ ಪರಿಷತ್ತಿಗೆ ಈಗ ೩೩೧ ಜನರು ಸಭಾಸದರಾಗಿರುವದನ್ನು ನೋಡಿದರೆ ಶಿಕ್ಷಣವಿಷಯದಲ್ಲಿ ನವ್ಯ ಶಿಕ್ಷಕವರ್ಗವು ಎಷ್ಟು ಅಭಿಮಾನವುಳ್ಳದ್ದಾಗಿದೆ ಎಂಬದು ಸ್ಪಷ್ಟವಾಗುತ್ತದೆ. ಅದರಲ್ಲಿ ಸ್ತ್ರೀಸಭಾಸದರು ೮೦ ಜನರಿರುವರೆಂಬದಂತೂ ಮತ್ತೂ ಹೆಚ್ಚು ಆನಂದದ ಸಂಗತಿಯಾಗಿದೆ."

ಈ ಪ್ರಕಾರ ಅಧ್ಯಕ್ಷರವರು ಶಿಕ್ಷಣವ್ಯವಸಾಯದ ಮಹತ್ವವನ್ನೂ ಮಂಡಲದ ಉದ್ದೇಶಗಳನ್ನೂ ವಿಶದ ಪಡಿಸಿ, ಮುಂದೆ ನಡೆಯಬೇಕಾದ ವಿಷಯವನ್ನು ಸೂಚಿಸಿ ಕುಳಿತುಕೊಂಡರು.

ಅನಂತರ ಹಸ್ತ ಪತ್ರಿಕೆಯಲ್ಲಿ ಪ್ರಸಿದ್ಧವಾದ ಮೇರೆಗೆ ಆಯಾ ಶಿಕ್ಷಕರು ತಮ್ಮ ತಮ್ಮ ಪಾಠಗಳನ್ನು ಕಲಿಸಿ ತೋರಿಸಿದರು.

ಮಿ. ತಿಪ್ಪಣ್ಣಾಸ್ತ್ರಿ ನರಗುಂದಕರ ಇವರು ಎಳನೆಯ ಇಯತ್ತೆಗೆ ವಾಚನ ಪಾಠವನ್ನು ಕಲಿಸಿದರು. ಅದರಲ್ಲಿ ಅವರು ರಾಜನು ಮತ್ತು ಪ್ರಜೆಗಳು, ಅವರಲ್ಲಿರುವ ಸಂಬಂಧ, ಇವುಗಳನ್ನು ವ್ಯಕ್ತಪಡಿಸಿ, ಹೊಟ್ಟೆ ಮತ್ತು ಇತರ ಅವಯವಗಳ ದೃಷ್ಟಾಂತದಿಂದ ಆ ಸಂಬಂಧದ ಮಹತ್ವವ

ನ್ನೂ, ಆ ಸಂಬಂಧವು ತಪ್ಪಿದರೆ ಉಂಟಾಗುವ ಅನರ್ಥವನ್ನೂ ಹುಡುಗರ ಮನಸ್ಸಿನಲ್ಲಿ ಬಿಂಬಿಸಿದರು; ಮತ್ತು ಪಾಠವು ಮುಗಿದ ನಂತರ, ನಮ್ಮ ಸರ ಕಾರಕ್ಕೆ ಪ್ರಾಪ್ತವಾದ ಸ್ಥಿತಿಯನ್ನೂ ಅದಕ್ಕೋಸುಗ ನಾವು ಮಾಡಬೇಕಾ ದ ಕರ್ತವ್ಯವನ್ನೂ ವಿಶದ ಪಡಿಸಿದರು. ಈ ಸಂಬಂಧವಾಗಿ ಬಾಲಕರ ಮನಸ್ಸಿನಲ್ಲಿಯೂ ಊರೊಳಗಿನ ಜನರ ಮನಸ್ಸಿನಲ್ಲಿಯೂ ಉಪದೇಶರೂ ಪದಿಂದ ರಾಜನಿಷ್ಠೆಯ ಬೀಜವನ್ನು ಬಿತ್ತುವದಕ್ಕೆ ಶಿಕ್ಷಕರಿಗೆ ಎಷ್ಟು ಸಾಧ್ಯ ವಿರುತ್ತದೆಂಬದನ್ನು ತಿಳಿಯ ಪಡಿಸಿ, ಯಾವತ್ತು ಶಿಕ್ಷಕರು ಈ ಕಾರ್ಯ ವನ್ನು ಅವಶ್ಯವಾಗಿ ಮಾಡುವರೆಂಬ ಇಚ್ಛೆಯನ್ನು ಪ್ರದರ್ಶಿಸಿ ಕುಳಿತು ಕೊಂಡರು.

ಆ ಮೇಲೆ ಟ್ರೇನಿಂಗ ಕಾಲೇಜಿನ ಪ್ರಕೃತಿ ವಿಮರ್ಶಾವಿಷಯದ ಅಧ್ಯಾಪಕರಾದ ಮಿ. ರಾಮಬ್ರಹ್ಮ ಬಿ. ಏ. ಎಲ್. ಟಿ ಯವರು ೩ನೆಯ ಇ ಯತ್ತಿಯ ವರ್ಗಕ್ಕೆ "ಎಲೆಗಳು" ಎಂಬ ಪ್ರಕೃತಿ ಪಾಠವನ್ನು ಕಲಿಸಿದರು. ಅನಂತರ ಮಿಸ್ತ್ರೆಸ್ ಜಮಖಂಡಿ ಇವರು ಚಿಕ್ಕ ಮಕ್ಕಳ ವರ್ಗಕ್ಕೆ ಕಿಂಡ ರಗಾರ್ಟನ್ ವಿಷಯವನ್ನು ಕಲಿಸಿದರು. ಅದರಲ್ಲಿ ಅವರು ಒಳ್ಳೇ ವ್ಯವಸ್ಥೆ ತ ರೀತಿಯಿಂದ ಹುಡುಗರ ಕೈಯಿಂದ ಹೂವಿನ ಬುಟ್ಟಿಯನ್ನು ಮಾಡಿಸಿ ದರು.

ಅಧ್ಯಕ್ಷರವರ ವಿನಂತಿಗೆ ಮಾನಕೊಟ್ಟು ಆಗ ಮಿ. ಟರ್ನರಸಾಹೇ ಬರವರು ಸಮಯೋಚಿತವಾದ ಒಂದು ಸಣ್ಣ ಭಾಷಣವನ್ನು ಮಾಡಿದರು. ಅವರು ಅಂದದ್ದೇನಂದರೆ:—

"ಇಷ್ಟುಜನ ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರು ಒತ್ತಟ್ಟಿಗೆ ಸೇರಿ ತಮ್ಮ ವ್ಯವಸಾಯದ ಬಗ್ಗೆ ವಿಚಾರ ಮಾಡುತ್ತಿರುವದನ್ನು ನೋಡಿ ನನಗೆ ಬಹಳೇ ಸಂತೋಷವಾಗಿದೆ. ದೂರ ದೂರದ ಹಳ್ಳಿಗಳಲ್ಲಿ ಕೆಲಸ ಮಾಡು ತ್ತಿರುವ ಶಿಕ್ಷಕ ಶಿಕ್ಷಕಿಯರಿಗೆ ಇಂಥ ಸಮ್ಮೇಲನಗಳಿಂದ ಒಳ್ಳೇ ಲಾಭ ವಾಗುತ್ತದೆಂಬದರಲ್ಲಿ ಸಂದೇಹವಿಲ್ಲ. ಶಿಕ್ಷಣದ ಕಾರ್ಯದಲ್ಲಿಯೇ ವೃದ್ಧರಾ ದ ರಾವಬ. ರೊದ್ದರಂಥ ಸನ್ಮಾನ್ಯ ಮತ್ತು ಸದ್ಗೃಹಸ್ಥರ ಮಾರ್ಗದರ್ಶಿತ್ವ ದಿಂದ ಕೆಲಸವನ್ನು ನಡಿಸಿರುವ ಈ ಮಂಡಲದ ಉದ್ದೇಶಗಳು ಸುಮಾ ರ್ಗದಲ್ಲಿ ನಡೆದು ನಿಮ್ಮೆಲ್ಲರ ಶ್ರಮಕ್ಕೆ ತೀವ್ರವೇ ಪ್ರತಿಫಲವು ದೊರೆಯುವ ದೆಂದು ನನಗೆ ಭರವಸೆಯಿದೆ. ನೀವು ಕೈಕೊಂಡ ಕಾರ್ಯದಲ್ಲಿ ನಿಮಗೆ ಯಶಸ್ಸುಂಟಾಗಲೆಂದು ನಾನು ಕೋರುತ್ತೇನೆ."

ನಾಲ್ಕನೆಯ ಪಾಠವು ೫ನೆಯ ಇಯತ್ತೆಯ ವರ್ಗಕ್ಕೆ ಬಂಗಾಲ ಹಾಗು ಸಂಯುಕ್ತ ಪ್ರಾಂತಗಳ ಭೂಗೋಲವನ್ನು ಕಲಿಸುವದಾಗಿತ್ತು. ಇದನ್ನು ಮಿ. ಮುಂಟಗಣಿಕರ ಇವರು ಕಲಿಸಿದರು. ೫ನೆಯ ಹಾಗು ೬ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಒಂದು ದಿವಸದ ಕಡೆಯ ಪಾಠವನ್ನು ಮಿ. ಕದಡಿ ಇವರು ಕಲಿಸಿದರು. ಇವರ ಪಾಠವು ಚಿಕ್ಕ ಮಕ್ಕಳಿಗೆ ಪ್ರಾಮಾಣಿಕತನದ ನೀತಿಪಾಠವನ್ನು ಕೊಡುವದಾಗಿತ್ತು. ಇವರು ಕಥೆಯನ್ನು ಹೇಳುವಾಗ ಶ್ರೋತೃಜನರೆಲ್ಲರು ಆನಂದಭರಿತರಾಗಿದ್ದರು. ಇವರು ಕಲಿಸಿದ ಪಾಠವು ಹುಡುಗರ ಮನಸಿನ ಮೇಲೆ ಒಳ್ಳೇ ಪರಿಣಾಮವನ್ನುಂಟು ಮಾಡಿತು. ಅಷ್ಟು ಮನೋರಂಜಕವಾಗಿಯೂ ಹಾವಭಾವಯುಕ್ತವಾಗಿಯೂ ಕಥೆಯನ್ನು ಹೇಳಿದರು. ಪಾಠವು ಮುಗಿದ ನಂತರ ಮಿ. ಕದಡಿಯವರು ಈ ತರದ ಪಾಠಗಳನ್ನು ಬಾಲಕರಿಗೆ ಕಲಿಸುವ ರೀತಿಯನ್ನೂ ಅವುಗಳ ಮಹತ್ವವನ್ನೂ ಸ್ವಲ್ಪದರಲ್ಲಿ ಹೇಳಿದರು.

ಮರುದಿವಸ ಮಿಸ್ ಲೀನ್ಸ್ ಇವರು ಬಾಲಕರ ವರ್ಗಕ್ಕೆ ಅರಮನೆಯನ್ನು ಕಲಿಸಿದರು. ಪಾಠದ ಆರಂಭದಲ್ಲಿಯೇ ಹುಡುಗರ ಲಕ್ಷ್ಯವನ್ನು ವಿಷಯದ ಕಡೆಗೆ ಎಳೆದುಕೊಂಡು ಬೇರೆ ಬೇರೆ ದೃಷ್ಟಾಂತಗಳಿಂದ ಪಾಠವನ್ನು ದೃಢಪಡಿಸಿದರು, ಹಾಗು ಅನೇಕ ಚಿಕ್ಕ ಉದಾಹರಣೆಗಳನ್ನು ಹುಡುಗರಿಂದ ಮಾಡಿಸಿದರು. ಆ ಮೇಲೆ ಮಿ. ಮುದಕವಿ ಇವರು ೭ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ "ಎಸೆವ ವಸಂತ ಮಾಸದೆ" ಈ ಪದ್ಯವನ್ನು ಕಲಿಸಿದರು. ಅನಂತರ ಮಿ. ಜಾತಿಗೇರ ಇವರು ಅಚ್ಚುಕಟ್ಟುತನದ ಬಗ್ಗೆ ನೀತಿಪಾಠವನ್ನು ಕಲಿಸಿದರು. ಅದರಲ್ಲಿ ಅವರು ಒಂದು ಕಥೆಯನ್ನು ಹೇಳುತ್ತ ವಿದ್ಯಾರ್ಥಿಗಳಲ್ಲಿ ಅಚ್ಚುಕಟ್ಟುತನವನ್ನು ನೆಲೆಗೊಳಿಸಿದರು.

ಸ್ವಲ್ಪವೇಳೆ ವಿಶ್ರಾಂತಿಯಾದ ನಂತರ ಮಿ. ಅವಿನಭಾವಿ ಇವರು ೭ನೆಯ ಇಯತ್ತೆಯ ವರ್ಗಕ್ಕೆ "ದಯಾ" ಎಂಬ ನೀತಿಪಾಠವನ್ನು ಕಲಿಸಿದರು. ಅವರು ಮೊದಲು ವ್ಯವಹಾರದ ಒಂದು ದೃಷ್ಟಾಂತದಿಂದ ದಯೆಯ ಕಲ್ಪನೆಯನ್ನು ವಿದ್ಯಾರ್ಥಿಗಳಿಗೆ ಮಾಡಿಕೊಟ್ಟು, ದಯಾಮಯ ಜೀವನದಿಂದಾಗುವ ಪರಿಣಾಮವನ್ನು ವಿವರಿಸಿ, ವಿಚಾರವಿಲ್ಲದೆ ಮಾಡುವ ದಯಾಕೃತ್ಯಗಳಿಂದಾಗುವ ಅನರ್ಥಗಳನ್ನೂ ವಿಚಾರಪೂರ್ವಕವಾದ ದಯೆಯಿಂದಾಗುವ ಸುಪರಿಣಾಮವನ್ನೂ ದೃಷ್ಟಾಂತದಿಂದ ಸ್ಪಷ್ಟೀಕರಿಸಿದರು. ಅವೇ

ಲೆ ವಿ. ತಾಳೀಕೋಟೆ ಇವರು ನಾಲ್ಕನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ "ತಾಳೀಕೋಟೆಯ ಕಾಳಗ" ಎಂಬ ಇತಿಹಾಸ ಪಾಠವನ್ನು ಕಲಿಸಿದರು. ಪೂರ್ವೇತಿಹಾಸವನ್ನು ಚನ್ನಾಗಿ ಸ್ಪಷ್ಟೀಕರಿಸಿ, ತಾವು ಸಿದ್ಧಪಡಿಸಿ ತಂದಂಥ ಮಾಡೆಲ್ಲಿನ ಸಾಹಾಯ್ಯದಿಂದ ಕಾಳಗದ ಸಂಗತಿಯನ್ನು ವಿದ್ಯಾರ್ಥಿಗಳಿಗೆ ಬಿಂಬಿಸುವಂತೆ ವಿಶದವಾಗಿ ಹೇಳಿದರು. ಬಳಿಕ ವಿ. ಕೊರಬು ಇವರು ತ್ರಿಕೋಣಗಳ ಕ್ಷೇತ್ರಫಲವನ್ನು ಹೇಗೆ ತೆಗೆಯಬೇಕೆಂಬದನ್ನು ಅತಿ ಸುಲಭವಾಗಿಯೂ ಸ್ಪಷ್ಟವಾಗಿಯೂ ನಿಯಮಿತವೇಳೆಯಲ್ಲಿ ಚನ್ನಾಗಿ ತಿಳಿಸಿದರು.

ಈ ಪ್ರಕಾರ ಪಾಠಗಳೆಲ್ಲವೂ ಮುಗಿದನಂತರ ವಿ. ಮುದವೇಡಕರ ಇವರು ಸ್ವಯಂಸ್ಫೂರ್ತಿಯಿಂದ ಸುಶ್ರಾವ್ಯವಾದ ಭಾಷಣವನ್ನು ಮಾಡಿದರು. ಅವರ ಸಾರಾಂಶವೇನೆಂದರೆ:—"ಈಗೆರಡು ದಿವಸ ಇಲ್ಲಿ ಕೂಡಿದ ಈ ಪ್ರಚಂಡ ವಿದ್ವಜ್ಜನರ ಸಮೂಹವನ್ನು ನೋಡಿ ನನಗೆ ಅತ್ಯಾನಂದವಾಗಿದೆ. ಬಾಲಕರ ಶಿಕ್ಷಣದ ಬಗ್ಗೆ ವಿಚಾರಮಾಡುವದು ಪಾಲಕರ ಕರ್ತವ್ಯವು. ನಾನು ಕಲಿಯುವಾಗಿನ ಶಿಕ್ಷಣಪದ್ಧತಿಗೂ, ಈಗಿನ ಪದ್ಧತಿಗೂ ಭೂಮ್ಯಾಕಾಶಗಳಷ್ಟು ಅಂತರವಿದೆ. ಈಗಿನ ಪದ್ಧತಿಯಿಂದ ಬಾಲಕರಿಗೆ ಸ್ವಲ್ಪವೂ ಶ್ರಮವಿಲ್ಲದೆ ಶಿಕ್ಷಣವು ದೊರೆಯುತ್ತದೆ ನಮ್ಮ ಬಾಲಕರ ಸುಧಾರಣೆಯ ವಿಷಯದಲ್ಲಿ ಬದ್ಧಕಂಕಣರಾದ (ಪಾಲಕರ ಕರ್ತವ್ಯವನ್ನು ಸಹವಹಿಸಿದಂಥ) ತಮ್ಮನ್ನು ನೋಡಿ ನನ್ನ ಅಂತಃಕರಣವು ಉಕ್ಕೇರುತ್ತದೆ. ಈ ಪ್ರಕಾರದ ಪೂಜ್ಯವ್ರತವನ್ನು ಧಾರಣಮಾಡಿದ ತಮ್ಮೆಲ್ಲರಿಗೆ ಸಹಾಯಕವಾದ ಈ ಮಂಡಲದ ಉದ್ದೇಶಗಳು ಸ್ತುತ್ಯವಾಗಿವೆ." ಇತ್ಯಾದಿ.

ಕಡೆಗೆ ಅಧ್ಯಕ್ಷರವರು ಸಮಾರೋಪದ ಭಾಷಣದಲ್ಲಿ ಹೇಳಿದ್ದೇನಂದರೆ:— ಕಾರ್ಯಕ್ರಮದಂತೆ ಯಾವತ್ತು ವಿಷಯಗಳು ಮುಗಿದವು. ಇನ್ನು ಇವುಗಳ ಸಂಬಂಧದಿಂದ ವ್ಯಕ್ತಿವಿಷಯಕ ಟೀಕೆಯನ್ನು ಮಾಡುವದು ನನ್ನ ಉದ್ದೇಶವಿಲ್ಲ. ಇದುವರೆಗೆ ನಡೆದ ಪಾಠಗಳಲ್ಲಿ ಶಿಕ್ಷಕೆಯರ ವಿಷಯವಾಗಿ ಹೇಳತಕ್ಕ ಆನಂದದ ಸಂಗತಿಯೇನೆಂದರೆ, ಇವರು ತಮ್ಮ ವಿಷಯದ ಮರ್ಯಾದೆಯನ್ನು ಕಡೆಗೂ ಮೀರಲಿಲ್ಲ. ಪುರುಷ ಶಿಕ್ಷಕರೆಲ್ಲರೂ ಈ ದೋಷಕ್ಕೆ ಪಾತ್ರರಿಲ್ಲವಿದ್ದರೂ ಬಹಳ ಜನರು ಕೆಲಕೆಲವು ಪ್ರಸಂಗಗಳಲ್ಲಿ ತಮ್ಮ ವಿಷಯದ ಮರ್ಯಾದೆಯನ್ನು ಮೀರಿದ್ದು ಕಂಡು ಬಂತು.

ಈಗೆರಡು ದಿವಸಗಳಿಂದ ತಾವೆಲ್ಲರೂ ಶ್ರಮವನ್ನು ಸಹಿಸಿ, ಶಾಂತರೀತಿಯಿಂದ ನೋಡಿಕೊಂಡು, ಸಮಾಧಾನಕರವಾಗಿ ಕಾರ್ಯಕ್ರಮವನ್ನು ಪೂರ್ಣವಾಡಿದ್ದನ್ನು ಕಂಡು ಬಹಳೇ ಆನಂದವಾಗುತ್ತದೆ. ನಮ್ಮ ಸರಕಾರದವರು ಈಗ ಬಹಳೇ ಕಠಿಣ ಪ್ರಸಂಗದಲ್ಲಿರುವರು. ಇಂತಹ ಸಮಯದಲ್ಲಿಯೂ ಶಿಕ್ಷಣಾಭಿವೃದ್ಧಿಗೋಸ್ಕರ ಹಣವನ್ನು ವೆಚ್ಚ ಮಾಡುತ್ತಲೇ ಇರುವರು. ಇಂತಹ ದಯಾಳು ಸರಕಾರದವರಿಗೆ ತ್ರಿಕರಣಪೂರ್ವಕವಾಗಿ ಸಹಾಯ ಮಾಡುವದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ಪ್ರಸಂಗದಲ್ಲಿ ಸರಕಾರದವರಿಗೆ ಜನಸಹಾಯವೂ ಧನಸಹಾಯವೂ ಅವಶ್ಯವಾಗಿ ಬೇಕಾಗಿರುವವು. ಆದ್ದರಿಂದ ನಾವೆಲ್ಲರೂ ನಮ್ಮ ಕೈಲಾದ ಮಟ್ಟಿಗೆ ಧನಸಹಾಯವನ್ನು ಮಾಡತಕ್ಕದ್ದಾಗಿದೆ. ಇನ್ನು ನಮ್ಮ ಸರಕಾರದವರ ಅಳಿಕೆಯು ನಮ್ಮ ಮೇಲೆ ಚಿರಕಾಲವಿರುವ ಬಗ್ಗೆಯೂ ಸದ್ಯದ ಯುದ್ಧದಲ್ಲಿ ನಮ್ಮ ಸಾರ್ವಭೌಮರಸರಿಗೆ ವಿಜಯ ಪ್ರಾಪ್ತಿಯಾಗುವಬಗ್ಗೆಯೂ ನಮ್ಮ ಬಾದಶಹರವರ ಹೆಸರಿನಿಂದ ತ್ರಿವಾರ ಜಯಘೋಷವನ್ನು ಮಾಡಿರಿ.

ಆನಂತರ ಎಲ್ಲರೂ ಕೂಡಿ "ಹಿಪ್ ಹಿಪ್ ಹ್ಯುರೊ" ಎಂದು ಮಾಡಿದ ಜಯಘೋಷದಿಂದ ಸಭಾ ಮಂದಿರವೆಲ್ಲ ಪ್ರತಿಧ್ವನಿತವಾಯಿತು.

ಬಳಿಕ ಮಂಡಲದ ಕಾರ್ಯದರ್ಶಿಗಳಾದ ವಿ. ಮುಗದಾಲರವರು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದಕ್ಕಾಗಿ ರಾವಬ. ರೊದ್ದರವರಿಗೂ, ಯಾವತ್ತು ಶಿಕ್ಷಕ ಜನರಿಗೆ ೩ ದಿವಸಗಳ ರಜೆಯನ್ನು ದಯಪಾಲಿಸಿದ್ದಕ್ಕಾಗಿ ಮೆ. ಎ. ಇ. ಸಾಹೇಬ ಬಹದ್ದೂರವರಿಗೂ, ಧಾರವಾಡ ಹುಬ್ಬಳ್ಳಿಯ ಸ್ಕೂಲ ಬೋರ್ಡ ಚೇರಮನ್ನರು ಸಭೆಗೆ ಆಗಮಿಸಿದ್ದಕ್ಕಾಗಿ ಅವರಿಗೂ, ಇತರ ಮಹನೀಯರಿಗೂ, ವಿಷಯಗಳನ್ನು ಕಲಿಸಿದ ಶಿಕ್ಷಕರಿಗೂ, ಶ್ರಮ ಸಹಿಸಿ ಇಲ್ಲಿಯವರೆಗೂ ಬಂದ ಶಿಕ್ಷಕ ಶಿಕ್ಷಿಕೆಯರಿಗೂ ಅಭಾರ ಪೂರ್ವಕವಾದ ಕೃತಜ್ಞತೆಗಳನ್ನು ಸಮರ್ಪಿಸಿದರು. ಬಳಿಕ ಅಧ್ಯಕ್ಷರನ್ನೂ ಸಭೆಗೆ ಬಂದಿದ್ದ ಇತರ ಸದ್ಗೃಹಸ್ಥರನ್ನೂ ಹಾರ, ತುರಾಯಿ, ತಾಂಬೂಲ ಮುಂತಾದವುಗಳಿಂದ ಸತ್ಕರಿಸಿದ್ದಾಯಿತು. ಕೊನೆಗೆ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದ ವಿದ್ಯಾರ್ಥಿನಿಯರು ರಾಷ್ಟ್ರಗೀತವನ್ನು ಆಂದಬಳಿಕ ಸಭೆಯು ವಿಸರ್ಜನೆಯಾಯಿತು.

ಕರ್ನಾಟಕ ಶಿಕ್ಷಕ ಮಂಡಲ.

ವಾರ್ಷಿಕ ಸಭೆ, ೧೯೧೭.

—(:(:)—

ಜೂನ ತಿಂಗಳ ೩ ನೆಯ ತಾರೀಖಿನ ಬವಸ ಟ್ರೇನಿಂಗ ಕಾಲೇಜದಲ್ಲಿ ಮಂಡಲದ ಮೊದಲನೆಯ ವಾರ್ಷಿಕ ಸಭೆಯು ಕೂಡಿತ್ತು. ಕಾರ್ಯದರ್ಶಿಗಳಾದ ವಿ. ಮೊಗದಾಲರವರು, ಕಳೆದ ಎರಡು ತಿಂಗಳಲ್ಲಿ ಮಂಡಲವು ಮಾಡಿದ ಕಾರ್ಯವನ್ನು ಸಂಕ್ಷೇಪದಲ್ಲಿ ವಿವರಿಸಿದರು. ಮಂಡಲವು ಕೈಕೊಂಡ ಕಾರ್ಯಗಳಲ್ಲಿ ಸಮ್ಮೇಲನವು ಮೊದಲನೆಯದಾಗಿರುವದೆಂದೂ, ಶಿಕ್ಷಕ ಶಿಕ್ಷಿಕೆಯರಿಗೆ ಉಪಯುಕ್ತ ಮಾಹಿತಿಯನ್ನು ಹಸ್ತಪತ್ರಿಕೆಗಳ ದ್ವಾರದಿಂದ ಮುಟ್ಟಿಸುವದು, ಪುಸ್ತಕಾಲಯವನ್ನು ಸ್ಥಾಪಿಸುವದು, ಇವೇ ಮೊದಲಾದ ಮಹತ್ವದ ಕಾರ್ಯಗಳನ್ನು ಮಾಡುವದರಲ್ಲಿ ಅನುಭವಿಕರಾದ ಶಿಕ್ಷಕರು ನೆರವಾಗಬೇಕೆಂದೂ, ಕರ್ನಾಟಕದ ಶಿಕ್ಷಕರ ಏಳಿಗೆಯು ಅವರನ್ನೇ ಅವಲಂಬಿಸಿರುವದೆಂದೂ, ಪಥವೀಧರರ ಸಹಾಯವನ್ನು ಕೋರುತ್ತ ಕೂಡ್ರುವದು ಸರಿಯಲ್ಲವೆಂದೂ ಹೇಳಿ, ತಮ್ಮ ಕೆಲಸದಲ್ಲಿ ನೆರವಾದವರಿಗೆಲ್ಲ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಸದ್ಯಕ್ಕೆ ಸಭಾಸದರ ಸಂಖ್ಯೆಯು ೬೫೦ ಇದ್ದು, ಅದನ್ನು ಹೆಚ್ಚಿಸಲಿಕ್ಕೆ ಪ್ರಯತ್ನ ಮಾಡುವವರು ಮಂಡಲಕ್ಕೆ ಉಪಕಾರ ಮಾಡಿದಂತಾಗುವದೆಂದೂ ಹೇಳಿದರು.

ಅನಂತರ ರಾವಬಹಾದ್ದೂರ ರೊದ್ದ ರಾಯರು ಮಂಡಲದ ಅಧ್ಯಕ್ಷರಾಗಿ ಬಹುಮತದಿಂದ ಆರಿಸಲ್ಪಟ್ಟರು. ಟ್ರೇ. ಕಾ. ದ. ಪ್ರಿನ್ಸಿಪಾಲರಾದ ರಾವಸಾ. ಕುಲಕರ್ಣಿರಾಯರೂ, ಹೆ. ಟ್ರೇ. ಕಾ. ದ ಲೇಡೀಸು. ರಾದ ಮಿಸ್ ಮೆಕಾಫಿಯವರೂ ವ್ಹಾಯಿಸ್ ಪ್ರೆಸಿಡೆಂಟರಾದರು. ವಿ. ಮೊಗದಾಲರವರು ಸರ್ವಾನುಮತದಿಂದ ಕಾರ್ಯದರ್ಶಿಗಳಾಗಿಯೂ ಮಿಸೆಸ್ ರಮಾಬಾಯಿ ಪಾರಗಾವಕರ ಇವರು ಸಹಾಯಕ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ವಿ. ಪುರೋಹಿತ ಇವರು ಕೋಶಾಧ್ಯಕ್ಷರಾದರು. ಕೆಳಗೆ ಬರೆದವರು ಕಾರ್ಯನಿರ್ವಾಹಕ ಮಂಡಲದ ಸಭಾಸದರಾಗಿ ಆರಿಸಲ್ಪಟ್ಟರು. ವಿ. ವ್ಹಿ. ಡಿ. ನವಲಗುಂದ; ವಿ. ಆರ್. ಜಿ. ತೆರಿಗುಂಡಿ; ವಿ. ಲ. ಗು. ನಾಡಿಗೇರ (ಧಾರವಾಡ;) ವಿ. ಯಳವತ್ತಿ (ಬಿಜಾಪುರ;) ವಿ. ಎಳಿಗಾರ (ಬೆಳಗಾವ;) ವಿ. ಐರಣಿ; ವಿ. ಪಶುಪತಿ; ವಿ. ಕದಡಿ; ವಿ. ಸುಂಕದ; ಮಿಸೆಸ್. ವೆಂಕಟಲಕ್ಷ್ಮಮ್ಮ; ಮಿಸೆಸ್ ಗಂಗವ್ವ ಸಿಂದೆ; ಮಿಸೆಸ್ ಲಿಂಗ

ವ್ವಾ ನೂಲ್ವಿ; ಕಾರವಾರದ ಸಭಾಸದರು ಯಾರೂ ಇಲ್ಲದ್ದರಿಂದ ಆ ಜಿಲ್ಲೆಯ ಬಗ್ಗೆ ಪತ್ರವ್ಯವಹಾರದಿಂದ ಸಭಾಸದರನ್ನಾರಿಸಬೇಕೆಂದು ಗೊತ್ತಾಯಿತು. ವಿ. ಬಾ. ರ. ಕದಡಿ ಹಾಗು ಮಿ. ತ. ನಾ. ಅಮಿನಭಾವಿ ಇವರನ್ನು ಮಂಡಲದ ಆಯವ್ಯಯ ಶೋಧಕರನ್ನಾಗಿ ಆರಿಸಿದ್ದಾಯಿತು.

ಈ ವರೆಗೆ ಟಪಾಲಖರ್ಚು, ಮುದ್ರಣ, ಕಾಗದ ಪುಸ್ತಕಗಳು, ಸಮ್ಮೇಲನ ಮುಂತಾದವುಗಳ ಬಗ್ಗೆ ಸುಮಾರು ೫೦ ರು. ಖರ್ಚಾಗಿರುವ ವು. ಸನ್ ೧೯೧೭ ನೇ ಇಸವಿಯ ಆಯವ್ಯಯದ ಅಂದಾಜ ಪತ್ರಿಕೆಯನ್ನು ಮಾಡಿದ್ದಾಯಿತು. ೧೦೦ ರುಪಾಯಿಗಳನ್ನು ಕಾದಿಟ್ಟು, ೭೫ ರು. ಗಳನ್ನು ಪುಸ್ತಕಾಲಯದ ಬಗ್ಗೆಯೂ ೭೫ ರು. ಗಳನ್ನು ಸಮ್ಮೇಲನಗಳ ಬಗ್ಗೆಯೂ ೧೦೦ ರು. ಗಳನ್ನು ಮುದ್ರಣ ಟಪಾಲು ಹಾಗು ಕಿರುಕುಳ ಖರ್ಚಿನ ಬಗ್ಗೆಯೂ ವೆಚ್ಚ ಮಾಡಬಹುದೆಂದು ಸರ್ವಾನುಮತದಿಂದ ನಿಶ್ಚಯಿಸಲ್ಪಟ್ಟಿತು.

ಬಳಿಕ ಅಧ್ಯಕ್ಷರು ಸಭಿಕರಲ್ಲೆಲ್ಲ ಹೊಸ ಹುರುಪು ಹುಟ್ಟುವಂಥ ಒಂದು ಸಂಗತಿಯನ್ನು ಹೇಳಿದರು. ಸಮ್ಮೇಲನಕ್ಕೆ ಬಂದಿದ್ದ ಪ್ರಾಥಮಿಕ ಶಿಕ್ಷಕರಲ್ಲೊಬ್ಬರು (ಇವರು ತಮ್ಮ ಹೆಸರನ್ನು ಪ್ರೆಸಿಡೆಂಟರಿಗೆ ಮಾತ್ರ ತಿಳಿಸಲು ಒಪ್ಪಿಕೊಂಡರು) ಶಿಕ್ಷಣದ ಉತ್ತೇಜನಕ್ಕಾಗಿ ೧೦೦ ರೂಪಾಯಿ ಇನಾಮು ಕೊಡುವ ಬಗ್ಗೆ ಸಂಕಲ್ಪ ಮಾಡಿರುವರು. ಬೆನ್ ಇಯತ್ತೆಯ ಎಲ್ಲ ವಿಷಯಗಳನ್ನು ಕಲಿಸುವನಕ್ಕೆ ಮಾರ್ಗದರ್ಶಕವಾದ ಟಿಪ್ಪಣಿಗಳ ರೂಪದಿಂದ ಒಂದು ಪುಸ್ತಕವನ್ನು ಬರೆದು, ಆ ಯತ್ನದ ಬಗ್ಗೆ ಒಂದು ವಿಶಿಷ್ಟ ಕವಿಟಿಯ ಮಂಜೂರಿಯನ್ನು ಪಡೆದುಕೊಂಡವರಿಗೆ ಈ ಇನಾಮು ದೊರೆಯುವದು. ಕನ್ನಡ ಪ್ರಾಥಮಿಕ ಶಿಕ್ಷಕರಲ್ಲಿ ತಮ್ಮ ವ್ಯವಸಾಯದ ಬಗ್ಗೆಯೂ ಜನರ ಬಗ್ಗೆಯೂ ಎಷ್ಟು ಅಭಿಮಾನ ವಿರುವದೆನ್ನಲಿಕ್ಕೆ ಇದೊಂದೇ ಮಾತು ಸಾಕ್ಷಿಯಾಗಿದೆ. ಈ ಮಹನೀಯರ ಔದಾರ್ಯಕ್ಕಾಗಿ ಇವರನ್ನು ಅಧ್ಯಕ್ಷರೂ ಸಭಿಕರೂ ಅಭಿನಂದಿಸಿ, ಇವರು ಕೊಡಲೊಪ್ಪಿದ ಹಣವನ್ನು ಕೃತಜ್ಞತೆಯಿಂದ ಸ್ವೀಕರಿಸಿದರು.

ಆ ಮೇಲೆ ಕೆಲವು ಸೂಚನೆಗಳು ಸಭೆಯಲ್ಲಿ ಚರ್ಚಿಸಲ್ಪಟ್ಟು ಬಹುಮತದಿಂದ ನಿಶ್ಚಯಿಸಲ್ಪಟ್ಟವು. ಅವು ಯಾವವೆಂದರೆ:—

೧ ಅಲ್ಪ ಶ್ರಮದಿಂದ ಸರಿಯಾದ ಬೆಲೆಗೆ ಶಿಕ್ಷಕರಿಗೆ ಬೇಕಾಗುವ ಸಾಮಾನುಗಳು ದೊರೆಯುವ ಬಗ್ಗೆ ಮಾಹಿತಿಯನ್ನು ಕೊಡುವದಲ್ಲದೆ ಈ ಬಗ್ಗೆ ಕೈಲಾದಷ್ಟು ಸಹಾಯ ಮಾಡುವದು.

(೩) ಸಮ್ಮೇಲನದಲ್ಲಿ ನಡೆಯುವ ಪಾಠಗಳಲ್ಲಿರುವ ಗುಣಗಳನ್ನು ನಿರ್ಣಯಿಸಲಿಕ್ಕೆ ಒಂದು ಕಮೀಟಿಯನ್ನು ನಿಯಮಿಸಿ, ಅವರ ಮತಗಳನ್ನು ಪ್ರಕಟಿಸುವದು.

(೩.) ಸಮ್ಮೇಲನದಲ್ಲಿ ನಡೆಯುವ ಒಂದೆರಡು ಪಾಠಗಳನ್ನು ಇಬ್ಬರು ಇಲ್ಲವೆ ಮೂವರು ಶಿಕ್ಷಕರು ಕೊಡುವಂತೆ ವ್ಯವಸ್ಥೆ ಮಾಡುವದು.

(೪) ಸಮ್ಮೇಲನದಲ್ಲಿ ಉರ್ದು ಭಾಷೆಯ ಒಂದು ಪಾಠವು ನಡೆಯುತಕ್ಕದ್ದು.

ಕರ್ನಾಟಕ ಶಿಕ್ಷಕ ಮಂಡಲ, ಧಾರವಾಡ.

ವಿಜ್ಞಾಪನೆ.

ಸದ್ಯಕ್ಕೆ ಮಂಡಲದ ಸಭಿಕರ ಸಂಖ್ಯೆಯು ೩೭೫ ಇರುವದು. ಈ ಸಂಖ್ಯೆಯು ಹೆಚ್ಚಿದಂತೆ ಮಂಡಲದವರು ಕೈಕೊಂಡ ಕಾರ್ಯವು ತ್ವರಿತವಾಗಿಯೂ ಸುಸೂತ್ರವಾಗಿಯೂ ನೆರವೇರುವದೆಂಬದು ಸ್ಪಷ್ಟವದೆ. ಕರ್ನಾಟಕದ ಯಾವತ್ತೂ ಶಿಕ್ಷಕ ಶಿಕ್ಷಿಕೆಯರು ಮಂಡಲದ ಸಭಾಸದರಾಗುವರೆಂದೂ, ಈ ಬಗ್ಗೆ ಸದ್ಯದ ಎಲ್ಲ ಸಭಾಸದರು ತಮ್ಮ ಮಿತ್ರರಿಗೆ ಪ್ರೋತ್ಸಾಹಿಸುವರೆಂದೂ ನಂಬಿದ್ದೇನೆ. ಮಂಡಲದ ಕಾಯಂ ಫಂಡು ಹೆಚ್ಚುವದು ಅತ್ಯವಶ್ಯವಿರುವದು. ಸದ್ಯಕ್ಕೆಮಂಡಲದಲ್ಲಿ ೨೬ ಜನ ಪ್ರೋತ್ಸಾಹಕರಿರುವರು. ಇವರಲ್ಲಿ ೧೭ ಜನರು ಶಿಕ್ಷಿಕೆಯರೂ ೮ ಜನರು ಅಧಿಕಾಸ್ಥರೂ ಇರುವರು. ಒಬ್ಬರು ಮಾತ್ರ ಪ್ರಾಥಮಿಕ ಶಿಕ್ಷಕರಿರುವರು. ಶಿಕ್ಷಿಕೆಯರಂತೆಯೇ ಶಿಕ್ಷಕರೂ ಅಭಿಮಾನದಿಂದ ಮಂಡಲದ ಸಹಾಯಕರಾಗುವರೆಂದು ಕೋರುತ್ತೇನೆ. ಮಂಡಲದ ನಿಯಮಗಳನ್ನೂ ಎಲ್ಲ ಜಿಗೆಯ ಸಭಾಸದರ ಹೆಸರುಗಳನ್ನೂ ಮುದ್ರಿಸುವ ಕೆಲಸವು ನಡೆದಿರುವದು.

ಕೆಳಗೆ ಕಾಣಿಸಿದ ಸಂಗತಿಗಳ ಬಗ್ಗೆ ಚರ್ಚಿಸಿ ನಿಷ್ಕರ್ಷ ಪಡಿಸುವದಿರುವದರಿಂದ ಸಭಾಸದರು ತಮ್ಮ ಅಭಿಪ್ರಾಯಗಳನ್ನು ಬರೆದು ತಿಳಿಸಿದಲ್ಲಿ ಬಹಳ ಉಪಕಾರವಾಗುವದು.

(ಅ.) ಮಂಡಲದ ಪುಸ್ತಕಾಲಯದಲ್ಲಿಡತಕ್ಕ ಪುಸ್ತಕಗಳು.

(ಬ) ಮುಂದಿನ ಸಮ್ಮೇಲನದಲ್ಲಿ ಕಲಿಸತಕ್ಕ ಪಾಠಗಳು, ಹಾಗು ಕಲಿಸಬೇಕೆಂದು ವಿನಂತಿ ಮಾಡಿಕೊಳ್ಳಬಹುದಾದ ಶಿಕ್ಷಕ ಶಿಕ್ಷಕಿಯರು.

(ಕ.) ಸಮ್ಮೇಲನದಲ್ಲಿ ಓದಬಹುದಾದ ಶಿಕ್ಷಣವಿಷಯಕ ನಿಬಂಧದ ವಿಷಯಗಳು:—ಅವುಗಳಲ್ಲಿರತಕ್ಕ ಅಂಶಗಳು.

(ಡ) ಮಂಡಲದವರು ವಿಚಾರಿಸಬಹುದಾದ ಇತರ ಮಹತ್ವದ ಸಂಗತಿಗಳು.

V. N. Magdal.
ಕಾರ್ಯದರ್ಶಿ

ಸ್ಲಾಯಿಡ ಅಥವಾ ನೂತನ ಹಸ್ತಶಿಕ್ಷಣ ಪದ್ಧತಿ.

(ಎಸ್ತೋಲ ತಿಂಗಳಿನಿಂದ ಮುಂದೆ ಸಾಗಿದ್ದು.)

ಶಿಕ್ಷಣದಲ್ಲಿ ಅತಿಮಹತ್ವವಾದ ಹಾಗೂ ಕೇಂದ್ರಸ್ಥಾನವನ್ನು ಆಕ್ರಮಿಸಿಕೊಂಡ ಈ ನಿಜವಾದ ಸಂಗತಿಯನ್ನು ಇದುವರೆಗೂ ಜನರು ಸರ್ವಾನುಮತದಿಂದ ಅತ್ಯವಶ್ಯವಾದದ್ದೆಂದು ಗೊತ್ತುಪಡಿಸಿದ್ದಿಲ್ಲ. ಈಚೆಗೆ ಮಾತ್ರ ಕತ್ತಲೆಯಲ್ಲಿ ಬಹುದಿವಸ ಅಡಗಿ ಕೊಂಡಂಥ ಈ ಸಂಗತಿಯು ಬೆಳಕಿನಲ್ಲಿ ಬರಲಿಚ್ಛಿಸುತ್ತಿರುವದು. ಜನರಲ್ಲಿಯ ಕೇವಲ ತಪ್ಪು ತಿಳುವಳಿಕೆಯೇ ಇದರ ಕಾರಣವಾಗಿರಬಹುದು. ಅಜ್ಞಾನವು ಸಹಿತ ಕೆಲಸಾರೆ ನಿಜವಾದ ಸಂಗತಿಗಳ ಕಡೆಗೆ ಲಕ್ಷವನ್ನು ಎಳೆಯುವದು. ಇಂದ್ರಿಯಗಳ ಗೋಚರದಲ್ಲಿರದ ವಸ್ತುವು ಮನಸಿನಲ್ಲಿ ಎಂದೂ ಇರಲಾರದೆಂದು ಹೇಳುವ ಒಬ್ಬ ಪ್ರಾಚೀನ ವಿಚಾರಿಯ ನುಡಿಯು ಸತ್ಯವಾದದ್ದಿರುವದು. ಅದೇ ಒಬ್ಬ ಆಧುನಿಕ ವಿಚಾರಿಯ ಬಳಿಗೆ ಹೋಗಿ ಹಲವು ಪ್ರಸಂಗಗಳಲ್ಲಿ ಮಾತಾಡುತ್ತಕಾಲಿತಾಗ "ಯಾತರಿಂದ ವಿಪುಲ ದ್ರವ್ಯವು ಶಿಕ್ಕುವದಿಲ್ಲವೊ ಅಂಥದನ್ನು ಕಲಿತು ಮನನ ಮಾಡಿಕೊಳ್ಳುವದರಲ್ಲಿ ಎನೂ ಪ್ರಯೋಜನವಿಲ್ಲ" ಎಂಬ ಮಾತು ತಿಳಿಯುವದು. ಈ ರೀತಿಯಾಗಿ ದ್ರವ್ಯಲಾಭವನ್ನೇ ಮುಂದಿಟ್ಟುಕೊಂಡು ಶಿಕ್ಷಣಸಂಬಂಧದ ವಿಚಾರವನ್ನು ಮಾಡತೊಡಗಿದರೆ ಅದು ಸರಿಯಾಗಿ ಸಾಗದೆ ಅಳುಬಿತವಾಗಿ ಹೀನದಶೆಯನ್ನು ಹೊಂದುವದು. ಕೇವ

ಲ ಮಾನಸಿಕ, ಶಾರೀರಿಕ ನೈತಿಕ ಶಕ್ತಿಗಳ ಬೆಳವಣಿಗೆಗಾಗಿಯೇ. ಉತ್ತಮ ತತ್ವಗಳನ್ನನುಸರಿಸಿ ಸಾಗಿದರೆ ಶಿಕ್ಷಣವು ಅಚಂದ್ರಾರ್ಕವಾಗಿ ಉತ್ತಮಸ್ಥಿತಿಯಲ್ಲಿದ್ದು ಜನರಿಗೆ ಉಪಯುಕ್ತವಾಗುವದು.

ಅಂದಮೇಲೆ ಹಸ್ತ ಶಿಕ್ಷಣದ ಉದ್ದೇಶವಾದರೂ ಯಾವದಿರಬೇಕು? ದ್ರವ್ಯಲಾಭವನ್ನುಂಟುಮಾಡುವಂಥದಿದ್ದರೆ, ಶಿಕ್ಷಣವು ಸಮೂಲನಾಶವಾಗದಿದ್ದರೂ ತೀರ ಜರ್ಜರಿತವಾಗುವದು. ಅದು ಶಿಕ್ಷಣದ ಉದ್ದೇಶಗಳಿಗೂ ತತ್ವಗಳಿಗೂ ಅನುಸಾರವಾಗಿದ್ದರೆ ಅದರಿಂದ ಎಲ್ಲ ಸಂಗತಿಗಳೂ ಸಾಧ್ಯವಾಗುವವು. ಈತರದ ಉದ್ದೇಶಗಳುಳ್ಳ ಹಸ್ತ ಶಿಕ್ಷಣವನ್ನು ಯಾಕೆಕೊಡಬೇಕೆಂಬದರ ಕಾರಣಗಳನ್ನು ವಿಚಾರಿಸುವದು ಅವಶ್ಯವಾದದ್ದು.

ಅರಿಸ್ಟಾಟಲನೆಂಬ ತತ್ವಜ್ಞಾನಿಯು ಎಲ್ಲ ಆಯುಧಗಳಲ್ಲಿ ಮನುಷ್ಯನ ಕೈಯು ಪ್ರಾಧಾನ್ಯವಾದದ್ದೆಂದು ಹೇಳಿರುವನು. ಮನುಷ್ಯಪ್ರಾಣಿಯು ಸುಧಾರಣೆಯಲ್ಲಿ ಹಸ್ತದ ಉಪಯೋಗವು ಬಹಳ ಮಟ್ಟಿಗೆ ಆಗಿರುವದು. ಮನುಷ್ಯನು, ತನ್ನಲ್ಲಿದ್ದ ಬುದ್ಧಿಯಬಲದಿಂದ ತನಗೆ ಬೇಕಾದದ್ದೊಂದು ಆಯುಧವನ್ನು ತಯಾರಿಸಿ ಕೊಂಡು ಕ್ರೂರಪಶುಗಳ ರಕ್ತಾಭಿಲಾಷವನ್ನು ಮುರಿದು ಬಿದಿಗೊತ್ತಿ, ಒದುಕಿ ಬಾಳಿದನು. ಅನೇಕ ಜೀವುಳ್ಳ ಪದಾರ್ಥಗಳಲ್ಲಿ ಕೆಲಸ ಮಾಡುವದು ಅವಶ್ಯವಾದ್ದರಿಂದ ಅದಕ್ಕೆ ಅನುರೂಪವಾದ ಹಾಗೂ ಹದನವಾದ ಆಯುಧಗಳನ್ನೇ ತಯಾರಿಸಿಕೊಂಡು ಅವುಗಳಿಂದಲೇ ಸೃಷ್ಟಿಯಲ್ಲಿಯ ಸೃಷ್ಟಪದಾರ್ಥಗಳನ್ನು ವಶಮಾಡಿಕೊಂಡನು. ಯಾಂತ್ರಿಕ ಆಯುಧಗಳಿಂದಂತೂ ಅವನ ಪ್ರಭುತ್ವವು ಬಹಳೇ ಹೆಚ್ಚಾಯಿತು. ಶಾಸ್ತ್ರಿಯ ವಿಷಯದಲ್ಲಿ ಉಪಯೋಗಿಸುವ ಯಂತ್ರಗಳೂ ಉಪಕರಣಗಳೂ ಸುಧಾರಿಸಿದ ಆಯುಧಗಳಲ್ಲವೇ? ಅವುಗಳಿಂದಲೇ ಸೃಷ್ಟಿಯಲ್ಲಿ ದೂರದಲ್ಲಿರುವ ಶಕ್ತಿಗಳನ್ನೂ ಪದಾರ್ಥಗಳನ್ನೂ ನೋಡಿ, ಕೇಳಿ ಅವುಗಳ ಜ್ಞಾನ ಮಾಡಿಕೊಳ್ಳುವದಿಲ್ಲವೇ?

ಆಯುಧಗಳು ಪೂರ್ಣತೆಯನ್ನು ಹೊಂದಿದಂತೆ ಅವುಗಳನ್ನು ಉಪಯೋಗಿಸುವ ಕೈಯಾದರೂ ವಿಶಿಷ್ಟ ಕುಶಲತೆಯನ್ನು ಹೊಂದುವದು ಅತ್ಯವಶ್ಯವಾದದ್ದು. ಹಾಗೂ ಈ ತರದ ಕುಶಲತೆಯು ಅವುಗಳಿಂದ ಕೆಲಸಮಾಡುತ್ತ ಹೋದಂತೆ ಬಂದೇ ಬರುವದು. ಮನುಷ್ಯನ ಕೈಯಿಂದಾದ ಕೆಲಸವು ಯಂತ್ರಗಳಿಂದಾದ ಕೆಲಸಕ್ಕೆ ಎಂದೂ ಸರಿಯಾಗಲಾರದು, ಆದರೆ ಯಂತ್ರ

ವನ್ನು ಉಪಯೋಗಿಸುವ ಮನುಷ್ಯನು ಉತ್ತಮರೀತಿಯಿಂದ ತಯಾರಾ
ಹೊರತು ಅದರಿಂದ ಉತ್ತಮ ಕೆಲಸವಾಗಲಾರದೆಂಬದು ಸ್ವಲ್ಪವಿಚಾರವು
ಡಿ ನೋಡಿದರೆ ತಿಳಿಯುವಂತಿದೆ. ನೇಗಿಲ ಹೊಡೆಯಲಿಕ್ಕೆ ಬಂದ ಮನುಷ್ಯ
ಗೆ, ನೀವು ಬಿಂದು ಯಂತ್ರದ ಸಹಾಯದಿಂದ ನೇಯುವದಕ್ಕೆ ಹೇಳಿದರೆ
ಅವನಿಗೆ ಆಕೆಲಸವು ಎಂದೂ ಬರೆಲಾರದು. ಯಾಕಂದರೆ ಆಕೆಲಸವಾಡ
ವದಕ್ಕೆ ಅವನ ಹಸ್ತಗಳು ತಯಾರಾಗಿಲ್ಲ. ಈತರದ ಬೇರೆ ಅನೇಕ ಉದಾ
ಹರಣೆಗಳಿಂದ ತಿಳಿಯುವದೇನೆಂದರೆ ಅತಿಶಯ ಸುಧಾರಿಸಿದ ಯಂತ್ರಗಳು
ತಯಾರಾದಂತೆ ಕೈಯಾದರೂ ಅದರಷ್ಟೇ ಇಲ್ಲವೆ ಅದಕ್ಕೂ ಹೆಚ್ಚು ಸುಧಾ
ರಿಸಿದ್ದರಬೇಕಾಗುವದು. ಈ ತರದ ಸುಧಾರಣೆಯು ಹಸ್ತಶಿಕ್ಷಣದಿಂದಲೆ
ಸಾಧ್ಯವಾಗುವದು; ಮತ್ತು ಈ ತರದ ಹಸ್ತಶಿಕ್ಷಣಕ್ಕೂ ಮಿದುಳಿನೆಲ್ಲಿಯ
ಅತ್ಯುಚ್ಚವ್ಯಾಪಾರಗಳಿಗೂ ಅವಶ್ಯವಾದ ಸಂಬಂಧವಿರುವದು.

ಮೇಲೆವಿವರಿಸಿದ ಸಂಗತಿಗಳನ್ನು ತಿಳಿದುಕೊಂಡಬಳಿಕ ಶರೀರ
ಹಾಗು ಮಾನಸಶಾಸ್ತ್ರದ ಹಲವು ತತ್ವಗಳು ಹಸ್ತಶಿಕ್ಷಣದಲ್ಲಿ ತಲೆದೋರು
ವವೆಂಬ ಸಂಗತಿಯನ್ನು ತಿಳಿದು ಕೊಳ್ಳುವದು ಅವಶ್ಯವಾಗುವದು. ಅದ್ದರಿಂ
ದ ಅವುಗಳನ್ನು ಕುರಿತು ವಿಚಾರಿಸುವಾ. ದೊಡ್ಡ ದೊಡ್ಡ ಸ್ನಾಯುಗಳ
ಅನೇಕ ಗುಂಪುಗಳನ್ನು ವಶದಲ್ಲಿಟ್ಟುಕೊಳ್ಳುವದು ಅತಿ ಸುಲಭವಾದದ್ದೆಂ
ದು ಜಗತ್ತಿನ ಅನುಭವಕ್ಕೆ ಬಂದಿರುವದು. ಆದರೆ ಕೈಬೆರಳು ತೋಳು
ಮುಂತಾದವುಗಳಿಂದ ಆಗುವ ಸ್ಪರ್ಶವೂ, ಚಲನೆಯೂ ಅತಿಸೂಕ್ಷ್ಮವಾದ
ವಿರುವವು. ಹಾಗೂ ತೋಳಿನೆಲ್ಲಿಯ ಎಲ್ಲ ಸ್ನಾಯುಗಳ ಸಹಾಯದಿಂದ
ಒಂದು ಕಟ್ಟಿಗೆಯ ತುಂಡನ್ನು ಕೊಡಲಿಯಿಂದ ಕಡಿಯುವದು ಅತಿ ಸುಲಭ
ವಿರುವದು.ಅದೇ ಮೂರು ಬೆರಳುಗಳಿಂದ ಲೆಕ್ಕಣಿಕೆಯನ್ನು ಹಿಡಿದು ಬರೆ
ಯುವದು ಬಹಳ ಕಠಿಣವಾದದ್ದಿರುವದು. ಮಗುವು ಬರೆಯುವದಕ್ಕೆ
ಮೊದಲನೆಯ ಸಾರೆ ಪ್ರಯತ್ನಿಸಿದಾಗ್ಗೆ ಶರೀರದಲ್ಲಿದ್ದ ಎಲ್ಲ ಸ್ನಾಯುಗಳ
ಸಹಾಯವನ್ನು ತೆಗೆದುಕೊಳ್ಳುವದು. ಮುದಕರು ಬರೆಯುವಕಾಲದಲ್ಲಿ
ಕೈ ಚಲನೆಯು ಕೂಡ ಮೊರೆಯ ಮೇಲಿನ ಸ್ನಾಯುಗಳ ಚಲನೆಯೆಸ್ನಾದ
ರೂ ನೀವು ಅನೇಕಸಾರೆ ನೋಡಿರಬಹುದು. ಕಚ್ಚಾಕೆಲಸದಲ್ಲಿ ದೊಡ್ಡ
ಸ್ನಾಯುಗಳ ಸಮೂಹವೇ ಉಪಯೋಗವಾಗುವದು. ಅತಿಸೂಕ್ಷ್ಮವಾದ
ಕೆಲಸಕ್ಕೆ ಸಣ್ಣಸ್ನಾಯುಗಳನ್ನು ಸುವ್ಯವಸ್ಥೆಯಿಂದ ಉಪಯೋಗಿಸಬೇಕಾ
ಗುತ್ತದೆ. ಕಾರಣ ಕಚ್ಚಾಕೆಲಸದಲ್ಲಿ ಬಹಳ ಮಟ್ಟಿಗೆ ಬೆಳವಣಿಗೆಯನ್ನು

ಕೊಂದುವವು. ಹಾಗೂ ಅತಿಸೂಕ್ಷ್ಮ ಕೆಲಸದಲ್ಲಿ ಸ್ನಾಯುಗಳ ಚಲನವಲನೆಯು ಸುವ್ಯವಸ್ಥಿತವಾದದ್ದೂ ಉತ್ತಮವಾದದ್ದೂ ಇದ್ದ ಕಾರಣ ಬಹಳ ನಟ್ಟಗೆ ಬೆಳವಣಿಗೆಯನ್ನು ಹೊಂದುವವು ಎರಡನೆಯ ಪ್ರಕಾರದ ಕೆಲಸವೇ ಶಿಕ್ಷಣಕ್ಕೆ ಅನುಕೂಲವಾದದ್ದೆಂದು ಕಂಡು ಬಂದಿರುವದು. ಆದ್ದರಿಂದ ಶಾಲೆಗಳಲ್ಲಿಯು ಹಸ್ತಶಿಕ್ಷಣದಲ್ಲಿ ಕತ್ತರಿ, ಚಾಕು, ಕರಗಸ, ಉಜ್ಜುಗೊರಡು, ಉಳಿ ಮುಂತಾದ ಆಯುಧಗಳನ್ನೇ ಉಪಯೋಗಿಸಬೇಕಲ್ಲದೆ ಕೊಡಲಿ ಮುಂತಾದವುಗಳನ್ನು ಉಪಯೋಗಿಸಕೂಡದು.

ಚಲನಾತ್ಮಕವಾದ ಸೂಕ್ಷ್ಮ ಸ್ನಾಯುಗಳ ಶಿಕ್ಷಣವು ಚಿಕ್ಕಂದಿನಲ್ಲಿಯೇ ಪ್ರಾರಂಭವಾಗಬೇಕೆಂದು ಚಿಕ್ಕಮಕ್ಕಳ ಬೆಳವಣಿಗೆಯ ಸಂಬಂಧದ ವಿಚಾರದಲ್ಲಿ ಕಂಡು ಬಂದಿರುವದು. ಯಾಕಂದರೆ, ಹಸ್ತದಲ್ಲಿಯ ಸ್ನಾಯುಗಳ ಚಲನವಲನೆಗಳನ್ನು ವಶದಲ್ಲಿಟ್ಟುಕೊಳ್ಳುವಂಥ ಮಿದುಳಿನಲ್ಲಿಯ ಕೇಂದ್ರಗಳು ಮಗು ಹುಟ್ಟಿದ ತುಸುದಿವಸಗಳಲ್ಲಿಯೇ ಬೆಳವಣಿಗೆಯನ್ನು ಹೊಂದುವವು. ಈ ತರದ ಶಿಕ್ಷಣವು ಸರಿಯಾದ ವೇಳೆಯಲ್ಲಿ ಪ್ರಾರಂಭವಾದರೆ ಮಾತ್ರ ಅನೇಕ ಸ್ನಾಯುಗಳ ಚಲನವಲನೆಗಳು ಕೆಲವೊಂದು ಮಿಟ್ಟಿನ ವರೆಗೆ ಅಭಿವೃದ್ಧಿ ಹೊಂದುವವು. ಇಲ್ಲದಿದ್ದರೆ ಅಷ್ಟು ಬೆಳವಣಿಗೆಯನ್ನು ಹೊಂದಲಾರವು.

ಹಸ್ತಶಿಕ್ಷಣವು ಚಿಕ್ಕಂದಿನಿಂದಲೇ ಪ್ರಾರಂಭವಾಗಬೇಕೆಂಬದೇ ಮಾನಸಶಾಸ್ತ್ರದ ಶೋಧದಿಂದ ಕಂಡುಬಂದಿರುವದು. ಹಾಗೂ ಚಿಕ್ಕಮಕ್ಕಳು ಶಾಲೆಗೆಹೋಗುವ ಪೂರ್ವದಲ್ಲಿಂ ಾ, ಹೋದನಂತರ ಐದು ವರ್ಷದ ವರೆಗೂ ಅದನ್ನು ಅನೇಕ ಆಟಗಳಿಗೆ ಸುಲಭವಾಗಿ ಜೋಡಿಸಬಹುದೆಂಬದು ಅನುಭವಸಿದ್ಧವಾಗಿರುತ್ತದೆ. ಆದ್ದರಿಂದ ೫ ವರ್ಷದಿಂದ ೧೬ ವರ್ಷದವರೆಗೆ ಹಸ್ತಶಿಕ್ಷಣವನ್ನು ಅವಶ್ಯವಾಗಿ ಕೊಡಬೇಕು. ಈ ಕಾಲಕ್ಕೆ ಈ ತರದ ಶಿಕ್ಷಣ ಸಿಗದೆ ಹೋದರೆ ಹಸ್ತದಲ್ಲಿಯ ಸೂಕ್ಷ್ಮವಾದ ಮಜ್ಜಾತಂತುಗಳು ಬೆಳವಣಿಗೆಯನ್ನು ಹೊಂದುವದಿಲ್ಲ. ಹಾಗೂ ಅವುಗಳಿಗೆ ಸಂಬಂಧಪಟ್ಟ ಮಿದುಳಿನಲ್ಲಿಯ ಕೇಂದ್ರಗಳಾದರೂ ಪುಷ್ಟವಾಗದೆ ನಾಶಹೊಂದುವವು. ಆದ್ದರಿಂದ ಈ ವೇಳೆಯನ್ನು ಎಂದೂ ವ್ಯರ್ಥಹೋಗಗೊಡಬಾರದು.

(ಮುಂದೆ ಸಾಗುವದು.)

ಪ್ರಕೃತಿಪಾಠಗಳು.

(ಏಪ್ರೀಲ ತಿಂಗಳಿಂದ ಮುಂದೆ ಸಾಗಿದ್ದು.)

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
(೨) ಆಕಳ ಹಲ್ಲುಗಳು:—ಆಕಳ ಕೆಳದವಡೆಯ ಮುಂಭಾಗದಲ್ಲಿ ೮ ಹಲ್ಲುಗಳಿರುತ್ತವೆ. ಮೇಲಿನ ದವಡೆಯ ಮುಂಭಾಗದಲ್ಲಿ ಹಲ್ಲುಗಳಿಲ್ಲದೆ ಬರುಸಾದ ರಬ್ಬರಿನಂತಿರುವ ಮಾಂಸಖಂಡವಿರುತ್ತದೆ. ಪಾರ್ಶ್ವ ದಂತಗಳು ವಿಶಾಲವಾಗಿರುತ್ತವೆ. ನಾಯಿ, ಬೆಕ್ಕು ಇವುಗಳಿಗೆ ಇರುವ ಹಾಗೆ ಕೋರೆ ಹಲ್ಲುಗಳಿಲ್ಲ. ಆಕಳು ಸಸ್ಯಾಹಾರಿಯಾದದರಿಂದ ಅದರ ಹಲ್ಲುಗಳು ಅಗಿಯುವದಕ್ಕೆ ಅನುಕೂಲವಾದಂತೆ ಅಗಲವಾಗಿರುತ್ತವೆ.	ಆಕಳ ಬಾಯಿಯನ್ನು ತೆಗೆಯಿಸಿ ಅದರ ಹಲ್ಲುಗ ನ್ನು ನೋಡಬೇಕು. ಆಕಳ ಕೆಳದವಡೆಯ ಮುಂಭಾಗ ಲ್ಲಿ ಎಷ್ಟು ಹಲ್ಲುಗಳಿರುತ್ತವೆ? ಅದರ ಮೇಲಿನ ದವಡೆಯ ಮುಂಭಾಗದಲ್ಲಿ ಏನಿರುತ್ತದೆ? ಅದರ ಪಾರ್ಶ್ವ ದ ತಗಳು ಹೇಗಿರುತ್ತವೆ? ಈ ವಿಷಯದಲ್ಲಿ ಆಕಳಿಗ ನಾಯಿಗೂ ಇರುವ ವ್ಯತ್ಯಾಸವೇನು? ಆಕಳಿಗೆ ವಿಧವಾದ ಹಲ್ಲುಗಳಿರುವದರಿಂದ ಅನುಕೂಲವೇನ
(೩) ಮೂಗು—ಆಕಳ ಮೂಗಿನ ಹೊಳ್ಳೆಗಳು ಅಗಲವಾಗಿರುತ್ತವೆ.	ಹುಡುಗರು ಆಕಳ ಮೂಗನ್ನು ನೋಡಿ ಅದರ ಹೊ ಳ್ಳೆಗಳು ಹೇಗಿರುತ್ತವೆಂಬದನ್ನು ಲಕ್ಷಿಸಬೇಕು. [ಅಗ ವಾದ ಹೊಳ್ಳೆಗಳಿಂದ ವಾಸನೆಯ ಸಾಮರ್ಥ್ಯವು ಹ ಚ್ಚುವದು.]
(೪) ಕಣ್ಣುಗಳು:—ಆಕಳ ಕಣ್ಣುಗಳು ಮುಖ	ಆಕಳ ತಲೆಯಲ್ಲಿ ಕಣ್ಣುಗಳು ಎಲ್ಲಿ ಸೇರಿಸಲ್ಪಟ್ಟಿರುತ್ತ ವೆ? ನಮ್ಮ ದೃಷ್ಟಿಗೂ ಆಕಳ ದೃಷ್ಟಿಗೂ ವ್ಯತ್ಯಾಸವೇನು?

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ದಮುಂಭಾಗದಲ್ಲಿರದೆ ಸ್ವಲ್ಪ ಪಾರ್ಶ್ವದಲ್ಲಿರುತ್ತವೆ. ಆದುದರಿಂದ ಅದರ ದೃಷ್ಟಿಯು ಎಲ್ಲಕಡೆಯನ್ನೂ ವ್ಯಾಪಿಸಿರುತ್ತದೆ. (೫) ಕಿವಿಗಳು:– ಇವು ತಲೆಯ ಪಾರ್ಶ್ವದಲ್ಲಿರುತ್ತವೆ. ಆಕಳು ಕಿವಿಗಳನ್ನು ಬೇಕಾದಾಗ ಮೇಲಕ್ಕೂ ಕೆಳಗೂ ಆಡಿಸಬಲ್ಲದು. ಕಿವಿಯನ್ನು ಮೇಲಕ್ಕೆತ್ತಿಕೊಂಡಾಗ ಸಪ್ಪಳವು ಚನಾಗಿಕೇಳಿಸುವುದು.	ಆಕಳ ಕಿವಿಗಳನ್ನು ಬೇಕಾದಾಗ ಮೇಲಕ್ಕೂ ಕೆಳಗೂ ಆಡಿಸುವದಷ್ಟೇ. ಕಿವಿಗಳನ್ನು ಮೇಲಕ್ಕೆತ್ತಿ ಕೊಳ್ಳುವದರಉಪ್ರೇಶವೇನು?

ಎರಡನೇ ಭಾಗ.

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ಚರ್ಮ:—ಆಕಳ ಚರ್ಮವು ಬಹಳ ಮಂದವಾದದಾಗಿರುತ್ತದೆ ಅದರ ಮೇಲಿನ ಕೂದಲು ಮೋಟಾಗಿ ಬೆಕ್ಕಿನ ತುಪ್ಪಟಕ್ಕಿಂತ ಒರಟಾಗಿರುತ್ತದೆ.	ಆಕಳ ತಲೆಯ ವಿಚಾರವನ್ನು ಮುಗಿಸಿದ ಮೇಲೆ ಅದರ ಚರ್ಮದ ವಿಷಯಕ್ಕೆ ಹೋಗಬಹುದು. ಹುಡುಗರನ್ನು ಆಕಳ ಮೈಯನ್ನು ಸವರಿ ನೋಡಿರೆಂದು ಹೇಳಿ ಅದರ ವಿಚಾರವನ್ನು ಪ್ರಾರಂಭಿಸಬೇಕು. ಆಕಳ ಚರ್ಮವು ಸ್ಪರ್ಶಕ್ಕೆ ಹೇಗಿರುತ್ತದೆ? ಬೆಕ್ಕಿನ ಚರ್ಮಕ್ಕೂ ಆಕಳ ಚರ್ಮಕ್ಕೂ ಇರುವ ವ್ಯತ್ಯಾಸವೇನು? ಆಕಳ ಚರ್ಮದ ಉಪಯೋಗವೇನು?

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ಕಾಲು:—ಆಕಳ ಶರೀರದ ಮಾನದಿಂದ ಅದರ ಕಾಲುಗಳು ಸಣ್ಣವಾಗಿರುತ್ತವೆ. ಆಕಳ ಅಂಗಾಲುಗಳು ಮಧ್ಯದಲ್ಲಿ ಸೀಳಿರುವಂತೆ ಕಾಣುತ್ತವೆ. ಒಂದೊಂದು ಪಾದದಲ್ಲೂ ನಾಲ್ಕು ಬೆರಳುಗಳಿರುತ್ತವೆ. ಹಿಂಭಾಗದಲ್ಲಿರುವ ಬೆರಳುಗಳು ನೆಲವನ್ನು ಸೋಕುವದಿಲ್ಲ. ಮೆಲಕಾಡಿಸುವ ಎಲ್ಲ ಪ್ರಾಣಿಗಳಿಗೂ ಈ ವಿಧವಾದ ಅಂಗಾಲುಗಳಿರುತ್ತವೆ ಪಾದದ ಮುಂಭಾಗದಲ್ಲಿಬಿರುಸಾದ ಕವಚವಿರುತ್ತದೆ. ಆಕಳ ಪಾದಗಳು ತೇವವಾದ ಸ್ಥಳದಲ್ಲಿ ಇಳಿಯಬೀಳುವದಿಲ್ಲ.	ಆಕಳ ಕಾಲುಗಳನ್ನು ನಾಯಿಯ ಕಾಲುಗಳೊಡ ಹೋಲಿಸಿದರೆ ನಮಗೆ ಏನು ಕಂಡು ಬರುವುದು? ಅದ ಹಿಂಗಾಲು ಹೇಗೆ ಕಾಣುತ್ತದೆ? ಪಾದದ ರಚನೆಯ ಎಂಥಾದು? ಯಾವ ಯಾವ ಪ್ರಾಣಿಗಳಿಗೆ ಈ ವಿಧವಾ ಅಂಗಾಲುಗಳಿರುತ್ತವೆ? ಆಕಳ ಪಾದವನ್ನು ಮುಟ್ಟಿ ನೋಡಿದರೆ ಅದು ಹೇಗಿರುತ್ತವೆ? ಎತ್ತು ಆಕಳುಗಳ ಪಾದವು ಸೀಳಿರುವದರಿಂದ ಅವುಗಳಿಗೆ ಅನುಕೂಲವೇನು?
ಬಾಲ:—ಆಕಳ ಬಾಲವು ಬಹಳ ಉದ್ದವಾಗಿರುತ್ತದೆ ಅದರ ತುದಿಯಲ್ಲಿ ಕೂದಲು ಹೆಚ್ಚಾಗಿದ್ದು ಒಂದು ಗೊಂಡೆಯಂತೆ ಕಾಣುತ್ತದೆ. ಬಾಲವನ್ನು ಬೀಸುವದರಿಂದ ನೊಣ ಮೊದಲಾದವುಗಳನ್ನು ಓಡಿಸುತ್ತದೆ	ಹುಡುಗರನ್ನು ಆಕಳ ಬಾಲವನ್ನು ನೋಡಿರೆಂದು ಹೇಳಿ ಅದರ ಸಂಬಂಧವಾದ ಪ್ರಶ್ನೆಗಳನ್ನು ಕೇಳಬೇಕು. ನಾಯಿಯ ಬಾಲಕ್ಕೂ ಆಕಳ ಬಾಲಕ್ಕೂ ಯಾವ ವ್ಯತ್ಯಾಸಗಳಿರುತ್ತವೆ? ಬೇಸಿಗೆಯ ದಿನಗಳಲ್ಲಿ ಆಕಳು ಬಾಲವನ್ನು ಬೀಸಿಕೊಳ್ಳುವದನ್ನು ನೋಡಿರುವವರು ಯಾರು? ಆಕಳು ಏತಕ್ಕೆ ಬಾಲವನ್ನು ಬೀಸಿಕೊಳ್ಳುತ್ತದೆ

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ಆಹಾರ:—ಎತ್ತು ಆ ಕಳ.ಗಳಿಗೆ ಹುಲ್ಲು ಮು ಖ್ಯಾಹಾರವು. ಈ ಪ್ರಾ ಣಿಗಳು ವಿಸ್ತಾರವಾದ ಬೈಲುಗಳಲ್ಲಿ ಹುಲ್ಲನ್ನು ಮೇಯುತ್ತವೆ. ಆಕಳು ತನಗೆ ಬೇಕಾದ ಮೇವನ್ನು ತೆಗೆದುಕೊಂಡನಂತರ ಎಲ್ಲಾದರೂ ಒಂದು ಸ್ಥಳಕ್ಕೆ ಹೋಗಿ ತಾನು ನುಂಗಿದ ಆಹಾರವನ್ನು ಬಾಯಿಗ ತಂದುಕೊಂಡು ಚನ್ನಾಗಿ ಅಗಿದು ಪುನಃ ನುಂಗುತ್ತದೆ. ಈ ಸ್ವಭಾವವನ್ನೇ ಮೇಕಾಡಿಸುವದೆಂದು ಹೇಳ್ತೇವೆ.	ಎತ್ತು ಆಕಳು ಇವಗಳ ಮುಖ್ಯ ಆಹಾರವು ಯಾವದು? ಇದು ಈ ಪ್ರಾಣಿಗಳಿಗೆ ಎಲ್ಲಿ ಸಿಕ್ಕುತ್ತದ? ನಾಯಿಯು ಆಹಾರಕ್ಕೂ ಆಕಳ ಆಹಾರಕ್ಕೂ ವ್ಯತ್ಯಾಸವೇನು? ಆಕಳು ತನ್ನ ಮೇವನ್ನು ತೆಗೆದು ಕೊಂಡಸಂತರ ಎಲ್ಲಾದರೂ ಒಂದು ಸ್ಥಳದಲ್ಲಿ ಮುಚಿಗಿ ಕೊಳ್ಳುವದು ಅಥವಾ ನಿಲ್ಲುವದಷ್ಟೇ. ಅಲ್ಲಿ ಏನುಮಾಡುತ್ತಿರುತ್ತದೆ?
ಎಮ್ಮೆ, ಕುರಿ ಚಿಗರ ಮೊದಲಾದವು ಆಕಳಂತೆ ಮೆಲಕಾಡಿಸುತ್ತವೆ. ಮೆಲಕಾಡಿಸುವ ಇತರ ಪ್ರಾಣಿಗಳಿಗೂ ಸೀಳು ಪಾದಗಳೂ, ಕೊಡುಗಳೂ ಇರುತ್ತವೆ.	ಮೆಲಕಾಡಿಸುವ ಇತರ ಪ್ರಾಣಿಗಳು ಯಾವವು? ಅವುಗಳಿಗೂ ಆಕಳಿಗೂ ಅಂಗರಚನೆಯಲ್ಲಿ ಯಾವ ಯಾವ ಹೊಲಿಕೆಗಳು ಕಾಣುತ್ತವೆ?
ಆಕಳ ಕೆಳದವಡೆಯು ಮೇಲಕ್ಕೂ ಕೆಳಗೂ ಅಲ್ಲಿ ಪಾರ್ಶ್ವಗಳಲ್ಲಿಯೂ ಚಲಿಸುತ್ತದೆ.	ಬೆಕ್ಕಿನ ದವಡೆಯ ಚಲನೆಗೂ ಆಕಳ ದವಡೆಯ ಚಲನೆಗೂ ವ್ಯತ್ಯಾಸವೇನು?

ಪತ್ರವ್ಯವಹಾರ.

ರಾವಸಾ. ಗುರುವರ್ಯ ಕನ್ನಡ ಶಾಲಾಪತ್ರಿಕದ ಎಡಿಟರ ದೊ
ಗಳವರ ಸನ್ನಿಧಿಗೆ:—

ವಿ. ವಿ. ಕೆಳಗಿನ ಎರಡು ಪದ್ಯಗಳಿಗೆ ತಮ್ಮ ಅಂದವಾದ ಪತ್ರಿಕ
ಯಲ್ಲಿ ಸ್ಥಳವು ದೊರೆದೀತೆಂದು ಆಶಿಸುತ್ತೇನೆ.

ಎರಡು ಪ್ರಶ್ನೆಗಳಿಗೆ ಒಂದೇ ಉತ್ತರ.

೧. ಕೇಡು ಮಾಡುವವರಾರು ನಮಗೀ।
ರೂಢಿಯೊಳು ಒಕ್ಕಲಿಗರಿಲ್ಲರು।
ಹೂಡಿ ಬಂಡಿಯ ಜೋಳವನು ತಂದೆಲ್ಲಿ ಹಾಕುವರೈ॥
ಆಡಿದೀ ನುಡಿಗಳ್ಗೆ ತಡವನ.।
ಮಾಡದಲೆ ಬುಧನೊಬ್ಬನಾಗಲಿ।
ರೂಢಿಗೀತನೆ 'ಹಗೆಯು' ಎನ್ನಲು ಮೆಚಿದನು ಅವಗೆ॥ ೧ ॥

೨. ಮಗನು ಹಸಿದಿಹನೈಯ! ಆಡಿನ।
ಸೊಗಸು ಹಾಲನು ಕೊಡುವಿರೇನೈ।
ಮಿಗೆ ದಣಿದು ಬಂದಿಹೆವು ಮಲಗಲು ಸಿಗುವದೇ ಸ್ಥಳವ್॥
ತೆಗೆಯಿರೈ ನೀವ್ ಕದವನೆನ್ನಲು।
ತೆಗೆಯದಲೆ ಪೇಳಿದರು, ಮನುಜನೆ।
ಸಿಗುವದಿಲ್ಲಯ್ 'ಇರುತಿಹವು ಚಿಕ್ಕಾಡು' ಮನೆಯೊಳಗೆ॥ ೨ ॥

ಈ ಎರಡು ಚಮತ್ಕಾರಿಕ ಪದ್ಯಗಳ ಸಾರಾಂಶವೇನಂದರೆ—ಒಬ್ಬ ರಾಜನು ತನ್ನ ಸಭೆಯಲ್ಲಿರುವ ಪಂಡಿತರನ್ನು ಕುರಿತು ಮೊದಲನೆಯ ಪದ್ಯದಲ್ಲಿ ಹೇಳಿದಂತೆ "ಕೇಡುಮಾಡುವರಾರು ನಮಗೆ" "ರೂಢಿಯೊಳು ಒಕ್ಕಲಿಗರೆಲ್ಲರು ಹೂಡಿ ಬಂಡಿಯ ಜೋಳವನು ತಂದೆಲ್ಲಿ ಹಾಳುವರೈ?" ಎಂಬದಾಗಿ ಬೇರೆ ಬೇರೆ ಅರ್ಥಗಳುಳ್ಳ ಎರಡು ಪ್ರಶ್ನೆಗಳನ್ನು ಕೇಳಿ, ಇವೆರಡೂ ಪ್ರಶ್ನೆಗಳಿಗೆ ಒಂದೇ ಉತ್ತರವನ್ನು ಹೇಳಬೇಕೆಂದು ಕೇಳಿದನು. ಅದಕ್ಕೆ ಒಬ್ಬ ಪಂಡಿತನು ಆ ಎರಡೂ ಪ್ರಶ್ನೆಗಳಿಗೆ ಯೋಗ್ಯ ಉತ್ತರವಾದ 'ಹಗೆಯು' ಎಂಬ ಶಬ್ದವನ್ನು ಹೇಳಿದ್ದಾನೆ. ಇದು ಮೊದಲನೆಯ ಪದ್ಯದ ಸಾರಾಂಶವು.

ಒಬ್ಬ ಪ್ರವಾಸಿಯು ತನ್ನ ಹೆಂಡರು ಮಕ್ಕಳೊಡನೆ ಪ್ರವಾಸಕ್ಕೆ ಹೊರಟು ಒಂದು ಊರಲ್ಲಿ ರಾತ್ರಿಯೊಳಗೆ ಒಬ್ಬರ ಮನೆಯ ಬಾಗಿಲಿಗೆ ಬಂದು "ಮಗನು ಹಸಿದಿಹನಯ್ಯ, ಅಡಿನ ಸೊಗಸು ಹಾಲನು ಕೊಡುವಿರೇನಯ್?" "ಮಿಗೆ ದಣಿದು ಬಂದಿಹೆವು ಮಲಗಲು ಸಿಗುವದೇ ಸ್ಥಳವು" ಎಂದು ದೈನ್ಯದಿಂದ ಮಾಡಿದ ಪ್ರಶ್ನೆಗಳಿಗೆ ಆ ಮನೆಯ ಯಜಮಾನನು "ಇರುತಿಹವು ಮನೆಯೊಳಗೆ ಚಿಕ್ಕಾಡು" ಎಂದು ಒಂದೇ ಉತ್ತರವನ್ನು ಕೊಟ್ಟಿದ್ದಾನೆ. ಮೊದಲನೆಯ ಪ್ರಶ್ನೆಗೆ 'ಚಿಕ್ಕ ಅಡುಗಳು' ಎಂದರೆ ಇನ್ನೂ ಹಿಂಡಲಿಕ್ಕೆ ಬಾರದ ಅಡುಗಳೆಂದೂ, ಎರಡನೆಯ ಪ್ರಶ್ನೆಗೆ 'ಚಿಕ್ಕಾಡುಗಳು' ಎಂದರೆ ಮನುಷ್ಯರನ್ನು ಕಡಿಯುವ ಒಂದು ಜಾತಿಯ ಪ್ರಾಣಿಗಳು ಎಂದೂ ಅರ್ಥವನ್ನು ಮಾಡಿದಲ್ಲಿ ಭಾವವು ಸಹಜವಾಗಿಯೇ ಗೊತ್ತಾಗುವದು.

ನನ್ನ ಈ ಅಲ್ಪ ವಿಚಾರದಲ್ಲಿ ಏನಾದರೂ ದೋಷವಿದ್ದರೆ ತಿಳಿಸುವ ಬಗ್ಗೆ ಸುಜ್ಞರಿಗೆ ವಿನಂತಿ ಮಾಡಿಕೊಳ್ಳುವ,

ಚ. ಸಿ. ನವಾತಿ.

ಅಸಿ. ಮಾಸ್ತರ ಶಾಳಾ ತುಮ್ಮಿನಕಟ್ಟಿ.

ರಾವಸಾಹೇಬ ಕನ್ನಡ ಶಾಲಾ ಪತ್ರಿಕೆಯ ಎಡಿಟರ ದೊರೆಗಳವರ ಚರಣಾರವಿಂದಗಳಿಗೆ—

ಸಾ. ನಮಸ್ಕಾರಗಳು, ಕೆಳಗೆ ಬರೆದ ಎರಡು ಕೂಟ ಪ್ರಶ್ನೆಗಳನ್ನು ತಮ್ಮ ಸರ್ವಮಾನ್ಯವಾದ ಪತ್ರಿಕೆಯಲ್ಲಿ ಮುದ್ರಿಸಿ ಪ್ರಸಿದ್ಧ ಪಡಿಸಬೇಕೆಂದು ಬೇಡಿಕೊಳ್ಳುತ್ತೇನೆ:—

ಸೂಚನೆ:—ಕೆಳಗಿನ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳು ಮುಂದಿನ ಸಂಚಿಕೆಯಲ್ಲಿ ಪ್ರಸಿದ್ಧಿಸಲ್ಪಡದಿದ್ದರೆ ಅವುಗಳನ್ನು ಪೃಚ್ಛಕನೇ ಪ್ರಕಟಿಸುವನು.

ಕೂಟ ಪ್ರಶ್ನೆಗಳು.

೧. ಒಂದು ರಮ್ಯವಾದ ಉದ್ಯಾನದಲ್ಲಿ ಒಬ್ಬ ವಿಚಿತ್ರ ಕಾಯವುಳ್ಳವನು ಸಾಯಂಕಾಲದ ಹೊಂಬಣ್ಣದ ಪ್ರಕಾಶದಲ್ಲಿ ಉಲ್ಲಾಸದಿಂದ ವಿಚಿತ್ರ ವಿಚಿತ್ರವಾದ ಪಾತ್ರೆಯಲ್ಲಿ ಭೋಜನ ಮಾಡುತ್ತಿದ್ದನು. ಒಡಿಸಿದ ಪದಾರ್ಥಗಳು ತೀರುವಷ್ಟರಲ್ಲಿ ಆ ಪಾತ್ರೆಯೇ ಅವನನ್ನು ನುಂಗಿತು.

ಇದನ್ನು ಕಂಡು ಅವನ ಪ್ರನುದೆಯರು ಅತಿದುಃಖದಿಂದ ಸೂರ್ಯ ನಾರಾ ಯಣನನ್ನು ಮೊರೆ ಇಟ್ಟರು. ಆದರೆ ಊಟಕ್ಕೆ ಕುಳಿತ ವಿಚಿತ್ರ ಪುರುಷ ನು ಯಾರು?

೨. ನಾನು ಒಂದು ಭಯಂಕರವಾದ ವನದಲ್ಲಿ ಹುಟ್ಟಿ ವರುಣ ನಿಂದ ಜೋಕೆ ಮಾಡಲ್ಪಟ್ಟೆನು. ಕೆಲವು ಕಾಲ ಸಂದ ಬಳಿಕ ನನಗೆ ಸ್ವಾಯು ಒದಗಿದ್ದನ್ನು ಕಂಡು ನನ್ನೊಡನೆ ಮದುವೆಯಾಗಬೇಕೆಂಬ ಕುತೂಹಲದಿಂದ ಐವರು ಹಿಡಿದು ತಂದರು. ಅವರಲ್ಲಿ ಮೂವರು ಮಾತ್ರ ನನ್ನನ್ನು ಅತ್ಯಂತ ಪ್ರೀತಿಪೂರ್ವಕವಾಗಿ ನಡಿಸಿಕೊಂಡು, ನನ್ನಿಂದಾಗಬ ಹುದಾದ ಕೆಲಸವನ್ನು ಅತ್ಯಾದರದಿಂದ ಮಾಡಿಸಿ, ಕರ್ಣಾಶ್ರಮಕ್ಕೆ ಕಳಿಸಿ ಕೊಟ್ಟರು. ನನ್ನ ತವರಮನೆಯ ಹೆಸರು ಬೇರೆ; ಮತ್ತು ಅತ್ತೆಯ ಮನೆಯ ಹೆಸರು ಬೇರೆ; ಆದರೆ ನನ್ನ ಹೆಸರೇನು?

ವಿಧೇಯ,
ರಾಮಚಂದ್ರ ಅಪ್ಪಾಜಿರಾವ ದೊಡವಾಡಕರ.

ವಿದ್ಯಾಖಾತೆಯ ನೋಟೀಸುಗಳು.

ಮೆಹರ್ಬಾನ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ಸಾಹೇಬ ಬಹಾ ದ್ದೂರ ದಕ್ಷಿಣಭಾಗ, ಇವರ ಇಂಗ್ರೇಜೀ ಪತ್ರ ನಂಬರ ೧೬೯೬ ತಾರೀ ಖು ೩೧ನೇ ಮಾರ್ಚ ಸನ್ ೧೯೧೭ನೇ ಇಸವಿಯ ಪ್ರಕಾರ ತಾರೀಖು:-೨೪-೬-೧೯೧೭ನೇ ಇಸವಿಯ ಸರಕಾರೀ ಗ್ಯಾಝೆಟಿನಲ್ಲಿ ಯ ಎಜ್ಯುಕೇಶನಲ್ ಡಿಪಾರ್ಟಮೆಂಟ ನಂಬರ ೪೭೧೨ನೇ ಪ್ರೆಸನೋ ಟನ್ನು ಪ್ರಸಿದ್ಧವಾಗಿರುತ್ತದೆ.

ಪ್ರೆಸ್ ನೋಟ.

ದೇಶ ಭಾಷೆಯ ಕ್ರಮಿಕ ಪುಸ್ತಕಗಳು.

ಯುದ್ಧದ ಮೂಲಕ ಕಾಗದ ಆರಿವೆಗಳ ಬೆಲೆಯು ಏರಿರುವದರಿಂ ದ, ತಾರೀಖು ೧ನೇ ಜಾನೇವಾರಿ ಸನ್ ೧೯೧೭ನೇ ಇಸವಿಯಿಂದ ಕಾಗದದ ರಟ್ಟಿನ ದೇಶಭಾಷೆಯ ವಾಚನ ಪುಸ್ತಕಗಳ ಬೆಲೆಯನ್ನು ಹೆಚ್ಚಿಸಿದ ಬಗ್ಗೆ ಪ್ರೆಸ್ ನೋಟ ನಂಬರ ೪೧೩೨ ತಾ.-೧೬-೧೨-೧೯೧೬ ನೇದರಲ್ಲಿ ಪ್ರಸಿದ್ಧವಾಡುವದರಲ್ಲಿ ಬಂದಿತ್ತು.

ಈ ಪುಸ್ತಕಗಳ ಮಕ್ತೆಯನ್ನು ಹಿಡಿದ ಮೆಸರ್ಸ್ ಮ್ಯಾಕಮಿಲನ್ ಮತ್ತು ಕಂಪನಿಯವರು ತಮ್ಮ ಹತ್ತರ ಸಿಲಕು ಇದ್ದ ಮತ್ತು ಎರಡನೆಯವರಿಗೆ ಕೊಡಬೇಕಾದ ಎರಡರಿಂದ ಆರನೆಯ ಇಯತ್ತೆಯ ವರೆಗಿನ ಅರಿವೆಯ ರಟ್ಟಿನ ವಾಚನ ಪುಸ್ತಕಗಳನ್ನು ಕಾಗದದ ರಟ್ಟಿನ ಪುಸ್ತಕಗಳಂತೆ ಹೆಚ್ಚಿನ ಬೆಲೆಗೆ ಮಾರಲಿಕ್ಕೂ, ಬುಕ್ ಸೆಲರರಿಗೆ ಕೊಡತಕ್ಕ ಕಮಿಶನಿನ ದರವನ್ನು ೧೦೦ಕ್ಕೆ ೧೫ ರಂತೆ ಇದ್ದದ್ದನ್ನು ೧೦೦ಕ್ಕೆ ೧೦ರಂತೆ ಮಾಡುವದಕ್ಕೂ ಪರವಾನಗಿ ದೊರೆಯುವ ಕುರಿತು ಅರ್ಜಿಮಾಡಿಕೊಂಡಿದರು.

ಗವ್ಹರ್ನರ ಇನ್ ಕೌನ್ಸಿಲರವರು ಬುಕ್ ಸೆಲರರಿಗೆ ಕೊಡತಕ್ಕ ಕಮಿಶನಿನ ದರವನ್ನು ಕಡಿಮೆ ಮಾಡುವ ಸೂಚನೆಯನ್ನು ಮಂಜೂರು ಮಾಡಿದ್ದಾರೆ. ಅಲ್ಲದೆ ಕಂಪನಿಯವರು ತಮ್ಮ ಹತ್ತರ ಇದ್ದ ಮತ್ತು ಎರಡನೆಯವರಿಗೆ ಕೊಡಬೇಕಾದ ಎರಡರಿಂದ ಆರನ ವರೆಗಿನ ಅರಿವೆಯ ರಟ್ಟಿನ ವಾಚನ ಪುಸ್ತಕಗಳನ್ನು ಸದ್ಯಕ್ಕೆ ಕಾಗದದ ರಟ್ಟಿನ ಪುಸ್ತಕಗಳಿಗಾಗಿ ಮಂಜೂರು ಮಾಡಿದ ದರದಂತೆಯೇ ಮಾರುವ ಬಗ್ಗೆ ಠರಾವು ಮಾಡಿರುತ್ತಾರೆ.

R. S. Kulkarni
Principal.

ಜಾಹೀರಾತು. ನಂ. ೫೯

ಮಿ.ಎಂಥೊವ್ವೆನ್ ಇವರ "ನೀತಿ ಸಂಬಂಧದ ಅವತರಣಗಳ ಸಂಗ್ರಹ ಭಾಗ.೧" ಇದರ ಊರ್ದು ಭಾಷಾಂತರವು ಊರ್ದು ಪ್ರಾಥಮಿಕ ಹಾಗೂ ಆಂಗ್ಲೋವ್ಹರ್ನ್ಯಾಕ್ಯುಲರ ಶಾಲೆಗಳ ಮಾಸ್ತರರ ಉಪಯೋಗಕ್ಕಾಗಿ ಪ್ರಸಿದ್ಧವಾಗಿದೆ. ಆ ಪುಸ್ತಕದ ಪ್ರತಿಗಳು "ಸುಪರಿಂಟೆಂಡೆಂಟ ಗವ್ಹರ್ನಮೆಂಟ ಪ್ರಿಂಟಿಂಗ" ಮುಂಬಯಿ ಮತ್ತು "ಗವರ್ನಮೆಂಟ ಬುಕ್ ಡಿಪೋ" ಪುಣೆ ಇಲ್ಲಿ ದೊರೆಯುವವು. ಬೆಲೆ ೧ ಪ್ರತಿಗೆ ೯ ಆಣೆ ೬ ಪೈ.

Office of the
Director of Public Instruction
Poona, 4th April 1917.

Sd. A.L. Covernton.
Ag Director of public Instruction.

ವರ್ಷಪ್ರಾಯಿಕ್ಷು ಪರೀಕ್ಷೆಯು.

ಸನ್ ೧೯೧೮ನೆಯ ಇಸವಿಯ ಫೆಬ್ರುವರಿ ತಿಂಗಳ ಕನ್ನಡ ಶಾಲಾಪತ್ರಕದ ೪೯–೪೦ನೆಯ ಪುಟಗಳಲ್ಲಿ ಪ್ರಕಟಿಸಿದ ನಿಯಮಗಳಿಗನುಸಾರವಾಗಿ, ಕನ್ನಡದಲ್ಲಿ ಆಗತಕ್ಕ ವರ್ಷಪ್ರಾಯಿಕ್ಷುಪರೀಕ್ಷೆಯು, ನಡೆಯುವ ವರ್ಷದ ದಿಶಂಬರ ತಿಂಗಳ ೧೪ನೆಯ ತಾರೀಖು ಶುಕ್ರವಾರ ದಿನಸ ಪ್ರಾರಂಭವಾಗುವದು. ಸದರೀ ಪರೀಕ್ಷೆಯಲ್ಲಿ ೪೦ ರೂಪಾಯಿಯ ಬಕ್ಷೀಸು ಒಂದು, ೨೦ರೂಪಾಯಿಯ ಬಕ್ಷೀಸು ಒಂದು ಈ ಪ್ರಕಾರ ಎರಡು ಬಕ್ಷೀಸುಗಳಿರುವವು. ಪರೀಕ್ಷೆಗೆ ಬರತಕ್ಕ ಉಮೇದವಾರರು ತಮ್ಮ ಅರ್ಜಿಗಳನ್ನು ಮೆ. ಎಜ್ಯುಕೇಶನಲ್ ಇನಸ್ಪೆಕ್ಟರ ಸಾ. ಬಹಾದ್ದೂರ ದಕ್ಷಿಣಭಾಗದವರ ಕಡೆಗೆ ಸನ್ ೧೯೧೮ನೆಯ ಇಸವಿಯ ದಶಂಬರ ತಿಂಗಳ ೧೫ನೇ ತಾರೀಖಿಗಾಗಲಿ, ಅದಕ್ಕೂ ಪೂರ್ವದಲ್ಲಿಯಾಗಲಿ ತಪ್ಪದೆ ಮುಟ್ಟುವಂತೆ ಕಳಿಸಬೇಕು. ಪರೀಕ್ಷೆಯು ನಿಯಮಿಸಿದ ದಿವಸ ಬೆಳಗಿನ ೧೦॥ ಘಂಟೆಗೆ ಪ್ರಾರಂಭವಾಗುವದು.

D. T. College for Men
15 6–1917

R. S. Kulkarni
Principal.

ಮೆಹಬಾನ ಡಾಯರೆಕ್ಟರ ಸಾಹೇಬ ಬಹಾದ್ದೂರವರ ಇಂಗ್ರೇಜೀ ಪತ್ರ ನಂಬರ ೧೯೯೬ ತಾರೀಖು ೨೧ನೇ ಮೇ ಸನ್ ೧೯೧೭ನೇ ಇಸವಿಯ ಮೇರೆಗೆ ಕೆಳಗಿನ ಸಂಗತಿಯನ್ನು ಎಲ್ಲ ಜನರ ತಿಳುವಳಿಕೆಗಾಗಿ ಪ್ರಸಿದ್ಧ ಮಾಡಿರುತ್ತದೆ.

ಫ್ರೀ ನ್ಯಾಶನಲರ ಫಾಯನಲ್ ಪರೀಕ್ಷೆಯಲ್ಲಿ ನೂರಕ್ಕೆ ೪೫ರಂತೆ ಗುಣಗಳನ್ನು ದೊರಕಿಸಿದ ಉಮೇದವಾರರಿಗೆ ಮಾತ್ರ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಗಿ ದೊರೆಯುವದು. ಮುಸಲ್ಮಾನ, ಕೀಳು ಮುಂತಾದ ಹಿಂದುಳಿದ ಜಾತಿಯವರಿಗೆ ಈ ನಿಯಮವು ಲಾಗೂ ಇರುವದಿಲ್ಲ ಪರೀಕ್ಷೆಗೆ ಕೂಡ್ರಲು ಪರವಾನಗಿಯ ಬಗ್ಗೆ ಮಾಡತಕ್ಕ ಅರ್ಜಿಗಳನ್ನು ಆಯಾ ಜಿಲ್ಲೆಯ ಡಿ. ಎ. ಇ. ರ ಮುಖಾಂತರ ಕಳಿಸತಕ್ಕದ್ದು.

D. T. College.

R. S. Kulkarni
Principal.

ಕೆಳಗಿನ ಪಟ್ಟಿಯಲ್ಲಿ ಕಾಣಿಸಿದ ಕನ್ನಡ ಪುಸ್ತಕಗಳು ಮೆ. ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬ ದಕ್ಷಿಣಭಾಗ
ಇವರಿಂದ ಆಯಾ ಪುಸ್ತಕಗಳ ಎದುರಿಗೆ ಬರೆದ ಕೆಲಸಗಳಿಗಾಗಿ ಮಂಜೂರ ಮಾಡಲ್ಪಟ್ಟವೆ.

ಕ್ರ. ನಂಬರು.	ಪುಸ್ತಕ ಮತ್ತು ಗ್ರಂಥಕರ್ತರ ಹೆಸರು.	ಮಂಜೂರಿಯ ಹುಕುಂ ನಂಬರು.	ಯಾತರ ಬಗ್ಗೆ ಮಂಜೂರ ಮಾಡಿರುತ್ತದೆ.	ಕ್ರಯ.			ಷರಾ.
೧	ಮುಂಬಯಿ ಇಲಾಖೆಯ ಭೂಗೋಲ:- ಮಿ. ಆಯ್. ಪಿ. ನಿಂಬಾಳಕರ ...	೧೦೧೭ ೩–೫–೧೯೧೭.	ಕನ್ನಡ ಪ್ರಾಥಮಿಕ ಶಾಲೆಗಳ ಲಾಯಬ್ರರೀಗೂ ಇನಾಮಿಗೂ				ಸದರಿಪುಸ್ತಕಗಳು ಕೊಡಲಿಕ್ಕೆ
೨	ಬಾಲಭಾರತ :— ಮಿ. ಜಿ. ಎಚ್. ಹೊನ್ನಾಪುರಮಠ, ವಕೀಲ ...	೧೧೭೦ ೭–೫–೧೯೧೭	ಕನ್ನಡ ಪ್ರಾಥಮಿಕ ಶಾಲೆಗಳ ಹಾಗೂ ಸೆಕಂಡರಿ ಸ್ಕೂಲುಗಳ ಲಾಯಬ್ರರಿಗೂ ಇನಾಮಿಗೂ.				
೩	ಅಂಕಗಣಿತ ೨ನೆಯ ಇಯತ್ತೆ:— ಅಲವರಯ್ಯಂಗಾರ ಬಿ. ಏ. ...	೧೨೯೫ ೮–೫–೧೯೧೭	ಕನ್ನಡ ಪ್ರಾಥಮಿಕ ಶಾಲೆಗಳ ಲಾಯಬ್ರರಿಗಾಗಿ	೦	೫	೦	
೪	ಸದ್ಬೋಧ ಸಂಗ್ರಹ:— ಮಿ. ಎಚ್. ವ್ಹಿ. ಗುಣಾಜಿ ಬಿ. ಏ. ...	೧೨೯೫ ೧೦–೫–೧೯೧೭	ಕನ್ನಡ ಪ್ರಾಥಮಿಕ ಶಾಲೆಗಳ ಹಾಗೂ ಸೆಕಂಡರಿ ಸ್ಕೂಲುಗಳ ಲಾಯಬ್ರರಿಗೂ ಇನಾಮಿಗೂ				
೫	ಪಾನಾರ್ಹವಾದ ನೀರು ಮತ್ತು ಆರೋಗ್ಯ:— ಮಿ. ಟಿ. ವಿಶ್ವೇಶ್ವರಯ್ಯ ಬಿ. ಏ. ...	೧೧೦೪ ೧೦–೫–೧೯೧೭	ಕನ್ನಡ ಪ್ರಾಥಮಿಕ ಶಾಲೆಗಳ ಲಾಯಬ್ರರಿಗಾಗಿ				

೬	ಸದಾಚಾರ ಸಂಗ್ರಹ:—ಮಿ. ಸೀತಾರಾ ಮಾಚಾರ್ಯ ಸ್ಕೂಲಮಾಸ್ತರ ಅಜ್ಜ ಮಪುರ (ಮೈಸೂ) ...	೧೩೦೪	೧೦–೫–೧೯೧೭	ಕನ್ನಡ ಪ್ರಾಥಮಿಕ ಶಾಲೆಗಳ ಹಾಗೂ ಸೆಕಂಡರಿ ಸ್ಕೂಲುಗಳ ಲಾಯಬ್ರರಿಗೂ ಇನಾಮಿಗೂ
೭	ಸತೀತ್ವರಕ್ಷಿಣೀ:—ತಿರುಮಲಮ್ಮ ನಂಜನಗೂಡು ...	೧೬೫೨	೧೯–೫–೧೯೧೭	ಕನ್ನಡ ಪ್ರಾಥಮಿಕ ಶಾಲೆಗಳ ಇನಾಮಿಗಾಗಿ
೮	ಬೇನಿಗರ ಲಘುಚಿಂತಾಮಣಿ :— ಮಿ. ಎಸ್. ಎಸ್. ಕುಲಕರ್ಣಿ ...	೧೭೬೭	೧೭–೫–೧೯೧೭	ಕನ್ನಡ ಪ್ರಾಥಮಿಕ ಮತ್ತು ಮಧ್ಯಮ ತರಗತಿಯ ಶಾಲೆಗಳ ಲಾಯಬ್ರರಿಗೂ ಇನಾಮಿಗೂ
೯	ಸಿನೆಯ ಇಯತ್ತೆಯ ಭೂಗೋಲ ಭಾಗ ೧:— ಮಿ- ಲಕ್ಷ್ಮಣರಾವ ಸ್ಕೂಲಮಾಸ್ತರ, ಉಡಪಿ ...	೧೭೮೯	೨೫–೫–೧೯೧೭	ಸದರ ಸದರ
೧೦	ಬಾಲವ್ಯಾಕರಣ:—ಮಿ. ಕೆ. ಎಚ್., ಸರ ಸಿಂಹಯ್ಯ ಕನ್ನಡಪಂಡಿತ, ಗವ್ಹರ್ನ ಮೆಂಟ ಹೈಸ್ಕೂಲ, ಚಿಕ್ಕಬಾಳಾಪುರ..	೧೯೦೨	೨೫–೫–೧೯೧೭	ಪ್ರಾಥಮಿಕ ಮತ್ತು ಮಧ್ಯಮ ತರಗತಿಯ ಶಾಲೆಗಳ ಲಾಯಬ್ರರಿಗಾಗಿ ...
೧೧	ಮುಂಬಯಿ ಕರ್ನಾಟಕದ ಸಾಂಪತ್ತಿಕ ಸ್ಥಿತಿ:— ಮೆಹರ್ಬಾನ ಮಹಬೂಬ ಅಲ್ಲೆಖಾನ ಬಿರಾದರ, ಸರದಾರ ಸವಣೂರ ...	೨೨೦೯	೭–೬–೧೯೧೭	ಪ್ರಾಥಮಿಕ ಮತ್ತು ಮಧ್ಯಮ ತರಗತಿಯ ಶಾಲೆಗಳ ಲಾಯಬ್ರರಿಗೂ ಇನಾಮಿಗೂ

R. S. Kulkarni

Principal

ಶಾಲಾಪತ್ರಕ.

ಪುಸ್ತಕ ೫೩. } ಜುಲೈ ೧೯೧೭. { ಸಂಚಿಕೆ ೭.

ಪ. ವಾ. ಡಾ. ದಾದಾಭಾಯಿ ನೌರೋಜಿಯವರು.

ಸುಪ್ರಸಿದ್ಧ ದೇಶಭಕ್ತರಾದ ಡಾ. ದಾದಾಭಾಯಿ ನೌರೋಜಿಯವರು ಕಳೆದ ಜೂನ ತಿಂಗಳ ೩೦ನೇ ತಾರೀಖಿನ ದಿವಸ ಸಂಜೆಯ ೫ ಘಂಟೆಯ ಸುಮಾರಕ್ಕೆ ಮುಂಬಯಿಯಲ್ಲಿ ದಿವಂಗತರಾದರೆಂಬ ವರ್ತಮಾನವನ್ನು ತಿಳಿಸಲಿಕ್ಕೆ ನಮಗೆ ಅತ್ಯಂತ ಖೇದವೆನಿಸುತ್ತದೆ. ಇವರ ಮರಣದಿಂದ, ಹಿಂದುಸ್ಥಾನದೊಳಗಿನ ಆಬಾಲವೃದ್ಧರಿಗಷ್ಟೇ ಅಲ್ಲ, ಇಡೀ ಜಗತ್ತಿನೊಳಗಿನ ಪ್ರತಿಯೊಂದು ರಾಷ್ಟ್ರದವರಿಗೆ ಸಹ ದುಃಖವಾಗಿದೆ. ಆ ಬಗ್ಗೆ ಎಲ್ಲ ಕಡೆಯಿಂದಲೂ ದುಃಖೋದ್ಗಾರದ ತಾರುಗಳು ಬಂದಿವೆ. ಅದ್ವಿತೀಯವಾದ ಗುಣಗಳುಳ್ಳ ಈ ಮಹಾತ್ಮರು ದೇವಾಂಶರಿರಬೇಕಲ್ಲದೆ ಮತ್ತೇನು? 'सन्तः स्वयं परहितेषु कृताभियोगाः' ಎಂಬಂತೆ ತಮ್ಮ ಶರೀರವನ್ನು ಪರಹಿತಕ್ಕಾಗಿಯೇ ಸವಿಸಿದಂಥ ಈ ಪುಣ್ಯಾತ್ಮರು ನಿಜವಾಗಿ ಮಹರ್ಷಿಗಳೇ ಸರಿ. ತಮ್ಮ ಲಾಭ ಹಾನಿಗಳ ಕಡೆಗೆ ಕಿಂಚಿತ್ತಾದರೂ ಲಕ್ಷಕೊಡದೆ ಕೇವಲ ದೇಶಹಿತದಲ್ಲಿಯೇ ಜನ್ಮಕಳೆದ ಈ ವಿಭೂತಿಗಳು ಜಡದೇಹವನ್ನು ತ್ಯಜಿಸಿ ಪರಲೋಕಕ್ಕೆ ತೆರಳಿದರೂ ನಿಜವಾಗಿ ಕೀರ್ತಿರೂಪದಿಂದ ಇಲ್ಲಿಯೇ ಉಳಿದಿರುವರು. ಸರ ನಾರಾಯಣರಾವ ಚಂದಾವರಕರ ರವರು ಹೇಳಿದಂತೆ ಇವರು ಸ್ಕೊರೋಸ್ತರನ ಎರಡನೇ ಅವತಾರವೆಂದು ಹೇಳಲು ಏನೂ ಅಭ್ಯಂತರವಿಲ್ಲ. ಇಂಥ ಮಹನೀಯರ ಚರಿತ್ರೆಯನ್ನು ಓದುವದರಿಂದ ಮನಸು ಪುನೀತವಾಗಿ ಮನುಷ್ಯನು ನಿಃಸಂಶಯವಾಗಿ ಸತ್ಕಾರ್ಯದ ಕಡೆಗೆ ತೊಡಗುವನು. ಆದ್ದರಿಂದ ಭಾರತಕುಲಪಿತಾಮಹರಾದ ಈ ಭೀಷ್ಮಾಚಾರ್ಯರ ಅಲ್ಪ ಚರಿತ್ರೆಯನ್ನು ನಮ್ಮ ವಾಚಕರಿಗೋಸ್ಕರ ಇದರದಿಯಲ್ಲಿ ಕೊಡುವೆವು.

ದಾದಾಭಾಯಿ ನೌರೋಜಿಯವರ ಜನ್ಮವು ಮುಂಬಾಪುರಿಯಲ್ಲಿ
ಕುಲೀನವೂ ಬಡತನಸ್ಥಿತಿಯುಳ್ಳದ್ದೂ ಆದ ಮನೆತನದಲ್ಲಿ ಸನ್ ೧೮೨೫
ನೇ ಇಸವಿಯ ಸಪ್ಟಂಬರ ತಿಂಗಳ ೪ನೇ ತಾರೀಖಿನ ದಿವಸ ಆಯಿತು.
ಇವರು ನಾಲ್ಕು ವರ್ಷದವರಾಗುತ್ತಲೆ ಇವರ ತಂದೆಯು ತೀರಿಕೊಂಡ
ದ್ದರಿಂದ ಧೀರೋದಾತ್ತ ಮಾತುಶ್ರೀಯು ಇವರ ಆರಂಭದ ಶಿಕ್ಷಣ
ವನ್ನು ಸಾಗಿಸಿದಳು. ಪ್ರಾಥಮಿಕ ಶಿಕ್ಷಣವು ಮುಂಬಯಿಯಲ್ಲಿ ಮುಗಿದ
ನಂತರ ಎಲ್ ಫಿನ್‌ಸ್ಟನ್ ಇನ್‌ಸ್ಟಿಟ್ಯೂಶನದಲ್ಲಿ ಇವರ ಮುಂದಿನ
ಶಿಕ್ಷಣವು ನಡೆಯಿತು. "ಶಿಕ್ಷಣವು ಪುಕ್ಕಟೆಯಾಗಿ ದೊರೆಯುದಿರುವ
ದರಿಂದ ಎಷ್ಟೋ ಚುರುಕು ಬುದ್ಧಿಯ ಬಡ ಹುಡುಗರು ಅಶಿಕ್ಷಿತ
ರಾಗಿಯೇ ಉಳಿಯುತ್ತಾರಾದ್ದರಿಂದ ಶಿಕ್ಷಣವು ಫೀ ಇಲ್ಲದೆ ಅವ
ರಾಗಿ ದೊರೆಯಬೇಕು." ಎಂಬ ಕಲ್ಪನೆಯು ಈಗಿನಿಂದಲೇ ಅವರ
ಹೃದಯದಲ್ಲಿ ಮನೆಮಾಡಿತು.

ಸನ್ ೧೮೪೫ನೇ ಇಸವಿಯ ಸುಮಾರಕ್ಕೆ ಅಂದರೆ ಇವರ ವಯ
ಸ್ಸಿನ ೨೦ನೇ ವರ್ಷಕ್ಕೆ ಇವರ ಶಿಕ್ಷಣವು ಮುಗಿಯಿತು. ಮುಂಬ
ಯಿಯ ಆಗಿನ ಮುಖ್ಯ ನ್ಯಾಯಾಧೀಶರಾದ ಸರ ಅಸ್ಕಿನ್ ಪೆರಿ ಯ
ವರು ದಾದಾಭಾಯಿಯವರ ವಿದ್ವತ್ತ್ವೆಯನ್ನೂ ಬುದ್ಧಿಕುಶಲತೆಯನ್ನೂ
ನೋಡಿ, ಇವರು ಇಂಗ್ಲಂಡಕ್ಕೆ ಹೋದರೆ ಬ್ಯಾರಿಷ್ಟರ ಪರೀಕ್ಷೆಗೆ
ತಾಗುವ ಖರ್ಚಿನ ಅರ್ಧವನ್ನು ಕೊಡಲಿಕ್ಕೆ ಸ್ವತಃ ಒಪ್ಪಿಕೊಂಡರು
ಆದರೆ ಆಗಿನ ಧರ್ಮದ ತಿಳುವಳಿಕೆಯ ಪ್ರಕಾರ ಸರ ಜೇಮಶೇಟಜಿ
ಜೀಜಿಭಾಯಿ ಯವರು ಇವರನ್ನು ಇಂಗ್ಲಂಡಕ್ಕೆ ಹೋಗಗೊಡಲಿಲ್ಲ.
ಆದ್ದರಿಂದ ಇವರು ಎಲ್‌ಫಿನ್‌ಸ್ಟನ್ ಕಾಲೇಜದಲ್ಲಿಯೇ ಗಣಿತದ
ಪ್ರೊಫೆಸರರಾದರು. ಕಾಲೇಜದೊಳಗಿನ ಪ್ರೊಫೆಸರರ ಸ್ಥಳವು ಏತ
ದ್ದೇಶೀಯರಿಗೆ ದೊರೆತದ್ದು ಇದೇ ಮೊದಲು. ಈ ಕಾಲಕ್ಕೆ ಇವರು
ಸರಕಾರೀ ನೌಕರಿಯಲ್ಲಿ ಸೇರಿದವರಾಗಿದ್ದರೂ ಇವರ ಒಲವು ಸ್ವ
ತಂತ್ರ ಉದ್ಯೋಗದ ಕಡೆಗೆ ಹೆಚ್ಚು ಇದ್ದದರಿಂದ ಪ್ರಮುಖತ್ವವನ್ನು
ವಹಿಸಿ ಇವರು ಮುಂಬಯಿಯಲ್ಲಿ ಎಷ್ಟೋ ಸ್ವತಂತ್ರ ಸಂಸ್ಥೆಗಳನ್ನು
ಸ್ಥಾಪಿಸಿದರು. ಅವುಗಳಲ್ಲಿ ಕೆಲವು ಇಂದಿಗೂ ನಡೆದಿವೆ. ಮುಂ

ಯಲ್ಲಿ ಬಾಲಿಕೆಯರ ಬಗ್ಗೆ ಶಾಲೆಯನ್ನು ಮೊದಲಿಗೆ ಸ್ಥಾಪಿಸಿದ
ರು ಇವರೇ.

ಈ ಪ್ರಕಾರ ಇವರ ಮನಸು ಸಾರ್ವಜನಿಕ ಹಿತದ ಕೆಲಸಗ
ಲ್ಲಿಯೇ ತೊಡಗಿದ್ದುದರಿಂದ ತಮ್ಮ ಕೆಲಸಕ್ಕೆ ರಾಜೀನಾಮೆಯನು
ಕೊಟ್ಟು, ಕಾವಾ ಕಂಪನಿಯವರು ಲಂಡನದಲ್ಲಿ ಸ್ಥಾಪಿಸಿದ
ಂಗಡಿಯ ವ್ಯವಸ್ಥೆಯನ್ನು ನೋಡುವದಕ್ಕಾಗಿ ಇಂಗ್ಲಂಡಕ್ಕೆ ತೆರಳಿ
ರು. ಅಲ್ಲಿ ಹೋದ ಮೇಲೆ ಕೆಲವು ದಿನಸಗಳಾದನಂತರ ಇವರ
ಂದು ಸ್ವತಂತ್ರ ಅಂಗಡಿಯನ್ನು ತೆಗೆದರು. ಅದರಲ್ಲಿ ಅವರಿಗೆ ದಿವಾಳಿ
ಗೆಯುವ ಪ್ರಸಂಗ ಬಂತು. ಒಬ್ಬ ಮಿತ್ರನ ಮೇಲೆ ಬಂದ ಸಂಕು
ವನ್ನು ಹೋಗಲಾಡಿಸುವ ಬಗ್ಗೆ ಇವರು ಮಾಡಿದ ಸ್ತುತ್ಯ ಪ್ರಯತ್ನ
ಂದಲೇ ಇವರ ಕಂಪನಿಗೆ ಹಾನಿ ತಟ್ಟಿತು. ಇವರ ಆಚರಣೆಯು
ಪ್ಪುಲಂಕವಾಗಿದ್ದು ಲೆಕ್ಕಪತ್ರವು ನಿರ್ದೋಷವಾಗಿದ್ದುದರಿಂದ
ಂಥ ಪರದೇಶದಲ್ಲಿ ಸಹ ಇವರಲ್ಲಿರುವ ಪ್ರಾಮಾಣಿಕತನದ ಬಗ್ಗೆ
ಖ್ಯಾತಿಯುಂಟಾಯಿತು. ಹಿಂದುಸ್ಥಾನದ ನಿಜಸ್ಥಿತಿಯನ್ನು ಅಲ್ಲಿಯ
ಜನರ ಮುಖದ ಮುಂದೆ ಇಡುವದರಲ್ಲಿ ಹೆಚ್ಚು ಲಕ್ಷವನ್ನು ಪೂರೈಸಿದ್ದರಿಂದ
ಂಪನಿಯ ವ್ಯವಸ್ಥೆಯ ಕಡೆಗೆ ಅಷ್ಟು ಲಕ್ಷವನ್ನು ಕೊಡಲಿಕ್ಕಾಗ
ಲ್ಲ. ಇಂಡಿಯನ್ ಸಿವಿಲ್ ಸರ್ವಿಸ ಪರೀಕ್ಷೆಯು ಇಂಗ್ಲಂಡದಲ್ಲಿ
ಯೂ ಹಿಂದುಸ್ಥಾನದಲ್ಲಿಯೂ ಏಕಕಾಲಕ್ಕೆ ತೆಗೆದುಕೊಳ್ಳಲ್ಪಡಬೇ
ಂಬ ಬಗ್ಗೆ ಇವರು ಆವಾಗಿನಿಂದಲೇ ಪ್ರಯತ್ನವನ್ನು ನಡಿಸಿದರು.
ಡೆಗೆ ಸನ್ ೧೮೯೩ರಲ್ಲಿ ಪಾರ್ಲಿಮೆಂಟನಲ್ಲಿ ಬಹುಮತದಿಂದ ಈ
ಲ್ಲು ಪಾಸಾಯಿತು. ಆದರೆ ಅದಕ್ಕೆ ಇಂಡಿಯಾ ಸರಕಾರದವರು
ಮ್ಮತಿಸಲಿಲ್ಲಾದ್ದರಿಂದ ಆದು ಅಮಲಿನಲ್ಲಿ ಬರಲಿಲ್ಲ.

ಹಿಂದುಸ್ಥಾನದ ನಿಜಸ್ಥಿತಿಯ ಸಂಬಂಧದ ಮಾಹಿತಿಯು ಇಂ
ಂಡದ ಜನರಿಗೆ ಇರುವ ಸಂಭವವು ಕಡಿಮೆ ಇರುವದೆಂಬದನ್ನು
ನಗಂಡು ಇವರು "ಲಂಡನ್ ಇಂಡಿಯನ್ ಸೊಸಾಯಿಟಿ" "ಈಸ್ಟ
ಂಡಿಯಾ ಅಸೋಸಿಏಶನ್" ಮುಂತಾದ ಎಷ್ಟೋ ಸಂಸ್ಥೆಗಳನ್ನು ಇಂ
ಂಡದಲ್ಲಿ ಸ್ಥಾಪಿಸಿ, ಅವುಗಳ ಮುಖಾಂತರ ಇಲ್ಲಿಯ ಸ್ಥಿತಿಯನು

ಇಂಗ್ಲಂಡದ ಪ್ರಮುಖ ಜನರಿಗೆ ಗೊತ್ತು ಮಾಡಿಕೊಟ್ಟರು. ಇ
ತಮ್ಮ ಉದ್ಯೋಗಕ್ಕೆ ವಿಶೇಷ ಆಡಂಬರದ ಸ್ವರೂಪವನ್ನು ಎಂ
ಕೊಡಲಿಲ್ಲ. ಸಮಾಧಾನದಿಂದ ಕಾಯಿದೆಗೆ ಅನುಸರಿಸಿ ತಿಳಿಸಬಹುದ
ಸಂಗತಿಗಳನ್ನು ಅಲ್ಲಿಯ ಜನರ ಮುಂದೆ ಇಡಲಿಕ್ಕೆ ಪ್ರಯತ್ನ ಮ
ದರು. ಅಲ್ಲಿ ಸ್ಥಾಪಿಸಿದ ಸಂಸ್ಥೆಗಳಲ್ಲಿ ಅಲ್ಲಿಯ ಜನರಿಂದಲೇ ನಿಬ
ಗಳನ್ನು ಬರೆಯಿಸಿ ಓದಿಸುವದು, ಸ್ವತಃ ಪ್ರವಾಸ ಮಾಡಿ ದೇಶದ
ಗೆಲ್ಲ ಹಿಂದುಸ್ಥಾನದ ನಿಜಸ್ಥಿತಿಯ ಬಗ್ಗೆ ವಾಖ್ಯಾನಗಳನ್ನು ಕೊ
ವದು, ವರ್ತಮಾನ ಪತ್ರಗಳಲ್ಲಿ ಲೇಖಗಳನ್ನು ಬರೆಯುವದು ಇ
ಮುಂತಾದ ಪ್ರಯತ್ನಗಳಿಂದ ಇಂಗ್ಲಂಡದ ಜನರು ಹಿಂದುಸ್ಥಾ
ಸ್ಥಿತಿಯ ಬಗ್ಗೆ ಹೆಚ್ಚು ಲಕ್ಷಕೊಡುವಂತೆ ಮಾಡಿದರು. ಈ ಮೇ
೧೫ ವರ್ಷಗಳವರೆಗೆ ಎಡೆಬಿಡದೆ ನಡಿಸಿದ ಪ್ರಯತ್ನಗಳಿಂದ ಅಲ್ಲಿ
ಪ್ರಮುಖ ಮಂಡಳಿಯಲ್ಲಿ ಜಾಗ್ರತೆಯುಂಟಾಗಿ, ಹಿಂದುಸ್ಥಾನದ
ಸ್ಥಿತಿಯ ವಿಚಾರ ಮಾಡುವ ಕುರಿತು ಒಂದು ಕಮೀಟಿಯು ನಿಯ
ಸಲ್ಪಟ್ಟಿತು. ಇಪ್ಪತ್ತು ಮಾಡಿ ದಾದಾಭಾಯಿಯವರು ಮರಳಿ ಸ್ವದೇಶ
ತೆರಳಿದರು. ಇವರು ಮುಂಬಯಿಗೆ ಬಂದಾಗ ಅಲ್ಲಿಯ ನಾಗರಿಕ
ಇವರಿಗೆ ಅತ್ಯಪೂರ್ವವಾದ ಸನ್ಮಾನವನ್ನು ಮಾಡಿದರು.

ಈ ಮೊದಲು ಹೇಳಿದಂತೆ ಹಿಂದುಸ್ಥಾನದ ಸ್ಥಿತಿಯ ವಿಚಾರಣೆ
ಬಗ್ಗೆ ನಿಯಮಿಸಲ್ಪಟ್ಟ "ಫಾಸೆಟ್ ಕಮಿಟಿ"ಯ ಮುಂದೆ ಸಾಕ್ಷಿಯ
ಕೊಡುವಾಗ ದಾದಾಭಾಯಿಯವರು ಇಲ್ಲಿಯ ಪ್ರತಿಯೊಬ್ಬ ಮ
ಷ್ಯನ ವಾರ್ಷಿಕ ಉತ್ಪನ್ನದ ಸರಾಸರಿಯು ೨೦ ರೂ. ಇರುತ್ತದೆ
ಸಪ್ರಮಾಣವಾಗಿ ಸಿದ್ಧಮಾಡಿ ತೋರಿಸಿದರು. ಕಮಿಟಿಯವರಾದ
ಇದಕ್ಕೆ ಒಪ್ಪಿಕೊಂಡರು. ಇದೇ ಕಾಲಕ್ಕೆ ಇವರು "ಹಿಂದುಸ್ಥಾ
ದಾರಿದ್ರ್ಯ" "ಹಿಂದುಸ್ಥಾನದ ಸ್ಥಿತಿ" ಎಂಬೆರಡು ಪುಸ್ತಕಗಳನ್ನು
ದರು. ಯಾವದೇ ವಿಷಯವನ್ನು ತೆಗೆದುಕೊಳ್ಳಲಿ, ಅದರಲ್ಲಿ
ಬೇಕಾದ ಆಕ್ಷೇಪಗಳಿಗೆ ಸಕಾರಣವಾದ ಉತ್ತರಗಳನ್ನು ಮೊದ
ತಯಾರ ಮಾಡಿ ಇಟ್ಟುಕೊಳ್ಳುವದೊಂದು ಇವರ ಸ್ವಭಾವದ ವಿಶೆ
ಗುಣವಾಗಿತ್ತು. ಇವರ ಈ ಗುಣವು ವಿಶೇಷ ಅನುಕರಣೀಯವಾದ

ಪೂರ್ಣ ವಿಚಾರ ಮಾಡದೆ ಬರೆದ ಒಂದು ವಾಕ್ಯವಾದರೂ ಇವರ ಪುಸ್ತಕ
ಲ್ಲಿ ದೊರೆಯಲಿಕ್ಕಿಲ್ಲ." ಎಂದು ನ್ಯಾಯಮೂರ್ತಿ ರಾನಡೆ ಯವರು
ಉದ್ಗಾರಗಳನ್ನು ತೆಗೆದಿರುವರು. ಎಂದ ಮೇಲೆ ದಾದಾಭಾಯಿಯವರ
ಪುಸ್ತಕದ ಮಹತ್ವದ ಬಗ್ಗೆಯೂ ಅವರ ವ್ಯಾಸಂಗದ ಬಗ್ಗೆಯೂ ಬೇರೆ
ಹೇಳುವ ಕಾರಣವಿಲ್ಲ.

ಸನ್ ೧೮೪೭ರಲ್ಲಿ ಇವರು ಬಡೋದೆಯ ದಿವಾನರಾದರು. ಕರ್ನಲ
ಫೇರಿ ಎಂಬವರು ಆಕಾಲಕ್ಕೆ ಬಡೋದೆಯ ರೆಸಿಡೆಂಟರಿದ್ದರು. ರೆಸಿ
ಡೆಂಟರ ಪ್ರತಿಕೂಲತೆಯಿದ್ದರೂ ಎರಡೇ ವರ್ಷಗಳಲ್ಲಿ ಸಂಸ್ಥಾನದೊ
ಳಿನ ಅವ್ಯವಸ್ಥೆಗಳನ್ನೆಲ್ಲ ಮುರಿದು ರೂಪಕ್ಕೆ ತಂದರು. ಮುಂದೆ
ಎರಡು ವರ್ಷಗಳನಂತರ ಆ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು
೧೦ ವರ್ಷ ಮುಂಬಯಿಯಲ್ಲಿಯೇ ಇದ್ದರು. ಈ ಕಾಲಕ್ಕೆ ಮುಂಬ
ಯಿಯ ಮ್ಯುನಿಸಿಪಾಲಿಟಿಯಲ್ಲಿ ಸೇರಿ ಅನೇಕ ಸುಧಾರಣೆಗಳನ್ನು
ಮಾಡಿದ್ದರಿಂದ, ಈ ಇಲಾಖೆಯ ಆಗಿನ ಗವರ್ನರರಾದ ಲಾರ್ಡ್ ರೇ
ಯರಿಗಳು ಇವರನ್ನು ಕಾಯಿದೆ ಕೌನ್ಸಿಲದ ಸಭಾಸದರನ್ನಾಗಿ ಮಾಡಿ
ಕೊಂಡರು. ಸನ್ ೧೮೮೫ರಲ್ಲಿ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಸಭೆಯು
ಸ್ಥಾಪನೆಯಾಯಿತು ಇದನ್ನು ಸ್ಥಾಪಿಸಲು ಪ್ರಯತ್ನಪಟ್ಟ ಪ್ರಮುಖ
ರಸ್ತರಲ್ಲಿ ಇವರೊಬ್ಬರಾಗಿರುವರು. ರಾಷ್ಟ್ರೀಯ ಸಭೆಯ ಮೊದಲ
ಯು ಅಧಿವೇಶನವಾದನಂತರ ಇವರು ಮತ್ತೆ ಇಂಗ್ಲಂಡಕ್ಕೆ ಹೋದರು.
ಗ್ಗೆ ತಾವು ಪಾರ್ಲಿಮೆಂಟನಲ್ಲಿ ಮೆಂಬರರಾಗಿ ಆರಿಸಿ ಬರುವ
ಗ್ಗೆ ಯತ್ನಮಾಡಿದರು; ಆದರೆ ಯಶಸ್ಸು ಬರಲಿಲ್ಲ. ಆದರೂ ಅವರು
ಪ್ಪಟಕ್ಕೇ ಅಧೀರರಾಗಲಿಲ್ಲ. ಪಾರ್ಲಿಮೆಂಟನಲ್ಲಿ ಪ್ರವೇಶಿಸಿ ಹಿಂದು
ಸ್ಥಾನದ ಹಿತವನ್ನು ಸಾಧಿಸುವದು ಶ್ರಮಸಾಧ್ಯವಾದ ಮಾತಿದ್ದರೂ
ತ್ಯವಶ್ಯವಾದದ್ದೆಂದು ತಿಳಿದು ತನ್ಮ ಪ್ರಯತ್ನವನ್ನು ಯಥಾ
ಪ್ರಕಾರ ನಡಿಸಿದರು; ಕಡೆಗೆ ಯಶಸ್ವಿಗಳಾಗಿ ಸನ್ ೧೮೯೨ರಲ್ಲಿ ಅವರು
ಪಾರ್ಲಿಮೆಂಟನ ಸಭಾಸದರಾಗಿ ಆರಿಸಲ್ಪಟ್ಟರು. ಇವರು ಮೂರು ವರ್ಷ
ಪಾರ್ಲಿಮೆಂಟನಲ್ಲಿ ಮಾಡಿದ ಪ್ರಯತ್ನಗಳಿಂದ ಹಿಂದುಸ್ಥಾನಕ್ಕೆ ಬಹಳೇ
ಲಾಭವಾಗಿದೆ. ಇವರ ಪ್ರಯತ್ನದಿಂದ "ಇಂಡಿಯಾ ಪಾರ್ಲಿಮೆಂಟರಿ

ಕವಿಸಾಟ" ಎಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟಿದ್ದಲ್ಲದೆ ಇಂಗ್ಲಂಡದಲ್ಲಿ "ಇಂಡಿಯಾ" ಎಂಬ ವೃತ್ತಪತ್ರವೂ "ಈಸ್ಟ ಇಂಡಿಯಾ ಅಸೋಸಿಏಶನ್" ಎಂಬ ಸಂಸ್ಥೆಯೂ ಅಸ್ತಿತ್ವದಲ್ಲಿ ಬಂದವು. ಪಾರ್ಲಿಮೆಂಟಿನಲ್ಲಿ ಹಿಂದೀ ಜನರ ಪ್ರವೇಶವಾದ ಮೊದಲನೇ ಉದಾಹರಣೆಯಂದರೆ ಇದೇ. ಸನ್ ೧೮೯೩ನೇ ಇಸವಿಯ ಅಗಸ್ಟ ತಿಂಗಳ ೯ನೇ ತಾರೀಖಿನ ದಿವಸ ಪಾರ್ಲಿಮೆಂಟಿನಲ್ಲಾದ ಇವರ ಪ್ರಥಮ ಭಾಷಣವು ಸಂಸ್ಮರಣೀಯವೂ ಚಿಂತನೀಯವೂ ಆಗಿದೆ. ಆ ಭಾಷಣವು ಪಾರ್ಲಿಮೆಂಟಿನ ಸಭಾಸದರ ಮನಸಿನ ಮೇಲೆ ಒಳ್ಳೇ ಪರಿಣಾಮವನ್ನುಂಟು ಮಾಡಿತು.

ರಾಷ್ಟ್ರೀಯ ಸಭೆಯ ಅಧ್ಯಕ್ಷಪದವು ಸಾಮಾನ್ಯ ಜನರಿಗೆ ದೊರೆಯುವಂಥದಲ್ಲ. ಹಿಂದುಸ್ಥಾನದೊಳಗಿನ ಜನರಿಗೆ ದೊರೆಯಬಹುದಾದ ಶ್ರೇಷ್ಠತಮ ಮುನ್ಸಿಪಾಲಿಟಿಯ ಪದವೆಂದರೆ ಇದೇ. ಈ ಮಾನವು ದಾದಾಭಾಯಿಯವರಿಗೆ ಮೂರು ಬಾರಿ ದೊರೆತಿರುವದು. ಸನ್ ೧೮೮೫ನೇ ಇಸವಿಯಲ್ಲಿ ಕಲಕತ್ತೆಯಲ್ಲಿ ಕೂಡಿದ ರಾಷ್ಟ್ರೀಯ ಸಭೆಯ ಅಧ್ಯಕ್ಷಪದವು ದೊರೆತದ್ದು ಎಲ್ಲಕ್ಕೂ ಮೊದಲನೇದು. ಮುಂದೆ ಎರಡನೇ ಬಹುಮಾನವು ಸನ್ ೧೮೯ೣರಲ್ಲಿ ಕೂಡಿದ ಲಾಹೋರದ ಕಾಂಗ್ರೆಸದಲ್ಲಿ ದೊರೆಯಿತು. ಈ ಕಾಲಕ್ಕೆ ಅಲ್ಲಿ ಒಬ್ಬ ಬಾದಶಹನಿಗೆ ಸಲಾಗಲಾರದಷ್ಟು ಬಹುಮಾನವು ಇವರಿಗಾಯಿತು. ಒಬ್ಬನೇ ಒಬ್ಬನಾದ ಚಿರಂಜೀವನು ತೀರಿಕೊಂಡ ಈ ಸಮಯದಲ್ಲಿ ೬೮ ವರ್ಷ ವಯಸ್ಸಿನವರಾದ ಈ ಮಹನೀಯರು ದೇಶಹಿತದ ಸಲುವಾಗಿ, ಉಳಿಯಾವತ್ತೂ ವಿಚಾರಗಳನ್ನು ಬದಿಗಿಟ್ಟು, ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿ ಉತ್ತಮರೀತಿಯಿಂದ ಕೆಲಸ ಸಾಗಿಸಿದ್ದಕ್ಕಾಗಿ "ಲಂಡನ್ ಟಾಯಿಮ್ಸ್" ಪತ್ರವು ಸಹ ಇವರ ಅಭಿನಂದನವನ್ನು ಮಾಡಿರುತ್ತದೆ. ಇದರಿಂದ ಇವರಲ್ಲಿರುವ ನಿಃಸ್ವಾರ್ಥಬುದ್ಧಿಯೂ ಲೋಕಹಿತತತ್ಪರತೆಯೂ ಚನ್ನಾಗಿ ವ್ಯಕ್ತವಾಗುವವು. ತರುವಾಯ ದೊರೆತ ಕಾಂಗ್ರೆಸದ ಅಧ್ಯಕ್ಷ ಪದ ಬಹುಮಾನವೆಂದರೆ ಸನ್ ೧೯೦೬ರಲ್ಲಿ ಮತ್ತೆ ಕಲಕತ್ತೆಯಲ್ಲಿ ದೊರೆತದ್ದು.

ಹಿಂದುಸ್ಥಾನದ ರಾಜ್ಯಕಾರಭಾರದ ವಿಚಾರವನ್ನು ಮಾಡುವ ಬಗ್ಗೆ ಸನ್ ೧೯೦೬ ರಲ್ಲಿ 'ರಾಯಲ್ ಕಮಿಶನ್' ಎಂಬ ಕಮಿಟಿಯು ನಿಯಮಿಸಲ್ಪಟ್ಟಿತು. ಅದರಲ್ಲಿ ಇವರೂ ಮೆಂಬರರಾಗಿದ್ದರು. ಆದರ ಮುಂದೆ ಕೊಟ್ಟ ಸಾಕ್ಷಿಯಲ್ಲಿ ದಾದಾ ಭಾಯಿಯವರು ಹಿಂದುಸ್ಥಾನದ ಏಳಿಗೆಯ ಬಗ್ಗೆ ಎಷ್ಟೋ ಸಂಗತಿಗಳನ್ನು ಸಾಧಾರವಾಗಿ ಸೂಚಿಸಿದರು.

ಸನ್ ೧೯೦೬ ರಲ್ಲಿ "ಅಮೃತೆರ್ದಮ" ದಲ್ಲಿ ಆದ ಡೆಮಾಕ್ರಟ್ಸ್ ಕಾಂಗ್ರೆಸದಲ್ಲಿ ಮಾಡಿದ ಇವರ ಭಾಷಣದಿಂದ ಅಲ್ಲಿ ಇದ್ದ ಮಂಡಳಿಯ ಮನಸಿನ ಮೇಲೆ ಒಳ್ಳೇ ಪರಿಣಾಮವಾಯಿತು. ೮೦ ವರ್ಷ ವಯಸ್ಸಿನಲ್ಲಿ ಇಷ್ಟು ಉತ್ಸಾಹವಿದ್ದದ್ದನ್ನು ಕಂಡು ಎಲ್ಲರಿಗೂ ಆಶ್ಚರ್ಯವಾಯಿತು. ಕಳೆದ ಹತ್ತು ವರ್ಷಗಳಲ್ಲಿ ಮಾತ್ರ ಅತಿ ವೃದ್ಧಾಪ್ಯದ ಮೂಲಕ ಅವರಿಂದ ಉಪದೇಶದ ಹೊರತು ಬೇರೆ ಯಾವ ಕೆಲಸವೂ ಆಗಲಿಲ್ಲ. ಈಗೆರಡು ವರ್ಷಗಳ ಹಿಂದೆ ಮುಂಬಯಿಯ ಯುನಿವರ್ಸಿಟಿಯವರು ಇವರಿಗೆ ಎಲ್.ಎಲ್.ಡಿ. ಎಂಬ ಬಹುಮಾನದ ಪದವಿಯನ್ನು ಕೊಡುವಾಗ ಮಾತ್ರ ಹೊರಗೆ ಬಂದಿದ್ದರು.

ಸಾರಾಂಶ:—ಇವರು ಯಾವದೇ ಕೆಲಸವನ್ನು ಕೈಕೊಳ್ಳಲಿ, ಅದು ಉತ್ಕೃಷ್ಟ ರೀತಿಯಿಂದ ಕೊನೆಗಾಣುವ ಬಗ್ಗೆ ಸತತ ಪ್ರಯತ್ನವನ್ನು ಮಾಡುತ್ತಿದ್ದರು. ನಾ. ಗೋಖಲೆಯವರು ಒಂದು ಸಾರ್ವಜನಿಕ ಸಭೆಯಲ್ಲಿ ಹೇಳಿದಂತೆ — ಹಿಂದುಸ್ಥಾನದಲ್ಲಿಯೇ ಯಾಕೆ, ಜಗತ್ತಿನೊಳಗಿನ ಅತ್ಯಂತ ಪ್ರಮುಖ ಗೃಹಸ್ಥರಲ್ಲಿ ಇವರೊಬ್ಬರಾಗಿದ್ದಾರೆ ಹಿಂದುಸ್ಥಾನದೊಳಗಿನ ಇವರ ದೇಶ ಬಾಂಧವರು ಇವರಿಗೆ "ಮಹರ್ಷಿ" ದಾದಾಭಾಯಿ" ಎಂದು ಕರೆಯುತ್ತಾರೆ. ಅದಕ್ಕೆ ಅವರು ಎಲ್ಲರೀತಿಯಿಂದಲೂ ಪಾತ್ರರಿದ್ದರು. ಅವರ ನಿಃಸ್ವಾರ್ಥತೆ, ಅಕೃತ್ರಿಮ ದೇಶಭಕ್ತಿ, ಅವಿರತ ಪರಿಶ್ರಮ, ಅಚಲರಾಜನಿಷ್ಠೆ ಈ ಗುಣಗಳು ತರುಣಜನರಿಗೆ ನಿಃಸಂಶಯವಾಗಿ ಅನುಕರಣೀಯವಾಗಿವೆ. 'ಅರ್ಧಶತಕದವರೆಗೆ ಮಾಡಿದ ತಮ್ಮ ದೇಶಸೇವೆಯು ವ್ಯರ್ಥ ಹೋಗಲಿಲ್ಲ, ಎಂಬ ವಿಚಾರದಿಂದ ದಾದಾಭಾಯಿಯವರ ಆತ್ಮಕ್ಕೆ ಆನಂದವಾಗುವದೆಂಬದರಲ್ಲಿ ಏನೂ ಸಂದೇಹವಿಲ್ಲ.

ಅಂದಾಜು ಪತ್ರಿಕೆ.

ಹಿಂದೆ ಫೆಬ್ರುವರಿ ತಿಂಗಳ ಶಾಲಾಪತ್ರಿಕದಲ್ಲಿ ಸೂಚಿಸಿದಂತೆ ಅಂದಾಜು ಪತ್ರಿಕೆಗಳಿಲ್ಲದೆ ಶಾಲೆಯಲ್ಲಿ ವಿಷಯ ಸಾಗಿಸುವದು ಎಷ್ಟು ಮಾತ್ರವೂ ಸರಿಯಲ್ಲ. ಯಾವದೊಂದು ವಿಷಯವು ಒಂದು ವಾರದಲ್ಲಿ ಎಷ್ಟು ತಾಸು ಇದ್ದೀತು, ಅದರಲ್ಲಿ ಕಲಿಸುವ ತಾಸುಗ ಳೆಷ್ಟು? ರೂಢೀ ಮಾಡಿಸುವ ತಾಸುಗಳೆಷ್ಟು? ಮೊದಲು ಕಲಿಸುವ ಪಾಠಕ್ಕೂ ಅದರ ಮುಂದೆ ಕಲಿಸಬೇಕಾದ ಪಾಠಕ್ಕೂ ಯಾವ ತರದ ಸಂಬಂಧವಿದೆ? ಇವೇ ಮುಂತಾದ ಸಂಗತಿಗಳ ಬಗ್ಗೆ ಚನ್ನಾಗಿ ಪರಿತೀ ಲಿಸಿ ಅಂದಾಜು ಪತ್ರಿಕೆಗಳನ್ನು ತಯಾರಿಸಬೇಕು. ಉದಾಹರಣಾ ರ್ಥವಾಗಿ ಸೂಟ ಮುಂತಾದ್ದು ಹೋಗಿ ೪ ತಿಂಗಳು ಶಾಲೆಯ ಕೆಲ ಸವು ನಡೆಯುತ್ತದೆಂತಲೂ, ಯಾವದೊಂದು ಇಯತ್ತೆಗೆ ಗಣಿತ ವಿಷ ಯವು ವಾರದಲ್ಲಿ ೫ ತಾಸಿನಂತೆ ಇದ್ದು ಒಟ್ಟೆಗೆ ೧೬೦ ತಾಸುಗಳ ವರೆಗೆ ನಡೆಯುತ್ತದೆಂತಲೂ ತಿಳಿದರೆ, ಅವುಗಳಲ್ಲಿ ೬೦ ತಾಸುಗಳನ್ನು ಕಲಿ ಸುವ ತಾಸುಗಳಾಗಿಟ್ಟುಕೊಂಡು ಉಳಿದವುಗಳನ್ನು ರೂಢಿಗಾಗಿ ಇಟ್ಟು ಕೊಳ್ಳಬಹುದು. ಆ ಇಯತ್ತೆಗೆ ಇರತಕ್ಕ ವಿಷಯವನ್ನು ೬೦ ಪಾಠ ಗಳಾಗಿ ಹ್ಯಾಗೆ ವಿಭಾಗಿಸಬಹುದು; ಪಾಠಗಳಲಿರುವ ಸಂಬಂಧವನ್ನು ಯಾವ ರೀತಿಯಿಂದ ಕಾಯ್ದುಕೊಳ್ಳಬಹುದು ಈ ಮುಂತಾದ್ದರ ಬಗ್ಗೆ ಚನ್ನಾಗಿ ವಿಚಾರ ಮಾಡಬೇಕಾಗುತ್ತದೆ. ಇದುವರೆಗೆ ಹೇಳಿದ ದೃಷ್ಟಿ ಯಿಂದ ಬಾಲಕರ ಇಯತ್ತೆಯಿಂದ ಏಳನೆಯ ಇಯತ್ತೆಯವರೆಗೆ ಯಾವತ್ತೂ ವಿಷಯಗಳ ಅಂದಾಜು ಪತ್ರಿಕೆಗಳನ್ನು ತಯಾರಿಸಿ ಇದರ ಕೆಳಗೆ ಕೊಡುತ್ತೇವೆ. ವರ್ಷದಲ್ಲಿ ಕಲಿಸಬಹುದಾದ ಪ್ರತಿಯೊಂದು ವಿಷಯದ ಪಾಠಗಳನ್ನು ಮಾತ್ರ ಕ್ರಮವಾಗಿ ಇಲ್ಲಿ ಕೊಡುವೆವಲ್ಲದೆ ಆವರ್ತನೆಗಾಗಿ ಇಟ್ಟುಕೊಂಡ ತಾಸುಗಳನ್ನು ಇಲ್ಲಿ ಸೇರಿಸಿಲ್ಲ. ಅವು ಗಳನ್ನು ಶಿಕ್ಷಕರು ತಮ್ಮ ಅನುಕೂಲತೆಯಂತೆ ಸೇರಿಸಿಕೊಳ್ಳಬಹುದು. ಇವುಗಳಲ್ಲಿ ಏನಾದರೂ ಸಂಶಯ ಬಂದರೆ ಉತ್ಸಾಹವುಳ್ಳ ಶಿಕ್ಷಕರು ಕೇಳಿ ತಿಳಿದುಕೊಳ್ಳಬಹುದು; ಅಥವಾ ಮುತ್ತೆ ಏನಾದರೂ ಹೆಚ್ಚು ಕಡಿಮೆ ಮಾಡಬಹುದೆಂದು ತೋಚಿದರೆ ಅದರಂತೆ ಬರೆದು ತಿಳಿಸಬಹುದು.

(ಮುಂದೆ ಸಾಗುವದು.)

ಶಾಸ್ತ್ರೀಯ ಪ್ರಯೋಗಗಳು.

(ಜೂನ ತಿಂಗಳಿನಿಂದ ಮುಂದೆ ಸಾಗಿದ್ದು.)

ಪ್ರಯೋಗ ೪.

ಹೈಡ್ರೋಜನ್ ಮತ್ತು ಆಕ್ಸಿಜನ್ ವಾಯುಗಳನ್ನು ೨:೧ ಪ್ರಮಾಣದಿಂದ ಒಂದು ಪಾತ್ರೆಯಲ್ಲಿ ಬೆರೆಸಿ ಆ ಮಿಶ್ರಣವನ್ನು ಬೇಕಾದಾಗ ಒಂದು ಕೊಳವೆಯ ಮಾರ್ಗದಿಂದ ಹೊರಗೆ ತೆಗೆಯಲಿಕ್ಕೆ ಬರುವಂತೆ ವ್ಯವಸ್ಥೆ ಮಾಡತಕ್ಕದ್ದು. ನಂತರ ಕೈಯಲ್ಲಿ ತುಸು ಸಬಕಾರದ ನೀರನ್ನು ತೆಗೆದುಕೊಂಡು ಅದರಲ್ಲಿ ಹೈಡ್ರೋಜನ್ ಮತ್ತು ಆಕ್ಸಿಜನಗಳ ಮಿಶ್ರಣವು ಹೊರಟು ಬರುವ ಕೊಳವೆಯನ್ನು ಎದ್ದಬೇಕು. ಸ್ವಲ್ಪ ಹೊತ್ತಿನಲ್ಲಿ ಕೈತುಂಬ ಗುಳ್ಳೆಗಳುಂಟಾಗುತ್ತವೆ. ನಂತರ ಆ ಕೊಳವೆಯನ್ನು ಬದಿಗಿಟ್ಟು ದೂರ ಸರಿದು ಗುಳ್ಳೆಗಳಿಗೆ ಒಂದು ಕಡ್ಡಿಯನ್ನು ಕೊರೆದು ಹಚ್ಚಿದರೆ "ಢಮಲ್" ಎಂತ ಸಪ್ಪಳವನ್ನುಂಟು ಮಾಡಿ ಮಿಶ್ರಣವು ಹಾರುತ್ತದೆ. ಅದರೂ ಕೈಗೆ ಏನೊಂದು ಅಪಾಯವುಂಟಾಗುವದಿಲ್ಲ.

ಪ್ರಯೋಗ ೫.

ತಿಳುವಾದ ರಬ್ಬರದ ಚೀಲದಲ್ಲಿ ಹೈಡ್ರೋಜನವನ್ನು ತುಂಬಿಬಿಟ್ಟರೆ ಅದು ಮೇಲಕ್ಕೆ ಹಾರಿ ಹೋಗುವ ಸಂಗತಿಯು ಎಲ್ಲರಿಗೂ ಗೊತ್ತಿರಬಹುದು. ಇದೇ ಪ್ರಯೋಗದಲ್ಲಿ ವಿನೋದಕ್ಕಾಗಿ ಕೆಳಗೆ ಹೇಳಿದಂತೆ ಮಾಡಬಹುದು. ಚೀಲದಲ್ಲಿ ಪೂರ್ಣವಾಗಿ ಹೈಡ್ರೋಜನವನ್ನು ತುಂಬುವ'ಬದಲು ಹೈಡ್ರೋಜನ್ ಮತ್ತು ಆಕ್ಸಿಜನಗಳ ಮಿಶ್ರಣವನ್ನು ತುಂಬಿದರೆ ಅದು ಒಮ್ಮಿಂದೊಮ್ಮೆಯೇ ಹಾರಿ ಹೋಗದೆ ಸಾವಕಾಶವಾಗಿ ಏರುವದರಿಂದ ಅದನ್ನು ನಿರೀಕ್ಷಿಸಲಿಕ್ಕೆ ನಮಗೆ ಅವಕಾಶವು ದೊರೆಯುತ್ತದೆ. ಈ ವಾಯುಗಳ ಪ್ರಮಾಣವು ಸರಾಸರಿ ೨ : ೧

---

* ಈ ಮಿಶ್ರಣವು ಭಯಂಕರವಾಗಿ ಹಾರುವಂಥಾದ್ದಿರುವದರಿಂದ ಅದರ ಸಮೀಪಕ್ಕೆ ಉರಿಯನ್ನು ತರಬಾರದು.

ರಂತೆ ಇದ್ದರೆ ಒಳ್ಳೇದು. ಸ್ಪ್ಲಾಟಚ್ ಕಾಟನ್‌ವನ್ನೂ ಫಟಾಕಿಯ ಬತ್ತಿಯನ್ನೂ ಕಟ್ಟಿ ಬತ್ತಿಯ ಎರಡನೇ ತುದಿಗೆ ಉರಿ ಹಚ್ಚಿ ಬಿಟ್ಟರೆ ಅದು ಕೆಲವು ಎತ್ತರ ಹೋದನಂತರ ಜೇಲದೊಳಗಿನ ಮಿಶ್ರಣಕ್ಕೆ ಉರಿ ಹತ್ತಿ ದೊಡ್ಡ ಸಪ್ಪಳದಿಂದ ಹಾರುತ್ತದೆ.

ಟಚ್ ಕಾಟನ್‌ವನ್ನು ಈ ಪ್ರಕಾರ ಮಾಡಬಹುದು. ೧ ತೊಲಿ ಸೋರುಪ್ಪನ್ನು ೬ ತೊಲಿ ನೀರಿನಲ್ಲಿ ಕರಗಿಸಿ * ಉಂಟಾದ ಸೊಲ್ಯೂಶನ್‌ದಲ್ಲಿ ಸ್ವಚ್ಛವಾದ ಅರಳೆಯನ್ನು ಎದ್ದಿ ಹಾಗೆಯೇ ಬಿಸಿಲಲ್ಲಿ ಚನ್ನಾಗಿ ಒಣಗಿಸತಕ್ಕದ್ದು. ಅಂದರೆ ಟಚ್ ಕಾಟನ್ನವು ತಯಾರಾಗುವದು. ಅರಳೆಯ ಬದಲು ಸ್ವಚ್ಛವಾದ ದಾರವನ್ನು ಎದ್ದಿದರೆ ಫಟಾಕಿಯ ಬತ್ತಿಯು ತಯಾರಾಗುವದು.

ಪ್ರಯೋಗ ೬.

ಒಂದು ಸಣ್ಣ ಕಾರಂಜಿಯನ್ನು ಏರ್ಪಡಿಸಿ ಅದರ ಮೇಲೆ ಒಂದು ಪಿಂಗ್ ಪಾಂಗ್ ಚಂಡನ್ನು ಇಟ್ಟರೆ ಅದು ಕಾರಂಜಿಯ ತುದಿಗೆ ಹೋಗಿ ಅಲ್ಲಿ ಸಾಪೇಕ್ಷವಾಗಿ ತನ್ನ ವೈಸುತ್ತಲು ತಿರುಗುವದು. ಪಿಂಗ್ ಪಾಂಗ್ ಚಂಡಿನ ಬದಲು ಬೇರೆ ತರದ ಹಗುರಾದ ಮತ್ತು ನುಣುಪಾದ ಚಂಡುಗಳನ್ನು ಉಪಯೋಗಿಸಬಹುದು. ಚಂಡು ಹೆಚ್ಚು ಹೆಚ್ಚು ಜಡವಿದ್ದಂತೆ ಕಾರಂಜಿಯು ಹೆಚ್ಚು ಹೆಚ್ಚು ಎತ್ತರವಾಗಿ ಪುಟಿಯುವಂಥಾದ್ದಿರಲಿಕ್ಕೆಬೇಕು. ಕಾರಂಜಿಯ ಶಕ್ತಿಯು ಹೆಚ್ಚಿದ್ದರೆ ರಬ್ಬರದ ಚಂಡುಗಳನ್ನು ಸಹ ನಿಲ್ಲಿಸಬಹುದು.

ನೀರಿನ ಕಾರಂಜಿಯನ್ನು ಉಪಯೋಗಿಸುವ ಬದಲು ತಿದಿಯ ಸಹಾಯದಿಂದ ಹವೆಯ ಕಾರಂಜಿಯನ್ನು ತಯಾರಿಸಿ ಅದರ ಮೇಲೆ ಸಹ ಇದೇ ಪ್ರಯೋಗವನ್ನು ಮಾಡಬಹುದು.

ಪ್ರಯೋಗ ೭.

ಒಂದು ಕಡ್ಡಿಯಷ್ಟು ದೊಡ್ಡ ಹಳದೀ ಬಣ್ಣದ ಫಾಸ್ಫರಸದ ತುಂಡನ್ನು ಕಾರ್ಬನ್ ಡಾಯ್‌ಸಲ್ಫ್ಯಾಯ್ಡದಲ್ಲಿ ಹಾಕಿ ಸ್ವಲ್ಪ ಅಗಲಾ

* ಬಿಸಿ ನೀರನ್ನು ಉಪಯೋಗಿಸಿದರೆ ಸೋರುಪ್ಪು ಸುಲಭವಾಗಿ ಕರಗುವದು.

ಡಿಸಿದರೆ ಅದು ಆ ಪ್ರವಾಹಿಯಲ್ಲಿ ಕರಗುತ್ತದೆ. ಈ ಮಿಶ್ರಣದಲ್ಲಿ ಒಂದು ಸಣ್ಣ ಕಾಗದದ ಅಥವಾ ಅರಿವೆಯ ತುಂಡನ್ನು ಎದ್ದಿ ದೂರ ದಲ್ಲಿಟ್ಟರೆ ಸ್ವಲ್ಪ ಹೊತ್ತಿನಲ್ಲಿಯೇ ಅದು ತನ್ನಿಂದ ತಾನೇ ಉರಿಯಲಿಕ್ಕೆ ಸುರುವಾಗುತ್ತದೆ. ಯಾಕಂದರೆ ಕಾರ್ಬನ್ ಡಾಯ್‌ಸಲ್ಫ್ಯಾಯ್ಡವು ತೀವ್ರ ವಾಗಿ ಉಗಿಯರೂಪಕ್ಕೆ ಹೋಗುವದರಿಂದ ಫಾಸ್ಫರಸದ ಅತಿಸೂಕ್ಷ್ಮ ವಾದ ಕಣಗಳು ಮಾತ್ರ ಅರಿವೆಯ ತುಂಡಿನ ಮೇಲೆ ಉಳಿಯುತ್ತವೆ. ಈ ಕಣಗಳಿಗೆ ಈಗ ಹವೆಯ ಸಂಪರ್ಕವು ಚನ್ನಾಗಿ ಆಗುವದರಿಂದ ರಸಾಯನ ವ್ಯಾಪಾರವು ಒತ್ತರದಿಂದ ನಡೆದು ಉರಿಯು ಕಂಡು ಬರುತ್ತದೆ.

ಎಚ್ಚರ:— ಕಾರ್ಬನ್ ಡಾಯ್‌ಸಲ್ಫ್ಯಾಯ್ಡವು ಅತಿ ದುರ್ಗಂಧ ವಳ್ಳದ್ದೂ ತೀವ್ರವಾಗಿ ಉಗಿಯ ರೂಪಕ್ಕೆ ಹೋಗುವಂಥಾದ್ದೂ ತೀವ್ರ ಜ್ವಾಲಾಗ್ರಾಹಿಯೂ ಇರುವದರಿಂದ ಅದನ್ನು ಇಟ್ಟ ಪಾತ್ರೆಯ ಬಾಯನ್ನು ಗಟ್ಟಿಯಾಗಿ ಮುಚ್ಚಿಡತಕ್ಕದ್ದು. ಮತ್ತು ಅದರ ಸಮೀಪಕ್ಕೆ ಉರಿಯನ್ನು ಒಯ್ಯಕೂಡದು.

ಪ್ರಯೋಗ ೪.

ಒಂದು ಸಣ್ಣ ತಗಡಿನ ಮೇಲೆ ಅಥವಾ ಪ್ರವಾಹಿಗಳು ಇಂಗಿ ಹೋಗದಂಥ ನೆಲದ ಮೇಲೆ ಮೂರು ನಾಲ್ಕು ಹನಿ ಕಾರ್ಬನ್‌ಡಾಯ್‌ಸಲ್ಫ್ಯಾಯ್ಡದ ಹನಿಗಳನ್ನು ಹಾಕಿ ಕುದಿಯುವ ನೀರಿನ ಪಾತ್ರೆಯಲ್ಲಿ ಎದ್ದಿ ತೆಗೆದ ಕಾಜಿನ ಗಣಿಕೆಯನ್ನು ಅದರ ಮೇಲೆ ಕೆಲವು ಅಂತರದಲ್ಲಿ ಹಿಡಿದರೆ ಕೂಡಲೇ ಆ ಪದಾರ್ಥವು ನೀಲಿಬಣ್ಣದ ಮಂದ ಪ್ರಕಾಶ ದಿಂದ ಉರಿಯುತ್ತದೆ. ಈ ಪ್ರಯೋಗದಿಂದ ತಿಳಿಯುವದೇನಂದರೆ ಕೆಲವು ಪದಾರ್ಥಗಳು ಸ್ವಲ್ಪ ಉಷ್ಣತೆಯಿಂದಲೇ ಉರಿಯುತ್ತವೆ.

ಪ್ರಯೋಗ ೯.

ಉಪಯುಕ್ತವಾದ ಸಿಮೆಂಟುಗಳು.

೧. ಸುಣ್ಣದ ಹುಡಿ ೧ ಪಾಲು; ಬೆಲ್ಲ ೧ ಪಾಲು; ಜಿಗಟಾಗಲಿಕ್ಕೆ ಬೇಕಾಗುವಷ್ಟು ನೀರು; ಇವುಗಳನ್ನು ಅರೆದು ಕೂಡಲೆ ಹಚ್ಚಿದರೆ ಪದಾರ್ಥಗಳು ಗಟ್ಟಿಯಾಗಿ ಅಂಟಿಕೊಳ್ಳುತ್ತವೆ.

೨. ಕೋಳೀ ತತ್ತಿಯ ವರ್ಣರಹಿತವಾದ ರಸಪದಾರ್ಥವನ್ನು ಅಷ್ಟೇ ನೀರಿನಲ್ಲಿ ಚನ್ನಾಗಿ ಮಿಶ್ರಮಾಡಿ ಜಿಗಟಾಗಲಿಕ್ಕೆ ಬೇಕಾಗು

ವಷ್ಟು ಸಣ್ಣದ ಹುಡಿಯನ್ನು ಬೆರೆಸಿ ಚನ್ನಾಗಿ ಅರೆದರೆ ಅತ್ಯುತ್ತಮವಾದ ಸಿಮೆಂಟು ತಯಾರಾಗುತ್ತದೆ.

೩. ಒಡೆದ ಕಾಜಿನ ಅಥವಾ ಮಣ್ಣಿನ ಪಾತ್ರೆಗಳನ್ನು ಕೆಳಗೆ ಹೇಳಿದ ಸಿಮೆಂಟಿನಿಂದ ಜೋಡಿಸಬಹುದು:— ಸೋಡಿಯಂ ಅಥವಾ ಪೊಟ್ಯಾಸಿಯಮ್ ಸಿಲಿಕೇಟಿನಲ್ಲಿ ಸೂಕ್ಷ್ಮವಾದ ಖಡುವಿನ ಪುಡಿ ಅಥವಾ ಸುಣ್ಣದ ಪುಡಿಯನ್ನು ಚನ್ನಾಗಿ ಬೆರೆಸಿ ಒಡೆದ ಭಾಗಕ್ಕೆ ಹಚ್ಚಿ ಗಟ್ಟಿಯಾಗಿ ಕೆಲವು ದಿವಸಗಳ ತನಕ ಹುರಿಯಿಂದ ಕಟ್ಟಿಡತಕ್ಕದ್ದು. ಸಿಮೆಂಟನ್ನು ಹಚ್ಚುವ ಭಾಗವು ಸ್ವಚ್ಛವಿರಲಿಕ್ಕೆ ಬೇಕು.

೪. ಸುಣ್ಣದ ಹುಡಿ + ಅಂಟಿನ ನೀರು.

೫. ಪ್ಲಾಸ್ಟರ್ ಆಫ್ ಪಾರೀಸ್ + ಘಟಕದ ನೀರು.

೬. ೧ ಪಾಲು ಕಾಸ್ಟಿಕ್ ಸೋಡಾ; ೩ ಪಾಲು ರಾಳ; ೫ ಪಾಲು ನೀರು; ಇವುಗಳನ್ನು ಬೆರಿಸಿ ಕೆಲವು ಹೊತ್ತು ಕಾಸಿದ ಮೇಲೆ ೪ ಪಾಲು ಪ್ಲಾಸ್ಟರ್ ಆಫ್ ಪಾರೀಸನ್ನು ಕೂಡಿಸಿ ತಿರುವತಕ್ಕದ್ದು. ಈ ಸಿಮೆಂಟು ಸುಮಾರು ಅರ್ಧ ತಾಸಿನಲ್ಲಿ ಗಟ್ಟಿಯಾಗುತ್ತದಲ್ಲದೆ ನೀರಿನಿಂದ ಕೆಡುವಂಥಾದ್ದಲ್ಲ.

೭. ೪ ತೊಲಿ ರಾಳವನ್ನು ಕರಗಿಸಿ ಅದರಲ್ಲಿ ೧ ತೊಲಿ ಪ್ಲಾಸ್ಟರ್ ಆಫ್ ಪಾರಿಸವನ್ನು ಬೆರೆಸಿ ತಿರುವಿದರೆ ಮೇಲ್ತರದ ಸಿಮೆಂಟು ತಯಾರಾಗುವದು.

ಪ್ರಯೋಗ ೧೦.

ಕನ್ನಡಿಯನ್ನು ತಯಾರಿಸುವ ಕ್ರಮ.

ಕೆಲವು ವರ್ಷಗಳ ಹಿಂದೆ ಕನ್ನಡಿಗಳನ್ನು ತಯಾರಿಸಲಿಕ್ಕೆ ಪಾರಜ ಮತ್ತು ತವರಗಳ ಮಿಶ್ರಣವನ್ನು ಜನರು ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಈಗ ಸಹ ಕೆಲವರು ಅದೇ ಕ್ರಮದಿಂದ ತಯಾರಿಸುತ್ತಾರೆ. ಆದರೆ ಇತ್ತಲಾಗಿ ತಿಳುವಾದ ಬೆಳ್ಳಿಯ ಆಚ್ಛಾದನವನ್ನು ಕಾಜಿನ ಹಾಳಿಗೆ ಹಚ್ಚಿ ಹೆಚ್ಚು ಹೊಳಪುಳ್ಳ ಕನ್ನಡಿಗಳನ್ನು ತಯಾರಿಸುವದು ಪ್ರಚಾರಕ್ಕೆ ಬಂದಿದೆ. ಕನ್ನಡಿಗಳನ್ನು ತಯಾರಿಸುವ ಅನೇಕ ಕ್ರಮಗಳಲ್ಲಿ ಮೂದರಿಗಾಗಿ ಎರಡು ಕ್ರಮಗಳನ್ನು ನಾವು ಇಲ್ಲಿ ಕೊಡುವೆವು.

೧ ತವರ ಪಾರಜಗಳ ಮಿಶ್ರಣವನ್ನು ಹಚ್ಚಿ ತಯಾರಿಸುವದು:—

ಇದಕ್ಕಾಗಿ ಒಂದು ತಿಳುವಾದ ಕಾಗದದಂಥ ತವರದ ಹಾಳಿಯನ್ನು (tin foil) ದೊರಕಿಸಿ ಅದನ್ನು ಕಾಜಿನ ಹಾಳಿಗಿಂತಲೂ ಸ್ವಲ್ಪ ದೊಡ್ಡದಾಗಿ ಕತ್ತರಿಸಿಕೊಂಡು ಅದನ್ನು ಸಪಾಟಾದ ಮತ್ತು ನುಣುಪಾಗಿರುವ ಹಲಿಗೆಯ ಮೇಲೆ * ಸರಿಯಾಗಿ ಹರವಿ ಅದರ ಮೇಲೆ ತುಸು ಪಾರಜವನ್ನು ಸುರುವತಕ್ಕದ್ದು. ನಂತರ ಇಡೀ ಹಾಳಿಗೂ ಸರಿಯಾಗಿ ಪಾರಜವು ಅಂಟಿಕೊಳ್ಳುವಂತೆ ಅದನ್ನು ಒಂದು ವಿದುವಾದ ಅರಿವೆಯ ಸಹಾಯದಿಂದ ಹಾಳಿಯ ಮೇಲೆ ಸವರಿ ಇನ್ನಿಷ್ಟು ಪಾರಜವನ್ನು ಅಂದರೆ ಅದು ಎಲ್ಲಾ ಕಡೆಯಲ್ಲಿಯೂ ಸರಾಸರಿ ½ ಇಂಚು ಎತ್ತರವಾಗಿ ನಿಲ್ಲುವಷ್ಟು ಪಾರಜವನ್ನು ಸುರುವತಕ್ಕದ್ದು. ಇಷ್ಟಾದ ಮೇಲೆ ಕಾಜಿನ ಹಾಳಿಯನ್ನು ಅತಿ ಸ್ವಚ್ಛವಾಗಿ ತೊಳೆದು ಪಾರಜದ ಥರದ ಮೇಲೆ ಸಾವಕಾಶವಾಗಿ ಹವೆಯು ಸೇರಿಕೊಳ್ಳದಂತೆ ಇಡತಕ್ಕದ್ದು. ಕೂಡಲೆ ಸ್ವಲ್ಪ ಪಾರಜವು ಹೊರಗೆ ಬರುವದು. ನಂತರ ತವರದ ಹಾಳಿಯನ್ನಿಟ್ಟ ಹಲಿಗೆಯನ್ನು ತುಸು ಓರೆಯಾಗಿ ಹಿಡಿಯಲು ಇನ್ನಿಷ್ಟು ಪಾರಜವು ಹೊರಗೆ ಬರುವದು. ಈಗ ಕಾಜಿನ ಹಾಳಿಯ ಮೇಲೆ ಮೆತ್ತಗಿನ ಉಣ್ಣೆಯ ವಸ್ತ್ರವನ್ನು ಹರವಿ ಎಲ್ಲಾ ಕಡೆಯಲ್ಲಿಯೂ ಸರಿಯಾಗಿ ಭಾರ ಬೀಳುವಂತೆ ಅದರ ಮೇಲೆ ಒಂದು ಜಡವಾದ ಹಲಿಗೆಯನ್ನಿಟ್ಟು ಸುಮಾರು ೨೦ ತಾಸುಗಳ ತನಕ ಹಾಗೆಯೇ ಬಿಟ್ಟರೆ ಹೆಚ್ಚಿಗೆ ಉಳಿದ ಪಾರಜವೆಲ್ಲಾ ಹೊರಗೆ ಸೋಸಿ ಹೋಗಿ ತವರದ ಹಾಳಿಯು ಕಾಜಿನ ಹಾಳಿಗೆ ಗಟ್ಟಿಯಾಗಿ ಅಂಟಿಕೊಳ್ಳುವದು. ಆದರೂ ಅದು ಸ್ಥಿರವಾಗಿ ಅಂಟಿಕೊಳ್ಳಬೇಕಾದರೆ ಕಾಜಿನ ಹಾಳಿಯನ್ನು ಹೊರಗೆ ತೆಗೆದು ಅದನ್ನು ಕನಿಷ್ಠಪಕ್ಷಕ್ಕೆ ಏಳೆಂಟು ದಿವಸಗಳವರೆಗಾದರೂ ಅಂಟಿನ ಮೇಲೆ ನಿಲ್ಲಿಸಿಡಬೇಕಾಗುವದು.

ಕಾಜಿನ ಹಾಳಿಯನ್ನು ಸ್ವಚ್ಛವಾಗಿ ತೊಳೆಯಲಿಕ್ಕೆ ವಾಶಿಂಗ್ ಸೋಡಾವನ್ನಾಗಲೀ ಕಾಸ್ಟಿಕ್ ಪೊಟಾಶ್ ಅಥವಾ ನೈಟ್ರಿಕ್ ಆಸಿಡ್

---

* ಇನ್ನೊಂದು ಕಾಜಿನ ಹಾಳಿಯನ್ನು ಉಪಯೋಗಿಸಬಹುದು.

ಗಳನ್ನಾಗಲೀ ಉಪಯೋಗಿಸಬಹುದು. ತೊಳೆಯುವಾಗ ಅಥವಾ ತೊಳೆದನಂತರ ಕಾಜಿನ ಹಾಳಿಯನ್ನು ಕೈಯಿಂದ ಸ್ಪರ್ಶಮಾಡಬಾರದು ಯಾಕಂದರೆ ನಮ್ಮ ಕೈಗೆ ಯಾವಾಗಲೂ ಸ್ವಲ್ಪ ಸ್ನಿಗ್ಧ ತೈಲಗಳು ಹತ್ತಿ ಕೊಂಡಿರುತ್ತವೆ. ತೈಲದ ಅಥವಾ ಬೇರೆ ದ್ರವ್ಯಗಳ ಕಲ್ಮಷವೇನಾದರೂ ಕಾಜಿನ ಹಾಳಿಗೆ ಹತ್ತಿಕೊಂಡರೆ ಪದಾರ್ಥಗಳು ಅದಕ್ಕೆ ಸ್ಥಿರವಾಗಿ ಅಂಟಿಕೊಳ್ಳುವದಿಲ್ಲ. ಇದಲ್ಲದೆ ಹೊಳಪು ಸಹ ಕಡಿಮೆಯಾಗುವದು.

೨ ಬೆಳ್ಳಿಯ ಆಚ್ಛಾದನವನ್ನು ಹಚ್ಚಿ ತಯಾರಿಸುವ ಕ್ರಮ.

ಸೂಚನೆ:— ಇದಕ್ಕಾಗಿ ಯಾವಾಗಲೂ ಸ್ವಚ್ಛವಾದ ಭಟ್ಟಿಗೆ ಹಾಕಿದ ನೀರನ್ನಾಗಲೀ (Distilled water) ಮಳೆಯ ನೀರನ್ನಾಗಲೀ ಉಪಯೋಗಿಸತಕ್ಕದ್ದು.

ಕ್ವಾರದ ಮಿಶ್ರಣಗಳು:— (೧) ೧ ಔಂಸು ಸಿಲ್ವರ್ ನೈಟ್ರೇಟನ್ನು ೧೦ ಔಂಸು ನೀರಿನಲ್ಲಿ ಕರಗಿಸಿ ಉಂಟಾದ ಸೊಲ್ಯೂಶನ್; (೨) ೧ ಔಂಸು ಕಾಸ್ಟಿಕ್ ಪೊಟ್ಯಾಶನ್ನು ೧೦ ಔಂಸು ನೀರಿನಲ್ಲಿ ಕರಗಿಸಿ ಉಂಟಾದ ಸೊಲ್ಯೂಶನ್; (೩) ೫ ಔಂಸು ಗ್ಲೂಕೋಸ (ದ್ರಾಕ್ಷಿಹಣ್ಣಿನಿಂದ ತಯಾರಿಸಿದ ಸಕ್ಕರೆ)ನ್ನು ೧೦ ಔಂಸು ನೀರಿನಲ್ಲಿ ಬೆರಿಸಿ ಆದ ಸೊಲ್ಯೂಶನ್. ಈ ಪ್ರಕಾರ ಮೇಲೆ ಬರೆದ ಮೂರು ಮಿಶ್ರಣಗಳನ್ನು ಮೂರು ಬೇರೆಬೇರೆ ಪಾತ್ರೆಗಳಲ್ಲಿ ತಯಾರಿಸಿಟ್ಟುಕೊಳ್ಳತಕ್ಕದ್ದು. ಮೇಲೆ ಹೇಳಿದ ಪದಾರ್ಥಗಳು ಸುಮಾರು ೬೫೦ ಚೌ. ಇಂಚು ವಿಸ್ತಾರವಾದ ಕಾಜಿನ ಹಾಳಿಗೆ ಬೇಕಾಗುವಷ್ಟು ಹೇಳಿರುತ್ತದೆ. ಸೊಲ್ಯೂಶನ್ (೧)ಕ್ಕೆ ತುಸು ಎಮೋನಿಯಾವನ್ನು ಬೆರಿಸಿದರೆ ತಿಳಿಯಾದ ಸೊಲ್ಯೂಶನ್ನವು ರಾಡಿಯಾಗುವದು ಎಮೋನಿಯಾವನ್ನು ಸಾವಕಾಶವಾಗಿ ಹೆಚ್ಚು ಹೆಚ್ಚು ಬೆರೆಸುತ ಹೋದಂತೆ ಈ ರಾಡಿಯು ಕಡಿಮೆ ಆಗುತ್ತ ಬಂದು ಕಟ್ಟ ಕಡೆಗೆ ನಾಶವಾಗುತ್ತದೆ. ಈ ರಾಡಿಯು ಪೂರ್ಣ ನಾಶವಾಗುವದಕ್ಕಿಂತ ಸ್ವಲ್ಪ ಮುಂಚಿತವಾಗಿಯೇ ಎಮೋನಿಯಾ ಬೆರೆಸುವದನ್ನು ನಿಲ್ಲಿಸಬೇಕು. ಈ ಮಿಶ್ರಣಕ್ಕೆ ಸೊಲ್ಯೂಶನ್ (೨)ನ್ನು ಕೂಡಿಸಿದರೆ ಮತ್ತೆ ಮೊದಲಿನಂತೆಯೇ ನಾಶವಾಗುವ ಬಣ್ಣದ ರಾಡಿಯಂಥ ಪದಾರ್ಥವು ಉಂಟಾಗುವದು. ಮತ್ತೆ ಎಮೋನಿಯಾವನ್ನು ತುಸುತುಸು ಮೊದಲಿನಂ

ತೆಯೇ ಬೆರೆಸಿ ಇದನ್ನು ಕಳೆಯತಕ್ಕದ್ದು. ಆದರೆ ಆ ರಾಡಿಯು ಪೂರ್ಣ ನಾಶ ಹೊಂದದಂತೆ ಎಚ್ಚರ ಪಡತಕ್ಕದ್ದು. ಒಂದು ವೇಳೆ ಪೂರ್ಣ ನಾಶವಾದರೆ ಕಾಸ್ಟಿಕ್ ಪೊಟ್ಯಾಶದ ಸಣ್ಣ ತುಣುಕನ್ನು ಸ್ವಲ್ಪ ನೀರಿನಲ್ಲಿ ಕರಗಿಸಿ ಆದ ಮಿಶ್ರಣವನ್ನು ಅದಕ್ಕೆ ತಿರಿಗಿ ಸ್ವಲ್ಪ ರಾಡಿಯಾಗುವವರೆಗೆ ಬೆರಸಬಹುದು. ಇಷ್ಟಾದ ಮೇಲೆ ಸೊಲ್ಯೂಶನ್ (೩) ನ್ನು ಬೆರಸು. ಈ ಮಿಶ್ರಣದಲ್ಲಿ ಸ್ವಚ್ಛವಾದ ಕಾಜಿನ ಹಾಳಿಯ ಒಂದೇ ಮಗ್ಗಲನ್ನು ಸುಮಾರು ಮುಕ್ಕಾಲು ತಾಸಿನವರೆಗೆ ಇಟ್ಟರೆ ಬೆಳ್ಳಿಯು ಅದಕ್ಕೆ ಗಟ್ಟಿಯಾಗಿ ಅಂಟಿಕೊಳ್ಳುವದು. ನಂತರ ಆ ಕಾಜಿನ ಹಾಳಿಯನ್ನು ಸ್ವಚ್ಛವಾದ ನೀರಿನಿಂದ ತೊಳೆಯತಕ್ಕದ್ದು.

(ಮುಂದೆ ಸಾಗುವದು)

ಸ್ಥಾಯಿಡ ಅಥವಾ ಹಸ್ತಶಿಕ್ಷಣ ಪದ್ಧತಿ.

(ಜೂನ ತಿಂಗಳಿನಿಂದ ಮುಂದೆ ಸಾಗಿದ್ದು.)

ಕೈಕೆಲಸವು ಒಂದು ವಿಷಯವೋ ಅಥವಾ ಪದ್ಧತಿಯೋ ಎಂಬದರ ಬಗ್ಗೆ ಯುರೋಪ, ಅಮೇರಿಕಾ ಮುಂತಾದ ಸುಧಾರಿಸಿದ ರಾಷ್ಟ್ರಗಳಲ್ಲಿ ವಾದವು ನಡೆದಿರುವದು. ಇದು ಕೆಲ ವಿಶಿಷ್ಟ ತತ್ವಗಳನ್ನೂ ಕ್ರಮವನ್ನೂ ಅನುಸರಿಸಿರುವದರಿಂದ ಪದ್ಧತಿಯೆಂದೇ ಹೇಳಬೇಕಾಗುತ್ತದೆ. ಆದರೂ ಸಾಮಾನ್ಯ ಶಿಕ್ಷಣದ ವಿಷಯಗಳಿಗೆ ಸಹಾಯಕವಾದ ವಿಷಯವೆಂದೂ ಅನೇಕರ ಅಭಿಪ್ರಾಯವಿರುವದು. ಬೇರೆಬೇರೆ ಕಾಲದಲ್ಲಿಯ ಪ್ರಸಿದ್ಧ ಶಿಕ್ಷಣ ಶಾಸ್ತ್ರಜ್ಞರು, ಇದರ ಮಹತ್ವವನ್ನು ಅನೇಕ ಗ್ರಂಥಗಳಲ್ಲಿ ಉಲ್ಲೇಖಿಸಿರುವರು. ಇದರಿಂದ ಯಾವದೊಂದು ಕೆಲಸದಲ್ಲಿಯ ಮುಂದಣ ಭಾರವನ್ನು ವಹಿಸುವ ಸಾಮರ್ಥ್ಯವೂ ಅವಧಾನ, ಇಚ್ಛಾ ಶಕ್ತಿಗಳಿಗೆ ಪ್ರೋತ್ಸಾಹನವೂ ಉಂಟಾಗುವದು. ಬುದ್ಧಿಯ ಬೆಳವಣಿಗೆಗೂ ದೊರಕಿಸಿದ ಜ್ಞಾನವು ಮರೆತು ಹೋಗದೆ ದೃಢವಾ

ಗಿರುವದಕ್ಕೂ ಇದು ಮಹತ್ವದ ಸಾಧನವಾಗಿದೆ. ಇದರಿಂದ ತುಸು ಮಟ್ಟಿಗೆ ಔದ್ಯೋಗಿಕ ಶಿಕ್ಷಣವು ದೊರೆಯುವದಲ್ಲದೆ ಮನಸ್ಸಿನ ಅನೇಕ ಶಕ್ತಿಗಳು ಸಂಸ್ಕರಣ ಹೊಂದಿ ಸಾಮಾನ್ಯ ಶಿಕ್ಷಣದ ತ್ರಿವಿಧವಾದ ಉದ್ದೇಶಗಳು ಕೈಗೂಡುವವು.

ಜಗತ್ತಿನಲ್ಲಿಯು ಯಾವತ್ತು ಕೆಲಸಗಳು ಪ್ರತ್ಯಕ್ಷವಾಗಿಯಾಗಲಿ ಅಪ್ರತ್ಯಕ್ಷವಾಗಿಯಾಗಲಿ ಕೈಯಿಂದಲೇ ಮಾಡಲ್ಪಡುವವಪ್ಪೇ; ಕೈಯಲ್ಲಿ ವಿಶಿಷ್ಟವಾದ ಕುಶಲತೆಯು ಇದ್ದರೆ ಅವೆಲ್ಲ ಕೆಲಸಗಳು ಉತ್ತಮ ರೀತಿಯಿಂದ ಜರಗುವವು. ಇದೊಂದು ಸಂಗತಿಯಿಂದಲೇ ಸಾಮಾನ್ಯ ಶಿಕ್ಷಣದ ಎಲ್ಲ ಶಾಲೆಗಳಲ್ಲಿ ಹಸ್ತಶಿಕ್ಷಣವನ್ನು ಕೊಡಬೇಕೆಂಬದು ಸ್ಪಷ್ಟವಾಗಿ ತೋರುವದು. ದೊಡ್ಡದೊಡ್ಡ ಔದ್ಯೋಗಿಕ ಸಂಸ್ಥೆಗಳಿಗೆ ಪ್ರಾರಂಭದಿಂದ ಕೈಕೆಲಸದಲ್ಲಿ ನುರಿತವರಾದ ಜನರ ಅವಶ್ಯಕತೆಯೇ ವಿಶೇಷವಾಗಿರುವದು; ಮತ್ತು ಹಸ್ತಕೌಶಲ್ಯವು ಶಸ್ತ್ರವೈದ್ಯರಿಗೂ ಶಾಸ್ತ್ರಜ್ಞರಿಗೂ ಚಿತ್ರಕಲೆಯಲ್ಲಿ ತೊಡಗಿದವರಿಗೂ ಅವಶ್ಯವಾಗಿ ಬೇಕಾಗುವದು. ಪ್ರತಿಯೊಬ್ಬ ಹುಡುಗನು ಕೆಲವೊಂದು ಮನಸಿನ ಸಾಮರ್ಥ್ಯದೊಡನೆ ಶಾಲೆಯನ್ನು ಪ್ರವೇಶಿಸುವನೆಂಬ ಮಾತು ಎಲ್ಲರಿಗೂ ಗೊತ್ತಿರುವದಪ್ಪೇ? ಅಲ್ಲಿ ಕಲಿಸಬಹುದಾದ ಭಾಷಾವಿಷಯ, ಅಂಕಗಣಿತ, ಇತಿಹಾಸ ಭೂಗೋಲ, ಶಾಸ್ತ್ರೀಯ ವಿಷಯ ಮುಂತಾದ ವುಗಳಲ್ಲಿ ಕೆಲವು ವರ್ಷಗಳ ಶಿಕ್ಷಣದಿಂದ ಸಾಕಷ್ಟು ಪ್ರಗತಿಯನ್ನು ಪಡೆಯದಿದ್ದರೆ ಅವನು ಕೇವಲ ನಿರರ್ಥಕನಾದನೆಂದು ತಿಳಿಯಬಹುದೋ ಅಥವಾ ಇವುಗಳೊಡನೆ ಬೇರೆಬೇರೆ ತರದ ಕೈಕೆಲಸಗಳನ್ನು ಸೇರಿಸಿ ಅವುಗಳಲ್ಲಿ ಅವನಿಗೆ ಸ್ವಲ್ಪಾದರೂ ಜ್ಞಾನ ಮಾಡಿಕೊಟ್ಟು ಮುಂದೆ ಅದನ್ನೇ ಮುಖ್ಯವಾಗಿ ಕಲಿಸುವಂಥ ಶಾಲೆಗೆ ಹೋಗಹೇಳಿ ಅವನ ಉದರ ನಿರ್ವಾಹವು ನಡೆಯುವಂತೆ ಮಾಡಬಹುದೋ ಎಂಬದನ್ನು ಎಲ್ಲರೂ ಪೂರ್ಣ ವಿಚಾರಿಸಬೇಕು. ಯಾವನೊಬ್ಬ ಹುಡುಗನಿಗೆ ಕೈಕೆಲಸದಲ್ಲಿ ಮುಂಬುದ್ಧಿ ಇದ್ದರೆ ತಾನು ತಯಾರಿಸಿದಂಥ ಅನೇಕ ಮಾದರಿಗಳನ್ನು ನೋಡಿ ಸಂತೋಷ ಹೊಂದಿ ಇತರ ವಿಷಯಗಳಲ್ಲಿ ಯಾದರೂ ಬಹಳ ಪರಿಶ್ರಮ ಮಾಡತೊಡಗಿ ಭಾಷಾವಿಷಯ ಅಂಕಗಣಿತ ಮುಂತಾದವುಗಳನ್ನೂ ಅವನು ಉತ್ತಮ ರೀತಿಯಿಂದ ಕಲಿಯ

ಬಹುದು. ಕೈಕೆಲಸದಲ್ಲಿ ಅವಶ್ಯವಿದ್ದ ಅಚ್ಚುಕಟ್ಟುತನ, ಸ್ವಚ್ಛತೆ, ಸರಿಯಾಗಿ ಕೆಲಸ ಮಾಡುವ ಪರಿಪಾಠ, ಅಂದವಾಗಿ ತೋರುವಂತೆ ಮಾಡುವ ಚಟ, ಬೇರೆ ಬೇರೆ ಆಯುಧಗಳಿಂದ ಕೊಟ್ಟ ಪದಾರ್ಥಗಳಲ್ಲಿ ಉಪಯುಕ್ತವಾದ ಸಾಮಾನುಗಳನ್ನು ಲಕ್ಷ ಪೂರ್ವಕ ಮಾಡುವ ವ್ಯವಸಾಯ ಮುಂತಾದ ಸದ್ಗುಣಗಳು ಶಾಲೆಯ ಬೇರೆ ಕೆಲಸಗಳಲ್ಲಿಯಾದರೂ ಒಡೆದು ತೋರುವವು. ಹಸ್ತಶಿಕ್ಷಣದಲ್ಲಿ ಪ್ರತ್ಯಕ್ಷ ಆಗುವ ಪರಿಣಾಮಕ್ಕಿಂತ ಅಪ್ರತ್ಯಕ್ಷ ಆಗುವ ಪರಿಣಾಮವು ಮೇಲಾದದ್ದು.

ಅನೇಕ ವಿಷಯಗಳ ಪರಸ್ಪರ ಸಂಬಂಧದಿಂದ ಮನರಂಜನೆಯೂ ಪರಸ್ಪರ ಸಹಾಯವೂ, ಅನೇಕ ವಿಚಾರಗಳನ್ನು ಕೇವಲ ಶಾಬ್ದಿಕವಾಗಿ ವ್ಯಕ್ತಮಾಡುವದಲ್ಲದೆ ಮಾದರಿಗಳಲ್ಲಿ ಅವನ್ನು ಸರಿಯಾಗಿ ಪ್ರತಿರೂಪಿಸುವ ಸಾಮರ್ಥ್ಯವೂ ಉಂಟಾಗುವದು.

ಯಾವದೊಂದು ಕೆಲಸ ಮಾಡುವದರಿಂದ ಉತ್ಸಾಹವು ಹೆಚ್ಚಾಗುತ್ತ ಹೋಗುತ್ತದೆ. ಇದು ಶಿಕ್ಷಣದಲ್ಲಿ ಮಹತ್ವದ ಸಂಗತಿಯಾಗಿರುವದು. ಇದರಿಂದುಂಟಾಗುವ ಸ್ವಾವಲಂಬನವೆ ಅತಿ ಮಹತ್ವದ್ದಾಗಿರುವದು. ಹಸ್ತಶಿಕ್ಷಣದಿಂದ ಚಿಕ್ಕಮಕ್ಕಳಲ್ಲಿ ಅವಲೋಕನ ಶಕ್ತಿಯೂ ಅವಧಾನವೂ ಪೂರ್ಣವೃದ್ಧಿಹೊಂದುವದರಿಂದ, "ಪೆಸ್ಟಲಾಟ್ಸ" ಎಂಬ ಮಹನೀಯರ ಶಿಕ್ಷಣ ಸಂಬಂಧದ ಎಲ್ಲ ಬೇಡಿಕೆಗಳು ಇದರಿಂದಲೇ ಪರಿಪೂರ್ಣತೆಯನ್ನು ಹೊಂದುವವು. ಯಾವದೊಂದು ವಸ್ತುವನ್ನು ಸರಿಯಾಗಿ ಅನುಕರಿಸಿ ಅಚ್ಚುಕಟ್ಟಾಗಿ ತಯಾರಿಸುವದರಿಂದಲೇ ಕೈಕೆಲಸವು ಶಾಲೆಯಲ್ಲಿಯ ಬೇರೆ ವಿಷಯಗಳೊಡನೆ ಇದನ್ನು ಸೇರಿಸುವದಕ್ಕೆ ಯೋಗ್ಯವಾಗಿರುವದು. ಆಕಾರಬೋಧ, ಸೌಂದರ್ಯದ ಜ್ಞಾನ, ವರ್ಣ, ಪ್ರೀತಿ, ಒಪ್ಪುವಿಕೆಯ (Synnuctry) ಪರಿಜ್ಞಾನ ಇವೇನೊದಲಾದವುಗಳು ಹಸ್ತ ಶಿಕ್ಷಣದ ಕೆಲ ಪರಿಣಾಮಗಳು.

ನಮ್ಮ ದೇಶದಲ್ಲಿ ಹೇಳಿಕೊಳ್ಳುವಂಥ ಔದ್ಯೋಗಿಕ ಶಿಕ್ಷಣದ ಸಂಸ್ಥೆಗಳು ಬಹಳ ಕಡಿಮೆ ಇರುವವು. ನಮ್ಮಲ್ಲಿ ದೊರೆಯಬಹುದಾದ ಎಲ್ಲ ಕಚ್ಚಾ ಮಾಲನ್ನು ಉಪಯೋಗಿಸುವಷ್ಟು ಕಾರಖಾನೆಗಳು ಸಹ ಇರುವದಿಲ್ಲ. ಯಾವದೊಂದು ದೇಶದಲ್ಲಿಯ ಉದ್ಯೋಗ ವ್ಯಾಪಾರ

ಗಳು ಹೆಚ್ಚಾಗಬೇಕಾದರೆ ಅಲ್ಲಿಯ ಜನರಲ್ಲಿ ಹಸ್ತಕುಶಲತೆಯೂ ಶೋಧಕ ಬುದ್ಧಿಯೂ ಅನೇಕ ಸಾಮಾನುಗಳನ್ನು ಅಂದವಾಗಿಯೂ ಅಚ್ಚುಕಟ್ಟಾಗಿಯೂ ತಯಾರಿಸುವ ಸಾಮರ್ಥ್ಯವೂ ಬಹಳ ಇರಬೇಕಾಗುವದು. ಇವೆಲ್ಲ ಗುಣಗಳು ಹಸ್ತಶಿಕ್ಷಣದಿಂದ ಅಭಿವೃದ್ಧಿ ಹೊಂದುವವು. ಆದ್ದರಿಂದ ಇದನ್ನು ಶಾಲೆಗಳಲ್ಲಿ ಕಲಿಸಲಾರಂಭಿಸಿದರೆ ದೇಶದ ಔದ್ಯೋಗಿಕ ಪರಿಸ್ಥಿತಿಯು ಸುಧಾರಿಸುವದು.

ಹಸ್ತ ಶಿಕ್ಷಣವು ಸೋಮಾರಿತನಕ್ಕೆ ಆಸ್ಪದಕೊಡದೆ ಕೆಲಸ ಮಾಡುವವರಿಗೆ ವಿಶ್ರಾಂತಿಯನ್ನುಂಟು ಮಾಡುವದು. ಈ ಕಾರಣದಿಂದ ಇದೊಂದು ಸೊಗಸಾದ ಹಾಗೂ ಅತಿಶ್ರೇಷ್ಠವಾದ ವಿಶ್ರಾಂತಿದಾಯಕ ವಿಷಯವಾಗಿರುವದು. ಇದರಿಂದ ಇಚ್ಛಾಶಕ್ತಿಯು ಅಭಿವೃದ್ಧಿ ಹೊಂದುವದು. ವಿದ್ಯಾರ್ಥಿಗಳು ಕಠಿಣವಾದ ಕೆಲಸಗಳಿಂದ ಹ್ಯಾಗೆ ಪಾರಾಗಬೇಕೆಂಬದನ್ನು ತಿಳಿದುಕೊಳ್ಳುತ್ತಾರೆ. ಬಹಳ ದಿವಸಗಳ ವರೆಗೆ ಇದೇ ತರದ ಕೆಲಸವು ನಡೆಯಬಹುದಾದ ಕಾರಣ ಯಾವದೊಂದು ಕೆಲಸಲ್ಲಿ ಸ್ಥೈರ್ಯವೂ, ಅದರಿಂದ ಸಹನಶೀಲತೆಯೂ, ತಾಳ್ಮೆಯೂ ಬಹಳ ಮಟ್ಟಿಗೆ ನೆಲೆಗೊಳ್ಳುವವು. ಇವುಗಳ ಉಪಯೋಗವು ಶಾಲೆಯಲ್ಲಿಯ ಬೇರೆ ಅನೇಕ ಕೆಲಸಗಳಲ್ಲಿ ಆಗುವದು. ಸ್ವಭಾವ ಘಟನೆಯಲ್ಲಂತೂ ಹಸ್ತ ಶಿಕ್ಷಣವು ಅತಿಬಲವಾದ ಸಾಧನವಾಗಿರುವದು. ಇದರಲ್ಲಿ ಅವಧಾನವೂ ಚಿತ್ತೈಕಾಗ್ರತೆಯೂ ವ್ಯಕ್ತವಾಗುವಷ್ಟು ತಾಳ್ಮೆಯಾದರೂ ಬಹಳ ಮಟ್ಟಿಗೆ ಬೆಳೆಯುವದು. ಯಾವದೊಂದು ಕೆಲಸದಲ್ಲಿ ಯಶಸ್ಸು ದೊರೆಯಬೇಕಾದರೆ ಇವೇ ಎತಡು ಗುಣಗಳ ಅವಶ್ಯಕತೆ ಇರುವದಿಲ್ಲವೇ? ಶಿಕ್ಷಣಕ್ಕೆ ಉಪಯುಕ್ತವಾದ ಕೈಕೆಲಸದಿಂದ ಆನಂದವು ಉಂಟಾಗುತ್ತದೆ. ಈ ತರದ ಪ್ರತ್ಯಕ್ಷ ಲಾಭದಾಯಕ ಸಂಗತಿಯಿಂದ ಸಮಾಧಾನಕರವಾದ ಪರಿಣಾಮಗಳು ಉಂಟಾಗುವವೆಂದು ಕಂಡುಬರುತ್ತದೆ. ಹುಡುಗರು ಕೈಕೊಂಡ ಕೆಲಸದಿಂದ ಅವರಿಗೆ ಮನರಂಜನೆಯು ಪೂರ್ಣವಾದರೆ ಅವರು ಬಹಳ ಜಾಗ್ರತೆಯುಳ್ಳವರಾಗುವರು ಈ ಸಂಗತಿಯು ಬಹು ತರವಾಗಿ ಎಲ್ಲ ತರದ ಕೈಕೆಲಸಗಳಲ್ಲಿ ಕಂಡುಬರುವದಲ್ಲದೆ ವ್ಯಕ್ತ್ಯುವು ಒಡೆದು ತೋರುವದು. ಕೆಲವು ದಿವಸಗಳ ನಂತರ ಇದೇ

ಸ್ವಭಾವದ ದ್ಯೋತಕವಾಗುವದು. ಯಾವದೊಂದು ನಿಜವಾದ ವಸು, ವನ್ನು ತಯಾರಿಸುವದರಲ್ಲಿ ಉತ್ತಮ ತರದ ನೀತಿಶಿಕ್ಷಣವು ದೊರೆ ಯುವದು. ಯಾಕಂದರೆ ಆ ವಸ್ತುವಿನ ಆಕಾರ, ಅಳತೆ ಮುಂತಾದ ವುಗಳಲ್ಲಿ ಯಾವ ತರದ ಮೋಸವನ್ನು ಮಾಡಲಿಕ್ಕೆ ಬರುವದಿಲ್ಲ. ಹೆಚ್ಚು ಕಡಿಮೆಯಾದ ಅಳತೆಗಳಿದ್ದರೆ ಅದು ಕೂಡಲೆ ಜೈಲಿಗೆ ಬರುವದು. ಇದರ ಹೊರ್ತು ಯಾವದೊಂದು ಕೆಲಸದಲ್ಲಿ ಇಂತಿಷ್ಟೇ ಕುಶಲತೆಯು ಬಂತೆಂಬದನ್ನು ಹುಡುಗರಾಗಲಿ ಹುಡುಗಿಯರಾಗಲಿ ತಿಳಿದುಕೊಳ್ಳ ಲಿಕ್ಕೆ ಬರುವದು. ವಿದ್ಯಾರ್ಥಿಗಳು ಲೆಕ್ಕಗಳನ್ನಾಗಲಿ ಅರ್ಥವಿವರ ಣೆಯನ್ನಾಗಲಿ ಪಾಟಯ ಮೇಲೆ ಮಾಡಿ ಇಟ್ಟುಕೊಂಡು ಶಿಕ್ಷಕನು ತುಪ್ಪು ಅಥವಾ ಸರಿ ಎಂದು ಹೇಳುವವರೆಗೆ ಸುಮ್ಮನೆ ಕೂಡ್ರಬೇಕಾ ಗುವದು, ಆದರೆ ಕೈಕೆಲಸದಲ್ಲಿ ವಿದ್ಯಾರ್ಥಿಯು ಮಾದರಿಯು ತಯಾ ರಾದ ಕೂಡಲೆ ಅದನ್ನು ಪರೀಕ್ಷಿಸಿ ತೆಗೆದಿಟ್ಟ ಆಕೃತಿಗೆ ಸರಿಯಾಗಿರು ವದೋ ಇಲ್ಲವೋ ಎಂಬದನ್ನು ಸ್ವಂತ ತಿಳಿದುಕೊಳ್ಳಲಿಕ್ಕೆ ಬರುವದು. ನಿಜವಾಗಿ ಶಿಕ್ಷಕನಾದರೂ ಅದನ್ನು ನೋಡಿ ಉತ್ತಮ ಅಥವಾ ಮಧ್ಯಮ ವೆಂದು ಹೇಳುತ್ತಿದ್ದಾಗ್ಯೂ ವಿದ್ಯಾರ್ಥಿಯು ಯಾರದೂ ಸಹಾಯವಿಲ್ಲದೆ ತನ್ನಲ್ಲಿ ಆದ ಪ್ರಗತಿಯನ್ನು ಅರಿತುಕೊಳ್ಳಲಿಕ್ಕೆ ಬರುವದು. ಆದ್ದ ರಿಂದಲೆ ಕೈಕೆಲಸವು ಬಹಳ ಮಹತ್ವದ್ದೂ ಹುರಿದುಂಬಿಸುವಂಥದೂ ಆಗಿರುವದು.

ಹಸ್ತಶಿಕ್ಷಣದಿಂಟಾಗುವ ಇವೆಲ್ಲ ಮಾನಸಿಕ, ನೈತಿಕ ಹಾಗು ಶಾರೀರಿಕ ಲಾಭಗಳನ್ನು ತುಸು ಹೊತ್ತು ಮನದಲ್ಲಿ ನೆನೆದರೆ, ಅದನ್ನು ಸಾಮಾನ್ಯ ಶಿಕ್ಷಣ ಸಿಗುವ ಶಾಲೆಗಳಲ್ಲಿ ಅವಶ್ಯವಾಗಿ ಕೊಡಬೇಕೆಂಬದು ಗೊತ್ತಾಗುತ್ತದೆ. ಆದ್ದರಿಂದ ಕೈಕೆಲಸಗಳಲ್ಲಿ ಯಾವದನ್ನು ಆರಿಸಿ ಕೊಳ್ಳಬೇಕು. ಮತ್ತು ಅದು ಎಂಥದಿರಬೇಕು ಎಂಬದನ್ನು ವಿಚಾರಿಸುವ.

ಕೆಲಸಗಳಲ್ಲಿ ಕಿಂಡರಗಾರ್ಟನ್ನದ ವ್ಯವಸಾಯಗಳು ದಪ್ಪ ಕಾಗದ ಕಟ್ಟಗೆ, ಲೋಹ ಮುಂತಾದವುಗಳಲ್ಲಿಯ ಕೆಲಸ; ಆರ್ಿನಿಂದ ಮಾದರಿಗಳನ್ನು ಮಾಡುವದು, ಬೆತ್ತದಿಂದ ಹಣೆಯುವದು, ಚಿತ್ರಕಲೆ, ನೇಯುವದು; ಹೊಲಿಯುವದು ಮುಂತಾದ ಅನೇಕ ಪ್ರಕಾರಗಳಿರು ತವು. ಆದ್ದರಿಂದ ಇವುಗಳಲ್ಲಿ ಚಿಕ್ಕಮಕ್ಕಳ ಯೋಗ್ಯತೆಗೆ ಅನು

ಕೂಲವಾಗುವಂಥವನ್ನೂ ಮಾನಸಿಕ, ನೈತಿಕ, ಶಾರೀರಿಕ ಬೆಳವಣಿಗೆಗೆ ಯೋಗ್ಯವಾದಂಥವನ್ನೂ ಅರಿಸಿಕೊಂಡು, ಬೇರೆ ಅನೇಕ ವಿಷಯಗಳೊಡನೆ ಕಲಿಸತಕ್ಕದ್ದು. ಚಿಕ್ಕಮಕ್ಕಳ ಶಿಕ್ಷಣದಲ್ಲಿ ಬಹಳ ಅನುಭವಿಕ ಶಿಕ್ಷಕರ ಅಭಿಪ್ರಾಯವು ಕಾಗದ ಹಾಗು ಕಟ್ಟಿಗೆಯಲ್ಲಿಯು ಕೆಲಸವೇ ಅತ್ಯುತ್ತಮವಾದದ್ದೆಂದು ಇರುವದು. ಯಾಕಂದರೆ ಚಿಕ್ಕಮಕ್ಕಳು ಕಿಂಡರಗಾರ್ಟನದಲ್ಲಿಯ ಅನೇಕ ಕರಣಗಳನ್ನು ಕಾಗದ ಮಡಿಚುವ ಕೆಲಸವನ್ನು ಮಾಡಿ ಹಸ್ತದಲ್ಲಿಯ ಮಜಾತಂತುಗಳು ಸ್ವಲ್ಪ ಸಾಮರ್ಥ್ಯವನ್ನು ತಂದುಕೊಂಡ ನಂತರ ದಪ್ಪ ಕಾಗದವನ್ನೂ ಅದಕ್ಕೆ ಅನುಕೂಲವಾದ ಆಯುಧಗಳನ್ನೂ ಕೊಟ್ಟು ಕೆಲಸ ಮಾಡಿಸಬೇಕು. ಅದು ಕೆಲ ವರ್ಷಗಳವರೆಗೆ ಸಾಗಿದನಂತರ, ಇದಕ್ಕೂ ಕಠಿಣತರವಾದ ಕಟ್ಟಿಗೆಯನ್ನೂ ಅದಕ್ಕೆ ಬೇಕಾಗುವ ಹದನವಾದ ಆಯುಧಗಳನ್ನೂ ಕೊಟ್ಟು ಕೆಲಸ ಮಾಡಿಸಿದರೆ ಮಾನಸಿಕ ಹಾಗು ಶಾರೀರಿಕ ಬೆಳವಣಿಗೆಯು ಉತ್ತಮ ತರದ್ದಾಗುವದು. ಬೇರೆ ಅನೇಕ ಕೈಕೆಲಸಗಳಲ್ಲಿ ಒಂದಿಲ್ಲೊಂದಾದರೂ ಕೊರತೆಗಳಿರುವವು. ಲೋಹದಲ್ಲಿಯ ಕೆಲಸವು ಶಾಲೆಗೆ ಹೋಗಬಹುದಾದ ಚಿಕ್ಕಮಕ್ಕಳ ಶಕ್ತಿಯನ್ನು ಮೀರಿರುವದೆಂಬದು ಎಲ್ಲರಿಗೂ ಗೊತ್ತುಂಟು. ಇದರಂತೆ ಬೇರೆ ಅನೇಕ ಕೈಕೆಲಸಗಳಲ್ಲಿ ಒಂದಿಲ್ಲೊಂದಾದರೂ ಕೊರತೆಗಳು ಕಂಡು ಬಂದಿರುವವು. ವಿಶಿಷ್ಟವಾದ ಒಂದು ಪದ್ಧತಿಗನುಸಾರವಾಗಿ ಕಾಗದ ಹಾಗು ಕಟ್ಟಿಗೆಯಲ್ಲಿಯ ಕೆಲಸ ಮಾಡುವದರಿಂದ ಅನೇಕ ಉತ್ತಮವಾದ ಪರಿಣಾಮಗಳಾಗುವವು.

ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ಪದ್ಧತಿಯೊಂದಿಗೆ ಈ ಕೆಲಸಗಳನ್ನು ಮಾಡಿಸುವರು. ಅವುಗಳಲ್ಲಿ ಸ್ಲಾಯಿಡ ಪದ್ಧತಿಯು ಹಸ್ತಶಿಕ್ಷಣವೇ ಮೇಲಾದದ್ದೆಂದು ಅನುಭವದಿಂದ ಕಂಡುಬಂದಿರುವದು. ಸ್ಲಾಯಿಡ ಎಂಬದು ಸ್ವೀಡನ್ನ ಭಾಷೆಯದೊಂದು ಶಬ್ದವು; ಅದರ ಮೂಲಾರ್ಥವು ಕುಶಲತೆಯೆಂದಿರುವದು. ಆದರೆ ರೂಢಿಯಲ್ಲಿ ಈ ಶಬ್ದವನ್ನು ಸಾಮಾನ್ಯವಾಗಿ ಶಾಲೆಗಳಲ್ಲಿ ಸಿಗುವ ಮಾನಸಿಕ ಶಿಕ್ಷಣಕ್ಕೆ ಅನುಕೂಲವಾದಂಥ ಕೈಕೆಲಸದ ಪದ್ಧತಿ ಎಂಬ ಅರ್ಥದಲ್ಲಿ ಉಪಯೋಗಿಸುವರು.

ಮುಂದೆ ಸಾಗುವದು,

೪. ಪ್ರಕೃತಿ ಪಾಠಗಳು.

(ಜೂನ ತಿಂಗಳಿಂದ ಮುಂದೆ ಸಾಗಿದ್ದು.)

ವಿಷಯ.	ತಿಳಿಸುವಕ್ರಮ ಮತ್ತು ಪ್ರಶ್ನೆಗಳು.
ಸ್ವಭಾವ:— ಆಕಳು ಬಹಳ ಸಾಧುವಾದ ಪ್ರಾಣಿಯು. ಉಪಯೋಗ:— ಆಕಳು ನಮ್ಮ ಆಹಾರಕ್ಕೆ ಬೇಕಾದ ಹಾಲು ಮೊದಲಾದ ಪದಾರ್ಥಗಳನ್ನು ಒದಗಿಸುತ್ತದೆ. ಎತ್ತುಗಳು ಬಂಡಿಗಳನ್ನು ಎಳೆಯುವದಕ್ಕೂ ಕೃಷಿಕರ್ಮದ ಬೇರೆಬೇರೆ ಕೆಲಸಗಳಿಗೂ ಉಪಯೊಗವಾಗುತ್ತವೆ. ಇವು ಸತ್ತ ಮೇಲೆ ಇವುಗಳ ಚರ್ಮದಿಂದಲೂ ಕೊಡುಗಳಿಂದಲೂ ಎಲುಬುಗಳಿಂದಲೂ ಬಗೆ ಬಗೆಯಾದ ಸಾಮಾನುಗಳನ್ನು ಮಾಡುತ್ತಾರೆ.	ಆಕಳು ಎಂಥ ಪ್ರಾಣಿಯು? ಎತ್ತು ಆಕಳುಗಳು ಇವು ನಮಗೆ ಯಾವ ಯಾವ ಕೆಲಸಗಳಿಗೆ ಉಪಯೋಗವಾಗುತ್ತವೆ? ಇವು ಸತ್ತಮೇಲೆ ಇವುಗಳ ಶರೀರದ ಯಾವ ಯಾವ ಭಾಗಗಳನ್ನು ಯಾವಕೆಲಸಗಳಿಗೆಉಪಯೋಗಿಸುತ್ತಾರೆ?

ಕಪ್ಪು ಹಲಗೆಯ ಮೇಲೆ ಬರೆಯುವ ಸಂಕ್ಷಿಪ್ತ ವಿವರಣೆ.

ಆಕಳ ಅಂಗರಚನೆ	ಆಕಳ ಅಭ್ಯಾಸಗಳು
೧. ದವಡೆ—ಕೆಳದವಡೆಗೆ ಸಾರ್ವಚಲನೆಯೂ ಇರುತ್ತದೆ	(೧) ಹುಲ್ಲನ್ನು ಮೇಯುತ್ತದೆ.
೨. ಹಲ್ಲು—ವಿಶಾಲವಾದ ಸಾರ್ವದಂತಗಳಿರುತ್ತವೆ.	(೨) ಮೆಲಕಾಡಿಸುತ್ತದೆ.
೩. ಮೂಗು – ಹೊಳ್ಳಿಗಳು ಅಗಲವಾಗಿರುತ್ತವೆ.	
೪. ಕಣ್ಣುಗಳು—ಇವು ತಲೆಯ ಪಕ್ಕದಲ್ಲಿರುತ್ತವೆ.	
೫. ಕಿವಿಗಳು—ಬೇಕಾದಾಗ ಮೇಲಕ್ಕೂ ಕೆಳಗೂ ಆಡಿಸಬಲ್ಲದು	
೬. ಕೋಡುಗಳು—ಇವುಗಳೊಳಗೆ ಎಲುಬು ವ್ಯಾಪಿಸಿರುತ್ತದೆ.	
೭. ಚರ್ಮ—ಮಂದವಾದದ್ದು, ಮೋಟು ಕೂದಲುಳ್ಳದ್ದು.	
೮. ಅಂಗಾಲು—ಸೀಳಿರುತ್ತದೆ.	
೯. ಬಾಲ—ಉದ್ದವಾದದ್ದು, ತುದಿಯಲ್ಲಿ ಕೂದಲು ಗೊಂಡೆಯುಂಟಿರುತ್ತದೆ.	

ಕುದುರೆ.

ನಮ್ಮ ದೇಶದಲ್ಲಿ ರೈಲು ಮಾರ್ಗಗಳು ಏರ್ಪಡದೇ ಇರುವ ಸ್ಥಳಗಳಲ್ಲಿ ಎತ್ತಿನ ಬಂಡಿಗಳಲ್ಲಿ ಪ್ರಯಾಣ ಮಾಡುವದು ರೂಢಿಯಾಗಿರುತ್ತದಷ್ಟೇ. ಈ ವಿಧವಾದ ಪ್ರವಾಸಕ್ಕೆ ಬಹಳ ಹೆಚ್ಚುಕಾಲವು ಬೇಕಾಗುವುದು. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಧ್ಯವಾದಷ್ಟು ತೀವ್ರವಾಗಿ ಹೋಗಬೇಕಾದರೆ ಎತ್ತನ್ನು ಬಿಟ್ಟು ಮತ್ತೊಂದು ಪ್ರಾಣಿಯನ್ನು ಉಪಯೋಗಿಸಬೇಕು. ಈ ಪ್ರಾಣಿಯೇ ಕುದುರೆಯು. ಯೂರೋಪು ಖಂಡದ ದೇಶಗಳಲ್ಲಿ ಉಪಯೋಗಿಸಲ್ಪಡುವಷ್ಟು ಹೆಚ್ಚಾಗಿ ಉಪಯೋಗಿಸಲ್ಪಡದಿದ್ದರೂ, ಬಹುಕಾಲದದಿಂದಲೂ ನಮ್ಮ ದೇಶ

ದಲ್ಲಿ ಅರಸರಿಗೆ ಅವಶ್ಯಕವಾನಹನವಾಗಿದ್ದು ರಾಜ್ಯದ ಒಂದು ಮುಖ್ಯ ಬಲವೆಂದೆಣಿಸಲ್ಪಡುತ್ತಿರುವುದು. ಯುದ್ಧ ಕಾಲಗಳಲ್ಲಿಇದರ ಪ್ರಯೋಜನವು ಬಹಳ ಹೆಚ್ಚೆಂಬುವದು ಎಲ್ಲರಿಗೂ ತಿಳಿದ ಸಂಗತಿಯಾಗಿರುತ್ತದೆ. ಪ್ರಯಾಣ ಕಾಲಗಳಲ್ಲಿ ಎತ್ತಿನ ಹಾಗೆ ಬಂಡಿಗಳನ್ನು ಎಳೆಯುವದಕ್ಕೆ ಮಾತ್ರವಲ್ಲದೆ ದಾರಿಗಳು ಸರಿಯಾಗಿಲ್ಲದ ಸ್ಥಳಗಳಲ್ಲಿ ಜನರು ಸವಾರಿ ಮಾಡುವದಕ್ಕೂ ತಕ್ಕವುಗಳಾಗಿರುತ್ತವೆ.

ಕುದುರೆ, ಕತ್ತೆ, ಹೇಸರಕತ್ತೆ, ಇವು ಒಂದೇ ಜಾತಿಗೆ ಸೇರಿದ ಪ್ರಾಣಿಗಳು ಇವುಗಳಲ್ಲಿ ಕುದುರೆಯೆ ಬಹಳ ಸುಂದರವಾದ ಪ್ರಾಣಿಯು ತೀವ್ರವಾಗಿ ಓಡುವದೇ ಇದರ ಮುಖ್ಯ ಸ್ವಭಾವವು. ಇದಕ್ಕೆ ತಕ್ಕ ಹಾಗೆ ಇದರ ಕಾಲುಗಳು ಉದ್ದವಾಗಿಯೂ ಅವುಗಳ ಸ್ನಾಯುಗಳು ಬಹಳ ಕಸವುಳ್ಳವುಗಳಾಗಿಯೂ ಇರುತ್ತವೆ. ಕುದುರೆಯು ಆಳು-ಎತ್ತುಗಳಿಗಿಂತಲೂ ದೊಡ್ಡದಾಗಿಯೂ ಹೆಚ್ಚು ಬಲವುಳ್ಳದ್ದಾಗಿಯೂ ಇರುತ್ತದೆ ಸಾಧಾರಣವಾಗಿ ಕುದುರೆಯ ಎತ್ತರವು ೫ ಅಡಿಗಳಿದ್ದು ಅದರ ಉಪ್ಪವು ೭ ಅಡಿ ೩ ಅಂಗುಲಗಳಿರುತ್ತದೆ.

ಶರೀರಃ—ಕುದುರೆಯ ಶರೀರವು ಉದ್ದವಾಗಿದ್ದು, ಅದರ ಅಂಗಗಳು ತುಂಬಿಕೊಂಡು ದುಂಡುಗಿರುವದರಿಂದ ನೋಟಕ್ಕೆ ಬಹಳ ಸುಂದರವಾದ ಪ್ರಾಣಿಯಾಗಿರುತ್ತದೆ. ಅದರ ಎದೆಯು ವಿಸ್ತಾರವಾದದ್ದೂ ಆಳವುಳ್ಳದ್ದೂ ಆಗಿ ಅದರ ತೊಡೆಗಳು ಬಲವಾಗಿರುತ್ತವೆ. ಕುದುರೆಯು ಮುಖ್ಯವಾಗಿ ಓಡುವದಕ್ಕೆ ಏರ್ಪಟ್ಟಿರುವದರಿಂದ ವಿಶಾಲವಾದ ಮತ್ತು ಆಳವಾದ ಎದೆಯು ಅದಕ್ಕೆ ಅವಶ್ಯಕವೆಂದು ಹೇಳಬೇಕಾದುದಿಲ್ಲ. ಕುದುರೆಯು ಓಡುವಾಗ ಬಹಳ ತೀವ್ರವಾಗಿ ಉಸುರಾಡಿಸುವಂತೆ ಕಾಣುತ್ತದಪ್ಪೇ. ಎದೆಯಲ್ಲಿ ಹೆಚ್ಚು ಹೆಚ್ಚಾಗಿ ಹವೆಯನ್ನು ಸೇರಿಸಿಕೊಳ್ಳುವದಕ್ಕೆ ಕುದುರೆಯು ಮಾಡುವ ಪ್ರಯತ್ನವೇ ಇದಕ್ಕೆ ಕಾರಣವು. ಭಾರವನ್ನು ಹೊರುವದಕ್ಕೂ ಎಳೆಯುವದಕ್ಕೂ ತೊಡೆಗಳಲ್ಲಿ ಹೆಚ್ಚಾದ ಬಲವಿರಬೇಕು. ಅದರ ಬೆನ್ನು ಬಗ್ಗಿದ್ದಾಗಿಯೂ ಅಗಲವಾಗಿಯೂ ಇರುವದರಿಂದ ಅದರ ಮೇಲೆ ಭದ್ರವಾಗಿ ಕೂಡುವದಕ್ಕೆ ಅನುಕೂಲವಾಗುತ್ತದೆ.

ತಲೆ, ಕುತ್ತಿಗೆ:— ಕುದುರೆಯ ತಲೆಯು ಆಕಳ ತಲೆಗಿಂತಲೂ ಉದ್ದವಾದದ್ದು. ಮುಂಭಾಗಕ್ಕೆ ಸಣ್ಣದಾಗುತ್ತ ಮೂಗಿನ ಬಳಿಯಲ್ಲಿ ಮೊನೆಯಾಗಿರುವಂತೆ ಕಂಡುಬರುವುದು. ಅದರ ದವಡೆಗಳು ಬಹಳ ಉದ್ದವಾಗಿರುತ್ತವೆ. ಕುದುರೆಯ ಕುತ್ತಿಗೆಯು ಉದ್ದವಾಗಿಯೂ ಬಹು ಅಂದವಾಗಿಯೂ ಇರುತ್ತದೆ. ಹುಲ್ಲು ಮೇಯುವ ಜಂತುಗಳಿಗೆ ಕುತ್ತಿಗೆಯು ಉದ್ದವಾಗಿರುವದು ಅವಶ್ಯಕ. ಇದು ಮೇಲ್ಭಾಗದಲ್ಲಿ ಬಿಲ್ಲಿನಂತೆ ಬಗ್ಗಿದ್ದು ತಲೆಯ ಕಡೆಗೆ ಸಣ್ಣದಾಗುತ್ತ ಬರುತ್ತದೆ. ಕುತ್ತಿಗೆಯ ಮೇಲೆ ಕೂದಲುಗಳು ಸಾಲಾಗಿ ಬೆಳೆದು ಕೆಳಕ್ಕೆ ಜೋಲಾಡುತ್ತಿರುತ್ತವೆ. ಆಕಳಿಗಿರುವಂತೆ ಕುದುರೆಗೆ ಕೋಡುಗಳಿರುವದಿಲ್ಲ.

ಹಲ್ಲುಗಳು:—ಕುದುರೆಯು ಆಕಳ ಹಾಗೆ ಕೇವಲ ಸಸ್ಯಾಹಾರಿಯಾದದ್ದರಿಂದ ಅದರ ಹಲ್ಲುಗಳು ಅದರ ಆಹಾರಕ್ಕೆ ತಕ್ಕಂತೆ ಇರುತ್ತವೆ. ಕುದುರೆಯ ಮೇಲಿನ ದವಡೆಯ ಮುಂಭಾಗದಲ್ಲಿ ಆಕಳಲ್ಲಿರುವ ಹಾಗೆ ಮಾಂಸ ಖಂಡವಿರದೆ ಹಲ್ಲುಗಳಿರುತ್ತವೆ. ಕುದುರೆಯ ಬಾಯಿಯ ಮುಂಭಾಗದಲ್ಲಿ ಮೇಲೆ ೬ ಹಲ್ಲುಗಳೂ ಕೆಳಗೆ ೬ ಹಲ್ಲುಗಳೂ ಇರುತ್ತವೆ ಈ ಹಲ್ಲುಗಳು ಬಡಗಿಯ ಉಳಿಯಂತಿದ್ದು ಬಹಳ ಹರಿತವಾಗಿರುತ್ತವೆ. ಕುದುರೆಯು ಮೆಲಕಾಡಿಸುವ ಪ್ರಾಣಿಯಲ್ಲ ಬಾಯಿಯ ಮುಂಭಾಗದ ಹಲ್ಲುಗಳಿಂದ ಹುಲ್ಲನ್ನು ಕತ್ತರಿಸಿ ಆಗಲೇ ಚನ್ನಾಗಿ ಅಗಿದು ನುಂಗುತ್ತದೆ. ಈ ಹಲ್ಲುಗಳ ಹಿಂದೆ ಉಭಯ ಪಾರ್ಶ್ವಗಳಲ್ಲಿಯೂ ಕೋರೆ ಹಲ್ಲುಗಳೂ, ಇವುಗಳ ಹಿಂದೆ ಹಲ್ಲುಗಳಿಲ್ಲದ್ದ ಸ್ಥಳವೂ, ಅನಂತರ ಪಾರ್ಶ್ವದಂತಗಳೂ ಇರುತ್ತವೆ. ಕುದುರೆಯನ್ನು ಬಂಡಿಗೆ ಕಟ್ಟುವಾಗಲೂ ಸವಾರಿ ಮಾಡುವಾಗಲೂ ಅದರ ಬಾಯಿಯಲ್ಲಿ ಒಂದು ಉಕ್ಕಿನ ತುಂಡವನ್ನು ಅಡ್ಡವಾಗಿ ಹಾಕುತ್ತಾರೆ. ಈ ತುಂಡು ಕುದುರೆಯ ದವಡೆಯಲ್ಲಿ ಹಲ್ಲು ಇಲ್ಲದ ಸ್ಥಳದಲ್ಲಿ ಬೀಳುವದರಿಂದ ಇದನ್ನು ಹಾಕಿರುವಾಗಲೂ ಕುದುರೆಯು ಬಾಯಿಯನ್ನು ತೊದರೆಯಿಲ್ಲದೆ ಮುಚ್ಚಿಕೊಳ್ಳುವುದು. ಆಕಳ ಬಾಯಿಯಲ್ಲಿರುವಂತೆಯೆ ಕುದುರೆಯ ಬಾಯಿಯಲ್ಲಿ ಪಾರ್ಶ್ವದಂತಗಳು ವಿಶಾಲವಾಗಿರುತ್ತವೆ.

(ಮುಂದೆ ಸಾಗುವದು.)

ಪತ್ರವ್ಯವಹಾರ.

ಕಳೆದ ತಿಂಗಳ ಶಾಲಾಪತ್ರಕದಲ್ಲಿ ಮಿ. ದೊಡವಾಡಕರ ಇವರು ಕೊಟ್ಟ ಕೂಟ ಪ್ರಶ್ನೆಗಳಿಗೆ ಕೆಳಗೆ ಬರದವರಿಂದ ಉತ್ತರಗಳು ಬಂದಿವೆ.

ದೇ. ಶಿ. ತುರಮು, ದೇ. ಸ. ಸಿರ್ಸೀಕರ, ಸ್ಕೂಲಮಾಸ್ತರ ಭಟ್ಕಳ, ಮಾ. ಕೃ. ದಪ್ತರದಾರ, ಗೋ. ಬಾ. ಕವಾಕೇರಿ, ಫ. ಬ. ಹೂಲಿ, ಬಾ. ಚ. ಸಾವಂತ, ಮೇ. ನಾ. ಪಾಟೀಲ, ಬಿ. ಜ. ಮುರಗೋಡ, ಹ. ನ. ಕುಲಕರ್ಣಿ, ಬಿ. ವೆ. ಕುಲಕರ್ಣಿ, ವಿಶ್ರೀಕೋಟ, ಬಸವ್ವಾ ಮಠದ, ಧೋ. ಕಾ. ಕುಲಕರ್ಣಿ, ತು. ಶಿ, ಮಣ್ಣೂರ, ಹ. ಕೃ. ಕುಲಕರ್ಣಿ, ಭ. ವಾ. ದೇಶಪಾಂಡೆ, ಹೆ. ವೆ. ಕಾಮಾತ. ಹ. ಶೇ. ಕುಲಕರ್ಣಿ, ಬೋ. ಅ. ಪಾಟೀಲ, ಗು. ಜ. ಹಿರೇಮಠ, ಭಿ. ರಾ. ಹಾವಳಿ, ಭೀ. ಜೀ. ಹುಲಿಕವಿ, ಭೈ. ಗು. ಹುದ್ದಾರ, ದ. ಮ. ಕಾಮನಹಳ್ಳೀಕರ, ಹ. ಅ. ಅಥಣಿ.

ಇವುಗಳಲ್ಲಿ ಕೆಲವು ಮಾತ್ರ ಸರಿಯಾದ ಉತ್ತರಗಳಿರುವವು. ಅವುಗಳಲ್ಲಿ ಬಿಂದು ವೆಂಕಟೇಶ ಬುಲ್ಲಿ, ಎಂಬವರು ಕಳಿಸಿದ್ದು ಯೋಗ್ಯವೆಂದು ಕಂಡುಬಂದ ಮೇರೆಗೆ ಅದನ್ನು ಇದರ ಕೆಳಗೆ ಕೊಡುವೆವು.

ಕೂಟ ಪ್ರಶ್ನೆಗಳಿಗೆ ಉತ್ತರಗಳು.

(೧) ಸೂರ್ಯಾಸ್ತ ಸಮಯದಲ್ಲಿ ಮನೋಹರವೂ ಮಧುಯುಕ್ತವೂ ಆದ ಕಮಲದಲ್ಲಿ, (ನಳಿನೆಯಲ್ಲಿ) ವಿಚಿತ್ರ ಕಾಯವುಳ್ಳ, ಭೃಂಗವು ಮಧುಪಾನ ಮಾಡುತ್ತ ಕುಳಿತಿರುವಷ್ಟರಲ್ಲಿಯೇ ಸೂರ್ಯನು ಅಸ್ತಂಗತನಾಗಲು ಕಮಲವು ತನ್ನ ಪಕಳಿಗಳನ್ನು ಮುಚ್ಚಿಕೊಂಡಿತು.

ಇಲ್ಲಿ ನಮ್ಮ ಪೃಚ್ಛಕರು ಕಮಲವನ್ನು ಚಿತ್ರವಿಚಿತ್ರವಾದ ಪಾತ್ರೆಗೂ, ಕಮಲದಲ್ಲಿರುವ ಮಧುವನ್ನು ಬಡಿಸಿರುವ ಪದಾರ್ಥಕ್ಕೂ ಹೋಲಿಸಿ, ಭೃಂಗವು ಮಧುವನ್ನೆಲ್ಲ ಹೀರಿಕೊಳ್ಳುವಷ್ಟರಲ್ಲಿಯೇ ಕಮಲವು ಮೊಗ್ಗಾದದ್ದನ್ನು ಕಂಡು ಕಮಲವೆಂಬ ಪಾತ್ರೆಯೇ ಭೃಂಗವೆಂಬ ಪುರುಷನನ್ನು ನುಂಗಿತೆಂದು ಹೇಳುತ್ತಾರೆ. ಆಗ ಪತಿಯು ಒಳಗೆ ಸಿಕ್ಕನೆಂದು ಹೊರಗುಳಿದ ಭೃಂಗಗಳು ದುಃಖದಿಂದ ಸೂರ್ಯನನ್ನು ನೊರೆಯಿಡುವಂತೆ ಝೇಂಕರಿಸುತ್ತ ಮೇಲಕ್ಕೆ ಹಾರಿ ಹೋದವು.

(∴ ವಿಚಿತ್ರ ಕಾಯುವುಳ್ಳ ಪುರಷನು = ಭೃಂಗವು.)

(೨) ಗಲಗು:— ಇದು ಭಯುಂಕರವಾದ ಅರಣ್ಯದಲ್ಲಿ ಹುಟ್ಟಿ, ನೀರಿನಿಂದ ಜೋಪಾನವಾಗಿ ಅದಕ್ಕೆ ಗಣಿಕೆಗಳು ಒಡೆದು ದೊಡ್ಡದಾಗಲು, ಉಪಯೋಗಾರ್ಥವಾಗಿ ಜನರು ಕೈಯಿಂದ ಕೊಯ್ದು ಮನೆಗೆ ತರುವರು. ಆಮೇಲೆ ಅದನ್ನು ಕೆತ್ತಿ, ಲೆಕ್ಕಣಿಕೆಯನ್ನು ಮಾಡಿ, ಅಂಗುಷ್ಠ ತರ್ಜನಿ, ಮಧ್ಯಮ, ಈ ಮೂರು ಬೆರಳುಗಳಿಂದ, ಹಿಡಿದು ಬರೆಯುತ್ತ ನಡುನಡುವೆ ವಿಶ್ರಾಂತಿಗಾಗಿ ಕಿವಿಯಲ್ಲಿಟ್ಟುಕೊಳ್ಳುವರು. ಈ ಕೃತಿಯನ್ನು ನಾವು ದಿನಾಲು ಮಾಡುತ್ತಿರುವೆವು ಅನ್ಯರು ಮಾಡಿದ್ದನ್ನು ನೋಡುತ್ತಿರುವೆವು.

ಇಲ್ಲಿ ಸಹ ನಮ್ಮ ಪೃಚ್ಛಕರು ನೀರಿನಿಂದ ಸಂರಕ್ಷಿತವಾದ ಗಲಗನ್ನು ವರುಣನಿಂದ ರಕ್ಷಿತಳಾದ ಒಬ್ಬ ಬಾಲೆಗೂ, ಗಣಿಕೆಯೊಡಿದ ಗಲಗನ್ನು ಪ್ರಾಯದಸ್ತ್ರೀಗೂ, ಕೈಯ ಐದು ಬೆರಳುಗಳನ್ನು ನುದುವೆಯಾಗಲಿಚ್ಛಿಸಿದ ಐವರು ಪುರುಷರಿಗೂ ಹೋಲಿಸಿ, ವಿಶ್ರಾಂತಿಗಾಗಿ ಕಿವಿಯಲ್ಲಿ ಇಟ್ಟುಕೊಳ್ಳೋಣವೇ ಕರ್ಣಾಶ್ರಯಕ್ಕೆ ಕಳಿಸಿದಂತೆಯೂ, ವರ್ಣಿಸಿರುವರು.

ತವರ ಮನೆಯ ಹೆಸರು 'ಗಲಗು', ಅತ್ತೆಯ ಮನೆಯ ಹೆಸರು 'ಲೆಕ್ಕಣಿಕೆ'.

ಪತ್ರಗಳಸಾರಾಂಶ.

ಗಜೇಂದ್ರಗಡ ಶಾಲೆಯ ವಿದ್ಯಾರ್ಥಿಗಳು ತಾರೀಖು ೧೪ನೇ ಜೂನ ದಿವಸ, ವಾರಲೋನದ ನಿಮಿತ್ತವಾಗಿ 'ವಿವೇಕ ವಿಜಯ' ವೆಂಬ ನಾಟಕವನ್ನು ಮಾಡಿ ಅದರಿಂದ ಬಂದ ಉತ್ಪನ್ನ ದೊಳಗಿಂದ ಪೋಸ್ಟಿನ ಆರು ಸರ್ಟಿಫಿಕೇಟುಗಳನ್ನು ಕೊಂಡರೆಂದು ಅಲ್ಲಿಯ ಉಪಶಿಕ್ಷಕರು ತಿಳಿಸುತ್ತಾರೆ.

ಹುನಗುಂದ ತಾಲೂಕ ಹೈಕ ಗೂಡೂರ ಶಾಲೆಯಲ್ಲಿ ವಾರಲೋನದ ಬಗ್ಗೆ ಕೂಡಿದ ಸಭೆಗೆ ಊರೊಳಗಿನ ಸಭ್ಯಗೃಹಸ್ಥರು ದಯಮಾಡಿಸಿದ್ದರು. ಅಧ್ಯಕ್ಷರಾದ ಶ್ರೀಯುತ ವೆಂಕಪ್ಪಣ್ಣಾ ಕುಲಕರ್ಣಿಯವರು ೫ ರೂ. ಕೊಟ್ಟರು. ಯಾವತ್ತೂ ವಿದ್ಯಾರ್ಥಿಗಳು ಕೂಡಿ ೭, ೧೦ ರೂ. ಶ್ರೀ. ಘಟಣ ಸಾ. ಪಾಟೀಲ ಇವರು ೧೫, ೮. ಮತ್ತು ಉಳಿದ ಸಭ್ಯಗೃಹಸ್ಥರು ಕೂಡಿ ೧೫, ೮ ರೂ. ಕೂಡಿಸಿ ಕೊಟ್ಟರೆಂದು ಅಲ್ಲಿಯಸ್ಕೂಲ ಬೋರ್ಡ ಮೆಂಬರರೊಬ್ಬರು ಬರೆಯುತ್ತಾರೆ

ಮುದ್ದೇಬಿಹಾಳದ ಮಾಮಲೇದಾರರಾದ ರಾ. ಸಾ. ಮುಸರಗುಪಿಯವರು ತಾಳೀಕೋಟೆಯ ಗರ್ಲಸ್ಕೂಲಿಗೆ ಹೋದಾಗ್ಗೆ ಅಲ್ಲಿ ನಡೆದಿರುವ ಅಭ್ಯಾಸ ಮುಂತಾದ್ದನ್ನು ನೋಡಿ ಸಂತುಷ್ಟರಾಗಿ, ಶಾಲೆಗೆ ಸಿಯಾನು ತರಿಸುವ ಬಗ್ಗೆ ಊರೊಳಗಿನ ಸಾವುಕಾರರಿಂದ ೫೦ ರೂ. ಕೂಡಿಸಿ ಕೊಟ್ಟಿರುವರೆಂದು ಆ ಶಾಲೆಯ ಹೆಡ್ ಮಾಸ್ತರರಾದ ಮಿ. ಭೀ. ಬ. ಕುಲಕರ್ಣಿಯವರು ತಿಳಿಸುವರು.

"ಸಿಂದಗಿ ತಾಲೂಕ ಹಿಪ್ಪರಗಿ ಉರ್ದು ಶಾಲೆಯು ಇದುವರೆಗೆ ಒಂದು ಮಸೀದೆಯಲ್ಲಿತ್ತು. ಇದನ್ನು ಕಂಡು ಅಲ್ಲಿರುವ ಅಬ್ದುಲ್ಲಾ ಸಾ. ಸವದಾಗರ ಇವರು ಸುಮಾರು ೬೦ ಹುಡುಗರಿಗೆ ಸಾಲುವಷ್ಟು ಒಂದು ಇಮಾರತನ್ನು ಕಟ್ಟಿಸಿ ಕೊಟ್ಟಿದ್ದಲ್ಲದೆ ಅದರ ಹತ್ತರವೇ ಶಿಕ್ಷಕರಸಲುವಾಗಿ ಒಂದು ಮನೆಯನ್ನು ಸಹ ಸ್ವಂತ ಖರ್ಚಿನಿಂದ ಕಟ್ಟಿಸಿಕೊಟ್ಟಿರುವರು. ಇದು ಸದರಿ ಸಾಹೇಬರವರಿಗೆ ಭೂಷಣವು" ಎಂದು ಆ ಶಾಲೆಯ ಹೆಡ್‌ಮಾಸ್ತರರು ಬರೆಯುತ್ತಾರೆ.

"ಬೆಳವಿಗಿ ಶಾಲೆಯಲ್ಲಿ ತಾರೀಖು ೨೭-೩-೧೭ನೇ ದಿವಸ ಗಳಗನಾಥದ ಇನಾಮದಾರರಾದ ಶ್ರೀಯುತ ನೀಲಕಂಠ ಶಾಸಿಗಳವರ ಅಧ್ಯಕ್ಷತೆಯ ಕೆಳಗೆ ಇನಾಮಿನ ಸಮಾರಂಭದ ಬಗ್ಗೆಯೂ ಸದ್ಯದ ಯುದ್ಧದ ಬಗ್ಗೆ ಮಾಹಿತಿಕೊಡುವ ಸಲುವಾಗಿಯೂ ಸಭೆಯು ನೆರೆದಿತ್ತು.

ಆ ಪ್ರಸಂಗದಲ್ಲಿ ಸುಮಾರು ೧೯ ರೂ. ವರ್ಗಣಿಯು ವಸೂಲಾಯಿತು." ಎಂದು ಮುಲ್ಕೀ ಪರೀಕ್ಷೆಯ ಓರ್ವ ವಿದ್ಯಾರ್ಥಿಯು ತಿಳಿಸುವನು.

ಹುನಗುಂದ ತಾಲೂಕ ಕಂದಗಲ್ಲ ಶಾಲೆಯಲ್ಲಿ ವಿದ್ಯಾರ್ಥಿಗಳ ಪರಸ್ಪರ ಸಹಕಾರೀ ಸಂಘವು ಸ್ಥಾಪನೆಯಾಗಿದ್ದು, ಖರ್ಚು ಹೋಗಿ ಸದ್ಯಕ್ಕೆ ಸುಮಾರು ೩೪ ರೂ.ಗಳು ಶಿಲುಕು ಉಳಿದಿರುವವೆಂತಲೂ ಅಲ್ಲಿಯ ಅ. ದೊ. ಪಾಟೀಲ ಇವರಿಂದ ಸಂಘಕ್ಕೆ ೧೦೦ ರೂ. ಕೊಡಲ್ಪಟ್ಟದ್ದು, ಅವು ಬಂದ ಕೂಡಲೆ ಅಂಗಡಿಯನ್ನು ತೆಗೆದು ಅದಕ್ಕೆ ಅವರ ಹೆಸರಿಟ್ಟು ರಜಿಸ್ತರ ಮಾಡಿಸುವವನ್ನು ಗೊತ್ತುಪಡಿಸಿರುವದೆಂತಲೂ, ಆ ಶಾಲೆಯ ಅಸಿ. ಮಾಸ್ತರ ಗೋ. ರ. ಬಾಸಟಿ ಎಂಬವರು ತಿಳಿಸುತ್ತಾರೆ.

ವಿದ್ಯಾಖಾತೆಯ ನೋಟೀಸುಗಳು.

ಮಿ. ಎನ್. ಡಿ. ಮುಳಬಾಗಲ ಇವರ "ನುಡಿಗಟ್ಟು" ಎಂಬ ಕನ್ನಡ ಸಂಕ್ಷಿಪ್ತ ಶಾಲಾವ್ಯಾಕರಣದ ಬೆಲೆಯು ೫ ಆಣೆ ಇದ್ದದ್ದನ್ನು ಅವರ ವಿನಂತಿಯ ಮೇರೆಗೆ ೭ ಆಣೆ ೬ ಪೈ ಮಾಡಲಿಕ್ಕೆ ಮಂಜೂರಿಯನ್ನು ಕೊಟ್ಟಿರುತ್ತದೆ.

ಏರಿಸಿದ ಬೆಲೆಯು ಹೊಸದಾಗಿ ತೆಗೆದ ಆವೃತ್ತಿಗೆ ಮಾತ್ರ ಇರತಕ್ಕದೆಂಬದನ್ನು ಲಕ್ಷದಲ್ಲಿಡತಕ್ಕದ್ದು. ಹೊಸ ಆವೃತ್ತಿಯ ಪ್ರತಿಯೊಂದು ಪುಸ್ತಕದಲ್ಲಿ, ಮುದ್ರಿಸಿದ ಪ್ರತಿಗಳ ಸಂಖ್ಯೆ, ಇಸವಿ, ಮತ್ತು ಬೆಲೆ ಇವುಗಳನ್ನು ಸ್ಪಷ್ಟವಾಗಿ ಕಾಣಿಸಿರತಕ್ಕದ್ದು. ಈ ಏರಿದ ಬೆಲೆಯು ಸಾಮಾನ್ಯ ಪರಿಸ್ಥಿತಿಯಲ್ಲಿ ಮುದ್ರಿಸಿದ ಪ್ರತಿಗಳಿಗೆ ಲಾಗೂ ಆಗಲಾರದು.

POONA,
12th June, 1917.

(Sd.) **J. G. Covernton,**
Director of Public Instruction.

ಮೆ. ಎ. ಇ. ಸಾ ಬಹಾದ್ದೂರವರ ಇಂಗ್ಲೀಜೀ ಪತ್ರನಂಬರ ೬೪೦೧ ತಾರೀಖು ೧೩ನೇ ಜೂನ ೧೯೧೭ನೆಯ ಪ್ರಕಾರ ಪ್ರಸಿದ್ಧ ಪಡಿಸುವದೇನಂದರೆ:—

ಮಿ. ಬಿ. ಜಿ. ದಿವೇಕರ ಇವರ ನಿಬಂಧ ರತ್ನಾವಲಿ ಎಂಬ ಪುಸ್ತಕವನ್ನು ಕನ್ನಡ ಪ್ರಾಥಮಿಕ ಶಾಲೆಗಳ ಲಾಯಬ್ರರಿಗೂ ಇನಾಮಿಗೂ ಮಂಜೂರ ಮಾಡಿಯುತ್ತದೆ. ಅದು ಟೆಕ್ಸ್ಟ ಪುಸ್ತಕದಂತೆ ಮಂಜೂರ ಆಗಿರುವದಿಲ್ಲ.

R. S. Kulkarni,
Principal.

ವ್ಹರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆಯು.
ದಕ್ಷಿಣಭಾಗ.

ಈ ನೋಟೀಸಿನಿಂದ ತಿಳಿಸುವದೇನಂದರೆ:—ಸನ್ ೧೯೧೫ನೇ ಇಸವಿಯ ತಾರೀಖು ೨೪ ನೇ ಜೂನ ತಿಂಗಳಿನ ಮುಂಬಯಿ ಗವ್ಹರ್ನಮೆಂಟ ಗ್ಯಾಝೆಟಿನ ೧ ನೇ ಭಾಗದ ೧೬೨೧ರಿಂದ ೧೬೨೪ ನೇ ಪುಟಗಳಲ್ಲಿ ಪ್ರಸಿದ್ಧಮಾಡಿದ ನಿಯಮಗಳಿಗನುಸಾರವಾಗಿ ವ್ಹರ್ನಾಕ್ಯುಲರ ಫಾಯನಲ್ ಪರೀಕ್ಷೆಯು ಸೋಮವಾರ ತಾರೀಖು ೩ ನೇ ಸಪ್ಟಂಬರ ಸನ್ ೧೯೧೭ ನೇ ದಿವಸ ಹಾಗು ತದುತ್ತರ ದಿವಸಗಳಲ್ಲಿ, ದಕ್ಷಿಣಭಾಗದ ಕೆಳಗೆ ಕಾಣಿಸಿದ ಸೆಂಟರುಗಳಲ್ಲಿ ನಡೆಯುವದು:—

ಧಾರವಾಡ	ಕಾರವಾರ.
ಬೆಳಗಾವ	ರತ್ನಾಗಿರಿ.
ವಿಜಾಪುರ	ಅಲಿಬಾಗ.

ಕೊಲ್ಹಾಪುರ.

೨. ಪ್ರತಿಯೊಂದು ಸೆಂಟರಿನಲ್ಲಿ ಈ ಪರೀಕ್ಷೆಯು ಒಂದು ಕಮೀಟಿಯ ಮುಖಾಂತರವಾಗಿ ನಡೆಯುವದು; ಮತ್ತು ಧಾರವಾಡ, ಬೆಳಗಾವ, ವಿಜಾಪುರ, ಕಾರವಾರ, ರತ್ನಾಗಿರಿ ಹಾಯಸ್ಕೂಲುಗಳ ಹೆಡ್ ಮಾಸ್ತರರು ಸದರೀ ಪರೀಕ್ಷಾ ಕಮೀಟಿಗಳ ಅಧ್ಯಕ್ಷರಿರುವರು. ಅಲೀಬಾಗದಲ್ಲಿ ಕುಲಾಬಾ ಜಿಲ್ಲೆಯ ಡೆ. ಎ. ಇನ್‌ಸ್ಪೆಕ್ಟರರೂ ಕೊಲ್ಹಾಪುರದಲ್ಲಿ ಕೊಲ್ಹಾಪುರ ಸಂಸ್ಥಾನದ ಎ. ಇನಸ್ಪೆಕ್ಟರರೂ ಅಧ್ಯಕ್ಷರಿರುವರು.

೩. ಪರೀಕ್ಷೆಗೆ ಕೂಡ್ರುವ ಪರವಾನಗಿಯ ಬಗ್ಗೆ ಅರ್ಜಿಗಳನ್ನು ಉಮೇದವಾರನು ಯಾವ ಜಿಲ್ಲೆಯಲ್ಲಿ ಇರುವನೋ ಆ ಜಿಲ್ಲೆಯ ಪರೀಕ್ಷಾ ಕಮೀಟಿಯ ಅಧ್ಯಕ್ಷರಿಗೆ ತಾರೀಖು ೧ ನೇ ಅಗಪ್ಟ ಸನ್ ೧೯೧೭ ನೇ ದಿವಸ ಅಥವಾ ಅವಕ್ಕೂ ಪೂರ್ವದಲ್ಲಿ ತಲಪುವಂತೆ ಕಳಿಸತಕ್ಕದ್ದು. ಅನಂತರ ಬಂದ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲ. ಆ ಅರ್ಜಿಗಳನ್ನು ಈ ವಿಷಯದಲ್ಲಿ ವಿಧಿಸಲ್ಪಟ್ಟ ಅರ್ಜಿಯ ಛಾಪೀ ನಮೂನೆಗಳ ಮೇಲೆಯೇ ಮಾಡತಕ್ಕದ್ದು. ಈ ನಮೂನೆಗಳ ಬಗ್ಗೆ ಪ್ರೆಸಿಡೆಂಟರ ಕಡೆಗೆ ಅರ್ಜಿಗಳನ್ನು ಮಾಡಿದರೆ ಅವು ಪುಕ್ಕಟೆಯಾಗಿ ದೊರೆಯುವವು.

೪. ಧಾರವಾಡ ಮತ್ತು ಕಾರವಾರ ಜಿಲ್ಲೆಗಳ ಮಾನ್ಯವಾದ ದೇಶ ಭಾಷೆಯು ಕನ್ನಡ ಇರುವದು. ಬೆಳಗಾವ, ವಿಜಾಪುರ ಜಿಲ್ಲೆಗಳ ಮಾನ್ಯವಾದ ದೇಶಭಾಷೆಗಳು ಕನ್ನಡ ಮತ್ತು ಮರಾಠಿ ಇರುವವು. ರತ್ನಾಗಿರಿ, ಕುಲಾಬಾ, ಕೊಲ್ಹಾಪುರಗಳ ದೇಶಭಾಷೆಯು ಮರಾಠಿ ಇರುವದು. ಧಾರವಾಡ ಕಾರವಾರ ಜಿಲ್ಲೆಗಳ ಮರಾಠೀ ಉಮೇದವಾರರು ಧಾರವಾಡದಲ್ಲಿ ಪರೀಕ್ಷೆಗೆ ಕೂಡ್ರಬೇಕೋ, ಬೆಳಗಾವಿಯಲ್ಲಿ ಪರೀಕ್ಷೆಗೆ ಕೂಡ್ರಬೇಕೋ ಅಥವಾ ಕಾರವಾರದಲ್ಲಿ ಪರೀಕ್ಷೆಗೆ ಕೂಡ್ರಬೇಕೋ ಎಂಬದನ್ನು ಪ್ರತ್ಯೇಕವಾಗಿ ಸೆ. ಎಜ್ಯುಕೇಶನಲ್ ಇನಸ್ಪೆಕರ ಸಾಹೇಬರವರು ನಿರ್ಣಯಿಸುವರು. ತಾರೀಖು ೪ ನೇ ಜನವರಿ ಸನ್ ೧೯೧೭ ಗಳನೇ ಇಸವಿಯ ಮುಂಬಯಿ ಸರಕಾರದ ಗ್ಯಾಝೆಟಿನ ೧ ನೇ ಭಾಗದ ೧೩ ನೇ ಪುಟದಲ್ಲಿ ಮುದ್ರಿಸಲ್ಪಟ್ಟ ವಿದ್ಯಾಖಾತೆಯ ಸರಕಾರೀ ಜಾಹಿರಾತು ನಂ ೩೪೩೪ ತಾರೀಖು ೨೩ ನೇ ದಿಸಂಬರ ಸನ್ ೧೯೧೩ ನೇ ಪ್ರಕಾರ ಎಲ್ಲ ವಿಷಯಗಳಲ್ಲಿ ಊರ್ದು ಭಾಷೆಯ ದ್ವಾರ ಪರೀಕ್ಷಿಸಲ್ಪಡಲಪೇಕ್ಷಿಸುವ ಉಮೇದವಾರರಿಗೋಸ್ಕರ ಎಲ್ಲ ವಿಷಯಗಳಲ್ಲಿ ಊರ್ದು ಭಾಷೆಯ ಪ್ರಶ್ನೆ ಕಾಗದಗಳು ಕೊಡಲ್ಪಡುವವು.

೫. ಕಾರವಾರ ಜಿಲ್ಲೆಯ ಹಲ್ಲಿಯಾಳ ತಾಲೂಕಿನ ಉಮೇದವಾರರೂ ಸಿರ್ಸಿ ತಾಲೂಕ ಪೈಕೆ ಬನವಾಸಿಯ ಉಮೇದವಾರರೂ ಧಾರವಾಡ ಸೆಂಟರಿನಲ್ಲಾಗುವ ಪರೀಕ್ಷೆಗೆ ಕೂಡ್ರಬಹುದು. ಕುಲಾಬಾ ಜಿಲ್ಲೆಯ ಕರ್ಜತ ತಾಲೂಕಿನ ಉಮೇದವಾರರು ಠಾಣಾ ಸೆಂಟರಿನಲಾಗುವ ಪರೀಕ್ಷೆಗೆ ಕೂಡ್ರಬಹುದು; ಮತ್ತು ಸಾಂಗಲಿ ಸಂಸಾನದ ಕುರಲ ತಾಲೂಕಿನ ಉಮೇದವಾರರು ಸಾತಾರಾ ಸೆಂಟರಿನಲ್ಲಾಗುವ ಪರೀಕ್ಷೆಗೆ ಕೂಡ್ರ

೬. ಇದಕ್ಕೂ ಹೆಚ್ಚಿನ ಮಾಹಿತಿಯ ಬಗ್ಗೆ ಧಾರವಾಡ, ಬೆಳಗಾವ, ವಿಜಾಪುರ, ಕ್ಯಾನರಾ, ರತ್ನಾಗಿರಿ ಮತ್ತು ಕುಲಾಬಾ ಜಿಲ್ಲೆಗಳ ಕಲೆಕ್ಟರ ಸಾಹೇಬರವರಿಂದ ಮತ್ತು ಕೊಲ್ಹಾಪುರ ದಿವಾನರಿಂದ ಪ್ರಸಿದ್ಧಿಸಲ್ಪಡುವ ಜಾಹೀರಾತುಗಳನ್ನು ನೋಡತಕ್ಕದ್ದು.

OFFICE OF THE,
Educational Inspector S. D.
8th June, 1917.

K. S. Hungund,
Ag. Educational Inspector S. D.

ಧಾರವಾಡ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗ ಸ್ಕೂಲಿನಲ್ಲಿ ಮಹಮಡನ್ ಬರ್ಸರೀ ಫಂಡದ ಒಂದು ಸ್ಕಾಲರಶಿಪ್ಪು ಕೊಡುವ ಬಗ್ಗೆ ಮುಂಬಯಿ ಸರಕಾರೀ ಗ್ಯಾಝೆಟೀಯರ ತಾರೀಖು ೩೦ನೇ ದಿಶಂಬರ ೧೯೦೪ ಭಾಗ ೧ ಪುಟ ೨೦೬ರಿಂದ ೨೦೬೮ರಲ್ಲಿ ಕೊಟ್ಟ ನಿಯಮಗಳ ಪ್ರಕಾರ ಸದರೀ ಸ್ಕಾಲರಶಿಪ್ಪಿನ ಬಗ್ಗೆ ಪರೀಕ್ಷೆಯು ಧಾರವಾಡ ಗಂಡು ಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ಸೋಮವಾರ ತಾ. ೧೫ನೇ ಅಕ್ಟೋಬರ ೧೯೧೭ನೇ ದಿವಸ ೧೦॥ ಘಂಟೆಗೆ ಪ್ರಾರಂಭವಾಗುವದು.

೨. ಶಾಳಾಖಾತೆಯಿಂದ ಮಾನ್ಯವಾದ ಧಾರವಾಡ ಜಿಲ್ಲೆಯೊಳಗಿನ ಬೇಕಾದ ಶಾಲೆಯ ಮುಸಲ್ಮಾನ ವಿದ್ಯಾರ್ಥಿಗಳು ಈ ಪರೀಕ್ಷೆಗೆ ಬರಬಹುದು. ಆದರೆ ಅವರು ತಾವು ನಿಜವಾಗಿ ಧಾರವಾಡ ಜಿಲ್ಲೆಯಲ್ಲಿ ವಾಸಮಾಡುವವರೆಂಬ ಬಗ್ಗೆಯೂ, ಧಾರವಾಡ ಟ್ರೇನಿಂಗ ಕಾಲೇಜದ ಪ್ರ್ಯಾಕ್ಟಿಸಿಂಗ ಸ್ಕೂಲಿನಲ್ಲಿ ಇದ್ದು ದೇಶಭಾಷೆಯ ಅಭ್ಯಾಸಮಾಡಲಿಕ್ಕೆ ತಾಗುವ ಖರ್ಚನ್ನು ಕೊಡಲಿಕ್ಕೆ ಆಗದಷ್ಟು ಬಡವರಿದ್ದ ಬಗ್ಗೆಯೂ ಇಬ್ಬರು ಸಂಭಾವಿತ ಗೃಹಸ್ಥರ ಸರಟೀಫಿಕೇಟನ್ನು ಹಾಜರ ಮಾಡಲಿಕ್ಕೆಬೇಕು. ಆದರೆ ಪರೀಕ್ಷೆಯ ಮೊದಲು ಕನಿಷ್ಠ ೧೨ ತಿಂಗಳ ವರೆಗೆ ಶಾಲೆಯಲ್ಲಿ ನಿಜವಾಗಿ ಇರದಂಥ ಉಮೇದವಾರರನ್ನು ಈ ಪರೀಕ್ಷೆಗೆ ಕೂಡ್ಸಗೊಡಲಿಕ್ಕಿಲ್ಲ.

೩. ಮೇಲಿನ ೨ನೇ ನಿಯಮದಲ್ಲಿ ಹೇಳಿದ ಶರ್ತುಗಳಿಗನುಸಾರವಾಗಿ ತಿಂಗಳಿಗೆ ೪ ರೂಪಾಯಿ ಬೆಲೆಯುಳ್ಳ ಎರಡು ವರ್ಷಗಳ ವರೆಗೆ

ನಡೆಯುವಂಥ ಒಂದು ಸ್ಕಾಲರಶಿಪ್ಪು ಕೆಳಗೆ ಬರೆದ ಶರ್ತುಗಳ ಪ್ರಕಾರ ಧಾರವಾಡ ಸ್ಯಾಕ್ಟಿಸಿಂಗಸ್ಕೂಲಿನಲ್ಲಿ ಕೊಡಲ್ಪಡುವದು.

(೧) ಉಮೇದವಾರನ ವಯಸ್ಸು ೧೫ ವರ್ಷಕ್ಕಿಂತ ಹೆಚ್ಚು ಇ ಬೇಕು.

(೨) ಕನ್ನಡ ಅಥವಾ ಉರ್ದು ೫ನೇ ಇಯತ್ತೆಯ ಪ್ರಕಾ ತೆಗೆದುಕೊಂಡ ಪರೀಕ್ಷೆಯಲ್ಲಿ ಅವನು ಎಲ್ಲರಲ್ಲಿ ಹೆಚ್ಚು ಗುಣಗಳನ್ನು ದೊರಕಿಸಬೇಕು. ಮತ್ತು ಚುರುಕುತನವನ್ನು ತೋರಿಸಬೇಕು.

(೩) ಅವನು ಸ್ಯಾಕ್ಟಿಸಿಂಗಸ್ಕೂಲಿಗೆ ತಪ್ಪಿಸದೆ ಹೋಗಬೇಕು ಮತ್ತು ಅವನ ನಡತೆಯೂ, ಅಭ್ಯಾಸವೂ ಸಮಾಧಾನಕರವಾಗಿರಬೇಕು

(೪) ಅವನು ವ್ಹರ್ನ್ಯಾಕ್ಯುಲರ ಫಾಯಿನಲ್ ಪರೀಕ್ಷೆಯನ್ನು ಪಾಸಾದನಂತರ ಧಾರವಾಡ ಟ್ರೇನಿಂಗ ಕಾಲೇಜದಲ್ಲಿ ಕಲಿತು ಟ್ರೇಂಡ ಶಿಕ್ಷಕನಾಗಲಿಕ್ಕೂ ಮತ್ತು ಆ ಪ್ರಕಾರ ಯೋಗ್ಯ ಜಾಮೀನುಗಳನ್ನು ಕೊಟ್ಟು ಕರಾರಪತ್ರ ಬರಕೊಡಲಿಕ್ಕೂ ಕಬೂಲ ಇರಬೇಕು.

೪. ಈ ಪರೀಕ್ಷೆಯು ಒಂದು ಕಮೀಟಿಯ ಮುಖಾಂತರ ತೆಗೆದು ಕೊಳ್ಳಲ್ಪಡುವದು. ಆ ಕಮೀಟಿಗೆ ಧಾರವಾಡ ಟ್ರೇನಿಂಗ ಕಾಲೇಜದ ಪ್ರಿನ್ಸಿಪಾಲರು ಪ್ರೆಸಿಡೆಂಟರಿರುವರು. ಈ ಪರೀಕ್ಷೆಗೆ ಕೂಡುವದಕ್ಕೆ ಪರವಾನಗಿಯ ಬಗ್ಗೆ ಮಾಡತಕ್ಕ ಅರ್ಜಿಯನ್ನು ವ್ಹರ್ನ್ಯಾಕ್ಯುಲರ ಫಾಯಿನಲ್ ಪರೀಕ್ಷೆಯ ಫಾಪಿಸಿದ ನಮೂನೆಯಲ್ಲಿ ತಕ್ಕ ಬದಲಾವಣೆಗಳನ್ನು ಮಾಡಿ ಅದರ ಮೇಲೆ ಮಾಡತಕ್ಕದ್ದು. ಈ ನಮೂನೆಯ ಪ್ರತಿಗಳು ಮೆ|| ಎಜ್ಯುಕೇಶನಲ್ ಇನಸ್ಪೆಕ್ಟರ ಸಾಹೇಬರವರ ಕಡೆಯಿಂದ ಅಥವಾ ಪರೀಕ್ಷಾ ಕಮಿಟಿಯ ಪ್ರೆಸಿಡೆಂಟರ ಕಡೆಯಿಂದ ಬೆಲೆ ಇಲ್ಲದೆ ದೊರೆಯುವವು. ಪರೀಕ್ಷೆಯ ಅರ್ಜಿಗಳನ್ನು ಪ್ರೆಸಿಡೆಂಟರ ಕಡೆಗೆ ತಾ|| ೧೪ನೇ ಅಕ್ಟೋಬರ ಸನ್ನ ೧೯೧೭ನೇ ದಿವಸ ಅಥವಾ ಅದಕ್ಕೂ ಪೂರ್ವದಲ್ಲಿ ಮುಟ್ಟುವಂತೆ ಕಳಿಸಬೇಕು, ಅಸಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

Dharwar.
22-6-1917

K. S. Hungund,
Ag. Educational Inspector, S. D.

ಶಾಲಾಪತ್ರಿಕ.

ಪುಸ್ತಕ ೫೩. | ಆಗಸ್ಟ ೧೯೧೭. | ಸಂಚಿಕೆ ೮.

ವ್ಯವಹಾರಿ ಅಪೂರ್ಣಾಂಕಗಳನ್ನು ಕಲಿಸುವಬಗ್ಗೆ ಪಲವು ಉಪಯುಕ್ತ ಸೂಚನೆಗಳು.

೧. ಅಪೂರ್ಣಾಂಕಗಳನ್ನು ಕಲಿಸುವಾಗ, ವಿಚಾರಮಾಡತಕ್ಕಂಥ ಮೊದಲನೇ ಸಂಗತಿಯಂದರೆ, ಅಪೂರ್ಣಾಂಕಗಳನ್ನು ಓದುವ ಪದ್ಧತಿ. "ಎರಡು ಮೂರಾಂಶ" "ಐದು ಎಂಟಾಂಶ" ಇವು ವ್ಯಾಕರಣ ದೃಷ್ಟಿಯಿಂದ ಅಶುದ್ಧವಾದ ರೂಪಗಳು, ಎಂದು ಬಹುಶಃ ಎಲ್ಲರಿಗೂ ಗೊತ್ತಿರುವದು. ಆದ್ದರಿಂದ "ಎರಡು ಮೂರನೇ ಅಂಶಗಳು" ಎಂದು ಓದಬೇಕಾಗುತ್ತದೆ. ಆದರೆ ಈ ಹೆಸರು ಉದ್ದವಾದದ್ದಿರುವದರಿಂದ ಲೆಕ್ಕವನ್ನು ತಿಳಿಸಿ ಕೊಡುವಾಗ, ಮೇಲಿಂದಮೇಲೆ ಇದರಂತೆ ಅನ್ನಲಿಕ್ಕೆ ತೊಂದರೆಯಾಗುತ್ತದೆ. ಉದಾ:—$\frac{೨}{೩}+\frac{೩}{೪}$ ಈ ಲೆಕ್ಕವನ್ನು ಮಾಡುವಾಗ ಈ ಪ್ರಕಾರ ಅನ್ನಬೇಕಾಗುತ್ತದೆ. :—

೫ ಆರನೆಯ ಅಂಶಗಳೆಂದರೆ, ೨೫ ಮೂವತ್ತನೆಯ ಅಂಶಗಳು ಮತ್ತು ೩ ಹತ್ತನೆಯ ಅಂಶಗಳೆಂದರೆ, ೯ ಮೂವತ್ತನೆಯ ಅಂಶಗಳು.

೨೫ ಮೂವತ್ತನೆಯ ಅಂಶಗಳು ಮತ್ತು ೯ ಮೂವತ್ತನೆಯ ಅಂಶಗಳು ಕೂಡಿ ೩೪ ಮೂವತ್ತನೆಯ ಅಂಶಗಳು ಆಗುತ್ತವೆ. ಆದ್ದರಿಂದ "ಆರನೆಯ ಅಂಶಗಳು" ಎಂಬದರ ಬದಲಾಗಿ "ಆರನೆಯವು" ಎಂಬದನ್ನು ಉಪಯೋಗಿಸಬಹುದು.

$\frac{೨}{೩}+\frac{೩}{೪}$, ೨ ಆರನೆಯವು ಅಂದರೆ ೨೫ ಮೂವತ್ತನೆಯವು, ಮತ್ತು ೩ ಹತ್ತನೆಯವು ಅಂದರೆ ೯ ಮೂವತ್ತನೆಯವು, ೩೪

ಮೂವತ್ತನೆಯವು ಮತ್ತು ೯ ಮೂವತ್ತನೆಯವು ಕೂಡಿ ೩೯ ಮೂವತ್ತನೆಯವು ಆಗುತ್ತವೆ.

೨. "ಒಂದೇ ಜಾತಿಯ ಪರಿಮಾಣಗಳನ್ನು ಮಾತ್ರ ಕೂಡಿಸಲಿಕ್ಕೆ ಬರುತ್ತದೆ" ಎಂಬ ಮಾತನ್ನು ನಾಲ್ಕನೇ ಇಯತ್ತೆಯಲ್ಲಿಯೆ ಹುಡುಗರಿಗೆ ಹೇಳುವ ಪ್ರಸಂಗವು ಬರಬಾರದು. ಕೆಳಗಿನ ಇಯತ್ತೆಗಳಲ್ಲಿ—

೩ ದುಡ್ಡು + ೧೫ ಪಟ್ಟಿ ದುಡ್ಡು (೪ ಪೈ).

೩ ಚವಲಿ + ೪ ಪಾವಲಿ.

ಬಂಥ ಉದಾಹರಣೆಗಳನ್ನು ಹುಡುಗರಿಗೆ ಮಾಡಲಿಕ್ಕೆ ಹೇಳಿರಿ, ದುಡ್ಡು, ಪಟ್ಟಿದುಡ್ಡುಗಳನ್ನು ಇದ್ದಕ್ಕಿದ್ದ ಹಾಗೆ ಕೂಡಿಸಲಿಕ್ಕೆ ಬರುವದಿಲ್ಲೆಂಬ ಮಾತನ್ನು ಅವರು ಸಹಜವಾಗಿ ಮನಗಾಣುವರು.

೩. ೩ನೇ ಇಯತ್ತೆಯಲ್ಲಿ ಕೆಳಗೆ ತೋರಿಸಿದಂಥ ಅಭ್ಯಸನಗಳನ್ನು ಹುಡುಗರ ಕಡೆಯಿಂದ ಮಾಡಿಸಿಕೊಂಡರೆ ಅದರಿಂದ ಮುಂದೆ ಅವರು ಕಲಿಯಬೇಕಾದ ವಿಷಯಕ್ಕೆ ಎಷ್ಟೋ ಉಪಯೋಗವಾಗುವದು.

೩ ಅರ್ಧ + ೫ ಅರ್ಧ = ೮ ಅರ್ಧ = ೪.

೫ ಅರ್ಧ — ೩ ಅರ್ಧ = ೨ ಅರ್ಧ = ೧.

೫ ಅರ್ಧ × ೩ = ೧೫ ಅರ್ಧ.

೧೦ ಅರ್ಧ ÷ ೨ = ೫ ಅರ್ಧ.

ಇದರಂತೆ ಕಾಲು ಅಥವಾ ಪಾವು ಎಂಬ ಭಾಗಗಳನ್ನು ಉಪಯೋಗಿಸಿ ಲೆಕ್ಕಗಳನ್ನು ಮಾಡಿಸಬೇಕು. ಆಮೇಲೆ ಅರ್ಧ ಮತ್ತು ಕಾಲು ಕೂಡಿ ಬಂದ ಉದಾಹರಣೆಗಳನ್ನು ಹೇಳಬಹುದು. ಉದಾ:—

೩ ಅರ್ಧ + ೫ ಕಾಲು. = ?

೧೪ ಕಾಲು — ೫ ಅರ್ಧ = ?

೧೦ ಅರ್ಧ ÷ ೪ = ?

೪. ಅಪೂರ್ಣಾಂಕಗಳನ್ನು ಬರೆಯುವ ವಿಶಿಷ್ಟಪದ್ಧತಿಯ ಸಂಬಂಧದಿಂದ ಹುಡುಗರು ನಾಲ್ಕನೇ ಇಯತ್ತೆಗೆ ಬರುವ ವರೆಗೆ ಕೇವಲ

ಅಪರಿಚಿತರಾಗಿರಬಾರದು. ನೂರಾಎಂಟರ ಅರ್ಧ ಎಷ್ಟು? ಎಂದು ಕೇಳಿದರೆ, ನೂರಾಎಂಟಕ್ಕೆ ೨ರಿಂದ ಭಾಗಿಸಿಕೊಳ್ಳ ಬೇಕೆಂಬ ಮಾತು ಹುಡುಗರಿಗೆ ತಿಳಿದ ಕೂಡಲೆ ಅದನ್ನು ಹೀಗೆ ಬರೆಯಲಿಕ್ಕೆ ಹಚ್ಚಬೇಕು.

$\frac{೧೦೮}{೨}$ = ೫೪, "ನೂರಾಎಂಟರ ಅರ್ಧ ಐವತ್ತು ನಾಲ್ಕು".

$\frac{೨೦}{೨}$ = ೧೦, "ಇಪ್ಪತ್ತರ ಅರ್ಧ ಹತ್ತು".

$\frac{೪}{೨}$ = ೨, "ನಾಲ್ಕರ ಅರ್ಧ—ನಾಲ್ಕು ಅರ್ಧ—ಎರಡು.

$\frac{೨}{೨}$ = ೧, "ಎರಡು ಅರ್ಧ ಒಂದು".

ಒಂದು ಅರ್ಧ ಹ್ಯಾಗೆ ಬರೆಯಬೇಕು?

ಇದರಂತೆ ೪ಲ್ಲಿ "ನಾಲ್ವತ್ತೆಂಟರ ಎಂಟನೇಭಾಗ", $\frac{೩}{೪}$ "ಮೂವತ್ತರ ಹದಿನೈದನೆಯ ಭಾಗ", $\frac{೫}{೮}$ "ಐದರ ಎಂಟನೆಯ ಭಾಗ" ಮುಂತಾದವುಗಳನ್ನು ಬರೆಯಲಿಕ್ಕೂ ಓದಲಿಕ್ಕೂ ಕಲಿಸಬ ಹುದು. ಮುಂದೆ ನಾಲ್ಕನೇ ಇಯತ್ತೆಯಲ್ಲಿ ಐದರ ಎಂಟ ನೆಯ ಭಾಗವೂ, ೫ ಎಂಟನೆಯ ಭಾಗಗಳೂ ಒಂದೇ ಎಂಬ ಮಾತನ್ನು ತಿಳಿಸಿಕೊಡಬಹುದು—

೫. ಅಪೂರ್ಣಾಂಕಗಳ ವಿಷಯದ ಎಲ್ಲ ಕೃತಿಗಳ ಬುಡದಲ್ಲಿಯೂ, ಒಂದೇ ಮುಖ್ಯ ಮಾತಿರುವದು. ಅದು ಯಾವದೆಂದರೆ, ಒಂದು ಅಪೂರ್ಣಾಂಕವನ್ನು ಅನೇಕ ವಿಧವಾಗಿ ಬರೆಯಬಹುದು.

$\frac{೨}{೩} = \frac{೪}{೬} = \frac{೬}{೯} = \frac{೮}{೧೨} = \frac{೧೦}{೧೫}$ ಇತ್ಯಾದಿ.

ಇದೊಂದು ಮಾತು ಹುಡುಗರಿಗೆ ಚನ್ನಾಗಿ ತಿಳಿದರೆ, ಗುಣಾ ಕಾರವನ್ನು ಕೂಡ, ಸಕಾರಣವಾಗಿ ಹುಡುಗರಿಗೆ ತಿಳಿಸಿ ಹೇಳ ಬಹುದು. ಹ್ಯಾಗಂದರೆ—

$\frac{೩}{೫}$ ದ $\frac{೪}{೪}$ ಇದರ ಬೆಲೆಯನ್ನು ತೆಗೆಯಿರಿ.

$\frac{೩}{೫} = \frac{೧೦}{೧೫}$ ಆದ್ದರಿಂದ $\frac{೩}{೫}$ ದ $\frac{೪}{೪} = \frac{೧೦}{೧೫}$ ದ $\frac{೪}{೪}$

= ೧೦ ಹದಿನೈದನೆಯವುಗಳ ೫ ನೆಯ ಭಾಗದ ನಾಲ್ಕು ಪಟ್ಟು;

ಮೂವತ್ತನೆಯವು ಮತ್ತು ೯ ಮೂವತ್ತನೆಯವು ಕೂಡಿ ೩೪ ಮೂವತ್ತನೆಯವು ಆಗುತ್ತವೆ.

೨. "ಒಂದೇ ಜಾತಿಯ ಪರಿಮಾಣಗಳನ್ನು ಮಾತ್ರ ಕೂಡಿಸಲಿಕ್ಕೆ ಬರುತ್ತದೆ" ಎಂಬ ಮಾತನ್ನು ನಾಲ್ಕನೇ ಇಯತ್ತೆಯಲ್ಲಿಯೇ ಹುಡುಗರಿಗೆ ಹೇಳುವ ಪ್ರಸಂಗವು ಬರಬಾರದು. ಕೆಳಗಿನ ಇಯತ್ತೆಗಳಲ್ಲಿ—

೩ ದುಡ್ಡು + ೧ ಘಟ್ಟಿ ದುಡ್ಡು (೪ ಪೈ).

೩ ಚವಲಿ + ೪ ಪಾವಲಿ.

ಬಂಥ ಉದಾಹರಣೆಗಳನ್ನು ಹುಡುಗರಿಗೆ ಮಾಡಲಿಕ್ಕೆ ಹೇಳಿದರೆ, ದುಡ್ಡು, ಘಟ್ಟಿದುಡ್ಡುಗಳನ್ನು ಇದ್ದಕ್ಕಿದ್ದ ಹಾಗೆ ಕೂಡಿಸಲಿಕ್ಕೆ ಬರುವದಿಲ್ಲೆಂಬ ಮಾತನ್ನು ಅವರು ಸಹಜವಾಗಿ ಮನಗಾಣುವರು.

೩. ೩ನೇ ಇಯತ್ತೆಯಲ್ಲಿ ಕೆಳಗೆ ತೋರಿಸಿದಂಥ ಅಭ್ಯಸನಗಳನ್ನು ಹುಡುಗರ ಕಡೆಯಿಂದ ಮಾಡಿಸಿಕೊಂಡರೆ ಅದರಿಂದ ಮುಂದೆ ಅವರು ಕಲಿಯಬೇಕಾದ ವಿಷಯಕ್ಕೆ ಎಷ್ಟೋ ಉಪಯೋಗವಾಗುವದು.

೩ ಅರ್ಧ + ೫ ಅರ್ಧ = ೮ ಅರ್ಧ = ೪.

೫ ಅರ್ಧ — ೩ ಅರ್ಧ = ೨ ಅರ್ಧ = ೧.

೫ ಅರ್ಧ × ೩ = ೧೫ ಅರ್ಧ.

೧೦ ಅರ್ಧ ÷ ೨ = ೫ ಅರ್ಧ.

ಇದರಂತೆ ಕಾಲು ಅಥವಾ ಪಾವು ಎಂಬ ಭಾಗಗಳನ್ನು ಉಪಯೋಗಿಸಿ ಲೆಕ್ಕಗಳನ್ನು ಮಾಡಿಸಬೇಕು. ಆಮೇಲೆ ಅರ್ಧ ಮತ್ತು ಕಾಲು ಕೂಡಿ ಬಂದ ಉದಾಹರಣೆಗಳನ್ನು ಹೇಳಬಹುದು. ಉದಾ:—

೩ ಅರ್ಧ + ೫ ಕಾಲು. = ?

೧೪ ಕಾಲು — ೫ ಅರ್ಧ = ?

೧೦ ಅರ್ಧ ÷ ೪ = ?

೪. ಅಪೂರ್ಣಾಂಕಗಳನ್ನು ಬರೆಯುವ ವಿಶಿಷ್ಟಪದ್ಧತಿಯ ಸಂಬಂಧದಿಂದ ಹುಡುಗರು ನಾಲ್ಕನೇ ಇಯತ್ತೆಗೆ ಬರುವ ವರೆಗೆ ಕೇವಲ

ಅಪರಿಚಿತರಾಗಿರಬಾರದು. ನೂರಾಎಂಟರ ಅರ್ಧ ಎಷ್ಟು? ಎಂದು ಕೇಳಿದರೆ, ನೂರಾಎಂಟಕ್ಕೆ ೨ರಿಂದ ಭಾಗಿಸಿಕೊಳ್ಳ ಬೇಕೆಂಬ ಮಾತು ಹುಡುಗರಿಗೆ ತಿಳಿದ ಕೂಡಲೆ ಅದನ್ನು ಹೀಗೆ ಬರೆಯಲಿಕ್ಕೆ ಹಚ್ಚಬೇಕು.

೧೦೮ಲ = ೫೪, "ನೂರಾಎಂಟರ ಅರ್ಧ ಐವತ್ತು ನಾಲ್ಕು".

೫೦ = ೧೦, "ಇಪ್ಪತ್ತರ ಅರ್ಧ ಹತ್ತು".

೪ = ೨, "ನಾಲ್ಕರ ಅರ್ಧ—ನಾಲ್ಕು ಅರ್ಧ—ಎರಡು.

೨ = ೧, "ಎರಡು ಅರ್ಧ ಒಂದು".

ಒಂದು ಅರ್ಧ ಹ್ಯಾಗೆ ಬರೆಯಬೇಕು?

ಇದರಂತೆ ೪ಲ "ನಾಲ್ವತ್ತೈಂಟರ ಎಂಟನೇಭಾಗ", ೨೧೫ "ಮೂವತ್ತರ ಹದಿನೈದನೆಯ ಭಾಗ", ೫ "ಐದರ ಎಂಟನೆಯ ಭಾಗ" ಮುಂತಾದವುಗಳನ್ನು ಬರೆಯುಲಿಕ್ಕೂ ಓದಲಿಕ್ಕೂ ಕಲಿಸಬ ಹುದು. ಮುಂದೆ ನಾಲ್ಕನೇ ಇಯತ್ತೈಯಲ್ಲಿ ಐದರ ಎಂಟ ನೆಯ ಭಾಗವೂ, ೫ ಎಂಟನೆಯ ಭಾಗಗಳೂ ಒಂದೇ ಎಂಬ ಮಾತನ್ನು ತಿಳಿಸಿಕೊಡಬಹುದು—

೫. ಅಪೂರ್ಣಾಂಕಗಳ ವಿಷಯದ ಎಲ್ಲ ಕೃತಿಗಳ ಬುಡದಲ್ಲಿಯೂ, ಒಂದೇ ಮುಖ್ಯ ಮಾತಿರುವದು. ಅದು ಯಾವದೆಂದರೆ, ಒಂದು ಅಪೂರ್ಣಾಂಕವನ್ನು ಅನೇಕ ವಿಧವಾಗಿ ಬರೆಯಬಹುದು.

$\frac{೧}{೨} = \frac{೨}{೪} = \frac{೫}{೧೦} = \frac{೧೦}{೨೦} = \frac{೧೫}{೩೦}$ ಇತ್ಯಾದಿ.

ಇದೊಂದು ಮಾತು ಹುಡುಗರಿಗೆ ಚನ್ನಾಗಿ ತಿಳಿದರೆ, ಗುಣಾ ಕಾರವನ್ನು ಕೂಡ, ಸಕಾರಣವಾಗಿ ಹುಡುಗರಿಗೆ ತಿಳಿಸಿ ಹೇಳ ಬಹುದು. ಹ್ಯಾಗಂದರೆ—

$\frac{೩}{೫}$ ದ $\frac{೪}{೫}$ ಇವರ ಬೆಲೆಯನ್ನು ತೆಗೆಯಿರಿ.

$\frac{೩}{೫} = \frac{೧೦}{೧೫}$ ಆದ್ದರಿಂದ $\frac{೩}{೫}$ ದ $\frac{೪}{೫} = \frac{೧೦}{೧೫}$ ದ $\frac{೪}{೫}$

= ೧೦ ಹದಿನೈದನೆಯವುಗಳ ೪ ನೆಯ ಭಾಗದ ನಾಲ್ಕು ಪಟ್ಟು;

= ೨ ಹದಿನೈದನೆಯವುಗಳ * ೪ ಪಟ್ಟು.
= ೮ ಹದಿನೈದಯವು. = $\frac{೮}{೧೫}$

ಆದರೆ $\frac{೪}{೫} = \frac{೮}{೧೦}$ ಇಂಥ ಮಾತುಗಳೇ ಹುಡುಗರಿಗೆ ಚನ್ನಾಗಿ ತಿಳಿದಿರುವದಿಲ್ಲ.

ಒಂದು ಹಣ್ಣಿನಲ್ಲಿ ನಾಲ್ಕು ಭಾಗಮಾಡಿ, ರಾಮನಿಗೆ ಮೂರು ಚೂರು ಕೊಡಬೇಕಾಗಿದೆ. ಆ ಹಣ್ಣಿನಲ್ಲಿ ಎಂಟು ಚೂರು ಮಾಡಿ, ಮೊದಲಿನಷ್ಟೇ ಕೊಡಬೇಕಾಗಿದ್ದರೆ ಅವನಿಗೆ ಎಷ್ಟು ಚೂರು ಕೊಡಬೇಕು?

೩ ದುಡ್ಡುಗಳು = ೬ ಅದ್ದೇಲಿಗಳು.
೩ ಪಾವಲಿಗಳು = ೬ ಚವಲಿಗಳು.
೩ ಗಿರಪಾವುಗಳು = ೬ ಚಟಾಕುಗಳು.



ಈರೀತಿ ಅನೇಕ ದೃಷ್ಟಾಂತಗಳಿಂದಲೂ ಮಾರ್ಜಿನದಲ್ಲಿ ತೋರಿಸಿದಂತೆ ಆಕೃತಿಗಳ ಸಹಾಯದಿಂದಲೂ, ಇಂಥ ಮಾತುಗಳು ಹುಡುಗರಿಗೆ ಚನ್ನಾಗಿ ತಿಳಿಯುವಂತೆ ಮಾಡಬೇಕು.

೬. ಅಪೂರ್ಣಾಂಕಗಳ ಭಾಗಾಕಾರವನ್ನು ಹುಡುಗರಿಗೆ ತಿಳಿಸಬೇಕಾದರೆ ಈ ಪ್ರಕಾರ ಪ್ರಯತ್ನ ಮಾಡಬಹುದು. *

$\frac{೩}{೪} \div \frac{೫}{೬}$
= $\frac{೧೮}{೨೪} \div \frac{೨೦}{೨೪}$
= ೧೮ ಹನ್ನೆರಡನೆಯವು ÷ ೨೦ ಹನ್ನೆರಡನೆಯವು.
= $\frac{೧೮}{೨೦}$

ಇಲ್ಲಿ "ಹನ್ನೆರಡನೆಯವು" ಎಂಬ ಭಾಗಗಳ ಮೇಲೆ ಉತ್ತರವು

---

* ೧೦ ಹದಿನೈದನೆಯವುಗಳ ೫ ನೆಯ ಭಾಗವು ೨ ಹದಿನೈದನೆಯವು.
ಯಾಕೆಂದರೆ ೧೦ ರುಪಾಯಿಗಳ ೫ ನೆಯ ಭಾಗವು ೨ ರುಪಾಯಿಗಳು.

* ನಾನು ಬರೆದದ್ದೆಲ್ಲ ವ್ಯವಹಾರದಲ್ಲಿ ಸಂಪೂರ್ಣವಾಗಿ ಕಲಿಸಲು ಸಾಧ್ಯವಿರುತ್ತದೆಂದು ನಾನು ತಿಳಿಯುವದಿಲ್ಲ. ಆದರೂ ಉತ್ಸಾಹದಿಂದ ಕೆಲಸಮಾಡುವವರಿಗೆ ಇದರಲ್ಲಿ ಎಷ್ಟೋ ಸಾಧ್ಯವಿರುವದೆಂದು ನಾನು ಪೂರಾನಂಬಿದ್ದೇನೆ.

ಅವಲಂಬಿಸಿರುವದಿಲ್ಲ. ಉದಾ:—

೨೦ ರೂಪಾಯಿಗಳು ÷ ೪ ರೂಪಾಯಿಗಳು.

೨೦ ರೂಪಾಯಿಗಳನ್ನು ಒಬ್ಬೊಬ್ಬನಿಗೆ ೪ ರೂಪಾಯಿಗಳಂತೆ ಹಂಚಿಕೊಟ್ಟರೆ ಎಷ್ಟು ಮಂದಿಗೆ ಕೊಡಲಿಕ್ಕಾಗುವದು? ೫೦ ಮಂದಿಗೆ.

೨೦ ಹಣ್ಣುಗಳು ÷ ೪ ಹಣ್ಣುಗಳು. = ೫೦

೨೦ ಅರ್ಧರೂಪಾಯಿ ÷ ೪ ಅರ್ಧರೂಪಾಯಿ = ೫೦

೨೦ ಇಂಚುಗಳು ÷ ೪ ಇಂಚುಗಳು = ೫೦

೨೦ ಗಿರ್ದ ÷ ೪ ಗಿರ್ದ = ೫೦

ಅಪೂರ್ಣಾಂಕಗಳ ಬೇರೀಜಿನ ವಿಷಯವಾಗಿ ಒಂದು ಸಣ್ಣ ಸೂಚನೆಯನ್ನು ಮಾಡಿ, ಈ ಸೂಚನೆಗಳನ್ನು ಸದ್ಯಕ್ಕೆ ಮುಗಿಸುವೆವು.

$$\frac{೩}{೫} + \frac{೫}{೮} = \frac{೨೦ + ೨೫}{೪೦} = \frac{೪೫}{೪೦}$$

ಹೀಗೆ ಹುಡುಗರ ಕಡೆಯಿಂದ ಬರೆಯಿಸುವದರಲ್ಲಿ ಸ್ವಲ್ಪು ಬದಲುಮಾಡಿದರೆ ಹುಡುಗರ ತಪ್ಪು ತಿಳುವಳಿಕೆಯನ್ನು ದೂರ ಮಾಡಿದಂತಾಗುವದು.

$\frac{೨೦ + ೨೫}{೪೦}$ ಇದನ್ನು $\frac{೪೫}{೪೦} + \frac{೪೫}{೪೦}$ ಇದರಬದಲಾಗಿ ಸಂಕ್ಷಿಪ್ತವಾಗಿ ಬರೆಯುವರೆಂಬ ಮಾತು ಎಷ್ಟೋ ಹುಡುಗರಿಗೆ ಗೊತ್ತಿರುವದಿಲ್ಲ. ಆದ್ದರಿಂದ ಯಾವಾಗಲೂ

$$\frac{೩}{೫} + \frac{೫}{೮} = \frac{೪೦}{೪೦} + \frac{೪೫}{೪೦} = \frac{೪೫}{೪೦}$$

ಹೀಗೆಯೇ ಬರೆಯುವ ಪರಿಪಾಠವನ್ನು ಹಾಕಿದರೆ ಹುಡುಗರ ತಿಳುವಳಿಕೆಗೆ ಅಡ್ಡಬರುವ ಒಂದು ಕ್ಷುಲ್ಲಕ ಕಾರಣವನ್ನು ಇಲ್ಲದಂತೆ ಮಾಡಿದ ಹಾಗಾಗುವದು.

S. R. Tatti.

ಒಂದೇ ಪುಟದಲ್ಲಿ ಸಂಪೂರ್ಣ ಶಿಕ್ಷಣಶಾಸ್ತ್ರವು.

'ಇಂಡಿಯನ್ ಎಜ್ಯುಕೇಶನ್' ಎಂಬ ಪುಸ್ತಕದಲ್ಲಿ, ಟಿ. ಜೆ. ಬರ್ನೆಟ್ ಎಂಬವನ 'ಶಿಕ್ಷಣದ ಸಾರ' ಎಂಬದರೊಳಗಿಂದ ತಕ್ಕೊಂಡ ಶಿಕ್ಷಣ

ಶಾಸ್ತ್ರದ ಮುಖ್ಯ ನಿಯಮಗಳನ್ನು ಸಂಕ್ಷಿಪ್ತವಾಗಿ ಕೊಟ್ಟದ್ದು ಹೇಗಿದರೆ:—

೧. ಆವರ್ತನ:—ಹೇಳು ಮತ್ತು ತಿದ್ದು; ತಿದ್ದು ಮತ್ತು ಹೇಳು, ಆವರ್ತನವು ವಿದ್ಯೆಯ ಜನನಿಯಾಗಿರುತ್ತದೆ. 'ಅಭ್ಯಾಸಾನುಗತಾವಿದ್ಯಾ'.

೨. ಚುರುಕುತನ:—(ಅ) ಸ್ಪಷ್ಟವಾಗಿ, ವಿಚಾರಪೂರ್ವಕ, ಇಂಪಾಗಿ ಮಾತಾಡು.

(ಆ) ಪದ್ಧತಿಯಲ್ಲಿಯೂ, ನಡತೆ (ಚರ್ಯೆ) ಯಲ್ಲಿಯೂ ತೇಜಸ್ವಿಯಾಗಿಯೂ, ಚಟುವಟಿಕೆಯವನಾಗಿಯೂ ಇರು.

(ಇ) ಶಿಕ್ಷಣ ಶುದ್ಧಿಯನ್ನು ಪಡೆ. ಶಿಕ್ಷಣ ಶುದ್ಧಿಯೆಂದರೆ ನಿಲ್ಲುವಿಕೆ. ಮುಂದಿನ ಬೆಂಚುಗಳ ಹಿಂದೆ ಸರಳವಾಗಿ ನಿಲ್ಲು. ಮತ್ತು ಹಿಂದಿನ ಸಾಲಿನ ಹುಡುಗರನ್ನು ಸಂಬೋಧಿಸು. (ಹೇಳು)

(ಈ) ತಾತ್ಕಾಲಿಕ ಸ್ಥಿತಿಯನ್ನು ಅನುಸರಿಸಿ ನಿನ್ನ ವರ್ಗವನ್ನು ಅಚ್ಚುಕಟ್ಟಾಗಿ ಕೂಡ್ರಿಸು.

(ಉ) ನಿರ್ದೋಷವಾದ, ಯುಕ್ತಿಯುಕ್ತವಾದ, ಒಂದರ ಹಿಂದೊಂದು ಬರುವ ಭಾಗಗಳ ಕ್ರಮವನ್ನು ಹಿಡಿದು ನಿನ್ನ ಪಾಠವನು ಸಿದ್ಧಪಡಿಸಿಕೊ.

(ಊ) (೧) ಕರೀ ಹಲಿಗೆಯಮೇಲೆ ಸ್ಪಷ್ಟಕಾಣುವಂತೆ, ಆಕೃತಿಗಳನ್ನು ಹಾಕಿ ವಿವರಣೆಯನ್ನು ಬರೆದು ವಿಷಯವನ್ನು ವಿವರಿಸು. ಕರೀ ಹಲಿಗೆಯನ್ನು ಸರಾಗವಾಗಿ ಬಳಿಸು.

(೨) ಚನ್ನಾಗಿ ಒಪ್ಪಿಗೆಯಾಗುವ ಉದಾಹರಣೆ, ಕಥೆ, ಸಾದೃಶ್ಯದ ದೃಷ್ಟಾಂತ

ಗಳನ್ನು ಯೋಗ್ಯಸ್ಥಳದಲ್ಲಿ ಬಾಯಿಂದ ವಿವರಿಸು.

(೫) ತಕ್ಕ ಕಳವಳದಿಂದಲೂ (ಎದೆಕರಗಿ), ಉತ್ಸುಕತೆಯಿಂದಲೂ ಕಲಿಸು.

೩. ನವೀನತೆ:—ಉದಾತ್ತಸ್ವರದಿಂದ (ಮೇಲ್ದನಿಯಿಂದ) ನೀನು ಹೇಳ ಬೇಕೆಂದಿದ್ದ ಮುಖ್ಯಾಂಶಗಳನ್ನು ಪ್ರತಿಯೊಂದು ಪಾಠದಕಡೆಯಲ್ಲಿ ಇನ್ನೊಮ್ಮೆ ತಿರಿಗಿ ಹೇಳು.

೪. ಅಪೂರ್ವತೆ:—ನಿನ್ನಪಾಠವನ್ನು ಸಂಪೂರ್ಣವಾಗಿ ಸಿದ್ಧಮಾಡು. ಹೊಸ ಮಾತುಗಳನ್ನು ಹಿಂದಿನ ಸಂಗ್ರಹದಲ್ಲಿ, ಇಲ್ಲವೆ ಹಳೇ ಸಂಗತಿಗಳನ್ನು ಹೊಸದರಲ್ಲಿ ಸೇರಿಸು

೫. ಮೇಲನ:—(ಅ) ಸಾಮ್ಯದ ಇಲ್ಲವೆ ಭೇದದ ವಿಷಯಗಳನ್ನು ನೇಪಡಿಸು. (ಸಾಮ್ಯ)

(ಆ) ಸ್ಥಲಸಂಬಂಧಕ್ಕನುಸಾರವಾಗಿ ವಿಷಯಗಳನ್ನು ಒಂದುಗೂಡಿಸು. (ಹೊಂದಿಕೆ)

(ಈ) ವಿಷಯಗಳೊಳಗಿನ ಕಾರ್ಯಕಾರಣ ಸಂಬಧವನ್ನು ಒತ್ತಿ ಹೇಳು. (ಕಾರಣ ಕಥನ)

(ಉ) ಕಳವಳದಿಂದ ಒಟ್ಟುಗೂಡಿದ ಅನುಭವಗಳು ಚನ್ನಾಗಿ ಜ್ಞಾಪಕಕ್ಕೆ ಬರುತ್ತವೆಂಬದನ್ನು ತಿಳಿ.

ಈ ನಿಯಮಗಳಂತೆ ಕಲಿಸುವ ಶಿಕ್ಷಕನೂ ಅವನ ಕೈಯಲ್ಲಿ ಕಲಿಯುವ ವಿದ್ಯಾರ್ಥಿಗಳೂ ಧನ್ಯರು.

ಒಬ್ಬಕನ್ನಡಶಿಕ್ಷಕ.

ಮಹಾಯುದ್ಧ ವಿಜಯ ಪ್ರಾರ್ಥನೆ.

ಚಾಲ್:— ಏಳಿರೆಲ್ಲರು| ಸಾಲುಗೊಳ್ಳಿರಿ|| ಇದರಂತೆ—

ಈಶ ಲಾಲಿಸೋ। ಈಶ ಪಾಲಿಸೋ॥
ಈಸು ಮಹಾಯುದ್ಧವ ಜಗ। ದೀಶ ಮುಗಿಯಿಸೋ॥ ಪಲ್ಲ ॥
ಪರಮದುರ್ಮನ| ಜರಮನೀಶನಾ॥
ಪರಮ ಮಿತ್ರ ಪೈಂಚ ರಶಿಯ। ನರಾಪದ ಘನ ॥ ೧ ॥

ಗೆಳೆಯ ಸಣ್ಣನಾ। ಬೆಲಜ್ಯಮೇಶನಾ॥
ಬಲುವಿಪತ್ತ ಸಹಿಸದೇತೆ। ರಳಿದ ಜಾರ್ಜನಾ॥ ಈಶ ॥ ೨ ॥
ಒಂದು ದಿವಸವೇ ?। ಒಂದು ಮಾಸವೇ ?॥
ಇಂದಿಗೆ ಮೂವರುಷವಿರದೆ। ಸಂದು ಹೋಯ್ತೆಲೇ॥ ಈಶ॥ ೩ ॥
ಇತ್ತ ಜಯಸಿರಿ। ಸುತ್ತಿಹುದುಬಳಿ॥
ಅತ್ತಣ ಮದಮತ್ತರೆಲ್ಲ। ಮತ್ತೆ ಪುಡಿ ಪುಡಿ॥ ಈಶ ॥೪॥
[ಮತ್ತೆನಮ್ಮ ರಾಜಸಂ। ಯುಕ್ತರಿಗೆ ಸರಿ]
ಶತ್ರು ಮಂಡಲಿ। ಮೃತ್ಯು ಹೊಂದಲಿ!॥
ಮಿತ್ರರೊಡನೆ ಜಾರ್ಜವಿಜಯ। ಪತ್ರ ಮೆರೆಯಲಿ॥ ಈಶ॥ ೫ ॥
ರಾಣಿಮೇರಿಗೇ। ಮಾನಿ ಜಾರ್ಜಗೇ॥
ಜಾಣ ಭಟರಿಗೆಲ್ಲ ಯಶೋ- ಮಾನ ಲಭಿಸುಗೆ॥ ಈಶ ॥ ೬ ॥
[ದೀನ ಪ್ರಜೆಗಳಿಗೆ ಸದಾ- ನಂದ ಜನಿಸುಗೆ]
ಸದಾನಂದ ಜನಿಸುಗೇ। ಘನಾನಂದ ಜನಿಸುಗೆ॥ ೬ ॥

ವೆ. ಪ. ಹೆಗಡೆ.

ಶಿಕ್ಷಣ ಜಪಾನೀ ವ್ಯಾಯಾಮ ಪದ್ಧತಿಯು.

(ಭಾಷಾಂತರ.)

"ಟಾಕೆಯೂವಾ" ಎಂಬ ಹೆಸರಿನ ಅನುಭವಿಕ ಜಪಾನೀ ಶಿಕ್ಷಕನು ಅನ್ನುವದೇನಂದರೆ:— ಶರೀರವು ಸುದೃಢವಾಗಬೇಕಾದರೆ ಅದಕ್ಕೆ ಗಾಳಿ, ಬಿಸಿಲು, ನೀರು, ನೆಲಗಳ ಸಂಪರ್ಕವು ಅವಶ್ಯವಾಗಿ ಆಗಬೇಕು. ಈ ನಾಲ್ಕು ತತ್ವಗಳ ಉಪಯೋಗ ಮಾಡಿಕೊಂಡು ವ್ಯಾಯಾಮ ಮಾಡುವದಾದರೆ— ವಸ್ತ್ರರಹಿತರಾಗಬೇಕು. ಬೇಸಿಗೆಯ ಕಾಲವೇ ಇರಲಿ, ಚಳಿಗಾಲವೇ ಇರಲಿ, ಬಿಸಿಲು, ಬೈಲುಹವೆ ಮತ್ತು ಭೂಮಿ ಇವುಗಳ ಸ್ಪರ್ಶವು ಶರೀರಕ್ಕೆ ಆಗಲೇಬೇಕು. ಬಿಸಿಲಿನಲ್ಲಿಯಾಗಲಿ ಚಳಿಯಲ್ಲಿಯಾಗಲಿ ಹುಡುಗರನ್ನು ಬರಿಮೈಯಿಂದ ಅಡ್ಡಾಡ ಗೊಡುವದು ಅನಿಷ್ಟವಾದದ್ದೆಂದು ಬಹು ಜನರ ತಿಳುವಳಿಕೆಯಿದೆ. ಆದರೆ

ಇದು ನಿಜವಾದ ತಿಳುವಳಿಕೆಯಲ್ಲ. ಇದರ ನಿಜತ್ವವು ಕೆಳಗಿನ ವಿವೇಚನೆಯಿಂದ ಸ್ಪಷ್ಟವಾಗಿ ತಿಳಿಯುವದು.

ಟಾಕಿಝಾವಾನ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಮೆಲ್ಲ ಮೆಲ್ಲನೆ ಬಿಸಿಲುಗಾಳಿಗಳ ಸ್ಪರ್ಶವನ್ನು ತಡಕೊಳ್ಳುವ ರೂಢಿಮಾಡುವದುಂಟು. ಹೀಗೆ ಕೆಲವು ತಿಂಗಳು ನಡೆದನಂತರ ಅಲ್ಲಿಯ ಹುಡುಗರು ಆದಷ್ಟು ಬರಿಮೈಯಿಂದಲೇ ಇರಲಿಕ್ಕೆ ಅಪೇಕ್ಷಿಸುತ್ತಾರೆ. ಮತ್ತು ಹಾಗಿರುವದೇ ಅವರಿಗೆ ಹೆಚ್ಚು ಸೇರುತ್ತದೆ. ಚಳಿಗಾಲದಲ್ಲಿ ಬಹಳ ತಣ್ಣಗಿನ ಗಾಳಿಬಿಟ್ಟಾಗ ಸಹ ಈ ಹುಡುಗರು ಮುಂಚಾನೆ ಅರಿವೆ ಅಂಚಡಿಗಳನ್ನು ಧರಿಸುವದಿಲ್ಲ. ಇದರ ಕಾರಣವೇನಂದರೆ, ವ್ಯಾಯಾಮದಿಂದ ಶರೀರದಲ್ಲಿ ಬಹಳ ಉಷ್ಣತೆಯು ಹುಟ್ಟುವದಲ್ಲದೆ ಮೈಯಲ್ಲಿ ಬೆವರಿನ ಧಾರೆಗಳು ಸುರಿಯುತ್ತಿರುತ್ತವೆ. ಇದರ ಪರಿಣಾಮವಿಷ್ಟೇ, ಹುಡುಗರಿಗೆ ಬಿಸಿಲು ಚಳಿಗಳ ಬಾಧೆಯಾಗದೆ ಅವರು ಬಹಳ ಗಟ್ಟಿಗರಾಗುತ್ತಾರೆ. ಮೈಮೇಲಿನ ಬೆವರನ್ನೂ ಕಾಲುಗಳನ್ನೂ ತೊಳೆದುಕೊಳ್ಳುವದಕ್ಕಾಗಿ ಜಪಾನ ದೇಶದ ಪ್ರತಿಯೊಂದು ಶಾಲೆಯಲ್ಲಿ ನೀರಿನ ಸಂಗ್ರಹವಿರುತ್ತದೆ.

ಈ ಪದ್ಧತಿಯಿಂದ ವ್ಯಾಯಾಮ ಮಾಡಲಿಚ್ಛಿಸುವವರು ಮುಂಜಾನೆ ಬೈಲು ಹವೆಯಲ್ಲಿ ನಿಂತು ಕೆಲವು ನಿಮಿಷಗಳ ಪರ್ಯಂತ ದೀರ್ಘಶ್ವಾಸವನ್ನು ತಕ್ಕೊಳ್ಳುವ ರೂಢಿಯನ್ನಿಡಬೇಕು. ಇದರಿಂದ ಹಸಿವೆಯೂ ಚೆನ್ನಾಗಿ ಆಗುವದಲ್ಲದೆ ಪುಪ್ಪುಸವು ನಿರೋಗಿಯೂ ಗಟ್ಟಿಯೂ ಆಗುವದು. ತಿಂಗಳಲ್ಲಿ ಒಂದು ಸಾರೆಯಾದರೂ ೫೦ ಮೈಲು ಓಡಿ ಬರಬೇಕು. ಓಡುವ ಸಾಮರ್ಥ್ಯವಿಲ್ಲದಿದ್ದರೆ ನಡೆಯಬೇಕು. ಗೊತ್ತುಮಾಡಿದ ಸ್ಥಳಕ್ಕೆ ಎಷ್ಟು ವೇಳೆಗೆ ಬಂದೆವೆಂಬದನ್ನು ಬರೆದಿಡಬೇಕು. ಇದರಿಂದ ತಿಂಗಳಲ್ಲಿ ಎಷ್ಟು ಪ್ರಗತಿಯಾಯಿತೆಂಬದು ತಿಳಿಯುವದು. ೫೦ ಮೈಲು ಓಡುವ ಸಾಮರ್ಥ್ಯವಿದ್ದವನು ಪ್ರಸಂಗದಲ್ಲಿ ೨೫ ಮೈಲಿನ ವರೆಗೆ ಓಡಬಹುದೆಂದು ಟಾಕಿಝಾವಾನ ಮತವದೆ.

ಟಾಕಿಝಾವಾನ ವ್ಯಾಯಾಮ ಪದ್ಧತಿಯಲ್ಲಿ ತಣ್ಣೀರಿನ ಸ್ನಾನಕ್ಕೆ ಹೆಚ್ಚು ಮಹತ್ವವು ಕೊಡಲ್ಪಟ್ಟಿದೆ. ಸ್ವತಃ ಟಾಕಿಝಾವಾನು ಮೂವತ್ತು ವರ್ಷದಲ್ಲಿ ಒಂದುದಿವಸ ಸಹ ತಪ್ಪಿಸದೆ ಈ ವ್ರತವನ್ನು ಪಾಲಿಸಿರುವನು. ಅವನು ಮೈಮೇಲೆ ಎಷ್ಟೋ ಬಕೆಟು ನೀರು ಸುರುವಿಕೊಂಡು, ಬಳಿಕ

ವಸ್ತ್ರದಿಂದ ನೈಕೆಂಪಾಗುವವರೆಗೆ ತಿಕ್ಕಿ ಒರೆಸಿಕೊಳ್ಳುವನು. ಮುಂ ಎಷ್ಟೋ ವೇಳೆ ವಸ್ತ್ರಗಳನ್ನು ಧರಿಸದೆ ತನ್ನ ತೋಟದಲ್ಲಿ ಕಸಕಡ್ಡಿಯನ್ನ ತೆಗೆಯುವ ಕೆಲಸವನ್ನು ಮಾಡುವನು. "ನನಗೆ ಎಂದೂ ಚಳಿಹತ್ತುವದಿ ವೆಂದು ಟಾಕಿಮೂವಾನು ಹೇಳುವನು. ಹೀಗೆ ಯಾಕಾಗುತ್ತದೆಂ ಯಾರಾವರೂ ಕೇಳಿದರೆ ಅದಕ್ಕೆ ರೂಢಿಯೇ ಕಾರಣವೆಂದೂ ಬೇಕಾ ನವು ಇದನ್ನು ಸಹಜವಾಗಿ ಸಂಪಾದಿಸಬಹುದೆಂದೂ, ಶರೀರದ ಎ ಭಾಗಗಳಿಗೂ ಈ ವ್ರತವನ್ನು ಪಾಲಿಸಹಚ್ಚುವದು ಯೋಗ್ಯವೆಂದೂ ಟಾ ಕಿಮೂವಾನು ಉತ್ತರ ಕೊಡುವನು. ಟಾಕಿಮೂವಾನ ಈ ಪದ್ಧತಿಯು ಆತನ ಶಾಲೆಯೊಳಗಿನ ಎಲ್ಲ ವಿದ್ಯಾರ್ಥಿಗಳೂ ನಡೆಯುವರು.

ಈ ಶಾಲೆಯಲ್ಲಿ ಎಲ್ಲರೂ ಚಟುವು ಕೂಡ್ರಬೇಕೆಂದು ಕಟ್ಟಪ್ಪಣೆಯು ಇರುತ್ತದೆ. ಈ ಶಾಲೆಗೆ ಬೇಸಿಗೆಯು ಸೂಟಿಯಿರುವದಿಲ್ಲ. ಬೇಸಿಗೆಯ ದಿನವಲ್ಲಿ ಒಂದು ತಾಸು ವ್ಯಾಖ್ಯಾನಕೇಳುವದು, ಒಂದು ತಾಸು ವಿಕಾಂ ವಾಸ, ಮೂರು ತಾಸು ಆಡುವದು ಹೀಗೆ ಸಾಧಾರಣ ನಿಯಮವಿರುತ್ತದೆ ಆಡುವಾಗ್ಗೆ ಮೈಯಲ್ಲಿ ಅಂಗಿಟೊಪ್ಪಿಗೆಗಳನ್ನೂ ಕಾಲಿನಲ್ಲಿ ಬೂಟುಗಳನ್ನು ಹಾಕಲಿಕ್ಕೆ ಪ್ರತಿಬಂಧವಿರುತ್ತದೆ. ದಿನಾಲು ಬಿಸಿಲಿನಲ್ಲಿ ಆಡುವದಿರು ದರಿಂದ ಹುಡುಗರ ವರ್ಣವು ಕಪ್ಪಾಗುತ್ತದೆ. ಬಿಸಿಲು ತಡೆಯದಿದ್ದವ ರಿಗೆ ನೆರಳಿನಲ್ಲಿ ಕೂಡ್ರಲಿಕ್ಕೆ ಅಪ್ಪಣೆಯಿರುತ್ತದೆ. ಅದರೆ ಬಹಳ ಹುಡು ಗರಿಗೆ ಬಿಸಿಲು ತಡೆಯುವದೆಂದು ಅನುಭವದಿಂದ ಗೊತ್ತಾಗಿದೆ.

ಎರಡು ಮೂರು ತಿಂಗಳು ಈ ಪದ್ಧತಿಯಿಂದ ಬೆಳೆದ ಹುಡುಗ ಸ್ಥಿರಮನಸಿನವರೂ ಸುದೃಢರೂ, ಆನಂದ ಮುದ್ರೆಯುವರೂ ಆಗುವರು ಅವರಲ್ಲಿಯ ಆಲಸ್ಯ, ಅಂಜಿಕೆ, ರೋಗಾದಿಗಳೂ ದಾಕ್ಷಿಣ್ಯದ ಸ್ವಭಾವವೂ ಲುಪ್ತವಾಗಿ ಅವರು ಉದ್ಯೋಗಿಗಳೂ, ಗಟ್ಟಿಗರೂ, ನಿರೋಗಿಗಳೂ ಸತ್ಯ ವರ್ತನದವರೂ ಆಗುವರು. ಜೀಸಿಗೆಯ ಸೂಟಿಯಲ್ಲಿ ಅಲ್ಲಿಯ ಕಾಲೇ ಜದೊಳಗಿನ ವಿದ್ಯಾರ್ಥಿಗಳು ತಮ್ಮ ಪನಿಗೆ ಹೋಗಲಿಕ್ಕೆ ಇಚ್ಛಿಸ ವದಿಲ್ಲ. ಇದೊಂದೇ ಮಾತಿನಿಂದ ಈ ವ್ಯಾಯಾಮ ಪದ್ಧತಿಯು ವಿದ್ಯಾ ರ್ಥಿಗಳಿಗೆ ಎಷ್ಟು ರುಚಿಸುತ್ತದೆಂಬದನ್ನು ವಾಚಕರೇ ಊಹಿಸಬಹುದು.

ಅಂದಾಜು ಪತ್ರಿಕೆ.

ಹಿಂದಿನ ಸಂಚಿಕೆಯಲ್ಲಿ ಸೂಚಿಸಿದಂತೆ ಬಾಲಕರ ವರ್ಗದ ಯಾನತ್ರಾ ವಿಷಯಗಳ ಒಂದು ವರ್ಷದ ಅಂದಾಜು ಪತ್ರಿಕೆಯನ್ನು ಇವರ ಕೆಳಗೆ ಕೊಟ್ಟಿರುವೆನು.

ಕಥೆಗಳು: — ೧. ಕಿಡಿಗೇಡಿ ಈರನು ೨. ಗರಗದ ಗಣಪತಿ ೩. ಲಕ್ಷ್ಮಣನ ಕಥೆ ೪. ತಕ್ಕಡಿ ೫. ದ್ಯಾಮನ ಕಥೆ. ೬ ಎಮ್ಮೆಯ ಕಥೆ ೭ ಉಳುವಪ್ಪನ ಕಥೆ ೮. ನವಿಲಿನ ಕಥೆ ೯. ಒಕ್ಕಲಿಗನ ಕಥೆ ೧೦. ಕುರುಬನ ಕಥೆ ೧೧. ಹರಿಭಟ್ಟನ ಕಥೆ ೧೨. ಅರಸನ ಕಥೆ.

ಸೂಚನೆ:— ಬಾಲಬೋಧಿನಿಯಲ್ಲಿ ಹೊಸದಾಗಿ ಮಾಡಿಕೊಂಡ ಹನ್ನೀಡು ಗುಂಪುಗಳಿಗೆ ಸಂಬಂಧವಾಗುವಂತೆ ಈ ಕಥೆಗಳ ರಚನೆ ಇರುತ್ತದೆ.

ಬರಹ — ೧. ರ. ೨. ತ. ೩. ಈ. ೪. ಕ. ೫. ಕಲಿತ ಅಕ್ಷರಗಳಿಂದಾಗುವ ಶಬ್ದಗಳು. ೬. ಗ. ೭. ಇ. ೮ ಳ. ೯. ಣ. ೧೦. ಕಲಿತ ಅಕ್ಷರಗಳಿಂದಾಗುವ ಶಬ್ದಗಳು. ೧೧. ಲ. ೧೨. ೪. ೧೩. ಉ. ೧೪ ಊ. ೧೫. ಕಲಿತ ಅಕ್ಷರಗಳಿಂದಾಗುವ ಶಬ್ದಗಳು. ೧೬. ತ. ೧೭. ಅ. ೧೮. ಅಂ. ೧೯. ಅಃ. ೨೦. ಆ. ೨೧ ಕಲಿತ ಅಕ್ಷರಗಳಿಂದಾಗುವ ಶಬ್ದಗಳು. ೨೨. ದ. ೨೩. ಧ ೨೪. ಥ. ೨೫. ಡ. ೨೬. ಢ. ೨೭. ಕಲಿತ ಅಕ್ಷರಗಳಿಂದಾಗುವ ಶಬ್ದಗಳು. ೨೮. ಎ. ೨೯. ಏ. ೩೦. ಐ. ೩೧. ವ. ೩೨. ಕಲಿತ ಅಕ್ಷರಗಳಿಂದಾಗುವ ಶಬ್ದಗಳು. ೩೩. ಛ ೩೪. ಮ. ೩೫. ಪ. ೩೬. ಫ. ೩೭. ಕಲಿತ ಅಕ್ಷರಗಳಿಂದಾಗುವ ಶಬ್ದಗಳು. ೩೮. ಷ, ಘ. ೩೯. ಸ' ನ. ಕಲಿತ ಅಕ್ಷರಗಳಿಂದಾಗುವ ಶಬ್ದಗಳು. ೪೧. ಒ, ಓ, ಔ, ೪೨. ಜ, ೪೩. ಬ, ೪೪. ಭ, ೪೫. ಜ. ೪೬. ಟ, ೪೭. ಕಲಿತ ಅಕ್ಷರಗಳಿಂದಾಗುವ ಶಬ್ದಗಳು. ೪೮. ಝ, ೪೯. ಹ, ೫೦. ಯ, ೫೧. ಶ. ಕಲಿತ ಅಕ್ಷರಗಳಿಂದಾಗುವ ಶಬ್ದಗಳು. ೫೨. ಖ. ೫೩ ಯ. ೫೪. ಕಲಿತ ಅಕ್ಷರಗಳಿಂದಾಗುವ ಶಬ್ದಗಳು ೫೫.'ಅ'ದ ಗುಣಿತಾಕ್ಷರ ೫೬.ಆ.ದ ಗುಣಿತಾಕ್ಷರಕ್ಕೆ ಸಂಬಂಧಿಸಿದ ಶಬ್ದಗಳು. ೫೭. 'ಇ'ಯ ಗುಣಿತಾಕ್ಷರ ೫೮.'ಇ.'ಯ ಗುಣಿತಾಕ್ಷರಕ್ಕೆ ಸಂಬಂಧಿಸಿದ ಶಬ್ದಗಳು. ೫೯.'ಈ' ಯ ಗುಣಿತಾಕ್ಷರ. ೬೦.'ಈ' ಯ ಗುಣಿತಾಕ್ಷರಕ್ಕೆ ಸಂಬಂಧಿಸಿದ ಶಬ್ದಗಳು. ೬೧. 'ಉ'ವಿನ ಗುಣಿತಾಕ್ಷರ. ೬೨. 'ಉ' ವಿನ ಗುಣಿತಾಕ್ಷರಕ್ಕೆ ಸಂಬಂಧಿಸಿದ ಶಬ್ದಗಳು. ೬೩. 'ಊ'

ಸಿದ ಶಬ್ದಗಳು. ೧೪ ಯ ಗುಣಿತಾಕ್ಷರ ೬೫. 'ಎ' ಯ ಗುಣಿತಾ
ರಕ್ಕೆ ಸಂಬಂಧಿಸಿದ ಶಬ್ದಗಳು ೬೬. 'ಏ' ಯ ಗುಣಿತಾಕ್ಷರ ೬
'ಏ' ಯ ಗುಣಿತಾಕ್ಷರಕ್ಕೆ ಸಂಬಂಧಿಸಿದ ಶಬ್ದಗಳು ೬೮. 'ಐ'
ಗುಣಿತಾಕ್ಷರ, ೬೯. 'ಐ' ಯ ಗುಣಿತಾಕ್ಷರಕ್ಕೆ ಸಂಬಧಿಸಿದ ಶ
ಗಳು. ೭೦. 'ಒ' ವಿನ ಗುಣಿತಾಕ್ಷರ ೭೧. 'ಒ' ವಿನ ಗುಣಿತಾ
ರಕ್ಕೆ ಸಂಬಂಧಿಸಿದ ಶಬ್ದಗಳು. ೭೨. 'ಓ' ವಿನ ಗುಣಿತಾಕ್ಷರ. ೭
'ಓ' ವಿನ ಗುಣಿತಾಕ್ಷರಕ್ಕೆ ಸಂಬಂಧಿಸಿದ ಶಬ್ದಗಳು. ೭೪. ೌ.
ಗುಣಿತಾಕ್ಷರ ೭೫. ೌ. ವಿನ ಗುಣಿತಾಕ್ಷರಕ್ಕೆ ಸಂಬಂಧಿಸಿದ ಶ
ಗಳು. ೭೬. ಬಳ್ಳಿಗಳ ಕ್ರಮ, ಕ, ಖ, ೭೭. ಗ, ಘ, ಙ ಅಕ್ಷರಗ
ಬಳ್ಳಿಗಳು. ೭೮. ಚ, ಛ, ಜ. ೭೯. ಝ, ಞ. ೮೦. ಟ, ಠ, ಡ, ಢ
ಣ. ೮೧. ತ, ಥ, ದ ೮೨. ಧ, ನ, ೮೩. ಪ, ಫ, ಬ, ಭ
ಮ, ೮೫. ಯ, ರ, ಲ, ವ, ೮೬. ಶ, ಷ, ಸ, ಹ, ಳ. ಅಕ್ಷ
ಗಳ ಬಳ್ಳಿಗಳು.

ವಾಚನ:— ೧. ರ, ಠ, ಈ, ಕ. ೨. ಕಲಿತ ಅಕ್ಷರಗಳಿಂದಾಗುವ ಶಬ್ದಗಳ
೩. ಗ, ಇ, ಞ, ಣ. ೪. ಕಲಿತ ಅಕ್ಷರಗಳಿಂದಾಗುವ ಶಬ್ದಗಳು
೫. ತಯಾರಿಸಿದ ಎರಡು ವಾಕ್ಯಗಳು. ೬. ಲ, ೪,ಉ, ಊ. ೭. ಕ
ತ ಅಕ್ಷರಗಳಿಂದಾಗುವ ಶಬ್ದಗಳು. ೮. ಎರಡು ವಾಕ್ಯಗಳು. ೯. ಃ
ಅ, ಅಂ, ಅಃ, ಆ. ೧೦. ಕಲಿತ ಅಕ್ಷರಗಳಿಂದಾಗುವ ಶಬ್ದಗಳ
೧೧. ಮೂರು ವಾಕ್ಯಗಳು. ೧೨. ದ, ಧ, ಥ, ಡ, ಢ. ೧೩. ಕಲಿ
ಅಕ್ಷರಗಳಿಂದಾಗುವ ಶಬ್ದಗಳು. ೧೪. ಮೂರು ವಾಕ್ಯಗಳು. ೧೫
ಎ, ಏ, ಐ. ವ. ೧೬. ಕಲಿತ ಅಕ್ಷರಗಳಿಂದಾಗುವ ಶಬ್ದಗಳು
೧೭. ಮೂರು ವಾಕ್ಯಗಳು. ೧೮. ಛ, ಮ, ಪ, ಫ. ೧೯. ಕಲಿತ ಅಕ್ಷ
ರಗಳಿಂದಾಗುವ ಶಬ್ದಗಳು. ೨೦. ನಾಲ್ಕು ವಾಕ್ಯಗ ು. ಷ ಘ
ಸ, ನ, ೨೨. ಕಲಿತ ಅಕ್ಷರಗಳಿಂದಾಗ ವ ಶಬ್ದಗಳು. ೨೩. ನಾಲ್
ವಾಕ್ಯಗಳು. ೨೪. ಒ, ಓ, ಔ, ಜ. ೨೫. ಕಲಿತ ಅಕ್ಷರಗಳಿಂದ
ಗುವ ಶಬ್ದಗಳು. ೨೬. ನಾಲ್ಕು ವಾಕ್ಯಗಳು. ೨೭. ಬ, ಭ, ಚ, ಟ
೨೮. ಕಲಿತ ಅಕ್ಷರಗಳಿಂದ ಗುವ ಶಬ್ದಗಳು. ೨೯. ನಾಲ್ಕು ವಾಕ್ಯ
ಗಳು. ೩೦. ಝ, ಹ, ಯ, ಶ. ೩೧. ಕಲಿತ ಅಕ್ಷರಗಳಿಂದಾಗುವ
ಶಬ್ದಗ ು. ೩೨. ನಾಲ್ಕು ವಾಕ್ಯಗ ು ೩೩. ಖ, ಖಿ, ೩೪. ಕಲಿತ
ಅಕ್ಷರಗಳಿಂದಾಗುವ ಶಬ್ದಗಳು. ೩೫. ನಾಲ್ಕು ವಾಕ್ಯಗಳು. ೩೬.
ಆದ ಗುಣಿತಾಕ್ಷರಕ್ಕೆ ಸಂಬಂಧಿಸಿದ ಶಬ್ದಗಳು. ೩೭. ಎರಡು ವಾಕ್ಯ

ಎರಡು ವಾಕ್ಯಗಳು. ೪೦. 'ಈ' ಯ ಗುಣಿತಾಕ್ಷರಕ್ಕೆ ಸಂಬಂಧಿಸಿದ ಶಬ್ದಗಳು. ೪೧. ಮೂರು ವಾಕ್ಯಗಳು. ೪೨. ಊ, ಊಾ.ಗಳ ಗುಣಿತಾಕ್ಷರಗಳಿಗೆ ಸಂಬಂಧಿಸಿದ ಶಬ್ದಗಳು. ೪೩. ನಾಲ್ಕು ವಾಕ್ಯಗಳು. ೪೪. ಋ, ೠ, ಌ, ೡ.ಗಳ ಗುಣಿತಾಕ್ಷರಗಳಿಗೆ ಸಂಬಂಧಿಸಿದ ಶಬ್ದಗಳು. ೪೫. ನಾಲ್ಕು ವಾಕ್ಯಗಳು. ೪೬. 'ಎ'ಯ ಗುಣಿತಾಕ್ಷರಕ್ಕೆ ಸಂಬಂಧಿಸಿದ ಶಬ್ದಗಳು. ೪೭. 'ಏ'ಯ ಗುಣಿತಾಕ್ಷರಕ್ಕೆ ಸಂಬಂಧಿಸಿದ ಶಬ್ದಗಳು. ೪೮. 'ಐ'ಯ ಗುಣಿತಾಕ್ಷರಕ್ಕೆ ಸಂಬಂಧಿಸಿದ ಶಬ್ದಗಳು. ೪೯. ನಾಲ್ಕು ವಾಕ್ಯಗಳು. ೫೦. ಒ, ೀ, ಔ.ಗಳ ಗುಣಿತಾಕ್ಷರಗಳಿಗೆ ಸಂಬಂಧಿಸಿದ ಶಬ್ದಗಳು. ೫೧. ನಾಲ್ಕು ವಾಕ್ಯಗಳು. ೫೨. ೧ ನೇ ಪಾಠ ಪೂರ್ವಾರ್ಧ. ೫೩. ೧ ನೇ ಪಾಠ. ಉತ್ತರಾರ್ಧ. ೫೪. ೨.ನೇ ಪಾಠ, ಮೊದಲಿನ ೩ ಪ್ಯಾರಾ. ೫೫. ೨ ನೇ ಪಾಠ. ನಡುವಿನ ಎರಡು ಪ್ಯಾರಾ. ೫೬. ೨ ನೇ ಪಾಠ. ಕಡೆಯ ಎರಡು ಪ್ಯಾರಾ. ೫೭. ೩ನೆಯ ಪಾಠ. ಮೊದಲಿನ ೨ ಪ್ಯಾರಾ. ೫೮. ೩ನೆಯ ಪಾಠ. ನಡುವಿನ ೨ ಪ್ಯಾರಾ. ೫೯. ೩ನೆಯ ಪಾಠ. ಕಡೆಯ ೨ ಪ್ಯಾರಾ. ೬೦. ೪ನೇ ಪಾಠ ಮೊದಲಿನ ಎರಡು ಪ್ಯಾರಾ. ೬೧. ೪ನೇ ಪಾಠ. ಕಡೆಯ ೩ ಪ್ಯಾರಾ. ೬೨. ೫ ನೇ ಪಾಠ. ಪೂರ್ವಾರ್ಧ. ೬೩. ೫ ನೇ ಪಾಠ. ಉತ್ತರಾರ್ಧ. ೬೪. ೬ನೆಯ ಪಾಠ ಪೂರ್ವಾರ್ಧ. ೬೫. ೬ನೆಯ ಪಾಠ ಉತ್ತರಾರ್ಧ. ೬೬. ೭ನೆಯ ಪಾಠ ಸಂಪೂರ್ಣ. ೬೭. ೮ನೆಯ ಪಾಠ

ಹೂಡು:—೧. 'ಜಗದೀಶಾ' ಇದು ೧ ನೇ ಕಥೆಗೆ ಸಂಬಂಧಿಸಿದೆ.

೨. 'ಚಿಕ್ಕನುಕ್ಕಳ್' ೨ ನೇ, ೩ ನೇ, ೪ ನೇ ಕಥೆಗಳಿಗೆ ಸಂಬಂಧಿಸಿದೆ.

೩. ಮೂಲಾಕ್ಷರಗಳ ಪದ್ಯ—೫ನೇ ೧೬ ನೇ ಕಥೆಗಳಿಗೆ ಸಂಬಂಧಿಸಿರುವದು.

೪. 'ಒಳ್ಳೆ ಹುಡುಗನು' ೬ನೇ. ೧೦ ನೇ. ೧೧ ನೇ ಕಥೆಗಳಿಗೆ ಸಂಬಂಧ.

೫. 'ಕಂದಪದ್ಯ'—೭-೮-೯ ನೇ ಕಥೆಗಳಿಗೆ ಸಂಬಂಧ.

೬. ಗಿಳಿಯ ಪದ್ಯ,
೭. ಮಳಿಯ ಪದ್ಯ } ವಸ್ತುಪಾಠಗಳ ಕೂಡ ಕಲಿಸುವದು.

ವಸ್ತುಪಾಠ—೧. ಕೆಂಪುಬಣ್ಣ. ೨. ಹಳದೀಬಣ್ಣ. ೩. ನೀಲೀಬಣ್ಣ. ೪. ಕುದುರೆ. ೫. ಎಮ್ಮೆ. ೬. ಕುರಿ. ೭. ಗಿಳಿ. ೮. ಪಾರಿವಾಳ. ೯. ಅಲದಗಿಡ. ೧೦. ಪೇರಲಗಿಡ. ೧೧. ಗಂಧದಗಿಡ. ೧೨. ದಾಸಾಳದಗಿಡ. ೧೩. ಮಾದುಗುಣಿಕೆಯಗಿಡ.

ಕಿಂಡರಗಾರ್ಟನ್:—೧. ಕೆಂಪು ಚಂಡಿನ ಗುಣಧರ್ಮ. ೨. ಕೆಂಪು ಚಂಡಿನ ಆಟ. ೩. ಪಚ್ಚೆ ಚಂಡಿನ ಗುಣಧರ್ಮ. ೪. ಹಳದಿ ಚಂಡಿನ ಆಟ. ೫. ನೀಲಿ ಚಂಡಿನ ಗುಣಧರ್ಮ. ೬. ನೀಲಿ ಚಂಡಿನ ಆಟ. ೭. ಗೋಲಿನ ಗುಣಧರ್ಮ. ೮. ಗೋಲಿನ ಆಟ. ೯. ಘನದ ಗುಣಧರ್ಮ. ೧೦. ಘನದ ಆಟ. ೧೧. ಸಿಲಿಂದರದ ಗುಣಧರ್ಮ. ೧೨. ಸಿಲಿಂದರದ ಆಟ. ೧೩. ಮೂರನೇಕರಣ:—ವ್ಯವಹಾರದ ಆಕೃತಿಗಳ ರಚನೆ. ನಾಲ್ಕು ಆಕೃತಿಗಳು. ೧೪. ಆರು ಆಕೃತಿಗಳು. ೧೫. ಒನ್ನೇ ಕಥೆಗೆ ಸಂಬಂಧಿಸಿದ ಆಕೃತಿಗಳ ರಚನೆ. ೧೬. ಎಂಟನೇ ಕಥೆಗೆ ಸಂಬಂಧಿಸಿದ ಆಕೃತಿಗಳ ರಚನೆ. ೧೭. ಒನ್ನೇ ಕಥೆಗೆ ಸಂಬಂಧಿಸಿದ ಆಕೃತಿಗಳ ರಚನೆ. ೧೮. ಹತ್ತನೇ ಕಥೆಗೆ ಸಂಬಂಧಿಸಿದ ಆಕೃತಿಗಳ ರಚನೆ. ೧೯. ಹನ್ನೊಂದನೇ ಕಥೆಗೆ ಸಂಬಂಧಿಸಿದ ಆಕೃತಿಗಳ ರಚನೆ. ೨೦. ಹನ್ನೆರಡನೇ ಕಥೆಗೆ ಸಂಬಂಧಿಸಿದ ಆಕೃತಿಗಳ ರಚನೆ. ೨೧. ಜ್ಞಾನವರ್ಧಕ ಆಕೃತಿ. ಬೇರೇಜು, ೨೨. ವಜಾಬಾಕಿ. ೨೩. ಸೌಂದರ್ಯಜನಕ ಆಕೃತಿಗಳ ರಚನೆ. ನಾಲ್ಕು. ೨೪. ಏಳನೇಕರಣ. ಟ್ಯಾಬ್ಲೆಟ್ ಲೇಯಿಂಗ. ೨೫. ಎಂಟನೇಕರಣ. ಸ್ಟಿಕ್ ಲೇಯಿಂಗ. ೨೬. ಒಂಬತ್ತನೇಕರಣ. ರಿಂಗಲೇಯಿಂಗ. ೨೭. ಚಾಪಿಯ ಹೆಣಿಕೆ ೧ನೇ ಮೆಟ್ಟು. ೨೮. ಚಾಪಿಯ ಹೆಣಿಕೆ ೨ನೇ ಮೆಟ್ಟು. ೨೯. ಹದಿನೂರನೇಕರಣ, ಪೇಪರ ಕಟಿಂಗ-ಉದ್ದಪಟ್ಟಿ. ೩೦. ಪೇಪರ ಕಟಿಂಗ-ಪರ್ಣಳ. ೩೧. ಪೇಪರ ಕಟಿಂಗ, ಹೂವು. ೩೨. ಪೇಪರ ಫೋಲ್ಡಿಂಗ- ಪುಸ್ತಕ, ಗುಡಿಸಲುಗಳ ರಚನೆ. ೩೩. ಬಿಚ್ಚಿದ ಪಾಕೀಟು ಮುಚ್ಚಿದ ಪಾಕೀಟುಗಳ ರಚನೆ. ೩೪. ಕಿರೀಟ, ಡೋಣಿಗಳ ರಚನೆ. ೩೫. ಕೋಟು, ಚಣ್ಣಗಳ ರಚನೆ. ೩೬. ಬೂಟು, ಗಾಳಿಯಂತ್ರಗಳ ರಚನೆ. ೩೭. ಬುಟ್ಟಿ, ಮೇಜುಗಳ ರಚನೆ. ೩೮. ಹತ್ತನೇಕರಣ— ಡ್ರಾಯಿಂಗ- ಚಂಡು, ಗಾಲಿಗಳ ಚಿತ್ರ. ೩೯. ಗಡಿಯಾಲದ ಚಿತ್ರ. ೪೦. ಉಳ್ಳಾಗಡ್ಡಿಯ ಚಿತ್ರ. ೪೧. ತಕ್ಕಡಿಯ ಚಿತ್ರ. ೪೨. ಬಿಲ್ಲಿನ ಚಿತ್ರ. ೪೩. ಕೋಡಿನ ಚಿತ್ರ. ೪೪. ಬಾಳೇ ಹಣ್ಣಿನ ಚಿತ್ರ. ೪೫. ಘಂಟೆಯ ಚಿತ್ರ. ೪೬. ಎಲೆಯ ಚಿತ್ರ. ೪೭. ಇಪ್ಪತ್ತನೇಕರಣ. ಕ್ಲೇಮಾಡೆಲ್—ಗಾಲಿ. ೪೮. ಉಂಡಿ. ೪೯. ಪೇರಲ ಹಣ್ಣು. ೫೦. ಆನೆಯ ಸೊಂಡಿ. ೫೧. ಕುಳ್ಳಿ. ೫೨. ಬಾಳೇಹಣ್ಣು. ೫೩. ಎಲೆ. ೫೪.

ಜವದಪಾಣಿ. ೫೫. ಹತ್ತೊಂಬತ್ತನೇಕರಣ — ಒಜಗಳ ಆಕೃತಿ- ಅಕ್ಷರ ರಚನೆ. ೫೬. ಮೊಗ್ಗಿಯ ರಚನೆ. ೫೭. ಹನ್ನೆರಡನೆಯಕರಣ ಪ್ಪಿಸ್ಟಿಂಗ, ೫೮. ಹೊಲಿಗೆಯ ಪ್ರಾರಂಭ ೫೯. ಕಥೆಗೆ ಸಂಬಂಧಿಸಿದ ಆಕೃತಿ ರಚನೆ ಸ್ಯಾಂಡ ಮೌಡೆಲ್. ೬೦. ದಾರಜಾಕೃತಿ ಕಥೆಗೆ ಸಂಬಂಧಿಸಿದ್ದು. ೬೧. ಸ್ಪ್ರಿಂಕಲಿಂಗರ್ಕ- ಕಥೆಗೆ ಸಂಬಂಧಿಸಿದ ಆಕೃತಿಗಳ ರಚನೆ.

ನೀತಿಪಾಠಗಳು: — ೧. ಸ್ವಚ್ಛತೆ. ೨. ಅಚ್ಚುಕಟ್ಟುತನ. ೩. ನಡೆನುಡಿ. ೪. ದಯೆ ೫. ಸರಳತನ. ೬. ಸತ್ಯ. ೭. ಧೈರ್ಯ. ೮. ಕೃತಜ್ಞತೆ.

ಟಿಪ್ಪಣಿ:— ಈ ಇಯತ್ತೆಗಾಗಿ ಗೊತ್ತು ಪಡಿಸಿದ್ದರಲ್ಲಿ ಮಾಡಿಕೊಂಡ ಐದು ಪಾಠಗಳನ್ನು ಅನುಕ್ರಮವಾಗಿ ಕಲಿಸುವದು, ಅಲ್ಲದೆ ಬಾಲಬೋಧಿನಿಯಲ್ಲಿದ್ದ ಎರಡು ಡ್ರಿಲ್ಲಿನ ಪದ್ಯಗಳೊಳಗಿನ ಒಂದೊಂದು ಪದ್ಯವನ್ನು ಒಂದೊಂದು ಪಾಠಕ್ಕಾಗಿ ಇಟ್ಟುಕೊಳ್ಳುವದು.

ಗಣಿತ:— ೧. ಅಂಕಿಗಳು ೧ ರಿಂದ ೫ ರ ವರೆಗೆ ೨. ೬ ರಿಂದ ೧೦ ರ ವರೆಗಿನ ಅಂಕಿಗಳು. ೩. ೧೧ ರಿಂದ ೧೫ರ ವರೆಗಿನ ಅಂಕಿಗಳು. ೪. ೧೬ ರಿಂದ ೨೦ರ ವರೆಗಿನ ಅಂಕಿಗಳು. ೫. ಅಂಕಿಗಳು. ೨೧ ರಿಂದ ೨೫ರ ವರೆಗೆ ೬. ಅಂಕಿಗಳು. ೨೬ ರಿಂದ ೩೦ರ ವರೆಗೆ ೭. ಅಂಕಿಗಳು ೩೧ ರಿಂದ ೩೫ರ ವರೆಗೆ. ೮. ಅಂಕಿಗಳು. ೩೬ ರಿಂದ ೪೦ರ ವರೆಗೆ ೯ ಅಂಕಿಗಳು. ೪೧ ರಿಂದ ೪೫ರ ವರೆಗೆ. ೧೦. ಅಂಕಿಗಳು. ೪೬ ರಿಂದ ೫೦ರ ವರೆಗೆ ೧೧. ೫೧ರಿಂದ ೬೦ ರ ವರೆಗೆ ಅಂಕಿಗಳು. ೧೨. ಅಂಕಿಗಳು. ೬೧ ರಿಂದ ೭೦ ರ ವರೆಗೆ. ೧೩. ಅಂಕಿಗಳು ೭೧ ರಿಂದ ೮೦ ರ ವರೆಗೆ. ೧೪. ಅಂಕಿಗಳು ೮೧ ರಿಂದ ೯೦ರ ವರೆಗೆ. ೧೫. ೯೧ ರಿಂದ ೧೦೦ ರ ವರೆಗಿನ ಅಂಕಿಗಳು.

೧೬. ಎರಡರ ಮೊಗ್ಗಿ, ಎರಡರವರೆಗೆ. ೧೭. ಎರಡರ ಮೊಗ್ಗಿ, ನಾಲ್ಕರ ವರೆಗೆ ೧೮ ಎರಡರ ಮೊಗ್ಗಿ, ಆರರ ವರೆಗೆ. ೧೯. ಎರಡರ ಮೊಗ್ಗಿ, ಎಂಟರವರೆಗೆ. ೨೦. ಎರಡರ ಮೊಗ್ಗಿ, ಹತ್ತರವರೆಗೆ ೨೧. ಮೂರರ ಮೊಗ್ಗಿ, ಎರಡರ ವರೆಗೆ. ೨೨. ಮೂರರ ಮೊಗ್ಗಿ, ನಾಲ್ಕರವರೆಗೆ. ೨೩. ಮೂರರ ಮೊಗ್ಗಿ, ಆರರವರೆಗೆ. ೨೪. ಮೂರರ ಮೊಗ್ಗಿ, ಎಂಟರವರೆಗೆ ೨೫. ಮೂರರ ಮೊಗ್ಗಿ, ಹತ್ತರವರೆಗೆ. ಇವರಂತೆ ನಾಲ್ಕರ ಮೊಗ್ಗಿಯ ೫ ಪಾಠಗಳು, ಐದರ ಮೊಗ್ಗಿಯ

೫ ಪಾಠಗಳು, ಆರರ ಮೊಗ್ಗಿಯ ೫ ಪಾಠಗಳು, ಏಳರ ಮೊಗ್ಗಿಯ ೫ ಪಾಠಗಳು, ಎಂಟರ ಮೊಗ್ಗಿಯ ೫ ಪಾಠಗಳು, ಒಂಭತ್ತರ ಮೊಗ್ಗಿಯ ೫ ಪಾಠಗಳು, ಪತ್ತರ ಮೊಗ್ಗಿಯ ೫ ಪಾಠಗಳು, ಅಂತು. ೬೦ ಪಾಠಗಳು.

೬ನೇಪಾಠ. ೧ರ ಮೊಗ್ಗಿ, ಐದರವರೆಗೆ. ೬೨. ೧ರ ಮೊಗ್ಗಿ ೧೦ರ ವರೆಗೆ. ೬೩. ಐದರವರೆಗೆ ಬೇರೀಜು. ೬೪. ಹತ್ತರ ವರೆಗೆ ಬೇರೀಜು. ೬೫. ವಜಾಬಾಕಿ ೧ ರಿಂದ ೫ರ ವರೆಗೆ ೬೬. ವಜಾ ಬಾಕಿ ಹತ್ತರವರೆಗೆ ೬೭. ಒಂದರಿಂದ ಹತ್ತರವರೆಗಿನ ಬೇರೀಜು ವಜಾಬಾಕಿಗಳು.

ಸೂಚನೆ:— ಶಿಕ್ಷಕರ ಸೂಚನೆಯಲ್ಲಿ ಹೇಳಿದ ಪ್ರಕಾರ ಈ ವರ್ಗದ ಎಲ್ಲ ವಿಷಯಗಳ ಪಾಠಗಳಲ್ಲಿ ಪರಸ್ಪರ ಸಂಬಂಧವಿರುವಂತೆ ರಚನೆ ಇರುತ್ತದೆ. ಈ ಪಾಠಗಳಲ್ಲಿರುವ ಸಂಬಂಧವನ್ನು ಸ್ಪಷ್ಟ ಮಾಡಿ ತೋರಿಸುವದಕ್ಕಾಗಿ ಒಂದು ಪಾಠದ ವಿಷಯವನ್ನು ಶಿಕ್ಷಕರ ತಿಳುವಳಿಕೆಗಾಗಿ ಇದರಡಿ ಕೊಟ್ಟಿರುತ್ತದೆ

ಒಂದನೇ ಗುಂಪಿನಲ್ಲಿಯ ವಿಷಯವೂ ಅದಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳೂ.

೧. ಕಥೆ—ಕಿಡಿಗೇಡಿ ಈರನು (ಈ ಕಥೆಯಲ್ಲಿ, ರಸ್ತೆ, ರಥ, ಅರಸು, ಕುದುರೆ, ದೇವರು, ವೀರ ಇವೆಲ್ಲವೂ ಬಂದಿವೆ.)

೨. ಬರಹ—ರ, ಠ, ಈ, ಕ, ಈರ, ಕರ.

೩. ವಾಚನ—ರ, ಠ, ಈ, ಕ, ಈರ, ಕರ.

೪. ಗಣಿತ—೧, ೨, ೩, ೪, ೫,

೫. ಕೆಂಡರಗಾರ್ಟನ್—ಕೆಂಪುಚಂಡು.

೬. ಟ್ಯಾಬಲೆಟ್—ಪೀಠ.

೭. ಡ್ರಾಯಿಂಗ—ಚಂಡು.

೮. ಸ್ಟಿಕ್‌ಲೇಯಿಂಗ—ತೇರು; ರಥ,

೯. ರಿಂಗಲೇಯಿಂಗ—ನಾಲು, ೧.

೧೦. ಸ್ಯಾಂಡಮೌಡೆಲ್—ರಸ್ತೆ.

೧೧. ಡಾರದಾಕೃತಿ—ನಾಲು.

೧೨. ಚಾಪಿಯ ಹೆಣಿಕೆ—೧ನೇ ಮೆಟ್ಟು.

೧೩. ಬೆಂಡುಕಡ್ಡಿಯ ಆಕೃತಿ—ರಥ.

೧೪. ಸ್ಕಿಂಕಲ್‌ವರ್ಕ—ಚಂಡು.

೧೫. ಟ್ವಿಸ್ಟಿಂಗ—ನಾಲು.

೧೬. ಪೇಪರಫೋಲ್ಡಿಂಗ—ಕಿರೀಟ

೧೭. ಪೇಪರ ಕಟಿಂಗ—ಗಾಲಿ.

೧೮. ಹಾಡು—'ಜಗದೀಶಾ'

೧೯. ನಿರೀಕ್ಷಣ—ಕುದುರೆ.

೨೦. ತೋಟದ ಕೆಲಸ—ಕಡ್ಲೆಯ ಬಿತ್ತಿಗೆ.

೨೧. ಆಟ—ಕೋಲು ಕುದುರೆ.

೨೨. ಸಿಬರಿನ ಆಕೃತಿ—ನಾಲು.

೨೩. ಹೊಲಿಗೆ—ನಾಲು.

೨೪. ಬೀಜಗಳ ಆಕೃತಿ—ನಾಲು.

ಪಾಠದ ಟಿಪ್ಪಣಿಯು.

ವಿಷಯ: — ನಿರೀಕ್ಷಣ ಪಾಠ. (ಹೂವು.) ಳನೆಯ ಇಯತ್ತೆ.

ಉದ್ದೇಶ: — ನಿರೀಕ್ಷಣ ಶಕ್ತಿ, ಸೃಷ್ಟಿಜ್ಞಾನಗಳ ಬೆಳವಣಿಗೆ.

ಉಪಕರಣ: — ಮದ್ದುಗುಣಿಕೆ, ಗುಲ್‌ಮೊಹೊರ, ದಾಸವಾಳ ಮುಂತಾದ ಹೂಗಳು.

ವೇಳೆ: — ೫೦ ನಿನಿಟು.

ವಯ: — ೧೨, ೧೩. ವರ್ಷ

ಬೋಧಿಸುವ ವಿಷಯ.	ಬೋಧನಾಕ್ರಮ.
ಉಪೋದ್ಘಾತ:—	ನೀವು ಯಾವ ಯಾವ ಗಿಡಗಳನ್ನು ನೋಡಿರುವಿರಿ? ಆ ಎಲ್ಲ ಗಿಡಗಳಲ್ಲಿಯೂ ಇರುವ ಸಾಧಾರಣವಾದ ಭಾಗಗಳು ಯಾವವು? ಆ ಭಾಗಗಳಲ್ಲಿ ಒಂದಾದ ಹೂವಿನ ಬಗ್ಗೆ ಕಲಿಯುವ.
(೧) ಮೊಗ್ಗೆಯು ಅರಳಿ ಹೂವಾಗುತ್ತದೆ.	[ಒಂದು ಹೂವನ್ನು ಕೊಟ್ಟು] ಹೂವು ಸಣ್ಣದಿದ್ದಾಗ ಅದಕ್ಕೆ ಏನನ್ನುವರು? ಈಗ ಏನನ್ನುವರು? ಈ ರೀತಿಯಲ್ಲಿ ಪ್ರಶ್ನಮಾಡಿ, ಹಾಗೂ ತಂದಂಥ ಹೂ, ಮೊಗ್ಗೆಗಳನ್ನು ತೋರಿಸಿ, ವಿಷಯದ ಮೆಟ್ಟಿನಲ್ಲಿ ಬರೆದದ್ದನ್ನು ಕಲಿಸುವದು. **ಕ. ಹ. ಮೇಲಿನ ಸಾರಾಂಶವು:** — ವಿಷಯದ ಮೆಟ್ಟಿನಲ್ಲಿ ಗರಹಾಕಿದಶಬ್ದಗಳನ್ನು ಬರೆಯುವದು. **ಅಭ್ಯಸನ:** — [ದಾಸವಾಳದ ಅರಳಿದ ಹೂವನ್ನು ಕೊಟ್ಟು] ಇದಕ್ಕೂ ಮೊದಲು ಇದು ಯಾವ ಸ್ಥಿತಿಯಲ್ಲಿತ್ತು? ಗುಲ್‌ಮೊಹೊರದ ಮೊಗ್ಗೆಯನ್ನು ಕೊಟ್ಟು, ಇದು ಮುಂದೆ ಏನಾಗುವದು?
(೨) ಶಾಖೆಗೂ ಹೂವಿಗೂ ಸಂಬಂಧಪಡಿಸುವ ಭಾಗಕ್ಕೆ 'ದೇಟು' ಎ	[ಟೊಂಗೆಸಹಿತ ತಂದ ಹೂವನ್ನು ಕೊಟ್ಟು] ಇದರಲ್ಲಿ ಹೂವನ್ನು ತೋರಿಸು? ಇವೆರಡರ ನಡುವೆ ಇರುವ ಭಾಗವು ದೇಟು, ಇದರ ಬಣ್ಣವಾವದು?

ಪೂರ್ಣವಾದ ವಿಷಯ.	ಪ್ರಶ್ನೋತ್ತರಗಳು.
ಸ್ಪಷ್ಟವಾದ ಮೇಲಿನ ಪ್ರಶ್ನೆಗಳಿಗೆ ಉತ್ತರವು ಬರುವುದು.	ಉ. ಪ. ಮೇಲಿನ ಸಾರಾಂಶವು:—ವಿಷಯದ ಪೆಟ್ಟಿಗೆಯಲ್ಲಿ ಗೊತ್ತಾಗಿರುವ ಶಬ್ದಗಳನ್ನು ಬರೆಯುವದು. ಅಭ್ಯಾಸನು:—ದಾಸವಾಳದ ಗಿಡವು ಹೇಗಿರುವದು? ಗುಲಾಬಿಹೂವಿನ ಗಿಡವು ಬಳ್ಳಿಯಾಗಿರುವದು? ಇತ್ಯಾದಿ. [ಕಣ್ಣು ಮುಚ್ಚಿಯನ್ನು, ಹೂವನ್ನು ಕೈಯಲ್ಲಿಕೊಟ್ಟು] ಈ ಮೊಗ್ಗೆಯು ಬಣ್ಣವಾಗಿರುವದು? ಹೂವಿನ ಬಣ್ಣವಾಗಿರುವದು? ಮೊಗ್ಗೆಯ ಮೇಲಿನ ಹೊದಿಕೆಯನ್ನು ಬಿಚ್ಚಿರಿ. ಒಳಗಿನ ಮೊಗ್ಗೆಯು ಬಣ್ಣಕ್ಕೂ ಹೊದಿಕೆಯ ಬಣ್ಣಕ್ಕೂ ವ್ಯತ್ಯಾಸವೇನು? ಹೊದಿಕೆಯು ಯಾಕೆ ಇರಬಹುದು? (ಗೊತ್ತಾಗದಿದ್ದಲ್ಲಿ ಹೇಳುವದು.) ಅರಳಿದ ಹೂವಿನಲ್ಲಿ ಮೊಗ್ಗೆಗೆ ಆಸರವಿರುವದು ಎಲ್ಲಿದೆ? ಇದು ಹೂವು ಕಣ್ಣುಬಿಡುವಾಗ ಏನು ಮಾಡುತ್ತದೆ? ಆದ್ದರಿಂದ ಇದಕ್ಕೆ ಯಾವ ಹೆಸರನ್ನು ಕೊಡಬಹುದು? ಇದಕ್ಕೆ 'ರಕ್ಷಣಪತ್ರ' ಎನ್ನುವರು. ಉ. ಪ. ಮೇಲಿನ ಸಾರಾಂಶವು:—ವಿಷಯದ ಪೆಟ್ಟಿಗೆಯಲ್ಲಿ ಗೊತ್ತಾಗಿರುವ ಶಬ್ದವನ್ನು ಬರೆಯುವದು. ಅಭ್ಯಾಸನು:—ಮುದ್ದು ಗುಣಿಕೆಯ ರಕ್ಷಣಪತ್ರವನ್ನು ತೆಗೆದು ತೋರಿಸು? ಬೆಂಡೆಯ ರಕ್ಷಣಪತ್ರಕ್ಕೂ ಗುಲಾಬೀಹೂವಿನ ರಕ್ಷಣಪತ್ರಕ್ಕೂ ಹೆಚ್ಚು ಕಡಿಮೆಯೇನು? [ಪೂರ್ತಿ ಅರಳಿದ ಹೂಗಳನ್ನು ಕೊಟ್ಟು] ದೂರದಿಂದ ದಲ್ಲಿ ಗಿಡವನ್ನು ನೋಡಿದ ಕೂಡಲೆ, ಹೂವಿನಲ್ಲಿ ಕಾಣುವ ಭಾಗವು ಯಾವದು ತೋರಿಸು. ಗಿಡದ ಅಥವಾ ಬಳ್ಳಿಯ ಬಣ್ಣವಾವದು? ಹೂಗಳ ಬಣ್ಣವಾವದು? ನೀವು ನೋಡಿದ ಹೂಗಳ ಮೇಲಿಂದ ಹೇಳಿರಿ? ಆಕರ್ಷಣಪತ್ರವು ದೂರದಿಂದಲೇ ಯಾಕೆ ಸ್ಪಷ್ಟವಾಗಿ ಕಾಣಬಹುದು? (೪) [ಒಂದು ವಾಸನೆಯುಳ್ಳ ಹೂವಿನ ಪಕಳೆ ತೆಗೆದು ಉಳಿದವನ್ನು, ಪಕಳೆ ಸಹಿತವಾಗಿರುವದನ್ನು

(೩) ಹೊನ್ನೆಯು ಅರಳಿದಾಗ ಅದನ್ನು ಅವಲಿಸಿ ಮುನಗಳಂಥ ರಕ್ಷಣವು ಹೊದಿಕೆಗೆ 'ರಕ್ಷಣಪತ್ರ' ಎನ್ನುವರು.

(೪) ತಳ್ಳಿದ್ದ ವಾಸನೆ, ಬಿಡಿಸಿದ ಬಣ್ಣ, ಅವರಗಳಿಂದ ಜನಿಸಿದ್ದನ್ನು ಜೇನು ಮುಂತಾದವುಗಳನ್ನು ತನ್ನ ಕಡೆಗೆ ಆಕರ್ಷಿಸುವ ಹೂವಿನ ಭಾಗಕ್ಕೆ 'ಆಕರ್ಷಣಪತ್ರ' ಎನ್ನುವರು.

ಬೋಧಿಸುವ ವಿಷಯ.	ಬೋಧನಾಕ್ರಮ.
	ಕೊಟ್ಟು] ಪಕಳೆ ತಗದದ್ದನ್ನು ಮೂಸಿನೋದಿರಿ? ಪಕಳೆಯಿಲ್ಲದ್ದನ್ನು ನೋದಿರಿ. ಏತಕ್ಕಾಗಬೇಕು? ಪಾಸನೆಯು ಯಾತರಿಂದ ಬರುತ್ತಿರಲಿಕ್ಕೆ ಬೇಕು?
	(ಭ್ರಮರಗಳನ್ನು ಆಕರ್ಷಿಸುವದೆಂಬದನ್ನು ತೋಟದಲ್ಲಿ ಪ್ರತ್ಯಕ್ಷ ತೋರಿಸಬೇಕು).
	ಹಾಗಾದರೆ ಹೂಗಳು ಯಾವ ಯಾವ ಸಂಗತಿಗಳಿಂದ ಜನರಿಗೆ ಸೇರುವವು? ಇವು ಜನರನ್ನು ತಮ್ಮ ಕಡೆಗೆ ಎಳೆಯುವದರಿಂದ ಯಾವ ಹೆಸರನ್ನು ಕೊಡಬಹುದು? ಇದಕ್ಕೆ 'ಆಕರ್ಷಣ ಪತ್ರ' ವೆನ್ನುವರು.
	ಕ. ಕ. ಮೇಲಿನ ಸಾರಾಂಶವು:—ವಿಷಯದ ಮೆಟ್ಟಿನಲ್ಲಿ ಗೆರೆಹಾಕಿದ ಶಬ್ದವನ್ನು ಅಭ್ಯಾಕಟ್ಟಾಗಿ ಬರೆಯುವದು.
	ಅಭ್ಯಾಸನ:—ಗುಲಾಬಿಯು ಆಕರ್ಷಣ ಪತ್ರವನ್ನು ಕೆತ್ತಿ ತೋರಿಸು? ಗುಲಾಬಿಯು ತನ್ನಲ್ಲಿರುವ ಗುಣವಿಶೇಷದಿಂದ ಜನರಿಗೆ ಸೇರುವದು? ಅದರ ಚಿತ್ರವಿದ ಹೂವು?
(೫) ಆಕರ್ಷಣ ಪತ್ರಗಳಿಗೆ ಹತ್ತಿಯಾಗಲಿ, ಬಿಡಿಯಾಗಲಿ, ಇರುವ ಬಹುತರ ಕಂಬದ ಆಕಾರದ ತಲೆಯ ಮೇಲಿ ಧೂಳಿಯು ಚೀಲಗಳು ಇರುವಂಥವುಗಳು **ಕೇಸರಗಳು.**	[ಮದುಗುಣಿಕೆ, ಗುಲ್‌ಮೊಹರ, ಹೂಗಳನ್ನು ಕೊಟ್ಟು] ಮದುಗುಣಿಕೆಯ ಹೂವಿನ ಆಕರ್ಷಣ ಪತ್ರವನ್ನು ಕೆತ್ತಿರಿ. ಅವಗಳ ಒಳಮಗ್ಗಲಿಗೆ ಹತ್ತಿದವಗಳ ಆಕಾರವು ಹೇಗೆ? ಮೇಲ್ಭಾಗದಲ್ಲಿ ಏನಿದೆ? ಆ ಚೀಲದ ಮೇಲೆ ಕೈಯಾಡಿಸಿರಿ? ಏನು ಹತ್ತಿತು? ಇದಕ್ಕೆ 'ಧೂಳಿ'ಎನ್ನುವರು. ಈ ಚೀಲಕ್ಕೆ ಏನೆನ್ನಬಹುದು? ಈ ಇಡೀ ಕಂಬದಾಕೃತಿಗೆ 'ಕೇಸರ' ಎಂಬ ಹೆಸರು. ಆವರೆ ಗುಲ್‌ಮೊಹರ ಮುಂತಾದ ಹೂಗಳಲ್ಲಿ ಬಿಡಿ ಬಿಡಿಯಾಗಿ ಇರುವವೆಂಬದನ್ನು ನಿದರ್ಶನಕ್ಕೆ ತಂದು ಕೊಡುವದು.
	ಕ. ಹ. ಮೇಲಿನ ಸಾರಾಂಶವು:—ವಿಷಯದ ಮೆಟ್ಟಿನಲ್ಲಿ ಗೆರೆಹಾಕಿದ ಶಬ್ದವನ್ನು ಬರೆಯುವದು.

ಬೋಧಿಸುವ ವಿಷಯ.	ಬೋಧನಾಕ್ರಮ.
(೬) (ಕಾಯಾಗುವ ಹೂವಿನಲ್ಲಿ) ಕೇಸರಗಳನ್ನು ಕಿತ್ತಲು ಉಳಿಯುವ ಭಾಗವು ಅಂಡಕೋಶವು. ಇದರಲ್ಲಿ ೩ ಭಾಗಗಳು. ೧ ಶಲಾಕಾಗ್ರ ೨ ಶಲಾಕೆ ೩ ಅಂಡಾಶಯ	ಅಭ್ಯಸನಃ — ಕಾಂಚನ ಪುಷ್ಪದ ಕೇಸರವನ್ನು ಕಿತ್ತು, ಇತ್ಯಾದಿ. ನೀವು ಕೇಸರಗ 'ನ್ನು ಕಿತ್ತಿದ ಗ.ಲ್‌ಮೊಹೊರ ಹೂವಿನಲ್ಲಿ ಉಳಿದ ಭಾಗವನ್ನು ಕಿತ್ತಿದ ಕೇಸರಗಳಲ್ಲಿ ಒಂದಕ್ಕೆ ಹೋಲಿಸಿರಿ. ಎರಡೂಗಳ ತುದಿಗಳಲ್ಲಿರುವ ವ್ಯತ್ಯಾಸವೇನು? [ಅದರ ಸಣ್ಣಕಾಯಿಯನ್ನು ಕೊಟ್ಟು] ಕಾಯಿಗೂ, ಬುಡಭಾಗಕ್ಕೂ ಸಾಮ್ಯವೇನು? ಇದರಿಂದ ನಿಮಗೆ ಏನು ತಿಳಿಯುವದು? ಈ ಇಡೀಭಾಗಕ್ಕೆ ಅಂಡಕೋಶವೆಂದೂ ಬುಡದಲ್ಲಿರ ಪ ಕಾಯಿಯಾಕಾರದ ಭಾಗಕ್ಕೆ ಅಂಡಾಶಯವೆಂದೂ ಇದರ ಮೇಲಿರುವ ನಡುವಿನ ಭಾಗಕ್ಕೆ 'ಶಲಾಕೆ' ಯೆಂದೂ ತುದಿಯ ಭಾಗಕ್ಕೆ ಶಲಾಕಾಗ್ರವೆಂದೂ ಅನ್ನುವರು. ಕ. ಪ. ಮೇಲಿನ ಸಾರಾಂಶವು:— ವಿಷಯದ ಮುಟ್ಟಿನಲ್ಲಿ ಗೆರೆಯಾಕಿದ ಶಬ್ದಗಳನ್ನು ಬರೆಯುವದು. ಅಭ್ಯಸನ:—ಬೇಂದಿಯ ಹೂವಿನಲ್ಲಿ ಅಂಡಾಶಯವನ್ನಷ್ಟೇ ಇಡಿರಿ, ಇತ್ಯಾದಿ. ಉಪಸಂಹಾರ:— ರಕ್ಷಣಪತ್ರವೆಂಬ ಹೆಸರು ಯಾಕೆ ಬಂತು? ಹೂವಿನ ಭಾಗಗಳು ಯಾವವು?

ಶ. ಬಾ. ಜೋಶಿ.

ಎನೇನಸ್ಸಾದ ವಿದ್ಯಾರ್ಥಿ.

ಪ್ರಕೃತಿಪಾಠಗಳು.

(ಜುಳ್ಕೈ ತಿಂಗಳಿಂದ ಮುಂದೆ ಸಾಗಿದ್ದು.)

ಕುದುರೆ.

ಮೂಗು:—ಕುದುರೆಯ ಮೂಗಿನ ಹೊಳ್ಳೆಗಳು ದೊಡ್ಡವಾಗಿರುತ್ತವೆ. ಇವುಗಳಿಂದ ಕುದುರೆಗೆ ಎರಡು ವಿಧವಾದ ಅನುಕೂಲಗಳುಂಟು. ವಾಸನೆಯನ್ನು ಹಿಡಿಯುವ ಶಕ್ತಿಯು ಹೆಚ್ಚಾಗುವದಲ್ಲದೆ ಓಡುವಾಗ ತೀವ್ರವಾಗಿ ಉಸುರಾಡಿಸುವದಕ್ಕೂ ಸಹಾಯವಾಗುವುದು.

ಕಣ್ಣು:—ಕುದುರೆಯ ಕಣ್ಣುಗಳು ದೊಡ್ಡವಾಗಿಯೂ ಪ್ರಕಾಶಮಾನವಾಗಿಯೂ ಇರುತ್ತವೆ. ಆಕಳ ತಲೆಯಲ್ಲಿರುವಂತೆಯೆ ಇವು ಸ್ವಲ್ಪ ಪಾರ್ಶ್ವದಲ್ಲಿರುವದರಿಂದ ಕುದುರೆಯ ದೃಷ್ಟಿಯು ಮುಂಭಾಗದಲ್ಲಿ ಮಾತ್ರವಲ್ಲದೆ ಮಗ್ಗಲಲ್ಲಿಯೂ ವ್ಯಾಪಿಸುತ್ತದೆ. ಈ ಪಾರ್ಶ್ವದೃಷ್ಟಿಗೆ ಅವಕಾಶ ಕೊಡಬಾರದೆಂಬ ಉದ್ದೇಶದಿಂದ ಬಂಡಿಗಳಿಗೆ ಕಟ್ಟುವ ಕುದುರೆಗಳಿಗೆ ಕಣ್ಣುಗಳ ಮಗ್ಗಲಲ್ಲಿ ತೊಗಲನ್ನು ಕಟ್ಟುತ್ತಾರೆ. ತೊಗಲು ಕಟ್ಟದಿದ್ದರೆ ಕುದುರೆಗಳನ್ನು ನಮ್ಮ ಇಷ್ಟ ಬಂದಂತೆ ಓಡಿಸುವದು ಸಾಧ್ಯವಾಗುವದಿಲ್ಲ.

ಕಿವಿಗಳು:—ಕುದುರೆಯ ಕಿವಿಗಳು ಸಣ್ಣವಾಗಿಯೂ ಮೊನೆಯಾಗಿಯೂ ಇದ್ದು ಎತ್ತರವಾಗಿ ನಿಂತಿರುತ್ತವೆ. ಕುದುರೆಯು ತನ್ನ ಒಂದೊಂದು ಕಿವಿಯನ್ನು ಸ್ವತಂತ್ರವಾಗಿ ಅಲ್ಲಾಡಿಸಬಲ್ಲದು. ಸ್ವಲ್ಪ ಶಬ್ದವು ಕೇಳಿಸಿದ ಕೂಡಲೆ ಕಿವಿಗಳನ್ನು ಶಬ್ದ ಬಂದ ಕಡೆಗೆ ಲಕ್ಷ್ಯಕೊಡುವಂತೆ ಮುಂದಕ್ಕೆ ಬಾಗಿಸುತ್ತದೆ. ಸಾಧಾರಣವಾಗಿ ಎಲ್ಲ ಬೆದರುವ ಪ್ರಾಣಿಗಳು ತಮಗೆ ಭಯವುಂಟಾದಾಗ ಕಿವಿಗಳನ್ನು ಹೀಗೆ ಮುಂದಕ್ಕೆ ಬಾಗಿಸುತ್ತವೆ. ಆಕಾರದಲ್ಲಿ ಕತ್ತೆಯು ಕುದುರೆಗಿಂತಲೂ ಸಣ್ಣದಾದರೂ ಕತ್ತೆಯ ಕಿವಿಗಳು ಹೆಚ್ಚು ಉದ್ದವಾಗಿರುತ್ತವೆ.

ಚರ್ಮ:—ಕುದುರೆಯ ಚರ್ಮವು ಆಕಳ ಚರ್ಮದಷ್ಟು ದಪ್ಪ
ಇದರ ಮೇಲಿನ ಕೂದಲು ಮೃದುವಾಗಿರುತ್ತವೆ. ಈ

ಕೂದಲು ಚಳಿಗಾಲದಲ್ಲಿ ದಟ್ಟವಾಗಿ ಬೆಳೆದು ಬೇಸಿಗೆಯು ಬಂದಾಗ ವಿರಳವಾಗುತ್ತವೆ.

ಕಾಲುಗಳು:—ಕುದುರೆಯ ಕಾಲುಗಳು ತೆಳುವಾಗಿಯೂ ಉದ್ದವಾಗಿಯೂ ಬಲ್ಲ ಬಲವುಳ್ಳವಾಗಿರುತ್ತವೆ. ಮುಂಗಾಲುಗಳ ಮೇಲಿನ ಭಾಗವು ಹೆಚ್ಚು ಗಮನಾರ್ಹವಾಗಿರುವದರಿಂದ ಶರೀರದ ಭಾರವನ್ನು ಹೊರುವದಕ್ಕೆ ತಕ್ಕಂತಿದೆ.

ಪಾದಗಳು:—ಎತ್ತು ಆಕಳುಗಳ ಪಾದಗಳಲ್ಲಿರುವಂತೆ ಕುದುರೆಗಳಿಗೂ ಕೊಳಗಗಳಿ (ಗೊರಸುಗಳು) ರುತ್ತವೆ. ಆದರೆ ಇವು ಆಕಳ ಕೊಳಗಗಳಂತೆ ಮುಧ್ಯದಲ್ಲಿ ಸೀಳಿರುವದಿಲ್ಲ. ಮೆಲಕಾಡಿಸುವ ಪ್ರಾಣಿಗಳ ಕೊಳಗಗಳು ಮಾತ್ರ ಮುಧ್ಯದಲ್ಲಿ ಸೀಳಿರುತ್ತವೆ. ಕುದುರೆಯು ಮೆಲಕಾಡಿಸುವ ಪ್ರಾಣಿಯಲ್ಲ.

ಎತ್ತು-ಆಕಳುಗಳ ಮತ್ತು ಕುದುರೆಗಳ ಕಾಲುಗಳ ವಿಷಯದಲ್ಲಿ ಮತ್ತೊಂದು ವಿಶೇಷವಾದ ಸಂಗತಿಯಿರುತ್ತದೆ. ಈ ಪ್ರಾಣಿಗಳು ನೆಲದಮೇಲಿಲ್ಲಾದರೂ ಮಲಗಿದ್ದು ಏಳುವಾಗ ಅವು ಮೊದಲು ಯಾವ ಕಾಲುಗಳನ್ನು ಎತ್ತಿಕೊಂಟು ನಿಲ್ಲುತ್ತವೆಂಬುವದನ್ನು ಲಕ್ಷಿಸಿನೋಡಬೇಕು. ಆಕಳು ಮಲಗಿದ್ದು ಏಳುವಾಗ ಮೊದಲು ಮುಂಗಾಲುಗಳ ಮೇಲೆ ಊರಿಕೊಂಡು ಹಿಂಗಾಲುಗಳನ್ನು ನಿಲ್ಲಿಸುತ್ತದೆ. ಅನಂತರ ಮುಂಗಾಲುಗಳನ್ನು ನಿಲ್ಲಿಸುತ್ತದೆ. ಕುದುರೆಯು ಮೊದಲು ಮುಂಗಾಲುಗಳನ್ನು ನಿಲ್ಲಿಸಿ ಅನಂತರ ಹಿಂಗಾಲುಗಳ ಮೇಲೆ ಎದ್ದುನಿಲ್ಲುತ್ತದೆ.

ಬಾಲವು:— ಕುದುರೆಯ ಬಾಲವು ದಪ್ಪವಾಗಿದ್ದು ತುದಿಯು ಪೂರ್ತಿ ಸಣ್ಣದಾಗಿರುತ್ತದೆ. ಬಾಲದಲ್ಲಿ ನೆಲವನ್ನು ಮುಟ್ಟುವಷ್ಟು ಉದ್ದವಾದ ಕೂದಲುಗಳಿವೆ. ಅದು ಒಂದು ಗೊಂಚಲಿನಂತೆ (ಕುಚ್ಚಿನಂತೆ) ಕಾಣುತ್ತಿರುವದು. ಇಂಥ ಬಾಲವು ಸಹಾಯದಿಂದ ಅದರ ಮೈಮೇಲೆ ತೊಂದರೆಯುನ್ನುಂಟು ಮಾಡುವ ನೊಣ ಮೊದಲಾದವುಗಳನ್ನು ಓಡಿಸುತ್ತದೆ.

ಕುದುರೆಯ ಸ್ವಭಾವಗಳು:— ಕುದುರೆಯಾದರೂ ಆಕಳು-ಎತ್ತುಗಳಂತೆ ಸಾಧುವಾದ ಪ್ರಾಣಿಯಾಗಿರುತ್ತದೆ. ಕುದುರೆಯು

ಆಕಳುಗಳಿಗಿಂತ ಹೆಚ್ಚು ಬುದ್ಧಿಯುಳ್ಳದ್ದು-ಒಡೆಯನ ವಿಷಯದಲ್ಲಿ ಹೆಚ್ಚು ಪ್ರೀತಿಯನ್ನೂ ತೋರಿಸುತ್ತದೆ. ಕೆಲವು ಕುದುರೆಗಳು ತಮ್ಮ ಒಡೆಯನ ಧ್ವನಿಯನ್ನು ಕೇಳಿದ ಕೂಡಲೆ ಸಂತೋಷ ಸೂಚಕವಾದ ಧ್ವನಿಯನ್ನುಂಟುಮಾಡುತ್ತವೆ. ಕುದುರೆಗಳಿಂದಾಗುವ ಉಪಯೋಗಗಳನ್ನು ಮೊದಲೇ ಹೇಳಿರುತ್ತೇವೆ.

ಕುದುರೆಯು ಜಾತಿಗೆ ಸೇರಿದ ಪ್ರಾಣಿಃ—ಹತ್ತಿ: ಕುದುರೆ ಮತ್ತು ಕತ್ತೆ ಇವೆರಡು ಪ್ರಾಣಿಗಳ ಅಂಗರಚನೆಯು ಒಂದೇ ವಿಧವಾಗಿರುತ್ತದೆ. ಆದರೂ ಈ ಎರಡು ಜಂತುಗಳನ್ನು ಜಾಗ್ರತೆಯಾಗಿ ಪರೀಕ್ಷಿಸಿದರೆ ಕೆಲವು ವ್ಯತ್ಯಾಸಗಳು ಕಂಡುಬರುವುವು. ಆಕಾರದಲ್ಲಿ ಕತ್ತೆಯು ಕುದುರೆಗಿಂತ ಸಣ್ಣದು. ಕುದುರೆಯ ಕತ್ತು ಬಿಲ್ಲಿನಂತೆ ಬಗ್ಗಿದ್ದು ಅಂದವಾಗಿ ಕಾಣುತ್ತದೆ. ಕತ್ತೆಯ ಕತ್ತು ಉದ್ದವಾಗಿರುವದೇ ಹೊರತು ಹೀಗೆ ಬಗ್ಗಿರುವದಿಲ್ಲ. ಕತ್ತೆಯ ಕಿವಿಗಳು ಕುದುರೆಯ ಕಿವಿಗಳಿಗಿಂತಲೂ ಉದ್ದವಾಗಿರುವುವು. ಕುದುರೆಯ ಕತ್ತಿನ ಮೇಲ್ಭಾಗದಲ್ಲಿರುವ ಕೂದಲುಗಳು ಉದ್ದವಾಗಿದ್ದು ಕೆಳಗೆ ಇಳಿಯುತ್ತವೆ. ಕತ್ತೆಯ ಕತ್ತಿನ ಮೇಲಿನ ಕೂದಲುಗಳು ಸಣ್ಣವಾಗಿರುತ್ತವೆ. ಕುದುರೆಯ ಶರೀರದ ಮೇಲಿರುವ ಕೂದಲಿಗಿಂತ ಕತ್ತೆಯ ಮೇಲಿರುವ ಕೂದಲು ಉದ್ದವಾಗಿದ್ದೂ ಬಿರುಸಾಗಿಯೂ ಇರುತ್ತದೆ. ಕತ್ತೆಯ ಬಾಲದಲ್ಲಿ ತುದಿಯಲ್ಲಿ ಮಾತ್ರ ಕೂದಲಿರುವದೇ ಹೊರತು ಕುದುರೆಯ ಬಾಲದಲ್ಲಿರುವ ಹಾಗೆ ಉದ್ದವಾದ ಕೂದಲುಗಳಿರುವದಿಲ್ಲ.

ಎರಡು ಪ್ರಾಣಿಗಳ ಸ್ವಭಾವದಲ್ಲಿ ಕೆಲವು ವ್ಯತ್ಯಾಸಗಳನ್ನು ಲಕ್ಷಿಸಬಹುದು. ಕತ್ತೆಯು ಬಯಲ ಜಡಸ್ತೂಲವಸ್ತುಗಳನ್ನು ಪ್ರಾಣಿಯು ಯಾವ ಆಹಾರವನ್ನಾದರೂ ತಿನ್ನುವುದು, ಯಾವ ನೀರನ್ನಾದರೂ ಕುಡಿಯುತ್ತದೆ. ಕುದುರೆಗೆ ಆಹಾರವು ಬಯಲ ದುಡಿಯಾಗಿರಬೇಕು. ಜಲ್ಲಿದಿಪ್ಪರೆ ಅದು ಆಹಾರವನ್ನೇ ಮುಟ್ಟುವದಿಲ್ಲ. ಕುದುರೆಗೆ ಕುಡಿಗಳಲ್ಲಿ ಸ್ವರ್ಣಪ್ಲಾನವು ಹೆಚ್ಚಾಗಿರುವದರಿಂದ ಜಾಮುಗಳ ಮೂಲಕ ತನ್ನ ಆಹಾರ

ಪ್ರಕೃತಿ ಪಾಠಗಳು.

ಪಾಠಗಳ ಟಿಪ್ಪಣಿ.

ವಿಷಯ—ಕುದುರೆಯು ಅಂಗರಚನೆ ಮತ್ತು ಸ್ವಭಾವಗಳು.

ಕಲಿಯುವ ಹುಡುಗರ ವಯಸ್ಸು.—
ವೇಳೆ—
ಉಪ್ಪೇಶ ಮತ್ತು ಉಪಕರಣ.

} ಎತ್ತು-ಆಕಳುಗಳ ಪಾಠಗಳಲ್ಲಿ ತಿಳಿಸಿರುವಂತೆಯೆ.

ಮೊದಲನೇ ಭಾಗ.

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
(೧) ಕುದುರೆಯ ಶರೀರ:— ಕುದುರೆಯು ಆಕಳಿಗಿಂತಲೂ ದೊಡ್ಡ ಪ್ರಾಣಿ. ಕುದುರೆಯ ಶರೀರವು ಉದ್ದವಾಗಿರುತ್ತದೆ. ಕುದುರೆಯು ಮುಖ್ಯವಾಗಿ ಓಡುವದಕ್ಕೆ ಏರ್ಪಟ್ಟಿರುವದರಿಂದ ಅದಕ್ಕೆ ಉದ್ದವಾದ ಮತ್ತು ಅಳವಾದ ಎದೆಯು ಬಲವಾದ ಕಾಲುಗಳೂ ಇರುತ್ತವೆ. ಅದರ ತೊಡೆಗಳು ಬಲವಾಗಿರುವದರಿಂದ ಭಾರವನ್ನು ಎಳೆಯುವದಕ್ಕೂ ಸಹಾಯವಾಗುತ್ತವೆ.	ಹಿಂದೆ ಆಕಳ ಪಾಠಗಳಲ್ಲಿ ಏರ್ಪಡಿಸಿದಂತೆ ವ್ಯವಸ್ಥೆಯೆನ್ನು ಮಾಡಿ ಕುದುರೆಯ ಶರೀರದ ಎತ್ತರ, ಉದ್ದ ಮೊದಲಾದವಿಷಯಗಳನ್ನು ಕುರಿತುಹುಡುಗರನ್ನು ಪ್ರಶ್ನೆ ಮಾಡಬೇಕು. ಆಕಳ ಸಂಗಡ ಹೋಲಿಸುವದರಿಂದ ಈ ಅಂಶಗಳು ಸ್ಪಷ್ಟವಾಗುವವು. ಕುದುರೆಯು ಯಾವ ವಿಧದಲ್ಲಿ ನಮಗೆ ಆಕಳಿಗಿಂತ ಹೆಚ್ಚು ಉಪಯೋಗಕರವಾಗಿರುತ್ತದೆ? ಈ ಸ್ವಭಾವಕ್ಕೆ ಅದರ ಅಂಗರಚನೆಯಲ್ಲಿ ಯಾವ ಅನುಕೂಲಗಳಿರುತ್ತವೆ? ಈ ಎರಡು ಪ್ರಶ್ನೆಗಳನ್ನು ಕೇಳಬಹುದು. ಸರಿಯಾದ ಮಾರ್ಗದಲ್ಲಿದ್ದ ಪ್ರವೇಶಗಳಲ್ಲಿ ಕುದುರೆಯು ಹೇಗೆ ಉಪಯೋಗಿಸುತ್ತಾರೆಂಬ ಪ್ರಶ್ನೆಯಿಂದ ಈ ವಿಷಯವನ್ನು ಹೊರಡಿಸಬಹುದು.

(ಮುಂದೆ ಸಾಗುವದು.)

ಹಳ್ಳಿಯ ಶಾಲಾ ಸುಧಾರಣೆ.

(೧.) ಕೆಲವು ಹಳ್ಳಿಗಳಲ್ಲಿ ಹುಡುಗರ ಸಂಖ್ಯೆಯು ತಕ್ಕಷ್ಟು ಇದ್ದು, ಆ ಮಾನದಂತೆ ಶಾಲೆಯಲ್ಲಿ ಅಷ್ಟು ಹುಡುಗರು ಕಲಿಯುವದಿಲ್ಲ; ಇದಕ್ಕೆ ಕಾರಣವೇನಿರಬಹುದು? ಹಳ್ಳಿಯೊಳಗಿನ ಜನರು ಬಹುಶಃ ಹೊಲಗೆಲಸ ಮಾಡುತ್ತಿರುವರು. ಹೊಲಕ್ಕೆ ಹೋಗುವಾಗ ಕೆಲವರು ತಮ್ಮ ಮನೆಯ ಸಣ್ಣ ಹುಡುಗರನ್ನು ಸಂಗಡಲೇ ಒಯ್ಯುತ್ತಿರುವರು. ಹುಡುಗರು ಕೆಲ ಸಕ್ಕೆ ನೆರವಾಗಲಿ, ನೆರವಾಗದೆ ಇರಲಿ ಈ ವಿಚಾರವನ್ನು ಮಾಡದೆ ಅವರ ಅವೈಶ್ಯವಾದ ವೇಳೆಯನ್ನು ಹಾಳುಮಾಡುತ್ತಿರುವದು ಎಷ್ಟೋ ಕಡೆಯಲ್ಲಿ ಕಂಡುಬರುವದು. ಈತರದ ಸ್ಥಿತಿಯನ್ನು ನೋಡಿ ತಿಳಿದವನೊಬ್ಬನು "ಸುಮ್ಮನೆ ಹುಡುಗನನ್ನು ಬೆನ್ನಹಿಂದೆ ಯಾಕೆ ಇಟ್ಟುಕೊಂಡಿದ್ದಿ? ಶಾಲೆಗಾದರೂ ಕಳುಹಿಸಿ ಅವನಿಗೆ ಸ್ವಲ್ಪ ವಿದ್ಯೆಯನ್ನು ಕಲಿಸಬಾರದೇ" ಎಂದು ತಿಳಿಯ ಹೇಳಿದರೆ "ನಮ್ಮ ಹಿಂದಿನವರೆಲ್ಲರೂ ವಿದ್ಯೆಯನ್ನೇ ಕಲಿತು ಹೊಟ್ಟಿತುಂಬಿಕೊಳ್ಳಲಿಲ್ಲ; ಹುಡುಗರು ಕುಲಕಸಬನ್ನೇ ಮಾಡಿಕೊಂಡಿದ್ದರೆ ಸಾಕು" ಎಂದು ಹಳ್ಳಿಯ ಜನರು ಹೇಳುವರು. ಇದರಿಂದ ನೋಡಲು ಹಳ್ಳಿಯ ಜನರಲ್ಲಿ ವಿದ್ಯಾಭಿರುಚಿಯು ತೀರ ಕಡಿಮೆ ಇರುವದೆಂದು ಕಂಡು ಬರುವದು. ಮೇಲೆ ಬರೆದಂತೆ ಮೂಢಭಾವವುಳ್ಳ ಹಳ್ಳಿಯ ಜನರಲ್ಲಿ ವಿದ್ಯಾಭಿರುಚಿಯು ತಾನೇ ಹ್ಯಾಗೆ ಹುಟ್ಟುವದು? ಅವರ ತಪ್ಪು ತಿಳುವಳಿಕೆಗಳನ್ನು ಹೋಗಲಾಡಿಸುವದಕ್ಕೆ ಸದುಪದೇಶಕರು ಅವಶ್ಯವಾಗಿ ಬೇಕು. ಹಳ್ಳಿಯಲ್ಲಿ ಹೆಚ್ಚಾಗಿ ತಿಳಿದವನೆಂದರೆ ಶಿಕ್ಷಕನೇ ಸರಿ. ಹಳ್ಳಿಯ ಜನರು ಯಾವದೊಂದು ವಿಚಾರದ ಸಂಗತಿಯನ್ನು ಕೇಳುವ ಪ್ರಸಂಗ ಬಂದರೆ ಶಿಕ್ಷಕನ ಕಡೆಗೇ ಬರುವರು. ಇದರಿಂದ ಶಿಕ್ಷಕನು ಮಾಡಿದ ಉಪದೇಶವು ವ್ಯರ್ಥ ಹೋಗಲಾರದು. ಶಿಕ್ಷಕನೆಂದರೆ ಸದುಪದೇಶಕನು. ಜಗದೀಶನು ಯಾವಾತನನ್ನು ಉಪದೇಶಮಾರ್ಗದಲ್ಲಿ ನೇಮಿಸಿರುವನೋ ಆ ಮನುಷ್ಯನು ತನ್ನ ಕರ್ತವ್ಯದಲ್ಲಿ ಹೆಚ್ಚಾಗಿ ಶ್ರಮಬಟ್ಟು ದುಡಿದು ಕೀರ್ತಿಯನ್ನು ಸಂಪಾದಿಸುವದು ಯೋಗ್ಯವಿರುವದಷ್ಟೇ? ಶಿಕ್ಷಕನು ಸೂಟಿಯ ದಿವಸಗಳಲ್ಲಿ ಊರಜನರ ಒಂದು ಸಭೆಯನ್ನು ಕೂಡಿಸಬೇಕು. ಶಿಕ್ಷಕನು ತನ್ನ ಅನುಕೂಲತೆಯಂತೆ ಸಭೆಯನ್ನು ನೆರೆ

ಯಿಸಲಿಕ್ಕೆ ಪ್ರಯತ್ನಿಸಿದರೆ ಅಷ್ಟುಲಾಭವಾಗಲಾರದು, ಯಾಕಂದರೆ ಹಳ್ಳಿಯ ಜನರು ಹಗಲು ಹೊತ್ತಿನಲ್ಲಿ ಮನೆಯಲ್ಲಿರುವದು ಕಡಿಮೆ. ಬೆಳಿಗ್ಗೆ ಎದ್ದು ಹೊಲಕ್ಕೆ ಹೋಗುವರು. ಕೆಲಸಮಾಡಿ ಮಧ್ಯದಲ್ಲಿ ಮನೆಗೆ ಬಂದು ಊಟಮಾಡಿ ತುಸು ತಡೆದು ಪುನಃ ಹೊಲಕ್ಕೆ ಹೋಗುವರು. ಇದರಿಂದ ಶಿಕ್ಷಕನ ಅನುಕೂಲ ಕಾಲಕ್ಕೆ ಜನರು ದೊರೆಯಲಾರರು. ಆದ್ದರಿಂದ ಜನರ ಸೋಯಿ ಸಮಯ (ಊಟವಾಗಿ ಮನೆಯಲ್ಲಿದ್ದ ಸಮಯ) ನೋಡಿ ಸಭೆಯನ್ನು ಕೂಡಿಸಬೇಕು. ಇದಲ್ಲದೆ ಸಭೆಯು ಕೂಡತಕ್ಕ ಸ್ಥಳವಾದರೂ ಅನುಕೂಲವಾದದ್ದೇ ಇರಬೇಕು. ಶಾಲೆಗೆ ಬರಹೇಳಿದರೆ ಶಿಕ್ಷಕನು ತನ್ನಯಾವದೋ ಒಂದು ಕಾರ್ಯದ ನಿಮಿತ್ತ ಕರೆಯುತ್ತಾನೆಂದು ತಿಳಿದು ಹೆಚ್ಚು ಜನರು ಸಭೆಯಲ್ಲಿ ಸೇರುವದಕ್ಕೆ ಅನುಮಾನ ಮಾಡಿದರೂ ಮಾಡಬಹುದು. ಆದ್ದರಿಂದ ಊರೊಳಗೇ ಯೋಗ್ಯಸ್ಥಳ ದೊರೆತರೆ ಅಲ್ಲಿಯೇ ಸಭೆಯನ್ನು ಕೂಡಿಸುವದು ಒಳ್ಳೇದು. ಸಭೆಯಲ್ಲಿ ವಿದ್ಯೆಯನ್ನು ಕಲಿಯುವದರಿಂದಾಗುವ ಲಾಭಗಳನ್ನು ತಿಳಿಸಿ ಹೇಳಿ, "ಹುಡುಗರನ್ನು ಶಾಲೆಯಲ್ಲಿ ಕಲಿಯಲಿಕ್ಕೆ ಕಳುಹಿಸಬೇಕು" ಎಂಬ ಭಾವನೆಯನ್ನು ಜನರಲ್ಲಿ ಹುಟ್ಟಿಸುವಂತೆ ಶಿಕ್ಷಕನು ಉಪದೇಶ ಮಾಡಬೇಕು. ಹೀಗೆ ಮಾಡುವದರಿಂದ ತಕ್ಕಷ್ಟು ಹುಡುಗರು ಶಾಲೆಯಲ್ಲಿ ಸೇರುವರು.

(೨.) ಎಷ್ಟೋ ಹಳ್ಳಿಯ ಶಾಲೆಗಳಲ್ಲಿ ಹುಡುಗರು ನಿಯಮಿತ ವೇಳೆಗೆ ಬರುತ್ತಿರುವದಿಲ್ಲ. ಇದರಿಂದ ಶಿಕ್ಷಕನಿಗೆ ಅಭ್ಯಾಸವನ್ನು ಸರಿಯಾಗಿ ಸಾಗಿಸಲಿಕ್ಕೆ ತೊಂದರೆಯಾಗುತ್ತಿರುವದೆಂಬದು ಸಹಜವು. ನಿಯಮಿತ ವೇಳೆಗೆ ಶಾಲೆಗೆ ಬರುವಂತೆ ಶಿಕ್ಷಕನು ಹುಡುಗರಿಗೆ ವಿಧಿಸುತ್ತಲೇ ಇರುವನು. ಆದರೆ ಶಿಕ್ಷಕನೊಬ್ಬನ ಅಪ್ಪಣೆಯಿಂದಲೇ ಕೆಲಸವು ಸಾಧ್ಯವಾಗುವದಿಲ್ಲ. ಇದಕ್ಕೆ ಹುಡುಗರ ತಾಯಿತಂದೆಗಳ ಇಲ್ಲವೆ ಪಾಲಕರ ಸಹಾಯವೂ ಅವಶ್ಯವಾಗಿ ಬೇಕು. ಶಿಕ್ಷಕನಂತೆಯೇ ಮನೆಯ ಜನರೂ ತಮ್ಮ ಹುಡುಗರು ನಿಯಮಿತ ವೇಳೆಗೆ ಶಾಲೆಗೆ ಹೋಗುವಂತೆ ಕಟ್ಟಳೆಯನ್ನಿಡಬೇಕಾಗುವದು. ಶಾಲೆಗೆ ಕಳುಹಿಸುವ ವೇಳೆಯೇ ಮನೆಯ ಜನರಿಗೆ ಗೊತ್ತಿಲ್ಲದಿದ್ದರೆ ಅವರಿಂದ ಸಹಾಯ ಸಿಗುವದು ದುರ್ಲಭವೇ ಸರಿ. ಆದ್ದರಿಂದ ಮೊದಲು ಊರಜನರಿಗೆ ಶಾಲೆಗೆ ಹುಡುಗರನ್ನು ಕಳುಹಿಸುವ ವೇಳೆಯನ್ನು ಗೊತ್ತುಮಾಡಿ ಕೊಡುವದು ಅವಶ್ಯವಿರುವದು. ಶಿಕ್ಷಕನು

ಸ್ಪತಃ ಮನೆಮನೆಗೆ ಹೋಗಿ ಜನರಿಗೆ ತಿಳಿಸುವ ಕಾರಣವಿಲ್ಲ. ಕೆಲಸ ಸಾಧ್ಯಮಾಡಿಕೊಳ್ಳಲಿಕ್ಕೆ ಒಂದು ಸುಲಭ ಹಂಚಿಕೆಯು ತೋಚುವದು. ಅದೇನಂದರೆ, ಶಾಲೆಯ ಸೂಚನಾಘಂಟೆ. ಶಿಕ್ಷಕನು ನಿಯಮಿತ ವೇಳೆಗಿಂತ ಸ್ವಲ್ಪಕಾಲ ಮುಂಚಿತವಾಗಿ ಶಾಲೆಗೆ ಬಂದು ಸೂಚನಾ ಘಂಟೆಯನ್ನು ಹೊಡಿಸುವದು. ಯಾವ ಯಾವ ದಿವಸಗಳಲ್ಲಿ ಶಾಲೆಯು ಕೆಲಸ ನಡೆಯುವದು; ಮತ್ತು ಎಷ್ಟು ಹೊತ್ತಿಗೆ ನಡೆಯುವದು. ಎಂಬೀ ಸಂಗತಿಗಳು ಹಳ್ಳಿಯ ಎಲ್ಲ ಜನರಿಗೆ ಗೊತ್ತಿರುವದಿಲ್ಲ. ಶಾಲೆಗೆ ಹುಡುಗರು ಹೋದರೇನೋ ಬಂದರೇನೋ ಇಷ್ಟೇ ಗೊತ್ತಿರುವದು. ಶಾಲೆಯಲ್ಲಿ ಬಾರಿಸಿದ ಘಂಟೆಯನ್ನು ಕೇಳಿದ ಕೂಡಲೇ "ಮಾಸ್ತರರು ಬಂದರು ಈಹೊತ್ತು ಶಾಲೆ ಇರುವದು" ಎಂಬ ವಿಚಾರವು ಜನರಲ್ಲಿ ಹುಟ್ಟುವದು; ಅದರಂತೆ ಹುಡುಗರನ್ನು ಶಾಲೆಗೆ ಕಳಿಸುವರು. ಪ್ರತಿದಿವಸ ಸೂಚನಾ ಗಂಟೆಯನ್ನು ಬಾರಿಸುವದರಿಂದ ಊರ ಜನರಿಗೆ ಪ್ರತಿದಿವಸ ಶಾಲೆಗೆ ಹುಡುಗರನ್ನು ಕಳುಹಿಸುವ ವೇಳೆಯು ಎಚ್ಚರಕೊಟ್ಟಂತಾಗುವದು ಈತರದ ವ್ಯವಸ್ಥೆಯಿಂದ ನಿಯಮಿತ ವೇಳೆಗೆ ಹೆಚ್ಚು ಹುಡುಗರು ಶಾಲೆಯಲ್ಲಿ ಸೇರಿ, ಶಿಕ್ಷಕನಿಗೆ ಅಭ್ಯಾಸವನ್ನು ಸರಿಯಾಗಿ ನಡಿಸಲಿಕ್ಕೆ ಅನುಕೂಲವಾಗುವದು.

ವಿ. ವೆ. ತೊರ್ಕೆ.

ಪತ್ರಗಳ ಸಾರಾಂಶವೂ ಪತ್ರಕಳಿಸಿದವರಿಗೆ ಉತ್ತರಗಳೂ.

ಕರ್ಜಗಿ ತಾಲೂಕ ದೇವಗಿರಿ ಉರ್ದು ಸ್ಕೂಲ ಅ. ಮಾಸ್ತರ ಮಿ. ಮಹಮ್ಮದ ಇಸಹಾಖ ಸಾಹೇಬ ಎಂಬವರು 'ತಾರೀಖು ೧೪-೬-೧೭ನೇ ದಿವಸ ಶಾಲೆಯಲ್ಲಿ ವಿದ್ಯಾರ್ಥಿಗಳಿಂದ ವಸೂಲಾದ ೬೯೦೫ ಗಳನ್ನು ವಾರಲೋನಕ್ಕಾಗಿ ಕೊಟ್ಟಿವೆ'ಂದು ತಿಳಿಸುತ್ತಾರೆ.

ಬದಾಮಿ ತಾಲೂಕ ಚೊಳಚಗುಡ್ಡ ಹೊಸ ಶಾಲೆಯ ಸಮಾರಂಭವು ವಾರಲೋನಡೇ ದಿವಸ ಎಂದರೆ ತಾರೀಖು ೧೪ನೇ ಜೂನ ಸನ್ ೧೯೧೭ನೇ ಇ|| ದಿವಸ ಆಯಿತು. ಆವಾಲಕ್ಕೆ 'ಆರೋಗ್ಯದ' ಬಗ್ಗೆಯೂ 'ವಾರಲೋನ' ಕೊಡುವ ಬಗ್ಗೆಯೂ ವ್ಯಾಖ್ಯಾನಗಳಾದವು. ವಿದ್ಯಾರ್ಥಿಗಳ ಅಟದಿಂದ ಬಂದ ೧೫೦೦. ಲಭ. ಗಳ ಎಂಡು ಪೋಷ್ಟಲ ಕ್ಯಾಷ ಸರ್ಟಿಫಿಕೇಟುಗಳನ್ನು ಕೊಂಡರು. ಮತ್ತು

ಊರೊಳಗಿನ ಇತರ ಸಭ್ಯಗೃಹಸ್ಥರಿಂದಲೂ ವಿದ್ಯಾರ್ಥಿಗಳಿಂದಲೂ ಕೂಡಿ ೬೬೦ರೂ. ವಸೂಲಾಗಿದ್ದು, ಆ ಎಲ್ಲ ರೂ. ಗಳನ್ನು ವಾರಲೋನಕ್ಕಾಗಿ ಕೊಟ್ಟವರಿಂದ ಅಲ್ಲಿಯ ಅಸಿ. ಮಾಸ್ತರ ಮಿ. ಮುಜುಮುದಾರ ಎಂಬವರು ತಿಳಿಸುತ್ತಾರೆ.

ಓರ್ವವಿದ್ಯಾರ್ಥಿನಿರೇಗಲ್ಲು:—ಇವರು ಕಳಿಸಿದ ವಿಶ್ವವಿದ್ಯಾಲಯಗಳ ಬೆಳವಣಿಗೆ ಹಾಗೂ 'ರಾಬರ್ಟ್ ಬ್ರೂಸನೂ ಜೇಡು ಹುಳವೂ' ಎಂಬ ಲೇಖಗಳಿಗೂ ಚಿಕ್ಕೇರೂರ ಶಾಲೆಯ ಅಸಿ. ಮಾಸ್ತರ ಮಿ. ಬಸವೇಶ್ವರಯ್ಯ ಮಠದ ಇವರು ಕಳಿಸಿದ ಪದ್ಯಗಳಿಗೂ, ಪಟ್ಟದಕಲ್ಲು ಮಾಸ್ತರ— ಮಿ. ಅಕ್ಕಿ ಎಂಬವರು ಕಳಿಸಿದ 'ಆಸ್ಕರಣ' ಈ ಲೇಖಕ್ಕೂ ಶಾಲಾಪತ್ರಿಕದಲ್ಲಿ ಸ್ಥಳವಿಲ್ಲ.

ವಿದ್ಯಾಖಾತೆಯ ನೋಟೀಸುಗಳು.

ಹಿಂದುಸ್ತಾನದ ಹುಡುಗಿಯರ ಶಾಲೆಗಳಲ್ಲಿ ಪ್ರಸಾರಗೊಳಿಸುವದಕ್ಕಾಗಿ ಕಳಿಸಿಕೊಟ್ಟ ಪತ್ರವು
(ಸರಕ್ಯುಲರವು.)

ಶಾಲೆ ಕಲಿಯುವ ಹಿಂದುಸ್ತಾನದ ಹೆಣ್ಣುಮಕ್ಕಳು ಸ್ತ್ರೀ ವೈದ್ಯರು ಇಲ್ಲವೆ ಶುಶ್ರೂಷಿಕೆಯರಾಗುವದಕ್ಕೆ ಬೇಕಾದ ಶಿಕ್ಷಣವನ್ನು ಪಡೆಯುವದಕ್ಕಾಗಿ ಮುಂದುಬರಿದು ಬರಬೇಕೆಂದು ಡಫ್ರಿನ್ ಸಂಘದವರು ಬಯಸುತ್ತಾರೆ.

ಹಿಂದುಸ್ತಾನದ ಎಷ್ಟೋ ಹೆಂಗಸರು ಎರಡನೆಯವರ ಕಣ್ಣಿಗೆ ಬೀಳಬಾರದೆಂದು ಪರದೆಗಳಲ್ಲಿರುತ್ತಿರುವ ಕಾರಣ ಅವರು ಮತ್ತು ಅವರ ಮಕ್ಕಳು ಬೇನೆ ಬಿದ್ದಾಗ, ಔಷಧೋಪಚಾರಕ್ಕಾಗಿ ಪುರುಷ ವೈದ್ಯರ ಕಡೆಗೆ ಹೋಗಲಾರರೆಂಬದು ಎಲ್ಲರಿಗೂ ಗೊತ್ತಿದ್ದಮಾತು. ಪರದೆಯಲ್ಲಿರದ ಬೇರೆ ಹೆಂಗಸರು ಸಹ ನಾಚಿಕೆಯಿಂದ ಪ್ರಸೂತಿ ರೋಗಗಳ ಚಿಕಿತ್ಸೆಯ ವಿಷಯದಲ್ಲಂತೂ ಪುರುಷವೈದ್ಯರ ಕಡೆಗೆ ಎಂದೂ ಹೋಗಲೊಪ್ಪರು. ಎಷ್ಟೋ ಹೆಂಗಸರು ತಮಗೆ ಅತಿಶಯ ದುಃಖವಾದರೂ ಅದನ್ನು ಅನುಭವಿಸಲಿಕ್ಕೆ ಸಿದ್ಧರಾಗುತ್ತಾರೆಯೆ ಹೊರತು ಪುರುಷ ವೈದ್ಯರ ಕಡೆಗೆ ಹೋಗುವದಿಲ್ಲ.

ಇದಲ್ಲದೆ ಆರೋಗ್ಯದ ನಿಯಮಗಳ ಹಾಗು ಚಿಕ್ಕಮಕ್ಕಳ ಪೋಷಣೆಯ ಉತ್ತಮವಾದ ಪದ್ಧತಿಗಳ ಅಜ್ಞಾನವು ಹಿಂದುಸ್ತಾನದ ಹೆಂಗಸರಲ್ಲಿ ವಿಶೇಷವಾಗಿರುವದು. ಇದರಿಂದ ಹಿಂದುಸ್ತಾನದಲ್ಲಿ ಹುಟ್ಟಿದ ಕೂಸುಗಳು ಒಂದು ವರ್ಷದ ವಯಸ್ಸಿನವಾಗುವದರೊಳಗಾಗಿಯೇ ನಾಲ್ಕಕ್ಕೊಂದರಂತೆ ಸಾಯುವವು. ಇನ್ನು ಹಿಂದುಸ್ತಾನದಲ್ಲಿಯ ಹೆಂಗಸರಿಗೆ ಆರೋಗ್ಯದ ಜ್ಞಾನ ಮಾಡಿಕೊಡುವದಕ್ಕಾಗಲಿ, ಅವರು ಬೇನೆ ಬಿದ್ದಾಗ ಅವರ ಶುಶ್ರೂಷೆ ಮಾಡುವದಕ್ಕಾಗಲಿ ಅವರ ದೇಶಭಗಿನಿಯರು ಉಪಯೋಗವಾಗುವಷ್ಟು ಬೇರೆ ಯಾರೂ ಆಗಲಿಕ್ಕಿಲ್ಲ. ಇಂಥ ಕೆಲಸಕ್ಕೆ ಸಂಪೂರ್ಣ ಶ್ರದ್ಧೆಯೂ ಪರೋಪಕಾರಬುದ್ಧಿಯೂ ಬೇಕಾಗುತ್ತವೆ. ಈ ಕೆಲಸವನ್ನು ಹಿಂದುಸ್ತಾನದ ಹೆಣ್ಣುಮಕ್ಕಳು ಸಂತೋಷದಿಂದ ಮಾಡುವರೆಂದು ನಾವು ನಂಬುತ್ತೇವೆ. ವಿದ್ಯೆ ಕಲಿತು ಸ್ವದೇಶ ಭಗಿನಿಯರಿಗೆ ಸಹಾಯ ಮಾಡುವ ಹೋರೆಯನ್ನು ಕೈಕೊಳ್ಳಲಿಕ್ಕೆ ಯೋಗ್ಯರಾದವರನ್ನು ನಾವು ಹುಡುಕುವ ಕಾರಣವಾದರೂ ಇದೇ.

ವೈದ್ಯಶಾಸ್ತ್ರಾಭ್ಯಾಸ ಮಾಡತೊಡಗುವ ಹೆಣ್ಣುಮಕ್ಕಳು ತಮ್ಮ ಶಿಕ್ಷಣವು ಮುಗಿದಬಳಿಕ ಅವಿವಾಹಿತರಾಗಿರಬೇಕೆಂಬ ನಿರ್ಬಂಧವಿಲ್ಲ. ಹೆಂಡತಿಯು ಗಳಿಸುವ ವೇತನದಿಂದ ಕುಟುಂಬದ ಜನರಿಗೆ ಬಹಳೇ ಉಪಯೋಗವಾಗಬಹುದೆಂಬದರಲ್ಲಿ ಏನೂ ಸಂದೇಹವಿಲ್ಲ.

ಇನ್ನು ಹೆಣ್ಣುಮಕ್ಕಳಿಗೆ ಈ ವಿಷಯವನ್ನು ಕುರಿತು ಎಷ್ಟು ಪ್ರಕಾರದ ಶಿಕ್ಷಣವನ್ನು ಕೊಡಬಹುದೆಂಬದನ್ನು ವಿಚಾರಿಸುವ.

(೧). ದೇಶ ಭಾಷೆಯನ್ನು ಓದಲಿಕ್ಕೂ ಬರೆಯಲಿಕ್ಕೂ ಮಾತ್ರ ಬಲ್ಲವರು ಸೂಲಗಿತ್ತಿಯರಿಗಾಗಿ ನಿಯೆಮಿಸಿದ ಅಭ್ಯಾಸ ಕ್ರಮದಿಂಡ ಸಹಿತವಾಗಿ ಇಲ್ಲವೆ ಅದನ್ನು ಬಿಟ್ಟು ಕೇವಲ ಶುಶ್ರೂಷಿಕೆಯರಿಗಾಗಿ ನಿಯಮಿಸಿದ ಅಭ್ಯಾಸ ಕ್ರಮವೊಂದನ್ನೇ ಕೈಕೊಳ್ಳಬಹುದು. ಇದಕ್ಕಾಗಿ ಅವರು ಹೆಂಗಸರ ಆಸ್ಪತ್ರೆಯಲ್ಲಿ ಎರಡು (ಒಮ್ಮೊಮ್ಮೆ ಮೂರು) ವರ್ಷಗಳವರೆಗೆ ಶಿಕ್ಷಣಪಡೆಯಲಿಕ್ಕೆಬೇಕು. ಈ ಅವಧಿಯಲ್ಲಿ ಅವರ ಚರಿತಾರ್ಥಕ್ಕೆ ಸಾಕಾಗುವಷ್ಟು ಸಂಬಳವು ದೊರೆಯುವದು. ಈ ಅವಧಿಯು ಮುಗಿದ ಬಳಿಕ ಆಗುವ ಪರೀಕ್ಷೆಯಲ್ಲಿ ಅವರು ತೇರ್ಗಡೆ ಹೊಂದಿದರೆ ಅವರಿಗೆ ಶುಶ್ರೂಷಿಕೆಯ ಇಲ್ಲವೆ ಸೂಲಗಿತ್ತಿಯ ಸರಟಿಫಿಕೆಟು ಕೊಡಲಾಗುವದು.

ಬಳಿಕ ಅವರಿಗೆ ತಿಂಗಳಿಗೆ ೧೫ ರಿಂದ ೪೦ ರೂಪಾಯಿಗಳವರೆಗಿನ ಸಂಬಳವ ಕೆಲಸವು ಸಿಗುವದೆಂಬದನ್ನು ನಿಶ್ಚಯವಾಗಿ ತಿಳಿಯಬಹುದು.

(೨). ದೇಶಭಾಷೆಯ ಹೊರತು ಕೆಲಮಟ್ಟಿಗೆ ಇಂಗ್ಲಿಷ ಮತ್ತು ಗಣಿತ ಈ ವಿಷಯಗಳ ಜ್ಞಾನವಿದ್ದವರು ಕಾಂಪಾವುಂಡರರ ವರ್ಗದಲ್ಲಿದ್ದು ಅಭ್ಯಾಸ ಮಾಡಬಹುದು. ಇದಕ್ಕಾಗಿ ಏನಿಲ್ಲೆಂದರೂ ಒಂದು ವರ್ಷದ ವರೆಗೆ ಅಸ್ಪತಿಯಲ್ಲಿ ಅಭ್ಯಾಸ ಮಾಡಬೇಕಾಗುತ್ತದೆ. ಅಲ್ಲಿ ಯೋಗ್ಯರಾದ ಬಳಿಕ, ಅವರಿಗೆ ಹೆಂಗಸರ ಆಸಪತ್ರಿಗಳಲ್ಲಿ ತಿಂಗಳೊಂದಕ್ಕೆ ೧೫ ರಿಂದ ೩೦ ರೂಪಾಯಿಗಳವರೆಗೆ ಸಂಬಳವಿರುವ ಕೆಲಸವು ಸಿಗುವದು.

(೩) ಆಂಗ್ಲೋವ್ಹರ್ನಾಕ್ಯುಲರ ಮಿಡಲ್ ಸ್ಕೂಲ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದ ಬಳಿಕ ಹೆಣ್ಣು ಮಕ್ಕಳು ಸಬ್ ಅಸಿಸ್ಟಂಟ ಸರ್ಜನ್ನರ ವರ್ಗವಲ್ಲಿ ಅಭ್ಯಾಸಮಾಡಬಹುದು. ಆ ಪರೀಕ್ಷೆಯಲ್ಲಿ ಪಾಸಾಗದೆ ಇದ್ದರೂ ಇಂಗ್ಲಿಷ ಭಾಷೆಯನ್ನು ಚನ್ನಾಗಿ ಅರಿತವರಾಗಿದ್ದರೆ, ಅವರನ್ನು ಸಹ ಈ ವರ್ಗದಲ್ಲಿ ಇಡಲಾದೀತು. ಆದರೆ ಅವರಿಗೆ ಇಂಗ್ಲಿಷ ಭಾಷೆಯನ್ನು ಸಹಜವಾಗಿಯೂ ಅಸ್ಖಲಿತವಾಗಿಯೂ ಮಾತಾಡಲಿಕ್ಕೂ, ಬರೆಯಲಿಕ್ಕೂ, ಓದಲಿಕ್ಕೂ ಬರಲಿಕ್ಕೆಬೇಕು. ಈ ಅಭ್ಯಾಸಕ್ರಮವು ನಾಲ್ಕುವರ್ಷದ್ದಿರುವದು. ಹೆಣ್ಣು ಮಕ್ಕಳು **ಲುದಿಯಾನಾ** ಇಲ್ಲವೆ **ಆಗ್ರಾ** ಪಟ್ಟಣದಲ್ಲಿದ್ದು ಅಭ್ಯಾಸಮಾಡುವದು ಉತ್ತಮವು. ಯಾಕಂದರೆ ಈ ಪಟ್ಟಣದಲ್ಲಿದ್ದ ವೈದ್ಯ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗಾಗಿ ವಿಶೇಷವಾದ ವ್ಯವಸ್ಥೆಯು ಮಾಡಲ್ಪಟ್ಟಿರುವದು. ಆಯಾ ಪ್ರಾಂತಗಳ ಸ್ಥಾನಿಕ ಸರಕಾರಗಳಿಂದಾಗಲಿ ಡಫ್ರಿನ್ ಫಂಡಿನಿಂದಾಗಲಿ ಅವರಿಗೆ ಸ್ಕಾಲರಶಿಪ್ಪುಗಳು ಸಿಗಬಹುದು. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಬಳಿಕ ನವಕರಿ ಮಾಡುವ ಇಚ್ಛೆ ಇದ್ದವರಿಗೆ ಹೆಂಗಸರ ಆಸ್ಪತ್ರಿಗಳಲ್ಲಿ ೪೦ ರಿಂದ ೧೫೦ ರೂಪಾಯಿಗಳ ವರೆಗೆ ಸಂಬಳುಳ್ಳ ಕೆಲಸವು ನಿಶ್ಚಯವಾಗಿ ಸಿಗುವದೆಂದು ತಿಳಿಯಬಹುದು. ಕೆಲಸದಲ್ಲಿದ್ದು ವೈದ್ಯಕಿಯನ್ನು ಖಾಸಗಿ ರೀತಿಯಿಂದ ಮಾಡಲಿಕ್ಕೆ ಬಹುತರವಾಗಿ ಪರವಾನಗಿ ಸಿಗುವದು. ಇದಲ್ಲದೆ ಅವರಿಗೆ ಮನೆಯೂ ಸಿಗುವದು.

(೪) ಪ್ರವೇಶ ಪರೀಕ್ಷೆಯಲ್ಲಿ ಇಲ್ಲವೆ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಗಣಿತ ವಿಷಯವನ್ನು ತಕ್ಕೊಂಡು ತೇರ್ಗಡೆ ಹೊಂದಿದವರು ವೈದ್ಯ ಶಾಸ್ತ್ರದಲ್ಲಿ ಮೇಲ್ತರದ ಪದವಿಗಳನ್ನು ಪಡೆದು ಸಂಪೂರ್ಣ ಯೋಗ್ಯತೆಯುಳ್ಳ ಸ್ತ್ರೀ ವೈದ್ಯರಾಗಬಹುದು. ಇದಕ್ಕಾಗಿ ಅವರು ಮೊದಲು ಇಂಟರ ಮೀಜಿಯಟ್ ಸಾಯನ್ಸ ಪರೀಕ್ಷೆಯಲ್ಲಿ ಪಾಸಾಗಬೇಕಾಗುತ್ತದೆ. ಬಳಿಕ ಅವರು ಐದು ವರ್ಷದ ವೈದ್ಯಶಾಸ್ತ್ರಾಭ್ಯಾಸಕ್ರಮವನ್ನು ಕೈಕೊಳ್ಳಬಹುದು. ಪ್ರಾಯಸ್ಥರಾದ ಹೆಣ್ಣುಮಕ್ಕಳು ವೈದ್ಯ ಶಿಕ್ಷಣ ಪಡೆಯುವದಕ್ಕಾಗಿ ದಿಲ್ಲಿಯಲ್ಲಿರುವ ಲೇಡೀ ಹಾರ್ಡಿಂಜ ಕಾಲೇಜಕ್ಕೆ ಹೋಗುವದು ಒಳ್ಳೇದು; ಯಾಕಂದರೆ, ಹಿಂದುಸ್ಥಾನದಲ್ಲಿ ವೈದ್ಯ ಶಿಕ್ಷಣಕೊಡುವ ಕಾಲೇಜಗಳ ಪೈಕಿ ಇದೊಂದೇ ಕಾಲೇಜದಲ್ಲಿ ಸ್ತ್ರೀಯರಿಗೆ ಪ್ರತ್ಯೇಕವಾಗಿ ಶಿಕ್ಷಣವು ಕೊಡಲ್ಪಡುತ್ತದೆ. ವಿದ್ಯಾರ್ಥಿನಿಯರು ಪಂಜಾಬದ ವಿಶ್ವವಿದ್ಯಾಲಯದ **ಎಮ್-ಬಿ-ಬಿ-ಎಸ್** ಪದವಿಯನ್ನು ಪಡೆದು ಖಾಸಗಿರೀತಿಯಿಂದ ಸ್ತ್ರೀ ವೈದ್ಯರ ಹೋರೆಯನ್ನು ಕೈಕೊಳ್ಳಬಹುದು; ಇಲ್ಲವೆ ಸ್ತ್ರೀಯರ ಆಸ್ಪತ್ರಿಗಳಲ್ಲಿ ತಿಂಗಳಿಗೆ ೧೦೦ರಿಂದ ೨೫೦ ರೂಪಾಯಿಗಳವರೆಗೆ ಸಂಬಳುಳ್ಳ ಕೆಲಸವನ್ನು ಪಡೆಯಬಹುದು. ಇದಲ್ಲದೆ ಅವರು ಸ್ತ್ರೀಯರ ಮೆಡಿಕಲ್ ಸರ್ವಿಸದಲ್ಲಿ ಪ್ರತಿ ತಿಂಗಳಿಗೆ ೩೫೦ರಿಂದ ೫೫೦ ರೂಪಾಯಿಗಳವರೆಗೆ ಸಂಬಳುಳ್ಳ ಕೆಲಸವನ್ನು ಪಡೆಯಬಹುದು. ಈ ಕೆಲಸದವರಿಗೂ ಇರಲಿಕ್ಕೆ ಒಂದು ಮನೆಯು ಸಿಗುವದು. ಅವರು ಶಿಕ್ಷಣ ಹೊಂದುತ್ತಿರುವಾಗ, ಅವರಿಗೆ ಅಯಾ ಸ್ಥಾನಿಕ ಸರಕಾರದಿಂದಲೂ ಡಫ್ರಿನ್ ಫಂಡಿನಿಂದಲೂ ಸ್ಕಾಲರಸಿಪ್ಪುಗಳು ಕೊಡಲ್ಪಡುವವು. ಈ ಬಗ್ಗೆ ಹಾಗೂ ಲೇಡಿ ಹಾರ್ಡಿಂಜ ಕಾಲೇಜದ ವಿಷಯವಾಗಿ ಬೇರೆ ಸಂಗತಿಗಳ ತಿಳುವಳಿಕೆಯಬಗ್ಗೆ ದಿಲ್ಲಿಯ ಲೇಡಿ ಹಾರ್ಡಿಂಜ ಕಾಲೇಜದ ಪ್ರಿನ್ಸಿಪಾಲರವರ ಕಡೆಗೆ ಬರೆದುಕೊಳ್ಳಬೇಕು.

ಸಿವ್ಹಾದಲ್ಲಿದ್ದ ಕಾವುಂಟೆಸ್ ಆಫ್ ಡಫ್ರಿನ್ ಫಂಡಿನ ಜಾಯಿಂಟ ಸೆಕ್ರೆಟರಿಯವರು ಮೇಲೆ ಹೇಳಿದ ಮೆಡಿಕಲ್ ಸರ್ವಿಸದ ಯಾವದಾದರೊಂದು ಕ್ರಮವನ್ನು ಕೈಕೊಳ್ಳಲಿಚ್ಛಿಸುವ ಹೆಣ್ಣುಮಕ್ಕಳಿಗೆ ಬೇಕಾದ ಆಲೋಚನೆಯನ್ನು ಸಂತೋಷದಿಂದ ಹೇಳುವರು. ಮತ್ತು ಇತರ ಸಹಾಯವನ್ನು ಮಾಡುವರು.

ಮಿ. ಆರ್. ಎಸ್. ಜೋಶಿಯವರ ಆರೋಗ್ಯ ವಿಜ್ಞಾನದ ಗುಜರಾಥೀ ಮತ್ತು ಕನ್ನಡ ಭಾಷಾಂತರಗಳ ಬೆಲೆಯು ಈಗ ಐದುಆಣೆ ಇದ್ದದ್ದನ್ನು ಆರು ಆಣೆ ಮಾಡಲಿಕ್ಕೆ ಪರವಾನಗಿಯನ್ನು ಕೊಟ್ಟಿರುತ್ತದೆ.

ಎರಡೂ ಭಾಷಾಂತರಗಳ ಹೊಸ ಆವೃತ್ತಿಗೆ ಮಾತ್ರ ಈ ಏರಿಸಿದ ಬೆಲೆಯು ಲಾಗೂ ಇರುವದೆಂಬದನ್ನು ಲಕ್ಷದಲ್ಲಿಡತಕ್ಕದ್ದು. ಹೊಸ ಆವೃತ್ತಿಯ ಪ್ರತಿಯೊಂದು ಪುಸ್ತಕದಲ್ಲಿ ಮುದ್ರಿಸಿದ ಪ್ರತಿಗಳ ಸಂಖ್ಯೆ, ಇಸವಿ, ಮತ್ತು ಬೆಲೆ ಇವುಗಳನ್ನು ಸ್ಪಷ್ಟವಾಗಿ ಕಾಣಿಸಿರತಕ್ಕದ್ದು. ಈ ಏರಿಸಿದ ಬೆಲೆಯು ಸಾಮಾನ್ಯ ಪರಿಸ್ಥಿತಿಯಲ್ಲಿ ಮುದ್ರಿಸಿದ ಪ್ರತಿಗಳಿಗೆ ಲಾಗೂ ಆಗಲಾರದು.

Poona,
30-6-1917.

Sd. J. G. Covernton
Director of public Instruction.

ಧಾರವಾಡ ಟ್ರೇನಿಂಗ ಕಾಲೇಜದ ಸರ್ಟಿಫಿಕೇಟ ಪರಿಕ್ಷೆಯು ಕೆಳಗೆ ಕಾಣಿಸಿದಂತೆ ನಡೆಯುವದು. ಹೊರಗಿನಿಂದ ಪರೀಕ್ಷೆಗೆ ಕೊಡ್ರಲಪೇಕ್ಷಿಸುವವರು ಮೆ. ಎ. ಇನ್‌ಸ್ಪೆಕ್ಟರ ಸಾಹೇಬರವರ ಮಂಜೂರಿಯನ್ನು ಪಡಕೊಂಡು ಬರಬಹುದು.

ಡ್ರಾಯಿಂಗ ಪರೀಕ್ಷೆ. ತಾರೀಖು ೨೪-೯-೧೭ರಿಂದ ೨೬-೯-೧೭ರವರೆಗೆ.
ಬಾಯಿಪರೀಕ್ಷೆ. ತಾ. ೧-೧೦-೧೭ರಿಂದ ೪.೧೦-೧೭ರವರೆಗೆ.
ಬರಹ. ತಾ. ೫ ೧೦-೧೭ರಿಂದ ೧೧.೧೦ ೧೭ರವರೆಗೆ.

R. S. Kulkarni.
Principal

ಮೆಹರ್ಬಾನ ಎಜ್ಯುಕೇಶನಲ್ ಇನ್‌ಸ್ಪೆಕ್ಟರಸಾಹೇಬ ದಕ್ಷಿಣ ಭಾಗರವರು ಕೆಳಗೆ ಕಾಣಿಸಿದ ಪುಸ್ತಕಗಳನ್ನು ಅವುಗಳ ಮುಂದೆ ತೋರಿಸಿದ ಕೆಲಸಗಳಿಗಾಗಿ ಮಂಜೂರ ಮಾಡಿದ್ದಾರೆ.

ನಂ.	ಪುಸ್ತಕದ ಹೆಸರು.	ಮಂಜೂರೀ ಹುಕುಮಿನ ನಂಬರು.	ಯಾತಕ್ಕೆ ಮಂಜೂರಾಗಿದೆ.
೧	ಮಿ. ವಿ. ಲಕ್ಷ್ಮಣರಾವ ಉಡುಪಿ ಕೃತ:– ಎರಡನೆಯ ಇಯತ್ತೆಯ ಭೂಗೋಲು.	೬೭೦೪ ೧೪-೬-೧೭	ಪ್ರಾಥಮಿಕ ಶಾಲೆಗಳಲಾಯಬ್ರರಿಗಾಗಿ.
೨	ಮಿ. ಜೀ. ಸೀ. ಎಲ್. ನಾರಣಯ್ಯ ಕನುರ್ಸಿಯೆಲ್ ಹೈಸ್ಕೂಲ, ಬೆಂ.ಕೂರ ಕೃತ:–ಜಮಾಖರ್ಚಿನ ಪದ್ಧತಿ.	೬೭೦೬ ೧೪–೬–೧೭	ಪ್ರಾಥಮಿಕ ಮತ್ತು ಮಧ್ಯಮತರಗತಿಯ ಶಾಲೆಗಳ ಲಾಯಬ್ರರಿಗಾಗಿ.

ಶಾಲಾ ಪತ್ರಿಕೆ
ಪುಸ್ತಕ ವಾಚನ ಮಂಡಿ-
ನೋರಬ. ಜಿ. ಧಾರವಾಡ.

ಪುಸ್ತಕ ೫೩. } ಸಪ್ಟಂಬರ ೧೯೧೩. { ಸಂಚಿಕೆ ೯.

ನೀತಿಶಿಕ್ಷಣದ ಬಗ್ಗೆ ಇನಾಮು.

ಇತ್ತಲಾಗಿ ೪।೫ ವರುಷಗಳಿಂದ ಶಾಲೆಗಳಲ್ಲಿ ನೀತಿಶಿಕ್ಷಣವನ್ನು ಕೊಡಬೇಕೆಂಬದಾಗಿ ನಮ್ಮ ಸರಕಾರದವರು ವಿಶೇಷ ಪ್ರಯತ್ನವನ್ನು ಮಾಡುತ್ತಲಿದ್ದಾರೆ. ನೀತಿಶಿಕ್ಷಣಕಲಾಕೋವಿದರಾದ ಮೆ. ಗೂಲ್ಡಸಾಹೇಬರನ್ನು ಇದರ ಸಲುವಾಗಿಯೇ ವಿಲಾಯತಿಯಿಂದ ಬರಮಾಡಿಕೊಂಡು, ಇಲ್ಲಿಯ ಮುಖ್ಯ ಮುಖ್ಯ ಪಟ್ಟಣಗಳ ಶಿಕ್ಷಕರಿದುರಿಗೆ ಪ್ರತ್ಯಕ್ಷವಾಗಿ ಅವರ ಪಾಠಗಳ ಮಾದರಿಗಳನ್ನು ತೋರಿಸಿದರು. ಆ ಬಗ್ಗೆ ಸನ್ ೧೯೧೧ ರಲ್ಲಿ ನೀತಿಶಿಕ್ಷಣದ ಉದ್ದೇಶವನ್ನೂ ಮೆಟ್ಟುಗಳನ್ನೂ ಗೊತ್ತುಮಾಡುವ ಒಂದು ತರಾವನ್ನು ಪ್ರಸಿದ್ಧಪಡಿಸಿದರು; ಅಲ್ಲದೆ ಹಿಂದುಸ್ಥಾನಕ್ಕೆ ಅನುಕೂಲವಾಗುವಂಥ ನೀತಿಶಿಕ್ಷಣದ ಎರಡು ಪುಸ್ತಕಗಳನ್ನು ಮೆ. ಎಂಥೊವ್ಹೆನ್ ಸಾಹೇಬರವರಿಂದ ಬರೆಯಿಸಿ, ಮುಂಬಯಿ ಇಲಾಖೆಯೊಳಗಿನ ಯಾವತ್ತೂ ದೇಶಭಾಷೆಗಳಲ್ಲಿ ಅವುಗಳ ಭಾಷಾಂತರವನ್ನು ಮಾಡಿಸಿ, ಪ್ರಸಿದ್ಧಪಡಿಸಿದರು. ಈ ಪ್ರಕಾರ ಸರಕಾರದವರ ಪ್ರಯತ್ನವು ನಡೆದಿರಲಾಗಿ, ಮುಂಬಯಿಯೆ ಒಬ್ಬ ಉದಾರ ಪಾರ್ಶೀ ಗೃಹಸ್ಥರು ಇದೇ ಕೆಲಸಕ್ಕಾಗಿ ಒಂದು ಸಾವಿರ ರೂಪಾಯಿಗಳನ್ನು ಸರಕಾರದವರ ವಶಕ್ಕೆ ಕೊಟ್ಟಿರುವರು. ಈ ಶಿಕ್ಷಣದ ಪ್ರಸಾರವು ನಮ್ಮ ಪ್ರಾಥಮಿಕ ಪಾಠಶಾಲೆಗಳಲ್ಲಿ ಒತ್ತರದಿಂದ ಆಗಬೇಕೆಂಬ ಉದ್ದೇಶದಿಂದ ಮೆ. ಡಾಯರೆಕ್ಟರಸಾಹೇಬರವರು ಸದರಿ ಹಣದೊಳಗಿಂದ ಪ್ರತಿವರ್ಷ ೨೦ ರೂ. ಬೆಲೆ ಬಾಳುವ ಎರಡು ಬಂಗಾರದ ಪದಕಗಳನ್ನು ಇನಾಮಾಗಿ ಕೊಡಬೇಕೆಂಬದಾಗಿ ನಿರ್ಣಯಿಸಿರುವರು. ಟ್ರೇನಿಂಗಕ್ಕಾಲೇಜುಗಳಲ್ಲಿ ಕಲಿತು ತಯಾರಾಗುವ ಹೊಸ ಶಿಕ್ಷಕ ಶಿಕ್ಷಕಿಯರಲ್ಲಿ ಮೇಲು ನಂಬರು ಪಡೆದವರಿಗೆ ಮಾತ್ರ ಈ ಪದಕಗಳು ದೊರೆಯುವವು. ಆರಿಸಿಕೊಂಡ ಪಾಠವನ್ನು ಗೊತ್ತುಪಡಿಸಿದ

ಕಮೀಟಿಯ ಮುಂದೆ ಕಲಿಸಿ ತೋರಿಸಬೇಕಾಗುವದು. ಇವುಗಳಲ್ಲಿ ಒಂದು ಪದಕವು ಗಂಡುಮಕ್ಕಳ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗಾಗಿಯೂ, ಇನ್ನೊಂದು ಹೆಣ್ಣುಮಕ್ಕಳ ಟ್ರೇನಿಂಗಕಾಲೇಜದ ವಿದ್ಯಾರ್ಥಿನಿಯರಿಗಾಗಿಯೂ ಇರುವವು. ಈ ಪದಕಗಳು ಮುಂಬಯಿ ಇಲಾಖೆಯೊಳಗಿನ ಯಾವತ್ತೂ ಟ್ರೇನಿಂಗಕಾಲೇಜುಗಳಿಗೆ ಸರತಿಯಿಂದ ಬರತಕ್ಕವುಗಳಾಗಿದ್ದು ನಮ್ಮ ಭಾಗದ ಟ್ರೇನಿಂಗಕಾಲೇಜುಗಳಿಗೆ ಬರುವ ಸರತಿಯು ಕೆಳಗೆ ಬರೆದಂತೆ ಇರುವದು.

೧೯೧೬ ನೇ ಇ. ಧಾರವಾಡ ಹೆ. ಮ. ಟ್ರೇ. ಕಾಲೇಜ.
೧೯೧೯ ನೇ ಇ. ,, ಗ. ಮ. ,,

ಇದೇ ರೀತಿಯಿಂದ ಮುಂದೆ ನಾಲ್ಕು ವರುಷಕ್ಕೊಮ್ಮೆ ಈ ಸರತಿಯು ಬರುವದು. ಸದರೀ ಪರೀಕ್ಷೆಯನ್ನು ಕಮೀಟಿಯವರು ಬಹುಶಃ ಆಯಾ ಟ್ರೇನಿಂಗಕಾಲೇಜುಗಳ ವಾರ್ಷಿಕ ಪರೀಕ್ಷೆಯ ಸುಮಾರಕ್ಕೆ ತೆಗೆದುಕೊಳ್ಳುವರು. ಉಮೇದವಾರರು ಕಲಿಸತಕ್ಕ ವಿಷಯವನ್ನೂ ವರ್ಗವನ್ನೂ ಶಾಲಾಪತ್ರಿಕದಲ್ಲಿ ನೋಟೀಸಿನದ್ವಾರ ತಿಳಿಸುವದರಲ್ಲಿ ಬರುವದು.

ವರ್ಗಮೂಲ ತೆಗೆಯುವ ರೀತಿ.

ಅಂಕಗಣಿತದಲ್ಲಿ ಗುಣಾಕಾರದ ಮತ್ತು ಭಾಗಾಕಾರದ ಕೃತಿಗಳಲ್ಲಿ ಒಂದು ಮಹತ್ವವಾದ ಭೇದವಿರುವದು. ಅದು ಯಾವದೆಂದರೆ--ಗುಣಾಕಾರದ ಕೆಲಸವು ಹೆಚ್ಚು ನಿಶ್ಚಿತವಾದದ್ದು; ಆದರೆ, ಭಾಗಾಕಾರದಲ್ಲಿ ಮಾಡಿ ನೋಡಿ ತಿಳುಕೊಳ್ಳಬೇಕಾಗುವ ಕೆಲವು ಅಂಶವು ಇರುತ್ತದೆ. ೨೦ಳಕ್ಕೆ ೭ ರಿಂದ ಭಾಗಿಸಬೇಕಾಗಿದೆ, ಎಂದು ತಿಳಿಯುವಾ. ಇಲ್ಲಿ ೨೦ಳ ರಲ್ಲಿ ೭ ಎಷ್ಟು ಸಾರೆ ಹೋಗುತ್ತದೆಂಬದನ್ನು ಒಮ್ಮೆಲೆ ತಿಳುಕೊಳ್ಳಲು ಸಾಧ್ಯವಿಲ್ಲ. ೨೦ಕ್ಕೆ ೨ರಿಂದ ಭಾಗಿಸಿ ನೋಡಲು ೧೦ ಬರುವದು. ೭×೧೦=೭೦ ಆಗುವದರಿಂದ ೧೦ ರಿಂದ ಹತ್ತುವದಿಲ್ಲೆಂದು ಕೂಡಲೆ ತಿಳಿಯುವದು. ೭×೯ ನೋಡಲು, ೨೦ಳ ರಲ್ಲಿ ಹೋಗುವದಿಲ್ಲ. ೭×೮ ಇದು ಸಹ ಹೆಚ್ಚಾಗುವದು. ೭×೨=೧೪; ಆದ್ದರಿಂದ ೨೦ಳರಲ್ಲಿ ೭

ಸಾರಿ ಹೋಗುವದೆಂದು ಗೊತ್ತಾಯಿತು. ಗುಣಾಕಾರದಲ್ಲಿ ಈ ಪ್ರಕಾರ ಪ್ರಯತ್ನಗಳನ್ನು ಮಾಡಬೇಕಾಗುವದಿಲ್ಲ.

ವರ್ಗಮೂಲ ತೆಗೆಯುವ ರೀತಿಯು ಮೇಲೆ ಭಾಗಾಕಾರದ ಸಂಬಂಧದಿಂದ ಹೇಳಿದಂತೆ ಹಲವು ಪ್ರಯತ್ನಗಳಿಂದ ಗೊತ್ತು ಪಡಿಸುವ ರೀತಿಯಾಗಿರುತ್ತದೆ. ಆದರೆ ಭಾಗಾಕಾರವು ನಮಗೆ ಚನ್ನಾಗಿ ಮಾಡಲಿಕ್ಕೆ ಬಂದ ಮೇಲೆ ಅದು ಹೇಗೆ ನಮಗೆ ಶ್ರಮವೆನಿಸುವದಿಲ್ಲವೋ, ಹಾಗೆ ವರ್ಗಮೂಲದ ರೀತಿಯಲ್ಲಿ ಮಾಡಿನೋಡಿ ತಿಳುಕೊಳ್ಳಬೇಕಾದ ಅಂಶವು ವಿಶೇಷವಾಗಿ ಇದ್ದರೂ ರೂಢಿಯಿಂದ ಅದು ಸುಲಭವಾಗಿ ತೋರುವದು.

ಒಂದು ಸಂಖ್ಯೆಯ ವರ್ಗಮೂಲವು ೬೫೭ ಅದೆ ಎಂದು ತಿಳಿದರೆ, ಸೊದಲು ಆ ವರ್ಗಮೂಲವು ೬೦೦ಕ್ಕಿಂತ ಹೆಚ್ಚು (೬೦೦, ೭೦೦ ಇವುಗಳ ನಡುವೆ) ಇರುವದೆಂದೂ, ಆ ಮೇಲೆ ಅದು ೬೫೦ಕ್ಕಿಂತ ಹೆಚ್ಚು (೬೫೦, ೬೬೦ ಇವುಗಳ ನಡುವೆ) ಇರುವದೆಂದೂ ಮತ್ತು ಕಡೆಯ ಸಾರಿ ಅದು ೬೫೭ಕ್ಕೆ ಸರಿ ಇರುವದೆಂದೂ ನಮಗೆ ಕ್ರಮವಾಗಿ ಗೊತ್ತಾಗುತ್ತದೆ.

ನಾವು ತೆಗೆಯುತಕ್ಕ ವರ್ಗಮೂಲವು ೬೦೦ ಕ್ಕಿಂತ ಹೆಚ್ಚಿರುವದೆಂದು ಮತ್ತು ೭೦೦ಕ್ಕಿಂತ ಕಡಿಮೆ ಇರುವದೆಂದು ಗೊತ್ತಾದ ಮೇಲೆ ಅದು ೬೧೦ - ೬೨೦ - ೬೩೦ - ೬೪೦ - ೬೫೦ - ೬೬೦ - ೬೭೦ - ೬೮೦ - ೬೯೦ - ೭೦೦ ಈ ಸಂಖ್ಯೆಗಳಲ್ಲಿ ಯಾವದಕ್ಕಿಂತ ಖಂಡಿತವಾಗಿ ಕಡಿಮೆ ಅದೆ (ಮತ್ತು ಯಾವದಕ್ಕಿಂತ ಹೆಚ್ಚು **ಇರಬಹುದು**) ಎಂಬದನ್ನು ಗೊತ್ತು ಹಚ್ಚುತ್ತೇವೆ. ಇಚ್ಛಿತ ವರ್ಗಮೂಲವು ೬೫೦ಕ್ಕಿಂತ ಕಡಿಮೆ ಅದೆ ಎಂದು ತಿಳಿದ ಮೇಲೆ ೬೨೦ ರ ವರ್ಗ ಮಾಡಿ ಕೊಟ್ಟ ಸಂಖ್ಯೆಯಲ್ಲಿ ಕಳೆದು ನೋಡುತ್ತೇವೆ. ಕಳೆಯಲಿಕ್ಕೆ ಬರದಿದ್ದರೆ ೬೧೦ ರ ವರ್ಗವನ್ನು ಕಳೆದು ನೋಡುತ್ತೇವೆ. ೬೧೦ ರ ವರ್ಗವೂ ಕೊಟ್ಟ ಸಂಖ್ಯೆಗಿಂತ ಹೆಚ್ಚಾದರೆ ೬೦೦ ರ ವರ್ಗವನ್ನು ಕಳೆದು ನೋಡಿ ಕಳೆಯಲಿಕ್ಕೆ ಬಂದರೆ ಇಚ್ಛಿತ ವರ್ಗಮೂಲವು ೬೦೦ ಕ್ಕಿಂತ ಹೆಚ್ಚು (೬೦೦, ೬೧೦ ಇವುಗಳ ನಡುವೆ) ಇರುವದೆಂದು ಗೊತ್ತಾಗುವದು. ಇಚ್ಛಿತ ವರ್ಗಮೂಲವು ೬೦೦ ಕ್ಕಿಂತ ಹೆಚ್ಚು ಅದೆ (ಮತ್ತು ಹೆಚ್ಚಿದ್ದ ಭಾಗವು ೧೦ಕ್ಕಿಂತ ಕಡಿಮೆ ಅದೆ); ಆದ್ದರಿಂದ ಅದು ೬೦೧—೬೦೨—೬೦೩—..... — ೬೦೯ ಈ ಸಂಖ್ಯೆಗಳಲ್ಲಿ ಯಾವದಕ್ಕಿಂತ ಖಂಡಿತವಾಗಿ ಕಡಿಮೆ ಅದೆ, ಎಂಬವನ್ನು ಗೊತ್ತು ಹಚ್ಚುತ್ತೇನೆ. ೬೦೯ ಕ್ಕಿಂತ ಕಡಿಮೆ ಅದೆ ಎಂದು ಗೊತ್ತಾ

ದರೆ ೬೫೦ರ ವರ್ಗ ಮಾಡಿ ಕೊಟ್ಟ ಸಂಖ್ಯೆಯಲ್ಲಿ ಕಳೆದು ನೋಡುತ್ತೇವೆ. ಕಳೆಯಲಿಕ್ಕೆ ಬರದಿದ್ದರೆ ೬೫೨ರ ವರ್ಗವನ್ನು ಕಳೆದು ನೋಡುತ್ತೇವೆ. ಕಳೆಯಲು ಏನೂ ಉಳಿಯದಿದ್ದರೆ, ೬೫೨ ಇದೇ ವರ್ಗಮೂಲವೆಂದು ಗೊತ್ತಾಗುವದು.

ಮೇಲೆ ಹೇಳಿದ ಕ್ರಮದಲ್ಲಿ, ಕೊಟ್ಟ ಸಂಖ್ಯೆಯೊಳಗಿಂದ ಮೊದಲು ೬೦೦ರ ವರ್ಗವನ್ನೂ, ಆ ಮೇಲೆ ೬೫೦ರ ವರ್ಗವನ್ನೂ, ಮತ್ತು ಕಡೆಯ ಸಾರೆ ೬೫೨ರ ವರ್ಗವನ್ನೂ ಕಳೆಯಬೇಕಾಗುತ್ತದೆಂದು ಕಂಡು ಬರುವದು. ಇನ್ನು ೬೦೦ರ ವರ್ಗವು ಕೆಲವೊಂದು ಹತ್ತು ಸಾವಿರದ ಗಂಟು ಇರುವದು — ೩೬ ಹತ್ತು ಸಾವಿರ (ಇದನ್ನು ೩ಲಕ್ಷ ೬೦ ಸಾವಿರವೆಂದು ಓದಿದರೆ ಅದರ ವರ್ಗಮೂಲವು ಸಹಸಾ ಮನಸ್ಸಿನಲ್ಲಿ ಬರುವದಿಲ್ಲ. ಆದರೆ ೩೬ ಹತ್ತು ಸಾವಿರವೆಂದು ಓದಿದರೆ ವರ್ಗಮೂಲವು ೬೦೦ ಎಂಬದು ಒಮ್ಮೆಲೆ ಗೊತ್ತಾಗುವದು). ೬೫೦ರ ವರ್ಗವು ಕೆಲವೊಂದು ನೂರರ ಗಂಟು ಇರುವದು— ೪೨೨೫ ನೂರು; ಮತ್ತು ೬೫೨ರ ವರ್ಗವು ಕೆಲವೊಂದು ಬಿಡಿಗಾಳುಗಳ ಗಂಟು ಇರುವದು— ೪೨೫೦೪ ಬಿಡಿಗಾಳು. ಆದ್ದರಿಂದ (೧) ಮೊದಲು ಕೊಟ್ಟ ಸಂಖ್ಯೆಯೊಳಗಿಂದ ಅದಕ್ಕೆ ಆದಷ್ಟು ಸಮೀಪವಿರುವ ಪೂರ್ಣವರ್ಗಸಂಖ್ಯೆಯಾದ ಎಷ್ಟು ಹತ್ತುಸಾವಿರದ (ಅಥವಾ ಹತ್ತು ಲಕ್ಷ ಹತ್ತು ಕೋಟಿ, ಇತ್ಯಾದಿ) ಗಂಟುಗಳನ್ನು ಕಳೆಯಲಿಕ್ಕೆ ಬರುತ್ತದೆಂಬದನ್ನು ನೋಡಬೇಕು. (೨) ತರುವಾಯ ಕೊಟ್ಟ ಸಂಖ್ಯೆಗೆ ಆದಷ್ಟು ಸಮೀಪವಿರುವ ಪೂರ್ಣವರ್ಗಸಂಖ್ಯೆಯಾದ ಎಷ್ಟು ನೂರರ ಗಂಟನ್ನು ಅದರೊಳಗಿಂದ ಕಳೆಯಲಿಕ್ಕೆ ಬರುತ್ತದೆಂಬದನ್ನು ನೋಡಬೇಕು. (ಕೊಟ್ಟ ಸಂಖ್ಯೆಯು ೪೩೧೬೬ ಅದೆ ಎಂದು ತಿಳಿದರೆ ಇದರಲ್ಲಿ ೪೩೧೬ ನೂರರ ಗಂಟುಗಳಾಗುವವು.) (೩) ಕಡೆಯ ಸಾರೆ ಕೊಟ್ಟ ಸಂಖ್ಯೆಯೊಳಗಿಂದ ಆದಷ್ಟು ಸಮೀಪವಿರುವ ಪೂರ್ಣವರ್ಗ ಸಂಖ್ಯೆಯಾದ ಎಷ್ಟು ಬಿಡಿಗಾಳುಗಳ ಗಂಟನ್ನು ಕಳೆಯಲಿಕ್ಕೆ ಬರುತ್ತದೆಂಬದನ್ನು ನೋಡಬೇಕಾಗುವದು.

೧; ೧೦೦; ೧೦೦೦೦; ೧೦೦೦,೦೦೦; ೧೦೦೦೦,೦೦೦೦; ಇತ್ಯಾದಿ ಸಂಖ್ಯೆಗಳ ಸರಿಯಾದ ವರ್ಗಮೂಲಗಳು ಇರುವದರಿಂದಲೂ, ೧೦; ೧೦೦೦; ೧೦೦೦೦೦; ಇತ್ಯಾದಿ ಸಂಖ್ಯೆಗಳ ಸರಿಯಾದ ವರ್ಗಮೂಲಗಳು ಇರದೆ ಇರುವದರಿಂದಲೂ ವರ್ಗಮೂಲ ತೆಗೆಯಲಿಕ್ಕೆ ಕೊಟ್ಟ ಯಾವ

ದಾದರೊಂದು ಸಂಖ್ಯೆಯಲ್ಲಿ ಎಷ್ಟು ಹತ್ತುಲಕ್ಷದ ಗಂಟುಗಳು, ಎಷ್ಟು ಹತ್ತುಸಾವಿರದ ಗಂಟುಗಳು, ಎಷ್ಟು ನೂರರ ಗಂಟುಗಳು, ಎಷ್ಟು ಬಿಡಿಗಾಳುಗಳು ಆಗುತ್ತವೆಂಬದನ್ನು ನೋಡುವದು ಮೊದಲನೇ ಕೆಲಸವು.

೪೨೨೫; ೧೨೩೨೧; ೪೪೪೫೬ ಈ ಸಂಖ್ಯೆಗಳನ್ನು ಕೆಳಗೆ ಬರೆದಂತೆ ಓದುವ ರೂಢಿಯನ್ನು ಮಾಡಬೇಕು. ನಲವತ್ತೆರಡು ನೂರಾ ಇಪ್ಪತ್ತೈದು; ಒಂದು ಹತ್ತುಸಾವಿರ, ಇಪ್ಪತ್ತು-ಮೂರು ನೂರಾ ಇಪ್ಪತ್ತೊಂದು; ನಲವತ್ತು-ನಾಲ್ಕು ಹತ್ತುಸಾವಿರ, ಮೂವತ್ತೈದು ನೂರಾ ಐವತ್ತಾರು.

ವರ್ಗಮೂಲ ತೆಗೆಯುವಾಗ ಮೇಲಿಂದ ಮೇಲೆ ಸಂಖ್ಯೆಗಳ ವರ್ಗಗಳನ್ನು ಮಾಡಬೇಕಾಗುವ ಕಾರಣ ಈ ಕೆಲಸವನ್ನು ಮಾಡಲಿಕ್ಕೆ ಅನುಕೂಲವಾಗುವ ಸಂಗತಿಗಳನ್ನು ತಿಳುಕೊಳ್ಳುವದು ಅವಶ್ಯವು. ಒಂದು ಸಂಖ್ಯೆಯ ವರ್ಗವನ್ನು ಕೊಟ್ಟು ಅದರ ಮೇಲಿಂದ ಅದಕ್ಕೆ ಸಂಬಂಧಿಸಿದ ಇನ್ನೊಂದು ಸಂಖ್ಯೆಯ ವರ್ಗವನ್ನು ತೆಗೆಯುವ ಕೆಲಸವು ಪ್ರತ್ಯೇಕವಾಗಿ ಆ ಸಂಖ್ಯೆಗಳ ವರ್ಗಗಳನ್ನು ತೆಗೆಯುವ ಕೆಲಸಗಳಿಗಿಂತ ಸುಲಭವಾಗಿರುತ್ತದೆ.

೩೫೦ರ ವರ್ಗವು ೧೨೨೫೦೦ ಆದರೆ ೩೫೨ರ ವರ್ಗವೆಷ್ಟು? ಇದನ್ನು ಹೇಗೆ ಮಾಡಬೇಕು?

ಇಲ್ಲಿ ೩೫೦ರ ವರ್ಗವನ್ನು ಕೊಟ್ಟಿರುವದರಿಂದ ಅದನ್ನು ಉಪಯೋಗಿಸಿಕೊಂಡು ೩೫೨ರ ವರ್ಗವನ್ನು ತೆಗೆಯುವದು ಪ್ರತ್ಯೇಕವಾಗಿ ೩೫೨ರ ವರ್ಗವನ್ನು ತೆಗೆಯುವ ಕೆಲಸಕ್ಕಿಂತ ಸುಲಭವಾಗುವದು.

೩೫೨ರ ವರ್ಗವು ಯಾವ ಪ್ರಕಾರ ಉಂಟಾಗಿರುತ್ತದೆಂಬದನ್ನು ವಿಚಾರಿಸೋಣ.

	೩೫೦	೨
	೩೫೦	೨
	೧೨೫೦೦	೪
೧೨೨೫೦೦	೧೨೫೦೦	
೧೨೨೫೦೦	೨೫೦೦೦	೪

ಗುಣಾಕಾರದಲ್ಲಿ ಬಂದ ೨೫೦೦೦ ಹೇಗೆ ಉಂಟಾಗಿರುವದು? ೩೫೦ಕ್ಕೆ ೨ರಿಂದ ಗುಣಿಸಿ ಬಂದದ್ದನ್ನು ಎರಡು ಸಾರಿ ತೆಗೆದುಕೊಂಡಿರುವೆವು.

ವರೆ ೬೫೦೦ರ ವರ್ಗ ಮಾಡಿ ಕೊಟ್ಟ ಸಂಖ್ಯೆಯಲ್ಲಿ ಕಳೆದು ನೋಡುತ್ತೇವೆ. ಕಳೆಯಲಿಕ್ಕೆ ಬರದಿದ್ದರೆ ೬೫೦೦ರ ವರ್ಗವನ್ನು ಕಳೆದು ನೋಡುತ್ತೇವೆ. ಕಳೆಯಲು ಏನೂ ಉಳಿಯದಿದ್ದರೆ, ೬೫೦೦ ಇದೇ ವರ್ಗಮೂಲವೆಂದು ಗೊತ್ತಾಗುವದು.

ಮೇಲೆ ಹೇಳಿದ ಕ್ರಮದಲ್ಲಿ, ಕೊಟ್ಟ ಸಂಖ್ಯೆಯೊಳಗಿಂದ ಮೊದಲು ೬೦೦ರ ವರ್ಗವನ್ನೂ, ಆ ಮೇಲೆ ೬೫೦ರ ವರ್ಗವನ್ನೂ, ಮತ್ತು ಕಡೆಯ ಸಾರೆ ೬೫೦೦ರ ವರ್ಗವನ್ನೂ ಕಳೆಯಬೇಕಾಗುತ್ತದೆಂದು ಕಂಡು ಬರುವದು. ಇನ್ನು ೬೦೦ರ ವರ್ಗವು ಕೆಲವೊಂದು ಹತ್ತು ಸಾವಿರದ ಗಂಟು ಇರುವದು — ೩೬ ಹತ್ತು ಸಾವಿರ (ಇದನ್ನು ೩೬ಲಕ್ಷ ೬೦ ಸಾವಿರವೆಂದು ಓದಿದರೆ ಅದರ ವರ್ಗಮೂಲವು ಸಹಸಾ ಮನಸ್ಸಿನಲ್ಲಿ ಬರುವದಿಲ್ಲ. ಆದರೆ ೩೬ ಹತ್ತು ಸಾವಿರವಂದು ಓದಿದರೆ ವರ್ಗಮೂಲವು ೬೦೦ ಎಂಬದು ಒಮ್ಮೆಲೆ ಗೊತ್ತಾಗುವದು). ೬೫೦ರ ವರ್ಗವು ಕೆಲವೊಂದು ನೂರರ ಗಂಟು ಇರುವದು— ೪೨೨೫ ನೂರು; ಮತ್ತು ೬೫೦೦ರ ವರ್ಗವು ಕೆಲವೊಂದು ಬಿಡಿಗಾಳುಗಳ ಗಂಟು ಇರುವದು— ೪೨೨೫೦೦ ಬಿಡಿಗಾಳು. ಆದ್ದರಿಂದ (೧) ಮೊದಲು ಕೊಟ್ಟ ಸಂಖ್ಯೆಯೊಳಗಿಂದ ಅದಕ್ಕೆ ಅದಷ್ಟು ಸಮೀಪವಿರುವ ಪೂರ್ಣವರ್ಗಸಂಖ್ಯೆಯಾದ ಎಷ್ಟು ಹತ್ತುಸಾವಿರದ (ಅಥವಾ ಹತ್ತು ಲಕ್ಷ ಹತ್ತು ಕೋಟಿ, ಇತ್ಯಾದಿ) ಗಂಟುಗಳನ್ನು ಕಳೆಯಲಿಕ್ಕೆ ಬರುತ್ತದೆಂಬದನ್ನು ನೋಡಬೇಕು. (೨) ತರುವಾಯ ಕೊಟ್ಟ ಸಂಖ್ಯೆಗೆ ಅದಷ್ಟು ಸಮೀಪವಿರುವ ಪೂರ್ಣವರ್ಗಸಂಖ್ಯೆಯಾದ ಎಷ್ಟು ನೂರರ ಗಂಟನ್ನು ಅದರೊಳಗಿಂದ ಕಳೆಯಲಿಕ್ಕೆ ಬರುತ್ತದೆಂಬದನ್ನು ನೋಡಬೇಕು. (ಕೊಟ್ಟ ಸಂಖ್ಯೆಯು ೪೨೨೫೦೦ ಅದೆ ಎಂದು ತಿಳಿದರೆ ಇದರಲ್ಲಿ ೪೨೨೫ ನೂರರ ಗಂಟುಗಳಾಗುವವು.) (೩) ಕಡೆಯ ಸಾರೆ ಕೊಟ್ಟ ಸಂಖ್ಯೆಯೊಳಗಿಂದ ಅದಷ್ಟು ಸಮೀಪವಿರುವ ಪೂರ್ಣವರ್ಗ ಸಂಖ್ಯೆಯಾದ ಎಷ್ಟು ಬಿಡಿಗಾಳುಗಳ ಗಂಟನ್ನು ಕಳೆಯಲಿಕ್ಕೆ ಬರುತ್ತದೆಂಬದನ್ನು ನೋಡಬೇಕಾಗುವದು.

೧; ೧೦೦; ೧೦೦೦೦; ೧೦೦೦,೦೦೦; ೧೦೦೦೦,೦೦೦೦; ಇತ್ಯಾದಿ ಸಂಖ್ಯೆಗಳ ಸರಿಯಾದ ವರ್ಗಮೂಲಗಳು ಇಹುವದರಿಂದಲೂ, ೧೦; ೧೦೦೦; ೧೦೦೦೦೦; ಇತ್ಯಾದಿ ಸಂಖ್ಯೆಗಳ ಸರಿಯಾದ ವರ್ಗಮೂಲಗಳು ಇರದೆ ಇರುವದರಿಂದಲೂ ವರ್ಗಮೂಲ ತೆಗೆಯಲಿಕ್ಕೆ ಕೊಟ್ಟ ಯಾವ

ದಾದರೊಂದು ಸಂಖ್ಯೆಯಲ್ಲಿ ಎಷ್ಟು ಹತ್ತುಲಕ್ಷದ ಗಂಟುಗಳು, ಎಷ್ಟು ಹತ್ತುಸಾವಿರದ ಗಂಟುಗಳು, ಎಷ್ಟು ನೂರರ ಗಂಟುಗಳು, ಎಷ್ಟು ಬಿಡಿಗಾಳುಗಳು ಆಗುತ್ತವೆಂಬದನ್ನು ನೋಡುವದು ಮೊದಲನೇ ಕೆಲಸವು.

೪೨೨೫; ೧೨೩೨೧; ೪೪೪೫೫೬ ಈ ಸಂಖ್ಯೆಗಳನ್ನು ಕೆಳಗೆ ಬರೆದಂತೆ ಓದುವ ರೂಢಿಯನ್ನು ಮಾಡಬೇಕು. ನಲವತ್ತೆರಡು ನೂರಾ ಇಪ್ಪತ್ತೈದು; ಒಂದು ಹತ್ತುಸಾವಿರ, ಇಪ್ಪತ್ತು-ಮೂರು ನೂರಾ ಇಪ್ಪತ್ತೊಂದು; ನಲವತ್ತು-ನಾಲ್ಕು ಹತ್ತುಸಾವಿರ, ಮೂವತ್ತೈದು ನೂರಾ ಐವತ್ತಾರು.

ವರ್ಗಮೂಲ ತೆಗೆಯುವಾಗ ಮೇಲಿಂದ ಮೇಲೆ ಸಂಖ್ಯೆಗಳ ವರ್ಗಗಳನ್ನು ಮಾಡಬೇಕಾಗುವ ಕಾರಣ ಈ ಕೆಲಸವನ್ನು ಮಾಡಲಿಕ್ಕೆ ಅನುಕೂಲವಾಗುವ ಸಂಗತಿಗಳನ್ನು ತಿಳುಕೊಳ್ಳುವದು ಅವಶ್ಯವು. ಒಂದು ಸಂಖ್ಯೆಯ ವರ್ಗವನ್ನು ಕೊಟ್ಟು ಅದರ ಮೇಲಿಂದ ಅದಕ್ಕೆ ಸಂಬಂಧಿಸಿದ ಇನ್ನೊಂದು ಸಂಖ್ಯೆಯ ವರ್ಗವನ್ನು ತೆಗೆಯುವ ಕೆಲಸವು ಪ್ರತ್ಯೇಕವಾಗಿ ಆ ಸಂಖ್ಯೆಗಳ ವರ್ಗಗಳನ್ನು ತೆಗೆಯುವ ಕೆಲಸಗಳಿಗಿಂತ ಸುಲಭವಾಗಿರುತ್ತದೆ.

೬೫೦ರ ವರ್ಗವು ೪೨೨೫೦೦ ಆದರೆ ೬೫೨ರ ವರ್ಗವೆಷ್ಟು? ಇದನ್ನು ಹೇಗೆ ಮಾಡಬೇಕು?

ಇಲ್ಲಿ ೬೫೦ರ ವರ್ಗವನ್ನು ಕೊಟ್ಟಿರುವದರಿಂದ ಅದನ್ನು ಉಪಯೋಗಿಸಿಕೊಂಡು ೬೫೨ರ ವರ್ಗವನ್ನು ತೆಗೆಯುವದು ಪ್ರತ್ಯೇಕವಾಗಿ ೬೫೨ರ ವರ್ಗವನ್ನು ತೆಗೆಯುವ ಕೆಲಸಕ್ಕಿಂತ ಸುಲಭವಾಗುವದು.

೬೫೨ರ ವರ್ಗವು ಯಾವ ಪ್ರಕಾರ ಉಂಟಾಗಿರುತ್ತದೆಂಬದನ್ನು ವಿಚಾರಿಸೋಣ.

	೬೫೦	೨
	೬೫೦	೨
	೪೨೨೫೦	೪೦೦
೪೨೨೫೦೦	೪೨೨೫೦	
೪೨೨೫೦೦	೮೪೫೦೦	೪೦೦

ಗುಣಾಕಾರದಲ್ಲಿ ಬಂದ ೮೪೫೦೦ ಹೇಗೆ ಉಂಟಾಗಿರುವದು? ೬೫೦ಕ್ಕೆ ೨ರಿಂದ ಗುಣಿಸಿ ಬಂದದ್ದನ್ನು ಎರಡು ಸಾರಿ ತೆಗೆದುಕೊಂಡಿರುವೆವು.

ಆದ್ದರಿಂದ ಇದು ೬೫೦ ರ ದುಪ್ಪಟ್ಟಿನ ೭ ಪಟ್ಟು ಇರುವದು ೬೫೦×೨×೭=೯೧೦೦. ಅದಕಾರಣ ೬೫೦ರ ವರ್ಗದ ಮೇಲಿಂದ ೬೫೭ ವರ್ಗವನ್ನು ತೆಗೆಯಬೇಕಾದರೆ ೬೫೦ ವರ್ಗಕ್ಕೆ ೯೩೦೦×೭+೭×೭ ಇಷ್ಟು ಕೂಡಿಸಬೇಕು. ಅಥವಾ,

೯೩೦೦×೭	ಅದಕಾರಣ ೯೩೦೭×೭ ಇಷ್ಟು ಕೂಡಿಸಬೇಕು
+ ೭×೭	
= ೯೩೦೭×೭	

೬೫೦ ನುತ್ತು (೬೫೭—೬೫೦=) ೭ ಈ ಎರಡು ಕೊಟ್ಟು ಸಂಖ್ಯೆಗಳ ಮೇಲಿಂದ ಎಷ್ಟು ಕೂಡಿಸಬೇಕೆಂಬದು ಗೊತ್ತಾಗುವದು. (೬೫೦ರ ದುಪ್ಪಟ್ಟಿನಲ್ಲಿ ೭ ಕೂಡಿಸಿ ಬಂದದ್ದಕ್ಕೆ ೭ರಿಂದ ಗುಣಿಸಿ ಬರುವಷ್ಟು ಕೂಡಿಸಬೇಕು.)

ಒಂದು ಸಂಖ್ಯೆಯನ್ನು ತಕ್ಕೊಂಡು ಅದರ ವರ್ಗಮೂಲವನ್ನು ಹ್ಯಾಗೆ ತೆಗೆಯಬೇಕೆಂಬದನ್ನು ವಿಚಾರಿಸುವಾ. ಉದಾ: ೪೩೧೬೪೪. ಇದರೊಳಗಿಂದ ಕಳೆಯಲಿಕ್ಕೆ ಬರುವ ಎಲ್ಲಕ್ಕೂ ದೊಡ್ಡ ಗಂಟುಗಳೆಂದರೆ ಹತ್ತುಸಾವಿರದ ಗಂಟುಗಳು. ಆದ್ದರಿಂದ ಇದರಲ್ಲಿ ಆಗುವ ಹತ್ತು ಸಾವಿರದ ಗಂಟುಗಳನ್ನು ಬರೆದು ಕೊಳ್ಳುವಾ.

೪೩೦೦೦೦ | ೬೦೦=೩೬೦೦೦೦

೪೩ ಹತ್ತು ಸಾವಿರಕ್ಕೆ ಅದಷ್ಟು ಸಮೀಪವಿರುವ ಪೂರ್ಣವರ್ಗ ಸಂಖ್ಯೆಯಾದ ಎಷ್ಟು ಹತ್ತುಸಾವಿರದ ಗಂಟುಗಳನ್ನು ಅದರಲ್ಲಿ ಕಳೆಯಲಿಕ್ಕೆ ಬರುತ್ತದೆ? ೩೬ ಹತ್ತುಸಾವಿರ. ಆದ್ದರಿಂದ, ಇಚ್ಛಿತ ವರ್ಗಮೂಲವು ೬೦೦ ಕ್ಕಿಂತ ಹೆಚ್ಚು (೭೦೦ ಕ್ಕಿಂತ ಕಡಿಮೆ) ಅದೆ. ಇನ್ನು ಮುಂದೆ ಈ ವರ್ಗಮೂಲವು ೬೧೦—೬೭೦.....೬೯೦—೬೯೦ ಈ ಸಂಖ್ಯೆಗಳಲ್ಲಿ ಯಾವದಕ್ಕಿಂತ ಖಂಡಿತವಾಗಿ ಕಡಿಮೆ ಅದೆ ಎಂಬದನ್ನು ತಿಳುಕೊಳ್ಳೋಣ. **ಇದನ್ನು ತಿಳುಕೊಳ್ಳಲಿಕ್ಕೆ ಈ ಎಲ್ಲ ಸಂಖ್ಯೆಗಳ ಪೂರಾ ವರ್ಗಮಾಡಿ ನೋಡುವ ಕಾರಣವಿಲ್ಲ. ಪ್ರತಿಯೊಂದು ಸಂಖ್ಯೆಯ ವರ್ಗದ ಮೊದಲನೇ ಎರಡು ಪದಗಳನ್ನು ತಕ್ಕೊಂಡು ನೋಡಿದರೆ ಸಾಕು.**

$$೪೬೦೦೦+\begin{cases} ೧೨೦೦\times೧೦+ \\ ೧೨೦೦\times೨೦+ \\ ೧೨೦೦\times೩೦+ \\ ೧೨೦೦\times೪೦+ \\ ೧೨೦೦\times೫೦+ \\ ೧೨೦೦\times೬೦+ \\ ೧೨೦೦\times೭೦+ \\ ೧೨೦೦\times೮೦+ \\ ೧೨೦೦\times೯೦+ \end{cases}$$

(೪೬೦೦೦ ವನ್ನು ಪ್ರತಿಯೊಂದು ಸಾಲಿನೊಳಗಿನ ಸಂಖ್ಯೆಯು ಕೂಡ ಬಿದಬೇಕು.)

೬೧೦ ರ ವರ್ಗವು ೪೬೦೦೦+೧೨೦೦×೧೦+೧೦೦; ಮೊದಲನೇ ಎರಡು ಪದಗಳ ಬೇರೀಜು ವರ್ಗದ ಮುಖ್ಯ ಭಾಗವಾಗಿರುವದು.

ಎರಡನೇ ಮೆಟ್ಟಿನಲ್ಲಿ ಕೊಟ್ಟ ಸಂಖ್ಯೆಯೊಳಗಿಂದ ಕಳೆಯುವ ವರ್ಗವು ಕೆಲವೊಂದು ನೂರರ ಗಂಟು ಇರುವದರಿಂದ, ಕೊಟ್ಟ ಸಂಖ್ಯೆಯಲ್ಲಿ ಆಗುವ ನೂರರ ಗಂಟುಗಳನ್ನು ಬರೆದುಕೊಳ್ಳುವಾ.

$$\begin{array}{l|l} ೪೩೬೬೦೦ & ೬೫೦=೪೬೦೦೦+೧೨೫೦\times೫೦ \\ =೪೬೦೦೦ & \quad =೪೬೦೦೦+೬೨೫೦೦ \\ +೨೬೬೦೦ & \end{array}$$

೪೩೬೬೦೦ ಕ್ಕೆ ೬೧೦—೬೨೦—೬೩೦-....ಇತ್ಯಾದಿ ಸಂಖ್ಯೆಗಳ ವರ್ಗಗಳ ಮುಖ್ಯ ಭಾಗಗಳನ್ನು (ಮೇಲೆ ತೋರಿಸಿರುತ್ತದೆ) ಹಚ್ಚಿ ನೋಡಿದರೆ, ೬೬೦ ರ ವರ್ಗವು ಕೊಟ್ಟ ಸಂಖ್ಯೆಗಿಂತ ದೊಡ್ಡದಾಗುವದೆಂದು ಬಹು ಅಲ್ಪ ಪ್ರಯಾಸದಿಂದ ಗೊತ್ತಾಗುವದು. ಯಾಕಂದರೆ,

$$೬೬೦^2=೪೬೦೦೦+೧೨೦೦\times೬೦+\cdots$$
$$=೪೬೦೦೦+೭೨೦೦೦+\cdots$$

೬೫೦ ರ ವರ್ಗವನ್ನು ಕೊಟ ಸಂಖ್ಯೆಯಲ್ಲಿ ಆಗುವ ನೂರರ ಗಂಟಿಗೆ ಹಚ್ಚಿ ನೋಡಿದರೆ, ಇಷ್ಟ ವರ್ಗಮೂಲವು ೬೫೦ ಕ್ಕಿಂತ ಹೆಚ್ಚು ೬೬೦ ಕ್ಕಿಂತ ಕಡಿಮೆ ಇರುವದೆಂದು ಗೊತ್ತಾಯಿತು.

ಮೂರನೇ ಮೆಟ್ಟಿನಲ್ಲಿ ಕೊಟ್ಟ ಸಂಖ್ಯೆಯೊಳಗಿಂದ ಕಳೆಯುವ ವರ್ಗವು ಬಿಡಿಗಾಳುಗಳ ಗಂಟಿರುವದರಿಂದ ಇಡೀ ಸಂಖ್ಯೆಯಲ್ಲಿ ಆಗುವ ಬಿಡಿಗಾಳಿನ ಗಂಟುಗಳನ್ನು ಬರಕೊಳ್ಳೋಣ.

೪೩೧೬೪ = ೪೨೨೫೦೦ + ೯೧೪೪

೬೫೭ = ೪೨೨೫೦೦ + ೧೩೦೭ × ೭
= ೪೨೨೫೦೦ + ೯೧೪೪

ಇನ್ನು ಇಷ್ಟ ವರ್ಗಮೂಲವು ೬೫೦ ಕ್ಕಿಂತ ಹೆಚ್ಚು ಮತ್ತು ೬೬೦ ಕ್ಕಿಂತ ಕಡಿಮೆ ಇರುವದರಿಂದ ೬೫೧—೬೫೨—೬೫೩.....ಇತ್ಯಾದಿ ಸಂಖ್ಯೆಗಳ ವರ್ಗಗಳ ಮುಖ್ಯ ಭಾಗಗಳನ್ನು ಮೇಲೆ ತೋರಿಸಿದಂತೆ ಬರೆದು ಕೊಂಡು ನೋಡೋಣ.

೪೨೨೫೦೦ + { ೧೩೦೦ × ೧, ೧೩೦೦ × ೨, ೧೩೦೦ × ೩, ..., ..., ..., ೧೩೦೦ × ೮, ೧೩೦೦ × ೯ }

೪೩೧೬೪ ಕ್ಕೆ ೬೫೧—೬೫೨—೬೫೩—...ಇತ್ಯಾದಿ ಸಂಖ್ಯೆಗಳ ವರ್ಗಗಳ ಮುಖ್ಯ ಭಾಗಗಳನ್ನು ಹಚ್ಚಿನೋಡಿದರೆ, ೯೩೧೬೪ ಬಿಡಿಗಾಳಿನಗಂಟು ೬೫೮ ರ ವರ್ಗಕ್ಕಿಂತ ಕಡಿಮೆ ಇರುವದೆಂದು ಗೊತ್ತಾಗುವದು. ೬೫೭ ರ ವರ್ಗವನ್ನು ಕೊಟ್ಟ ಸಂಖ್ಯೆಯಲ್ಲಿ ಆಗುವ ಬಿಡಿಗಾಳಿನಗಂಟಿಗೆ ಹಚ್ಚಿನೋಡಿದರೆ ಎರಡೂ ಸರಿಯಾಗುವವು. ಅದ್ದರಿಂದ ಕೊಟ್ಟ ಸಂಖ್ಯೆಯ ವರ್ಗಮೂಲವು ೬೫೭.

ಮೇಲಿನ ಉದಾಹರಣೆಯಲ್ಲಿ ವಿವರಿಸಿದ ವರ್ಗಮೂಲ ತೆಗೆಯುವ ಕೃತಿಯು ರೂಢಿಯಲ್ಲಿ ಯಾವ ವಿಧದ ಸಂಕ್ಷೇಪವನ್ನು ಹೊಂದುವದೆಂಬದನ್ನು ಮುಂದಿನ ಲೇಖದಲ್ಲಿ ಕೊಡುವೆವು.

S. R. Tatti.

ಶಾಸ್ತ್ರೀಯ ಪ್ರಯೋಗಗಳು.

(ಜುಲೈ ೫ಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಸ್ವಚ್ಛ ಮಾಡುವದು.

I. ಕಾಜಿನ ಅಥವಾ ಚೀನೀಮಣ್ಣಿನ ಪಾತ್ರೆಗಳು:—

(೧) ಪೊಟಾಸಿಯಮ್ ಪರ್ಮ್ಯಾಂಗನೇಟದ ಸೊಲ್ಯೂಶನ್*ವನ್ನು ಪಾತ್ರೆಯಲ್ಲಿ ಹಾಕಿ ಸ್ವಲ್ಪ ಹೊತ್ತು ಅಲ್ಲಾಡಿಸಿದರೆ ಪಾತ್ರೆಗೆ ಅಂಟಿಕೊಂಡಿರುವ ಎಣ್ಣೆಯ ಜಿಗಟು ಸುಲಭವಾಗಿ ಹೊರಟು ಹೋಗುವದು.

(೨) ಟರ್ಪಂಟೈನ, ಚಿಮಣಿ ಎಣ್ಣೆ ಮೊದಲಾದವುಗಳು ಹತ್ತಿಕೊಂಡಿರುವ ಪಾತ್ರೆಗಳು ಸಲ್ಫ್ಯೂರಿಕ್ ಆಸಿಡ್ (ಗಂಧಕಾಮ್ಲ) ದಿಂದ ಸ್ವಚ್ಛವಾಗುವವು. ಪಾತ್ರೆಯ ಪ್ರತಿ ಒಂದು ಭಾಗಕ್ಕೂ ಸಲ್ಫ್ಯೂರಿಕ್ ಆಸಿಡ್‌ವು ಹತ್ತುವಂತೆ ಪಾತ್ರೆಯನ್ನು ಮೇಲೆ ಕೆಳಗೆ ತಿರುವತಕ್ಕದ್ದು. ಸುಮಾರು ೫ ನಿಮಿಷಗಳಾದ ಮೇಲೆ ನೀರು ಹಾಕಿ ತೊಳೆದರೆ ಮೊದಲಿನ ವಾಸನೆಯೆಲ್ಲ ಪೂರ್ಣವಾಗಿ ಹೋಗುವದು.

(೩) ಬಾಟ್ಲಿಗಳನ್ನು ತೊಡು ಮತ್ತು ನೀರು ಇವುಗಳನ್ನು ಹಾಕಿ ಚನ್ನಾಗಿ ಅಲ್ಲಾಡಿಸುವದರಿಂದಲೂ ಸ್ವಚ್ಛ ಮಾಡಬಹುದು.

(೪) ವಾಶಿಂಗ ಸೋಡಾ† ಅಥವಾ ಹಪ್ಪಳಕಾರದ ಸೊಲ್ಯೂಶನ್‌ವನ್ನು ಪಾತ್ರೆಗಳಲ್ಲಿ ಕೆಲವು ಹೊತ್ತು ಹಾಕಿಟ್ಟರೆ ಹೊಲಸು ಪದಾರ್ಥಗಳೂ ಎಣ್ಣೆಯ ಜಿಗಟೂ ಅದರಲ್ಲಿ ಕರಗುವದರಿಂದ ಆ ಪಾತ್ರೆಗಳು ಸುಲಭವಾಗಿ ಸ್ವಚ್ಛವಾಗುವವು.

"ಜಹಾದ ಕಪ್" ಗಳನ್ನು ಈ ರೀತಿಯಿಂದ ಹೊಸವಾಗಿ ಕಾಣುವಂತೆ ಮಾಡಬಹುದು:—ಅವುಗಳನ್ನು ಸುಮಾರು ೬—೧೦ ತಾಸುಗಳ ತನಕ ಆ ಸೊಲ್ಯೂಶನ್‌ದಲ್ಲಿ ಮುಳುಗಿಸಿಡತಕ್ಕದ್ದು. ಇಲ್ಲವೆ ೧ತೊಲೆ ಹಪ್ಪ

---

*ಯಾವದೊಂದು ಪದಾರ್ಥವು ಪ್ರಾದರ್ಶಕವಾದ ಪ್ರವಾಹಿಯಲ್ಲಿ ಕರಗಿಯುಂಟಾಗುವ ಪಾರದರ್ಶಕ ಮಿಶ್ರಣಕ್ಕೆ ಸೊಲ್ಯೂಶನ್ ಎನ್ನುವರು. ಉದಾ:—ಸಕ್ಕರೆಯು ನೀರಿನಲ್ಲಿ ಕರಗಿ ಸಕ್ಕರೆಯ ಸೊಲ್ಯೂಶನ್‌ವು ತಯಾರಾಗುತ್ತದೆ.

†ವಾಶಿಂಗ ಸೋಡಾ ಮತ್ತು ಹಪ್ಪಳಕಾರ ಇವುಗಳಲ್ಲಿ ವಿಶೇಷ ಭೇದವೇನೂ ಇಲ್ಲ. ಒಂದೇ ಬದಲಾಗಿ ಇನ್ನೊಂದನ್ನು ಉಪಯೋಗಿಸಬಹುದು.

ಳಕಾರವನ್ನು ಅಥವಾ ವಾಶಿಂಗ ಸೋಡಾವನ್ನು ಪುಡಿಮಾಡಿ, ೨ ಅಥವಾ ೩ ತೊಲೆ ಬಿಸಿನೀರಿನಲ್ಲಿ ಬೆರಿಸಿ, ಆ ಮಿಶ್ರಣವನ್ನು ಒಂದು ಬ್ರುಶ್‌ದಿಂದ ಎಲ್ಲ ಭಾಗಕ್ಕೂ ತಿಕ್ಕಬೇಕು. ಅಂದರೆ ಅಂಟಿಕೊಂಡ ಪದಾರ್ಥವೆಲ್ಲ ಸ್ವಲ್ಪ ಹೊತ್ತಿನಲ್ಲಿ ಹೋಗುವದು, ಬಳಿಕ ಸ್ವಚ್ಛವಾದ ನೀರಿನಲ್ಲಿ ತೊಳೆಯಬೇಕು.

(೫) ದಟ್ಟ ಹಾಲಿನ ಹಾಗೆ ಆಗುವಂತೆ ಸುಂಣ ನೀರುಗಳನ್ನು ಬೆರಿಸಿ ಆ ಮಿಶ್ರಣವನ್ನು ಪಾತ್ರೆಯೊಳಗೆ ಸುರವಿ, ಎಲ್ಲ ಭಾಗಕ್ಕೂ ತಾಗುವಂತೆ ಪಾತ್ರೆಯನ್ನು ಅಲ್ಲಾಡಿಸತಕ್ಕದ್ದು. ಸುಮಾರು ೫ ಮಿನಿಟುಗಳ ಮೇಲೆ ಅದನ್ನು ಹೊರಗೆ ಚಲ್ಲಿ ಸ್ವಚ್ಛವಾದ ನೀರಿನಿಂದ ತೊಳೆಯತಕ್ಕದ್ದು. ಕಂದೀಲು, ಕನ್ನಡಿ, ಗಡಿಯಾಳ, ಮೊದಲಾದವುಗಳ ಕಾಜಿನ ಹಾಳಿಗಳನ್ನು ಸ್ವಚ್ಛಮಾಡಲಿಕ್ಕೆ ಮುದ್ದಿ ಸುಂಣವನ್ನು ತೆಗೆದುಕೊಳ್ಳಬೇಕು. ಅಂದರೆ ಜಿಗಟಾಗಿರುವ ಸುಂಣವನ್ನು ಒಂದು ಸಣ್ಣ ಅರಿವೆಯ ತುಂಡಿನಿಂದ ಎಲ್ಲ ಭಾಗಕ್ಕೂ ತಾಗಿಸಿ ಒಂದೆರಡು ಮಿನಿಟುಗಳ ತನಕ ಇಡತಕ್ಕದ್ದು. ಈ ಲೇಪವು ಪೂರ್ಣ ಒಣಗುವದರೊಳಗಾಗಿಯೇ ಅದನ್ನು ಇನ್ನೊಂದು ಅರಿವೆಯ ಸಹಾಯದಿಂದ ತೆಗೆದು ಹಾಕತಕ್ಕದ್ದು. ಸುಂಣವು ಒಣಗಿ ಕಾಜಿನ ಹಾಳಿಗೆ ಅಂಟಿಕೊಂಡರೆ ಅರಿವೆಯನ್ನು ನೀರಿನಲ್ಲಿ ಎದ್ದಿಕೊಳ್ಳಬಹುದು.

(೬) ಬಿಳೀ ಬೂದಿ, ಮತ್ತು ಇದ್ದಲಿಯ ಪುಡಿಗಳನ್ನು ನೀರಿನಲ್ಲಿ ಬೆರಿಸಿ ಪಾತ್ರೆಯಲ್ಲಿ ಹಾಕಿ ಅಲ್ಲಾಡಿಸುವದರಿಂದ ಪಾತ್ರೆಗಳನ್ನು ಸ್ವಚ್ಛಮಾಡಬಹುದು.

(೭) ಫೊಟೋಗ್ರಾಫಿಯಂಥ ಕೆಲಸಗಳ ದೆಸೆಯಿಂದ ಸ್ವಚ್ಛವಾದ ಕಾಜಿನಹಾಳಿಯು ಬೇಕಾದಾಗ, ಅದನ್ನು ಈ ಪ್ರಕಾರ ಸ್ವಚ್ಛಮಾಡಬಹುದು:—ಕ್ಯಾಸ್ಟಿಕ್ ಸೋಡಾದ ಸೊಲ್ಯೂಶನ್‌ದಲ್ಲಿ ಒಂದೆರಡು ಮಿನಿಟುಗಳ ತನಕ ಅದನ್ನು ಇಟ್ಟು, ನೀರಿನಲ್ಲಿ ಅದನ್ನು ಮುಳುಗಿಸಿ ತೆಗೆದು, ನೈಟ್ರಿಕ್ ಆಸಿಡ್‌ದ ಕೆಲವು ಹನಿಗಳನ್ನು ಅದರ ಮೇಲೆ ಸುರುವತಕ್ಕದ್ದು.

ಆಮೇಲೆ ಅದನ್ನು ಕೈಯಿಂದ ಮುಟ್ಟದೆ, ನೀರಿನಲ್ಲಿ ಸ್ವಚ್ಛವಾಗಿ ತೊಳೆದು ನೀರೆಲ್ಲ ಇಳಿದು ಹೋಗುವಂತೆ ಅಂಚಿನ ಮೇಲೆ ನಿಲ್ಲಿಸಬೇಕು. ನೀರೆಲ್ಲ ಒಣಗಿದ ಮೇಲೆ "ಫ್ರೆಂಚ್ ಚಾಕ್" ಎಂಬ ಖಡುವಿನ ಅತಿ ಸೂಕ್ಷ್ಮ

ವಾದ ಪುಡಿಯನ್ನು ಆ ಹಾಳಿಯ ಮೇಲೆ ಹಾಕಿ ಸ್ವಚ್ಛವಾದ ಅರಿವೆಯಿಂದ ತಿಕ್ಕಬೇಕು. ಕಾಜಿನ ಹಾಳಿಯು ಎಲ್ಲಿ ಸ್ವಚ್ಛವಾಗಿರುವದೋ ಅಲ್ಲಿ ಅದು ಅಂಟಿಕೊಳ್ಳುವದಿಲ್ಲ. ಅದು ಅಂಟಿಕೊಳ್ಳುವಲ್ಲಿ ಇನ್ನಿಷ್ಟು ಪುಡಿ ಹಾಕಿ ತಿಕ್ಕಬೇಕು. ಬಳಿಕ ಅದನ್ನು ಸ್ವಚ್ಛವಾದ ಅರಿವೆಯಿಂದ ಒರಿಸಿದರೆ ಕಾಜಿನ ಹಾಳಿಯು ಅತಿ ಸ್ವಚ್ಛವಾಗುವದು.

II ತಾಮ್ರದ ಹಾಗೂ ಹಿತ್ತಾಳಿಯ ಸಾಮಾನಗಳು

ಈ ಸಂಬಂಧದಿಂದ ನಾವು ಲಕ್ಷದಲ್ಲಿಡತಕ್ಕ ಸಂಗತಿಗಳು ಯಾವ ವೆಂದರೆ:—

(ಅ) ಪಾತ್ರೆಗೆ ಅಂಟಿಕೊಂಡಿರುವ ಎಣ್ಣೆಯ ಜಿಗಟನ್ನೂ, ಹೊಲಸು ಪದಾರ್ಥಗಳನ್ನೂ ತೆಗೆದು ಹಾಕುವದು. (ಬ) ಪಾತ್ರೆಗೆ ಅಂಟಿಕೊಂಡಿರುವ ಬೇರೆ ಬೇರೆ ಬಣ್ಣದ ಆಕ್ಸಾಯ್ಡುಗಳನ್ನು (ಜಂಗು) ತೆಗೆದು ಹಾಕುವದು. (ಕ) ಪಾತ್ರೆಯ ಸ್ವಾಭಾವಿಕ ಬಣ್ಣವು ಕುಂದದಂತೆ ಮಾಡುವದು.

(ಅ) ಎಣ್ಣೆಯ ಜಿಗಟನ್ನೂ, ಹೊಲಸು ಪದಾರ್ಥಗಳನ್ನೂ ಹಲವು ಬಗೆಗಳಿಂದ ತೆಗೆದು ಹಾಕಬಹುದು ಅವುಗಳಲ್ಲಿ ನಮ್ಮ ಜನರಿಗೆ ಬಹಳ ಅನುಕೂಲವಾಗಿರುವ ಬಗೆಗಳಾವವೆಂದರೆ:—(೧) ಹಪ್ಪಳಕಾರದ ಸೊಲ್ಯೂಶನ್ ಮತ್ತು ಸಬಕಾರ ಇವುಗಳಲ್ಲಿ ಒಂದನ್ನು ಇಲ್ಲವೆ ಇವೆರಡರ ಮಿಶ್ರಣವನ್ನು ಪಾತ್ರೆಗೆ ಹಚ್ಚಿ ತೊಳೆದರೆ ಎಣ್ಣೆಯ ಜಿಗಟು ಹೋಗುವದು. (೨) ಹಪ್ಪಳಕಾರದಲ್ಲಿ ಸ್ವಲ್ಪ ಸುಂಣವನ್ನು ಬೆರಿಸಿ ಉಂಟಾದ ಮಿಶ್ರಣವನ್ನು ಉಪಯೋಗಿಸಬಹುದು.

(ಬ) ಪಾತ್ರೆಗೆ ಅಂಟಿಕೊಂಡಿರುವ ವಸುಮಸುಕಾಗಿ ಕಾಣುವ ಆಕ್ಸಾಯ್ಡು (ಜಂಗು) ಗಳನ್ನು ತೆಗೆದು ಹಾಕಲಿಕ್ಕೆ ಹಲವು ರೀತಿಗಳುಂಟು. ಈ ಕೆಲಸದಲ್ಲಿ ಉಪಯೋಗಿಸಲ್ಪಡುವ ಪದಾರ್ಥಗಳೆಲ್ಲವೂ ಬಹುತರವಾಗಿ ಆಮ್ಲಗಳು ಅಥವಾ ಹುಳಿ ಪದಾರ್ಥಗಳು (ಬಹುಶಃ ಎಲ್ಲ ತರದ ಹುಳಿ ಪದಾರ್ಥಗಳು) ಇರಬಹುದು. ಈ ಹುಳಿಗಳ ತೀಕ್ಷ್ಣತೆಯು ಹೆಚ್ಚು ಕಡಿಮೆ ಇದ್ದಂತೆ ವೇಳೆಯು ಕಡಿಮೆ ಹೆಚ್ಚು ಬೇಕಾಗುತ್ತದೆ. ಉಪಯೋಗಿಸಬಹುದಾದ ಪದಾರ್ಥಗಳು:—(೧) ನೈಟ್ರಿಕ್ ಆಸಿಡ್ (೨)ಎರಡು ಪಾಲುನೈಟ್ರಿಕ್ ಆಸಿಡ್+ಒಂದು ಪಾಲು ಸಲ್ಫ್ಯೂರಿಕ್ ಆಸಿಡ್

ಹೈಡ್ರೋಕ್ಲೋರಿಕ್ ಆಸಿಡ್ (ಮ್ಯುರ್ಯಾಟಿಕ್ ಆಸಿಡ್) + ಪಟಕದ ಸೊಲ್ಯೂಶನ್ (ಳ) ಒಗ್ಜಾಲಿಕ್* ಆಸಿಡ್ (ಜ) ಲಿಂಬಿಹುಳಿ + ಸ್ವಚ್ಛವಾದ ಉಪ್ಪು (ಟ) ಹುಣಸೇಹಣ್ಣು + ಉಪ್ಪು (ಒ) ಹುಳಿಯೂದ ಮಜ್ಜಿಗೆ (ಲ) ಕಡಲೆಸು ಹುಳಿ (ಗ) ಒಂದು ಪಾಲು ಪೊಟ್ಯಾಸಿಯಮ್ ಬಾಯಕ್ರೋಮೇಟ್ + ಎರಡು ಪಾಲು ಸಲ್ಫ್ಯೂರಿಕ್ ಆಸಿಡ್ + ಎರಡು ಪಾಲು ನೀರು.

(ಕ) ತಾಮ್ರದ ಅಥವಾ ಹಿತ್ತಾಳೆಯ ಪಾತ್ರೆಗಳು ಹವೆಯ ಸಂಗಡ, (ವಿಶೇಷವಾಗಿ ತೇವ ಹವೆಯ ಸಂಗಡ,) ರಸಾಯನ ವ್ಯಾಪಾರವನ್ನು ನಡಿಸಿ ಜಂಗು ತಿನ್ನುವದರಿಂದ ಅವುಗಳ ಸ್ವಾಭಾವಿಕ ಬಣ್ಣವು ಕುಂದುತ್ತದೆ. ಅವುಗಳ ಮೇಲ್ಮೈಯು ಹುರಬರಕಾಗಿದ್ದರೆ ಬಹುಬೇಗ ಜಂಗು ತಿನ್ನುವವು. ಬಹಳ ನುಣುಪಾಗಿದ್ದರೆ ಈ ಕಾರ್ಯವು ಬಹಳ ಸಾವಕಾಶವಾಗಿ ನಡೆಯುವದು. ಆದ್ದರಿಂದ ಅವುಗಳ ಬಣ್ಣವು ಕುಂದದಂತೆ ಕೆಳಗೆ ಹೇಳಿದ ಮುಂಜಾಗ್ರತೆಗಳನ್ನು ತೆಗೆದುಕೊಳ್ಳಬಹುದು.

(ಅ) ಸ್ವಚ್ಛಮಾಡಿದ ಪಾತ್ರೆಗಳನ್ನು ಚನ್ನಾಗಿ ಒರಿಸಿ ಪಾಲಿಶ್ ಮಾಡತಕ್ಕದ್ದು. ಪಾಲಿಶ್ ಮಾಡಲಿಕ್ಕೆ (೧) ಸೂಕ್ಷ್ಮವಾದ ಖಡುವಿನ ಪುಡಿಯು ಉತ್ತಮವಾದದ್ದು. ಇಲ್ಲವೆ, (೨) ಸೂಕ್ಷ್ಮವಾಗಿ ಪುಡಿಮಾಡಿದ ಇಟ್ಟಂಗಿಯ ಪುಡಿ. (೩) ಸೂಕ್ಷ್ಮವಾದ ಮಣ್ಣು. (೪) ಸ್ವಚ್ಛವಾದ ಕುಳ್ಳಿನ ಬೂದಿ. (೫) ಇದ್ದಲಿಯ ಪುಡಿ. (೬) ಕೆಂಪು ಆಯರ್ನ್ ಆಕ್ಸಾಯಿಡ್.

(ಬ) ಪಾಲಿಶ್ ಮಾಡಿದ ನಂತರ ಹವೆಯ ಸಂಪರ್ಕವಾಗದಂತೆ ಒಂದು ಪಾರದರ್ಶಕವಾದ ತೆಳ್ಳನ್ನ ಆಚ್ಛಾದನವನ್ನು ಹಾಕತಕ್ಕದ್ದು. ಇದಕ್ಕಾಗಿ ವೇಸ್ಲಿನ್‌ವನ್ನಾಗಲಿ, ಕೊಬ್ಬರಿ ಎಣ್ಣೆಯನ್ನಾಗಲಿ, ಚಿಮಣಿ ಎಣ್ಣೆಯನ್ನಾಗಲಿ, ಉಪಯೋಗಿಸಬಹುದು. ಇವುಗಳನ್ನು ಒಂದು ಸಣ್ಣ ಅರಿವೆಯ ತುಂಡಿನ ಸಹಾಯದಿಂದ ಹಚ್ಚಿ, ಬಳಿಕ ಸ್ವಚ್ಛವಾದ ಅರಿವೆಯಿಂದ ಚನ್ನಾಗಿ ಒರಿಸಿ ಬಿಡಬೇಕು. ಹೆಚ್ಚು ಕಷ್ಟಕರವಾದದ್ದಾದರೂ ಸ್ಥಿರವಾದದ್ದು ಯಾವದೆಂದರೆ:— "ಲ್ಯಾಕರ್" ಎಂಬ ಪದಾರ್ಥದ

* ಈ ಆಮ್ಲವು ಸ್ವಚ್ಛ ಮಾಡುವ ಕೆಲಸಕ್ಕೆ ಉತ್ತಮವಾಗಿದ್ದರೂ ವಿಷಕಾರಕಪದಾರ್ಥ ವಿರುವದರಿಂದ ಇದರ ಬಗ್ಗೆ ಎಚ್ಚರವಿರತಕ್ಕದ್ದು.

ಲೇಪಮಾಡುವದು. ಈ ಕ್ರಮದ ವಿಶೇಷ ವಿವರಣೆಯನ್ನು ನಾವು ಮುಂದಿನ ಲೇಖನಗಳಲ್ಲೊಂದರಲ್ಲಿ ಕೊಡುವೆವು. ಈಗ ಅದರ ಸಂಬಂಧವಾಗಿ ಸ್ವಲ್ಪ ಹೇಳುವದೇನಂದರೆ:— ಶೆಲ್ಯಾಕ್ (ಬಂಣದ ಅರಗು) ಎಂಬ ಪದಾರ್ಥವನ್ನು ಮದ್ಯಾರ್ಕದಲ್ಲಿ ಕರಗಿಸಿ, ಬೇಕಾದ ಬಣ್ಣವನ್ನು ಅದರಲ್ಲಿ ಬೆರಿಸಿ ಲ್ಯಾಕರವನ್ನು ತಯಾರಿಸುವರು. ಇದನ್ನು ಪಾತ್ರೆಗಳಿಗೆ ಬ್ರುಶ್ಶಿನ ಸಹಾಯದಿಂದ ನುಣುಪಾಗುವಂತೆ ಹಚ್ಚತಕ್ಕದ್ದು. ಹೀಗೆ ಲೇಪನ ಮಾಡಿದ ಪಾತ್ರೆಗಳ ಬಣ್ಣವು ಲೇಪವು ಹೋಗುವ ವರೆಗೆ ಎಂದಿಗೂ ಕುಂದುವದಿಲ್ಲ.

ಮೇಲೆ ಹೇಳಿದ ಜಂಗು ಬಿಡಿಸಲಿಕ್ಕೆ ಉಪಯೋಗಿಸುವ ಆಮ್ಲಗಳಲ್ಲಿ ಕೆಲವು, ಜಂಗಿನ ಮೇಲಷ್ಟೇ ಅಲ್ಲದೆ ಧಾತುಗಳ ಮೇಲೆ ಸಹ ರಸಾಯನ ವ್ಯಾಪಾರವನ್ನು ನಡಿಸಿ, ಪಾತ್ರೆಗಳನ್ನು ಬಹು ಬೇಗ ಸವಿಸುವವು. ಮತ್ತು ಹೆಚ್ಚು ಹೆಚ್ಚು ಧಾತುವು ಸವಿದು ಹೋದಂತೆ ಆ ಪಾತ್ರೆಯ ಮೈಯು ಹೆಚ್ಚು ಹೆಚ್ಚು ಹುರುಬರಕಾಗುವದು. ಆದ್ದರಿಂದ ಆಮ್ಲವನ್ನು ಹಚ್ಚುವಾಗ ಧಾತುಗಳ ಸ್ವಾಭಾವಿಕ ಬಣ್ಣವು ಕಂಡ ಕೂಡಲೆ ಪಾತ್ರೆಯನ್ನು ನೀರಿನಲ್ಲಿ ಮುಳುಗಿಸಿ ಆಮ್ಲವು ಹೊರಟುಹೋಗುವಂತೆ ಮಾಡಬೇಕು. ಮೇಲೆ ಹೇಳಿದ ಆಮ್ಲಗಳಲ್ಲಿ (೧), (೨), (೩), (೪) ಇವುಗಳ ಕಾರ್ಯವು ಬಲು ಒತ್ತರದಿಂದ ನಡೆಯುತ್ತದೆ.

ಪಾತ್ರೆಗಳನ್ನು ಸ್ವಚ್ಛ ಮಾಡುವ ಅ, ಬ, ಕ, ಎಂಬ ಮೂರು ಬೇರೆ ಬೇರೆ ಮಿಟ್ಟುಗಳನ್ನು ಯಾವಾಗಲೂ ಬೇರೆ ಬೇರೆಯಾಗಿ ನಡಿಸಬೇಕೆಂತಿಲ್ಲ. ಒಂದೇ ಕ್ರಮದಲ್ಲಿ ಎರಡು ಇಲ್ಲವೆ ಮೂರು ಉದ್ದೇಶಗಳನ್ನು ಸಾಧಿಸಿಕೊಳ್ಳ ಬಹುದು.

(೧) ಹಪ್ಪಳಕಾರದಲ್ಲಿ ಸುಣ್ಣ ನೀರುಗಳನ್ನು ಬೆರಿಸಿ ಉಂಟಾದ ಮಿಶ್ರಣದಲ್ಲಿ ಪಾತ್ರೆಗಳನ್ನು ತೊಳೆದು ಉಪ್ಪು ಮತ್ತು ಯಾವದೊಂದು ಹುಳಿಯ ಮಿಶ್ರಣದಿಂದ ಪಾತ್ರೆಗಳನ್ನು ತಿಕ್ಕಿ, ತೊಳೆದು, ಕೂಡಲೆ ಅದನ್ನು ಸ್ವಚ್ಛ ಅರಿವೆಯಿಂದ ಚನ್ನಾಗಿ ಒರಿಸತಕ್ಕದ್ದು. ಆ ಮೇಲೆ ಸ್ವಚ್ಛವಾದ ಬೂದಿ ಅಥವಾ ಮಣ್ಣಿನಲ್ಲಿ ಸ್ವಲ್ಪ ಚಿಮಣೀ ಎಣ್ಣೆಯನ್ನು ಬೆರಿಸಿ ಒಳಿತಾಗಿ ತಿಕ್ಕಿದರೆ ಪಾತ್ರೆಗಳು ಝಳ ಝಳವಾಗಿ ಹೊಳೆಯುವವು.

(೨) ಹಿತ್ತಾಳೆಯ ಪಾತ್ರೆಗಳನ್ನು ಹೈಡ್ರೋಕ್ಲೋರಿಕ್ ಆಸಿಡ್, ವಟಕ, ನೀರು ಇವುಗಳ ಮಿಶ್ರಣದಲ್ಲಿ ಮುಳುಗಿಸಿ ತೆಗೆದರೆ ಅಥವಾ ಮಿಶ್ರ

ಣವನ್ನು ಒಂದು ಉಣ್ಣೆಯ ಅರಿವೆಯ ಸಹಾಯದಿಂದ ಹಚ್ಚಿ ಕೂಡಲೆ ನೀರಿನಿಂದ ತೊಳೆದರೆ ಅವುಗಳಿಗೆ ಬಂಗಾರದ ಬಣ್ಣವು ಬರುವದು. ನಂತರ ಪಾತ್ರೆಯನ್ನು ಕೂಡಲೆ ಅರಿವೆಯಿಂದ ಒರಿಸಿ ಇಟ್ಟಂಗಿಯ ಸೂಕ್ಷ್ಮವಾದ ಹುಡಿ ಮತ್ತು ಎಣ್ಣೆಯ ಮಿಶ್ರಣದಿಂದ ಪಾಲಿಶ್ ಮಾಡ ತಕ್ಕದ್ದು.

(೩) ಹುರುಬರಕಾವ ಪಾತ್ರೆಗಳನ್ನು ಪಾಲಿಶ್ ಮಾಡುವದು ಹೇಗಂದರೆ— ಮಸೆಯುವ ಕಲ್ಲಿನ ಸೂಕ್ಷ್ಮವಾದ ಪುಡಿಯಲ್ಲಿ ಅಥವಾ ಸೂಕ್ಷ್ಮವಾವ ಉಸುಬಿನಲ್ಲಿ ದಟ್ಟ ಸಬಕಾರದ ನೀರನ್ನು ಬೆರಿಸಿ ಪಾತ್ರೆಯನ್ನು ತಿಕ್ಕಿ ಆ ಮೇಲೆ ಖಡುವಿನ ಪುಡಿ ಮತ್ತು ಎಣ್ಣೆ ಇವುಗಳ ಮಿಶ್ರಣದಿಂದ ತಿಕ್ಕತಕ್ಕದ್ದು.

(೪) ೨ ಪಾಲು ಸೂಕ್ಷ್ಮವಾವ ತೌಡನ್ನು ೧ ಪಾಲು ಒಗ್ಗ್ಯಾಲಿಕ್ ಆಸಿಡದ ಪುಡಿಯಲ್ಲಿ ಬೆರಿಸಿದರೆ, ಹಿತ್ತಾಳೆಯನ್ನು ಪಾಲಿಶ್ ಮಾಡುವ ಪುಡಿಯು ತಯಾರಾಗುವದು.

III ಬೆಳ್ಳಿಯ ಹಾಗೂ ಬಂಗಾರದ ಸಾವಾನುಗಳು:—

(೧) ಬಣ್ಣವು ಕುಂದಿದ ಬೆಳ್ಳಿಯ ಅಥವಾ ಬಂಗಾರದ ಸಾಮಾನುಗಳನ್ನು ಸ್ವಚ್ಛ ಮಾಡಿ ಹೊಸವು ಕಾಣುವಂತೆ ಮಾಡುವದು:— ಸ್ವಲ್ಪ ಹಪ್ಪಳಕಾರದಲ್ಲಿ ತುಸು ಸುಣ್ಣದ ನೀರನ್ನು ಬೆರಿಸಿ ಆ ಮಿಶ್ರಣದಿಂದ ಸ್ವಚ್ಛ ಮಾಡತಕ್ಕ ಪದಾರ್ಥವನ್ನು ತೊಳೆಯಬೇಕು. ಆ ಮೇಲೆ ಅದನ್ನು ನೀರಿನಿಂದ ತೊಳೆದು ೧ ಪಾಲು ಉಪ್ಪು, ೧ ಪಾಲು ಪಟಕ, ೨ ಪಾಲು ಸೋರುಪ್ಪು, ೪ ಪಾಲು ನೀರು ಇವುಗಳ ಮಿಶ್ರಣದಲ್ಲಿ ಸುಮಾರು ೫ ಮಿನಿಟುಗಳ ತನಕ ಇಟ್ಟ ಮೇಲೆ ಹೊರಗೆ ತೆಗೆದು ಚನ್ನಾಗಿ ತೊಳೆದು ಅರಿವೆಯಿಂದ ಒರಿಸಬೇಕು.

(೨) ೨ ಪಾಲು ಟಾರ್ಟರಿಕ್ ಆಸಿಡ್ + ೨ ಪಾಲು ಖಡುವಿನ ಪುಡಿ+೧ ಪಾಲು ಪಟಕದ ಪುಡಿ. ಈ ಮಿಶ್ರಣವು ಅಗ್ಗವಾದದ್ದಲ್ಲದೆ ಬೆಳ್ಳಿ ಬಂಗಾರದ ಸಾಮಾನುಗಳನ್ನು ತೀವ್ರವಾಗಿ ಸ್ವಚ್ಛಮಾಡುವಂಥಾದ್ದಿರುವದು.

(೩) ಬೆಳ್ಳಿಯ ಅಥವಾ ಬಂಗಾರದ ಆಭರಣಗಳನ್ನು ಸಬಕಾರದ ನೀರಿನಲ್ಲಿ ಹಾಕಿ ಸುಮಾರು ಅರ್ಧಗಳು ಮಿನಿಟುಗಳ ತನಕ ಕುದಿಸಿದರೆ

ಅವು ಅಂದವಾಗಿ ಕಾಣುವವು. ಸಬಕಾರದ ನೀರಿನಿಂದ ಚನ್ನಾಗಿ ತೊಳೆಯುವದರಿಂದಲೂ ಅವು ಸ್ವಚ್ಛವಾಗುವವು.

(೪) ಸೂಕ್ಷ್ಮವಾದ ಖಡುವಿನ ಪುಡಿಯಲ್ಲಿ ಸ್ವಲ್ಪ ಮದ್ಯಾರ್ಕವನ್ನು ಬೆರಿಸಿ, ಈ ಮಿಶ್ರಣವನ್ನ ಸ್ವಚ್ಛಮಾಡತಕ್ಕ ಪದಾರ್ಥಕ್ಕೆ ಲೇಪಿಸಿ, ಲೇಪವು ಒಣಗಿದ ಮೇಲೆ ಅದನ್ನು ಬ್ರುಶ್ಶಿನ ಸಹಾಯದಿಂದ ತೆಗೆದು ಹಾಕಿ ಸ್ವಚ್ಛ ಅರಿವೆಯಿಂದ ತಿಕ್ಕತಕ್ಕದ್ದು.

(೫) ಖಡುವಿನ ಅತಿಸೂಕ್ಷ್ಮವಾದ ಪುಡಿಯು ಬೆಳ್ಳಿ ಅಥವಾ ಬಂಗಾರದ ಸಾವಾನುಗಳನ್ನು ಪೌಲಿಶ್ ಮಾಡಲಿಕ್ಕೆ ಅತ್ಯುತ್ತಮವಾದದ್ದು. ಅದರಲ್ಲಿ ಕೆಂಪು ಆಯರ್ನ್ ಆಕ್ಸಾಯ್ಡನ್ನು ೧೦ : ೧ ಪ್ರಮಾಣದಂತೆ ಬೆರಿಸಿದರೆ ಇನ್ನಿಷ್ಟು ಉತ್ತಮವಾದ ಪೌಲಿಶ್ ಪುಡಿಯು ತಯಾರಾಗುತ್ತದೆ. ಬೆಳ್ಳಿಯನ್ನು ಪೌಲಿಶ್ ಮಾಡಲಿಕ್ಕೆ ಟಾರ್ಟರಿಕ್ ಆಸಿಡವನ್ನು ಬೆರಿಸುವದುಂಟು. ಆದರೆ ಇದು ಅಷ್ಟೇನು ಅವಶ್ಯವಿಲ್ಲ. ಆಯರ್ನ್ ಆಕ್ಸಾಯ್ಡದಲ್ಲಿ ಅಥವಾ ಖಡುವಿನ ಪುಡಿಯಲ್ಲಿ ಉಸುಬಿನಂಥ ಗೆರೆಯನ್ನುಂಟು ಮಾಡುವ ಪದಾರ್ಥಗಳು ಕೂಡಿರಬಾರದು.

ಕೆಂಪು ಆಯರ್ನ್ ಆಕ್ಸಾಯ್ಡವು ಬೆಳ್ಳಿ ಬಂಗಾರಗಳನ್ನು ಪೌಲಿಶ ಮಾಡಲಿಕ್ಕೆ ಅತ್ಯುತ್ತಮವಾದ ಪದಾರ್ಥವಿರುವದರಿಂದ ಅದನ್ನು ತಯಾರಿಸುವ ಕೃತಿಯನ್ನು ಇಲ್ಲಿ ಕೊಡಬಹುದು.

(ಅ) ಆಯರ್ನ್ ಸಲ್ಫೇಟನ್ನು (ಹಿರಾಕಸ್) ಒಂದು ಹಂಚಿನ ಮೇಲೆ ಹಾಕಿ ಒಳಿತಾಗಿ ಕಾಸುವದರಿಂದ ಅದರಲ್ಲಿರುವ ಸಲ್ಫ್ಯೂರಿಕ್ ಆಸಿಡದ ಭಾಗವು ಹೊರಟು ಹೋಗಿ ಕೆಂಪು ಬಣ್ಣದ ಆಯರ್ನ್ ಆಕ್ಸಾಯ್ಡವು ಉಳಿಯುವದು.

(ಬ) ಆಯರ್ನ್ ಸಲ್ಫೇಟದ ಸೊಲ್ಯೂಶನದಲ್ಲಿ ಎಮೋನಿಯಮ್ ಒಗ್ಸೆಲೇಟದ ಸೊಲ್ಯೂಶನವನ್ನು ಬೆರಿಸುವದರಿಂದ ಆಯರ್ನ್ ಒಗ್ಸೆಲೇಟ ಎಂಬ ಹಳದೀ ಬಣ್ಣದ ಪದಾರ್ಥವು ತಯಾರಾಗುವದು. ಇದನ್ನು ಅದರ ಸಂಗಡಲೇ ಬೆರೆತಿರುವ ಪ್ರವಾಹಿಯಿಂದ ವಿಂಗಡಿಸಿ ನೀರಿನಿಂದ ಒಂದೆರಡು ಸಾರೆ ತೊಳೆದು ಒಣಗಿಸಿ ಆ ಮೇಲೆ ಕಾಸತಕ್ಕದ್ದು. ಕೆಲ ಹೊತ್ತಿನಲ್ಲಿ ಕೆಂಪು ಬಣ್ಣದ ಆಯರ್ನ್ ಆಕ್ಸಾಯ್ಡವು ತಯಾರಾಗುವದು.

IV ಬೆಳ್ಳಿಯ ಸಾಮಾನುಗಳು.

(೧) ಬೆಳ್ಳಿಯ ಸಾಮಾನುಗಳ ಮೇಲಿನ ಕಪ್ಪು ಕಲೆಗಳನ್ನು ಸ್ವಲ್ಪ ಉಪ್ಪಿನಿಂದ ತಿಕ್ಕಿ ತೆಗೆದು ಹಾಕಬಹುದು. ಮಸಿ (ಶಾಯಿ)ಯಿಂದ ಕಲೆಯು ಉಂಟಾಗಿದ್ದರೆ ಸ್ವಲ್ಪ ಸುಣ್ಣವನ್ನು ಅದರಲ್ಲಿ ಬೆರಿಸತಕ್ಕದ್ದು.

(೨) ಬೆಳ್ಳಿಯ ಸಾಮಾನುಗಳನ್ನು ಮೊದಲು ಕೆಂಡದ ಮೇಲೆ ಅಥವಾ ಮದ್ಯಾರ್ಕದ ದೀಪದ ಮೇಲೆ ಕಾಸಿ* ಆ ಮೇಲೆ ನೀರು ಬೆರಿಸಿದ ಸಲ್ಫ್ಯೂರಿಕ್ ಆಸಿಡದಲ್ಲಿ (೩೦ ಪಾಲು ನೀರು + ೧ ಪಾಲು ಸ. ಆಸಿಡ್) ಸುಮಾರು ನಾಲ್ಕೈದು ನಿನಿಟುಗಳ ತನಕ ಕುದಿಸಿದರೆ ಅವು ಹಾಲಿನಂತೆ ಬೆಳ್ಳಗಾಗುವವು. ನಂತರ ಅವುಗಳನ್ನು ನೀರಿನಿಂದ ತೊಳೆದು ಖಡುವಿನ ಪುಡಿಯಿಂದ ಪಾಲಿಶ್ ಮಾಡತಕ್ಕದ್ದು.

(೩) ೧ ಪಾಲು ಪೊಟಾಸಿಯಮ್ ಸಾಯನಾಯ್ಡನ್ನು† ೮ ಪಾಲು ನೀರಿನಲ್ಲಿ ಬೆರಿಸಿ ಬೆಳ್ಳಿಯ ಸಾಮಾನುಗಳನ್ನು ಕುದಿಸುವದರಿಂದ ಅವು ಹೊಳಪಿಲ್ಲದ ಬಿಳೀ ಬಣ್ಣದವಾಗುವವು. ನಂತರ ಅವನ್ನು ಹೊರಗೆ ತೆಗೆದು ನೀರಿನಿಂದ ತೊಳೆದು ಅರಿವೆಯಿಂದ ಒರಿಸಿದ ಮೇಲೆ ಖಡುವಿನ ಪುಡಿಯಿಂದ ಪಾಲಿಶ್ ಮಾಡಲಾಗಿ ಬಹು ಸೊಗಸಾಗಿ ಕಾಣುವವು.

V ಬಂಗಾರದ ಸಾಮಾನುಗಳು:—

(೧) ೨೦ ಪಾಲು ವಾಶಿಂಗ್ ಸೋಡಾ + ೧ ಪಾಲು ಕ್ಯಾಲ್ಸಿಯಮ್ ಕ್ಲೋರಾಯ್ಡ + ೧ ಪಾಲು ಉಪ್ಪು + ೧೬ ಪಾಲು ನೀರು ಈ ಪ್ರಮಾಣದಿಂದ ಮಿಶ್ರಣವನ್ನು ತಯಾರಿಸಿ ಆ ಮಿಶ್ರಣವನ್ನು ಸ್ವಚ್ಛಮಾಡತಕ್ಕ ಸಾಮಾನಿಗೆ ಲೇಪಿಸಿ, ಆ ಮೇಲೆ ಒಂದು ಬ್ರುಶ್ಶಿನ ಸಹಾಯದಿಂದ ತಿಕ್ಕಬೇಕು. ಬಳಿಕ ಆದ ಮೇಲೆ ಅವನ್ನು ನೀರಿನಿಂದ ತೊಳೆದು ಅರಿವೆಯಿಂದ ಒರಿಸತಕ್ಕದ್ದು.

---

* ಬೆಸಿಗೆ ಇದ್ದ ಸಾಮಾನುಗಳನ್ನು ಹೆಚ್ಚಾಗಿ ಕಾಸಿದರೆ ಬೆಸಿಗೆಯು ಉಚ್ಚಿ ಹೋಗುವದರಿಂದ ಜಾಗ್ರತೆ ಪಡತಕ್ಕದ್ದು.

† ಈ ಪದಾರ್ಥವು ಭಯಂಕರವಾದ ವಿಷವಿರುವದರಿಂದ ಅದನ್ನು ಜಾಗ್ರತೆಯಿಂದ ಉಪಯೋಗಿಸತಕ್ಕದ್ದು. ಅದನ್ನು ಬಹಳ ಹೊತ್ತು ಕೈಯಿಂದ ಸ್ಪರ್ಶ ಮಾಡಬಾರದು. ಘಾಯಗಳಿಗೆ ಹತ್ತಿದರೆ ಭಯಂಕರವಾದ ಹುಣ್ಣಾಗುವದು.

(೨) ಎಸೆಟಿಕ್ ಆಸಿಡ್ ೨ ಪಾಲು + ಸಲ್ಫ್ಯೂರಿಕ್ ಆಸಿಡ್ ೨ ಪಾಲು + ಒಗ್ಜಾಲಿಕ್ ಆಸಿಡ್ ೧ ಪಾಲು + ಕೆಂಪು ಆಯರ್ನ್ ಆಕ್ಸೈಡ್ ೨ ಪಾಲು + ಭಟ್ಟಿಗೆ ಹಾಕಿದ ನೀರು (ಮಳೆಯ ನೀರು) ೨೦೦ ಪಾಲು. ಈ ಮಿಶ್ರಣದಿಂದ ತೊಳೆದ ನಂತರ ಬಿಸಿನೀರಿನಿಂದ ತೊಳೆದು ಒಣಗಿಸ ತಕ್ಕದ್ದು.

R. K. Naik

ಸ್ಲಾಯಿಡ ಅಥವಾ ಹಸ್ತಶಿಕ್ಷಣ ಪದ್ಧತಿ.

ಸ್ವೀಡನದಲ್ಲಿ ಸ್ಲಾಯಿಡ ಪದ್ಧತಿಯ ಕೆಲಸದಲ್ಲಿ ಕಟ್ಟಿಗೆ, ಲೋಹ, ತೊಗಲು, ದಪ್ಪಕಾಗದ ಮುಂತಾದವುಗಳಲ್ಲಿಯ ಕೆಲಸಗಳೂ, ಕುಂಚಗಳನ್ನು ತಯಾರಿಸುವದು, ಚಿತ್ರತೆಗೆಯುವದು, ಬುಟ್ಟಿ ಹೆಣಿಯುವದು, ಪುಸ್ತಕ ಕಟ್ಟುವದು ಮುಂತಾದ ವ್ಯವಸಾಯಗಳೂ ಸಮಾವೇಶವಾಗುತ್ತವೆ. ಇಂಗ್ಲಂಡದಲ್ಲಿ ಸಾಮಾನ್ಯವಾಗಿ ಸ್ಲಾಯಿಡವೆಂಬದರ ಅರ್ಥವು ಪದ್ಧತಿಗನುಸಾರವಾದ ಕಟ್ಟಿಗೆಯಲ್ಲಿಯ ಕೆಲಸವೆಂದೇ ಇರುವದು. ಆದ್ದರಿಂದ ಅದಕ್ಕೆ ನಾವು ಬಡಿಗಗಪ್ಪವೆಂದು ಅನ್ನಬಹುದೋ? ಇಲ್ಲ. ಸ್ಲಾಯಿಡದಲ್ಲಿಯ ಕೆಲಸವು, ಬಡಿಗಗಪ್ಪಕ್ಕಿಂತ ತೀರ ಭಿನ್ನವಾಗಿರುತ್ತವೆ. ಸ್ಲಾಯಿಡದಲ್ಲಿ ಶ್ರಮವಿಭಾಗವಿಲ್ಲ. ಬಡಿಗಗಪ್ಪವು ಧಂದೆಯ ಕೆಲಸವು; ಹಾಗು ಅದು ಕೇವಲ ಔಪಯೋಗಿಕ ತತ್ವಗಳಿಗನುಸಾರವಾಗಿರುವದು. ಆದರೆ ಸ್ಲಾಯಿಡ ಪದ್ಧತಿಯ ಕೆಲಸವು ಚಿಕ್ಕಮಕ್ಕಳ ಶಿಕ್ಷಣದ ಸಾಧನವಾಗಿರುವದು. ಬಡಿಗರನ್ನು ತಯಾರಿಸುವದು ಸ್ಲಾಯಿಡದ ಉದ್ದೇಶವಲ್ಲ. ಚಿಕ್ಕಮಕ್ಕಳ ಮಾನಸಿಕ, ಶಾರೀರಿಕ, ನೈತಿಕ ಶಕ್ತಿಗಳನ್ನು ಬಲಪಡಿಸುವದೇ ಅದರ ಉದ್ದೇಶವಿರುವದು. ಈ ಬೆಳವಣಿಗೆಯನ್ನುಂಟು ಮಾಡುವದಕ್ಕೆ ಇದುವರೆಗೆ ಶೋಧಿಸಿದ ಅನೇಕ ಸಾಧನಗಳಲ್ಲಿ ಇದು ಬಹಳ ಮಹತ್ವದ್ದಿರುವದು.

ಕಿಂಡರಗಾರ್ಟನ್ ಶಿಕ್ಷಣವನ್ನು ಹೊಂದಿದಂಥ ಕೋಮಲವಾದ ಬೆರಳುಗಳಿಗೆ ತಿಳುವಾದ ಕಾಗದಗಳಲ್ಲಿ ಕೆಲಸ ಮಾಡುವದು ಚನ್ನಾಗಿ ರೂಢಿಯಾಗಿರುತ್ತದೆ. ಪೇಪರ್‌ಫೋಲ್ಡಿಂಗ (ಕಾಗದ

ಮಡಿಚುವದು) ಎಂಬ ವ್ಯವಸಾಯದಲ್ಲಿ ಚಿಕ್ಕಮಕ್ಕಳು ತಿಳು ವಾದ ಚೌರಸ ಹಾಗು ವರ್ತುಲಾಕೃತಿಯ ಕಾಗದಗಳಲ್ಲಿ ತಮಗೆ ಉಪಯುಕ್ತವಾದ ಮಾದರಿಗಳನ್ನು ಕಟ್ಟಿಗೆಯ ಚಾಕು ವಿನ ಸಹಾಯದಿಂದ ತಯಾರಿಸಿ ರೂಢಿಮಾಡಿಕೊಂಡಿರುವರು. ಇಂಥ ಹುಡುಗರಿಗೆ ದಪ್ಪಕಾಗದವನ್ನು ಅದಕ್ಕೆ ಅನುರೂಪವಾದ ಕತ್ತರಿ, ಮುಂತಾದ ಆಯುಧಗಳನ್ನೂ ಕೊಟ್ಟು ಕೆಲಸ ಮಾಡಿಸುವದು ಪೇಷರ ಸ್ಥಾಯಿಡವೆನಿಸುತ್ತದೆ. ಈ ಕೆಲಸವಲ್ಲಿ ಕೊಡಬಹುದಾದ ನಾನಾತರದ ಬಣ್ಣದ ಕಾಗದಗಳ ಮೇಲೆ ಮೊದಲು ಮಾದರಿಯ ಆಕೃತಿಯನ್ನು, ಪೂಟಕಟ್ಟಿಗೆ, ತ್ರಿಕೋಣ ಕಟ್ಟಿ, ಕಂಪಾಸ ಮುಂತಾದವುಗಳ ಸಹಾಯದಿಂದ ತೆಗೆದು, ಕತ್ತರಿಸಿ, ಮಡಿಚಬಹುದಾದ ಭಾಗದಲ್ಲಿ ಮಡಿಚಿ, ಅಂಟು ಹಚ್ಚಿ ಇಲ್ಲವೆ ಧಾರದಿಂದ ಅಂದವಾಗಿ ಕಟ್ಟಿ, ಉಪಯುಕ್ತವಾದ ಮಾದರಿಯನ್ನು ತಯಾರಿಸುವನು ಈ ಕೆಲಸದಲ್ಲಿ ಮನಸ್ಸಿನ ಬಾಗಿಲುಗಳಾದ ಬೇರೆ ಬೇರೆ ಇಂದ್ರಿಯಗಳ ಬೆಳವಣಿಗೆಯಾಗುವದಲ್ಲದೆ ವಿಚಾರಕಲ್ಪನಾಶಕ್ತಿಗಳ ವಿಕಾಸವೂ, ಉತ್ಸುಕತೆ, ಲಕ್ಷ್ಯ, ಸ್ವಚ್ಛತೆ, ಅಚ್ಚುಕಟ್ಟುತನ ಮುಂತಾದ ಗುಣಗಳ ಬೆಳವಣಿಗೆಯೂ ಆಗುವದು. ಹಸ್ತನೇತ್ರಗಳ ಉಪಯೋಗವು ಬಹಳ ಮಟ್ಟಿಗೆ ಆಗುವದರಿಂದ ಅವುಗಳಲ್ಲಿ ಕೌಶಲ್ಯವು ಬಹಳವಾಗಿ ನೆಲೆಗೊಳ್ಳುವದು. ಕೆಲದಿವಸಗಳವರೆಗೆ ಈ ತರದ ಕೆಲಸವನ್ನು ಮಾಡುವದರಿಂದ ಕತ್ತರಿಸೋಣ ಮುಂತಾದ ಕೃತಿಗಳಲ್ಲಿ ಪ್ರವೀಣತೆಯೂ ಹಸ್ತಗಳ ಮಜ್ಜಾತಂತುಗಳನ್ನು ಆಧೀನದಲ್ಲಿಟ್ಟುಕೊಳ್ಳುವ ಶಕ್ತಿಯೂ ಹುಡುಗರಲ್ಲಿ ಉಂಟಾಗಿ, ಅವರು ಮುಂದೆ ಬೇಕಾದಂಥ ಕಠಿಣವಾದ ಮಾದರಿಯನ್ನು ಕಾಗದದಿಂದ ಮಾಡುವದಕ್ಕೆ ಶಕ್ತರಾಗುತ್ತಾರೆ.

ಈ ತರದ ಕೈಕೆಲಸವು ಮುಗಿದನಂತರ ದಪ್ಪಕಾಗದಕ್ಕಿಂತಲೂ ಕಠಿಣವಾದ ಪದಾರ್ಥವನ್ನು, ಅಂದರೆ, ಬೇರೆ ಬೇರೆ ಜಾತಿಯ ಕಟ್ಟಿಗೆಯನ್ನೂ, ಅದನ್ನು ಕತ್ತರಿಸುವದಕ್ಕೂ, ನುಣುಪಾಗಿ ಮಾಡುವದಕ್ಕೂ ಅದರಲ್ಲಿ ತೂತು ತೆಗೆಯುವದಕ್ಕೂ ಅನುರೂಪವಾದ ಚಾಕು, ಕತಗಸ, ಉಜ್ಜುಗೊರಡು, ಬೈರಗಿ ಮುಂತಾದ ಆಯುಧಗಳನ್ನೂ ಕೊಟ್ಟು ಅನೇಕ ಉಪಯುಕ್ತವಾದ ಮಾದರಿಗಳನ್ನು ಮಾಡಿಸುವದೇ ವುಡ್ ಸ್ಥಾಯಿಡ

ವೆನಿಸುತ್ತದೆ. ಈ ತರದ ಶಿಕ್ಷಣವನ್ನು ಹೊಂದುವ ಹುಡುಗನ ಕೈಯಲ್ಲಿ ಒಂದು ಕಟ್ಟಿಗೆಯ ತುಂಡನ್ನು ಕೊಟ್ಟು, ಅವನ ಮುಂದಿರುವ ಮೇಜಿನಮೇಲೆ ಹದನವಾದ ಆಯುಧಗಳನ್ನು ಇಟ್ಟು ತುಸುಹೊತ್ತು ನೋಡಿದರೆ ಕಾಗದದಲ್ಲಿಯ ಕೆಲಸಕ್ಕಿಂತಲೂ ಹೆಚ್ಚಿನ ಉತ್ಸುಕತೆಯೂ, ಪರಿಶೋಧಕ ಬುದ್ಧಿಯೂ, ಚಟುವಟಿಕೆಯೂ ಅವನಲ್ಲಿ ಒಡೆದು ತೋರುವವು. ಹೀಗಿದ್ದಾಗ ಅವನು ಆ ಹದನವಾದ ಆಯುಧಗಳನ್ನು ತೆಗೆದುಕೊಂಡು ಕೋಮಲವಾದ ತನ್ನ ಸ್ವಂತ ಬೆರಳುಗಳನ್ನು ಕೊಯ್ದುಕೊಳ್ಳುವನೆಂದು ತಿಳಿಯುವಿರೋ? ಅಥವಾ ಕೊಟ್ಟ ಕಟ್ಟಿಗೆಯ ತುಂಡನ್ನು ತೆಗೆದುಕೊಂಡು ಹದನವಾದ ಆಯುಧಗಳಿಂದ ಬೇಕಾದತ್ತ ಕೆತ್ತುವನೆಂದು ತಿಳಿಯುವಿರೊ? ಹಾಗಲ್ಲ. ಅವನು ತನ್ನ ಅನೇಕ ಇಂದ್ರಿಯಗಳನ್ನು ವಿಚಾರ ಕಲ್ಪನಾ ಶಕ್ತಿಗಳನ್ನೂ, ಸಾಮರ್ಥ್ಯವನ್ನೂ ಸರಾಗವಾಗಿ ಉಪಯೋಗಿಸಿ ತನಗೆ ಬೇಕಾದ ಹಾಗೂ ಮನೋರಂಜಕವಾದ ಮಾದರಿಯನ್ನು ಕೊಟ್ಟ ಅಳತೆಗಳಿಗೆ ಸರಿಯಾಗಿ ತಯಾರಿಸಿ ಅತ್ಯಾನಂದವನ್ನು ಹೊಂದುವನು. ಸ್ಲಾಯಿಡ ಪದ್ಧತಿಯ ಹಸ್ತಶಿಕ್ಷಣದಲ್ಲಿ ಉಪಯುಕ್ತವಾದ ಮಾದರಿಗಳ ಹೊರತು ಬೇರೆ ಯಾವದನ್ನೂ ಮಾಡುವದಿರುವದಿಲ್ಲ. ಕೇವಲ ಕತಗಸ ಇಲ್ಲವೆ ಉಜ್ಜುಗೊರಡನ್ನು ತೆಗೆದುಕೊಂಡು ಯಾವದೊಂದು ಕಟ್ಟಿಗೆಯ ತುಂಡನ್ನು ಬರೇ ಕೊಯ್ದು ಅಥವಾ ಉಜ್ಜಿ ಕೊಡಹೇಳಿದರೆ ಮಾತ್ರ ಆ ಹುಡುಗನಲ್ಲಿ ಎಳ್ಳಷ್ಟಾದರೂ ಉತ್ಸುಕತೆಯು ಉತ್ಪನ್ನವಾಗದೆ ಶಿಕ್ಷಕನ ಆಜ್ಞೆಯ ಮೇರೆಗೆ ನಿಷ್ಕಾಳಜಿಯಿಂದ ಕೊಯ್ಯುತ್ತ, ಉಜ್ಜುಗೊರಡು ಹೊಡೆಯುತ್ತ ವೇಳೆ ಮುಗಿಯುವವರೆಗೆ ನಿಂತುಕೊಳ್ಳುವನು. ಆದರೆ "ಇಂಥದೊಂದು ಉಪಯುಕ್ತವಾದ ಮಾದರಿಯನ್ನು ತಯಾರಿಸು; ಅದು ನಿನ್ನದೇ ಇರುವದು' ಎಂದು ಹೇಳಿದ ಪಕ್ಷದಲ್ಲಿ ಅವನು ಆ ಕೆಲಸದಲ್ಲಿ ನಿರತನಾಗಿ ಎಚ್ಚರದಿಂದ ಅಳತೆಗಳಿಗೆ ಸರಿಯಾಗಿಯೂ ಅಚ್ಚುಕಟ್ಟಾಗಿಯೂ ಅದನ್ನು ತಯಾರಿಸುವನು. ಈ ರೀತಿಯಾಗಿ ಹುಡುಗರ, ಮಾನಸಿಕ, ಶಾರೀರಿಕ, ನೈತಿಕ, ಶಕ್ತಿಗಳನ್ನು ಸಮಾನವಾಗಿ ಬಲಪಡಿಸಿ ಕೆಲಸದಲ್ಲಿ ಅವರನ್ನು ತೊಡಗಿಸುವದೇ ಸ್ಲಾಯಿಡದ ಮುಖ್ಯ ಲಕ್ಷಣವು.

ಸ್ಲಾಯಿಡದ ಉದ್ದೇಶಗಳು.

ಸ್ಲಾಯಿಡ ಎಂಬದು ಕೇವಲ ಶಿಕ್ಷಣಕ್ಕೆ ಅನುಕೂಲವಾದ ಕೆಲಸ ವಾಗಿರಿಂದ ಸಾಮಾನ್ಯವಾಗಿ ಶಿಕ್ಷಣದ ಉದ್ದೇಶವೇ ಇದರ ಉದ್ದೇಶವೆಂದು ಹೇಳಬಹುದು. ಚಿಕ್ಕ ವಯಸ್ಸಿನಲ್ಲಿ ಮಕ್ಕಳ ಜಾವತ್ತೂ ಶಕ್ತಿಗಳನ್ನು ಸಮವಾಗಿ ವೃದ್ಧಿ ಪಡಿಸುವದೇ ಸ್ಲಾಯಿಡ ಎಂಬದರ ಉದ್ದೇಶವಿರುವಡು. ಸ್ಲಾಯಿಡದ ಉತ್ಪಾದಕರೂ ಅದರ ಉತ್ಪನ್ನವಾದ ಬೀಜಗಳನ್ನು ಬಿತ್ತಿ ಬೆಳಿಸಿದವರೂ ಆದ ಹರ. ಆಟೋ. ಸಾಲೋಮನ, ಎಂಬವರು ಬರೆದಿಟ್ಟ ಸ್ಲಾಯಿಡದ ಉದ್ದೇಶಗಳನ್ನು ಇಲ್ಲಿ ಅಕ್ಷರ ಬರೆಯುದೆ ಇದಲಾರವು.

೧. ಸಾಮಾನ್ಯವಾಗಿ ಎಲ್ಲ ತರದ ಕೆಲಸ ಮಾಡುವದರಲ್ಲಿ ಅಭಿರುಚಿಯನ್ನೂ ಪ್ರೀತಿಯನ್ನೂ ಹುಟ್ಟಿಸುವದು.

೨. ಉತ್ತಮವಾದ ಶಾರೀರಿಕ ಶ್ರಮ ಮಾಡುವದರಲ್ಲಿ ಆದರವನ್ನುಂಟು ಮಾಡುವದು.

೩. ಸ್ವಾವಲಂಬನವನ್ನೂ ಸ್ವಾತಂತ್ರ್ಯವನ್ನೂ ಪ್ರತಿಯೊಬ್ಬರಲ್ಲಿ ನೆಲೆಗೊಳಿಸುವದು.

೪. ಕ್ರಮ, ಅಚ್ಚುಕಟ್ಟುತನ, ಸ್ವಚ್ಛತೆ ಮುಂತಾದವುಗಳನ್ನು ವೃದ್ಧಿಗೊಳಿಸುವದು.

೫ ನೇತ್ರಗಳಿಗೆ ತಿಕ್ಷ್ಣಣಕೊಟ್ಟು ಪದಾರ್ಥಗಳ ಆಕಾರ ಜ್ಞಾನವನ್ನು ಮಾಡಿಕೊಡುವದು. ಹಸ್ತಕೌಶಲ್ಯವು ಬಹಳ ಬೆಳೆದು ಸ್ಪರ್ಶೇಂದ್ರಿಯ ಜ್ಞಾನವು ವಿಕಾಸ ಹೊಂದುವದು.

೬ ಲಕ್ಷ್ಯ, ಸಮಯೋಗ, ದೃಢವಾದ ಮನಸ್ಸು, ತಾಳ್ಮೆ ಮುಂತಾದ ಆವೆಶ್ಯಗುಣಗಳ ಸಾಧನ ಮಾಡಿಕೊಡುವದು.

೭. ಶಾರೀರಿಕ ಶಕ್ತಿಗಳ ಬೆಳವಣಿಗೆಯನ್ನು ಪೂರೈಸಿ ಕೊಡುವದು.

೮. ಆಯುಧಗಳ ತಕ್ಕ ಉಪಯೋಗವನ್ನು ಮಾಡಲಿಕ್ಕೆ ಬರುವಷ್ಟು ಕುಶಲತೆಯನ್ನುಂಟು ಮಾಡುವದು.

೯. ಸರಿಯಾದ ಕೆಲಸ ಮಾಡುವಷ್ಟು ಸಾಮರ್ಥ್ಯವನ್ನುಂಟು ಮಾಡುವದು.

ಸ್ಲಾಯಿಡದ ತತ್ವಗಳು.

೧. ಸ್ಲಾಯಿಡ ಶಿಕ್ಷಕನು ಶಿಕ್ಷಣದ ಹೋರೆಯನ್ನು ಪೂರ್ಣ ಅರಿತವರಿರಬೇಕು; ಕೇವಲ ಕೆಲಸಗಾರರೇ ಇರಬಾರದು.

೨. ಸ್ಲಾಯಿಡದ ಶಿಕ್ಷಣ ಕ್ರಮವು ಪದ್ಧತಿಗನುಸಾರವಾದದ್ದೂ, ಕ್ರಮವಾಗಿ ಬೆಳವಣಿಗೆಯನ್ನು ಹೊಂದುವಂಥಾದ್ದೂ ಶಿಕ್ಷಣದ ತತ್ವಗಳನ್ನು ಒಳಕೊಂಡದ್ದೂ, ಸಾಧ್ಯವಿದ್ದಮಟ್ಟಿಗೆ ಪ್ರತಿಯೊಬ್ಬ ಹುಡುಗನಿಗೆ ಪ್ರತ್ಯೇಕವಾಗಿ ಕೆಲಸ ಕೊಡುವಂಥಾದ್ದೂ ಇರತಕ್ಕದ್ದು.

೩. ಮಾನಸಿಕ ಶಕ್ತಿಗಳನ್ನೂ ಶಾರೀರಿಕ ಶಕ್ತಿಗಳನ್ನೂ ಸರಾಗವಾಗಿ ಉಪಯೋಗಿಸಿ ಬೆಳಿಸುವಂಥ ಕೆಲಸಗಳನ್ನೇ ಇದರಲ್ಲಿ ಅರಿಸಿಕೊಳ್ಳತಕ್ಕದ್ದು.

೪. ಮಾದರಿಯನ್ನು ತಯಾರಿಸುವಾಗ ಮಾಡತಕ್ಕ ಎಲ್ಲ ಕೆಲಸಗಳನ್ನು ಹುಡುಗರೇ ಮಾಡಬೇಕು. (ಪ್ರತಿಯೊಂದು ಕೃತಿಯಲ್ಲಿ ಹುಡುಗನ ಸ್ವಂತ ಪ್ರಯತ್ನವೇ ದೃಷ್ಟಿಗೆ ಬೀಳುವಂತಿರಬೇಕು. ಸಾಮಾನ್ಯವಾಗಿ ಇದರಿಂದ ತಿಳಿಯುವದೇನಂದರೆ ಶ್ರಮವಿಭಾಗವೂ ಯಾಂತ್ರಿಕ ಸಹಾಯವೂ ಯಾವುದಲ್ಲಿರಯೂ ಅವನಿಗೆ ದೊರೆಯುಬಾರದು.)

೫. ತಯಾರಾದ ಮಾದರಿಗಳು ಸೌಷ್ಠವ, ಅಚ್ಚುಕಟ್ಟುತನ, ಯೋಗ್ಯವಾದ ಕ್ರಮ ಮುಂತಾದ ಅನೇಕ ಸಂಗತಿಗಳ ಪರಿಪೂರ್ಣತೆಯನ್ನು ತೋರಿಸುವಂಥವಿರಬೇಕು; ಹಾಗೂ ಅವುಗಳಿಂದ ಉತ್ತಮವಾದ ಕೆಲಸದಲ್ಲಿ ಮೆಚ್ಚುವಿಕೆಯುಂಟಾಗಬೇಕು.

೬. ಸ್ವತಂತ್ರವಾಗಿಯೂ ಕಾಳಜಿಪೂರ್ವಕವಾಗಿಯೂ ವಿಚಾರಿಸುವ ಪರಿಪಾಠದ ಹೆಚ್ಚಳವು ತಾನು ಮಾಡಿದ ಕೆಲಸದ ಬೆಲೆಯನ್ನು ತಾನೇ ಕಟ್ಟುವ ಸಂದರ್ಭದಿಂದ ಉಂಟಾಗಬೇಕು.

ಸ್ಥಾಯಿಡದ ಶಿಕ್ಷಕನು.

ಈ ವಿಷಯವನ್ನು ಕಲಿಸುವ ಶಿಕ್ಷಕನು ಅತ್ಯುತ್ತಮನಾದ ಶಿಕ್ಷಕನಾಗಿರಬೇಕು. ಚಿಕ್ಕಮಕ್ಕಳ ಸ್ವಭಾವವನ್ನರಿತವನಿರಬೇಕು; ಅವನು ಕೇವಲ ಶಾರೀರಿಕ ಶಕ್ತಿಯನ್ನು ಬಲಪಡಿಸುವದಲ್ಲದೆ ಮಾನಸಿಕ ಮತ್ತು ನೈತಿಕ ಶಕ್ತಿಗಳನ್ನು ವಿಕಾಸಗೊಳಿಸುವಂಥವನಿರಬೇಕು; ಚಿಕ್ಕ ಮಕ್ಕಳಲ್ಲಿರಬಹುದಾದ ಅಲ್ಪ ವಿಚಾರಗಳನ್ನು ಪುಷ್ಟೀಕರಿಸಲು ಶಕ್ತನಿರಬೇಕು ವೃದ್ಧಿಹೊಂದಲು ಸಿದ್ಧವಾದ ಮಜ್ಜಾತಂತುಗಳಿಗೆ ಯುಕ್ತವಾದ ವ್ಯಾಯಾಮವನ್ನು ಕೊಟ್ಟು ಅವುಗಳನ್ನು ಶರೀರದ ಬೆಳವಣಿಗೆಗೆ ಅನುಕೂಲವಾಗಿ ಮಾಡುವವನಿರಬೇಕು. ಈ ವಿಷಯವನ್ನು ಕಲಿಸುವ ಶಿಕ್ಷಕನಿಗೆ ಹಸ್ತ ಕೌಶಲ್ಯದ ಅವಶ್ಯಕತೆಯು ತುಸುಮಟ್ಟಿಗೆ ಇದ್ದರೂ ಅದನ್ನೇ ಪ್ರಾಧಾನ್ಯವಾಗಿಟ್ಟುಕೊಂಡು ಉದಾತ್ತ ಶಿಕ್ಷಣವು ದೊರೆಯದ ಒಬ್ಬ ಕೆಲಸಗಾರನನ್ನು ತಂದು ಈ ತರದ ಹಸ್ತ ಶಿಕ್ಷಣವನ್ನು ಕೊಡಹೇಳಿದರೆ ಸ್ಥಾಯಿಡದ ಸುಪರಿಣಾಮವು ಕಂಡುಬರದೆ ಅದರಿಂದ ಕೇವಲ ಅಪಾಯವಾಗಿ ಆ ಪದ್ಧತಿಗೆ ಕುಂದು ಬರುವದು. ಸ್ಥಾಯಿಡ ಪದ್ಧತಿಯಿಂದ ಮಾಡತಕ್ಕ ಕೆಲಸವನ್ನೂ ಅದಕ್ಕೆ ಸಂಬಂಧಿಸಿದ ಔಪಪತ್ತಿಕ ಭಾಗವನ್ನೂ ಒಂದು ವರ್ಷದ ಅವಧಿಯಲ್ಲಿ ಸಾಮಾನ್ಯ ಶಿಕ್ಷಣದ ಉದ್ದೇಶವನ್ನೂ ತತ್ವಗಳನ್ನೂ ಅರಿತ ಶಿಕ್ಷಕನಿಗೆ ಕಲಿಸಿ ಅವನನ್ನು ಸ್ಥಾಯಿಡದ ಶಿಕ್ಷಕನನ್ನಾಗಿ ನೇಮಿಸುವದರಲ್ಲಿ ಮಾತ್ರ ಅಧಿಕಾರಿಗಳು ಜಾಗರೂಕರಾಗಿರಬೇಕು. ಇದುವರೆಗೆ ಉತ್ತಮ ಶಿಕ್ಷಕರ ಕೊರತೆಯ ಮೂಲಕವಾಗಿಯೇ ಹಸ್ತ ಶಿಕ್ಷಣವು ಅತಿ ಪ್ರಬಲವಾಗಿ ಪ್ರಚಾರದಲ್ಲಿ ಬಂದಿಲ್ಲವೆಂಬದು ಬೇರೆ ಬೇರೆ ಸುಧಾರಿಸಿದ ರಾಷ್ಟ್ರಗಳಲ್ಲಿಯ ಹಸ್ತ ಶಿಕ್ಷಣ ಶಾಸ್ತ್ರಜ್ಞರ ಅನುಭವಕ್ಕೆ ಬಂದಿರುವದು.

B. S. Purohit.

ಪ್ರಕೃತಿಪಾಠಗಳು

(ಅಗಸ್ಟ ತಿಂಗಳಿಂದ ಮುಂದೆ ಸಾಗಿದ್ದು)

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ಅದರ ಬೆನ್ನು ಅಗಲವಾಗಿರುವದರಿಂದ ಅದರ ಮೇಲೆ ಭದ್ರವಾಗಿ ಕೂಡಬಹುದು. (೨) ತಲೆ, ಕುತ್ತಿಗೆ:— ಕುದುರೆಯ ತಲೆಯಲ್ಲಿ ಕೋಡುಗಳಿಲ್ಲ. ಕುದುರೆಯ ತಲೆಯು ಆಕಳ ತಲೆಗಿಂತ ಉದ್ದವಾವದ್ದು. ಮೂಗಿನ ಬಳಿಯಲ್ಲಿ ಮೊನೆಯಾಗಿರುತ್ತದೆ. ಕುದುರೆಯ ಕುತ್ತಿಗೆಯು ಉದ್ದವಾಗಿದ್ದು ಮೇಲ್ಭಾಗದಲ್ಲಿ ಬಿಲ್ಲಿನಂತೆ ಬಗ್ಗಿರುತ್ತದೆ. ಅದರ ಕುತ್ತಿಗೆಯ ಮೇಲೆ ಕೂದಲುಗಳು ಸಾಲಾಗಿ ಬೆಳೆದು ಕೆಳಗೆ ಜೋತಾಡುತ್ತವೆ.	ಕುದುರೆಯ ಕುತ್ತಿಗೆಯು ಹೇಗಿರುತ್ತದೆ? ಆಕಳ ಕುತ್ತಿಗೆಗೂ ಇದಕ್ಕೂ ಯಾವ ವ್ಯತ್ಯಾಸಗಳಿರುತ್ತವೆ? ಉದ್ದವಾವ ಕುತ್ತಿಗೆಯಿಂದ ಕುದುರೆಗೆ ಉಪಯೋಗವೇನು?
(೩) ಹಲ್ಲುಗಳು:— ಕುದುರೆಯ ಬಾಯಿಯು ಮುಂಭಾಗದಲ್ಲಿ ಮೇಲಿನ ದವಡೆಯಲ್ಲಿ ೬ ಹಲ್ಲುಗಳೂ ಕೆಳಗೆ ೬ ಹಲ್ಲುಗಳೂ ಇರುತ್ತವೆ. ಆ	ಕುದುರೆಯ ಬಾಯಿಯನ್ನು ತೆಗೆಯಿಸಿ ಅದರ ಹಲ್ಲುಗಳನ್ನು ಹುಡುಗರು ನೋಡಿ ವಿವರಿಸಬೇಕು. ಅನಂತರ ಅವರನ್ನು ಆಕಳ ಹಲ್ಲುಗಳಿಗೂ ಕುದುರೆಯ ಹಲ್ಲುಗಳಿಗೂ ಇರುವ ಹೋಲಿಕೆ ವ್ಯತ್ಯಾಸಗಳನ್ನು ಕುರಿತು ಪ್ರಶ್ನೆ ಮಾಡಬೇಕು. ನೆಲದಿಂದ ಹುಲ್ಲನ್ನು ಕೀಳುವದರಲ್ಲಿ ಕುದುರೆಗೂ ಆಕಳಿಗೂ ಇರುವ ವ್ಯತ್ಯಾಸವೇನು?

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ದುದರಿಂದ ಕುದುರೆಯು ಹುಲ್ಲನ್ನು ಕತ್ತರಿಸಿ ತೆಗೆಯುತ್ತದೆ. ಈ ಹಲ್ಲುಗಳ ಹಿಂದೆ ಉಭಯ ಪಾರ್ಶ್ವಗಳಲ್ಲೂ ಕೋರೆ ಹಲ್ಲುಗಳೂ, ಇವುಗಳ ಹಿಂದೆ ಹಲ್ಲುಗಳಿಲ್ಲದ್ದ ಸ್ಥಳವೂ, ಅನಂತರ ಪಾರ್ಶ್ವ ದಂತಗಳೂ ಇರುತ್ತವೆ. ಕುದುರೆಯು ದವಡೆಯಲ್ಲಿ ಹಲ್ಲು ಇಲ್ಲದ ಸ್ಥಳದಲ್ಲಿ ಕಡಿವಾಣಕ್ಕೆ ಕಟ್ಟಿದ ಉಕ್ಕಿನ ತುಂಡು ಬೀಳುವದರಿಂದ ಇದನ್ನು ಹಾಕಿರುವಾಗಲೂ ಕುದುರೆಯು ಬಾಯಿಯನ್ನು ಮುಚ್ಚಿಕೊಳ್ಳುವುದು.	ಕುದುರೆಯು ಬಾಯಿಯಲ್ಲಿ ಕಡಿವಾಣಕ್ಕೆ ಕಟ್ಟುವ ಉಕ್ಕಿನ ತುಂಡಿದ್ದರೂ ಆದು ಬಾಯಿಯನ್ನು ಹೇಗೆ ಮುಚ್ಚಿಕೊಂಡಿರುತ್ತದೆ?
(೪) ಮೂಗು:—ಕುದುರೆಯ ಮೂಗಿನ ಹೊಳ್ಳೆಗಳು ದೊಡ್ಡವಾಗಿರುತ್ತವೆ.	ಹುಡುಗರು ಕುದುರೆಯ ಮೂಗನ್ನು ನೋಡಿ ಅದರ ಹೊಳ್ಳೆಗಳು ಹೇಗಿರುತ್ತವೆಂಬದನ್ನು ಲಕ್ಷಿಸಬೇಕು. (ಆಗಲವಾದ ಹೊಳ್ಳೆಗಳಿಂದ ವಾಸನೆಯ ಸಾಮರ್ಥ್ಯವು ಹೆಚ್ಚುವದಲ್ಲದೆ ಓಡುವಾಗ ತೀವ್ರವಾಗಿ ಉಸುರಾಡಿಸುವದಕ್ಕೂ ಅನುಕೂಲವಾಗುತ್ತದೆ.)
(೫) ಕಣ್ಣುಗಳು:—ಕುದುರೆಯ ಕಣ್ಣುಗಳು ಆಕಳ ಕಣ್ಣುಗಳಂತೆ ಸ್ವಲ್ಪ ಪಾರ್ಶ್ವದಲ್ಲಿರುತ್ತವೆ. ಆವುದರಿಂದ ಅದಕ್ಕೆ ಪಾ	ಹುಡುಗರು ಕುದುರೆಯ ಕಣ್ಣುಗಳು ಎಲ್ಲಿ ಸೇರಿಸಲ್ಪಟ್ಟಿರುವವೆಂಬದನ್ನು ನೋಡಿ ಈ ವಿಷಯದಲ್ಲಿ ಆಕಳಿಗೂ ಕುದುರೆಗೂ ಇರುವ ಹೊಲಿಕೆಯನ್ನು ಹೇಳಬೇಕು. ಕುದುರೆಯ ಪಾರ್ಶ್ವದೃಷ್ಟಿಯನ್ನು ತಡೆಯಲು ಉಪಾಯವೇನು? ಈ ದೃಷ್ಟಿಯನ್ನು ತಡೆಯದಿದ್ದರೇನಾಗುತ್ತದೆ?

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ಶ್ವದೃಷ್ಟಿಯೂ ಇರುತ್ತದೆ. ಈ ಪಾರ್ಶ್ವದೃಷ್ಟಿಯನ್ನು ತಡೆಯಲು ಕಣ್ಣುಗಳ ಮಗ್ಗಲನ್ನಿ ತೊಗಲನ್ನು ಕಟ್ಟುತ್ತಾರೆ (೬) ಕಿವಿಗಳು:—ಕುದುರೆಯು ಕಿವಿಗಳು ಸಣ್ಣವಾಗಿಯೂ ಮೊನೆಯುಳ್ಳವಾಗಿಯೂ ಇರುತ್ತವೆ. ಅದು ತನ್ನ ಒಂದೊಂದು ಕಿವಿಯನ್ನು ಪ್ರತ್ಯೇಕವಾಗಿ ಅಡಿಸ ಬಲ್ಲದು. ಸ್ವಲ್ಪ ಶಬ್ದ ಕೇಳಿದ ಕೂಡಲೆ ಕಿವಿಗಳನ್ನು ಮುಂದಕ್ಕೆ ಬಾಗಿಸುತ್ತದೆ.	ಕುದುರೆಯ ಕಿವಿಗಳ ಆಕಾರ, ಚಲನೆ ಇವುಗಳ ವಿಷಯದಲ್ಲಿ ಪ್ರಶ್ನೆಗಳನ್ನು ಹಾಕಬೇಕು. ಯಾವ ಕಡೆಯಿಂದಾದರೂ ಶಬ್ದ ಬಂದರೆ ಕುದುರೆಗಳು ತಮ್ಮ ಕಿವಿಗಳನ್ನು ಹೇಗೆ ಇಟ್ಟುಕೊಳ್ಳುತ್ತವೆ?

ಎರಡನೇ ಭಾಗ.

ವಿಷಯ.	ತಿಳಿಸುವಕ್ರಮ ಮತ್ತು ಪ್ರಶ್ನೆಗಳು.
ಚರ್ಮ—ಕುದುರೆಯ ಚರ್ಮವು ಆಕಳ ಚರ್ಮದಷ್ಟು ಮಂದವಾದದ್ದಲ್ಲ. ಅವರ ಮೇಲಿನ ಕೂದಲು ಮೋಟಾಗಿದ್ದು ವೈದುವಾಗಿರುತ್ತದೆ.	ಕುದುರೆಯ ಚರ್ಮವನ್ನು ಕುರಿತು ವಿಚಾರ ಮಾಡುವಾಗ ಒಂದು ಆಕಳನ್ನೂ ಕರೆದು ತಂದು ಈ ಎರಡು ಪ್ರಾಣಿಗಳ ಚರ್ಮಗಳಲ್ಲಿರುವ ವ್ಯತ್ಯಾಸಗಳನ್ನು ಹುಡುಗರು ಪರೀಕ್ಷಿಸುವಂತೆ ಏರ್ಪಡಿಸುವದು ಒಳ್ಳೇದು. ಅವರು ಇವುಗಳನ್ನು ನೋಡಿದನಂತರ ಈ ವಿಷಯದಲ್ಲಿ ಪ್ರಶ್ನೆಗಳನ್ನು ಕೇಳಬಹುದು.

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ಕಾಲುಗಳು: — ಕುದುರೆಯ ಕಾಲುಗಳು ತೆಳುವಾಗಿಯೂ ಉದ್ದವಾಗಿಯೂ ಇರುತ್ತವೆ. ಮುಂಗಾಲುಗಳ ಮೇಲಿನ ಭಾಗವು ಹೆಚ್ಚು ಗಡುತರವಾಗಿರುತ್ತದೆ.	ಕುದುರೆಯ ಕಾಲುಗಳನ್ನು ಹುಡುಗರು ನೋಡಿ ಅವುಗಳಲ್ಲಿ ಕಾಣುವ ಬೇರೆ ಬೇರೆ ಭಾಗಗಳನ್ನು ವಿವರಿಸಬೇಕು. ಕಾಲುಗಳ ಮೇಲಿನ ಭಾಗಕ್ಕೂ ತಳಭಾಗಕ್ಕೂ ಇರುವ ಹೆಚ್ಚು ಕಡಿಮೆಯನ್ನು ಅವರಿಂದ ಹೊರಡಿಸಬಹುದು.
ಕುದುರೆಯ ಪಾದಗಳಲ್ಲಿ ಬಹಳ ಬಿರುಸಾದ ಕೊಳಗಗಳಿರುತ್ತವೆ. ಇವು ಅಕಳ ಕೊಳಗಗಳಂತೆ ಸೀಳಿರುವುದಿಲ್ಲ.	ಅನಂತರ ಪಾದದ ರಚನೆಯಲ್ಲಿ ಕಂಡುಬರುವ ಸಂಗತಿಗಳಿಗೆ ಲಕ್ಷ್ಯಕೊಡಬೇಕು.
	ಕುದುರೆಯ ಕಾಲುಗಳನ್ನು ಅಕಳಕಾಲುಗಳೊಡನೆ ಹೋಲಿಸಿ ಇವುಗಳ ಪ್ರಮಾಣ ಮತ್ತು ರಚನೆಗಳಲ್ಲಿರುವ ಹೋಲಿಕೆ ವ್ಯತ್ಯಾಸಗಳನ್ನು ಕುರಿತು ಪ್ರಶ್ನೆಗಳನ್ನು ಹಾಕಬೇಕು. [ಕುದುರೆ ಮತ್ತು ಅಕಳ ಪಾದಗಳ ಚಿತ್ರಗಳನ್ನು ಬರೆಯಿಸಬಹುದು.]
ಬಾಲ—ಕುದುರೆಯ ಬಾಲವು ದಪ್ಪವಾಗಿದ್ದು ತುದಿಯಲ್ಲಿ ಪಾತ್ರ ಸಣ್ಣದಾಗಿರುತ್ತದೆ. ಬಾಲದಲ್ಲಿ ಬಹಳ ಉದ್ದವಾದ ಕೂದಲುಗಳಿರುತ್ತವೆ. ಈ ಬಾಲವ ಸಹಾಯದಿಂದ ನೊಣ ಮೊದಲಾದವುಗಳನ್ನು ಓಡಿಸುತ್ತದೆ.	ಹುಡುಗರು ಕುದುರೆಯ ಬಾಲವನ್ನು ನೋಡಿ ಅದರ ರಚನೆಯನ್ನು ವಿವರಿಸಬೇಕು. ಈ ಬಾಲದಿಂದ ಕುದುರೆಗೆ ಪ್ರಯೋಜನವೇನು? ಕುದುರೆಯ ಬಾಲಕ್ಕೂ ಅಕಳಬಾಲಕ್ಕೂ ಇರುವ ವ್ಯತ್ಯಾಸವೇನು?

M. Ramabrahma.

ವಿದ್ಯಾಖಾತೆಯ ನೋಟೀಸುಗಳು.

ಪ್ರಾಥಮಿಕ ಶಾಲೆಗಳಿಗಾಗಿ ಮಂಜೂರ ಮಾಡಿದ ಪುಸ್ತಕಗಳ ಯಾದಿಯನ್ನು ಎಲ್ಲ ಜನರ ತಿಳುವಳಿಕೆಗಾಗಿ ಇಲ್ಲಿ ಪ್ರಸಿದ್ಧ ಮಾಡಿರುತ್ತದೆ.

ನಂ	ಪುಸ್ತಕದ ಹೆಸರು.	ಪುಸ್ತಕವು ಯಾವ ಭಾಷೆಯಲ್ಲಿ ಮುದ್ರಿತವಾಗಿದೆ.	ಯಾತರಬಗ್ಗೆ ಮಂಜೂರಾಗಿದೆ.	ಬೆಲೆ.	ಶರಾ.
೧.	ದಾತಾರ, ಆರ್. ಎನ್. ಬಿ. ಎನ್. ಮತ್ತು ಜೀ. ಎನ್. ಪೂನಾನಿವಾಸೀ ಕೃತ:—		ಉರ್ದು ಶಾಲೆಗಳಲ್ಲಿ ಉಪಯೋಗಿಸುವದಕ್ಕೆ.		
	೧ ಇಂಡಿಯಾದ ವಾಣಿಜ್ಯವ್ಯಾಪಾರ	ಉರ್ದು.		೪-೮-೦	
	೨ ತಪ್ತಾ ಈ ತಸವೀರ ಹಯಿ ವನತ. ಅಥವಾ ಪ್ರಾಣಿಯ ಚಿತ್ರವುಳ್ಳ ಪಟ (ಉರ್ದುವಿನಲ್ಲಿ)			೧-೪-೦	
೨.	ದೇವಿದತ್ತ ಶರ್ಮಾ, ಭಾವಳಿ ಜಿಲ್ಹಾ ನೈನಿತಾಲ:— ಕಿಂಡರ ಗಾರ್ಟನ್ ಪೆಟ್ಟಿಗೆ ನಂ. ೨೧.	ಉರ್ದು.		೨-೫-೨	

Poona
August. 17

Sd/. K. G. Joshi
For Director of Public I.

ಮೆಹರಬಾನ ಡಾಯರೆಕ್ಟರ ಸಾಹೇಬರವರ ಅಪ್ಪಣೆಯಂತೆ ಧಾರವಾಡದ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದಲ್ಲಿ ಸದ್ಯಕ್ಕೆ ಶಿಕ್ಷಣವನ್ನು ಹೊಂದುತ್ತಿರುವ ವಿದ್ಯಾರ್ಥಿನಿಯರು ನೈತಿಕ ಪಾಠವನ್ನು ಕಲಿಸಿ, ಅದರಲ್ಲಿ ಕಮೀಟಯವರಿಂದ ಯೋಗ್ಯಳೆಂದು ನಿರ್ಣಯಿಸಲ್ಪಡುವ ಹೆಣ್ಣು ಮಗಳಿಗೆ ಬಂಗಾರದ ಪದಕವನ್ನು ಇನಾಮು ಕೊಡುವದು ಮೊತ್ತಾದ ಮೇರೆಗೆ ತಾರೀಖು ೧೯ನೇ ಅಕ್ಟೋಬರ ೧೯೧೭

ನೇ ಇ|| ಯ ದಿವಸ ೧೨ ಗಂಟೆಯಿಂದ ಈ ಪರೀಕ್ಷೆಯು ಹೆಣ್ಣು ಮಕ್ಕಳ ಟ್ರೇನಿಂಗ್ ಕಾಲೇಜಿನಲ್ಲಿ ಮೆಹರಬಾನ ಎಜ್ಯುಕೇಶನಲ್ ಇನ್‌ಸ್ಪೆಕ್ಟರ ದಕ್ಷಿಣಭಾಗ ಇವರ ಅಧ್ಯಕ್ಷತೆಯಲ್ಲಿ ನಡೆಯುವದು. ಅಂದು ಮುಗಿಯದಿದ್ದರೆ ಮರುದಿವಸವೂ ನಡೆಯುವದು ಈ ಕಮಿಟಿಗೆ ಮೆ. ಲೇಡೀ ಸುಪರಿಂಟೆಂಡೆಂಟರು, ಧಾರವಾಡದ ಡೆಪ್ಯುಟಿ ಎಜ್ಯುಕೇಶನಲ್ ಇನ್‌ಸ್ಪೆಕ್ಟರರು, ಧಾರವಾಡ ಹೈಸ್ಕೂಲಿನ ಹೆಡ್‌ಮಾಸ್ತರರು ಮೆಂಬರರಾಗಿರುವರು. ಹೆಣ್ಣು ಮಕ್ಕಳ ಟ್ರೇ. ಕಾಲೇಜದ ಪ್ರ್ಯಾಕ್ಟಿಸಿಂಗ ಸ್ಕೂಲಿನ ನಾಲ್ಕನೆಯ ಇಯತ್ತೆಯ ವಿದ್ಯಾರ್ಥಿನಿಯರಿಗೆ 'ಗೃಹವ್ಯವಸೆ' ಎಂಬ ವಿಷಯವನ್ನು ಕುರಿತು, ನೀತಿಸಾತನನ್ನು ಕಲಿಸತಕ್ಕದ್ದಿರುವದ.

ತಾ. ೧೨–೯–೧

ಮೆ. ಎಜ್ಯುಕೇಶನಲ್ ಇನಸ್ಪೆಕ್ಟರ, ದಕ್ಷಿಣಭಾಗ, ಇವರ ಇಂಗ್ರೇಜೀ ಪತ್ರ ನಂಬರ ೩೫೬೫, ತಾರೀಖು ೧೪ನೇ ಜುಲೈ ಸನ್ ೧೯೧೨ನೇ ಇ|| ಯ ಮೇರೆಗೆ ಪ್ರಸಿದ್ಧಪಡಿಸುವದೇನಂದರೆ—ಮೆಸರ್ಸ ಶಾಸ್ತ್ರಿ ಮತ್ತು ಕುಪನಿ ಇವರಿಂದ ತಯಾರಿಸಲ್ಪಟ್ಟ ಕೆಳಗೆ ಕಾಣಿಸಿದ ಸಾಮಾನುಗಳನ್ನು ಶಾಲೆಯೊಳಗಿನ ಹುಡುಗರಿಗೆ ಇನಾಮು ಕೊಡುವ ಬಗ್ಗೆ ಮೆ. ಡಾಯರೆಕ್ಟರ ಸಾ. ಬಹಾದ್ದೂರವರು ಮಂಜೂರ ಮಾಡಿದ್ದಾರೆ.

ನ. ೧. ಮೇಜು ಮತ್ತು ವಿದ್ಯಾರ್ಥಿಗಳ ಡೆಸ್ಕುಗಳ ಸಲುವಾಗಿ ಮಿತ್ರ ರಾಷ್ಟ್ರದವರ ರೇಶಿಮೆಯ ನಿಶಾನೆಗಳು.— ೦–೮–೦

ನು ೨. ಟೊಪ್ಪಿಗೆಗಳ ಮೇಲೆ ಧರಿಸುವ ದೇಶಾಭಿಮಾನದ್ಯೋತಕ ರೇಶಿಮೆಯ ಸಣ್ಣ ನಿಶಾನೆಗಳು.— ೦–೧–೦

ನ. ೩. ಸದರ ನೂಲಿನದು. ೦–೦–೬

ನ. ೪. ಅ, 'ಲಾಂಗ ಲಿವ್ ಅವರ ಕಿಂಗ ಆಂಡ ಕ್ವೀನ' ಎಂಬ ಹೆಸರುಳ್ಳ ಪದಕಗಳು —೦–೪–೦

ಬ. ವಿದ್ಯಾರ್ಥಿಗಳ ಕೋಟು ಟೊಪ್ಪಿಗೆಗಳ ಮೇಲೆ ಧರಿಸುವ ಉತ್ತಮವಾದ ರೇಶಿಮೆಯ ನಿಶಾನೆಗಳು ೦–೨–೦

ಕ. ಅರಸು ಅರಸಿಯರ ಚಿತ್ರಗಳ ಪದಕಗಳು. ೦–೩–೦

ನ. ೪. ಸಿಂಪಿನ ಪದಕಗಳು. ೦– ೬–೦

ನ. ೫. ನಾಲ್ಕು ತರದ ನಿಶಾನೆಯ ಚಿತ್ರವುಳ್ಳ ಕಾಚಾವರಣದ (ಎನ್ಯಾಮ. ಲಿನ) ಪದಕಗಳು. ೦– ೨–೦

ನ. ೬. ದೇಶಾಭಿಮಾನದ್ಯೋತಕ ಶಿರೋಭೂಷಣ (ಹ.ಡ.ಗೆಯದದು) ೦–೧೨–೦

ನ. ೭. ಸಿಂಪಿನಂತೆ ಹೊಳೆಯುವ ಎನ್ಯಾಮಲಿನ ಒಂದು ನಿಶಾನೆಯುಳ್ಳ ಶಿರೋಭೂಷಣ (ಹುಡುಗೆಯ.ರದು). ೦–೧೨–೦

ಕೆಳಗೆ ಕಾಣಿಸಿದ ಪುಸ್ತಕಗಳು ಮೆ. ಎ. ಇ. ಸಾ. ದ ಭಾ. ರವರಿಂದ ಅವುಗಳ ಮುಂದೆ ತೋರಿಸಿದ ಕೆಲಸಗಳಿಗಾಗಿ ಮಂಜೂರ ಮಾಡಲ್ಪಟ್ಟಿವೆ.

ನಂಬರು.	ಪುಸ್ತಕ ಮತ್ತು ಗ್ರಂಥ ಕರ್ತರ ಹೆಸರು.	ಮಂಜೂರಿಯ ನಂಬರು.	ಯಾತಕ್ಕೆ ಮಂಜೂರಾಗಿದೆ
೧	ಜ್ಯೂನಿಯರ ಜಾಗ್ರಫೀ ಆಫ್, ಇಂಡಿಯಾ, ಬರ್ಮಾ ಆಂಡ ಸಿಲೋನ:— C. Morrison Esq L. L. B. Newington, Madras.	೫೪೯೬ ೧೫–೮–೧೬	ಪ್ರಾ. ಮತ್ತು ಮಧ್ಯಮ ತರಗತಿಯ ಶಾಲೆಗಳ ಲಾಯಬ್ರರಿಗೂ, ಇನಾಮಿಗೂ, ಟ್ರೇ. ಕಾಲೇಜಗಳ ಲಾಯಬ್ರರಿಗೂ,
೨	ಐದನೇ ತರಗತಿಯ ಅಂಕಗಣಿತ:— R. Alavarayyangar Chikkaballapur.	೪೫೯೩ ೧೫–೮–೧೬	ಕನ್ನಡ ಪ್ರಾಥಮಿಕ ಶಾಲೆಗಳ ಲಾಯಬ್ರರಿಗಾಗಿ.

ತಾ. ೧೬–೯–೧೯೧೬. } R. S. Kulkarni
Principal.

ಧಾರವಾಡ ಟ್ರೇನಿಂಗ ಕಾಲೇಜಿನ ಪ್ರವೇಶಪರೀಕ್ಷೆಯು.

೧. ಧಾರವಾಡ ಟ್ರೇನಿಂಗ ಕಾಲೇಜಿನ ಪ್ರವೇಶಪರೀಕ್ಷೆಯು ಬರುವ ದಿಶಂಬರ ತಿಂಗಳ ೩ನೇ ತಾರೀಖು ಸೋಮವಾರ ದಿವಸ ೧೧ ಗಂಟೆಗೆ ಸರಿಯಾಗಿ ಪ್ರಾರಂಭವಾಗುವದು. ಎಲ್ಲ ಉಮೇದವಾರರು ಆ ದಿವಸ ಟ್ರೇನಿಂಗ ಕಾಲೇಜಿನಲ್ಲಿ ಪರೀಕ್ಷೆಗೆ ಹಾಜರ ಇರಬೇಕು. ಉಮೇದವಾರರ ಹೆಸರು ಹಚ್ಚಿಕೊಳ್ಳುವ ಕೆಲಸವು ದಿಶಂಬರ ೧ನೇ ತಾರೀಖು ಶನಿವಾರ ೧೧ ಗಂಟೆಗೆ ಪ್ರಾರಂಭವಾಗುವದು. ಆ ಸಮಯಕ್ಕೆ ಉಮೇದವಾರರು ತಮಗೆ ಕಾಣಿಸಿದ ಮೂರು ಕಾಗದಗಳನ್ನು ಹೆಸರು ಹಚ್ಚಿಕೊಳ್ಳುವವರ ಕಡೆಗೆ ಕೊಡಲಿಕ್ಕೆ ಬೇಕು.

(೧) ಮುಖ್ಯ ಅಥವಾ ಪ್ಹನ್ಯಾಕ್ಯುಲರ ಫಾಯನಲ್ ಪರೀಕ್ಷೆಯ ಸರ್ಟಿಫಿಕೇಟು.

(೨) ಒಳ್ಳೇ ನಡತೆಯ ಬಗ್ಗೆ ಮತ್ತು ತಾವು ಯಾವ ಜಿಲ್ಲೆಗೆ ಹೆಸರು ಹಚ್ಚಿ ಸತಕ್ಕವನೋ ಆ ಜಿಲ್ಲೆಯಲ್ಲಿ ಕಾಯಮ ವಾಸಸ್ಥಳವುಳ್ಳವರಾಗಿ ಇರುವರೆಂಬ ಬಗ್ಗೆ (ಈ ನೋಟೀಸಿನ ಕೊನೆಯಲ್ಲಿ ಕೊಟ್ಟ ನಮೂನೆಯಂತೆ) ತಾವು ಕಲಿತ ಶಾಲೆಯ ಹೆಡ್‌ಮಾಸ್ತರರ ಸರಟಫಿಕೇಟು.

(೩) ಜಾಮೀನ ಪತ್ರ:— ಈ ನೋಟೀಸಿನ ಕೆಳಗೆ ಕೊಟ್ಟ ನಮೂನೆಯಂತೆ ಸಾದಾ ಕಾಗದದ ಮೇಲೆ ಬರೆಯಿಸಿ ಜಾಮೀನದಾರರ ಸಹಿ ಮಾಡಿಸಿ ಅವರ ಕಡೆಯಿಂದ ಕೊಟ್ಟಿರುವ ಗ್ರಾಮಸ್ಥರ ದಾಖಲೆ ಸಹಿತ ತಯಾರ ಮಾಡಿದ್ದು.

ಮೇಲ್ಕಾಣಿಸಿದ ಮೂರು ದಾಖಲೆಗಳನ್ನು ಹಾಜರ ಮಾಡಿದ ಹೊರತು ಹೆಸರು ಹಚ್ಚಿಕೊಳ್ಳಲಿಕ್ಕಿಲ್ಲ.

೨. ಈ ಪರೀಕ್ಷೆಯು ಪ್ಹನ್ಯಾಕ್ಯುಲರ ಫಾಯನಲ್ ಅಂದರೆ ದೇಶಭಾಷೆಯ ೭ನೆಯ ಇಯತ್ತೆಯ ಎಲ್ಲ ವಿಷಯಗಳಲ್ಲಿ ಆಗುವದು. ಚಲೋ ಅಕ್ಷರ ಬರೆಯೋಣ, ಶುದ್ಧ ಬರಹ, ವಿರಾಮಚಿಹ್ನಗಳ ಉಪಯೋಗವನ್ನು ಸರಿಯಾಗಿ ಮಾಡೋಣ, ಅಚ್ಚುಕಟ್ಟುತನವಿರೋಣ, ಈ ಗುಣಗಳು ಕಂಡುಬರುವ ಉಮೇದವಾರರನ್ನು ವಿಶೇಷವಾಗಿ ಆರಿಸಲಾಗುವದು.

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶಪರೀಕ್ಷೆಯು.

೩. ಉಮೇದವಾರರು ದಿಶಂಬರ ೧ ನೇ ತಾರೀಖಿಗೆ ೧೭ ವರ್ಷ ಸಂಪೂರ್ಣ ಆದವರೂ ೨೨ ವರ್ಷ ಮಿಕ್ಕದವರೂ ಇರಲಿಕ್ಕೆಬೇಕು.

ವಿಶೇಷಸೂಚನೆ:—ಧಾರವಾಡ ಊರಲ್ಲಿ ಅಥವಾ ಕಾಲೇಜದಲ್ಲಿ ಪ್ಲೇಗಬೇನೆಯ ಲಕ್ಷಣಗಳು ತೋರಲಾಗಿ ಕಾಲೇಜದ ವಿದ್ಯಾರ್ಥಿಗಳು ಪ್ಲೇಗನ ಮೈಲಿಯನ್ನು ಜುಚ್ಚಿಸಿಕೊಳ್ಳಬೇಕೆಂದು ಕಾಲೇಜದ ಡಾಕ್ಟರರಾದ ಸಿವಿಲ್‌ಸರ್ಜನ್ ಸಾಹೇಬರವರು ಅಭಿಪ್ರಾಯ ಪಟ್ಟರೆ, ಅದರಂತೆ ಕಾಲೇಜದ ವಿದ್ಯಾರ್ಥಿಗಳು ಮೈಲಿಯನ್ನು ಜುಚ್ಚಿಸಿಕೊಳ್ಳಲಿಕ್ಕೆಬೇಕು.

೪. ಉಮೇದವಾರರು ಶರೀರದಿಂದ ನಿರ್ವ್ಯಂಗರು ಅಂದರೆ ವಿಶೇಷವಾಗಿ ಕಣ್ಣು, ಕಿವಿ, ಮತ್ತು ಬಾಯಿ ಈ ಅಂಗಗಳಲ್ಲಿ ನ್ಯೂನತೆಗಳಿಲ್ಲದವರು, ೫ ಫೂಟಗಿಂತ ಹೆಚ್ಚು ಎತ್ತರವಿದ್ದವರು, ಆರಿಸಲ್ಪಡತಕ್ಕವರು.

೫. ಉಮೇದವಾರರು ತಾವು ಕಾಯಮಾಗಿ ಇರುವ ಜಿಲ್ಲೆಗೇ ಹೆಸರು ಹಚ್ಚಿಸತಕ್ಕದ್ದು. ಸಂಸ್ಥಾನದ ಹದ್ದಿನೊಳಗಿನ ಉಮೇದವಾರರು ತಮ್ಮ ಸಂಸ್ಥಾನದ ಡಿ. ಎ. ಇನ್‌ಸ್ಪೆಕ್ಟರರವರ ಪರವಾನಗಿಯನ್ನು ತಂದರೇ ಅವರ ಹೆಸರನ್ನು ಹಚಿಕೊಳ್ಳಲಾಗುವದು.

೬. ವ್ಹ. ಫಾ. ಪರೀಕ್ಷೆಯಲ್ಲಿ ನೂರಕ್ಕೆ ೪೫ ರಂತೆ ಗುಣಗಳನ್ನು ದೊರಕಿಸಿದ ಉಮೇದವಾರರು ಮಾತ್ರ ತಮ್ಮ ತಮ್ಮ ಜಿಲ್ಲೆಯ ಡಿ. ಎ ಇ. ಸಾ. ರವರ ಮುಖಾಂತರ ಅರ್ಜಿಗಳನ್ನು ಕಳಿಸಬೇಕು. ಪರಭಾರೆ ಬಂದ ಅರ್ಜಿಗಳನ್ನು ಹಿಡಿಯಲಿಕ್ಕಿಲ್ಲ. ಮುಸಲ್ಮಾನ ಕೀಳು ಮುಂತಾದ ಹಿಂದುಳಿದ ಜಾತಿಯವರಿಗೆ ಗುಣಗಳ ನಿಯಮವು ಹತ್ತುವದಿಲ್ಲ.

೭. ಪ್ರತಿಯೊಬ್ಬ ಉಮೇದವಾರನು ತನ್ನ ಸಂಗಡ ತಕ್ಕಷ್ಟು ತೊಡವ ಹಾಗು ಹಾಸುವ ಅರಿವೆ ಮುಂತಾದ್ದನ್ನು ತರಲಿಕ್ಕೆಬೇಕು. ಪ್ರತಿ ಒಬ್ಬನಿಗೆ ಮೇಲಿನ ಅಂಗಿಗಳು ಅಂದರೆ ಕೋಟುಗಳು ೨, ಒಳಗಿನ ಪೈರಣಗಳು ಅಥವಾ ಬಗಲಬಂಡಿಗಳು ನಾಲ್ಕು, (ಅವುಗಳಲ್ಲಿ ಒಂದು ಉಣ್ಣೆಯದು ಇರತಕ್ಕದ್ದು) ೧ ಹಚ್ಚಡ, ೧ ಹೊದ್ದುಕೊಳ್ಳುವ ಕಂಬಳಿ ಅಥವಾ ಬ್ಲ್ಯಾಂಕೇಟು, ಹಾಗು ಪುಸ್ತಕ ಮುಂತಾದ್ದನ್ನು ಇಡಲಿಕ್ಕೆ ಒಂದು ತಗಡಿನ ಟ್ರಂಕು ಇರತಕ್ಕದ್ದು.

೮. ಪ್ರತಿಯೊಬ್ಬ ಉಮೇದವಾರನ ಬಳಿಯಲ್ಲಿ ಜನ್ ಇಯತ್ತೆಯಿಂದ ಒನೇ ಇಯತ್ತೆಯವರೆಗೆ ಬೇಕಾಗುವ ಎಲ್ಲ ಹೊಸ ಕ್ರಮಿಕ ಪುಸ್ತಕಗಳೂ, ಒನೇ ಇಯತ್ತೆಯ ಇತರ ಎಲ್ಲ ಪುಸ್ತಕಗಳೂ ಇರಲಿಕ್ಕೆ ಬೇಕು.

೯. ಮೇಲೆ ಬರೆದ ಪುಸ್ತಕಗಳಲ್ಲದೆ ಬೇರೆ ಅವಶ್ಯಕ ಪುಸ್ತಕಗಳನ್ನೂ ಚಿತ್ರಕಲೆ ಮುಂತಾದವುಗಳ ಸಾಮಾನುಗಳನ್ನೂ ಕೊಂಡುಕೊಳ್ಳಲಿಕ್ಕೆ ೧೦ ರೂಪಾಯಿಗಳು ಬೇಕಾಗುವವು. ಮತ್ತು ಬೋರ್ಡಿಂಗಿನ ಅಡ್ವಾನ್ಸಿನ ಸಂಬಂಧದಿಂದ ೧೦ ರೂಪಾಯಿಗಳು ಬೇಕಾಗುವವು. ಆದಕಾರಣ ಪ್ರತಿಯೊಬ್ಬ ಉಮೇದವಾರನು ೨೦ ರೂಪಾಯಿಗಳನ್ನು ಸಂಗಡ ತರಲಿಕ್ಕೆಬೇಕು.

ಪ್ರನೇಶಸರೀಕ್ಷೆಯ ಉಮೇದನಾರರು ಸಂಗಡ ತಂಬಿ ತರತಕ್ಕ ಜಾಮೀನ ಪತ್ರದ ನಮೂನೆಯು.

ನಾವು ೧. (ಇಲ್ಲಿ ೧ ನೇ ಜಾಮೀನದಾರನ ಹೆಸರು ಬರೆಯುವದ).

೨. (ಇಲ್ಲಿ ೨ ನೇ ಜಾಮೀನದಾರನ ಹೆಸರು ಬರೆಯುವದು).

ಈ ಬರಹದ ಮೂಲಕವಾಗಿ—(ಇಲ್ಲಿ ಉಮೇದವಾರನ ಹೆಸರು ಬರೆಯುವದು) ಎಂಬವನಿಗೆ ಜಾಮೀನ ಆಗಿ ಬರಕೊಡುವದೇನಂದರೆ:—ಸದರೀ—(ಇಲ್ಲಿ ಅದೇ ಉಮೇದವಾರನ ಹೆಸರು ಬರೆಯುವದು)—ಇವನು ಧಾರವಾಡ ಟ್ರೇನಿಂಗ ಕಾಲೇಜಿನ ಕೋಡಿನ ನಿಯಮಗಳ ಪ್ರಕಾರ ನಡೆಯುವದಕ್ಕೆ ತಪ್ಪಿದರೆ ನಾವು ಇಬ್ಬರೂ ಕೂಡಿ ಅಥವಾ ನಮ್ಮಲ್ಲಿ ಪ್ರತಿಒಬ್ಬರು ಪ್ರತಪ್ರತ್ಯೇಕವಾಗಿ ಬೇರೊಬ್ಬನ ಉಜೂರು ಹೇಳದೆ ಸರಕಾರಕ್ಕೆ ೫೦ (ಮುನ್ನೂರು) ರೂಪಾಯಿಗಳನ್ನು ಕೊಡುವಡಕ್ಕೆ ಈ ಲೇಖದಿಂದ ಒಪ್ಪಿಕೊಳ್ಳುತ್ತೇನೆ.

ತಾ॥ ಮಾಹೆ ಸನ್.

ಸಹಿ. ೧. (ಇಲ್ಲಿ ೧ ನೇ ಜಾಮೀನದಾರನ ಸಹಿ).

೨. (ಇಲ್ಲಿ ೨ ನೇ ಜಾಮೀನದಾರನ ಸಹಿ).

ದಾಖಲೆ ಕೊಡುವದೇನಂದರೆ:—ಮೇಲೆ ಸಹಿ ಮಾಡಿದ ಇಬ್ಬರು ಜಾಮೀನದಾರರಲ್ಲಿ ಪ್ರತಿ ಒಬ್ಬರು ಬೇರೆ ಬೇರೆಯಾಗಿ (ಇಲ್ಲಿ ಉಮೇದವಾರನ ಪೂರ್ಣ ಹೆಸರು ಬರೆಯುವದು) ಇವನಿಗೆ ೫೦ (ಮುನ್ನೂರು) ರೂಪಾಯಿಗೆ ಜಾಮೀನು ಆಗುವದಕ್ಕೆ ಲಾಯಖು ಇದ್ದು ಕಬೂಲ ಇದ್ದಾರೆ. ತಾ॥ ಮಾಹೆ ಸನ್.

೧. (ಇಲ್ಲಿ ಕೆಲಸ ನೋಡುವ ಗೌಡನ ಸಹಿ).

೨. (ಇಲ್ಲಿ ಕೆಲಸ ನೋಡುವ ಕುಲಕರ್ಣಿಯ ಸಹಿ).

ಒಳ್ಳೇ ನಡತೆಯ ಮತ್ತು ವಾಸಸ್ಥಳದ ಬಗ್ಗೆ ಸರ್ಟಿಫಿಕೇಟು.

ನಾನು (ಇಲ್ಲಿ ಹೆಡ್ ಮಾಸ್ತರನ ಪೂರ್ಣ ಹೆಸರು ಬರೆಯುವದು).

ಶಾಳಾ.....ತಾಲೂಕ.....ಜಿಲ್ಲಾ..... ಸರ್ಟಿಫಿಕೇಟು ಕೊಡುವದೇನಂದರೆ:—(ಇಲ್ಲಿ ಉಮೇದವಾರನ ಪೂರ್ಣ ಹೆಸರು ಬರೆಯುವದು)—ಈತನು ಒಳ್ಳೇ ನಡತೆಯನಿದ್ದು.....ಜಿಲ್ಲೆಯಲ್ಲಿದ್ದ..... ಎಂಬ ಊರು ಅವನ ಕಾಯಮಾವ ವಾಸಸ್ಥಳವಿರುತ್ತದೆ.

ಶಾಳಾ.. ತಾ. ಜಿಲ್ಲೆ

ತಾರೀಖು. ಮಾಹೆ ಸನ್.

ಹೆಡ್‌ಮಾಸ್ತರನ ಸಹಿ.

ಶಾಲಾಪತ್ರಿಕೆ.

ಪುಸ್ತಕ ೫೩. | ಅಕ್ಟೋಬರ್ ೧೯೧೭. | ಸಂಚಿಕೆ ೧೦.

ಸರ್. ಎಮ್. ವಿಶ್ವೇಶ್ವರಯ್ಯನವರ ಭಾಷಣವು.

ಮೈಸೂರು ಅರ್ಥಸಾಧಕ ಸಭೆಯ ಪ್ರೋತ್ಸಾಹದಿಂದ ಬೆಂಗಳೂರಿನಲ್ಲಿರುವ 'ವಿಜ್ಞಾನ ಪ್ರಚಾರಿಣೀ ಸಮಿತಿ'ಯವರು ಸಾಮಾನ್ಯ ಜನರಲ್ಲಿ ಶಾಸ್ತ್ರೀಯ ವಿಷಯದ ಜ್ಞಾನವನ್ನು ಪಬ್ಬುಗೊಳಿಸುವ ಉದ್ದೇಶದಿಂದ 'ವಿಜ್ಞಾನ'ವೆಂಬ ಮಾಸ ಪತ್ರಿಕೆಯನ್ನು ಹೊರಡಿಸಿದ ಸಂಗತಿಯನ್ನು ಕನ್ನಡ ಶಾಲಾಪತ್ರಿಕೆಯ ಏಪ್ರಿಲ ತಿಂಗಳ ಸಂಚಿಕೆಯಲ್ಲಿ ತಿಳಿಸಿರುವೆವಷ್ಟೇ; ಅದೇ ಸಭೆಯವರು ಅಧುನಿಕ ಶಾಸ್ತ್ರಗಳ ವಿಷಯವಾಗಿ ಕೆಲವು ಉಪನ್ಯಾಸಗಳನ್ನು ಸಾಮಾನ್ಯ ಜನರ ತಿಳುವಳಿಕೆಗಾಗಿ ಕನ್ನಡದಲ್ಲಿ ಕೊಡಬೇಕೆಂಬ ಉದ್ದೇಶವನ್ನಿಟ್ಟುಕೊಂಡ ಮೇರೆಗೆ ಆಗಷ್ಟ ತಿಂಗಳ ೬ನೇ ತಾರೀಖು ಬುಧವಾರ ದಿವಸ ಬೆಂಗಳೂರಿನಲ್ಲಿ ಕೂಡಿದ ಸಭೆಯಲ್ಲಿ ಅಧ್ಯಕ್ಷರಾದ ಸರ್. ಎಮ್. ವಿಶ್ವೇಶ್ವರಯ್ಯನವರು ಉಪೋದ್ಘಾತ ರೂಪದಿಂದ ಮಾಡಿದ ಭಾಷಣವು ಉಪಯುಕ್ತವಾದದ್ದಿರುವದರಿಂದ, ಅದರ ಸಾರಾಂಶವನ್ನು ಇದರಡಿಯಲ್ಲಿ ಕೊಟ್ಟಿರುವೆವು.

ಅವರು ಅಂದದ್ದೇನಂದರೆ:—ನಮ್ಮ ದೇಶದಲ್ಲಿ ಇಂಗ್ಲೀಷು ತಿಳಿದಿರುವವರು ಕಡಿಮೆ; ಅವರಲ್ಲಿಯೂ ಶಾಸ್ತ್ರ ತಿಳಿದವರು ತೀರ ಕಡಿಮೆ; ಆದುದರಿಂದ ಕನ್ನಡ ಭಾಷೆಯ ಮೂಲಕವಾದರೂ ಶಾಸ್ತ್ರಜ್ಞಾನವನ್ನು ನಮ್ಮಲ್ಲಿ ಪಬ್ಬಿಗಿ ರೂಢಿಸದೆ ಹೋದರೆ ವಿಜ್ಞಾನದ ತಿಳುವಳಿಕೆಯು ನಮ್ಮ ಜನರಿಗೆ ಬೇಗೆ ಆಗಬೇಕು?

ಬಹಳ ನಾಗರಿಕತೆಯುಳ್ಳ ದೇಶಗಳಿಗೂ ನಮಗೂ ಕೆಲವು ಮುಖ್ಯ ಭೇದಗಳುಂಟು. ಅವು ಯಾವವೆಂದರೆ:—

ನಮಗಿಂತಲು ಅವರು ಹೆಚ್ಚು ಶ್ರಮದಿಂದ ಕೆಲಸ ಮಾಡುವರು. ನಮ್ಮಲ್ಲಿ ನೂರಕ್ಕೆ ೧೦ ಜನರು ವಿದ್ಯಾವಂತರಿದ್ದರೆ, ಅವರಲ್ಲಿ ೯೦ ಜನ

ರಿರುವರು. ಆದ ಕಾರಣ ಅವರಲ್ಲಿ ವಿಜ್ಞಾನ ವಿಷಯಗಳು ಬಹಳ ಮಟ್ಟಿಗೆ ಹರಡಿಕೊಂಡಿವೆ; ಅಲ್ಲದೆ ಅವರಲ್ಲಿ ಅನೇಕರು ಒಕ್ಕಟ್ಟಿನಿಂದ ಕೆಲಸ ಮಾಡುವದರ ಪ್ರಯೋಜನವನ್ನು ಹೆಚ್ಚಾಗಿ ಬಲ್ಲವರಾಗಿದ್ದಾರೆ. ಈ ವಿಜ್ಞಾನದ ತಿಳುವಳಿಕೆಯೇ ಅವರ ನಾಗರಿಕತೆಗೂ ಉನ್ನತಪದವಿಗೂ ಮುಖ್ಯ ಕಾರಣವಾಗಿದೆ.

ವಿಜ್ಞಾನದ ತಿಳುವಳಿಕೆ ಇದ್ದರೆ, ಅದು ಒಂದು ದೊಡ್ಡ ಶಕ್ತಿ ಇದ್ದ ಹಾಗೆಯೇ ಸರಿ. ಈ ಶಕ್ತಿಯನ್ನು ಒಳ್ಳೆಯ ಕೆಲಸಗಳಿಗೂ ಕೆಟ್ಟ ಕೆಲಸಗಳಿಗೂ ಉಪಯೋಗಿಸಬಹುದು. ಈ ಶಕ್ತಿಯ ಬಲದಿಂದ ಈಗ ನಡೆಯುತ್ತಿರುವ ಘೋರಯುದ್ಧದಲ್ಲಿ ಎಷ್ಟೋ ವಿಲಕ್ಷಣವಾದ ದುಷ್ಕೃತ್ಯಗಳನ್ನು ಶತ್ರುನಾಶನಕ್ಕಾಗಿ ಮಾಡುತಿರುವರು.

೧೫ ಅಂಗುಲ ಅಗಲಾದ ಬಾಯುಳ್ಳ ಫಿರಂಗಿಗಳನ್ನು ಮಾಡಿ ೧೦ ರಿಂದ ೧೬ ಮೈಲುಗಳ ದೂರದವರೆಗೂ ಗುಂಡುಗಳನ್ನು ಹೊಡೆಯುವರು. ವಿಮಾನಗಳಲ್ಲಿ ಕುಳಿತು ಯುದ್ಧಮಾಡುವರು. ಆ ವಿಮಾನಗಳ ಸಹಾಯದಿಂದ ಶತ್ರುಗಳಿರುವ ಸ್ಥಳಕ್ಕೆ ಹಾರಿ, ಅವರ ಮಾರ್ಗಗಳನ್ನು ತಿಳಿದುಕೊಂಡು ಬರುವರು; ಅಲ್ಲದೆ ಅವರ ಮೇಲೆ ಅಕಸ್ಮಾತ್ತಾಗಿ ಸಿಡಿಮದ್ದನ್ನು ಹಾಕಿ ಗಾಬರಿ ಪಡಿಸುವರು. ಸಾವಿರಾರು ಜನರು ಅವಿತುಕೊಂಡಿರುವ ಕಂದಕಗಳೊಳಗೆ ವಿಷದ ಗಾಳಿಯನ್ನು ಬಿಟ್ಟು ಅವರನ್ನು ಕೊಲ್ಲುವರು; ಇಲ್ಲವೆ ಅಲ್ಲಿಂದ ಓಡಿಹೋಗುವ ಹಾಗೆ ಮಾಡುವರು. ಬುಟ್ಟಿಯ ಹಾಗಿರುವ ಮುಳುಗುದೋಣಿಗಳನ್ನು ಮಾಡಿ ಸಮುದ್ರದೊಳಗೆ ಅಡಗಿ ಮೀನಿನಂತೆ ಸಂಚರಿಸುತ್ತ ಶತ್ರುಗಳ ಹಡಗು ಬರುವ ಸಮಯವನ್ನು ಕಾದು, ಹಠಾತ್ತಾಗಿ ಮೇಲಕ್ಕೆ ಎದ್ದು ಗುಂಡು ಹೊಡೆದು ಅದನ್ನು ಮುಳುಗಿಸುವರು. ಇವು ವಿಜ್ಞಾನ ಬಲವನ್ನು ದುರುಪಯೋಗ ಪಡಿಸುವ ಮಾರ್ಗಗಳು.

ಆದರೆ, ವಿಜ್ಞಾನ ಬಲದಿಂದ ಉಂಟಾಗುವ ಉಪಯುಕ್ತವಾದ ವಿಷಯಗಳು ಅನೇಕವಿವೆ. ಈ ಯುದ್ಧದಲ್ಲಿ ಬಹಳವಾಗಿ ಪ್ರಾಬಲ್ಯಕ್ಕೆ ಬಂದಿರುವ ವಿಮಾನಗಳ ಮೂಲಕ, ಈಗ ಇಂಗ್ಲಂಡದಿಂದ ಇಲ್ಲಿಗೆ ೧೫ ದಿವಸಗಳಲ್ಲಿ ಬರುತ್ತಿದ್ದ ಟಪಾಲನ್ನು ಮೂರೇ ದಿವಸಗಳಲ್ಲಿ ತರಿಸಲು ಯತ್ನ ಮಾಡುತ್ತಿದ್ದಾರೆ. ಯುದ್ಧವು ಮುಗಿದ ಕೂಡಲೆ ಬಹುಶಃ

ಇದು ಸಾಧ್ಯವಾದೀತು. ಭೂಗೋಲವನ್ನೆಲ್ಲ ಸುತ್ತಬೇಕಾದರೆ ಈಗಿನ ತಕ್ಕ ಸೌಲಭ್ಯದಿಂದ ಸುಮಾರು ೯೦ ದಿವಸಗಳು ಬೇಕಾಗುವವು. ಇನ್ನು ಮೇಲೆ ವಿಮಾನಗಳ ಸಹಾಯದಿಂದ ೧೦-೧೫ ದಿನಗಳೊಳಗಾಗಿಯೇ ಭೂಪ್ರದಕ್ಷಿಣೆ ಮಾಡಬಹುದು. ವರ್ತಮಾನವನ್ನು ತಂತಿಯಿಲ್ಲದೆ ಕಳಿಸುವದಂತೂ ಈಗ ರೂಢಿಗೆ ಬಂದಿದೆ. ೫ ಸಾವಿರ ಮೈಲುಗಳ ದೂರದ ವರ್ತಮಾನವನ್ನು ೧೦ ನಿಮಿಷಗಳಲ್ಲಿ ತಿಳಿದುಕೊಳ್ಳಬಹುದು. ಮತ್ತು ಒಂದು ತಾಸಿನಲ್ಲಿ ವರ್ತಮಾನವು ಪೃಥ್ವಿಯ ತುಂಬ ಹಬ್ಬುವದು. ನೀರಿನಲ್ಲಿಯೂ ಅನ್ನಾಹಾರಗಳಲ್ಲಿಯೂ ಸಾಧಾರಣವಾಗಿ ಕಣ್ಣಿಗೆ ಕಾಣಿಸದಿರುವ ಅನೇಕ ಕೃಮಿಗಳು ದುರ್ಬೀನಿನ ಬಲದಿಂದ ಕಾಣಬರುತ್ತವೆ. ದೊಡ್ಡ ದುರ್ಬೀನಿನಿಂದ ಆಕಾಶದಲ್ಲಿರುವ ಗ್ರಹಗಳನ್ನೂ, ಅವುಗಳಲ್ಲಿರುವ ಪರ್ವತ, ಸಮುದ್ರ ಮುಂತಾದವುಗಳನ್ನೂ ನೋಡಬಹುದು.

ಪೂರ್ವಕಾಲದಲ್ಲಿ ಕಲ್ಲುಗಳಿಂದ ಕಟ್ಟಿದ ದೊಡ್ಡ ಕೆರೆಕಟ್ಟೆಗಳು ಇರಲಿಲ್ಲ. ಈಗ ೩೦೦ ಅಡಿಗಳಷ್ಟು ಎತ್ತರವಾದ ಕಟ್ಟೆಗಳನ್ನು ಸುಲಭ ಖರ್ಚಿನಲ್ಲಿಯೇ ಕಟ್ಟಬಹುದು. ಈಜಿಪ್ತ ದೇಶದಲ್ಲಿರುವ ಅಸುವಾನ್ ಸಾಗರದಲ್ಲಿ ಹತ್ತುಸಾವಿರ ಕೋಟಿ ಘನ ಅಡಿಗಳಷ್ಟು ನೀರು ಅಡಕವಾಗಿದೆ. ನಮ್ಮ ಕಾವೇರೀ ನದಿಯ ಮೇಲಿರುವ ಕೃಷ್ಣರಾಜ ಸಾಗರವು ಪೂರ್ತಿಯಾದ ಮೇಲೆ ಅದರಲ್ಲಿ ಳಳಂ ಕೋಟಿ ಘನ ಅಡಿಗಳಷ್ಟು ನೀರು ಹಿಡಿಯುವದು. ಮಾನೀಕಣಿವೆಯ ಕೆರೆಯಲ್ಲಿ ಎರಡು ಸಾವಿರ ಚೌರಸ ಮೈಲು ಪ್ರದೇಶಗಳಿಂದ ಬರುವ ನೀರನ್ನೆಲ್ಲ ಒಂದು ಹನಿಯೂ ಹೊರಗೆ ಹೋಗದಂತೆ ತಡೆದಿಟ್ಟಿದೆ.

ಇಂಗ್ಲಂಡ ಮತ್ತು ಅಮೇರಿಕಾ ದೇಶಗಳ ಪಟ್ಟಣಗಳ ಸೊಬಗು ಇಷ್ಟೆಂದು ಹೇಳಲಿಕ್ಕಾಗುವುದಿಲ್ಲ. ನ್ಯೂಯಾರ್ಕ್‌ನಗರದಲ್ಲಿ ೫-೬ ನೂರು ಅಡಿ ಎತ್ತರವುಳ್ಳ ಮನೆಗಳಿವೆ. ಅಷ್ಟು ಎತ್ತರ ಹತ್ತಿ ಇಳಿಯುವದಕ್ಕೆ ವಿದ್ಯುಚ್ಛಕ್ತಿಯಿಂದ ನಡೆಯುವ ಉಯ್ಯಾಲೆಗಳನ್ನು ಏರ್ಪಡಿಸಿದ್ದಾರೆ. ಅಂತಹ ಪ್ರತಿಯೊಂದು ಮನೆಯಲ್ಲಿಯೂ ಟಪಾಲು ಆಫೀಸು, ತಂತಿ ಆಫೀಸುಗಳನ್ನು ಇಟ್ಟಿದ್ದಾರೆ. ಒಂದೊಂದು ಮನೆಯಲ್ಲಿ ೫-೪ ಸಾವಿರ ಜನರು ವಾಸವಾಗಿರುವಷ್ಟು ಮನೆಗಳನೇಕವುಂಟು. ಅಂದರೆ ನಮ್ಮ ಬೆಂಗಳೂರಿನ ಎಲ್ಲ ಜನರನ್ನು ಅಲ್ಲಿಯ

೩೦|೪೦ ಮನೆಗಳಲ್ಲಿ ಸಹಜವಾಗಿ ಇರಿಸಬಹುದು. ಅಲ್ಲಿ ಒಂದು ಮನೆಯಿಂದ ಮತ್ತೊಂದು ಮನೆಗೆ ಟೆಲಿಫೋನು ಇರುತ್ತದೆ. ನಡದರೆ ಬೂಟುಗಳು ಸಹ ಮಾಸದಿರುವಂಥ ಶುಭ್ರವಾದ ಲೈನುದಾರಿಗಳಿವೆ. ಕ ೪ಮ್ಮಲವ ನೀರು ಬಿದ್ದ ಕೂಡಲೆ ಅರ್ಧ ಘಂಟೆಯೊಳಗಾಗಿ ಊರಾಚೆಗೆ ಹೋಗಿ ಬೀಳುವಂತೆ ಮಾಡಿದ್ದಾರೆ. ಸುಣ್ಣವನ್ನು ಬೆರಿಸಿ ಮನೆಗಳನ್ನು ಕಟ್ಟಿರುವುದರಿಂದ ಸ್ಥಳವೂ ಸುತ್ತಮುತ್ತಲಿನ ಗಾಳಿಯೂ ಸ್ವಚ್ಛವಾಗಿರುತ್ತವೆ. ನಮ್ಮಲ್ಲಿಯ ಸಾವಿರ ಪ್ರಜೆಗಳಲ್ಲಿ ೩೦ ಜನರಿಗೆ ಮರಣವುಂಟಾದರೆ ಅಲ್ಲಿಯ ಕೆಲವು ಪಟ್ಟಣಗಳಲ್ಲಿ ಸಾವಿರಕ್ಕೆ ೧೫ಕ್ಕಿಂತ ಹೆಚ್ಚಾಗಿ ಜನರು ಸಾಯುವದಿಲ್ಲ. ಪಟ್ಟಣದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಜನರು ಹೋಗಬೇಕಾದರೆ, ಮನೆಗಳ ಕೆಳಗೂ ನದಿಗಳ ಕೆಳಗೂ ಭೂಮಿಯಲ್ಲಿ, ನೂರಾರಡಿ ಆಳದಲ್ಲಿ ಹೊಗೆಯಿಲ್ಲದ ರೈಲುಗಳ ಮೂಲಕ ಪ್ರಯಾಣ ಮಾಡಬಹುದು.

ನಮ್ಮ ಸೀಮೆಯಲ್ಲಿ ಸಹ ಈ ವಿಜ್ಞಾನದ ಶಕ್ತಿಯಿಂದ ಮೊದಲು ಅಸಾಧ್ಯವೆಂದು ತೋರಿದ ಕೆಲವು ವಿಚಿತ್ರವಾದ ಕೆಲಸಗಳು ಈಗೀಗ ನಡೆಯುತ್ತವೆ. ಈ ಪಟ್ಟಣಕ್ಕೆ ಬೇಕಾಗುವ ಸೀನೀರನ್ನು ಏಂಜಿನ್ ಇಟ್ಟು ೩೦ ಅಡಿ ಮೇಲಕ್ಕೆ ಎತ್ತಿ ೧೫ ಮೈಲು ದೂರದಿಂದ ತಂದಿರುತ್ತಾರೆ. ತಿಪಸಮುದ್ರದಲ್ಲಿರುವ ಕಾವೇರೀ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಹುಟ್ಟಿಸಿ ೯೦ ಮೈಲು ದೂರ ತಂದು ಅನೇಕ ಉಪಯುಕ್ತವಾದ ಕೆಲಸಗಳಿಗೆ ಬಳಿಸುತ್ತಿರುವರು. ಅದರ ಸಹಾಯದಿಂದ ದೊಡ್ಡ ದೊಡ್ಡ ಹತ್ತಿಯ ಕಾರಖಾನೆಗಳೂ ಅನೇಕ ಯಂತ್ರಗಳೂ ನಡೆಯುತ್ತಿರುವವಲ್ಲದೆ ದೀಪಗಳನ್ನು ಉಚ್ಚಟಿಕ್ಕೂ ಅನುಕೂಲವಾಗಿದೆ. ಇದರ ಬಲದಿಂದ ಮನೆಗಳಲ್ಲಿ ಸಹ ಎಷ್ಟೋ ಉಪಯುಕ್ತವಾದ ಕೆಲಸಗಳನ್ನು ಮಾಡಬಹುದು. ಇಂತಹ ವಿಚಿತ್ರವಾದ ಕೆಲಸಗಳು ಸುಮಾರು ೨೫ ವರ್ಷಗಳಿಗೆ ಮುಂಚೆ ಈ ದೇಶದಲ್ಲಿ ಎಲ್ಲಿಯೂ ನಡೆಯುತ್ತಿರಲಿಲ್ಲ. ೫೦ ವರ್ಷಕ್ಕೆ ಮುಂಚೆ ಇವು ಪ್ರಪಂಚದಲ್ಲಿ ಯಾರಿಗೂ ತಿಳಿದಿರಲಿಲ್ಲ.

ಇದನ್ನೆಲ್ಲ ನೋಡಿದರೆ, ಸಾವಿರಾರು ವರ್ಷಗಳಿಂದ ಪ್ರಪಂಚವು ನಿದ್ದೆ ಮಾಡುತ್ತಿದ್ದು, ಈಗ ೫೦ ವರ್ಷಗಳಿಂದೀಚೆಗೆ ಎಚ್ಚತ್ತಿರುವ

ಹಾಗೆ ಕಾಣುತ್ತಿದೆ. ಈ ೫೦ ವರ್ಷಗಳಲ್ಲಿ ಸಂಪಾದಿಸಿದ ಜ್ಞಾನಬಲದಿಂದ ಈ ಪ್ರಪಂಚವೆಲ್ಲಾ ಒಂದೇ ದೇಶವಾಗಿದೆ; ಎಂದರೆ ಪೃಥ್ವಿಯ ಒಂದು ಭಾಗದಲ್ಲಿ ಉಂಟಾದ ಸುಧಾರಣೆಯು ಉಳಿದ ಭಾಗಗಳಿಗೆ ಹರಡದೆ ಇರಲಾರದು. ಯಾವ ಜನರಲ್ಲಿ ಈ ನೂತನ ಜ್ಞಾನವು ಹೆಚ್ಚುತ್ತಿದೆಯೋ ಆ ಜನರು ದಿನೇ ದಿನೇ ಪ್ರಾಬಲ್ಯಕ್ಕೆ ಬರುವುದರಲ್ಲಿ ಸಂಶಯವಿಲ್ಲ. ಆದಕಾರಣ ಶಾಸ್ತ್ರಜ್ಞಾನದಿಂದ ಎಷ್ಟು ಪ್ರಯೋಜನವುಂಟೆಂಬದು ಇವುಗಳಿಂದ ಸ್ಪಷ್ಟವಾಗುತ್ತದೆ.

ಈ ಜ್ಞಾನವನ್ನು ನಮ್ಮಲ್ಲಿ ಪ್ರಚುರ ಪಡಿಸುವ ಭಾರವನ್ನು ಇಂಗ್ಲಿಷ ಭಾಷೆಯನ್ನರಿತ ಶಾಸ್ತ್ರಜ್ಞರು ವಹಿಸಬೇಕಾಗಿದೆ. ಹೀಗೆ ಭಾರವನ್ನು ವಹಿಸಿ, 'ವಿಜ್ಞಾನ ಪ್ರಚಾರಿಣೀಸಮಿತಿ'ಯವರು ಈ ಉಪನ್ಯಾಸಗಳನ್ನು ಕೊಡಲು ಒಪ್ಪಿಕೊಂಡಿರುವುದಕ್ಕಾಗಿ, ನಾವೆಲ್ಲರೂ ಅವರಿಗೆ ಕೃತಜ್ಞರಾಗಿರಬೇಕು.

ವರ್ಗಮೂಲ.

(ಮುಂದೆ ಸಾಗದ್ದು.)

೪೩೧೬ ಈ ಸಂಖ್ಯೆಯ ವರ್ಗಮೂಲವನ್ನು ತೆಗೆಯುವಕ್ರಮದಲ್ಲಿ ನಾವು ಮೊದಲನೆಯಸಾರೆ ೪೩೦೦೦ ದಲ್ಲಿ ೨೦೦೦೦ ನ್ನು (೨೦೦ ರ ವರ್ಗವನ್ನು) ಕಳೆದೆವು. ಎರಡನೆಯಸಾರೆ ೪೩೧೬೦೦ ರಲ್ಲಿ ೨೦೦೦೦+೪೩೦೦ನ್ನು (೨೦೩ ರ ವರ್ಗವನ್ನು) ಕಳೆದೆವು. ಕಡೆಯಸಾರೆ ೪೩೧೬೪೯ ರಲ್ಲಿ ೨೦೦೦೦+೪೩೦೦+೯೬೪೯ನ್ನು (೨೦೭ ರ ವರ್ಗವನ್ನು) ಕಳೆದೆವು. ಇದನ್ನು ಕೆಳಗೆ ತೋರಿಸುವೆವು.

೪೩೧೦೦೦	೪೩೧೬೦೦	೪೩೧೬೪೯
೨೦೦೦೦	೨೦೦೦೦	೨೦೦೦೦
೨೩೧೦೦	೨೩೧೬೦೦	೨೩೧೬೪೯
	೪೩೦೦	೪೩೦೦
	೯೬೦೦	೯೬೪೯
		೯೬೪೯

ಈ ಮೂರು ಮೆಟ್ಟುಗಳನ್ನು ಮೂರುಸಾರೆ ಬೇರೆ ಬೇರೆ ಕಡೆಯಲ್ಲಿ ಬರಕೊಳ್ಳುವ ಅವಶ್ಯವಿಲ್ಲ. ಮೊದಲನೆಯಸಾರೆ ಕಳೆಯುವಾಗ ಳಷಿ ಹತ್ತು ಸಾವಿರ ಮಾತ್ರ ಬೇಕಾಗುವದು; ಎರಡನೆಯಸಾರೆ ೧ಟ ನೂರು ಮಾತ್ರ ಬೇಕಾಗುವದು; ಕಡೆಯಸಾರೆ ಉಳಿದ ಳಕ ಬಿಡಿಗಾಳು ಬೇಕಾಗುವದು. ಆದ್ದರಿಂದ ಇಡೀಸಂಖ್ಯೆಯನ್ನು ಬರೆದುಕೊಂಡು, ಳಷಿ ಹತ್ತುಸಾವಿರದಲ್ಲಿ ೩ಟ ಹತ್ತುಸಾವಿರ ಕಳೆದು, ೧ಟ ನೂರನ್ನು ಕೆಳಗೆ ತಂದುಕೊಳ್ಳಬೇಕು. ೭೧ಟ ನೂರರಲ್ಲಿ ೬೨ಱ ನೂರನ್ನು ಕಳೆದು, ಳಕ ಬಿಡಿಗಾಳನ್ನು ಕೆಳಗೆ ತಂದುಕೊಳ್ಳಬೇಕು. ನಾವು ಮಾಡಿದ ಸಮಗ್ರ ಕೃತಿಯು ಕೆಳಗೆ ತೋರಿಸಿದಂತೆ ಇರುವದು.

	ಳಷಿ,	೧ಟ,	೯ಳ.
೬೦೦×೬೦೦	೩ಟ	೦೦	೦೦.
	೭	೧ಟ	೦೦.
೧೭೫೦× ೫೦	೬	೭೫	೦೦.
		೯೧	ಳಕ.
೧೩೦೭× ೭		೯೧	ಳಕ.

ಅಥವಾ,

	ಳಷಿ,	೧ಟ,	ಳಕ
೬ ನೂರು×೬ ನೂರು	೩ಟ	ಹತ್ತುಸಾವಿರ	
	೭೧ಟ	ನೂರು	
೧೭೫ ಹತ್ತು×೫ ಹತ್ತು	೬೭೫	ನೂರು	
	೯೧ಳಕ		
೧೩೦೭×೭	೯೧ಳಕ		

ಅಥವಾ,

ಹತ್ತುಸಾವಿರ, ನೂರು, ಹತ್ತು ಎಂಬ ಶಬ್ದಗಳನ್ನು ಬರೆಯುವದನ್ನು ಬಿಟ್ಟು ಬಿಟ್ಟು ನಮ್ಮ ಕೃತಿಯನ್ನು ಹೀಗೆ ತೋರಿಸಬಹುದು.

	ಳಷಿ,	೧ಟ,	ಳಕ
೬×೬	೩ಟ		
	೭೧ಟ		
೧೭೫×೫	೬೭೫		
	೯೧ಳಕ		
೧೩೦೭×೭	೯೧ಳಕ		

ವರ್ಗಮೂಲದ ಒಂದೊಂದು ಅಂಕಿಯು ಸಿಕ್ಕಹಾಗೆ ಅವನ್ನು ಬಲಕ್ಕೆ ತೋರಿಸಿದಂತೆ ಬರೆದುಕೊಳ್ಳುತ್ತೇವೆ.

ಳಷ, ೧೬, ೪೯ (೬ ೫ ೭

೬ ೩೬

೭೧೬

೧೨೫ ೬೨೫

೯೧೪೯

೧೩೦೭ ೯೧೪೯

ಇವರ ಹಿಂದಿನ ಕ್ರಮದಲ್ಲಿ ಎಡಕ್ಕೆ ತೋರಿಸಿದ ಗುಣಾಕಾರಗಳ ಗುಣ್ಯಗಳನ್ನು ಎಡಕ್ಕೆಯೇ ಇಟ್ಟು ಗುಣಕಗಳನ್ನು ಉತ್ತರದ ಸ್ಥಳದಲ್ಲಿ ಬರೆದುಕೊಳ್ಳುತ್ತೇವೆ. ಹೀಗೆ ಮಾಡುವದರಿಂದ ಗುಣಕಗಳನ್ನು ಬರೆದು ಕೊಳ್ಳುವಾಗ ಉತ್ತರವನ್ನೂ ಬರೆದಂತಾಗುವದು.

ಪ್ರತಿಯೊಂದು ಮೆಟ್ಟಿನಲ್ಲಿ ಮುಂದಾಗಿ ಬಂದ ವರ್ಗಮೂಲದ ದುಪ್ಪಟ್ಟು ಮಾಡಬೇಕಾಗುವದು. (ಈ ದುಪ್ಪಟ್ಟಾಗಿ ಬಂದ ಸಂಖ್ಯೆಯು ವರ್ಗಮೂಲದ ಮುಂದಿನ ಅಂಕಿಯನ್ನು ಸ್ಥೂಲವಾನದಿಂದ ಗೊತ್ತುಪಡಿಸುವ ಭಾಜಕವಾಗಿರುತ್ತದೆಂದು ಹೇಳುವ ಕಾರಣವಿಲ್ಲ.) ಈ ಮಾತು ಹಿಂದಿನ ವಿವರಣೆಯನ್ನು ಲಕ್ಷ್ಯಪೂರ್ವಕವಾಗಿ ಓದಿದವರಿಗೆ ತಿಳಿಯುವದು.

ಈ ಉದಾಹರಣೆಯಲ್ಲಿ ಮೊದಲು ೬ರ ದುಪ್ಪಟ್ಟು, ಆಮೇಲೆ ೬೫ರ ದುಪ್ಪಟ್ಟು ಮಾಡಬೇಕಾಗುವದು. ೬, ೫, ೭ ಇವುಗಳಮುಂದೆ ಇನ್ನೊಂದು ಅಂಕಿಯು ಬರುವದಿದ್ದರೆ ೬೫೭ರ ದುಪ್ಪಟ್ಟನ್ನು ಮಾಡಬೇಕಾಗುತ್ತಿತ್ತು.

ಈ ದುಪ್ಪಟ್ಟು ಮಾಡುವ ಕೆಲಸದಲ್ಲಿ ಸಹ ಸ್ವಲ್ಪಮಟ್ಟಿಗೆ ಶ್ರಮವು ಕಡಿಮೆಯಾಗುವಂಥ ಹಂಚಿಕೆಯಿರುವದು.

೬, ೬೫, ೬೫೭ ಇತ್ಯಾದಿ ಸಂಖ್ಯೆಗಳ ದುಪ್ಪಟ್ಟು ಮಾಡಬೇಕಾದರೆ ಪ್ರತಿಯೊಂದು ಸಂಖ್ಯೆಯನ್ನು ಪ್ರತ್ಯೇಕವಾಗಿ ೨ರಿಂದ ಗುಣಿಸುವದರ ಬದಲು ಹೀಗೆ ಮಾಡುತ್ತೇವೆ.

೬+೬=೧೨; ೧೨೫+೫=೧೩೦; ೧೩೦೭+೭=೧೩೧೪; ೧೩೧೪ಇದು ೬೫೭ರ ದುಪ್ಪಟ್ಟಿರುವದು.

ಈಗ ವಾಚಕರು ಯಾವದಾದರೊಂದು ಅಂಕಗಣಿತ ಪುಸ್ತಕದಲ್ಲಿ ಕೊಟ್ಟ ವರ್ಗಮೂಲದ ನಿಯಮವನ್ನು ಓದಿನೋಡಿದರೆ, ಅವರಿಗೆ ಅದರಲ್ಲಿ ಹೇಳಿದ ಪ್ರತಿಯೊಂದು ಮೆಟ್ಟಿನ ಕಾರಣಗಳು ತಿಳಿಯುವವು. ಈ ೧೫ ಗಳಲ್ಲಿ ಕೊಟ್ಟ ವರ್ಗಮೂಲದ ಉಪಪತ್ತಿಯು ಶಿಕ್ಷಕರನ್ನು ಕುರಿತು ಬರೆದಿರುವದು. ವಿದ್ಯಾರ್ಥಿಗಳಿಗೆ ಈ ನಿಯಮವು ಸುಲಭವಾಗಿ ತಿಳಿಯುವಂತೆ ಹ್ಯಾಗೆ ಹೇಳಬೇಕೆಂಬ ಭಾಗವು ಬೇರೆ ವಿಷಯವಾಗಿದೆ.

– S. R. Tatti.

ಶಾಸ್ತ್ರೀಯ ಪ್ರಯೋಗಗಳು.

(ಸಪ್ಟಂಬರ ತಿಂಗಳ ಸಂಚಿಕೆಯಿಂದ ಮುಂದೆ ಸಾಗಿದ್ದು)

ಸ್ವಚ್ಛ ಮಾಡುವದು.

VI ಎಲ್ಯುಮಿನಿಯಮ್:—

(೧) ಬಳೆಗಾರವನ್ನು (Borax) ನೀರಿನಲ್ಲಿ ಬೆರಿಸಿ ಆ ಸೊಲ್ಯೂಶನದಿಂದ ಎಲ್ಯುಮಿನಿಯಮ್ಮಿನ ಪಾತ್ರೆಗಳನ್ನು ತೊಳೆದರೆ ಅವುಗಳ ಸ್ವಾಭಾವಿಕ ವರ್ಣವು ಬರುವದು. ಈ ಸೊಲ್ಯೂಶನದಲ್ಲಿ ಸ್ವಲ್ಪ ಎಮ್ಮೋನಿಯವನ್ನು ಬೆರಿಸಿದರೆ ಕಾರ್ಯವು ತೀವ್ರವಾಗಿ ನಡೆಯುವದು.

(೨) ಎಣ್ಣೆಯ ಜಿಗಟನ್ನು ತೆಗೆದುಹಾಕಬೇಕಾದರೆ ಸೊದಲು ಪಪ್ಪಳಕಾರ (ವಾಶಿಂಗಸೋಡಾ) ಸುಣ್ಣದ ನೀರು ಇವುಗಳ ಮಿಶ್ರಣದಿಂದ ಪಾತ್ರೆಯನ್ನು ತಿಕ್ಕಿ ತೊಳೆಯಬೇಕು. ಬಳಿಕ ಯಾವದೊಂದು ಹುಳಿ ಪದಾರ್ಥದಿಂದ ತಿಕ್ಕಿದರೆ ಅದರ ಸ್ವಾಭಾವಿಕವಾದ ಬಿಳಿಯ ಬಣ್ಣವು ಬರುವದು. ಆ ಮೇಲೆ ಅದನ್ನು ಸ್ವಚ್ಛವಾದ ಬಿಸಿನೀರಿನಿಂದ ತೊಳೆದು ಒಣಗಿಸಬೇಕು. ಈ ಮೇರೆಗೆ ಸ್ವಚ್ಛ ಮಾಡಿದ ಬಳಿಕ ಅದಕ್ಕೆ ಉತ್ತಮತರದ ಪಾಲಿಶ್ ಕೊಡಬಹುದು. ಇದಕ್ಕಾಗಿ ಮಸೆಗಲ್ಲಿನ ಸೂಕ್ಷ್ಮವಾದ ಪುಡಿಯನ್ನು ಮೇಣಬತ್ತಿಯ ಮೇಣದಲ್ಲಿ ಬೆರಿಸಿ ಒಳಿತಾಗಿ ತಿಕ್ಕಬೇಕು. ಆ ಮೇಲೆ ಸ್ವಲ್ಪು ಕೆಂಪು ಆಯರ್ನ್ ಒಕ್ಸಾಯ್ಡನ್ನು ಇಲ್ಲವೆ ಖಡುವಿನ ಪುಡಿಯನ್ನು ಟರ್ಪೆಂಟೈನದಲ್ಲಿ ಬೆರಿಸಿ ತಿಕ್ಕಬೇಕು

VII ಕಬ್ಬಿಣದ ಸಾಮಾನುಗಳು:—

(೧) ಇಪ್ಪತ್ತು ಪಾಲು ಕಲ್ಲೆಣ್ಣೆಯಲ್ಲಿ ಒಂದು ಪಾಲು ಮೇಣಬತ್ತಿಯ ಮೇಣದ ತಿಳುವಾದ ಚೂರುಗಳನ್ನು ಹಾಕಿ ಮೇಲಿಂದ ಮೇಲೆ ಅಲ್ಲಾಡಿಸುತ್ತಿರಬೇಕು. ಅಂದರೆ ಅದು ೨,೩ ದಿವಸಗಳಲ್ಲಿ ಕರಗುವದು; ಕಬ್ಬಿಣದ ಸಾಮಾನಿಗೆ ಇದನ್ನು ಒಂದು ಸಣ್ಣ ಅರಿವೆಯ ಸಹಾಯದಿಂದ ಹಚ್ಚಿ ಒಂದು ದಿವಸ ಹಾಗೆಯೇ ಇಟ್ಟು ಮರುದಿನ ಒಂದು ಉಣ್ಣೆಯ ಅರಿವೆಯಿಂದ ಚನ್ನಾಗಿ ಒರಿಸಿ ತೆಗೆದರೆ ಕಬ್ಬಿಣದ ಸಾಮಾನು ಸ್ವಚ್ಛವಾಗುವದು.

ಮೇಲೆ ಹೇಳಿದಂತೆ ಕಬ್ಬಿಣದ ಸಾಮಾನುಗಳನ್ನು ಸ್ವಚ್ಛ ಮಾಡಿದ ಬಳಿಕ ಅವುಗಳಿಗೆ ಹೊಳಪು ಬರುವಂತೆ ಪಾಲಿಶ್ ಮಾಡಬಹುದು.

ಇದಕ್ಕಾಗಿ ಮಸೆಗಲ್ಲಿನ ಸೂಕ್ಷ್ಮವಾದ ಪುಡಿಯನ್ನೂ ಮೇಣಬತ್ತಿಯ ಮೇಣವನ್ನೂ ಟರ್ಪಂಟೈನ ಎಣ್ಣೆಯಲ್ಲಿ ಬೆರಿಸಿ ಆ ಮಿಶ್ರಣವನ್ನು ಒಂದು ಅರಿವೆಗೆ ಹಚ್ಚಿಕೊಂಡು ಆ ಪದಾರ್ಥವನ್ನು ತಿಕ್ಕಬೇಕು. ಬಳಿಕ ಕೆಂಪು ಆಯರ್ನ್‌ಆಕ್ಸಾಯಿಡ ಇಲ್ಲವೆ ಟಿನ್ ಆಕ್ಸಾಯಿಡನ್ನು ಎಣ್ಣೆಯಲ್ಲಿ ಬೆರಿಸಿ ತಿಕ್ಕಬೇಕು.

VIII ಅರಿವೆಗಳು—

(೧) ಬಟ್ಟೆಗಳನ್ನು ಒಗೆಯಲಿಕ್ಕೆ ಉಪಯೋಗಿಸುವ ನೀರಿನಲ್ಲಿ ಸ್ವಲ್ಪ ವಾಶಿಂಗ್ ಸೋಡಾವನ್ನು ಬೆರಿಸಿದರೆ ಸಬಕಾರವು ಕಡಿಮೆ ಹಿಡಿಯುವದು. ಅದಕ್ಕಿಂತ ಬಳಿಗಾರವನ್ನು ಉಪಯೋಗಿಸಿದರೆ ಇನ್ನೂ ಕಡಿಮೆ ಸಬಕಾರವು ಹಿಡಿಯುವದಲ್ಲದೆ ಬಟ್ಟೆಗಳು ಅನಾಯಾಸವಾಗಿ ಸ್ವಚ್ಛವಾಗುತ್ತವೆ.

(೨) ಜರ್ಮನಿಯಲ್ಲಿ ಅಗಸರು ಉಪಯೋಗಿಸುವ ಪದಾರ್ಥಗಳು:— ೨ ಔಂಸು ಟರ್ಪಂಟೈನ್ +೧ ಔಂ. ಎಮೋನಿಯಾ, +೪ ಪೌಂಡು ಸಬಕಾರ. ಈ ಮಿಶ್ರಣವನ್ನು ಒಂದು ಕೊಡ ಬಿಸಿನೀರಿನಲ್ಲಿ ಹಾಕಿ ಅಲ್ಲಾಡಿಸಿ ಒಗೆಯತಕ್ಕ ಬಟ್ಟೆಗಳನ್ನು ೨೪ ತಾಸುಗಳ ವರೆಗೆ ಮುಳುಗಿಸಿಡುತ್ತಾರೆ. ತರುವಾಯ ಅವುಗಳನ್ನು ೨, ೩ ಸಾರೆ ಬೇರೆ ಬೇರೆ ನೀರಿನಲ್ಲಿ ತೊಳೆದರೆ ಟರ್ಪಂಟೈನಿನ ವಾಸನೆಯಲ್ಲ ಹೋಗಿ ಬಟ್ಟೆಗಳು ಸ್ವಚ್ಛವಾಗುತ್ತವೆ.

(೩) ೨ ಸೇರು ವಾಶಿಂಗ್‌ಸೋಡಾ +೨೦ ಸೇರು ನೀರು + ೧ ಸೇರು ಸುಣ್ಣ ಇವುಗಳ ಮಿಶ್ರಣವನ್ನು ಕೆಲವು ಹೊತ್ತು ಹಾಗೆಯೇ ಬಿಟ್ಟು

ಬಳಿಕ ತಿಳಿಯಾದ ಮೇಲಿನ ಸೊಲ್ಯೂಶನವನ್ನೇ ಬೇರೆ ಪಾತ್ರೆಯಲ್ಲಿ ಹಾಕಿ ಕೊಳ್ಳಬೇಕು. ಈ ಸೊಲ್ಯೂಶನದಲ್ಲಿ ಎಣ್ಣೆಯ ಜಿಗಟು ಹೆಚ್ಚಾಗಿ ಹತ್ತಿದ ಬಟ್ಟೆಗಳನ್ನು ಕುದಿಸಿದರೆ ಅವು ಸಹಜವಾಗಿ ಸ್ವಚ್ಛವಾಗುವವು. ಈ ಸೊಲ್ಯೂಶನದಲ್ಲಿ ಸುಮಾರು ೨೪ ಸೇರು ಸಬಕಾರವನ್ನು ಹಾಕಿ ಕುದಿಸಿದರೆ ಅವು ಮತ್ತಿಷ್ಟು ಬೆಳ್ಳಗಾಗುವವು. ಈ ಸೊಲ್ಯೂಶನದಲ್ಲಿ ಸುಣ್ಣದ ಅಂಶವು ಸೇರಿ ಕೊಳ್ಳದಂತೆ ಎಚ್ಚರಪಡಬೇಕು.

(೪) ಅರಿವೆಗಳನ್ನು ಬಿಸಿಲಲ್ಲಿ ಹಾಕುವದರಿಂದಲೂ ಅವು ಬೆಳ್ಳಗಾಗುತ್ತವೆ. ಆದದರಿಂದಲೇ ಅಗಸರು ಅರಿವೆಗಳನ್ನು ಬಿಸಿಲಲ್ಲಿ ಒಣಹಾಕುತ್ತಾರೆ. ಇದರ ಕಾರಣವೇನಂದರೆ, ಪ್ರಕಾಶದಿಂದ ಎಷ್ಟೋ ಬಣ್ಣಗಳು ನಾಶವಾಗುತ್ತವೆ. ಈ ಕಾರಣದಿಂದಲೇ ಪ್ರಕಾಶಕ್ಕೆ ಹೆಚ್ಚಾಗಿ ಬಿದ್ದಿರುವ ಭಾಗಗಳ ಬಣ್ಣವು ಕುಂದುವದನ್ನೂ ಪ್ರಕಾಶಕ್ಕೊಳಗಾಗದ ಭಾಗಗಳು ಮೊದಲಿನಂತೆಯೇ ಇರುವದನ್ನೂ ನಾವು ತೊಡುವ ಅಂಗಿಗಳಲ್ಲಿ ಒಮ್ಮೊಮ್ಮೆ ನೋಡಬಹುದು. ಆದದರಿಂದ ಬಣ್ಣದ ಅರಿವೆಗಳನ್ನು ಎಂದಿಗೂ ಬಿಸಿಲಲ್ಲಿ ಒಣಗಿಸಬಾರದು.

(೫) ಅರಿವೆಯ ಬಣ್ಣವನ್ನು ಕಳೆಯಲಿಕ್ಕೆ ಅಥವಾ ಬಳಕೆಯಲ್ಲಿದ್ದ ವಸ್ತ್ರಗಳ ಮೇಲೆ ಉಂಟಾಗಿರುವ ಕಲೆಗಳನ್ನು ತೆಗೆದು ಹಾಕಲಿಕ್ಕೆ ಈ ಮೇರೆಗೆ ಮಾಡಬಹುದು:—೧ ತೊಲೆ ಪೋಟಾಸಿಯಮ್ ಕ್ಲೋರೇಟನ್ನು ೨ ಸೇರು ನೀರಿನಲ್ಲಿ ಕರಗಿಸಿ ಅದರಲ್ಲಿ ೨ ತೊಲೆ ಸ್ವಚ್ಛವಾದ ಉಪ್ಪನ್ನು ಬೆರಿಸಿ ಅದರಲ್ಲಿ ೧, ೨ ಲಿಂಬೆ ಹಣ್ಣಿನ ರಸವನ್ನು ಹಾಕಿ ಉಂಟಾದ ಮಿಶ್ರಣದಲ್ಲಿ ಬಟ್ಟೆಗಳನ್ನು ಸುಮಾರು ೨೪ ತಾಸುಗಳ ವರೆಗೆ ಇಟ್ಟು ಸ್ವಚ್ಛವಾದ ನೀರಿನಿಂದ ತೊಳೆದರೆ ಅವು ಬೆಳ್ಳಗಾಗುವವು.

ಇಲಿಗಳ ಕಾಟವನ್ನು ದೂರಮಾಡುವದು.

ಇಲಿಗಳ ಕಾಟವನ್ನು ಕಡಿಮೆ ಮಾಡುವ ಉಪಾಯಗಳು ಹಲವು ಇದ್ದರೂ ನಾವು ಇಲ್ಲಿ ಹೇಳುವ ಯುಕ್ತಿಯು ಹಲವರಿಗೆ ಗೊತ್ತಿರಲಾರದೆಂದು ನಾವು ತಿಳಿಯುತ್ತೇವೆ. ಈ ಉಪಾಯವು ಅಷ್ಟೊಂದು ಉಪಯುಕ್ತವಲ್ಲದಿದ್ದರೂ ಸುಲಭಸಾಧ್ಯವಿದ್ದದರಿಂದಲೂ, ಹೊಸದಾದದ್ದಿರುವದರಿಂದಲೂ ಅದನ್ನು ಇಲ್ಲಿ ಕೊಡುವೆವು.

೩ ತೊಲೆ ಹಪ್ಪಳಕಾರವನ್ನೂ, ೨ ತೊಲೆ ಸುಣ್ಣವನ್ನೂ ಸುಮಾರು ೨೦ ತೊಲಿ ನೀರಿನಲ್ಲಿ ಚನ್ನಾಗಿ ಮಿಶ್ರಮಾಡಿ ಆ ಮಿಶ್ರಣವನ್ನು ಇಲಿಗಳ ಬಿಲಗಳ ಹತ್ತರ ಇಲ್ಲವೆ ಅವು ಹೆಚ್ಚಾಗಿ ಓಡಾಡುವಲ್ಲಿ ಸಿಂಪಡಿಸಬೇಕು. ಈ ಮಿಶ್ರಣವು ಇಲಿಗಳ ಕಾಲಿಗೆ ಹತ್ತಿದಲ್ಲಿ ಸುಡುವದರಿಂದ ಅವು ತಮ್ಮ ಸ್ವಭಾವಕ್ಕನುಸರಿಸಿ ಸುಡುವ ಭಾಗವನ್ನು ನಾಲಿಗೆಯಿಂದ ನೆಕ್ಕುತ್ತವೆ. ಆಗ ನಾಲಿಗೆಯು ಇನ್ನಿಷ್ಟು ಹೆಚ್ಚಾಗಿ ಸುಡುತ್ತದೆ. ಹೀಗಾಗುವದರಿಂದ ಅವು ಹೆದರಿ ಕಂಗೆಟ್ಟು ತಮ್ಮ ಜತೆಗಾರರಿಗೂ ಈ ಸಂಗತಿಯನ್ನು ತಿಳಿಸಿ ಗುಂಪುಗಟ್ಟಿಕೊಂಡು ಆ ಸ್ಥಳವನ್ನೇ ಬಿಟ್ಟು ಓಡಿ ಹೋಗುವವು.

ಈ ಮಿಶ್ರಣವು ಮನುಷ್ಯರ ಮೈಗೆ ಬಹಳ ಹೊತ್ತಿನವರೆಗೆ ಹತ್ತಿದರೆ ಮಾತ್ರ ಸುಡುತ್ತದೆ. ಆದರೆ ಇಲಿಗಳಿಗೆ ಸುಡುವಷ್ಟು ಸುಡುವದಿಲ್ಲವಾದ ದರಿಂದ ಇದನ್ನು ಉಪಯೋಗಿಸಲು ಅಂಜುವಕಾರಣವಿಲ್ಲ.

ಕೃತ್ರಿಮ ವಜ್ರ.

ವಜ್ರವು ಕಾರ್ಬನ್ನಿನ (ಅಂಗಾರದ) ಒಂದು ವಿಶಿಷ್ಟ ಪ್ರಕಾರವಿರುವದು. ಇದನ್ನು ಬೇರೆ ಪ್ರಕಾರದ ಕಾರ್ಬನ್ನುಗಳಿಂದ ತಯಾರಿಸುವದು ಸಾಧ್ಯವಿದ್ದರೂ ಸಹಜವಾಗಿ ಕಣ್ಣಿಗೆ ಕಾಣುವಷ್ಟು ದೊಡ್ಡ ವಜ್ರಗಳನ್ನು ತಯಾರಿಸುವದು ಇನ್ನೂ ಸಾಧ್ಯವಾಗಿರುವದಿಲ್ಲ. ವಜ್ರದ ಸೂಕ್ಷ್ಮ ಕಣಗಳನ್ನು ಮೋಆಸಾನ್ ಎಂಬ ಫ್ರೆಂಚ್ ಶಾಸ್ತ್ರಜ್ಞನು ತಯಾರಿಸಿದನು. ಅದರ ಕ್ರಮವನ್ನು ಸ್ವಲ್ಪದರಲ್ಲಿ ಇಲ್ಲಿ ಹೇಳುವೆವು.

ಸಕ್ಕರೆ, ಉಪ್ಪು ಮೊದಲಾದ ಪದಾರ್ಥಗಳು ನೀರಿನಲ್ಲಿ ಹೇಗೆ ವಿಲೀನವಾಗುತ್ತವೆಯೋ ಅದೇ ಮೇರೆಗೆ ಕಾರ್ಬನ್ನು ಕಬ್ಬಿಣದ ರಸದಲ್ಲಿ ವಿಲೀನವಾಗುತ್ತದೆ. ಹೆಚ್ಚು ಹೆಚ್ಚು ಉಷ್ಣತೆಯನ್ನು ಕೊಟ್ಟಹಾಗೆ ಪದಾರ್ಥಗಳು ಹೆಚ್ಚು ಹೆಚ್ಚು ಪ್ರಮಾಣದಿಂದ ವಿಲೀನವಾಗುತ್ತವೆ. ಕಬ್ಬಿಣವು ಕುದಿಯುವವರೆಗೆ ಅದನ್ನು ಕಾಸಿ ಕಾರ್ಬನ್ನು ಅತಿದೊಡ್ಡ ಪ್ರಮಾಣದಿಂದ ಅದರಲ್ಲಿ ವಿಲೀನವಾಗುವ ಹಾಗೆ ಮಾಡುವರು. ಬಳಿಕ ಈ ಪ್ರಕಾರ ಉಂಟಾದ ಕಾರ್ಬನ್ ಮತ್ತು ಕಬ್ಬಿಣ ಇವುಗಳ ಸೊಲ್ಯೂಶನವನ್ನು ಪ್ರವಾಹರೂಪಕ್ಕೆ ತಂದ ಸೀಸದಲ್ಲಿ ಹಾಕಿ ಒಮ್ಮಿಂದೊಮ್ಮೆಯೆ ತಣ್ಣಗಾಗುವಂತೆ ಮಾಡುತ್ತಾರೆ. ಹೀಗೆ ಮಾಡುವದರಿಂದ ಕಬ್ಬಿಣದ ಮೇಲ್ಭಾ

ಗವು ತಣ್ಣಗಾಗಿ ಘನರೂಪಕ್ಕೆ ಬಂದರೂ ಅದರ ಒಳಭಾಗವು ಕೆಲಹೊತ್ತಿನ ವರೆಗೆ ಪ್ರವಾಹಿರೂಪದಲ್ಲಿಯೇ ಇರುತ್ತದೆ. ಇದಲ್ಲದೆ ಪ್ರವಾಹಿರೂಪದಿಂದ ಘನರೂಪಕ್ಕೆ ಬಂದ ಕಬ್ಬಿಣದ ಹೊರಭಾಗವು ಸಂಕುಚಿತವಾಗಿ ಒಳಭಾಗದ ಪ್ರವಾಹಿಸ್ಥಿತಿಯಲ್ಲಿರುವ ಕಬ್ಬಿಣದ ಮೇಲೆ ಬಹಳ ಒತ್ತುವಿಕೆಯುಂಟಾಗುತ್ತದೆ. ವಿಲೀನವಾಗಿದ್ದ ಕಾರ್ಬನ್ನು (ಕಬ್ಬಿಣದ ಉಷ್ಣತೆಯು ಕಡಿಮೆಯಾಗುವದರಿಂದ) ಕಬ್ಬಿಣದಿಂದ ಬೇರೆಯಾಗುತ್ತದೆ. ಇದೇವೇಳೆಗೆ ಒತ್ತುವಿಕೆಯೂ ಬಹಳ ಇರುವದರಿಂದ ಆ ಕಾರ್ಬನ್ನು ಪ್ರವಾಹಿರೂಪಕ್ಕೆ ಬರುತ್ತದೆ. ಒತ್ತುವಿಕೆಯಿಲ್ಲದೆ ಅದು ಎಂದೂ ಪ್ರವಾಹಿಸ್ಥಿತಿಗೆ ಬರುವದಿಲ್ಲ; ಒಮ್ಮೆಯೆ ವಾಯುರೂಪಕ್ಕೆ ಹೋಗುತ್ತದೆ. ಈ ಪ್ರಕಾರ ಪ್ರವಾಹಿರೂಪಕ್ಕೆ ಬಂದ ಕಾರ್ಬನ್ನು ಘನರೂಪಕ್ಕೆ ಬರುವಾಗ ಸ್ಫಟಿಕಾಕೃತಿಯ ವಜ್ರದ ಸಣ್ಣ ಸಣ್ಣ ಕಣಗಳು ಒಳಭಾಗದಲ್ಲಿ ತಯಾರಾಗುತ್ತವೆ. ಇವುಗಳನ್ನು ಹೊರಗೆ ತೆಗೆಯುವದಕ್ಕೆ ಆ ಕಬ್ಬಿಣದ ಗುಂಡನ್ನು ನೈಟ್ರಿಕ್ ಆಸಿಡದಲ್ಲಾಗಲೀ, ಹೈಡ್ರೋಕ್ಲೋರಿಕ್ ಆಸಿಡದಲ್ಲಾಗಲಿ ಹಾಕುತ್ತಾರೆ. ಅದರಲ್ಲಿ ಕಬ್ಬಿಣವಷ್ಟೇ ಕರಗುತ್ತದೆ. ಆಸಿಡದ ಕಾರ್ಯವು ವಜ್ರದ ಮೇಲೆ ನಡೆಯುವದಿಲ್ಲ. ಈ ಮೇರೆಗೆ ತಯಾರಾದ ವಜ್ರವು ಖಣಿಗಳಲ್ಲಿ ದೊರೆಯುವ ವಜ್ರದಂತೆ ವಕ್ರವಾದ ಮೈಯುಳ್ಳದ್ದಿರುತ್ತದೆ. ಆದರೆ ಅದು ಅತಿ ಸೂಕ್ಷ್ಮವಾದದ್ದು. ಅದನ್ನು ನೋಡಲಿಕ್ಕೆ ಸೂಕ್ಷ್ಮದರ್ಶಕಯಂತ್ರವು ಬೇಕು.

– R. K. Naik.

ಸ್ಲಾಯಿಡ ಅಥವಾ ಹಸ್ತಶಿಕ್ಷಣಪದ್ಧತಿ.

ಸ್ಲಾಯಿಡ ಪದ್ಧತಿಯಿಂದ ತಯಾರಿಸಕ್ಕ ಮಾದರಿಗಳನ್ನು ತಯಾರಿಸುವಾಗ ಕೆಳಗೆ ಬರೆದ ತತ್ವಗಳನು ಲಕ್ಷದಲ್ಲಿ ತರಬೇಕು.

(೧) ಸ್ಲಾಯಿಡದಲ್ಲಿಯ ಮಾದರಿಗಳನ್ನು ತಯಾರಿಸುವಾಗ ಮೊದಲು ಅದರಲ್ಲಿಯ ಎಲ್ಲ ಕೃತಿಗಳನ್ನು ಬೇರೆ ಬೇರೆ ಕಲಿಪು, ನಂತರ ಆಕೃತಿಗಳ ಸಹಾಯದಿಂದ ಮಾದರಿಗಳನ್ನು ತಯಾರಿಸಬಾರದು.

(೨) ಸ್ಲಾಯಿಡದಲ್ಲಿಯ ಮಾದರಿಗಳು ಪೂರ್ಣ ವಸ್ತುಗಳಾಗಿರಬೇಕು. ವಸ್ತುಗಳ ಬೇರೆ ಬೇರೆ ಭಾಗಗಳನ್ನು ತಯಾರಿಸುವದು ಇರಕೂಡದು.

(೩) ಹುಡುಗರು ಮಾಡತಕ್ಕ ಮಾದರಿಗಳಲ್ಲಿ ಹಲವು ಕಂಸಾಕೃತಿಯುಳ್ಳವುಗಳೂ ಹಲವು ಸರಳವಾದ ವೈಯುಳ್ಳವುಗಳೂ ಇರತಕ್ಕದ್ದು.

(೪) ಹುಡುಗರು ಪ್ರೀತಿಸುವಂಥ, ಹಾಗು ಉಪಯುಕ್ತವಾದಂಥ ಅನೇಕ ಮಾದರಿಗಳು ಇರತಕ್ಕದ್ದು.

(೫) ಸಾಮಾನ್ಯವಾಗಿ ಮಾದರಿಗಳನ್ನು ತಯಾರಿಸುವದರಲ್ಲಿ ಒಂದಕ್ಕಿಂತ ಹೆಚ್ಚಾಗಿಯೂ ಐದಕ್ಕಿಂತ ಕಡಿಮೆಯಾಗಿಯೂ ಹೊಸಕೃತಿಗಳೂ ಆಯುಧಗಳೂ ಇರತಕ್ಕದ್ದು.

(೬) ಕಠಿಣತೆಯು ಏರಿಕೆಯು ಸಾವಕಾಶವಾಗಿ ಆಗುತ್ತ ಹೋಗಿ, ಒಂದರ ಮುಂದಿನ ಮತ್ತೊಂದು ಮಾದರಿಯನ್ನು ಅನಾಯಾಸದಿಂದಲೂ ಉತ್ತಮ ರೀತಿಯಿಂದಲೂ ಮಾಡಲಿಕ್ಕೆ ಬರುವಂತೆ ಅನುಕೂಲವಾಗಬೇಕು. ಕೃತಿಗಳ ಕಾಠಿಣ್ಯದಂತೆ ಮಾದರಿಗಳನ್ನು ಆರಿಸಿಕೊಂಡರೆ ಉತ್ತಮವಾಗುವದು.

ಸ್ಲಾಯಿಡದ ಸುಪರಿಣಾಮಗಳು.

ಸ್ಲಾಯಿಡವು ಶಾಲೆಗಳಲ್ಲಿ ನಡೆಯಬಹುದಾದ ಔಪಪತ್ತಿಕ ಭಾಗವನ್ನೂ ಕಾರಖಾನೆಗಳಲ್ಲಿ ನಡೆಯಬಹುದಾದ ಕರ್ತವ್ಯ ಭಾಗವನ್ನೂ ಒಟ್ಟುಗೂಡಿಸುವ ಸಾಧನವಾಗಿರುವದು. ಇಲ್ಲಿಯ ಆಯುಧಗಳೇ ಅಲ್ಲಿಯ ಪುಸ್ತಕಗಳು; ಇಲ್ಲಿ ತಯಾರಿಸಲ್ಪಡುವ ವಸ್ತುಗಳ ನಿಜವಾದ ಸ್ವರೂಪವೇ ಅಲ್ಲಿಯ ತಾತ್ವಿಕ ನಿಯಮಗಳು. ಸ್ಲಾಯಿಡ ಎಂಬ ಹಸ್ತಶಿಕ್ಷಣ ಹೊಂದುವ ವಿದ್ಯಾರ್ಥಿಗೆ ಮೊದಲು ಕೈಕೆಲಸ ಮಾಡಿದನಂತರ ಮಿದುಳಿನ ಕೆಲಸ ಮಾಡುವ ಪ್ರಸಂಗವು ಬರುವದರಿಂದಲೂ, ಇದರಿಂದ ಸಾಕಷ್ಟು ವಿಶ್ರಾಂತಿಯು ಸಿಗುವದರಿಂದಲೂ ಚಿಕ್ಕಮಕ್ಕಳು ಸೋಮಾರಿಯಾಗುವದಿಲ್ಲ. ಸ್ಲಾಯಿಡದಲ್ಲಿ ಕೇವಲ ಕೈಯಿಂದಲೇ ಅನೇಕ ಆಕೃತಿಗಳನ್ನು ತೆಗೆಯಬೇಕಾಗುವದರಿಂದ ಹಸ್ತ-ನೇತ್ರಗಳಿಗೆ ಉತ್ತಮವಾದ ಶಿಕ್ಷಣ ಸಿಗುವದು. ಬಡಿಗಗಿರ್ಜದಲ್ಲಿ ಕಂಡುಬರುವ ಯಾಂತ್ರಿಕ ಸಹಾಯವೂ ಶ್ರಮ ಉಳಿಸುವ ಯುಕ್ತಿಗಳೂ ಇದರಲ್ಲಿ ಕಂಡು ಬರುವದಿಲ್ಲ. ಆರೋಗ್ಯರಕ್ಷಣೆಗೂ, ಶರೀರದ ಬೆಳವಣಿಗೆಗೂ ಅಡ್ಡ ಬರುವಂಥ ಅಸಹ್ಯವಾದ ಚಲನವಲನಗಳೂ, ದೇಹಕ್ಕೂ ಅದರಲ್ಲಿಯ ಮಹತ್ವದ ಅವಯವಗಳಿಗೂ ಅಪಾಯಕರವಾಗಿರುವಂಥ ಕೂಡ್ರೋಣ, ನಿಲ್ರೋಣ, ಮುಂತಾದವುಗಳೂ ಇರುವದಿಲ್ಲ. ಕೈಕೆಲಸದ ವಿಷಯದಲ್ಲಿಯೂ ಶಾರೀರಿಕ ಶ್ರಮದ ವಿಷ

ಉಪಕರಣಗಳು

ಪೆನ್ಸಿಲು:—ಪೇಪರ ಸ್ಲಾಯಿಡದ ಕೆಲಸದಲ್ಲಿ ಅಕೃತಿ ಮುಂತಾದ್ದನ್ನು ತೆಗೆಯುವದಕ್ಕೆ ತುಸು ಮಿದುವಾದ ಪೆನ್ಸಿಲುಗಳನ್ನು ಉಪಯೋಗಿಸಬೇಕು. ಪ್ರತಿಯೊಂದು ಸಾಲಿನಲ್ಲಿ ಕೂಡ್ರಿಸಬಹುದಾದ ಹುಡುಗರ ಸಂಖ್ಯೆಯಷ್ಟು ಪೆನ್ಸಿಲುಗಳನ್ನು, ಹಿಗ್ಗುವ ಲಾಡಿಗಳನ್ನು ಹಚ್ಚಿದ ಒಂದು ಚಿಕ್ಕ ರಟ್ಟಿನಲ್ಲಿ ಇಡಬೇಕು.

ಪೂಟು ಕಟ್ಟಿಗೆ:— ೧೨ ಇಂಚು ಉದ್ದವಾದದ್ದೂ, ಹಗುರಾದದ್ದೂ, ಗಟ್ಟಿಯಾದ ಕಟ್ಟಿಗೆಯಿಂದ ಮಾಡಿದ್ದೂ, ಒಂದು ಮಗ್ಗಲಿಗೆ ಚೌಕಾಗಿಯೂ ಮತ್ತೊಂದು ಮಗ್ಗಲಿಗೆ ಇಳುಕಲಾಗಿಯೂ ಇರಬೇಕು. ಅದರಲ್ಲಿ ೧", ೨", ೩", ೪" ಮುಂತಾದ ಭಾಗಗಳಿರಬೇಕು. ಇವುಗಳನ್ನಾದರೂ ಪೆನ್ಸಿಲುಗಳಂತೆ ಒಂದು ರಟ್ಟಿನಲ್ಲಿಟ್ಟರೆ ನೆಟ್ಟಗೆ.

ಕತ್ತರಿ:—ಕತ್ತರಿಯು ೫ ಇಂಚು ಉದ್ದವಾದದ್ದೂ ನಿಕೆಲ್ ಎಂಬ ಧಾತುವಿನ ಮುಲಾಮು ಕೊಟ್ಟದ್ದೂ ಇರಬೇಕು. ಅದರ ಎರಡು ತುದಿಗಳಲ್ಲಿ ಒಂದು ಚೂಪಾಗಿಯೂ, ಮತ್ತೊಂದು ಅಗಲವಾಗಿಯೂ ಇದ್ದರೆ ಒಳ್ಳೇದು. ೧೨ ಇಂಚು ಚೌರಸದ ಒಂದು ಉಣ್ಣೆಯ ಅರಿವೆಯನ್ನು ತೆಗೆದುಕೊಂಡು, ಅದರ ಒಂದು ಮಗ್ಗಲಿನಲ್ಲಿ ೧೨" × ೫" ಅಳತೆಯ ಬೇರೊಂದು ಅರಿವೆಯನ್ನು ಹಚ್ಚಿ ಮಧ್ಯ ಭಾಗದಲ್ಲಿ ಮನೆಮನೆಯಾಗುವಂತೆ ಹೊಲಿದು ಅವುಗಳಲ್ಲಿ ಕತ್ತರಿಗಳನ್ನು ಇಡಬೇಕು. ಬದಿಗೆ ಉಳಿದ ಅರಿವೆಯ ಭಾಗಗಳನ್ನು ಕತ್ತರಿಯ ಮನೆಗಳ ಮೇಲೆ ಬರುವಂತೆ ಮಡಿಚಿ ಸುರುಳಿಯನ್ನು ಸುತ್ತಿ ಇಡಬೇಕು. ಅಂದರೆ ಅವು ಹವೆಯ ಪರಿಣಾಮಕ್ಕೊಳಗಾಗದೆ, ಜಂಗು ಹಿಡಿಯದೆ ಚನ್ನಾಗಿ ಉಳಿಯುವವು; ಮತ್ತು ಹೀಗೆ ಇಡುವದರಿಂದ ಹುಡುಗರಿಗೆ ಕತ್ತರಿಗಳನ್ನು ಕೊಡಲಿಕ್ಕೂ ತೊಂದರೆಯಾಗುವದಿಲ್ಲ.

ರಬ್ಬರು:—ಪ್ರತಿಯೊಂದು ಸಾಲಿನಲ್ಲಿ ಕುಳಿತ ಹುಡುಗರ ಸಂಖ್ಯೆಯಷ್ಟೇ ರಬ್ಬರುಗಳನ್ನು ಒಂದು ರಟ್ಟಿನಲ್ಲಿ ಪೆನ್ಸಿಲುಗಳನ್ನು ಇಟ್ಟಂತೆ ಇಡಬೇಕು.

ಕಂಪಾಸು:—ಪ್ರತಿಯೊಬ್ಬ ಹುಡುಗನಿಗೆ ಒಂದು ಕಂಪಾಸು ಕೊಡಬೇಕು. ಒಂದು ಕಡೆಗೆ ಪೆನ್ಸಿಲನ್ನು ಸೇರಿಸುವಂತೆ ಇರಬೇಕು. ಇದನ್ನಾದರೂ ಒಂದು ರಟ್ಟಿನಲ್ಲಿ ವ್ಯವಸ್ಥಿತವಾಗಿಟ್ಟರೆ ನೆಟ್ಟಗೆ. ವರ್ತುಲಗಳನ್ನೂ ಅರ್ಧ ವರ್ತುಲಗಳನ್ನೂ ತೆಗೆಯುವದಕ್ಕೆ ಇದನ್ನು ಉಪಯೋಗಿಸಬೇಕು.

ಪಂಚ್:—ಇದನ್ನು ತೂತು ತೆಗೆಯುವದಕ್ಕೆ ಉಪಯೋಗಿಸಬೇಕು. ೪ ಇಂಚಿಗಿಂತ ಹೆಚ್ಚಿನ ದುಂಡನ್ನ ತೂತು ತೆಗೆಯುವಂಥ ಪಂಚ್ ಇರಬಾರದು. ೨೦ ಹುಡುಗರ ಒಂದು ಕ್ಲಾಸಿನಲ್ಲಿ ಒಂದು ಪಂಚ್ ಇದ್ದರೆ ಸಾಕು. ಇದಕ್ಕಾದರೂ ನಿಕೆಲ್ಲಿನ ಮುಲಾಮು ಇರಬೇಕು.

ಉಪಾದಾನಗಳು.

ಪೇಪರ ಸ್ಲಾಯಿಡದ ಕೆಲಸದಲ್ಲಿ ಬೇರೆ ಬೇರೆ ಬಣ್ಣದ ದಪ್ಪ ಕಾಗದಗಳನ್ನು ಉಪಯೋಗಿಸುವರು. ದಪ್ಪಕಾಗದಗಳಲ್ಲಿ ಅನೇಕ ಪ್ರಕಾರವಿರುವವು. ಅವು ಚಿಕ್ಕ ಮಕ್ಕಳಿಗೆ ಸುಲಭವಾಗಿ ಕತ್ತರಿಸುವದಕ್ಕೂ ಮಡಿಚುವದಕ್ಕೂ ಅನುಕೂಲವಾದಂಥ ವಿರಬೇಕು ಬ್ರಿಷ್ಟಲ್ ಬೋರ್ಡ್ ರಾಯಲ್ ಮೆಲ್ಟನ್ ಎಂಬ ಬೇರೆ ಬೇರೆ ಬಣ್ಣದ ಕಾಗದಗಳು ಸುಲಭವಾಗಿ ಕತ್ತರಿಸುವದಕ್ಕೂ ಮಡಿಚುವದಕ್ಕೂ ಬರುವಂಥ ವಿರುವವು. ಇವು ೨೮ ಇಂಚು ಉದ್ದ ೨೨ ಇಂಚು ಅಗಲ ಇರುವವು.

ಯುದ್ಧದ ಮೂಲಕ ಈ ಕಾಗದಗಳ ಬೆಲೆಯು ಏರಿರುವದು. ಸದ್ಯಕ್ಕೆ ಒಂದು ಡಝನ್ (೧೨) ಕಾಗದಗಳಿಗೆ ೩ ರೂ. ಆಗಿರುವದು. ಮೊದಲಿಗೆ ಒಂದು ಇಲ್ಲವೆ ಒಂದೂವರೆ ರೂಪಾಯಿ ಇತ್ತು ಇವು ಬೆಂಗಳೂರಲ್ಲಿ ಬಿ. ಕೆ. ಗರುಡಾಚಾರ ಜನರಲ್ ಮರ್ಚಂಟ ಇವರ ಕಡೆಗೆ ದೊರೆಯುವವು.

ಉಸುಬಿನ ಕಾಗದ (ನಂಬರ ೧), ಕಂದೀಬಣ್ಣದ ಕಾಗದ (Brown paper) ಒತ್ತಳಿರಡು, ಬಿಳೇಕಾಗದ ಮುಂತಾದವುಗಳು ಸ್ಟೇಶನರಿ ಅಂಗಡಿಗಳಲ್ಲಿ ಕಡಿಮೆ ಬೆಲೆಗೆ ದೊರೆಯುವವು. ಈ ಕೆಲಸದಲ್ಲಿ ಬೇಕಾಗುವ ಬೇರೆ ಬೇರೆ ಬಣ್ಣದ ಕಾಗದದ ಒಂದು ಇಂಚಿನ ವರ್ತುಲಗಳೂ ಚೌರಸಗಳೂ ಹೂವುಗಳೂ ನೂರರದೊಂದು ಗುಂಟಿನಂತೆ ಬೇಕಾದಷ್ಟು ಗುಂಟುಗಳು ಕಿಂಡರಗಾರ್ಟನ್ನಿನ ಸಾಮಾನುಗಳನ್ನು ಮಾರುವ ಅಂಗಡಿಗಳಲ್ಲಿ ದೊರೆಯುವವು. ಪೇಪರ ಸ್ಲಾಯಿಡದಲ್ಲಿ ನಾನಾಪ್ರಕಾರದ ಚಿತ್ರದ ಕಟ್ಟುಗಳನ್ನು ಹುಡುಗರು ತಯಾರಿಸುವರು. ಅವುಗಳಲ್ಲಿ ಹಾಕಿಡುವದಕೆ ಚಿತ್ರಗಳು ಬೇಕಾಗುವವು. ಇವುಗಳನ್ನಾದರೂ ಕೊಂಡುತಂದು, ಇಲ್ಲವೆ ಚಿತ್ರಗಳುಳ್ಳ ಮಾಸಿಕ ಪುಸ್ತಕಗಳನ್ನು ದೊರಕಿಸಿ ತಂದು, ಅವುಗಳನ್ನು ಹುಡುಗರಿಗೆ ಕೊಟ್ಟು, ವರ್ಷದ ಅವಧಿಯಲ್ಲಿ ಕೆಲವು ಚಿತ್ರಗಳಬಗ್ಗೆ ಮಾಹಿತಿಯನ್ನು ಮಾಡಿಕೊಡಬೇಕು.

ಬೇರೆ ಬೇರೆ ಬಣ್ಣದ ದಾರದ ಉಂಡಿಗಳು ಕೆಲವು ಬೇಕಾಗುವವು. ಯಾಕಂದರೆ, ಕೆಲವು ಮಾದರಿಗಳನ್ನು ದಾರದಿಂದ ಕಟ್ಟಿ ತಯಾರಿಸ ಬೇಕಾಗುವದು. ಹಲವನ್ನು ದಾರದಿಂದ ಕಟ್ಟಿ ತೂಗ ಹಾಕುವಂತೆ ಮಾಡಬೇಕಾಗವದು. ಈ ದಾರದ ಉಂಡಿಗಳು ಒಂದೂವರೆ ಅಣೆ ಇಲ್ಲವೆ ಎರಡು ಅಣೆಗೊಂದರಂತೆ ಅಂಗದಿಗಳಲ್ಲಿ ದೊರೆಯುವವು. ಬೇರೆ ಕೆಲವು ಮಾದರಿಗಳನ್ನು ಅಂಟಿಸಿ ತಯಾರ ಮಾಡಬೇಕಾಗುವದರಿಂದ ಅಂಟು ಬೇಕಾಗುವದು ಈ ತರದ ಕಾಗದದ ಕೆಲಸದಲ್ಲಿ 'ಫೋಟೋ ಪೇಸ್ಟ್' ಎಂಬದು ಅತ್ಯುಪಯುಕ್ತವಾದದ್ದು. ಇದನ್ನು ಬಾಟಲಿಗಳಲ್ಲಿ ತುಂಬ

ಮಾರುವರು. ಬಹಳ ಬಾಟಲಿಗಳನ್ನು ಕೊಂಡರೆ ಕಡಿಮೆ ಬೆಲೆ ಬೀಳುವದು. ಆದರೂ ಇದರ ಸದ್ಯದ ಬೆಲೆಯು ಒಂದೂವರೆ ರೂಪಾಯಿ ಇರುವದು. ಯುದ್ಧದ ಪೂರ್ವದಲ್ಲಿ ಇದು ಬಹು ಸ್ವಲ್ಪಕ್ರಯಕ್ಕೆ ದೊರೆಯುತ್ತಿತ್ತು. ಇದು ದೊರೆಯದ ಪಕ್ಷದಲ್ಲಿ ದೇಶೀ ಅಂಟನ್ನಾದರೂ ಉಪಯೋಗಿಸಬಹುದು.

– B. S. PUROHIT.

ಪ್ರಕೃತಿಪಾಠಗಳು.

(ಸೆಪ್ಟೆಂಬರ ತಿಂಗಳಿಂದ ಮುಂದೆ ಸಾಗಿದ್ದು.)

ಕುದುರೆ.

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ಕುದುರೆಯ ಸ್ವಭಾವ:—ಕುದುರೆಯಾವರೂ ಎತ್ತು ಆಕಳುಗಳಂತೆ ಬಹಳ ಸಾಧುವಾದ ಪ್ರಾಣಿಯಾಗಿರುತ್ತದೆ. ಕುದುರೆಯು ಎತ್ತು ಆಕಳುಗಳಿಗಿಂತ ಹೆಚ್ಚು ಬುದ್ಧಿಯುಳ್ಳದ್ದು.	ಕುದುರೆಯ ಸ್ವಭಾವವು ಎಂಥಾದ್ದು? ಆಕಳು, ಕುದುರೆ ಇವೆರಡು ಪ್ರಾಣಿಗಳಲ್ಲಿ ಯಾವದು ಹೆಚ್ಚು ಬುದ್ಧಿಯುಳ್ಳದ್ದು? [ಕುದುರೆಯು ಬಹಳ ಸೂಕ್ಷ್ಮ ಬುದ್ಧಿಯುಳ್ಳ ಪ್ರಾಣಿಯಾದ್ದರಿಂದ ಅದರಿಂದ ಸರ್ಕಸುಗಳಲ್ಲಿ ಅನೇಕ ಚಮತ್ಕಾರದ ಕೆಲಸಗಳನ್ನು ಮಾಡಿಸುತ್ತಾರೆ.]
ಉಪಯೋಗ:– ರೈಲು ಮಾರ್ಗಗಳು ಏರ್ಪಡದೇ ಇರುವ ಸ್ಥಳಗಳಲ್ಲಿ ತೀವ್ರವಾಗಿ ಪ್ರಯಾಣ ಮಾಡುವದಕ್ಕೆ ಕುದುರೆಯ ಸಹಾಯವು ಬೇಕಾಗುವುದು. ಬಂಡಿಗಳನ್ನು ಎಳೆಯುವದಕ್ಕೆ ಮಾತ್ರವಲ್ಲದೆ ಸವಾರಿಮಾಡುವ	ಕುದುರೆಯು ನಮಗೆ ಯಾವ ಯಾವ ಕೆಲಸಗಳಿಗೆ ಉಪಯೋಗವಾಗುತ್ತದೆ? ಇದು ಸತ್ತಮೇಲೆ ಇದರ ಶರೀರದ ಯಾವ ಯಾವ ಭಾಗಗಳನ್ನು ಯಾವ ಯಾವ ವಿಧಗಳಲ್ಲಿ ಉಪಯೋಗಿಸುತ್ತಾರೆ?

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ದಕ್ಕೂ ಉಪಯೋಗಿಸಲ್ಪಡುತ್ತದೆ. ಕುದುರೆಯು ಸತ್ತ ಮೇಲೆ ಅದರ ಶರೀರದ ಒಂದೊಂದು ಭಾಗವೂ ಒಂದೊಂದು ವಿಧದಲ್ಲಿ ಉಪಯೋಗಿಸಲ್ಪಡುತ್ತದೆ. ಅದರ ಕೂದಲನ್ನು ಗಾಡಿಗಳ ದಿಂಬುಗಳನ್ನು ತುಂಬುವದಕ್ಕೂ ಅದರ ಚರ್ಮವನ್ನು ಕೈಚೀಲಗಳನ್ನು ಮಾಡುವದಕ್ಕೂ ಅದರ ಕೊಳಿಗಗಳನ್ನು ಒಂದುಬಗೆಯಾದ ಅಂಟು ಮಾಡುವದಕ್ಕೂ ಅದರ ಎಲುವುಗಳನ್ನು ಚೂರಿಗಳ ಹಿಡಿಕೆಗಳನ್ನು ಮಾಡುವದಕ್ಕೂ ಉಪಯೋಗಿಸುತ್ತಾರೆ.	
ಕುದುರೆಯು ಜಾತಿಗೆ ಸೇರಿದ ಪ್ರಾಣಿಗಳು:— ಕತ್ತೆ, ಹೇಸರ ಕತ್ತೆ.	ಕುದುರೆಯು ಜಾತಿಗೆ ಸೇರಿದ ಪ್ರಾಣಿಗಳು ಯಾವವು? ಕುದುರೆಗೂ ಕತ್ತೆಗೂ ಅಂಗರಚನೆಯಲ್ಲಿಯೂ ಸ್ವಭಾವದಲ್ಲಿಯೂ ಇರುವ ವ್ಯತ್ಯಾಸಗಳು ಯಾವವು?

ಕಪ್ಪು ಹಲಿಗೆಯ ಮೇಲೆ ಬರೆಯುವ ಸಂಕ್ಷಿಪ್ತ ವಿವರಣೆ.

ಕುದುರೆಯ ಅಂಗರಚನೆಯ ಮುಖ್ಯ ಸಂಗತಿಗಳು.	ಸ್ವಭಾವ.
೧. ಕತ್ತು:— ಕುಸಾಕಾ	೧. ಬಹಳ ಸಾಧುವಾದ ಪ್ರಾಣಿಯು.

ರ ಬಗ್ಗಿರುತ್ತದೆ. ಕತ್ತಿನ ಮೇಲ್ಭಾದಗಲ್ಲಿ ಉದ್ದವಾದ ಕೂದಲುಗಳು ಸಾಲಾಗಿ ಬೆಳೆದು ಕೆಳಗೆ ಜೋತಾಡುತ್ತವೆ.

೨. ಬಾಯಿ:— ಮುಂಭಾಗದಲ್ಲಿ ಎರಡು ದವಡೆಗಳಲ್ಲಿಯೂ ಹಲ್ಲುಗಳಿರುತ್ತವೆ. ಹಿಂಭಾಗದಲ್ಲಿ ವಾಶ್ವ್ಯದಂತಗಳಿರುತ್ತವೆ. ಬವೆರಡಕ್ಕೂ ನಡುವೆ ಹಲ್ಲುಗಳಿಲ್ಲದ ಸಳವಿರುತ್ತವೆ.

೩. ಕಾಲುಗಳು:- ಕೊಳಗಗಳು ಸೀಳಿರುವದಿಲ್ಲ.

೪. ಬಾಲವು:..ಬಹಳ ದಪ್ಪವಾಗಿರುತ್ತದೆ. ಅದರಲ್ಲಿ ಉದ್ದವಾದ ಕೂದಲುಗಳಿರುತ್ತವೆ.

೫. ಬೆನ್ನು..ಬಹಳ ಅಗಲವಾಗಿರುತ್ತದೆ.

೬. ಹೆಚ್ಚು ಸೂಕ್ಷ್ಮ ಬುದ್ಧಿಯುಳ್ಳದ್ದು.

೭. ಹುಲ್ಲನ್ನು ಬಾಯಿಯ ಮುಂಭಾಗದಲ್ಲಿರುವ ಹಲ್ಲುಗಳಿಂದ ಕತ್ತರಿಸಿ ತೆಗೆದುಕೊಳ್ಳುತ್ತದೆ. ಬಾಯಿಯ ಹಿಂಭಾಗದಲ್ಲಿರುವ ಹಲ್ಲುಗಳಿಂದ ಅಗಿದು ತಿನ್ನುತ್ತದೆ.

ಕಪ್ಪೆ.

ನಮ್ಮ ಮನೆಗಳ ಹತ್ತಿರ ವಾಸ ಮಾಡುವ ಸಣ್ಣ ಪ್ರಾಣಿಗಳಲ್ಲಿ ಕೆಲವು ನಮಗೆ ಹಿತಕರವಾದವುಗಳಾಗಿಯೂ ಕೆಲವು ಹಾನಿಕರವಾದವುಗಳಾಗಿಯೂ ಇರುತ್ತವೆ. ಅಂದಗೇಡಿಯಾದ ಕಪ್ಪೆಯು ನಮಗೆ ಹಿತಕರವಾದ ಪ್ರಾಣಿಗಳಲ್ಲಿ ಸೇರುತ್ತದೆ. ಇದರ ವಿಷಯದಲಿ ಹುಡುಗರಿಗೂ ಹಾಗೆಯೇ ಬೊಡ್ಡವರಲ್ಲಿ ಅನೇಕರಿಗೂ ಸರಿಯಾದ ತಿಳುವಳಿಕೆ

ಯಿರುವದಿಲ್ಲ. ಒಕ್ಕಲಿಗರಿಗೂ ತೋಟಗಾರರಿಗೂ ಈ ಪ್ರಾಣಿಯು ಒದಗಿಸುವ ಸಹಾಯವನ್ನರಿಯದೆ ಜನರು ಇದನ್ನು ನಿಷ್ಕಾರಣವಾಗಿ ತೊಂದರೆ ಪಡಿಸುತ್ತಾರೆ. ಕಪ್ಪೆಯು ಮುಖ್ಯವಾಗಿ ಸಣ್ಣಸಣ್ಣ ಹುಳಗಳನ್ನು ತಿನ್ನುವದರಿಂದ ತೋಟಗಳಲ್ಲಿ ಸಣ್ಣ ಸಸ್ಯಗಳಿಗೆ ಕೇಡನ್ನುಂಟು ಮಾಡುವ ಹುಳಗಳನ್ನು ತಿಂದು ತೋಟಗಾರರಿಗೆ ಉಪಕಾರವನ್ನು ಮಾಡುತ್ತದೆ. ಕಪ್ಪೆಯು ಸಾಧಾರಣವಾಗಿ ತೇವವಿರುವ ಕಡೆಗಳಲ್ಲಿ ವಾಸಮಾಡುತ್ತ ನೆಲದಮೇಲೂ ನೀರಿನಲ್ಲೂ ಒಂದೇ ವಿಧವಾದ ಅನುಕೂಲತೆಯಿಂದ ಸಂಚರಿಸುತ್ತದೆ.

ನಮ್ಮ ದೇಶದಲ್ಲಿ ಬೆಸಿಗೆಯಲ್ಲಿ ಕೆರೆಗಳು ಒಣಗಿ ಮಳೆಗಾಲವು ಬಂದಮೇಲೆ ಅವೆಲ್ಲವೂ ತುಂಬುವವಷ್ಟೇ. ಒಂದೆರಡು ಸಾರೆ ಮಳೆಯಾದ ಮೇಲೆ ಈ ಕೆರೆಗಳಲ್ಲಿ ಅನೇಕ ದೊಡ್ಡ ಮತ್ತು ಸಣ್ಣ ಕಪ್ಪೆಗಳು ಬಂದು ಕೂಡಿ ಸ್ವೇಚ್ಛೆಯಾಗಿ ಕೂಗುತ್ತವೆ. ಮಳೆ ಬರುವವಕ್ಕೆ ಮೊದಲು ಈ ಕಪ್ಪೆಗಳು ಎಲ್ಲಿದ್ದವು? ಇವು ಆಕಾಶದಿಂದ ಮಳೆಯೊಡನೆ ಬಂದವೆಂಬ ಮಾತು ಸಾಮಾನ್ಯ ಜನರಲ್ಲಿ ರೂಢಿಯಾಗಿರುತ್ತದೆ. ಸರಿಯಾಗಿ ಪರೀಕ್ಷಿಸಿ ನೋಡಿದರೆ ಈ ಕಪ್ಪೆಗಳು ಆ ಕೆರೆಗಳ ಕೆಸರಿನಲ್ಲಿ ಸಣ್ಣ ಹಳ್ಳಗಳನ್ನು ಮಾಡಿಕೊಂಡು ಅಲ್ಲಿಯೇ ನಿದ್ರೆ ಮಾಡುತ್ತಿರುತ್ತವೆಂದು ತಿಳಿಯಬರುವುದು. ಕೆಲವು ಸಾರೆ ದೊಡ್ಡ ಬಂಡೆಗಳ ಅಡಿಯ ಭಾಗದಲ್ಲೂ ಕಪ್ಪೆಗಳು ಅಡಗಿಕೊಂಡಿರುವದನ್ನು ನಾವು ನೋಡಬಹುದು.

ಅವಯವ ನಿರ್ಮಾಣ:—ಸಾಧಾರಣ ಚತುಷ್ಪಾದ ಜಂತುಗಳಿಗಿರುವಂತೆ ಕಪ್ಪೆಗಳಿಗೂ ನಾಲ್ಕು ಕಾಲುಗಳಿರುತ್ತವೆ. ಆದರೆ ಕಪ್ಪೆಗಳ ಹಿಂಗಾಲುಗಳು ಮುಂಗಾಲುಗಳಿಗಿಂತ ಉದ್ದವಾಗಿಯೂ ಗಡುತರವಾಗಿಯೂ ಹೆಚ್ಚು ಬಲವುಳ್ಳವುಗಳಾಗಿಯೂ ಇರುತ್ತವೆ. ಆದುದರಿಂದ ಕಪ್ಪೆಗಳು ಯಾವಾಗಲಾದರೂ ಮುಂದೆ ಸರಿಯಬೇಕಾದರೆ, ನಾಯಿ ಮೊದಲಾದ ಚತುಷ್ಪಾದ ಪ್ರಾಣಿಗಳಂತೆ ಓಡದೆ, ಹಾರುತ್ತ (ಜಿಗಿಯುತ್ತ) ಹೋಗುವುವು. ಕಪ್ಪೆಗಳು ಹೀಗೆ ಸಾವಕಾಶವಾಗಿ ಚಲಿಸುವದರಿಂದ ಅವುಗಳನ್ನು ಹಿಡಿಯುವದು ಕಠಿಣವಾದ ಕೆಲಸವಲ್ಲ.

ಚರ್ಮ:—ಒಂದು ಕಪ್ಪೆಯನ್ನು ಕೈಯಿಂದ ಮುಟ್ಟಿದರೆ ಅದರ ಚರ್ಮವು ಬಹಳ ತಂಪಾಗಿರುವುದು. ಅದರ ಚರ್ಮದಿಂದ ಒಂದು ಬಗೆಯಾದ ದ್ರವವು ಬರುತ್ತಿರುವುದು. ಕಪ್ಪೆಗಳನ್ನು ಶೀತರಕ್ತವುಳ್ಳ ಪ್ರಾಣಿಗಳೆಂದು ಕರೆಯುತ್ತಾರೆ. ಇವುಗಳ ರಕ್ತವು ಸುತ್ತಮುತ್ತ ಇರುವ ಪದಾರ್ಥಗಳ ಉಷ್ಣಮಾನದ್ದೇ ಆಗಿರುವುದು. ಉಷ್ಣರಕ್ತವುಳ್ಳ ಪ್ರಾಣಿಗಳ ಅಂದರೆ ಮನುಷ್ಯ, ನಾಯಿ, ಬೆಕ್ಕು ಮೊದಲಾದವುಗಳ ರಕ್ತವು ಸುತ್ತುಮುತ್ತು ಇರುವ ಪದಾರ್ಥಗಳ ಉಷ್ಣಮಾನವನ್ನವಲಂಬಿಸದೆ ಯಾವಾಗಲೂ ಒಂದೇ ವಿಧವಾದ ಉಷ್ಣತೆಯನ್ನು ಹೊಂದಿರುತ್ತದೆ.

ಕಪ್ಪೆಯು ನೆಲದಮೇಲೂ ನೀರಿನಲ್ಲೂ ಒಂದೇ ವಿಧವಾಗಿ ಸಂಚರಿಸುವದಷ್ಟೇ. ಅದು ನೀರಿನಲ್ಲಿರುವಾಗ ಬಾಯಿಯಿಂದ ಶ್ವಾಸೋಚ್ಛ್ವಾಸವನ್ನು ನಡಿಸದೆ, ಚರ್ಮದಿಂದಲೇ ನೀರಿನೊಳಗಿನ ಗಾಳಿಯನ್ನು ಹೀರಿಕೊಳ್ಳುತ್ತದೆ ಈ ರೀತಿಯಲ್ಲಿ ಕಪ್ಪೆಗೆ ಮುಳುಗುವ ಭಯವಿಲ್ಲದೆ ಎಷ್ಟು ಹೊತ್ತಾದರೂ ನೀರಿನಲ್ಲಿ ಇರಬಲ್ಲದು. ಕಪ್ಪೆಯ ಚರ್ಮದಲ್ಲಿ ಮತ್ತೊಂದು ವಿಶೇಷಗುಣವಿರುತ್ತದೆ. ಅದರ ಚರ್ಮದ ಬಣ್ಣವು ಸುತ್ತುಮುತ್ತು ಇರುವ ಪ್ರದೇಶದ ಬಣ್ಣಕ್ಕೆ ತಕ್ಕಂತೆ ವ್ಯತ್ಯಾಸವಾಗುತ್ತಲಿರುತ್ತದೆ. ಬಹಳ ಕಪ್ಪು ಬಣ್ಣವುಳ್ಳ ಪ್ರದೇಶಕ್ಕೆ ಹೋದಾಗ ಇದರ ಚರ್ಮವು ಹೆಚ್ಚು ಕಪ್ಪಾಗಿಯೂ ಹಗುರವಾದ ಬಣ್ಣವುಳ್ಳ ಪ್ರದೇಶಕ್ಕೆ ಹೋದಾಗ ಅದರ ಚರ್ಮದ ಮೇಲಿರುವ ಕಪ್ಪು ಬಣ್ಣವು ಬಿಳುಪೇರುತ್ತಲೂ ಇರುವುದು. ಹೊಟ್ಟೆಯ ಕೆಳಮಗ್ಗಲು ತಿಳಿಹಸರು ಬಣ್ಣವುಳ್ಳದ್ದಾಗಿರುತ್ತದೆ.

ಶ್ವಾಸಕ್ರಮ:—ಒಂದು ಕಪ್ಪೆಯನ್ನು ತಂದು ಬಾಯಿಕೆಳಗೆ ಮಾಡಿದ ಒಂದು ಗಾಜಿನ ಪಾತ್ರೆಯೊಳಗೆ ಸೇರಿಸಿ ಅದು ಉಸುರಾಡಿಸುವ ಕ್ರಮವನ್ನು ನೋಡಬೇಕು. ನಾವು ಉಸುರಾಡಿಸುವಾಗ ನಮ್ಮ ಪಕ್ಕೆಲುವುಗಳು ಮೇಲಕ್ಕೆ ಏಳುತ್ತಲೂ ಇಳಿಯುತ್ತಲೂ ಇರುತ್ತವೆ. ಕಪ್ಪೆಯ ಶರೀರದಲ್ಲಿ ಪಕ್ಕೆಲುವುಗಳಿಲ್ಲವಾದುದರಿಂದ ಅದು ಶ್ವಾಸವನ್ನು ತೆಗೆದುಕೊಳ್ಳುವಾಗ ನಮ್ಮ ಹಾಗೆ ಎದೆಯನ್ನು ಉಬ್ಬಿಸಲಾರದು. ನಾವು ಆಹಾರವನ್ನು ನುಂಗುವಹಾಗೆ ಕಪ್ಪೆಯು ಗಾಳಿಯನ್ನು ನುಂಗು

ತ ದೆ. ಅದರ ಬಾಯಿಯು ಯಾವಾಗಲೂ ಮುಚ್ಚಿರುವದರಿಂದ ಮೂಗಿನ ಹೊಳ್ಳಿಗಳಿಂದ ಹವೆಯು ಬಾಯಿಯೊಳಗೆ ಹೋಗಿ ಸೇರುವದು. ಅಲ್ಲಿಂದ ಈ ಹವೆಯನ್ನು ಗಂಟಲಿನ ಮಾರ್ಗದಿಂದ ಶ್ವಾಸಕೋಶ (ಪುಪ್ಪುಸ) ಗಳ ಕಡೆಗೆ ದೂಡುತ್ತದೆ.

ಬಾಯಿ:—ಕಪ್ಪೆಯ ಬಾಯಿಯು ದೊಡ್ಡದು. ಕಪ್ಪೆಯ ಬಾಯಿಯನ್ನು ತೆರೆದು ನೋಡಿದರೆ ಹಳದೀ ಬಣ್ಣದ್ದಾದ ಅದರ ಮೃದುವಾದ ನಾಲಿಗೆಯು ಕಾಣುವುದು. ಈ ನಾಲಿಗೆಯು ಬಾಯಿಯ ಮುಂಭಾಗದಲ್ಲಿ ಅಂಟಿಕೊಂಡು ಗಂಟಲಿನ ಕಡೆಗೆ ಬಿಡಿಯಾಗಿರುತ್ತದೆ. ನಮ್ಮ ಬಾಯಿಯೊಳಗೆ ನಾಲಿಗೆಯು ಇದಕ್ಕೆ ವಿರುದ್ಧ ರೀತಿಯಲ್ಲಿ ಅಂಟಿಕೊಂಡಿರುವುದು. ಕಪ್ಪೆಯ ನಾಲಿಗೆಯು ಹೀಗೆ ಮುಂಭಾಗದಲ್ಲಿ ಸೇರಿಕೊಂಡಿರುವದರಿಂದ ಅದಕ್ಕೆ ಅನುಕೂಲವೇನು? ಇದನ್ನು ತಿಳಿಯಬೇಕಾದರೆ ಕಪ್ಪೆಯು ಒಂದು ನೊಣವನ್ನಾಗಲಿ ಇತರ ಕೀಟಕವನ್ನಾಗಲಿ ಹಿಡಿಯುವಾಗ ಸಾವಧಾನದಿಂದ ನೋಡಬೇಕು. ಕಪ್ಪೆಯು ಮೆಲ್ಲ ಮೆಲ್ಲಗೆ ಆ ಕೀಟಕದ ಸಮೀಪಕ್ಕೆ ಒಂದು ತನ್ನ ನಾಲಿಗೆಯನ್ನು ಬಾರಕೋಲಿನಂತೆ ಅದರ ಮೇಲೆ ಎಸೆದು ಅದನ್ನು ಬಾಯಿಯೊಳಗೆ ಸೆಳೆದುಕೊಳ್ಳುವುದು. ಕೀಟಕಗಳನ್ನು ಹಿಡಿಯುವದರಲ್ಲಿ ಮತ್ತಷ್ಟು ಸಹಾಯವಾಗುವಂತೆ ಕಪ್ಪೆಯ ನಾಲಿಗೆಯ ಮೇಲೆ ಅಂಟನಂತಿರುವ ಒಂದು ದ್ರವವು ಇರುತ್ತದೆ.

ಕಪ್ಪೆಯ ಬಾಯಿಯಲ್ಲಿ ಸೇರಿದ ಕೀಟಕವು ತಪ್ಪಿಸಿಕೊಂಡು ಹೊರಗೆ ಹೋಗುವದು ಸಾಧ್ಯವಲ್ಲ. ಕಪ್ಪೆಯ ಬಾಯಿಯೊಳಗಿರುವ ಹಲ್ಲುಗಳು ಒಂದು ಬಲೆಯಂತೆ ಆಗಿ ಈ ಕೀಟಕವನ್ನು ಹೊರಗೆ ಬರದಂತೆ ತಡೆಯುತ್ತವೆ. ಈ ಹಲ್ಲುಗಳಲ್ಲದೆ ಗಂಟಲಿನಲ್ಲಿ ಅನೇಕ ಸಣ್ಣ ಸಣ್ಣ ಕೂದಲುಗಳಿರುತ್ತವೆ. ಇವೂ ಸಹ ಸಣ್ಣ ಸಣ್ಣ ಕೀಟಕಗಳನ್ನು ಗಂಟಲಿನ ಕಡೆಗೆ ನೂಕುವದಕ್ಕೆ ಸಹಾಯಗಿರುತ್ತವೆ. ಕಪ್ಪೆಯು ಆಹಾರವನ್ನು ತೆಗೆದುಕೊಳ್ಳುವಾಗ ಬಾಯಿಯನ್ನು ತೆರೆಯುತ್ತದೆ; ಉಳಿದ ವೇಳೆಗಳಲ್ಲಿ ಬಾಯಿಯನ್ನು ಮುಚ್ಚಿಕೊಂಡಿರುತ್ತದೆ.

ಕಿವಿ:—ಕಪ್ಪೆಯ ಬಾಯಿಯು ತೆರೆದಿರುವಾಗ ಅದರ ಮೇಲ್ಪವಡೆಯ ಹಿಂಭಾಗದಲ್ಲಿ ಎರಡು ಸಣ್ಣ ರಂಧ್ರಗಳು ಕಾಣುವವು. ಇವು

ಎರಡು ಪಾರ್ಶ್ವಗಳಲ್ಲಿಯೂ ಒಂದೊಂದು ಕೊಳಿವೆಯಿಂದ ಕಿವಿಗಳಿಗೆ ಸೇರಿಕೊಂಡಿರುತ್ತವೆ. ಕಪ್ಪೆಯ ಕಿವಿಗಳು ನಮ್ಮ ಕಿವಿಗಳ ಹಾಗೆ ಎದ್ದು ಕಾಣುವದಿಲ್ಲ. ಕಣ್ಣುಗಳ ಹಿಂದೆ ಎರಡು ಹೆಚ್ಚು ಕಡಿಮೆ ದುಂಡಾಗಿರುವ ಚಿಕ್ಕೆಗಳು ಕಂಡುಬರುವುವು. ಇವೇ ಕಪ್ಪೆಯ ಕರ್ಣಪಟಲಗಳು.

ಕಣ್ಣುಗಳು:—ಕಪ್ಪೆಯ ಕಣ್ಣುಗಳು ದೊಡ್ಡವಾಗಿಯೂ ಪ್ರಕಾಶಮಾನವಾಗಿಯೂ ಇರುತ್ತವೆ. ಇವು ಸ್ವಲ್ಪ ಮುಂದಕ್ಕೆ ಹೊರಟು ಬಂದಿರುವಂತೆಯೂ ಕಾಣುತ್ತವೆ. ಕಣ್ಣಿನ ಗುಡ್ಡು ಬೇಕಾದಾಗ ಒಳಗೆ ಸೆಳೆದುಕೊಳ್ಳುತ್ತದೆ.

ಕಾಲುಗಳು:—ಕಪ್ಪೆಯ ಮುಂಗಾಲುಗಳು ಹಿಂಗಾಲುಗಳಿಗಿಂತ ಸಣ್ಣವಾಗಿರುತ್ತವೆಂದು ಹಿಂದೆ ತಿಳಿಸಿರುತ್ತದೆ. ಅದರ ಒಂದೊಂದು ಕಾಲಿನಲ್ಲಿಯೂ ನಮ್ಮ ಕೈಗಳಲ್ಲಿ ರಟ್ಟೆ, ಮೊಣಕೈ, ಮುಂಗೈಗಳಿರುವಂತೆ ಮೂರು ಭಾಗಗಳಿರುತ್ತವೆ. ಮುಂಗಾಲುಗಳಲ್ಲಿ ನಾಲ್ಕು ಬೆರಳುಗಳೂ ಹಿಂಗಾಲುಗಳಲ್ಲಿ ಐದು ಬೆರಳುಗಳೂ ಇರುತ್ತವೆ. ಹಿಂಗಾಲುಗಳಲ್ಲಿ ಬೆರಳುಗಳ ನಡುವೆ ತೆಳುವಾದ ತೊಗಲಿರುತ್ತದೆ. ಕಪ್ಪೆಯು ನೀರಿನಲ್ಲಿ ಈಜು (ಈಸು) ವಾಗ ಈ ತೊಗಲಿನಿಂದ ಬಹಳ ಸಹಾಯವಾಗುವುದು.

ಕಪ್ಪೆಗಳ ಉತ್ಪತ್ತಿ ಮತ್ತು ಬೆಳವಣಿಗೆ.

ನಾವು ಇಲ್ಲಿಯವರೆಗೆ ವಿಚಾರಿಸಿದ ನಾಲ್ಕು ಪ್ರಾಣಿಗಳ ಉತ್ಪತಿಕ್ರಮವು ಒಂದೇ ವಿಧವಾಗಿರುತ್ತದೆ. ಬೆಕ್ಕು, ನಾಯಿ, ಆಕಳು, ಕುದುರೆ ಇವು ಗರ್ಭಕೋಶದಿಂದ ಹೊರಬೀಳುವಾಗ ಸಣ್ಣ ಪ್ರಾಣಿಗಳಿದ್ದು ಕ್ರಮಕ್ರಮವಾಗಿ ವೃದ್ಧಿಯನ್ನು ಹೊಂದಿ ದೊಡ್ಡ ಪ್ರಾಣಿಗಳಾಗುತ್ತವೆ. ಇವುಗಳಲ್ಲಿ ಒಂದೊಂದು ಪ್ರಾಣಿಯು ಹುಟ್ಟುವಾಗಲೇ ಅದರ ತಾಯಿ ತಂದೆಗಳಂತೆ ಅಂಗರಚನೆಯನ್ನು ಹೊಂದಿರುತ್ತದೆ. ಕಪ್ಪೆಯಾದರೊ ಅಂಡ (ತತ್ತಿ, ಮೊಟ್ಟೆ) ರೂಪದಿಂದ ಹೊರಗೆ ಬರುವದಲ್ಲದೆ, ಅಂಡದಿಂದ ಹೊರಬಿದ್ದು ನಿಜವಾದ ಕಪ್ಪೆಯಾಗುವದರೊಳಗಾಗಿ ಅನೇಕ ಬದಲಾವಣಿಗಳನ್ನು ಹೊಂದುತ್ತದೆ.

ಮಳೆಗಾಲದ ಪ್ರಾರಂಭದಲ್ಲಿ, ಅಂದರೆ ಮೇ ತಿಂಗಳ ಕಡೆಯಲ್ಲಿ ಅಥವಾ ಜೂನ್ ತಿಂಗಳಲ್ಲಿ ಬೇರೆಬೇರೆ ಸ್ಥಳಗಳಲ್ಲಿ ನಿದ್ರೆ ಮಾಡುತ್ತಿದ್ದ ಕಪ್ಪೆಗಳು ಕೆರೆಗಳಲ್ಲಿ ಬಂದು ಸೇರಿ ಸ್ವೇಚ್ಛೆಯಾಗಿ ಹಾರಾಡುತ್ತ ಗದ್ದಲವನ್ನು ಮಾಡುವವಷ್ಟೇ. ಇದೇ ಕಾಲದಲ್ಲಿ ಕಪ್ಪೆಗಳು ತತ್ತಿಗಳನ್ನಿಡುವುವು. ಸಾಸಿವೆ ಕಾಳಿನಂತಿರುವ ಈ ತತ್ತಿಗಳು ಉದ್ದವಾದ ಬಿಳಿ ಬಣ್ಣದ ಕೊಳವೆಯಲ್ಲಿ ಸೇರಿಸಲ್ಪಟ್ಟು ನೀರಿನಲ್ಲಿ ತೇಲುತ್ತಿರುತ್ತವೆ. ಇವು ಸೂರ್ಯನ ಕಿರಣಗಳಿಂದ ಪುಸುಗಲ್ಪಟ್ಟು ಇವುಗಳಿಂದ ಸುಮಾರು ೪ ದಿವಸಗಳಲ್ಲಿ ಸಣ್ಣಸಣ್ಣ ಉದ್ದವಾದ ಪ್ರಾಣಿಗಳು ಹೊರಟು ಬಂದು ಓಡಾಡುತ್ತವೆ. ತತ್ತಿಯಿಂದ ಹೊರಗೆ ಬರುವ ಮರಿಯು ಮತ್ಸ್ಯರೂಪವನ್ನು ಹೊಂದಿರುವದೇ ಹೊರತು, ಎಷ್ಟು ಮಾತ್ರವೂ ಕಪ್ಪೆಯನ್ನು ಹೋಲಿರುವದಿಲ್ಲ. ತಲೆ ಮತ್ತು ಶರೀರದಲ್ಲಿ ತಲೆ, ಬಾಲ ಇವೆರಡೇ ಇರುತ್ತವೆ ಈ ಮರಿಗಪ್ಪೆಗಳು ಕೆಲವು ದಿವಸಗಳವರೆಗೆ ನೀರಿನಲ್ಲಿ ಯಾವುದಕ್ಕಾದರೂ ಹತ್ತಿಕೊಂಡು ಬೆಳೆಯುತ್ತಿದ್ದು, ತಮ್ಮ ಬಾಲಗಳು ಸ್ವಲ್ಪ ಉದ್ದವಾದ ಮೇಲೆ ಅವುಗಳ ಸಹಾಯದಿಂದ ನೀರಿನಲ್ಲಿ ಈಜಲಾರಂಭಿಸುವುವು. ಆಗ ಇವುಗಳ ತಲೆಯ ಎರಡು ಕಡೆಗಳಲ್ಲಿಯೂ ಕಲ್ಲಗಳು (Eills) ಅಥವಾ ಶ್ವಾಸೇಂದ್ರಿಯಗಳಿರುತ್ತವೆ. ಮೂರು ನಾಲ್ಕು ದಿನಗಳಲ್ಲಿ ಈ ಹೊರ ಕಲ್ಲಗಳು ಇಲ್ಲದಂತಾಗಿ ಮೀನುಗಳ ಹಾಗೆ ಒಳಕಲ್ಲಗಳಿಂದ ಉಸುರಾಡಿಸುತ್ತವೆ ಈ ಮರಿಯನ್ನು ಒಂದು ಸೂಕ್ಷ್ಮದರ್ಶಕ ಕನ್ನಡಿಯಿಂದ ನೋಡಿದರೆ ಅದರ ಹೊಟ್ಟೆಯೊಳಗಿರುವ ಸಣ್ಣ ಕರಳುಗಳೂ ಒಳಗಿನ ಅವಯವಗಳ ಚಲನೆಗಳೂ ಕಾಣುವುವು. ಈ ಅವಸ್ಥೆಯಲ್ಲಿರುವಾಗ ಈ ಮರಿಗಳು ನೀರಿನಲ್ಲಿ ಬೆಳೆಯುವ ಸಸ್ಯಗಳ ಚಿಗುರುಗಳನ್ನು ತಿನ್ನುವುವು.

M. Ramabrahma.

ಶಾಸ್ತ್ರೀಯ ಪಾಠದ ಟಿಪ್ಪಣಿಯು.

ಸೃಷ್ಟಿಪದಾರ್ಥಗಳೂ ಅವುಗಳ ಮೂರು ರೂಪಗಳೂ.

ವರ್ಗ—ಆರನೆಯ ಇಯತ್ತೆ. **ವೇಳೆ**—೫೦ ನಿಮಿಟು.

ಉಪಕರಣಗಳು:—ಕಲ್ಲು, ಕಟ್ಟಿಗೆ, ನೀರು, ಮೇಣ, ಬೆಂಕಿ, ಸೌಟು, ಗಂಧಕ ಸೊಂಡಿಯ ಪಾತ್ರೆ ಮುಂತಾ ವುಗಳು.

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ಉಪೋದ್ಘಾತ:— (೧) ಸೃಷ್ಟಿಯು ದ್ರವ್ಯ ಮತ್ತು ಶಕ್ತಿ ಎಂಬೆರಡು ಘಟಕಗಳಿಂದ ಆಗಿರುತ್ತದೆ. (ದ್ರವ್ಯ). **ಉದಾ:**—ಕಲ್ಲು, ನೀರು, ಹವೆ ಇ. (ಶಕ್ತಿ). **ಉದಾ:**—ಉಷ್ಣತೆ, ಪ್ರಕಾಶ, ವಿದ್ಯುತ್ತು ಇ.	ಈ ಪಾಠವು ಪದಾರ್ಥವಿಜ್ಞಾನಶಾಸ್ತ್ರದ ಮೊದಲನೆಯ ಪಾಠವಿರುವದರಿಂದ **ಉಪೋದ್ಘಾತದ** ಕಾರಣವಿಲ್ಲ. ಸುತ್ತಮುತ್ತಲು ಕಾಣಿಸುವ ಪದಾರ್ಥಗಳಲ್ಲಿ ಭಾರವಿದ್ದವುಗಳ ಹೆಸರುಗಳನ್ನು ಒಂದು ಸಾಲಿನಲ್ಲಿಯೂ, ಭಾರವಿಲ್ಲದವುಗಳ ಹೆಸರುಗಳನ್ನು ಇನ್ನೊಂದು ಸಾಲಿನಲ್ಲಿಯೂ ಬರೆಯಿಸುವದು. (ತಪ್ಪು ಇದ್ದರೆ, ಸಮಾಧಾನ ಹೇಳಿ, ತಿದ್ದಿಸುವದು). ಮೊದಲನೆಯ ಪ್ರಕಾರದ ಪದಾರ್ಥಗಳಿಗೆ ಏನು ಹೆಸರು ಕೊಡಬಹುದು? (ಬೇರೆ ಬೇರೆ ಉತ್ತರಗಳು ಬರಬಹುದು.) ಶಾಸ್ತ್ರಜ್ಞರು ಇವುಗಳಿಗೆ 'ದ್ರವ್ಯ' ಎನ್ನುವರು. ಭಾರವಿಲ್ಲದವುಗಳಿಗೆ 'ಶಕ್ತಿ' ಎನ್ನುವರು ಎಂದು ಹೇಳುವದು. ಈ ಎರಡು ವರ್ಗಗಳಿಂದ ಭಿನ್ನವಾದ ಪದಾರ್ಥವು ಉಂಟೆ?

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ಕರೆಹಲಿಗೆಯ ಮೇ ಸಾರಾಂಶ:— (೨) ದ್ರವ್ಯದಲ್ಲಿ ಕೆಲ ಕಟ್ಟಿಗೆ-ಕಲ್ಲುಗಳ ಜಾ ುವು, ಕೆಲವು ನೀರಿನ ತಿಯುವೂ ಇರುವ. (ಘನ, ಪ್ರವಾಹಿ)	ಸೃಷ್ಟಿಯು ದ್ರವ್ಯ ಮತ್ತು ಶಕ್ತಿ ಎಂಬೀಡು ಘಟಕ ಗಳಿಂದ ಆಗಿರುತ್ತದೆ. ಕಲ್ಲು-ಕಟ್ಟಿಗೆ ಘನಪದಾರ್ಥಗಳನ್ನೂ ಪ್ರವಾಹಿ ಪದಾರ್ಥಗಳನ್ನೂ ತೋರಿಸಿ, ಗುಂಪುಗುಂಪಾಗಿ ಇಟ್ಟು ಮೊದಲನೇ ಜಾ ತಿಗೆ ಹೋಲುವಂಥ ಕೆಲವು ಪದಾರ್ಥಗಳ ಹೆಸರುಗ ಳನ್ನೂ ಎರಡನೇ ಜಾತಿಗೆ ಹೋಲುವಂಥ ಬೇರೆ ಕೆಲವು ಪದಾರ್ಥಗಳ ಹೆಸರುಗಳನ್ನೂ ಕೇಳುವದು. ಸಣ್ಣಸಣ್ಣ ಪ್ರಯೋಗಗಳಿಂದ ಈ ಎರಡು ತರದ ಪದಾರ್ಥಗಳಲ್ಲಿರುವ ಸಾಮ್ಯ-ವೈಷಮ್ಯಗಳನ್ನು ತುಲನೆ ಯಿಂದ ಹೊರಡಿಸುವದು. ಕಲ್ಲು, ಕಟ್ಟಿಗೆಯಂಥ ಪದಾರ್ಥಗಳಿಗೆ ಘನಪದಾರ್ಥ ಗಳೆಂದೂ, ನೀರಿನಂತೆ ಹರಿಯುವ ಪದಾರ್ಥಗಳಿಗೆ ಪ್ರ ವಾಹಿ ಪದಾರ್ಥಗಳೆಂದೂ ಅನ್ನುವರು.
ರಿಹಲಿಗೆಯ ಮೇ ನ ಸಾರಾಂಶ:— (೩) ದ್ರವ್ಯವು ಇ ನ್ನೊಂದು ರೂಪದಲ್ಲಿ ಸಹ ಡುಬರುವದು. (ವಾಯುರೂಪ)	ದ್ರವ್ಯವು ಘನ, ಪ್ರವಾಹಿ ಈ ಎರಡು ರೂಪಗಳಿಂದ ಕಂಡುಬರುವದು. (ಪದಾರ್ಥವೆಂದರೆ ದ್ರವ್ಯದ ವಿಶಿಷ್ಟ ಭಾಗವು). ಕಾಗದವನ್ನು ಸುಟ್ಟು ಹೊಗೆಯನ್ನು ಮಾಡಿ ತೋರಿ ಸಿ, ಈ ಪದಾರ್ಥವನ್ನು ನೀವು ಕಲಿತದ್ದರಲ್ಲಿ ಯಾವದ ರಲ್ಲಿ ಸೇರಿಸುವಿರಿ ಹೇಳಿರಿ ಎಂದು ಕೇಳುವದು. ಘನ ಪದಾರ್ಥವೂ ಅಲ್ಲ. ಪ್ರವಾಹಿ ಪದಾರ್ಥವೂ ಅಲ್ಲ. ಇಂಥದಿನ್ನೊಂದು ಪದಾರ್ಥವು ನಿಮಗೆ ಗೊತ್ತಿದ್ದರೆ ಹೇಳಿರಿ ಎಂದು ಹೇಳಿಸಿಕೊಂಡು, ಇಂಥ ಪದಾರ್ಥಗ ಳಿಗೆ 'ವಾಯುರೂಪ' ಪದಾರ್ಥಗಳೆನ್ನುವರೆಂದು ಹೇಳು ವದು..
ಕರೆಹಲಿಗೆಯ ಮೇ ನ ಸಾರಾಶ:—	ದ್ರವ್ಯದ ಇನ್ನೊಂದು ರೂಪವು ಹೊಗೆಯಂಥ ಪದಾ ರ್ಥವು. ದ್ರವ್ಯವು ಘನ, ಪ್ರವಾಹಿ, ವಾಯುರೂಪ ಈ ಮೂರು ರೂಪಗಳಿಂದ ದೃಷ್ಟಿಗೆ ಬೀಳುತ್ತದೆ. ಇವುಗಳ ಹೊರತು ದ್ರವ್ಯದ ಬೇರೆ ರೂಪಗಳು ನಿಮಗೆ ಗೊತ್ತಿದ್ದರೆ ಹೇಳಿರಿ.

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
(೪) ೩. ಘನಪದಾರ್ಥಗಳು ಪ್ರವಾಹಿರೂಪವನ್ನೂ, ಪ್ರವಾಹಿ ಪದಾರ್ಥಗಳು ಘನರೂಪವನ್ನೂ ಹೊಂದುವವು.	ತುಸು ಮೇಣವನ್ನು ತೆಗೆದುಕೊಂಡು ಇದು ಯ ರೂಪವು ಎಂದು ಕೇಳಿ, (ಘನ ರೂಪವೆಂದು ಉ ಬಂದನಂತರ) ಅದನ್ನು ಒಂದು ಸೌಟಿನಲ್ಲಿ ಹಾಕಿ ಲಿಕ್ಕೆ ಹೇಳುವದು. ಈಗೇನಾಯಿತು? (ಪ್ರವಾಹಿ). ನ್ನು ಕಡೆಗೆ ತೆಗೆದು ಆರಿಸಬೇಕು (ತಂಪು ಕೊಡಬೇ ಈಗೇನಾಯಿತು ಹೇಳಿರಿ. (ಘನ). ಹೀಗೆ ಆಗುವಂಥ ಇನ್ನೂ ಕೆಲವು ಉದಾಹರಣೆ ನಿಮಗೆ ಗೊತ್ತಿದ್ದರೆ ಹೇಳಿರಿ.
೪ ಪ್ರವಾಹಿ ಪದಾರ್ಥಗಳು ವಾಯುರೂಪವನ್ನೂ ವಾಯುರೂಪ ಪದಾರ್ಥಗಳು ಪ್ರವಾಹಿರೂಪವನ್ನೂ ಹೊಂದುವವು.	ಹೀಗಾಗಲಿಕ್ಕೆ ಕಾರಣವೇನು? (ಶಕೆ), (ತಂಪು). ನೀರನ್ನು ಕಾಸಿ, ಉಗಿಯಾಗುವದನ್ನು ತೋರಿಸಬೇ ಹೊಗೆಯಂತೆ ಕಾಣುವದೇ ಉಗಿಯು. ಅದರ ರೂ ಯಾವದು? ಅದರಲ್ಲಿ ತಂಪಾದ ಪದಾರ್ಥವನ್ನು ಹಿಡಿ ಅವಕ್ಕೆ ನೀರಿನ ಸಣ್ಣ ಸಣ್ಣ ಕಣಗಳು ಅಂಟಕೂಡಿ ಕಾಣುವದು. ಈ ಪ್ರಕಾರದ ಇನ್ನೂ ಕೆಲವು ಉದಾ ಣೆಗಳನ್ನು ಹೇಳಿರಿ. ಇದೇ ರೀತಿಯಿಂದ ಗಂಧಕವು ಘನ, ಪ್ರವಾಹಿ, ಯುರೂಪ ಈ ಮೂರೂ ರೂಪಗಳನ್ನು ಧರಿಸುವದೆಂ ತೋರಿಸುವದು.
ಕರಿಹಲಿಗೆಯ ಮೇಲಿನ ಸಾರಾಶ:— (೫) ಪದಾರ್ಥಗಳ ಕಣಗಳಲ್ಲಿ ಅಂಟಿಕೊಳ್ಳುವ ಗುಣವಿರುತ್ತದೆ. ಅದಕ್ಕೆ "ಸ್ನೇಹಾಕರ್ಷಣ ಶಕ್ತಿ" ಅನ್ನುವರು.	ಕೆಲವು ಪದಾರ್ಥಗಳು ಘನ, ಪ್ರವಾಹಿ ವಾಯುರೂ ಪ ಈ ಮೂರೂ ರೂಪಗಳನ್ನು ಧರಿಸುವವು. ಕಲ್ಲನ್ನು ಒಡೆದು ಚೂರುಮಾಡಿ ತರಲಿಕ್ಕೂ ನೀ ಹವೆಗಳ ತುಸು ತುಸು ಭಾಗವನ್ನು ಬೇರೆಮಾಡಲಿಕ್ಕೂ ಹೇಳುವದು. ಯಾವದಕ್ಕೆ ಹೆಚ್ಚು ಶಕ್ತಿಯು ಬೇಕಾಯಿತು ಯಾಕೆ? ಕಲ್ಲಿನ ಜಾತಿಯ ಪದಾರ್ಥಗಳ ಕಣಗಳಲ್ಲಿ ಅಂಟಿಕೊ ಳ್ಳುವ ಗುಣವು ಹೆಚ್ಚಿಗಿರುತ್ತದೆ. ಈ ಶಕ್ತಿಗೆ ಶಾಸ್ತ್ರಜ್ಞರು 'ಸ್ನೇಹಾಕರ್ಷಣ ಶಕ್ತಿ' ಎಂದು ಹೆಸರಿಟ್ಟಿರುವರು. ಇಂಥ ಇನ್ನೂ ಕೆಲವು ಉದಾಹರಣೆಗಳನ್ನು ಹೇಳಿ ಕೊಳ್ಳುವದು.

ವಿಷಯ.	ತಿಳಿಸುವ ಕ್ರಮ ಮತ್ತು ಪ್ರಶ್ನೆಗಳು.
ಲಿಗೆಯ ಮೇಲಿ ನರಾಂಶ:—	ಪ್ರವಾಹಿ ಮತ್ತು ವಾಯುರೂಪ ಪದಾರ್ಥಗಳು ಹೀಗೆ ಸುಲಭವಾಗಿ ಜೀರೆ ಮಾಡಲು ಬರುವಂತೆ ಇರಲಿಕ್ಕೆ ಅವುಗಳ ಕಣಗಳು ಒಂದನ್ನೊಂದು ದೂಡುವದೇ ಕಾರಣವು. ಪದಾರ್ಥಗಳ ಕಣಗಳಲ್ಲಿರುವ ಅಂಟಿಕೊಳ್ಳುವ ಗುಣಕ್ಕೆ 'ಸ್ನೇಹಾಕರ್ಷಣಶಕ್ತಿ' ಎನ್ನುವರು. ಅದು ಘನ ಪದಾರ್ಥಗಳಲ್ಲಿ ಹೆಚ್ಚಿಗಿರುವದು. ಪ್ರವಾಹಿವಾಯುರೂಪ ಪದಾರ್ಥಗಳಲ್ಲಿ ಕಡಿಮೆ ಪ್ರಮಾಣದಿಂದಿರುವದು.
ಪಸಂಹಾರ:—	೧. ಸೃಷ್ಟಿಯು ಯಾವ ಯಾವ ಘಟಕಗಳಿಂದ ಆಗಿದೆ? ೨. ಕೆಲವು ವಾಯುರೂಪ ಪದಾರ್ಥಗಳ ಹೆಸರುಗಳನ್ನು ಹೇಳಿರಿ. ೩. ಸ್ನೇಹಾಕರ್ಷಣಶಕ್ತಿ ಎಂದರೇನು? ಇತ್ಯಾದಿ.

ಸೂಚನೆ:— (೧) ಈ ಪಾಠವನ್ನು ಶಿಕ್ಷಕರು ಪ್ರತ್ಯೇಕ್ಷವಾಗಿ ಕಲಿಸಿ ನೋಡಿ ಅದಚಣಿಯಾದರೂ ಬಂದರೆ ಬರೆದು ಕೇಳಬಹುದು. ಈ ಪಾಠವು ನಿಯಮಿತ ವೇಳೆಯಲ್ಲಿ ಮುಗಿಯದಿದ್ದರೆ ಲ್ಲಿ ಎರಡು ಪಾಠಗಳನ್ನು ಮಾಡಬಹುದು.

(೨) ಟಿಪ್ಪಣಿ ತೆಗೆಯುವಾಗ 'ವಿಷಯ' ಎಂಬದರಲ್ಲಿ 'ಫಲಿತ' 'ಕ್ರಮ' ಎಂಬದರಲ್ಲಿ 'ಅವಲೋಕನ (ಅವತರಣ)' ಎಂಬದನ್ನು ಸೇರಿಸಿಕೊಳ್ಳಿಬಹುದು.

N. V. Kolhatkar.

ಪತ್ರಗಳ ಸಾರಾಂಶ.

ಗದಕ ತಾಲೂಕ ಪ್ಯೆಕಿ ಕುರ್ತಕೋಟಿ ಗಂಡು ಹುಡುಗರ ಶಾಲೆಯಲ್ಲಿ ೧೦-೯-೧೭ನೇ ದಿವಸ ಕೂಡಿದ ಸಭೆಯಲ್ಲಿ ಸ್ಕೂಲ ಕಮೀಟಿಯವರೂ ಮಾಸ್ತರೂ ಕೆಳಗೆ ಬರೆದ ಕೆಲಸಗಳಿಗಾಗಿ ಹಣವನ್ನು ಕೊಟ್ಟರೆಂದು, ಆ ಶಾಲೆಯ ಮಾಸ್ತರ ಮಿ. ಗೊ. ಶ್ರೀ. ಕುಲಕರ್ಣಿ ಇವರು ತಿಳಿಸುತ್ತಾರೆ.

ಕೊಟ್ಟವರ ಹೆಸರು—	ಯಾತಕ್ಕೆ ಕೊಟ್ಟರು—	ರೂ
೧ ವಿ. ಫಕೀರಪ್ಪ ಲಕ್ಷ್ಮೇಶ್ವರ ೨ ವಿ. ಏಕನಾಥರಾವ ನಾಡಿಗೇರ.	ಶಾಲೆಯ ಹೆಸರಿನಿಂದ ಕ್ಯಾಶ. ಸ. ತೆಗೆಸುಕೊಳ್ಳಿಕ್ಕೆ.	೫೦-
೩. ಸದರ.	ಕಪಾಟುಗಳ ಬಗ್ಗೆ	೮-
೪. ವಿ. ಕೃ. ವೆ. ಕುಲಕರ್ಣಿ. ೫. ವಿ. ಲಿ. ಭ. ಕುಲಕರ್ಣಿ. ೬. ಮುಲ್ಲೇ ಪಾಟೀಲ	ಶಾಲೆಯ ಉಪಯೋಗಕ್ಕಾಗಿ ಹಾರ್ಮೋನಿಯಮ ಕೊಳ್ಳಲಿಕ್ಕೆ	೨೦-೦
೭. ವಿ. ಸು. ನ. ಪೂಜಾರ ಹೆ. ಮಾಸ್ತರ.	ರಂಗಾಂಗಚಯನ್ನು ಕೊಳ್ಳಲಿಕ್ಕೆ.	೩-೦
೮. ವಿ. ದ. ಕೃ. ಮೇವುಂಡಿ. ಮುಂತಾದವರು.	ಸ್ಕುಡಂಟ್ಸ. ಕೊ. ಆ. ಸೊ. ಗೆ.	೨-೦
	ಅಂತು. ರೂ.	೮೩-೦

ಇನೇ (ಕುರ್ತಕೋಟಿ) ಶಾಲೆಯಲ್ಲಿ ಮಣ್ಣಿನ ಘಂಡಿನ ಪದ್ಧತಿಯು ಕಳೆದ ಶಂಬರ ತಿಂಗಳಿನಲ್ಲಿ ಪ್ರಾರಂಭವಾಗಿದ್ದು, ಈ ಅವಧಿಯಲ್ಲಿ ಸುಮಾರು ೧೮೦ ರೂಪಾಯಿಗಳ ಕಾಳು ಸಂಗ್ರಹವಾಗಿವೆಯೆಂತಲೂ, ಅವುಗಳಿಂದ ಶಾಲೆಯ ಉಪಯೋಗಕ್ಕಾಗಿ ಉಪಕರಣಗಳನ್ನು ತರಿಸುವೆವೆಂತಲೂ ಆ ಶಾಲೆಯ ಅಸಿ. ಮಾಸ್ತರ. ದ. ಕೃ. ಮೇವುಂಡಿ ಇವರು ತಿಳಿಸುತ್ತಾರೆ.

ಕುಡಚಿಯ ಉರ್ದು, ಮರಾಠಿ, ಉರ್ದುಗರ್ಲ್, ಮತ್ತು ಧೇಡ ಶಾಲೆಗಳ ಕೂಡಿ ೬೦ ರೂ. ಗಳ ಪಾಟಗಳನ್ನೂ, ೫ರೂ. ಗಳ ಮಿಠಾಯಿಯನ್ನೂ ಏ ಕಾಸೀವು ಮೋಲಜೀ ಶೇಟ, ಎಂಬವರು ಇನಾಮಾಗಿ ಕೊಟ್ಟರೆಂದು ಉರ್ದುಸ್ಕೂ ಮಾಸ್ತರ 'ಜಂಬಗಿ' ಇವರು ತಿಳಿಸುತ್ತಾರೆ.

ಗೋಪನಕೊಪ್ಪ (ತಾ. ಹುಬ್ಬಳ್ಳಿ) ಶಾಲೆಯಲ್ಲಿ ತಾ. ೧೪-೬-೧೯೧೨ನೆ ದಿವಸ ವಾರಶೋನವ ನಿಮಿತ್ತವಾಗಿ 'ಜತಿಯಂತೆ ಮತಿ' ಎಂಬ ಲಘುಸಂಗೀತನಾ ಕವನ್ನ ಮಾಡಿ, ಆ ಕಾಲಕ್ಕೆ ವಿದ್ಯಾರ್ಥಿಗಳಿಂದಲೂ ರಾ. ಕಲ್ಲನಗೌಡಾ ಪಾಟೀ ಮುಂತಾದವರಿಂದಲೂ ವಸೂಲಾದ ರೂ. ೧೫-೮-೦ ಗಳ ಎರಡು ಪೋಸ್ಟಲ್ ಕ್ಯಾ ಸರ್ಟಿಫಿಕೇಟುಗಳನ್ನು ಕೊಂಡೆನೆಂದು ಆ ಶಾಲೆಯ ವಿದ್ಯಾರ್ಥಿಯೋರ್ವನು ತಿ ಸುವನು.

ಕರ್ನಾಟಕ ಶಿಕ್ಷಣ ಮಂಡಲ.

ಧಾರವಾಡ.

ತಾರೀಖು ೨೩ನೇ ಸಪ್ಟಂಬರ ೧೯೧೭ನೇ ದಿವಸ ಮಂಡಲದ ಕಾರ್ಯ ನಿರ್ವಾಹಕ ಸಭೆಯು ನೆರೆದಿತ್ತು. ಅದರಲ್ಲಿ ಕೆಳಗೆ ಬರೆದ ಠರಾವುಗಳ ಚರ್ಚೆಯಾಗಿ ಅವು ಸರ್ವಾನುಮತದಿಂದ ಪಾಸಾದವು.

೧. ಕೆಳಗೆ ಕಾಣಿಸಿದ ಕಾರಣಗಳ ಮೂಲಕ ಈ ವರ್ಷದ ಡಿಸೆಂಬರ ತಿಂಗಳಿನಲ್ಲಿ ಜರುಗತಕ್ಕ ದ್ವಿತೀಯ ಸಮ್ಮೇಲನವು ಸದ್ಯಕ್ಕೆ ಇಷ್ಟವಿಲ್ಲೆಂದು ಸಭಾಸದರಿಗೆ ತಿಳಿಸಿ, ಅವರ ಅನುಮತಿಯನ್ನು ಪಡೆಯುವದು ಇಷ್ಟವಾದದ್ದು.

(ಅ) ನವಂಬರ ತಿಂಗಳಲ್ಲಿ ಶಾಲಾಧ್ಯಾಪಕರಿಗೆ ಪರೀಕ್ಷೆಯ ದಿವಸಗಳು ಆರಂಭವಾಗುವದರಿಂದಲೂ ಅಲ್ಲಲ್ಲಿ ಜರುಗುವ ತಾಲೂಕಿನ ಸಮ್ಮೇಲನಗಳಲ್ಲಿ ಶಾಲಾಖಾತೆಯ ಅಧಿಕಾರಸ್ಥರು ತೊಡಗಿರುವದರಿಂದಲೂ ಈ ತಿಂಗಳು ಶಾಲಾಧ್ಯಾಪಕರಿಗೂ ಶಾಲಾಧಿಕಾರಿಗಳಿಗೂ ಅನುಕೂಲವಾದದ್ದಿರುವದಿಲ್ಲ.

(ಬ) ವರ್ಷಕ್ಕೆ ಎರಡು ಸಮ್ಮೇಲನಗಳನ್ನು ಕೂಡಿಸುವದರಿಂದ ಸಮ್ಮೇಲನಕ್ಕೆ ಬರಲಿಚ್ಛಿಸುವ ಬಡ ಮಾಸ್ತರರಿಗೆ ಬಹಳ ಹಣ ಖರ್ಚಾಗುವದು.

(ಕ) ನಿಜವಾಗಿ ಹೆಚ್ಚು ಉಪಯೋಗವಾಗುವಂತೆ ಮಂಡಲದ ಸಮ್ಮೇಲನವನ್ನು ಕೂಡಿಸುವ ಯಾವತ್ತೂ ವ್ಯವಸ್ಥೆಯನ್ನು ಮಾಡಿ, ಸಭಾಸದರಿಗೆ ಆ ಬಗ್ಗೆ ತಿಳಿಸಲಿಕ್ಕೆ ಸದ್ಯದ ಅವಕಾಶವು ಅನುಕೂಲವಾದದ್ದಿಲ್ಲ.

(ಡ) ಬರೇ ಸಮ್ಮೇಲನಗಳಿಗಿಂತ, ಶಿಕ್ಷಕರಿಗೆ ಅವರ ಪ್ರತಿದಿವಸದ ಕಲಿಸುವ ಕೆಲಸದಲ್ಲಿ ಪ್ರತ್ಯಕ್ಷವಾಗಿ ಉಪಯೋಗವಾಗುವಂತೆ ಪಾಠದ ಟಪ್ಪಣಿ ಮೊದಲಾದ ಶಿಕ್ಷಣಾತ್ಮಕ ವಿಷಯಗಳ ಬಗ್ಗೆ ಹಸ್ತ ಪತ್ರಿಕೆಗಳ ದ್ವಾರದಿಂದ ಸಭಾಸದರಿಗೆ ನೆರವಾಗುವ ಸಂಕಲ್ಪಕ್ಕೆ ದೃಶ್ಯರೂಪವನ್ನು ಕೊಡುವದು ಹೆಚ್ಚು ಮಹತ್ವವಾದದ್ದು.

೨. ಶಿಕ್ಷಕರಿಗೆ ಉಪಯುಕ್ತವಾಗುವಂಥ ಪಾಠದ ಟಪ್ಪಣಿ ಮೊದಲಾದ ಮಾಹಿತಿಯನ್ನು ಸಭಾಸದರಿಂದಲೂ ಶಿಕ್ಷಣದಲ್ಲಿ ಮನಸು ಹಾಕುವ ಬೇರೆ ಸದ್ಗೃಹಸ್ಥರಿಂದಲೂ ಬರೆಯಿಸಿ ತರಿಸಿ, ಡಿಸೆಂಬರ ೧೯ನೇ ತಾರೀಖಿನೊಳಗಾಗಿ ಅದನ್ನು ಮಂಡಲದಿಂದ ಪ್ರಸಿದ್ಧಪಡಿಸಿ, ಸಭಾಸದರಿಗೆ ಹಂಚುವದು. ಹೀಗೆ ನಿಂದ ಬಂದ ಈ ಲೇಖಗಳನ್ನು ಪ್ರಸಿದ್ಧ ಪಡಿಸುವವಕ್ಕಿಂತ ಮೊದಲು ಅವುಗಳ ಬಗ್ಗೆ ನಿಯಮಿಸಿದ ಒಂದು ಕಮೀಟಯ ಅಭಿಪ್ರಾಯವನ್ನು ತೆಗೆದುಕೊಳ್ಳುವದು.

೩. ಮಂಡಲದ ಪುಸ್ತಕಾಲಯದಲ್ಲಿರತಕ್ಕ ಗ್ರಂಥಗಳನ್ನು ಆರಿಸುವದಕ್ಕಾಗಿ ಮೇಲ್ಕಂಡ ಕಮೀಟಿಯವರಿಗೆ ವಿನಂತಿ ಮಾಡಿಕೊಂಡು ಸದ್ಯಕ್ಕೆ ೬೫ ರೂ.ಗಳಿಗೆ ಬರುವ ಪುಸ್ತಕಗಳನ್ನು ತರಿಸುವದು.

೪. ಮಂಡಲದ ಗ್ರಂಥಾಲಯಕ್ಕೆ ಉಚಿತವಾಗಿ ಪುಸ್ತಕಗಳನ್ನು ಕೊಡಬೇಕೆಂದು ಕನ್ನಡ ಗ್ರಂಥಕರ್ತರಿಗೂ ಸರಕಾರದವರಿಗೂ ವಿನಂತಿ ಮಾಡಿಕೊಳ್ಳುವದು.

೫. ಸಭಾಸದರು ಶಿಕ್ಷಣಾತ್ಮಕ ವಿಷಯಗಳ ಬಗ್ಗೆ ಲೇಖಗಳನ್ನು ಬರೆದು ಕಳಿಸಿ ಆ ಬಗ್ಗೆ ಅಭಿಪ್ರಾಯಗಳನ್ನು ಅಪೇಕ್ಷಿಸಿದರೆ ಅವರ ಲೇಖಗಳನ್ನು ಮೇಲಿನ ಕಮೀಟಿಯವರ ಕಡೆಗೆ ಕಳಿಸಿ, ಅವರ ಅಭಿಪ್ರಾಯವನ್ನು ತಗೆದುಕೊಂಡು ಲೇಖಕನಿಗೆ ತಿಳಿಸುವದು.

೬. ಕಳೆದ ವಾರ್ಷಿಕ ಸಭೆಯಲ್ಲಿ ಶಿಕ್ಷಣದ ಉತ್ತೇಜನಕ್ಕಾಗಿ ೧೦೦ ರೂಪಾಯಿಗಳ ಇನಾಮು ಕೊಡಲೊಪ್ಪಿದ ಗೃಹಸ್ಥರು ಕಳಿಸಿದ ಕೆಳಗೆ ತೋರಿಸಿದ ಶರ್ತುಗಳು ಕಾರ್ಯನಿರ್ವಾಹಕ ಸಭೆಗೆ ಸಮ್ಮತವಿರುವವು.

(೧) ಇಯತ್ತಾ ಪತ್ರಿಕೆಯಲ್ಲಿ ಹೇಳಿದ ಬಿನ್ನ ಇಯತ್ತೆಯ ಎಲ್ಲ ವಿಷಯಗಳನ್ನು ಕಲಿಸುವದಕ್ಕೆ ಮಾರ್ಗದರ್ಶಕವಾದ ಹಾಗೂ ಕ್ರಮವಾದ ಪಾಠಗಳ ಟಿಪ್ಪಣಿಗಳುಳ್ಳ ಒಂದು ಗ್ರಂಥವು ಇರಬೇಕು.

(೨) ಇವಕ್ಕೆ 'ಮಾದರಿಯ ಶಿಕ್ಷಕ' ಎಂದು ಹೆಸರಿಡಬೇಕು.

(೩) ಇನಾಮು ಕೊಡಲೊಪ್ಪಿದ ಗೃಹಸ್ಥರು ಸೂಚಿಸಿದ ಒಂದು ಕಮೀಟಿಯವರು ಬಹುಮತದಿಂದ ಈ ಪುಸ್ತಕವನ್ನು ಪಾಸು ಮಾಡಬೇಕು.

(೪) ಪುಸ್ತಕವನ್ನು ಮಂಡಲದವರು ಕಮೀಟಿಯವರ ಸೂಚನೆ ಸಹಿತ ಪ್ರಸಿದ್ಧಪಡಿಸಬೇಕು.

(೫) ೧೯೧೫ನೆಯ ಇಸವಿಯ ಎಪ್ರಿಲ್ ೧೫ನೇ ತಾರೀಖಿನೊಳಗಾಗಿ ಪುಸ್ತಕವನ್ನು ಬರೆಯುವವರು ಮಂಡಲದ ಸೆಕ್ರೆಟರಿಯವರ ಕಡೆಗೆ ಹಸ್ತಪ್ರತಿಯನ್ನು ಕಳಿಸಿರಬೇಕು.

೭. ಉಪಸಂಘಗಳನ್ನು ಮಂಡಲಕ್ಕೆ ಜೋಡಿಸಿಕೊಳ್ಳುವದು. ಬೇರೆಬೇರೆ ಜಿಲ್ಲೆಗಳಲ್ಲಿ ಮಂಡಲದ ಸಮ್ಮೇಲನಗಳನ್ನು ನೆರೆಯಿಸುವದು. ಈ ಪ್ರಶ್ನೆಗಳ ಬಗ್ಗೆ ವಾರ್ಷಿಕ ಸಭೆಯ ಕಾಲಕ್ಕೆ ಮುಖಾಸಭೆಯವರು ವಿಚಾರ ಮಾಡತಕ್ಕದ್ದು.

ಸೂಚನೆ:—ಇದುವರೆಗೆ ಮಂಡಲದ ವರ್ಗಣಿಯನ್ನು ಕೊಡುವೆ ಇದ್ದ ಎಲ್ಲ ಸಭಾಸದರು ಆದನ್ನು ದಯವಿಟ್ಟು ಕಳುಸಿಕೊಡಬೇಕು.

V. N. Magdal
ಸೆಕ್ರೆಟರಿ.

ಶಾಲಾಪತ್ರಕ.

ಪುಸ್ತಕ ೫೩. | ನವಂಬರ ೧೯೧೭. | ಸಂಚಿಕೆ ೧೧.

ಡ್ರಾಯಿಂಗ ಶಿಕ್ಷಣವು.

ಕಳೆದ ಸಪ್ಟಂಬರ ತಿಂಗಳಲ್ಲಿ ಮುಂಬಯಿ ಇಲಾಖೆಯ ಡ್ರಾಯಿಂಗ ಇನಸ್ಪೆಕ್ಟರರಾದ ಮೆ. ಆರ್. ಎ. ಹೊಗಾರ್ಥ ಸಾಹೇಬರವರು ವಾರ್ಷಿಕ ತಪಾಸಣೆಗಾಗಿ ಧಾರವಾಡಕ್ಕೆ ಬಂದಾಗ ಈ ಊರ ಟ್ರೇನಿಂಗಕ್ಯಾಲೇಜಿನಲ್ಲಿಯೂ ಹಾಯಸ್ಕೂಲಿನಲ್ಲಿಯೂ ನಡೆದಿರುವ ಡ್ರಾಯಿಂಗ ಶಿಕ್ಷಣವನ್ನು ನೋಡಿ ಸಂತುಷ್ಟರಾದರು; ಅವರು ಇದೇ ತಾಲೂಕಿನೊಳಗಿನ ನವಲೂರ ಶಾಲೆಗೆ, ಮೆ. ಡೆ. ಎ. ಇ. ಧಾರವಾಡ ಇವರೊಂದಿಗೆ ಹೋಗಿ, ಪ್ರಾಥಮಿಕ ಶಾಲೆಗಳಲ್ಲಿ ಡ್ರಾಯಿಂಗ ಶಿಕ್ಷಣವು ಹ್ಯಾಗೆ ನಡೆಯುತ್ತದೆಂಬದನ್ನು ಸೂಕ್ಷ್ಮ ರೀತಿಯಿಂದ ಅವಲೋಕನ ಮಾಡಿದರು. ಒಂದು ದಿನ ಅವರು ಎಲ್ಲ ಡ್ರಾಯಿಂಗ ಮಾಸ್ತರರನ್ನೂ ಶಾಲಾಖಾತೆಯ ಮೇಲಧಿಕಾರಿಗಳನ್ನೂ ಕರೆಯಿಸಿ, ಸಭೆಗೂಡಿಸಿ, ಡ್ರಾಯಿಂಗ ಶಿಕ್ಷಣದ ಸುಧಾರಣೆಯ ಬಗ್ಗೆ ಕೆಲವು ಉಪಯುಕ್ತನಾದ ಸೂಚನೆಗಳನ್ನು ಮಾಡಿದರು ಅವು ಯಾವವೆಂದರೆ:—

"ಡ್ರಾಯಿಂಗ ಶಿಕ್ಷಣದ ಉದ್ದೇಶವು. ವಿದ್ಯಾರ್ಥಿಗಳಲ್ಲಿ ನಿರೀಕ್ಷಣಶಕ್ತಿಯನ್ನೂ ಅವರ ಕೈಗಾರಿಕೆಯನ್ನೂ ಬೆಳೆಯಿಸುವದಿರುತ್ತದೆಯೆ ಹೊರತು ಅವರನ್ನು ಚಿತ್ರಗಾರರನ್ನಾಗಿ ಮಾಡುವದಿರುವದಿಲ್ಲ. ಮತ್ತು ಈ ಕಲೆಯಿಂದ ವಸ್ತುಗಳನ್ನು ಪ್ರತಿರೂಪಿಸುವದೇ ಮುಖ್ಯವಾದ ಉದ್ದೇಶವಾಗಿರತಕ್ಕದ್ದೆಂಬದನ್ನು ಪ್ರತಿಯೊಬ್ಬ ಶಿಕ್ಷಕನು ಲಕ್ಷದಲ್ಲಿಡತಕ್ಕದ್ದು. ಈಗಿನ ಚಿತ್ರಕಲೆಯ ಶಿಕ್ಷಣದಲ್ಲಿ ವಸ್ತುಗಳ ಬದಲಾಗಿ ಶಿಕ್ಷಕರು ತಾವು ತೆಗೆದಂಥ ಚಿತ್ರಗಳನ್ನು ನಿರೀಕ್ಷಿಸಲಿಕ್ಕೆ ಹಚ್ಚುವದರಿಂದ ಮೂಲ ಉದ್ದೇಶವು ಸಫಲವಾಗುವದಿಲ್ಲ. ಶಾಲೆಗಳಲ್ಲಿ ತೆಗೆಯಿಸಿದವುಗಳಲ್ಲಿ ಈಗ ಮುಖ್ಯವಾಗಿ ಬಾಹ್ಯರೇಷಾ ಚಿತ್ರಗಳೇ ವಿಶೇಷವಾಗಿ ಕಂಡುಬರುತ್ತವೆ. ಇದರಿಂದ ಪದಾರ್ಥಗಳ ನಿಜವಾದ ಸ್ವರೂಪವು ಎಂದೂ ಲಕ್ಷದಲ್ಲಿ ಬರ

ಲಾರದು. ಶಿಕ್ಷಕರು ಬಣ್ಣದ ಪೆನ್ಸಿಲುಗಳನ್ನೂ ಖಡುವನ್ನೂ ಉಪಯೋ
ಗಿಸಿ, ಪದಾರ್ಥಗಳ ಸಂಪೂರ್ಣ ಸ್ವರೂಪವನ್ನು ತೋರಿಸುವಂಥ ಚಿತ್ರ
ಳನ್ನು ತೆಗೆಯಿಸುವದು ಬಹಳೇ ಅವಶ್ಯವಾದದ್ದು. ಖಡುವಿನಿಂದ ಪಾ
ಹಾಗೂ ಕರೇಹಲಿಗೆಯ ಮೇಲೆಯೂ, ಬಣ್ಣದಿಂದ ಕಾಗದದ ಮೇಲೆಯು
ವಸ್ತುವಿನ ನಿಜವಾದ ಸ್ವರೂಪವನ್ನೂ ಬಣ್ಣವನ್ನೂ ತೋರಿಸುವದು ಸಾಧ್ಯ
ವದೆ.

ಆರಂಭದಲ್ಲಿ ತೆಗೆಯಿಸತಕ್ಕ ವಸ್ತುಗಳು ಕೇವಲ ಉದ್ದಳತೆಯನ್ನ
ತೋರಿಸುವಂಥವಿರಬೇಕು; ಅಂದರೆ, ಅದರಿಂದ ರೇಷೆಯ ಉದ್ದಳ
ಯನ್ನು ಅದರ ಬೇರೆ ಬೇರೆ ದಿಕ್ಕುಗಳ ಜ್ಞಾನವನ್ನೂ ವಿದ್ಯಾರ್ಥಿಗಳಿ
ಮಾಡಿಕೊಡಲಿಕ್ಕೆ ಆಗುವದು. ಉದಾ:—ಬಡಿಗೆ, ಪೆನ್ಸಿಲು ಇತ್ಯಾದಿ
ಅನಂತರ ಉದ್ದಗಲುಗಳುಳ್ಳ ಪಾಟಿ, ಕನ್ನಡಿ ಮುಂತಾದ ವಸ್ತುಗಳನ್ನ
ತೆಗೆದುಕೊಳ್ಳುವದು ಅನುಕೂಲವು. ಆ ಮೇಲೆ ಚಂಡು, ಕಿತ್ತಳೆಹಣ್ಣು
ಮುಂತಾದ ದುಂಡಗಿನ ಆಕಾರದ ಒಡವೆಗಳನ್ನು ತೆಗೆದುಕೊಳ್ಳಬಹುದು.
ಪ್ರತಿಯೊಬ್ಬ ಶಿಕ್ಷಕನು ತನ್ನ ಊರಲ್ಲಿಯೂ, ಶಾಲೆಯಲ್ಲಿಯೂ ನೋಡ
ತಕ್ಕ ವಸ್ತುಗಳನ್ನು ಮಾತ್ರ ಉಪಯೋಗಿಸಬೇಕೇ ಹೊರತು ಪರದೇ
ಶದ ವಸ್ತುಗಳನ್ನು ತೆಗೆಯಿಸುವದು ಹಿತಕರವಲ್ಲ. ಆ ಮೇಲೆ ಘನಪದಾರ್ಥ
ಗಳನ್ನು ತೆಗೆದುಕೊಂಡು ಅವುಗಳ ಒಂದೊಂದೇ ಮೈಯ್ಯನ್ನು ತೆಗೆಯಿ
ಸುತ್ತ ಹೋಗಬಹುದು. ಕಡೆಗೆ ಆವೇ ಪದಾರ್ಥಗಳನ್ನು ದೃಷ್ಟಿಕೋ
ನದ ಕ್ಷಿತಿಜ ಪಾತಳಿಯ ಕೆಳಗೂ, ಮೇಲೂ ಇಟ್ಟು ತೆಗೆಯಿಸಬೇಕು.

ಪಾಟಿಯಮೇಲೆ ಖಡುವಿನಿಂದ ಇಲ್ಲವೆ ಮಿದುವಾದ ಪೆನ್ಸಿಲಿನಿಂದ
ಆಕೃತಿಗಳನ್ನು ತೆಗೆಯಿಸಬಹುದು. ಬಿರುಸು ಪೆನ್ಸಿಲಿನ ಉಪಯೋಗ
ದಿಂದ ಬೆರಳು ಮಣಿಸುವ ಮುಷ್ಟ ಜಟವು ಉತ್ಪನ್ನವಾಗುತ್ತದೆ. ಸೀಸ
ಪೆನ್ಸಿಲಾದರೂ ಬಹಳ ಮಿದುವಾದದ್ದೇ ಇರಬೇಕು. ವಿಲಾಯತಿಯ
ಬಣ್ಣವನ್ನೇ ಉಪಯೋಗಿಸಬೇಕೆಂತಲ್ಲ. ಊರಲ್ಲಿಯೇ ದೊರೆಯುವ
ಗಿಡದ ತೊಪ್ಪಲು, ಹಣ್ಣಿನ ರಸ ಮುಂತಾದವುಗಳನ್ನು ಉಪಯೋಗಿಸ
ಬಹುದು. ಸವಿೂಪದಲ್ಲಿ ದೊರೆಯುವ ಬೇರೆ ಬೇರೆ ಬಣ್ಣದ ಮಟ್ಟಿಗಳಿ
ದ್ದರೂ ಅಡ್ಡಿ ಇಲ್ಲ. ಆಕೃತಿಗಳನ್ನು ತೆಗೆಯುವಾಗ ಕಾಗದದ ಕೆಳಗೆ
ರಟ್ಟಿನ ತುಂಡುಗಳನ್ನು ಹಿಡಿಯಬೇಕು. ನಾಲ್ಕೂ ಮೂಲೆಗಳಿಗೆ ಕಾಗ

ನದ ಪಟ್ಟಿಗಳನ್ನು ಹಚ್ಚಿದ ರಟ್ಟಿನಲ್ಲಿ, ಆಕೃತಿಗಳನ್ನು ತೆಗೆಯುವ ಕಾಗ ವಗಳನ್ನು ಇಟ್ಟು ಕೆಲಸ ನಡಿಸತಕ್ಕದ್ದು.

ವಿದ್ಯಾರ್ಥಿಗಳಿಂದ ಇತರ ವಿಷಯಗಳ ಆವರ್ತನೆಯನ್ನು ಮಾಡಿ ಸುವಾಗ ಅವರ ಡ್ರಾಯಿಂಗ ಜ್ಞಾನದ ಉಪಯೋಗವನ್ನು ತಂದುಕೊಂಡು ಶದನ್ನು ವೃಥಪಡಿಸಬಹುದು. ಉದಾಹರಣಾರ್ಥವಾಗಿ ಗಣಿತ, ಇತಿ ಹಾಸ, ಭೂಗೋಲ ಮುಂತಾದ ವಿಷಯಗಳನ್ನು ಕಲಿಸುವಾಗ, ಆ ಸಂಬಂಧದ ಆಕೃತಿಗಳನ್ನು ತೆಗೆಯಿಸುವ ಪ್ರಸಂಗದನ್ನು ತಂದುಕೊಳ್ಳ ಬೇಕು. ವಿದ್ಯಾರ್ಥಿಗಳು ಆರಂಭದಲ್ಲಿ ತೆಗೆದಂಥ ರೇಖೆಗಳು ಸಮವಾ ಗಿರಬೇಕೆಂಬದನ್ನು ಇಟ್ಟುಕೊಳ್ಳುವ ಕಾರಣವಿಲ್ಲ. ಅವು ಪ್ರಮಾಣಕ್ಕ ನುಸರಿಸಿ ಇದ್ದರೆ ಸಾಕು. ಈ ಪ್ರಕಾರ ವಸ್ತುದರ್ಶಕ ಚಿತ್ರಗಳಲ್ಲದೆ ಮೂಲಿನಿಂದ ತೆಗೆಯುವಂಥ ಚಿತ್ರಗಳನ್ನು ತೆಗೆಯಿಸುವದು ವ್ಯವಹಾರ ದಲ್ಲಿ ಉಪಯುಕ್ತವಾಗಿರುತ್ತದೆ. ಇಂಥ ಚಿತ್ರಗಳನ್ನು ತೆಗೆಯಿಸುವಾಗ ಸಹ, ಶಿಕ್ಷಕರು ತಾವು ತೆಗೆದ ಮಾದರಿಗಳನ್ನು ವಿದ್ಯಾರ್ಥಿಗಳ ಮುಂದೆ ಇಡದೆ, ಅವರ ಕೈಯಲ್ಲಿ ಕಡ್ಡೀ ಪೆಟ್ಟಿಗೆ ಮುಂತಾದ ಸಾದಾ ವಸ್ತುಗ ಳನ್ನೇ ಕೊಟ್ಟು ಅವುಗಳನ್ನು ಅಳೆಯಲಿಕ್ಕೆ ಹಚ್ಚಿ ಅವುಗಳ ಬೇರೆ ಬೇರೆ ನುಗ್ಗಲಿನ ನೋಟಗಳ ಚಿತ್ರಗಳನ್ನು ತೆಗೆಯಿಸುವದು ಅವಶ್ಯವಾದದ್ದು. ಆ ಮೇಲೆ ವಿದ್ಯಾರ್ಥಿಗಳ ಸ್ಮರಣಶಕ್ತಿಯು ಎಷ್ಟರ ಮಟ್ಟಿಗೆ ಬಲವತ್ತರ ವಾಗಿದೆ ಎಂಬದನ್ನು ನೋಡುವದಕ್ಕಾಗಿ ಅವರು ನೋಡಿದ ಬೇರೆ ಬೇರೆ ವಸ್ತುಗಳ ಚಿತ್ರಗಳನ್ನು ನೆನಪಿನಿಂದ (Memory) ತೆಗೆಯಲಿಕ್ಕೆ ಹಚ್ಚಬೇಕು. ಆಕೃತಿಗಳನ್ನು ತೆಗೆಯಲಿಕ್ಕೆ, ಕಟ್ಟಿದ ಪುಸ್ತಕಗಳನ್ನು ಉಪಯೋಗಿಸುವದು ಅವಶ್ಯವಿಲ್ಲ. ಛಾಪಿಸಿದ ಚಿತ್ರಗಳುಳ್ಳ ಪುಸ್ತಕಗಳನ್ನು ಉಪಯೋಗಿಸುವದು ಎಷ್ಟು ಮಾತ್ರವೂ ಸರಿಯಲ್ಲ.

ಸಾರಾಂಶ:— ವಿದ್ಯಾರ್ಥಿಗಳು ತೆಗೆದ ಚಿತ್ರಗಳು ದೋಷಯುಕ್ತವಾಗಿದ್ದರೂ, ಅವುಗಳನ್ನು ಅವರಿಗೇ ತೋರಿಸಿ, ಅವರ ಕಡೆಯಿಂದಲೇ ತಿದ್ದಿಸುವದು ಹೆಚ್ಚು ಉಪಯುಕ್ತವಾದದ್ದು. ಟ್ರೇನಿಂಗ ಕಾಲೇಜದಲ್ಲಿ ದೊರೆತ ಶಿಕ್ಷಣವನ್ನು ಶಿಕ್ಷಕರು ಪ್ರಾಥಮಿಕಶಾಲೆಗಳಲ್ಲಿ ಸರಿಯಾಗಿ ಉಪಯೋಗ ಮಾಡಿ ಈ ಎರಡು ಸಂಸ್ಥೆಗಳ ಶಿಕ್ಷಣಕೆಲಸದಲ್ಲಿ ಪೂರ್ಣ ಸಂಬಂಧವನ್ನು ಇಡತಕ್ಕದ್ದು."

ಟ್ರೇನಿಂಗ ಕಾಲೇಜದ ಶಾರೀರಿಕ ಶಿಕ್ಷಣದ ವಾರ್ಷಿಕೋತ್ಸವ.

ಧಾರವಾಡ ಟ್ರೇನಿಂಗಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ತಾರೀಖು ೧೧-೧೦-೧೭ನೇ ದಿವಸ ಮುಗಿಯಿತು. ಆನಂತರ ಸೂ ಬಿಡುವವರೆಗಿನ ನಾಲ್ಕು ದಿವಸಗಳನ್ನು ವಿದ್ಯಾರ್ಥಿಗಳು ಆಟನೋಟ ಲ್ಲಿಯೂ ತಮ್ಮ ಅಂಗಸಾಧನದ ಮೇಲಾಟವನ್ನು ತೋರಿಸುವದರಲ್ಲಿಯ ಕಳೆದರು. ತಾ॥ ೧೨ನೇ ದಿವಸ ಪ್ರಾತಃಕಾಲದ ೮ ಘಂಟೆಗೆ ಎಲ್ಲ ವಿದ್ಯಾ ರ್ಥಿಗಳು ತಮ್ಮ ಊಟವನ್ನು ತೀರಿಸಿಕೊಂಡು ಕಾಲೇಜದ ಇಬ್ಬರು ಶಿ ಕರಿಂದೊಡಗೂಡಿ ಇಲ್ಲಿಯ ಗವ್ಹರ್ನಮೆಂಟ ಫಾರ್ಮನ್ನು ನೋಡುವ ಹೋದರು. ಅಲ್ಲಿಯ ಸುಪರಿಂಟೆಂಡೆಂಟರೂ ಅವರ ಸಹಾಯಕ ಉ ಕಾರಿಗಳೂ ಇವರನ್ನು ಆದರದಿಂದ ಕರೆದುಕೊಂಡು ಹೋಗಿ ನೋಡತ ಸಂಗತಿಗಳನ್ನೆಲ್ಲ ಉತ್ಸಾಹಪೂರ್ವಕವಾಗಿ ವಿವರಣೆಯಿಂದ ತಿ ಹೇಳುತ್ತ ತೋರಿಸಿದರು. ತಾ॥ ೧೩ನೇ ದಿವಸ ಧಾರವಾಡ ಪಟ್ಟಣ ನೀರನ್ನು ಪೂರಯಿಸುವ ಕೆಲಗೇರಿಯ ಕೆರೆಯನ್ನೂ ಮತ್ತು ನೀರು ಎತ್ತು ಯಂತ್ರವನ್ನೂ ನೋಡಿಬಂದರು. ತಾ॥ ೧೪ನೇ ರವಿವಾರ ಬೆಳಿಗ್ಗೆ ನು ಕೆರೆಯ ಕಡೆಗೆ ಹೋಗಿ ಅಲ್ಲಿರುವ ಗುಡ್ಡ ಮತ್ತು ಇತರ ಸೃಷ್ಟಿ ಸೌಂದಯ ವನ್ನು ನೋಡಿದರು. ಇದಲ್ಲದೆ ಮೂರೂ ದಿವಸ ಸಾಯಂಕಾಲ ಅನುಕ್ರಮವಾಗಿ ನೊಣ, ಜೇನುನೊಣ ಮತ್ತು ಕಪ್ಪೆ, ಶಾರೀರಶಾಸ್ತ್ರ ವಿಷಯಗಳಮೇಲೆ ಮ್ಯಾಗ್ನಿಫಿಕ್‌ಲ್ಯಾಂಟರ್ನದ ಚಿತ್ರಗಳ ಸಹಾಯದಿಂ ಕಾಲೇಜದ ಶಿಕ್ಷಕರಿಂದ ವ್ಯಾಖ್ಯಾನಗಳು ಕೊಡಲ್ಪಟ್ಟವು. ಈ ರೀತಿಯಾ ವಿದ್ಯಾರ್ಥಿಗಳು ಪರೀಕ್ಷೆಯಕಾಲಕ್ಕೆ ತಮಗಾದ ಶಾರೀರಿಕ ಮತ್ತು ಮಾ ಸಿಕ ಬೇಸರವನ್ನು ಕಳೆದುಕೊಂಡರು.

ತಾ॥ ೧೫ನೇ ಸೋಮವಾರದಿವಸ ವಿದ್ಯಾರ್ಥಿಗಳ ಶಾರೀರಿಕ ಆ ಗಳ ಮೇಲಾಟವನ್ನು ತೋರ್ಪಡಿಸುವ ಕೆಲಸಗಳು ನಡೆದು ಅದರ ನೋಲು ಬಂದಂಥ ವಿದ್ಯಾರ್ಥಿಗಳ ಉತ್ತೇಜನಾರ್ಥ ಇನಾಮು ಕೊ ಬೇಕೆಂದು ಗೊತ್ತಾಗಿ ೧೫ನೇದಿವಸ ಸಾಯಂಕಾಲಕ್ಕೆ ೪ ಘಂಟೆಗೆ ಇನ ಮಿನ ಸಮಾರಂಭವು ನಡೆಯಿತು. ಈ ಸಮಾರಂಭದ ಕಾಲಕ್ಕೆ ಅಧ್ಯಕ್ಷಸ್ಥ ನನನ್ನು ಸ್ವೀಕರಿಸುವ ಬಗ್ಗೆ, ನಮ್ಮ ಎ. ಇನಸ್ಪೆಕ್ಟರರಾದ ಶ್ರೀಯುತ ಕೃ

ಟ್ರೇನಿಂಗ ಕಾಲೇಜದ ಶಾರೀರಿಕ ಶಿಕ್ಷಣದ ವಾರ್ಷಿಕೋತ್ಸವ.

ವನ ಹುನಗುಂದ ಇವರಿಗೆ ಮುಂಚಿತವಾಗಿ ವಿನಂತಿಯನ್ನು ಮಾಡಿ ಂಡು ಗೊತ್ತಾದಂತೆ ಅವರು ಆ ಸ್ಥಾನವನ್ನಲಂಕರಿಸಿದರು. ಕಾಲೇಜದ ್ಯಾಯಾಮಶಾಲೆಯ ಹಿಂಭಾಗದಲ್ಲಿರುವ ಬೈಲುಪ್ರದೇಶವು ತಳಿರು ೋರಣ ಪತಾಕೆಗಳಿಂದ ಮನೋಹರವಾಗಿ ಶ್ರಿಂಗರಿಸಲ್ಪಟ್ಟಿತ್ತು. ಂಗಲ್‌ಬಾರ್, ಪ್ಯಾರಲಲ್‌ಬಾರ್, ಮಲಖಂಬ ಮುಂತಾದ ಉಪಕರಣ ಳು ವ್ಯವಸ್ಥಿತ ರೀತಿಯಿಂದ ಇಡಲ್ಪಟ್ಟಿದ್ದವು. ಕುಸ್ತಿಯ ಕಣದ ೋಜನೆಯೂ ಮಾಡಲ್ಪಟ್ಟಿತ್ತು. ಈ ಸಮಾರಂಭಕ್ಕೆ ಹಾಯಸ್ಕೂಲ ುಂತಾದ ಊರೊಳಗಿನ ಬೇರೆ ಶಿಕ್ಷಣ ಸಂಸ್ಥೆಗಳ ಉಪಾಧ್ಯಾಯರೂ ಾಲೇಜದ ವಾರ್ಷಿಕ ಪರೀಕ್ಷೆಯ ದೆಸೆಯಿಂದ ಬೇರೆ ಬೇರೆ ಜಿಲ್ಲೆಗಳಿಂದ ಂದ ಇನಸ್ಪೆಕ್ಟಿಂಗ ಆಫೀಸರರೂ ನಿಮಂತ್ರಿತರಾಗಿದ್ದರು. ಇಲ್ಲಿ ನಡೆದ ೀರೆ ಬೇರೆ ಪ್ರಕಾರದ ಅಂಗಸಾಧನದ ಕೆಲಸಗಳನ್ನೂ ಮೇಲೆ ಬಂದ ರ ಹೆಸರುಗಳನ್ನೂ ಕೆಳಗೆ ಕೊಟ್ಟಿದೆ.

ಆಟದ ವಿಷಯ.	ಮೇಲು ಬಂದವರ ಹೆಸರು.	ತೋರಿಸಿದಕೆಲಸದ ಪರಿಣಾಮ.
೧. ನೂರು ಯಾರ್ಡು ಓಡುವದು.	೧ನೆಯವರ್ಷ:- ೧ ವಿ. ಶ್ರೀ. ಚವಡಿ. ೨ ಬ. ಕ. ಕೋಳಿ. ೨ನೆಯವರ್ಷ:- ೧ ಸಿ. ಚ. ಹಿರೇಮಠ ೨ ಮು. ರಾ. ಕುಲಕರ್ಣಿ	
೨. ೫ ಮೈಲು ಓಡುವದು.	೧ನೆಯವರ್ಷ:- ೧ ಲಿ. ದ. ಜೋಶಿ ೨ ವಿ. ಶ್ರೀ. ಚವಡಿ. ೨ನೆಯವರ್ಷ:- ೧ ಬ. ಫ. ಪಾಟೀಲ ೨ ಲೋ. ಸು. ಅಡಿಗಿ	

ಆಟದ ವಿಷಯ.	ಮೇಲು ಬಂದವರ ಹೆಸರು.	ತೋರಿಸಿದ ಕೆಲಸದ ಪರಿಣಾಮ.
೩. ಎತ್ತರ ಹಾರುವದು.	೧ನೆಯ ವರ್ಷ:-	
	ದಾ. ಅ. ಕುಲಕರ್ಣಿ	೪ ಫೂ. ೧೦½ ಇಂಚು.
	೨ನೆಯ ವರ್ಷ:-	
	೧ ಬ. ಫ. ಪಾಟೀಲ.	೪ ಫೂ. ೯ ಇಂಚು.
	೨ ಮು. ರಾ. ಕುಲಕರ್ಣಿ.	೪ ಫೂ. ೯ ಇಂಚು.
೪. ಉದ್ದ ಹಾರುವದು.	೧ನೆಯ ವರ್ಷ:-	
	೧ ವಿ. ಶ್ರಿ. ಚವಡಿ.	೧೪ ಫೂ. ೯ ಇಂಚು.
	೨ನೆಯ ವರ್ಷ	
	೧ ಸಿ. ಚ. ಹಿರೇಮಠ.	೧೫ ಪೂಟು.
	೨ ಮು. ರಾ. ಕುಲಕರ್ಣಿ.	೧೪½ ಪೂಟು.
೫. ೧೪ ಪೌಂಡು ತೂಕದ ಗುಂಡು ಒಗೆಯುವದು.	೧ನೆಯ ವರ್ಷ:-	
	ದಾ. ಅ. ಕುಲಕರ್ಣಿ	೩೩ ಫೂ. ಉದ್ದ ಒಗೆದನು.
	೨ನೆಯ ವರ್ಷ:-	
	ರಾ. ಬೇ. ಪಾಟೀಲ	೩೦ ಫೂ ,, ,,
೬. ಫುಟ್‌ಬಾಲ್ ಒದೆಯುವದು.	೧ನೆಯ ವರ್ಷ:-	
	ವಿ. ನ. ಸೋಂದಾ	೧೨೧ ಫೂ ,, ,,
	೩ನೆಯ ವರ್ಷ:-	
	ನೀ. ಹ. ಶೇಡಬಾಳ	
೭. ಸಿಂಗಲ್ ಬಾರ.	೧ನೆಯ ವರ್ಷ:-	
	೧ ಸಿ. ಬ. ಮನಗೊಂಡ	
	೨ ಭೀ. ಕೃ. ಕುರಂದವಾಡ	
	೨ನೆ ವರ್ಷ:-	
	ಖಾ. ಯು. ಮನ್ನಾಸಾಹೇಬ.	

ಆಟದ ವಿಷಯ.	ಮೇಲು ಬಂದವರ ಹೆಸರು.	ತೋರಿಸಿದಕೆಲಸದಪುರಾಣ.
	೩ನೆಯ ವರ್ಷ:-	
	ಶಾ. ತಿ. ಭಟ್ಟ	
೬. ಪ್ಯಾರರಲ್ ಬಾರ.	೧ನೆಯ ವರ್ಷ:-	
	ಸಿ. ಬ. ಮನಗೊಂಡ	
	೨ನೆಯ ವರ್ಷ:-	
	ಸಿ. ಜ. ಹಿರೇಮಠ	
	೩ನೆಯ ವರ್ಷ:-	
	ಶಾ. ತಿ. ಭಟ್ಟ	
೯. ಮಲಖಂಬ.	೧ನೆಯ ವರ್ಷ:-	
	೧ ಭೀ. ಕೃ. ಕುರಂದವಾಡ	ಇವರು ಮನೋರಂಜಕವಾದ ಆಟಗಳನ್ನು ಮಾಡಿ ತೋರಿಸಿದರು.
	೨ ದಾ. ಪ. ಕುಲಕರ್ಣಿ	
	೨ನೆಯ ವರ್ಷ:-	
	ಫ. ಹ. ಸಾಂಸಿಮಠ	
೧೦. ಕುಸ್ತಿ.	೧ನೆಯ ವರ್ಷ:-	
	ಸಿ. ದು. ಆರೇರ ಮತ್ತು ಪಾಟೀಲ	
	೨ನೆಯ ವರ್ಷ:-	
	೧ ಪಾಟೀಲ ಮತ್ತು ನಿ. ಬ. ದೇಸಾಯಿ (೧ನೆಯ ವರ್ಷ)	
	೨ ಫ. ನಿ. ಜಾಲಗಾರ ಮತ್ತು ಗ. ಜೀ. ಸುರಪುರ	

ಇವರಲ್ಲದೆ ಬೇರೆ ಕೆಲವು ವಿದ್ಯಾರ್ಥಿಗಳು ಮಲಖಂಬದ ಮೇಲೆಯೂ ಹಾರಿಯ ಮೇಲೆಯೂ ಚಮತ್ಕಾರದ ಆಟಗಳನ್ನು ಆಡಿ ತೋರಿಸಿದರು. ಈ ಆಟಗಳಲ್ಲಿ ವಿ.ಶ್ರೀ. ಚನಟಿ, ಸಿ. ಚ. ಹಿರೇಮಠ ಇವರು ಅನೇಕ ಆಟಗಳಲ್ಲಿ ಭಾಗತೆಗೆದುಕೊಂಡು ಮೇಲು ಬಂದದ್ದರಿಂದ ಪ್ರೇಕ್ಷಕರ ಸ್ತುತಿಗೆ ಪಾತ್ರರಾದರು ಇವರ ಮೈಕಟ್ಟಾದರೂ ಪುಷ್ಟವಾಗಿದ್ದು ಮನೋಹರವಾಗಿತ್ತು. ಈ ಪ್ರಕಾರ ಆಟಗಳನ್ನು ನೋಡುವಾಗ ಪ್ರೇಕ್ಷಕರು ಆಗಿಂದಾಗ್ಗೆ ಕರತಾಡನದಿಂದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಗೊಳಿಸುತ್ತಿದ್ದರು. ಏಳು ಘಂಟೆಗೆ ಎಲ್ಲಆಟಗಳೂ ಮುಗಿದವು. ಆ ಮೇಲೆ ಅಧ್ಯಕ್ಷರಾದ ಶ್ರೀಯುತ ಕೃಷ್ಣರಾವ ಹುನಗುಂದ ಇವರು ಮೇಲುಬಂದ ಎಲ್ಲ ವಿದ್ಯಾರ್ಥಿಗಳಿಗೆ ಇನಾಮುಗಳನ್ನು ಹಂಚಿದರು. ತರುವಾಯ ಅಧ್ಯಕ್ಷರಿಗೂ, ಪ್ರೇಕ್ಷಕರಿಗೂ ಹೂವೀಳ್ಯವನ್ನು ಕೊಡುವ ಸಮಾರಂಭವು ನಡೆಯಿತು. ಈ ಸಮಯದಲ್ಲಿ ಅಧ್ಯಕ್ಷ ಸಾಹೇಬರು ಕೆಳಗೆ ಬರಿದ ಅಶಯದಭಾಷಣವನ್ನು ಮಾಡಿದರು. "ಟ್ರೇನಿಂಗ ಕಾಲೇಜದಲ್ಲಿ ಶರೀರ ಸಂಪತ್ತನ್ನು ಬೆಳೆಯಿಸುವದಕ್ಕೆ ಆಸ್ಪದವಾದ ಆಟಗಳನ್ನು ಅಡಿಸುವ ಮತ್ತು ಅವರಿಗೆ ಉತ್ತೇಜನ ಬರುವಂತೆ ಪಾರಿತೋಷಕಗಳನ್ನು ಕೊಡುವ ವಾರ್ಷಿಕಸಮಾರಂಭವನ್ನು ಉಪಕ್ರಮ ಮಾಡಿದ್ದು ಇದೇ ಮೊದಲನೇಸಾರಿ ಎಂದು ಹೇಳಬಹುದು. ಈ ಸಮಾರಂಭವನ್ನು ನೋಡುವ ಸುಪ್ರಂಗವನ್ನು ತಂದುಕೊಟ್ಟಬಗೆ ನಾವೆಲ್ಲರೂ ಪ್ರಿನ್ಸಿಪಾಲರಾದ ಶ್ರೀಯುತ ರಾಮರಾವ ಕುಲಕರ್ಣಿಇವರಿಗೆಉಪಕೃತರಾಗಿದ್ದೇವೆ. ಮನುಷ್ಯನು ಸುಖಿಯಾಗಿರಬೇಕಾದರೆ ಶರೀರ ಸಂಪತ್ತು ಅತ್ಯವಶ್ಯವಾದದ್ದು. " शरीरमाद्यंखलुधर्मसाधनम् " ಎಂಬವಚನವು ಸರ್ವಶ್ರುತವಾಗಿರುವದು. ಶರೀರ ಬಲದಿಂದಲೇ ನಾವು ಎಲ್ಲ ಕೆಲಸಗಳನ್ನು ಒಳ್ಳೇ ಉತ್ಸಾಹದಿಂದ ಮಾಡುವೆವು. ಪೌರಾಣಿಕ ಕಾಲದಲ್ಲಿ ತಮ್ಮ ಶರೀರಬಲವನ್ನು ಹೆಚ್ಚಿಸಿ ಮಹತ್ತಮ ಕಾರ್ಯಗಳನ್ನು ಮಾಡಿ ಹೆಸರುವಾಸಿಯಾದ ಭೀಮಸೇನ, ಹನುಮಂತ ಮುಂತಾದವರ ಹೆಸರುಗಳು ತಮ್ಮೆಲ್ಲರಿಗೆ ವೇದ್ಯವಾಗಿರುವವು. ಅದರಂತೆ ನೀವಾದರೂ ನಿಮ್ಮ ಶರೀರ ಬಲವನ್ನು ಹೆಚ್ಚಿಸಿ ಅಂಥ ಮಹತ್ಕಾರ್ಯವನ್ನು ಮಾಡಲು ತಕ್ಕವರಾಗಬಹುದು. ಈ ಪ್ರಕಾರದ ಉತ್ಸಾಹಜನಕ ಮತ್ತು ಉಪದೇಶಪರವಾದ ಭಾಷಣವನ್ನು ಮಾಡಿ ತಮ್ಮ ಸ್ಥಾನವನ್ನು ಸ್ವೀಕರಿಸಲು, ಪ್ರಿನ್ಸಿಪಾಲರು ಎದ್ದುನಿಂತು ಈ ಸಭೆಗೆ ಅಧ್ಯಕ್ಷರಾಗಲಿಕ್ಕೆ ಒಪ್ಪಿ

ಕೊಂಡು ಸಮಾರಂಭದ ಕಾರ್ಯವನ್ನು ಪೂರ್ಣಮಾಡಿದ ಬಗ್ಗೆ ಮೆ. ಎ. ಜ. ಸಾಹೇಬರನರ ಆಭಾರವನ್ನಿಸಿದರು. ಆ ಮೇಲೆ ಅವರು "ಟ್ರೇನಿಂಗ ಕಾಲೇಜದಂಥ ದೊಡ್ಡ ಸಂಸ್ಥೆಯಲ್ಲಿ ಇಂಥ ಸಮಾರಂಭಗಳಾಗುವದು ಅತ್ಯವಶ್ಯವು ಈ ಮೊದಲು ಇಲ್ಲಿ ಇಷ್ಟೊಂದು ದೊಡ್ಡಪ್ರಮಾಣದಿಂದ ಪ್ರಸಂಗ ವಿಶೇಷದಲ್ಲಿ ಸಮಾರಂಭವನ್ನು ಮಾಡಿದ್ದು ನನಗೆ ನೆನಪುಂಟು. ಆದರೆ ಈ ವರ್ಷದಿಂದ ವ್ಯಾಯಾಮಶಾಲೆಯ ಸಂಬಂಧದ ಅನುಕೂಲತೆಗಳು ಸರಿಯಾಗಿ ಆದುದರಿಂದಲೂ ಮತ್ತು ನಮಗೆ ಹೊಸ ಸ್ಥಳವು ದೊರೆತದ್ದರಿಂದಲೂ ಈ ವಾರ್ಷಿಕ ಉತ್ಸವವನ್ನು ಆರಂಭ ಮಾಡಿರುತ್ತೇವೆ." ಎಂಬ ಭಾಷಣವನ್ನು ಮಾಡಿದ ಬಳಿಕ ಸಭಾವಿಸರ್ಜನೆಯಾಯಿತು. ಆನಂತರ ನಿಮಂತ್ರಿತರಾದ ಎಲ್ಲ ಜನರ ಬಗ್ಗೆ ಪ್ರ್ಯಾಕ್ಟಿಸಿಂಗಸ್ಕೂಲಿನ ದೊಡ್ಡ ಹಾಲಿನಲ್ಲಿ ಉಪಾಹಾರದ ಕೆಲಸವು ಜರುಗಿತು. ಈ ರೀತಿಯಾಗಿ ಈವರ್ಷದ ಕಾಲೇಜದ ಶಾರೀರಿಕ ಶಿಕ್ಷಣದ ವಾರ್ಷಿಕೋತ್ಸವವು ಸಾಂಗವಾಯಿತು.

ವಿವಿಧ ವಿಜ್ಞಾನ ಸಂಗ್ರಹ.

1 ಬಟ್ಟೆಗಳ ಮೇಲೆ ಬಿದ್ದ ಕಲೆಗಳನ್ನು ತೆಗೆದು ಹಾಕುವದು.

೧. ಚಹಾ, ಕಾಫಿ ಮುಂತಾದವುಗಳಿಂದ ಉಂಟಾಗಿರುವ ಕಲೆಗಳನ್ನು ಕೂಡಲೆ ಬಿಸಿನೀರಿನಿಂದ ತೊಳೆದರೆ ಹೋಗಿ ಬಿಡುವವು. ಆದರೆ ಕಲೆಯು ಹೋಗುವದರೊಳಗಾಗಿಯೇ ಸಬಕಾರವನ್ನು ಹಚ್ಚಬಾರದು. ಕಲೆಯು ಬಿಸಿನೀರಿನಿಂದ ಪೂರ್ಣವಾಗಿ ಹೋಗದಿದ್ದರೆ ಸ್ವಲ್ಪ ಬಳೆಗಾರವನ್ನು ಅಲ್ಲಿ ತಿಕ್ಕಬಹುದು. ಗ್ಲಿಸರೀನ ಎಂಬ ಪದಾರ್ಥವು ಸಿಗುವಂತಿದ್ದರೆ ಅದನ್ನು ಉಪಯೋಗಿಸಬಹುದು. ಒಂದು ಪಾಲು ಗ್ಲಿಸರೀನವನ್ನು ಹತ್ತುಪಾಲು ನೀರಿನಲ್ಲಿ ಬೆರಿಸಿ ಆ ಮಿಶ್ರಣವನ್ನು ಕಲೆಯುಂಟಾದಲ್ಲಿ ಹಚ್ಚಬೇಕು. ಅದರ ಮೇಲೆ ಒಂದು ಹನಿ ಅಮೋನಿಯಾವನ್ನು ಬಿಡಬೇಕು. ಇಲ್ಲವೆ ನವಸಾಗರ ಸುಣ್ಣಗಳ ಮಿಶ್ರಣದಿಂದ ಹೊರಡುವ ಎಮೋನಿಯಾದ ಮೇಲೆ ಕಲೆಯು ಬಿದ್ದಭಾಗವನ್ನು ಹಿಡಿಯಬೇಕು.

೨. ಕಪ್ಪು ಮಸಿಯಿಂದ ಉಂಟಾದ ಕಲೆಯನ್ನು ಸಿಗ್ನ್ಯೂಯಿಕ್ ಆಸಿಡದಿಂದ ತೆಗೆದು ಹಾಕಬಹುದು. ನೀರು ಬೆರಸಿದ ಹೈಡ್ರೋಕ್ಲೋರಿಕ್ ಆಸಿಡದಿಂದಲೂ ಕಲೆಯು ಹೋಗಲಿಕ್ಕೆ ಅಡ್ಡಿಇಲ್ಲ. ಆದರೆ ಬಟ್ಟೆಗಳ

ಮೇಲೆ ಈ ಆವ್ಲದ ಕಾರ್ಯವು ಅಲ್ಪ ಪ್ರಮಾಣದಿಂದ ನಡೆಯುವದರಿಂದ ಮೊದಲು ಹೇಳಿದ ಆವ್ಲವನ್ನು ಉಪಯೋಗಿಸುವದು ಒಳ್ಳೇದು. ಕತಲೆಯ ಹುಳಿಯಲ್ಲಿ ಈ ಆವ್ಲವು ಇರುವದರಿಂದ ಅದನ್ನು ಉಪಯೋಸುಗಿನವೂ ಉತ್ತಮವಾದದ್ದು.

ಕೆಲಕೆಲವು ಮಸಿಗಳಲ್ಲಿ ಕಾರ್ಬನ್ನಿನ (ಕಾಡಿಗೆಯ) ಸಣ್ಣ ಸಣ್ಣ ಕಣಗಳನ್ನು ಬೆರಸಿರುವದರಿಂದ ಆ ಮಸಿಯಿಂದುಂಟಾದ ಕಲೆಗಳನ್ನು ತೆಗೆದು ಹಾಕಲಿಕ್ಕೆ ಬರುವದಿಲ್ಲ.

೩. ಕಬ್ಬಿಣದಿಂದುಂಟಾದ ಕಂದೀ ಬಣ್ಣದ ಕಲೆಗಳನ್ನು ಸಹ ಮೇಲೆ ಹೇಳಿದ ಒಗ್ಷಾಲಿಕ್ ಆಸಿಡ್ ಅಥವಾ ನೀರು ಬೆರಸಿದ ಹೈಡ್ರೋಕ್ಲೋರಿಕ್ ಆಸಿಡದಿಂದ ತೆಗೆದುಹಾಕಬಹುದು.

೪. ಕೆಂಪು ಮಸಿಯಿಂದುಂಟಾದ ಕಲೆಗಳನ್ನು ತೆಗೆದುಹಾಕಲಿಕ್ಕೆ ಕಳಗೆ ಹೇಳಿದ ಪದಾರ್ಥಗಳನ್ನು ಬೇರೆ ಬೇರೆಯಾಗಿ ಪರೀಕ್ಷಿಸಿ ನೋಡಬೇಕು.

(೧) ಮದ್ಯಾರ್ಕ (೨) ಪೊಟಾಸಿಯಮ್ ಸಾಯೆನಾಯ್ಡದ ಸೊಲ್ಯೂಶನ್ (೩) ಸುಣ್ಣದ ನೀರು.

೫. ಅರಗಿನಿಂದ ಕಲೆಯು ಉಂಟಾಗಿದ್ದರೆ ಮದ್ಯಾರ್ಕವನ್ನು ಉಪಯೋಗಿಸತಕ್ಕದ್ದು.

II ಇರಿವೆಗಳನ್ನು ನಾಶಮಾಡುವದು.

೧. ಇರಿವೆಗಳು ಇರುವ ಸ್ಥಳದಲ್ಲಿ ಸ್ವಲ್ಪ ಬಳೆಗಾರವನ್ನಾಗಲಿ ಲವಂಗದ ಹುಡಿಯನ್ನಾಗಲಿ ಸಿಂಪಡಿಸಿದರೆ ಅವು ಆ ಸ್ಥಳವನ್ನು ಬಿಟ್ಟು ಹೋಗುವವು.

೨. ಇರಿವೆಗಳು ಸೇರಿಕೊಂಡಿರುವ ತೂತಿನ ಬಾಯಿಗೆ ಸ್ವಲ್ಪ ಸುಣ್ಣದ ಹುಡಿಯನ್ನು ಹಾಕಿ ಅದರ ಮೇಲೆ ನೀರು ಹಾಕಿದರೆ ಇರಿವೆಗಳೆಲ್ಲವೂ ಅಲ್ಲಿಯೇ ಸತ್ತು ಹೋಗುವವು.

೩. ಬಳೆಗಾರವನ್ನು ಸಕ್ಕರೆಯಲ್ಲಿ ಬೆರಸಿ ಇರಿವೆಗಳು ಇರುವ ಸ್ಥಳದಲ್ಲಿ ಹಾಕಿದರೆ ಅವು ಅದನ್ನು ತಿಂದು ಸಾಯುವವು,

೪. ಕಾರ್ಬನ್ ಬಾಯ್ ಸಲ್ಫಾಯ್ಡದ ಕೆಲವು ಹನಿಗಳನ್ನು ಇರಿವೆಗಳ ಅಥವಾ ಇಲಿಗಳ ಬಲಿಗಳಲ್ಲಿ ಹಾಕಿ ಬಾಯಿಯನ್ನು ಮುಚ್ಚಿದರೆ

ಆ ಪದಾರ್ಥದ ಉಗಿಯು ಎಲ್ಲ ಕಡೆಯಲ್ಲಿಯೂ ಸೇರಿಕೊಳ್ಳುವದರಿಂದ ಬಿಲದೊಳಗಿನ ಪ್ರಾಣಿಗಳೆಲ್ಲ ಸಾಯುವವು.

III ತಗಣಿ ಚಿಕ್ಕಾಡುಗಳನ್ನು ನಾಶಮಾಡುವದು.

೧. ಟರ್ಪಂಟೈನ್ ಎಣ್ಣೆಯನ್ನೂ ಕಲ್ಲೆಣ್ಣೆಯನ್ನೂ ಸಮಪ್ರಮಾಣದಿಂದ ಬೆರಸಿ ಆ ಮಿಶ್ರಣವನ್ನು ತಗಣಿಗಳು ಸೇರಿಕೊಂಡಿರುವ ಸಂದುಗಳಿಗೆ ಹಚ್ಚಬೇಕು. ಸಬಕಾರವನ್ನು ಬಿರುಕುಗಳಿಗೆ ಅಂಟಿಸುವದರಿಂದಲೂ ತಗಣಿಗಳು ಸಾಯುತ್ತವೆ.

೨. ತಗಣಿಯು ಯಾವದೊಂದು ಅವಯವಕ್ಕೆ ತುಸು ಕೊಬ್ಬರಿ ಎಣ್ಣೆಯನ್ನು ತಾಗಿಸಿದರೆ ಅದು ಕೂಡಲೆ ಪ್ರಾಣ ಬಿಡುತ್ತದೆ. ಆದದರಿಂದ ಅವು ಸೇರಿಕೊಂಡಿರುವ ಬಿರುಕುಗಳಿಗೆ ಕೊಬ್ಬರಿ ಎಣ್ಣೆಯನ್ನು ಹಚ್ಚಿದರೆ ಅವುಗಳ ಸಂಖ್ಯೆಯು ಕಡಿಮೆಯಾಗಲಿಕ್ಕೆ ಅಡ್ಡಿಯಿಲ್ಲ. ಬೆಂಝೀನ್ ಎಂಬ ಪದಾರ್ಥವಾದರೂ ಇದೇ ಪ್ರಕಾರದ್ದು.

೩. ಗಂಧಕದ ಹೊಗೆಯು ಕ್ರಿಮಿಕೀಟಕಗಳಿಗೆ ಬಹಳ ವಿಷಕಾರಕವಾದದ್ದು. ಆದದರಿಂದ ತಗಣಿ ಚಿಕ್ಕಾಡುಗಳನ್ನು ನಾಶಮಾಡಲಿಕ್ಕೆ ಇದನ್ನು ಉಪಯೋಗಿಸಬಹುದು. ಬಟ್ಟೆಗಳ ಬಣ್ಣವು ಈ ಹೊಗೆಯಿಂದ ನಾಶವಾಗುವ ಕಾರಣ ಅವುಗಳನ್ನು ದೂರ ಇಡಲಿಕ್ಕೆಬೇಕು. ಕೋಣೆಯೊಳಗಿನ ಬಟ್ಟೆಗಳನ್ನು ಹೊರಗೆ ಇಟ್ಟು ಒಂದು ಹಂಚಿನಲ್ಲಿ ಇದ್ದಲಿಯ ಕೆಂಡವನ್ನು ಹಾಕಿ ಅದರ ಮೇಲೆ ೩, ೪ ತೊಲೆ ಗಂಧಕವನ್ನು ಹಾಕಿ ಒಳಗಿನ ಹೊಗೆಯು ಹೊರಗೆ ಬರದಂತೆ ಸಂದು, ಕಿಡಿಕಿ, ಬಾಗಿಲುಗಳನ್ನೆಲ್ಲ ಬಂದು ಮಾಡಿ ಹೊರಗೆ ಬರಬೇಕು. ಸುಮಾರು ೧೫ ನಿಮಿಷಗಳಲ್ಲಿ ಗಂಧಕವು ಉರಿದು ಹೋಗಿ, ಅದರ ಹೊಗೆಯಿಂದ ಕ್ರಿಮಿಗಳೆಲ್ಲವೂ ನಾಶವಾಗುವವು. ಗಂಧಕವು ಪೂರ್ಣವಾಗಿ ಉರಿದು ಹೋಗುವಂತೆ ವ್ಯವಸ್ಥೆಯನ್ನು ಮಾಡತಕ್ಕದ್ದು. ಗಂಧಕದ ಸಂಗಡ ಅದರ ತೂಕದ ಇಮ್ಮಡಿಯಷ್ಟು ಪೊಟಾಸಿಯಮ್ ಕ್ಲೋರೇಟವನ್ನು ಬೆರಸಿದರೆ ಅದು ಉತ್ತಮವಾಗಿ ಉರಿಯುವದು. ಇಷ್ಟಾದ ಮೇಲೆ ತಗಣಿಗಳು ಸೇರಿಕೊಂಡಿದ್ದ ಬಿರುಕುಗಳಿಗೆ ಮುರ್ಯಾರಿಕ್ ಕ್ಲೋರಾಯ್ಡದ ಸೊಲ್ಯೂಶನವನ್ನು ಹಚ್ಚಬೇಕು.

೪. ಮರ್ಕ್ಯುರಿಕ್ ಕ್ಲೋರಾಯ್ಡ ೧ ತೊಲೆ ಹೈಡ್ರೋಕ್ಲೋರಿಕ್ ಆಸಿಡ್ ೨ ತೊಲೆ ಮತ್ತು ನೀರು ೪ ತೊಲೆ ಈ ಪದಾರ್ಥಗಳಿಂದಾದ

ಸೊಲ್ಯೂಶನವನ್ನು ೧೨ ತೊಲಿ ಟರ್ಪೆಂಟೈನ್ ಮತ್ತು ೧೨ ತೊಲಿ ತಂಬಾಕಿನ ಅರ್ಕದಲ್ಲಿ ಬೆರಸಿದರೆ ಕ್ರಿಮಿಗಳಿಗೆ ಅತ್ಯಂತ ವಿಷಕಾರಕವಾದ ಮಿಶ್ರಣವು ತಯಾರಾಗುವದು. ಈ ಮಿಶ್ರಣವನ್ನು ಅವು ಸೇರಿರುವ ಸೀಳುಗಳಿಗೆ ಹಚ್ಚಬೇಕು.

೨ ತೊಲಿ ತಂಬಾಕವನ್ನು ಸುಮಾರು ೨೦ ತೊಲಿ ನೀರಿನಲ್ಲಿ ಹಾಕಿ ೧೨ ತೊಲಿ ಉಳಿಯುವ ತನಕ ಸಾವಕಾಶವಾಗಿ ಕುದಿಸಿದರೆ ಮೇಲೆ ಹೇಳಿದ ಅರ್ಕವು ತಯಾರಾಗುವದು.

೫. ಮೆಂಥಾಲವನ್ನು ಮದ್ಯಾರ್ಕದಲ್ಲಿ ೧..೧೦ ಪ್ರಮಾಣದಲ್ಲಿ ಬೆರಸಿ ಆ ಮಿಶ್ರಣವನ್ನು ಮಲಗುವ ಕಾಲಕ್ಕೆ ತುಸು ಮೈಗೆ ಹಚ್ಚಿಕೊಳ್ಳುವದರಿಂದ ತಗಣಿ ಚಿಕ್ಕಾಡುಗಳು ಕಡಿಯುವದಿಲ್ಲ. ಕಡಿದರೂ ವಿಶೇಷ ಕಷ್ಟವೆನಿಸುವದಿಲ್ಲ.

೬. ಮನೆಯ ಸಮೀಪದಲ್ಲಿ ಸೇವಂತಿಗೆಯ ಗಿಡಗಳನ್ನು ಬೆಳೆಯಿಸುವದರಿಂದ ಚಿಕ್ಕಾಡುಗಳು ಕಡಿಮೆಯಾಗುತ್ತವೆಂತಲೂ ಅದರ ಹೂಗಳಿದ್ದಲ್ಲಿ ಚಿಕ್ಕಾಡುಗಳು ಇರುವದಿಲ್ಲವೆಂತಲೂ ಕೆಲವರ ಅಭಿಪ್ರಾಯವುಂಟು.

೭. ಲವಂಗದ ಎಣ್ಣೆ ೧ ಪಾಲು, ಕೋಲೋನವಾಟರ ೧೦ ಪಾಲು ಮದ್ಯಾರ್ಕ ೧೪ ಪಾಲು ಈ ಮಿಶ್ರಣವಿದ್ದ ಸ್ಥಳದ ಸಮೀಪದಲ್ಲಿ ಚಿಕ್ಕಾಡುಗಳು ಬರುವದಿಲ್ಲ. ಇದನ್ನು ಮೈಗೆ ಹಚ್ಚಿಕೊಂಡು ಮಲಗಬಹುದು.

IV ಇಲಿಗಳನ್ನು ನಾಶಮಾಡುವದು.

೧. ಇಲಿಗಳನ್ನು ಕೊಲ್ಲಲಿಕ್ಕೆ ಉಪಯೋಗಿಸುವ ವಿಷಪದಾರ್ಥಗಳಲ್ಲಿ ಮುಖ್ಯವಾದವು ಯಾವವೆಂದರೆ:— ೧, ಆರ್ಸೆನಿಕ್ ಆಸಿಡ (ಬಿಳೀ ಪುಡಿ) ೨. ಸ್ಟ್ರಿಕ್‌ನೀನ್ ೩. ಹಳದೀ ಬಣ್ಣದ ಫಾಸ್ಫರಸ್ ೪. ಬೇರಿಯಮ್ ಕಾರ್ಬೋನೇಟ್ ಇವುಗಳಲ್ಲಿ ನಾಲ್ಕನೇದು ಉತ್ತಮವಾದದ್ದು- ಯಾಕಂದರೆ ಇಲಿಗಳು ಇದನ್ನು ತಿಂದ ಮೇಲೆ ನೀರನ್ನು ಹುಡುಕುವದಕ್ಕಾಗಿ ಹೊರಗೆ ಬಂದು ಸಾಯುವವಲ್ಲದೆ, ಯಾವದೊಂದು ತರದ ರುಚಿಯು ಇದಕ್ಕೆ ಇಲ್ಲದಿರುವದರಿಂದ ಪುನಃ ಪುನಃ ತಿನ್ನಲಿಕ್ಕೆ ಬರುತ್ತವೆ. ಮೊದಲಿನ ಮೂರು ವಿಷಪದಾರ್ಥಗಳಲ್ಲಿ ಯಾವದೊಂದನ್ನು ಒಮ್ಮೆ ಸ್ವಲ್ಪ ತಿಂದು ಸಂಕಟವಿಷ್ಟೇ ಆಗಿ ಅವು ಸಾಯದಿದ್ದರೆ, ಎರಡನೇ ಸಾರಿ ಇಲಿ

ಗಳು ಆ ಪದಾರ್ಥಗಳ ಸಮೀಪದಲ್ಲಿ ಸಹ ಹಾಯುವದಿಲ್ಲ. ಇದಲ್ಲದೆ ಈ ಪದಾರ್ಥಗಳನ್ನು ತಿಂದ ಇಲಿಗಳು ಬಿಲದೊಳಗೇ ಸತ್ತು ಬೀಳುವ ದರಿಂದ ಇನ್ನಿಷ್ಟು ಹೆಚ್ಚಿನ ಕಷ್ಟಕ್ಕೆ ನಾವು ಒಳಗಾಗಬೇಕಾಗುತ್ತದೆ.

ಈ ಪದಾರ್ಥಗಳನ್ನು ಯಾವದೊಂದು ಧಾನ್ಯದ ಹಿಟ್ಟಿನಲ್ಲಿ ೧೦:೧ ಈ ಪ್ರಮಾಣದಂತೆ ಬೆರಸಿ, ಅಥವಾ ಕೊಬ್ಬರಿಯನ್ನು ಕೆಂಡದ ಮೇಲೆ ಸ್ವಲ್ಪ ಸುಟ್ಟು ಪುಡಿಮಾಡಿ ಅದರಲ್ಲಿ ಮೇಲೆ ಹೇಳಿದ ಬೇರಿಯಮ್ ಕಾರ್ಬೊನೇಟನ್ನು ಬೆರಿಸಬೇಕು. ಇವನ್ನು ದೊಡ್ಡ ಪ್ರಮಾಣದಿಂದ ತೆಗೆದುಕೊಂಡರೆ ಮನುಷ್ಯರು ಸಹ ಸಾಯಬಹುದು. ಆದ್ದರಿಂದ ಈ ಪದಾರ್ಥಗಳನ್ನು ಬಹಳ ಜಾಗ್ರತೆಯಿಂದ ಉಪಯೋಗಿಸಬೇಕು.

R. K. Naik.

ಇತಿಹಾಸ ಶಿಕ್ಷಣ ಕ್ರಮ.

ಸದ್ಯದ ಕಲಿಸುವ ಕ್ರಮದಲ್ಲಿ ಪರೀಕ್ಷೆಯ ಮಹತ್ವವು ಬೆಳೆದ ಕಾರಣ ಇತಿಹಾಸವು ಅಭ್ಯಾಸ ಕ್ರಮದೊಳಗಿನ ಕಡಿಮೆಯು ತರದ ಯೋಗ್ಯತೆಯನ್ನು ಹೊಂದಿರುತ್ತದೆ. ಆದರೂ ಇತ್ತಿತ್ತಲಾಗಿ ಅದರ ಯೋಗ್ಯತೆಯು ಜನರಿಗೆ ಗೊತ್ತಾಗ ಹತ್ತಿದೆ. ಮಾನಸಿಕ ಮತ್ತು ನೈತಿಕ ಬೆಳವಣಿಗೆಗಳನ್ನು ಇತಿಹಾಸದಷ್ಟು ಬೇರೆ ಯಾವ ವಿಷಯವೂ ಮಾಡುವದಿಲ್ಲೆಂಬದು ಅನುಭವದ ಮಾತಾಗಿದೆ. ಇತಿಹಾಸವು ಭಾವನಾಶಕ್ತಿಯ ಉತ್ಪಾದನ ದೃಢೀಕರಣ, ಮತ್ತು ನಿಯಮನಕ್ಕೂ, ನೈತಿಕ ಅಧ್ಯಯನಕ್ಕೂ ಆದಿಕಾರಣವಾಗಿರುವದರಿಂದ ಇತಿಹಾಸ ಶಿಕ್ಷಣ ಕ್ರಮವು ಸಚ್ಛಿಕ್ಷಕರಿಂದ ಯೋಗ್ಯವಾಗಿ ಉಪಯೋಗಿಸಲ್ಪಡುತ್ತದೆ. ಇತಿಹಾಸದ ಸದುಪಯೋಗದಿಂದಲೇ ಮನೋ ನೈತಿಕ ಶಕ್ತಿಗಳ ಬೆಳವಣಿಗೆಗಳು ಆಗುತ್ತವೆ. ಅದೇ ಅದರ ದುರುಪಯೋಗದಿಂದ ಸ್ಮರಣ ಶಕ್ತಿಯ ಮೇಲೆ ಕಲ್ಲಿಟ್ಟಂತೆ ಆಗಿ ಅವುಗಳ ಸಾಮರ್ಥ್ಯವು ಕುಂದುತ್ತದೆ. ಈ ತರದ ಅರೋಪಣೆಗೆ ಇಸವಿ, ವಂಶಾವಳಿ ಮುಂತಾದ ಪ್ರಶ್ನೆಗಳನ್ನು ಕೇಳುವ ಪರೀಕ್ಷಕರನ್ನೇ ಗುರಿ ಮಾಡಬಹುದು,

ಇತಿಹಾಸದ ಸಂಗತಿಗಳು ಇತಿಹಾಸ ಶಿಕ್ಷಣದ ಅಪ್ರಧಾನ ಭಾಗಗಳು. ಆದ್ದರಿಂದ ಇತಿಹಾಸದೊಳಗಿನ ಸಂಗತಿಗಳನ್ನು ಕಲಿಸುವದ

ಕ್ಕಿಂತ ಅದರ ಕಾಲ್ಪನಿಕ ಇತಿಹಾಸವನನ್ನು ಕಲಿಸುವದು ಉಚಿತವು. ಇತಿಹಾಸದ ಸಂಗತಿಗಳು ಮಾನಸಿಕ ನೈತಿಕ ಶಕ್ತಿಗಳ ಬೆಳವಣಿಗೆಗೆ ಸಹಾಯಕಾರಿಗಳು. ಆಯುಧಗಳಿಂದ ಮನೆಯನ್ನು ಕಟ್ಟುವದು ಅಶಕ್ಯ ವಾದಂತೆ ಸಂಗತಿಗಳಿಂದ ಮನೋರೂಪವಾದ ಮನೆಯನ್ನು ಕಟ್ಟುವದು ಅಶಕ್ಯವು. ಮನೆಯನ್ನು ಕಟ್ಟಿದ ಮೇಲೆ ಆಯುಧಗಳನ್ನು ದೂರ ಇಟ್ಟು ಬಿಡುವಂತೆ ಮನೋ ರಚನೆಯು ಪೂರ್ಣವಾಗಲು ಸಂಗತಿಗಳನ್ನು ಮರೆಯ ಬಹುದು. ಇತಿಹಾಸವು ಬಾಲಕರ ಮನಸ್ಸನ್ನು ಉದ್ದೇಶಿಸಬೇಕು.

ಇತಿಹಾಸದ ಅಧ್ಯಾಪನವು ಮನೋರಂಜಕವಾದ ಕಥೆಗಳ ಮೂಗ್ಗವಾಗಿ ಪ್ರಾರಂಭವಾಗಬೇಕು. ಇವುಗಳನ್ನು ಸ್ಪಷ್ಟೀಕರಿಸುವಂಥ ಚಿತ್ರಗಳನ್ನು ಯೋಗ್ಯ ಸ್ಥಳದಲ್ಲಿ ಉಪಯೋಗಿಸಬೇಕು. ಕಥೆಗಳು ಆಸ್ಥೆಯನ್ನುಂಟು ಮಾಡುತ್ತವೆ. ಚಿತ್ರಗಳು ಭಾವನಾಶಕ್ತಿಯ ಮತ್ತು ನಿರೀಕ್ಷಣಶಕ್ತಿಯ ಪರಿಪೋಷಕಗಳಾಗಿರುತ್ತವೆ. ಈ ಪ್ರಕಾರವಾಗಿ ಕಥೆಗಳು ಇತಿಹಾಸದ ಮಹತ್ವವುಳ್ಳ ಅಂಗವಾಗಿರುವದರಿಂದ ಅವುಗಳ ಸಂಬಂಧದಿಂದ ವಿಸ್ತಾರಮಾಡಿದರೆ ಅಪ್ರಸ್ತುತವಾಗಲಾರದು.

ಈ ವಿಷಯವನ್ನು ಗಹನವಾಗಿ ವಿಚಾರಿಸದೆ ಸ್ಥೂಲಮಾನದಿಂದ ಹೇಳಬಹುದಾದದ್ದೇನಂದರೆ:—ನೆರೆಹೊರೆಯವರ ಸಂಗಡಲೂ, ತಮ್ಮ ಗ್ರಾಮದ ಇಲ್ಲವೆ ಪಟ್ಟಣದ ಆರೋಗ್ಯದ ವಿಷಯದಲ್ಲಿಯೂ, ಪ್ರಸಿದ್ಧ ಪುರುಷರ ವರ್ತನದ ಬಗ್ಗೆಯೂ ಆಸ್ಥೆಯನ್ನು ತೋರಿಸುವದು ಚಿಕ್ಕ ಹುಡುಗರಿಗೆ ವಿಹಿತವಾದದ್ದು. ಇಂಥ ಆಸ್ಥೆಯನ್ನುಂಮಾಡುವದಕ್ಕೆ ಪ್ರಸಿದ್ಧಪುರುಷರ ದೈವಚಿತ್ರವನ್ನು ಹುಡುಗರ ಮುಂದೆ ಎದ್ದುಕಾಣಿಸುವಂತೆ ಇಡಬೇಕು. ಸ್ಟೀಫನ್‌ಸನ್ (Stephenson) ಮೊದಲಾದ ಶೋಧಕ ಪುರುಷರ ಹಾಗು ಪರೋಪಕಾರಿಗಳ ಆಯುರ್ವರ್ತಮಾನವನ್ನು ತಿಳಿಕೊಳ್ಳುವದರಿಂದ ಆ ಜನ್ಮವಾದ ಸಾಮಾಜಿಕ ಪ್ರೇಮವು ಹುಟ್ಟುತ್ತವೆ. ಬಾಲಕರು ಕೆಲವರನ್ನು ಪ್ರೀತಿಸುವದರಿಂದ ಪ್ರೇಮ ಮೊದಲಾದ ಉಚ್ಚ ಮನೋವಿಕಾರಗಳು ಅವರಲ್ಲಿ ಸ್ವಭಾವಿಕವಾಗಿಯೇ ಕಂಡುಬರುತ್ತವೆ. ಆದ್ದರಿಂದ ಬಾಲಕರು ಐತಿಹಾಸಿಕ ಪುರುಷರಿಗೆ ತಮ್ಮನ್ನು ಸರಿಹಚ್ಚಿ ನೋಡಿ ಅವರ ಮನೋವಿಕಾರಗಳನ್ನೂ, ಮನೋವಿಕಾರ ಪ್ರೇರಿತ ಕ್ರಿಯೆ

ಗಳನ್ನೂ ಸಹಜವಾಗಿಯೇ ಅನುಕರಿಸುತ್ತಾರೆ ಐತಿಹಾಸಿಕ ಪುರುಷರು ಜಗತ್ತಿಗೆ ದೊಡ್ಡವರಾದ್ದರಿಂದ ಅವರು ಇತಿಹಾಸದ ಮೂಲಾಧಾರರು ಇಂಥವರ ಅನುಕರಣದಿಂದ ಹುಡುಗರು ಉತ್ಸಾಹವನ್ನು ತಾಳಿ ನೈತಿಕ ಬೆಳವಣಿಗೆಯ ಪ್ರಥಮಪಾಠವನ್ನು ಕಲಿಯುತ್ತಾರೆ.

ಐತಿಹಾಸಿಕ ವ್ಯಕ್ತಿಗಳ ಚರಿತ್ರೆಯಿಂದ ಹುಡುಗರು ಚರಿತ್ರಗಾಯಕರಂತೆ ತಮಗಾದರೂ ಕೆಲವು ಕಾರ್ಯಗಳು ಸಾಧ್ಯವಾಗಿರುತ್ತವೆ; ಎಂದು ನಂಬುತ್ತಾರೆ. ಇಂಥ ಜ್ಞಾನವೇ ಬಾಲಕರ ಉಚ್ಚ ಮನೋಭಾವನೆಗಳಿಗೆ ಚಾಲನವನ್ನು ಕೊಟ್ಟು ಅವರ ಮಾನಸಿಕ ಶಕ್ತಿಯ ಬೆಳವಣಿಗೆಯನ್ನು ಹೆಚ್ಚಿಸುತ್ತದೆ. ಯೋಗ್ಯವಾದ ವ್ಯಕ್ತಿಗಳ ಚರಿತ್ರವನ್ನು ಹುಡುಗರ ಮುಂದೆ ಇಟ್ಟರೆ, ಆ ಚರಿತ್ರೆಯಿಂದ ಬೇರೆ ಬೇರೆ ಹುಡುಗರ ಮನಸ್ಸಿನಲ್ಲಿ ವ್ಯಕ್ತಿಭಿನ್ನವಾದ ಪರಿಣಾಮವುಂಟಾಗುತ್ತದೆ. ಇದರಿಂದ ಹುಡುಗರ ಮಾನಸಿಕ ಶಕ್ತಿಗಳ ಅವ್ಯಕ್ತ ಆಧಾರಸ್ಥಾನಗಳು ಸ್ಪರ್ಶಿಸಲ್ಪಟ್ಟು ಅವರಲ್ಲಿ ಹೊಸ ಜೀವಿತವು ಉತ್ಪನ್ನವಾಗುತ್ತದೆ. ಚರಿತ್ರೆಯು ಮಾದರಿಕಾರಕವೂ ಅನುಕರಣೀಯವೂ ಆಗಿದ್ದರೆ, ಅದರಿಂದ ಹುಡುಗರಿಗೆ ಸಮಾಜದ ಕೋರಿಕೆಗಳ ಜ್ಞಾನವಾಗಿ ಅವರನ್ನು ಸಾಮಾಜಿಕ ಕಾರ್ಯಗಳಲ್ಲಿ ಪ್ರವೇಶ ಮಾಡಿಸಿದಂತೆ ಆಗುತ್ತದೆ.

ಇತಿಹಾಸದ ಅಧ್ಯಾಪನವೆಂದರೆ ಬಾಲಕರನ್ನು ಅದಷ್ಟು ಮಟ್ಟಿಗೆ ಸಾಮಾಜಿಕ ಕಾರ್ಯಗಳಲ್ಲಿ ತೊಡಕಿಸುವಂತೆ ಮಾಡುವದು, ಈ ಕೆಲಸದಲ್ಲಿ ಶಿಕ್ಷಕನು ತನ್ನ ಯೋಗ್ಯ ಬುದ್ಧಿಯನ್ನು ವೆಚ್ಚಮಾಡಿ ಸಹಾನುಭೂತಿಯನ್ನು ತೋರಿಸಬೇಕು. ನಿರಸವಾಗಿಯೂ ತಾಂತ್ರಿಕವಾಗಿಯೂ ಔಪಚಾರಿಕವಾಗಿಯೂ ಶಿಕ್ಷಣವನ್ನು ಸಾಗಿಸಿದರೆ, ಅದರಿಂದ ಎಳ್ಳಷ್ಟಾದರೂ ಲಾಭವಾಗುವದಿಲ್ಲ. ಐತಿಹಾಸಿಕ ಪುರುಷರು ಹುಡುಗರ ಕಣ್ಣಮುಂದೆ ಕಥೆಯೊಳಗಿನ ನಾಯಕರಂತೆ ಇರಬೇಕು. ಕಥೆಯನ್ನು ಹೇಳುವದರಿಂದ ಭಾವನಾಶಕ್ತಿಯ ಭೂತಕಾಲದ ಚಿತ್ರಗಳನ್ನು ಮನೋಪಟಲದ ಮೇಲೆ ಪ್ರಕಾಶವಾಗಿ ಕೊರೆಯಬೇಕು. ಐತಿಹಾಸಿಕ ಪುರುಷರು ಪೂರ್ಣ ಆಸ್ಥೆಯಿಂದ ನಿರೀಕ್ಷಿಸಲ್ಪಡಬೇಕು, ಇಲ್ಲದಿದ್ದರೆ ನೈಸರ್ಗಿಕ ಸಮಾಜಜ್ಞಾನವು ಉತ್ತೇಜನವನ್ನು ಹೊಂದುವದಿಲ್ಲ. ತಿಳುವಳಿಕೆಯನುಂಟುಮಾಡುವದು ಇತಿಹಾಸದ ಉದ್ದೇಶವಲ್ಲ. ಇದಕ್ಕೂ ಮೇಲಾದ ಉಚ್ಚತರದ ಮನೋ

ವಿಕಾರಗಳನ್ನುಂಟು ಮಾಡುವದೇ ಇತಿಹಾಸದ ಮುಖ್ಯೋದ್ದೇಶ ವಿರುವದು.

ಈ ಎಲ್ಲ ಮಾತುಗಳನ್ನು ಲಕ್ಷದಲ್ಲಿತಂದು ಕಥಾರೂಪವಾಗಿ ಇತಿಹಾಸವನ್ನು ಪ್ರಾರಂಭಿಸಬೇಕಾದರೆ, ಯೋಗ್ಯರಾದ ಪ್ರಸಿದ್ಧ ಪುರುಷರ ಚರಿತ್ರಗಳು ಸಾಕಷ್ಟು ಉಪಲಬ್ಧವಿರಬೇಕು. ಈ ಕಾಲದ ಶಾಲೋಪಯೋಗಿ ಪುಸ್ತಕಗಳು. ಈ ರೀತಿಯನ್ಯೂನತೆಯನ್ನು ಪೂರ್ಣಮಾಡಿದರೂ ಶಿಕ್ಷಕನೂ ಕೆಲಮಟ್ಟಿಗೆ ಪರಿಶ್ರಮ ಮಾಡಬೇಕಾಗುತ್ತದೆ. ಬೇರೆಬೇರೆ ಪುಸ್ತಕಗಳೊಳಗಿನ ಮನೋರಂಜಕವಾದ ಸಂಗತಿಗಳನ್ನು ಆರಿಸಿ ಅವುಗಳ ದ್ವಾರದಿಂದ ಇತಿಹಾಸವನ್ನು ಕಲಿಸುವದು ವಿಹಿತವಾದದ್ದಾದ್ದರಿಂದ ಶಿಕ್ಷಕನು ಸಾಕಷ್ಟು ಪರಿಶ್ರಮವನ್ನು ಮಾಡಲಿಕ್ಕೇಬೇಕು. ಈ ರೀತಿಯಿಂದ ಸಂಗ್ರಹ ಮಾಡಿದಂಥ ಮತ್ತು ಲೇಖಕನ ಅಲ್ಪ ಮತಿಗೆ ಯೋಗ್ಯವಾಗಿ ಕಂಡು ಬಂದ ಒಂದು ಕಥೆಯನ್ನು ಮಾದರಿಗಾಗಿ ಇಲ್ಲಿ ಕೊಟ್ಟಿರುತ್ತೇವೆ.

ತೈಮೂರು.

ತೈಮೂರನು ಚೆಂಗಿಸಖಾನನ ವಂಶದ ಮೊಗಲನು. ಇವನು ಸುಮಾರು ೫೫೦ ವರ್ಷಗಳ ಅಜಿಗೆ ಸಮರ್ಕಂದ ಎಂಬಲ್ಲಿ ಗೌರವದಿಂದ ಆಳಿದನು. ಅವನು ಯುದ್ಧದಲ್ಲಿ ಘಾಯಹೊಂದಿ ಕುಂಟನಾದ ಕಾರಣ ಅವನಿಗೆ ಕುಂಟನಾದ ತೈಮೂರ ಎಂಬ ಹೆಸರು.

ಅವನು ಬಹಳ ಸಂಪತ್ತಿಯನ್ನು ಕೂಡಹಾಕಿದ್ದನು. ಬೇರೆಬೇರೆ ದೇಶಗಳನ್ನು ಸುಲಿದು ದ್ರವ್ಯಸಂಪಾದನ ಮಾಡುವ ನಿಷ್ಕರಮಾರ್ಗವನ್ನು ಅವಲಂಬಿಸಿದ್ದನು. ಯಾವದಾದರು ಪಟ್ಟಣಕ್ಕೆ ಹೋದಕೂಡಲೆ, ಪಟ್ಟಣಿಗರನ್ನು ಸುಲಿಯಲಿಕ್ಕೆ ತನ್ನ ಸೈನಿಕರನ್ನು ಬಿಡುವನು; ಬೇಕಾದ ಹಾಗೆ ಬೆದರಿಸಿ ದ್ರವ್ಯವನ್ನು ಕಸಗೊಳ್ಳುವನು. ಆದ್ದರಿಂದ ಅವನ ದಾಳಿಯಂದರೆ ಈಶ್ವರೀ ಕ್ಷೋಭನೆಂದು ಜನರು ತಿಳಕೊಳ್ಳುತ್ತಿದ್ದರು.

ಇವನು ಸಂಕಟದ ಸ್ಥಿತಿಯಲ್ಲಿ ಬೆಳೆದವನು, ಆದ್ದರಿಂದ ಸಾಹಸ, ಸಹನಶೀಲತೆ, ಕಪಟ ಮುಂತಾದ ಗುಣಗಳು ಇವನಲ್ಲಿ ಚನ್ನಾಗಿ ನೆಲೆಗೊಂಡಿದ್ದವು. ಸಂಕಟಸಮಯದಲ್ಲಿ ಎಂದೂ ಎದೆಗುಂದುತ್ತಿದ್ದಿಲ್ಲ. ಇಂಥ ಒಂದು ಪ್ರಸಂಗವಲ್ಲಿ ಅವನ ಕಥೆಯು ಒಳ್ಳೇ ಬೋಧಕರವಾಗಿರುತ್ತದೆ.

ಒಂದು ದಿನ ತೈಮೂರನು ಶತ್ರುಗಳಿಂದ ಸೋತು ಒಂದು ಮುರುಕ ಮನೆಯಲ್ಲಿ ಅಡಗಿದ್ದನು. ಹೃದಯದೊಳಗಿನ ದುಃಖವನ್ನು ಮರೆಯುವ ದಕ್ಕಾಗಿ ಹತ್ತಿರಿದ್ದ ಒಂದು ಇರುವೆಯ ಆಟವನ್ನು ನಿರೀಕ್ಷಿಸಲಿಕ್ಕೆ ಹತ್ತಿದನು. ಅದರಲ್ಲಿ ಒಂದು ಇರುವೆಯು ಬಾಯಲ್ಲಿ ಗೋದೀಕಾಳನ್ನು ತೆಗೆದುಕೊಂಡು ಗೋಡೆಯನ್ನು ಹತ್ತುತ್ತಿತ್ತು. ಗೋದಿಯ ಕಾಳು ಭಾರವಾದ್ದರಿಂದ ಅರವತ್ತೊಂಬತ್ತು ಸಾರಿ ಅದರ ಪ್ರಯತ್ನವು ಸಫಲವಾಗದಿದ್ದರೂ ಎಪ್ಪತ್ತನೇ ಸಾರಿ ಪ್ರಯತ್ನಮಾಡಿ ಹತ್ತಿಹೋಯಿತು. ಇರುವೆಯ ಈ ಕೃತ್ಯವನ್ನು ಕಂಡು ಅವನಲ್ಲಿ ಹೊಸ ಉತ್ಸಾಹವು ಉತ್ಪನ್ನವಾಯಿತು.

ತೈಮೂರನು ಹೊಸ ವಿದ್ಯಾಪೀಠಗಳನ್ನು ಕಟ್ಟಿಸಿದನು. ಅವನ ಅಂತಃಕರಣವು ಕೋಮಲವಾಗಿತ್ತು. ತನ್ನ ಹೆಂಡರು ಮಕ್ಕಳನ್ನು ಬಹವಾಗಿ ಪ್ರೀತಿಸುವನು. ಅದರೆ ತನ್ನ ಮಗನನ್ನು ಯೋಗ್ಯ ಶಿಕ್ಷೆಯಲ್ಲಿ ಬೆಳಿಸಿದನು. ಕೆಲಕೆಲವು ಪ್ರಸಂಗಗಳಲ್ಲಿ ಗುಲಾಮನಂತೆ ಸಹ ಅವನನ್ನು ನಡಿಸಿಕೊಂಡನು. ಅವನು ಸ್ತುತಿಪ್ರಿಯನಿದ್ದಿಲ್ಲ. ಒಂದುದಿನ ತೈಮೂರನು ಸ್ನಾನಮಾಡಿ ಮೈಯನ್ನು ಒರಿಸಿಕೊಳ್ಳುವಕಾಲಕ್ಕೆ "ನನ್ನನ್ನು ಮಾರಿದರೆ ಎಷ್ಟು ಬೆಲೆಬರುವದು." ಎಂದು ಒಬ್ಬ ಕವಿಯನ್ನು ಕೇಳಿದನು. ಅದಕ್ಕೆ ಆ ಕವಿಯು " ೫೫ ನಾಣ್ಯಗಳು ಬರಬಹುದು " ಎಂದು ಹೇಳಿದನು. ಅದಕ್ಕೆ ತೈಮೂರನು "ತನ್ನ ಮೈಮೇಲಿನ ವಸ್ತ್ರವೇ ಅಷ್ಟು ಬೆಲೆಬಾಳುವದು" ಎಂದು ಅನ್ನಲು, ಕವಿಯು:--"ನಾನಾದರೂ ವಸ್ತ್ರದ ಬೆಲೆಯನ್ನೇ ಹೇಳಿದೆನು. ನಿವ್ಮನ್ನು ಮಾರಿದರೆ ಒಂದು ಕವಡಿಯಾದರೂ ಬಾರದು;"ಎಂದನು.

ಅವನು ತೀಕ್ಷ್ಣವಾದ ರಾಜ್ಯಲೋಭಿಯಾಗಿದ್ದನು. ಹಿಂದುಸ್ತಾನದ ಮೇಲೆ ದಾಳೀಮಾಡಿ ಮಾರ್ಗದಲ್ಲಿ ಕಂಡ ನಗರಗಳನ್ನು ಸುಲಿಯುತ್ತ ನಿವಾಸಿಗಳನ್ನು ಕೊಲ್ಲುತ್ತ ಪಾನಿಪತದ ಮಾರ್ಗವಾಗಿ ದಿಲ್ಲಿಯಮೇಲೆ ಸಾಗಿಬಂದು ಅಲ್ಲಿಯ ಬಾದಶಹನಾದ ಮಹಮ್ಮದನನ್ನು ಸೋಲಿಸಿದನು. ೧೫ ದಿವಸಗಳ ವರೆಗೆ ಹಿಂದುಸ್ತಾನದ ರಾಜಧಾನಿಯನ್ನು ಸುಲಿದು ಸುಲಿಗೆಯೆ ತನ್ನ ಭಾಗವನ್ನು ತೆಗೆದುಕೊಂಡು ಸ್ವದೇಶಕ್ಕೆ ತೆರಳಿದನು. ಆದರೆ ಹಿಂದುಸ್ತಾನದಲ್ಲಿ ರಾಜ್ಯವನ್ನು ಸ್ಥಾಪಿಸಲಿಕ್ಕೆ ಯಾವತರದ ಪ್ರಯತ್ನವನ್ನೂ ಮಾಡಲಿಲ್ಲ.

ಈ ತರದ ಕಥೆಗಳ ಸಂಗ್ರಹವಾದ ಮೇಲೆ ಅವುಗಳನ್ನು ಯಾವ ರೀತಿಯಿಂದ ಕಲಿಸಿದರೆ ಯೋಗ್ಯ ಪರಿಣಾಮವಾಗುವದೆಂಬದನ್ನು ಮುಂದೆ ನಿರೂಪಿಸುವೆವು.

ಪ್ರಾಥಮಿಕ ಶಾಲೆಗಳಲ್ಲಿಯ ಅಂಕಗಣಿತ ಶಿಕ್ಷಣವು.

ಅಂಕಗಣಿತ ಕಲಿಸುವದು ಸರಾಸರಿ ಸುಲಭವಾದದ್ದೆಂತಲೂ ಶಿಕ್ಷಕನಿಗೆ ವೇ
ಯಿದ್ದಲ್ಲಿ ಅದನ್ನು ಬೇರೇ ಹೆಚ್ಚಿಗೆ ಮಹತ್ವದ ವಿಷಯಗಳಿಗೆ ಉಪಯೋಗಿಸಬಹುದೆ
ತಲೂ ಸಾಮಾನ್ಯತಃ ಶಿಕ್ಷಕರ ಅಭಿಪ್ರಾಯವು ಇನ್ನೂ ಇರುವದು. ಆದರೂ ಇದ
ಸುಕರವೆಂಬ ಅಭಿಪ್ರಾಯವೇ ಶಿಕ್ಷಕನು ಈ ವಿಷಯಕ್ಕೆ ತಕ್ಕಷ್ಟು ಲಕ್ಷ್ಯಕೊಡು
ದನ್ನು ಪ್ರತಿಬಂಧಿಸಿರುತ್ತದೆ.

ನಮ್ಮ ಶಾಲೆಯ ಹುಡುಗರಲ್ಲಿ ಸೂಮೂರು ಒಂದು ಮೂರನೆಯ ಅಂಶ ಹುಡ
ಗರಿಗೆ ಅಂಕಗಣಿತದ ವಿಷಯದಲ್ಲಿ ಪಾಸಾಗುವದು ಕಷ್ಟವೆನಿಸುವದು. ಈ ಮಾತಿ
ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಇದು ಬಾಲಕರ ಶಿಕ್ಷಣದ ಸರಿಯಾದ ಸ್ಥಿತಿಯ ದ್ಯೋ
ಕವೊ? ಇದು ಯಾತರ ಫಲವಿರುವದು? ಇಲ್ಲಿ ಎರಡರಲ್ಲೊಂದು ಅನುಮಾನಕ್ಕೆ ಆ
ದವಿದೆ. (೧) ಪ್ರಾಥಮಿಕ ಶಾಲೆಯ ಫಾಯನಲ್ ಪರೀಕ್ಷೆಗೆ ಗೊತ್ತುಮಾಡಲ್ಪಟ್ಟ ಅಂ
ಗಣಿತ ವಿಷಯವು ಸಾಧಾರಣ ವಿದ್ಯಾರ್ಥಿಗಳ ಯೋಗ್ಯತೆಯನ್ನು ಮೀರಿರಬಹುದ
(೨) ಅಥವಾ ಈ ಶಾಲೆಗಳಲ್ಲಿ ಈ ವಿಷಯದ ಬಗ್ಗೆ ಕೊಡಲ್ಪಡುವ ಶಿಕ್ಷಣಕ್ರಮದಲ್ಲಿ ಏನಾ
ದರೂ ದೋಷವಿರಬಹುದು. ಬೇರೆ ಕೆಲವರು ಈಗ ಶಾಲೆಗೆ ಬರುವ ಹುಡುಗರ ಯೋಗ್ಯ
ತೆಯೇ ಕಡಿಮೆತರದ್ದಿರುವದೆಂದು ಪ್ರತಿಪಾದಿಸಬಹುದು. ಅದು ಹೇಗೇ ಇರಲಿ
ನಾವು ನಮಗೆ ದೊರಕಬಹುದಾದ ವಿದ್ಯಾರ್ಥಿಗಳಿಗೇ ಶಿಕ್ಷಣಕೊಡಬೇಕಷ್ಟೆ. ನಮ್ಮ
ಇಯತ್ತಾಪತ್ರಿಕೆಯನ್ನು ವಿದ್ಯಾರ್ಥಿಗಳ ಯೋಗ್ಯತೆಗೆ ತಕ್ಕಂತೆ ಏರ್ಪಡಿಸುವದು ನಮ್ಮ
ಕರ್ತವ್ಯವಾಗಿದೆ.

ನಮ್ಮ ಶಾಲೆಗಳಲ್ಲಿ ಅಂಕಗಣಿತದ ಶಿಕ್ಷಣದ ವಿಷಯವಾಗಿ ಕೆಳಗೆ ಉಲ್ಲೇಖಿ
ಲ್ಪಟ್ಟ ಅನುವಾದಗಳಿಗೆ ವಾಚಕರು ಚನ್ನಾಗಿ ಲಕ್ಷ್ಯಕೊಡಬೇಕೆಂದು ನನ್ನ ಸವಿನಯ
ಪ್ರಾರ್ಥನೆಯದೆ.

(೧) ಹೊಸಪದ್ಧತಿಯು ಪ್ರಚಾರದಲ್ಲಿದ್ದ ಶಾಲೆಗಳಲ್ಲಿ ವಸ್ತುಮೂಲಕ ಶಿಕ್ಷಣವ
ಮಿತಿಮೀರಿ ಹೋಗಿರುವದು. ಹುಡುಗರೂ ಶಿಕ್ಷಕರೂ ಏನೂ ಕಲಿಯದೆ ವ್ಯರ್ಥ
ದಣಿಯುವರು. ಹೊಸಮೋದರಿಯ ಉಲ್ಲಾಸದಿಂದ ಕಲಿಸುವ ಶಿಕ್ಷಕನ ಮುಖ್ಯಲಕ್ಷಣ
ವೆಂದರೆ ಅನಿಯಂತ್ರಿತವಾದ ವಾಚಲತೆ.

(೨) ಸಾಮಾನ್ಯ ಶಿಕ್ಷಕನ ಮನೋವಿಕಾಸವಾದರೂ ನಿಕೃಷ್ಟತರವಾದದ್ದಿರುತ್ತದೆ
ತನ್ನ ಮಾನಸಿಕ ಸ್ಥಿತಿಯನ್ನು ಮನೆಯಲ್ಲಿ ವಾಚನವಿಮರ್ಶಗಳ ದ್ವಾರಾ ಉನ್ನತದೆಶೆಗೆ
ತಂದುಕೊಳ್ಳಲು ಉತ್ತೇಜನವಿಲ್ಲ. ಈಗಿನ ಶಿಕ್ಷಕನ ಕೆಲಸಗಳು ಬಹಳ ಬಿಳಿದಿರುವದ
ರಿಂದ ಶಿಕ್ಷಕನಿಗೆ ಸಾಕಷ್ಟು ಅವಕಾಶವು ದೊರೆಯುವದಿಲ್ಲ. ಮಾನಸಿಕ ಶ್ರಮಕ್ಕೆ
ಅವಕಾಶವು ಅತ್ಯವಶ್ಯವಾದದ್ದೆಂಬ ಮಾತು ಹೇಳುವ ಕಾರಣವಿಲ್ಲ.

(೩) ಅಂಕಗಣಿತವು ಹೊಸ ಶಿಕ್ಷಣ ಪದ್ಧತಿಯ ಪರಿಣಾಮವನ್ನು ಪರೀಕ್ಷಿಸುವ ದಕ್ಕೆ ಅತ್ಯುತ್ತಮವಾದ ವಿಷಯವಾಗಿರುವದು. ಭೂಗೋಲ-ಇತಿಹಾಸಾದಿ ವಿಷಯ ಗಳ ಶಿಕ್ಷಣದ ಮೂಲ ಬೇರೆ. ಅಂಕಗಣಿತ ಶಿಕ್ಷಣದ ಮೂಲ ಬೇರೆ. ಭೂಗೋ ಲಾದಿ ವಿಷಯಗಳಲ್ಲಿ ಶಿಕ್ಷಕನ ಜ್ಞಾನವು ಎಷ್ಟು ಪರಿಪಕ್ವದೆಶೆಯನ್ನು ಹೊಂದಿದ್ದರೂ ಅವುಗಳಲ್ಲಿಯ ಇನ್ನೂ ಎಷ್ಟೋ ಅಂಶಗಳ ವಿಷಯವಾಗಿ ತನ್ನ ಜ್ಞಾನವು ಮಸುಮಸು ಕಾದದ್ದೆಂದು ಒಡಂಬಡಬೇಕಾಗುವದು. ಆದರೆ ಶಿಕ್ಷಕನು ಕಲಿಸಬೇಕಾಗುವ ಅಂಕ ಗಣಿತದ ಜ್ಞಾನವು ಸ್ಪಷ್ಟವಾದದ್ದೂ ಸಂಪೂರ್ಣವಾದದ್ದೂ ಇರಲು ಸಾಧ್ಯವಿದೆ. ಈ ಮುಖ್ಯ ತಾರತಮ್ಯವನ್ನು ಮರೆಯಕೂಡದು. ಮತ್ತು ಶಿಕ್ಷಕನ ಯಾವದಾದರೊಂದು ವಿಷಯದ ಜ್ಞಾನವು ಸ್ಪಷ್ಟವಿರದ ಹೊರತು ಅವನು ಬೇಕಾದಷ್ಟು ಶಿಕ್ಷಣ ಪದ್ಧತಿಯನ್ನು ಕಲಿತರೂ ಅದು ಅವನಿಗೆ ಫಲಿಸದೇ ಹೋಗುವದು. ಈ ಮೂಲ ಈಗಿನ ಶಿಕ್ಷಣ ಸುಧಾರಕರು ಸಂಪೂರ್ಣವಾಗಿ ಮರೆತಂತೆ ತೋರುವದು. ಅವರು ತಮ್ಮ ಮನಸ್ಸಿ ನಿಂದ ಈ ಮೂತಿಗೆ ಒಡಂಬಟ್ಟರೂ ಅವರ ಆಚಾರದಲ್ಲಿ ಈ ವಿಚಾರವು ಸಂಪೂರ್ಣ ವಾಗಿ ಲುಪ್ತವಾಗಿರುವದೆಂದು ಧಾರಾಳವಾಗಿ ಹೇಳಬಹುದು. ಆದ್ದರಿಂದ ಹೊಸ ಪದ್ಧತಿಯನ್ನು ಪ್ರಚಾರದಲ್ಲಿ ತರಬೇಕೆಂಬ ಉತ್ಕಟ ಇಚ್ಛೆಯುಳ್ಳವರು ಅಂಕಗಣಿತ ವಿಷ ಯವನ್ನು ತಕ್ಕೊಂಡು ಮೊದಲು ಪ್ರಯೋಗ ಮಾಡಿ ನೋಡಬೇಕು. ಈ ವಿಷಯ ವನ್ನು ಸಾಮಾನ್ಯ ಶಿಕ್ಷಕನು ಸಾಧಾರಣ ಪ್ರತಿಯ ಶಾಲೆಯಲ್ಲಿ ಹೊಸ ಪದ್ಧತಿಯಂತೆ ಕಲಿಸಿ ಹುಡುಗರನ್ನು ನಿಜವಾಗಿ ಹೆಚ್ಚು ವಿಚಾರ ಶೀಲರನ್ನು ಮಾಡಿದರೆ, ಶಿಕ್ಷಣದಲ್ಲಿ ಶಾಸ್ತ್ರೋಕ್ತವಾದ ಪದ್ಧತಿಯೊಂದಿರುವದು ಮತ್ತು ಅದರ ಲಾಭಗಳು ಅಮೌಲ್ಯವಾ ದವು ಎಂಬ ಮೂತನ್ನು ಎಲ್ಲರೂ ತಿಳಿಯಲು ಶಕ್ತರಾಗುವರು. ಅಲ್ಲಿಯ ವರೆಗೆ ಹೊಸ ಪದ್ಧತಿಯ ನಿಜವಾದ ಸ್ವರೂಪದ ಒಗ್ಗೆಯೂ ಅದರ ಉಪಯುಕ್ತತೆಯ ಬಗ್ಗೆಯೂ ಶಿಕ್ಷ ಕರ ಮನಸ್ಸಿನಲ್ಲಿ ಬಹಳ ಅಸ್ಪಷ್ಟವಾದ ಗ್ರಹಿಕೆಗಳು ಉಳಿಯುವವು.

(೪) ಪ್ರಾಥಮಿಕ ಶಾಲೆಗಳಲ್ಲಿಯ ಅಂಕಗಣಿತ ವಿಷಯದ ಈಗಿನ ಇಯತ್ತಾ ಪತ್ರಿಕೆಯಲ್ಲಿ ತಾತ್ಕಾಲಿಕ ಸುಧಾರಣೆಯು ಅತ್ಯವಶ್ಯವಾಗಿರುವದು. ಈ ಪತ್ರಿಕೆಯನ್ನು ತಯಾರಿಸುವ ಜವಾಬದಾರಿಯುಳ್ಳ ಅಧಿಕಾರಿಗಳು ಈಗಿನ ವಸ್ತುಸ್ಥಿತಿಯನ್ನು ಪರೀಕ್ಷಿಸಿ, ಸದ್ಯಕ್ಕೆ ಸಿದ್ಧಪಡಿಸಿರುವ ಇಯತ್ತಾ ಪತ್ರಿಕೆಯು ಅಯಾ ಇಯತ್ತೆಗಳ ಹುಡುಗರ ಬುದ್ಧಿ ಶಕ್ತಿಯನ್ನು ವಿಕಾಸಗೊಳಿಸಲಿಕ್ಕೆ ಯೋಗ್ಯವಾಗಿರುವದೋ ಇಲ್ಲವೋ ಎಂಬ ಬಗ್ಗೆ ಈ ಇಯತ್ತಾ ಪತ್ರಿಕೆಯನ್ನು ಪ್ರತ್ಯಕ್ಷ ಉಪಯೋಗದಲ್ಲಿ ತರುವ ಪ್ರಾಥಮಿಕ ಶಾಲೆಯ ಉಪಾಧ್ಯರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದು ನಾವು ಸೂಚಿಸುವೆವು.

(೫) ಇನ್ನು ಪರೀಕ್ಷೆಗಳ ಸಂಬಂಧದಿಂದ ಒಂದು ಮಾತು ಹೇಳುವದುಳಿಯಿತು. ಪರೀಕ್ಷಕರು ಇನ್ನೂ, ಬಿಡಿಸುವದರಲ್ಲಿ ಹೆಚ್ಚು ಕುಶಲತೆ ಬೇಕಾಗುವ ಲೆಕ್ಕಗಳನ್ನು ಕೇಳುವದೇ ಹೊರತು ವಿದ್ಯಾರ್ಥಿಗಳು ಅಂಕಗಣಿತದ ನಿಯಮಗಳನ್ನು ಸರಿಯಾಗಿ

ಉಪಯೋಗಿಸಲಿಕ್ಕೆ ಕಲಿತಿರುವನೋ ಇಲ್ಲವೋ ಮತ್ತು ಅವನಿಗೆ ತಕ್ಕಮಟ್ಟಿಗೆ ನಿಯಮಗಳ ತಿಳುವಳಿಕೆಯು ಆಗಿರುವದೋ ಇಲ್ಲವೋ ಎಂಬದನ್ನು ಪರೀಕ್ಷಿಸುವದಿಲ್ಲ ಅಂಕಗಣಿತವನ್ನು ಅಭ್ಯಾಸ ಮಾಡಿದ ಪ್ರತಿಯೊಬ್ಬ ಹುಡುಗನಿಗೆ ಅತ್ಯವಶ್ಯವಾಗಿ ಗೊತ್ತಿರಬೇಕಾದ ಅಂಶಗಳಾವವೆಂದರೆ:— ಆರಂಭದ ನಾಲ್ಕು ಕೃತಿಗಳು; ಕೋಷ್ಟಕಗಳು; ಅಪೂರ್ಣಾಂಕಗಳು; ಪ್ರಮಾಣ; ಮತ್ತು **ವ್ಯವಹಾರದಲ್ಲಿ ವಾಸ್ತವಿಕ ಪ್ರಸಂಗಗಳಲ್ಲಿ ಮೇಲಿಂದಮೇಲೆ ಇವುಗಳ ಉಪಯೋಗ ಬೀಳುವ ಲೆಕ್ಕಗಳು.** ಈ ಪ್ರಕಾರದ ಇಯತ್ತೆಯನ್ನಿಟ್ಟುಕೊಂಡು ನೋಡಿದರೆ ಹಿಂದಿನ ವರ್ಷಗಳ ಮುಲಕೀ ಪರೀಕ್ಷೆಯ ಪ್ರಶ್ನೆಗಳು ಎಷ್ಟು ಮಟ್ಟಿಗೆ ಸಮಾಧಾನಕಾರಕವಾಗಿವೆ? ಶಾಲಾ ಖಾತೆಯ ಅಧಿಕಾರಿಗಳು ಈ ಪರೀಕ್ಷೆಯು ಕಾಗದವು ಯಾವ ತರದ್ದಿರಬೇಕೆಂದೂ ಅದರಲ್ಲಿಯ ಪ್ರಶ್ನೆಗಳು ಯಾವ ತರದವಿರಬೇಕೆಂದೂ ತಮ್ಮ ಸ್ಪಷ್ಟವಾದ ಸೂಚನೆಗಳನ್ನು ವ್ಯಕ್ತಪಡಿಸುವದು ಅತ್ಯವಶ್ಯವದೆ.

ವಿದ್ಯಾಖಾತೆಯ ನೋಟೀಸುಗಳು.

ಮಿ. ಜಿ. ಬಿ. ದಿವೇಕರ ಅಕ್ಟಿಂಗ ವ್ಹಾಯಿನ್ ಪ್ರಿನ್ಸಿಪಾಲ ಟ್ರೆ ಕಾ. ಫಾರಮೆನ ಧಾರವಾಡ ಇವರು ಬರೆದ "ನಿಬಂಧ ರತ್ನಾವಲಿ" ಎಂಬ ಪುಸ್ತಕವು ಲಾಯಬ್ರರಿಗಾಗಿಯೂ, ಸೆಕಂಡರಿ ಸ್ಕೂಲುಗಳ ಮತ್ತು ಫ್ಹರ್ನ್ಯಾಕ್ಯುಲರ ಟ್ರೇನಿಂಗ ಕಾಲೇಜುಗಳ ಬಗ್ಗೆ ಇನಾಮಿನ ಪುಸ್ತಕವಾಗಿಯೂ ಮಂಜೂರು ಮಾಡಲ್ಪಟ್ಟಿದೆ.

ಧಾರವಾಡ ಎಜ್ಯುಕೇಶನಲ್ ಇನಸ್ಪೇಕ್ಟರ
ದಕ್ಷಿಣಭಾಗ ಇವರ ಆಫೀಸು.
ತಾರೀಖು ೪—೧೦—೧೯೧೭.

Sd K. S. Hungund.
ಎಜ್ಯುಕೇಶನಲ್ ಇನಸ್ಪೇಕ್ಟರ
ದಕ್ಷಿಣ ಭಾಗ.

ಮುಂಬಯಿ ಇಲಾಖೆಯೊಳಗಿನ ಸರಕಾರದ ಶಾಲಾಖಾತೆ.

ಮುಂಬಯಿ ತಾರೀಖು ೬—೯—೧೯೧೭ ಇಸವಿ.

ನಂಬರು ೫೧೮೯— ಮಿಸ್ತರ ವೆಂಕಟರಂಗೋ ಕಟ್ಟಿ ಧಾರವಾಡ ಇವರು ಕನ್ನಡದಲ್ಲಿ ರಚಿಸಿದ "ಭೂಗೋಲ ವಿದ್ಯೆಯ ಮೂಲತತ್ವಗಳು ಭಾಗ ೧" ಎಂಬ ಪುಸ್ತಕವು ಮುಂಬಯಿ ಇಲಾಖೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ ಮಂಜೂರಾದ ಪುಸ್ತಕಗಳ ಯಾದಿಯೊಳಗಿಂದ ತೆಗೆದು ಹಾಕಲ್ಪಟ್ಟಿದೆ.

ನೇಕನಾಮದಾರ ಗವ್ಹರ್ನರ ಇನ್‌ಕೌನ್ಸಿಲ ಇವರ ಅಪ್ಪಣೆಯ ಮೇರೆಗೆ

G. A. Thomas.
Secretary to Government.

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು.

ಪ್ರವೇಶ ಪರೀಕ್ಷೆಗೆ ಬರತಕ್ಕ ವಿದ್ಯಾರ್ಥಿಗಳ ಸಂಬಂಧದಿಂದ ಸಪ್ಟಂಬರ ತಿಂಗಳ ಬಲಾಪತ್ರಕದಲ್ಲಿ ನೋಟೀಸು ಪ್ರಸಿದ್ಧವಾಗಿರುವದು. ಅದರಲ್ಲಿ ಉಮೇದವಾರರು ಫಾ. ಪರೀಕ್ಷೆಯಲ್ಲಿ ನೂರಕ್ಕೆ ೪೫ ರಂತೆ ಗುಣಗಳನ್ನು ದೊರಕಿಸಿರಲಿಕ್ಕೆ ಬೇಕೆಂಬ ಯಮಕ್ಕೆ ಪುರವಣಿಯಾಗಿ ಪುನಃ ತಿಳಿಸುವದೇನಂದರೆ:—

ಕಂಟೀನ್ಯೂ ಏಶನ್ ಅಥವಾ ನಾರ್ಮಲ್ ಕ್ಲಾಸಿನಲ್ಲಿ ಪಾಸಾದ ಮೂಸ್ತರ ಜನ ಗೆ ನೂರಕ್ಕೆ ೪೫ ರಂತೆ ಗುಣಗಳನ್ನು ಪಡೆದಿರಲಿಕ್ಕೆಬೇಕೆಂಬ ಈ ನಿಯಮವು ಹತ್ತು ದಿಲ್ಲ.

ತಾ| ೨೦—೧೦—೧೯೧೩ ಟ್ರೇ. ಕಾ. ಧಾರವಾಡ

R. S. Kulkarni.
ಪ್ರಿನ್ಸಿಪಾಲ.

ನೋಟೀಸ.

ಈ ವರ್ಷ ಟ್ರೇನಿಂಗ ಕಾಲೇಜದ ಪರೀಕ್ಷೆಯನ್ನು ಕೊಟ್ಟು ಸೂಟಿಯನ್ನು ಅನುಭವಿಸುವ ವಿದ್ಯಾರ್ಥಿಗಳಿಗೆ ತಿಳಿಸುವದೇನಂದರೆ:—

ಮೊದಲನೆ ವರ್ಷದ ವಿದ್ಯಾರ್ಥಿಗಳೂ ಮೂರನೆಯ ವರ್ಷಕ್ಕೆ ಆರಿಸಲ್ಪಟ್ಟ ದ್ಯಾರ್ಥಿಗಳೂ ತಾರೀಖು ೧—೧೨—೧೯೧೩ನೇ ಇಸವಿ ಪ್ರಾತಃಕಾಲದ ೬½ ಘಂಟಿಗೆ ರಿಯೂಗಿ ಟ್ರೇನಿಂಗ ಕಾಲೇಜದಲ್ಲಿ ಹಾಜರ ಇರಬೇಕು.

೨ನೇ ಮತ್ತು ೩ನೇ ವರ್ಷದ ವಿದ್ಯಾರ್ಥಿಗಳು ತಾರೀಖು ೨೬-೧೧-೧೯೧೩ನೇ ಸವಿ ಪ್ರಾತಃಕಾಲದ ೬½ ಘಂಟಿಗೆ ಸರಿಯಾಗಿ ಟ್ರೇನಿಂಗ ಕಾಲೇಜದಲ್ಲಿ ಹಾಜರ ರಬೇಕು. ಈ ದಿವಸದಿಂದ ಡಾಕ್ತರ ಪರೀಕ್ಷೆಯು ಪ್ರಾರಂಭವಾಗುವದು. ತಿಳಿಯು ದು.

೧೬—೧೦—೧೩ ಧಾರವಾಡ

R. S. Kulkarni.
ಪ್ರಿನ್ಸಿಪಾಲ.

ವರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆಯು
ದಕ್ಷಿಣಭಾಗ.

೧೯೧೩ನೇ ಇಸವಿಯ ಜೂನ ತಿಂಗಳ ೨೪ನೆಯ ತಾರೀಖಿನ ಮುಂಬಯಿ ಸರಕಾರದ ಗ್ಯಾಝೆಟಿನ ೧ನೆಯ ಭಾಗದ ೧೬೨೧—೧೬೨೪ ಪುಟಗಳಲ್ಲಿ ಪ್ರಸಿದ್ಧಪಡಿಸಿದ **ವಿದ್ಯಾಖಾತೆಯ ಸರಕಾರೀ ಠರಾವ ನಂಬರ ೧೭೫೮ (ಅ) ತಾರೀಖು ೧೪ನೇ ಜೂನ**

೧೯೧೭ ಇಸವಿಯ ನಿಯಮಗಳ ಮೇರೆಗೆ ಸನ್ ೧೯೧೮ನೆಯ ಇಸವಿಯ ಸಪಟಂಬರ ತಿಂಗಳಲ್ಲಿ ಆಗುವ ವ್ಹರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆಗೆ ಕೆಳಗೆ ಬರೆದ ಪುಸ್ತಕಗಳು ನಿಯಮಿಸಲ್ಪಟ್ಟಿರುತ್ತವೆ:—

ಮರಾಠಿ.

ಗದ್ಯ:— ವಿದ್ಯಾಖಾತೆಯ ಕ್ರಮಿಕ ೩ನೆಯ ಪುಸ್ತಕ (೧೯೧೮ನೆಯ ಇಸವಿಯ ಆವೃತ್ತಿ) ಪೂರಾ.

ಪದ್ಯ:— ವಿದ್ಯಾಖಾತೆಯ ಕ್ರಮಿಕ ೩ನೆಯ ಪುಸ್ತಕದೊಳಗಿನ ೩೬, ೪೦, ೪೪, ೪೮, ೫೧ ಮತ್ತು ೫೩ ನೇ ಪಾಠಗಳೊಳಗಿನ ಪದ್ಯಗಳ ೩೦ ಸಾಲುಗಳನ್ನು ಬಾಯಿಪಾಠ ಅನ್ನುವದು ಮತ್ತು ಅರ್ಥ ಹೇಳುವದು.

ಕನ್ನಡ.

ಗದ್ಯ:— ವಿದ್ಯಾಖಾತೆಯ ಕ್ರಮಿಕ ೩ನೆಯ ಪುಸ್ತಕ ಸಂಪೂರ್ಣ.

ಪದ್ಯ:— ವಿದ್ಯಾಖಾತೆಯ ಕ್ರಮಿಕ ೩ನೆಯ ಪುಸ್ತಕದೊಳಗಿನ ಪ್ರಾರಂಭದ ಪದ್ಯಗಳ ೩೦ ಸಾಲುಗಳನ್ನು ಬಾಯಿಪಾಠ ಅನ್ನುವದು ಮತ್ತು ಅರ್ಥ ಹೇಳುವದು.

ಊರ್ದು.

ಗದ್ಯ:— ಊರ್ದು ಮಿಡಲ್‌ಕೋರ್ಸ, ಭಾಗ ೨, (ಪಂಜಾಬ) ಪುಟ ೬೫ ರಿಂದ ೧೨೭ ರ ವರೆಗೆ.

ಪದ್ಯ:— "ಮುಸದ್ದಸ-ಇ-ಹಲಿ" ಯೊಳಗಿನ ೫೦ ಮುಸದ್ದಸಗಳು. ಅಥವಾ ೨೫ನೇ ಮುಸದ್ದಸದಿಂದ ೩೦ ಅರ್ಧ ಪದ್ಯಗಳು.

Office of the Educational Inspector, S. D.
DharWar 26th September 1917.

Sd/ K. S. **Hungund**
Educational Inspector, S. D.

ಈ ವರ್ಷದ ಟ್ರೇನಿಂಗ ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪರಿಣಾಮವು

೩ನೆಯ ವರ್ಷ.

ಧಾರವಾಡ ಜಿಲ್ಲಾ:—೨೫ ರೂ. ಸರ್ಟಿಫಿಕೇಟು ಪಡೆದವರು:—೧ ಅ. ಗು. ಬಸರಕೋಡ ೨ ಗೆ. ಬ. ಜೋತಿ ೩ ಮು. ಗ. ನಾಗನೂರ ೨೦ ರೂ. ಸರ್ಟಿಫಿಕೇಟುಗಳು ಪಡೆದವರು:—೧ ಬಿ. ಎ. ಕಳಕಾಪೂರ ೨ ನಾ. ಭಾ. ಮೂಸೂರ ೩ ಶ್ರೀ. ಅ. ಪುರೋಹಿತ ೪ ಅ. ಗ. ಕಲಾಯಗಾರ ೫ ಮೂ. ಇ. ಹಾನಗಲ್ಲ ೬ ಹೊ. ರು. ಕರಡಿ ೭ ಶಿ. ಫ. ಕಟ್ಟೀಮನಿ.

ಬೆಳಗಾವ ಜಿಲ್ಲಾ:–೨೦ ರೂ. ಸರ್ಟಿಫಿಕೇಟು ಪಡೆದವರು:— ೧ ಅ. ಮು. ಹುಕ್ಕೇರಿ ೨ ಬ. ಸಿ. ಅಂಗಡಿ ೩ ನಿ. ಅ. ಶೇಡಬಾಳಕರ ೪ ದಾ. ಸು. ಎಡ್ರಾಮಿ.

ವಿಜಾಪೂರ ಜಿಲ್ಲಾ:—೨೦ ರೂ. ಸರ್ಟಿಫಿಕೇಟು ಪಡೆದವರು:— ೧ ಸ. ಸಿ. ರೋಡಿಗ ೨ ನಾ. ಗು. ಅಗರಖೇಡ ೩ ರಾ. ಯ. ಮೊಧವನವರ ೪ ದ. ಧು. ಕರ್ನಾಳ ೫ ಹ. ಫ. ಅತ್ತಾರ ೬ ಶ್ರಿ. ಲಿ. ಆಲೂರ ೭ ಭೀ. ಶ್ರಿ. ಗೋವೇಕರ.

ಕಾರವಾರ ಜಿಲ್ಲಾ:—೨೫ ರೂ. ಸರ್ಟಿಫಿಕೇಟ ಪಡೆದವರು:— ೧ ರಾ. ಪ. ಭಟ್ಟ ೨ ಸಿ. ನ. ಹೆಗಡೆ ೩ ಶಾ. ತಿ. ಭಟ್ಟ. ೨೦ ರೂ. ಸರ್ಟಿಫಿಕೇಟು ಪಡೆದವರು:—೧ ಅ. ಯು. ಚಿತ್ತರಿಗ ೨ ವೀ. ರ. ದೇವಳಿ.

ಸಾಂಗಲಿ ಸಂಸ್ಥಾನ–೨೦ ರೂ. ಸರ್ಟಿಫಿಕೇಟು ಪಡೆದವರು:—೧ ವಾ. ರಾ. ಮಹಿಷಿ.

ಮಿಶನ್:- ೨೦ ರೂ. ಸರ್ಟಿಫಿಕೇಟು ಪಡೆದವರು:—**ಪು.** ಅ. ರಂಗರೇಜಿ.

೨ನೆಯ ವರ್ಷದಿಂದ ೩ನೆಯ ವರ್ಷಕ್ಕೆ ಇಡಲ್ಪಟ್ಟವರು.

ಧಾರವಾಡ ಜಿಲ್ಲಾ:-೧ ಶಿ. ಫ. ಭಂಡಿವಾಡ ೨ ಕೃ. ಸು. ಜೋಶಿ ೩ ರ. ಲ. ಕುಲಕರ್ಣಿ ೪ ಲ. ಗೋ. ಪವಾರ ೫ ದೇ. ಚ ನಾಂಸಿ ೬ ಫ. ಹ. ನಾಂಸಿಮತ ೭ ಕೋ. ಪಿ. ಮಾಸನಕಟ್ಟಿ ೮ ಮ. ಬಾ. ಮುಲ್ಲಾ.

ಬೆಳಗಾವ ಜಿಲ್ಲಾ:– ೧ ಶ. ಬಾ. ಜೋಶಿ ೨ ಗು. ಶ್ರೀ. ಕಾನಗೋ ೩ ರಾ. ದೇ. ಪಾಟೀಲ ೪. ಅ. ಅ. ಮುಲ್ಲಾ.

ವಿಜಾಪೂರ ಜಿಲ್ಲಾ:– ೧ ಲ. ಭಿ. ಗುಮಾಸ್ತೆ ೨ ಪ್ರ. ಭಿ. ಹೂಯಿಲ ಗೋಳ ೩ ಗು. ಸಾ. ಕನ್ನೂರಕರ ೪ ಶ. ಕಾ ಕುಲಕರ್ಣಿ ೫ ಗು. ಅ. ಕುಲಕರ್ಣಿ ೬ ಅ. ಹ. ಮುಲ್ಲಾ.

ಕಾರವಾರ ಜಿಲ್ಲಾ:– ೧ ಗ. ರಾ. ಉಗ್ರು.

೧ ಕ. ಕ. ತಳವಾರ
೨ ಮ. ಅ. ಮುಲ್ಲಾ
೩ ಮ. ಹ. ಸೈಯದ

ಇವರು ಒಂದೊಂದು ವಿಷಯದಲ್ಲಿ ನಪಾಸಾದ್ದರಿಂದ ಆಯಾ ವಿಷಯಗಳ ಪೂರ್ಣ ಅಭ್ಯಾಸದ ಬಗ್ಗೆ ಕಾಲೇಜದ ೨ನೇ ವರ್ಷದಲ್ಲಿ ಒಂದು ಟರ್ಮಿನವರೆಗೆ ಇಟ್ಟಿದೆ.

ಮೊದಲನೆಯ ವರ್ಷದ ಎಲ್ಲ ವಿದ್ಯಾರ್ಥಿಗಳು ೨ನೆಯ ವರ್ಷಕ್ಕೆ ಇಡಲ್ಪಟ್ಟಿರುವರು.

ಟ್ರೇ. ಕಾ, ಧಾರವಾಡ
೩—೧೧—೧೯೧೭

R. S. Kulkarni
ಪ್ರಿನ್ಸಿಪಾಲ.

ನೋಟೀಸು.

ಮಿಸ್ತರ ಡಿ. ವೆಂಕಟರಾವ ಇವರಿಂದ ರಚಿತವಾದ "ಕಂಡರಗಾರ್ಟನ್ ಶಿಕ್ಷಣ ಕ್ರಮ" ಎಂಬ ಪುಸ್ತಕವು ಬ್ಹಸ್ಸ್ಯಾಕ್ಯುಲರ ಬುಕ್ ಕಮೀಟಿಯ ಮೆಂಬರ ಜನರ ಅನುಮತಿಯ ಪ್ರಕಾರ ಕೇವಲ ಪ್ರಾಥಮಿಕ ಶಾಲೆಗಳ ಲಾಯಬ್ರರಿಯ ಬಗ್ಗೆ ಮಂಜೂರ ಮಾಡಲ್ಪಟ್ಟಿರುತ್ತದೆ.

Office of the Educational Inspector, S. D.
Dharwar, 20th October.

K. S. Hungund.
Educational Inspector S. D.

ಪತ್ರಗಳ ಸಾರಾಂಶ.

ಬಾದಾಮಿ ತಾಲೂಕು ಪಟ್ಟದಕಲ್ಲು ನಾಲೆಯು ಮೂಸ್ತರ ಮಿ. ಶಿವಪ್ಪಾ ಕಲ್ಲಪ್ಪಾ ಅಕ್ಕಿ ಇವರು ವಿಜಯದಶಮಿಯು ದಿವಸ ಸ್ಕೂಲ ಪಂಚರು ಮತ್ತು ಪ್ರಮುಖಗ್ರಹಸ್ಥರನ್ನು ಕೂಡಿಸಿ ಮಹಾಯುದ್ಧಯು ತೀವ್ರ ಮುಗಿದು, ನಮ್ಮ ಬಾದಶಹರಿಗೆ ಜಯ ಪ್ರಾಪ್ತಿಯಾಗಲೆಂದು ಪ್ರಾರ್ಥನೆ ಮಾಡಿದೆವೆಂತಲೂ ಮತ್ತು ಕೆಳಗೆ ಬರೆದ ಗ್ರಹಸ್ಥರು ಕೆಳಗೆ ಬರೆದಪ್ರಕಾರ ಧನದ ಸಹಾಯ ಮಾಡಿದರೆಂತಲೂ ತಿಳಿಸುತ್ತಾರೆ.

ಶ್ರೀಮಂತ ಭಾಸ್ಕರಪ್ಪ, ಯಲಗುದ್ದಪ್ಪ, ದೇಸಾಯಿ ಇವರು ೬–೧೫ ರೂ. ಜಿಲೆಯ ಮುತಂಗಟೆಯನ್ನು ಉದಾರಬುದ್ಧಿಯಿಂದ ತರಿಸಿಕೊಟ್ಟರು.

ಶ್ರೀಯುತ ಪಾಂಡುರಂಗ ಗುರುರಾವ ಕುಲಕರ್ಣಿ	೨	ಶಿವಮೂರ್ತಿ ಪರಯ್ಯ ಪೂಜಾರಿ	೧
,, ಗೋವಿಂದ ಭೀಮರಾವ ಕುಲಕರ್ಣಿ	೨	,, ಬಸಲಿಂಗಯ್ಯ ಪೂಜಾರಿ	೧
ಶಿವಮೂರ್ತಿ ಗಿಡ್ಡಯ್ಯ ರಾಚಯ್ಯ ಪೂಜಾರಿ	೧	,, ಅಡವಯ್ಯ ಪೂಜಾರಿ	೧
,, ಗುರುಸಿದ್ದಯ್ಯ ಪೂಜಾರಿ	೧	,, ಕಳಕಯ್ಯ ಕಾತ್ರಾಳ	೧
ಶ್ರೀಮತಿ ರಾಜವ್ವಾ ಪೂಜಾರಿ	೧	,, ಹೊಸಪ್ಪ ಹಲಗ್ಗೇರಿ.	೧
,, ಹಣಮವ್ವಾ ಪೂಜಾರಿ	೧	,, ನಿಂಗಪ್ಪ ಕೊಟ್ಣಳ್ಳಿ	೧
ಶ್ರೀಯುತ ರುದ್ರಗೌಡಾ ಗೌಡ್ರ	೧	,, ಚೌಡಪ್ಪ ಕೌಜಗೇರಿ	೧
,, ಚಿನ್ನಪ್ಪ ಪತ್ತಾರ	೧	,, ನಿಂಗಪ್ಪ ಬೇನಾಳ	೧
,, ಕಳಕನಗೌಡಾ ಗೌಡ್ರ	೧	,, ನಾಗಪ್ಪ ಹೊಸಗೌಡ್ರ	೧
,, ಬಸಪ್ಪ ನಾರಥಿ	೧	,, ನೂರಸಾಹೇಬ ಪಿಂಜಾರ	೧
,, ಚನ್ನಪ್ಪ ತೋಟಗೇರ	೧	,, ಬಾಲಪ್ಪ ಪಿಂಜಾರ	೧
,, ವೀರಪ್ಪ ಕಮ್ಮಾರ	೧	,, ಗಂಟಿಪ್ಪ ಬಡಿಗೇರ	೧
,, ಫಕೀರಪ್ಪ ದೇಸಾಯಿ	೧	,,	

ಈ ಪ್ರಕಾರ (೨೭) ಇಪ್ಪತ್ತೇಳು ರೂಪಾಯಿ ವರ್ಗಣಿ, ಗಡಿಯಾಲ ಉಪಕರಣಗಳ ಬಗ್ಗೆ ಕೊಟ್ಟರು.

ಈ ಪ್ರಕಾರ ಸಹಾಯನೂಡಿದ್ದು ಮೇಲಿನ ಸಗ್ಗ್ರಹಸ್ಥರಿಗೆ ಭೂಷಣವಾದದ್ದು.

ಸ್ಲಾಯಿಡ ಅಥವಾ ಹಸ್ತಶಿಕ್ಷಣಪದ್ಧತಿ.

ಉಪದಾನಗಳ ಸಿದ್ಧತೆ.

ಬೇರೆ ಬೇರೆ ಮೂದರಿಗಳನ್ನು ಮೂಡಿಸುವ ಪೂರ್ವದಲ್ಲಿ ಶಿಕ್ಷಕನು ವರ್ಗದಲ್ಲಿದ್ದ ವಿದ್ಯಾರ್ಥಿಗಳ ಸಂಖ್ಯೆಯಷ್ಟು ಕಾಗದಗಳನ್ನು ತಯಾರಿಸಿ ಇಟ್ಟುಕೊಂಡಿರಬೇಕು. ಈ ಕೆಲಸದಲ್ಲಿ ಉಪಯೋಗಿಸುವ ರಾಯಲ ಮೆಲ್ಟನ್, ಬ್ರಿಸ್ಟಲಬೋರ್ಡ ಮುಂತಾದವು ೨೮ ಫೂ. ಉದ್ದ, ೨೨ ಫೂ. ಅಗಲವಾದವಿರುವವು. ಮೂದರಿಗಳಿಗೆ ಬೇಕಾಗುವ ಕಾಗದವನ್ನಷ್ಟೇ ಕತ್ತರಿಸಿ ಸಿದ್ಧಮಾಡಿ ಇಟ್ಟುಕೊಳ್ಳಬೇಕು. ಈ ಕಾಗದವನ್ನು ಇದರಷ್ಟೇ ಆಕಾರದ ಕಟ್ಟಿಗೆಯ ಹಲಿಗೆಯ ಮೇಲೆ ಇಟ್ಟು, ಕತ್ತರಿಸಬಹುದಾದ ಭಾಗಗಳ ಗುರ್ತು ಮಾಡಿಕೊಂಡು, ಬಳಿಕ ೨ ಫೂಟಿನಷ್ಟು ಉದ್ದವಿರುವ ಒಂದು ಉಕ್ಕಿನ ಪಟ್ಟಿಯನ್ನು ಗುರ್ತುಗಳಿಗೆ ಸರಿಯಾಗಿ ಇಟ್ಟು ಅದನ್ನು ಗಟ್ಟಿಯಾಗಿ ಒಂದು ಕೈಯಿಂದ ಹಿಡಿದು ದಪ್ಪ ಕಾಗದ ಕತ್ತರಿಸುವ ಚಾಕುವಿನಿಂದ ಕೊರೆದು ಸರಿಯಾದ ತುಂಡುಗಳನ್ನು ತಯಾರಿಸಬೇಕು.

೬ ಇಂಚು ಚೌರಸಿನಲ್ಲಿ ಮೂದರಿಯನ್ನು ತಯಾರಿಸುವದಿದ್ದರೆ ೬೪ ಇಂಚು ಚೌರಸ ಕಾಗದವನ್ನು ಕತ್ತರಿಸಿ ಕೊಡಬೇಕು. ಅಂದರೆ ವಿದ್ಯಾರ್ಥಿಗಳು ಅದರ ಸುತ್ತಲೂ ೪ ಇಂಚಿನಷ್ಟು ಭಾಗವನ್ನು ಬಿಟ್ಟು ಮಧ್ಯದಲ್ಲಿ ಆಕೃತಿಯನ್ನು ತೆಗೆದು ಮೂದರಿಗೆ ಬೇಕಾದ ಸರಿಯಾದ ಕಾಗದವನ್ನು ತಯಾರಿಸುವರು. ಕೆಲವರು ೬೪ ಇಂಚಿನ ಸರಿಯಾದ ಚೌರಸವನ್ನು ಯಂತ್ರಗಳ ಸಹಾಯದಿಂದ ತಯಾರಿಸಿ ಕೊಡಬೇಕೆಂದು ಹೇಳುವರು. ಇದರಿಂದ ಮೊದಲನೆಯ ವರ್ಷದ ಮೂದರಿಗಳನ್ನು ಮೂಡುವಾಗ ಚಿಕ್ಕ ಮಕ್ಕಳಿಗೆ ಕೋನಗಳ (ಮೂಲೆಗಳ) ರಚನೆಯು ಸುಲಭವಾಗಿ ತಿಳಿಯುವದು. ಎರಡನೆಯ ವರ್ಷದ ಕೆಲಸದಲ್ಲಿಯೂ ಈರೀತಿಯಾಗಿ ಮೂಡುವ ಕಾರಣವಿಲ್ಲ. ಕೈಯಿಂದ ಸರಾಸರಿ ಕತ್ತರಿಸಿದ ಕಾಗದಗಳನ್ನು ಕೊಟ್ಟು ಹುಡುಗರಿಗೆ ಕಾಟ ಕೋನಗಳನ್ನು ರಚಿಸಹೇಳಿ ಚೌರಸವನ್ನು ಇಲ್ಲವೆ ಕಾಟಕೋನ ಚೌಕೋನವನ್ನು ತಯಾರಿಸಲಿಕ್ಕೆ ಹಚ್ಚಬೇಕು. ಸರಿಯಾದ ಚೌರಸಗಳನ್ನೂ ಕಾಟಕೋನ ಚೌಕೋನಗಳನ್ನೂ ಛಾಪಖಾನೆಯವರು ತುಸುಹಣ ತೆಗೆದುಕೊಂಡು ಕತ್ತರಿಸಿ ಕೊಡುವರು.

ಮೂದರಿಗಳು.

ಪೇಪರ ಸ್ಲಾಯಿಡದಲ್ಲಿ ಮೂರುವರ್ಷದ ಕೆಲಸವಿರುವದು. ಮೊದಲನೆಯ ವರ್ಷದಲ್ಲಿ ೧೩, ೨ನೆಯ ವರ್ಷದಲ್ಲಿ ೧೪, ೩ನೆಯ ವರ್ಷದಲ್ಲಿ ೧೨ ಮೂದರಿಗಳನ್ನು ಮೂಡತಕ್ಕದ್ದಿರುವದು. ಮೂದರಿಗಳ ಕ್ರಮವನ್ನು ಶಿಕ್ಷಣದ ಮಹತ್ವದ ತತ್ವಗಳಿಗನುಸಾರವಾಗಿ ಸೊತ್ತುಮಾಡಿರುವದು ಎಲ್ಲರಿಗೂ ಸಹಜವಾಗಿ ತಿಳಿಯುವಂತಿದೆ. ಮೊದ

ಲನೆಯ ವರ್ಷದವರು ಅತಿಸುಲಭವಾದ ಮೊದಲಿಗಳನ್ನು ಮಾಡುತ್ತ ಮಾಡುತ್ತ ಕಠಿಣವಾದ ಮೊದರಿಗಳ ಕಡೆಗೆ ಹೋಗುತ್ತಾರೆ. ಮುಖ್ಯವಾಗಿ ಮೊದರಿಗಳ ಕ್ರಮವನ್ನು ಗೊತ್ತು ಪಡಿಸುವಾಗ, ಅದರಲ್ಲಿ ಮೂಡತಕ್ಕ ಕೃತಿಗಳನ್ನು ಲಕ್ಷದಲ್ಲಿ ತೆಗೆದು ಕೊಂಡಿರುವದೂ ಕೂಡ ಸುಲಭವಾಗಿ, ತಿಳಿಯುವಂತಿದೆ. ಕೇವಲ ಇವೇ ಮೊದರಿಗಳನ್ನು ಮಾಡಿಸಬೇಕೆಂಬ ಅವಶ್ಯವಲ್ಲ. ಅಮೇರಿಕಾ, ಇಂಗ್ಲಂಡ ಮುಂತಾದ ದೇಶಗಳಲ್ಲಿ ಹಲವರು ಇವುಗಳ ಹೊರತಾಗಿ ಬೇರೆ ಬೇರೆ ತರದ ಮೊದರಿಗಳನ್ನು ಮಾಡಿಸುತ್ತಿರುವರು.

ಹಿಂದುಸ್ಥಾನದಲ್ಲಿಯೂ ಹುಡುಗರಿಗೆ ಸೇರುವಂಥ ಮೊದರಿಗಳು ಬಹಳವಿದ್ದರೆ ಒಳ್ಳೆಯದು. ಬೇಕಾದ ಮೊದರಿಗಳೇ ಇರಲಿ; ಅವುಗಳ ಅನುಕ್ರಮವು ಸುವ್ಯವಸ್ಥಿತವಾಗಿರಬೇಕು. ಸುಲಭ ಕೃತಿಗಳಿಂದ ಕಠಿಣ ಕೃತಿಗಳ ಕಡೆಗೆ ಸಾಗಿರಬೇಕು. ಮತ್ತು ಆಕೃತಿಗಳು ಚಿಕ್ಕ ಮಕ್ಕಳಿಗೆ ಉಪಯುಕ್ತವಾದಂಥವಿರಬೇಕು. ಸ್ಲಾಯಿಡಪದ್ಧತಿಗೂ ತತ್ವಗಳಿಗೂ ಅನುಸಾರವಾಗಿ ಮತ್ತು ಕೆಲವು ದಿವಸಗಳ ಅನುಭವಕ್ಕೊಳಗಾಗಿ ಅಮೇರಿಕೆಯಲ್ಲಿಯ 'ಎಡವಾ ಲ್ಯನರಿಚ' ಎಂಬ ಸ್ಲಾಯಿಡ ಶಿಕ್ಷಿಕೆಯೊಬ್ಬಳು ಕೆಳಗೆ ಕೊಟ್ಟ ಪಟ್ಟಿಯಲ್ಲಿದ್ದ ಮೊದರಿಗಳನ್ನು ಆರಿಸಿರುವಳು. ಇವುಗಳನ್ನು ಮೂರು ವರ್ಷಗಳ ಅವಧಿಯಲ್ಲಿ ಕಲಿಸಿದರೆ ನಾಲ್ಕನೆಯ ವರ್ಷದಲ್ಲಿ ಪ್ರಾರಂಭಿಸಬಹುದಾದ (ಸ್ಲಾಯಿಡ ಪದ್ಧತಿಯಿಂದ ಮಾಡುವ) ಕಟ್ಟಿಗೆಯ ಕೆಲಸಕ್ಕೆ ಬಹಳ ಅನುಕೂಲವಾಗುತ್ತದೆಂದು ಅವರು ಹೇಳುವರು.

ಮೊದಲನೆಯ ವರ್ಷದ ಮೊದರಿಗಳು.

	ಇಂಚು		ಇಂಚು
೧ ಪಾಕೀಟು	೬ × ೬	೮ ಹೂವಿನ ಬುಟ್ಟಿ	೬ × ೬
೨ ಪತ್ರಗಳ ಚೀಲ	೬ × ೬	೯ ಪೇನ್ಸಿಲ ಪೆಟ್ಟಿಗೆ	೯ × ೪
೩ ಚಿತ್ರದ ಕಟ್ಟು	೬ × ೬	೧೦ ಬೀಸಣಿಕೆ	೧೨ × ೬
೪ ಗಾಳಿಯ ಚಕ್ರ	೪ × ೪	೧೧ ಪೆಟ್ಟಿಗೆ	೮ × ೮
೫ ಕತ್ತರಿಯ ಚೀಲ	೫ × ೫	೧೨ ಪುಸ್ತಕಾವರಣ	೬ × ೮
೬ ತಟ್ಟೆ	೬ × ೬	೧೩ ಪುಸ್ತಕದ ಪುಟಗಳು	೪ × ೬
೭ ಪುಟಾಂಕ(ಬುಕ್‌ಮಾರ್ಕ)	೨ × ೪	೧೪ ಬುಟ್ಟಿ	೬ × ೬

ಎರಡನೆಯ ವರ್ಷದ ಮೊದರಿಗಳು.

೧ ಟೇಬಲ್	೨ × ೩½	*೮ ಹಣಿಗೆಯನ್ನಿಡುವದು	೩½ × ೯
೨ ತಿಕೀಟುಗಳ ಚೀಲ	೩ × ೪½	೯ ಸೂಚಿಗಳನ್ನಿಡುವದು	೫ × ೧೧
೩ ತ್ರಿಕೋಣಾಕೃತಿಯ ಬುಟ್ಟಿ	೮ × ೮ × ೮	೧೦ ಪಾಕೀಟು	೭ × ೧೦½
೪ ಕಾಗದಪತ್ರಗಳನ್ನಿಡುವದು	೯ × ೧೨	*೧೧ ಪತ್ರಗಳ ಚೀಲ	೬ × ೮
೫ ದಾರ ಸುತ್ತಿಡುವದು	೨ × ೨	೧೨ ಚಿತ್ರದ ಕಟ್ಟು	೫ × ೧೦

೬ ಪೆನ್ಸಿಲು ತಿಕ್ಕುವದು ೩½ × ೩½ ೧೩ ರಿಬನ್ನುಗಳ ಪೆಟ್ಟಿಗೆ ೯ × ೧೧½
೭ ಕರವಸ್ತ್ರದ ಪೆಟ್ಟಿಗೆ ೫½ × ೯½ ೧೪ ಟಾಕಿನ ತುದಿಗಳನ್ನಿ
ಡುವ ಪೆಟ್ಟಿಗೆ ೪ × ೬

ಮೂರನೆಯ ವರ್ಷದ ಮಾದರಿಗಳು.

೧ ಸಣ್ಣ ಹಣಿಗೆಯನ್ನಿಡುವ
ಚೀಲ ೩ × ೫½
೨ ಪಿರಾಮಿಡದಂತಿರುವ ಹೂ
ವಿನ ಬುಟ್ಟಿ
೩ ಕೋನಾಕೃತಿಯ ಬುಟ್ಟಿ } ೬ × ೬
೪ ಕೋಷ್ಟ ಕಾರ್ಡುಗಳನ್ನಿ
ಡುವ ಚೀಲ ೬ × ೧೧½
೫ ಷಟ್ಕೋಣಾಕೃತಿಯ ತಟ್ಟೆ ೬ × ೬
೬ ಟಾಚಣಿಗೆಗಳನ್ನಿಡುವ ಘನ ೩ × ೬½
*೭ ಕುಂಚಗಳನ್ನಿಡುವದು
ಹಿಂಭಾಗ ೬½ × ೧೦
ಮುಂಭಾಗ ೪½ × ೬
*೮ ಅಳತೆಯ ಪಟ್ಟಿ ೧ × ೬
೯ ಕ್ಯಾಲೆಂಡರ
(ಅ) ಹಿಂಭಾಗ ೫½ × ೧೨
(ಬ) ಮುಂದೆ ಹಚ್ಚುವ
ಪತ್ರಗಳು ೩½ × ೩½
೧೦ ಹಿಗ್ಗುವ ಪಾಕೀಟು ೯½ × ೧೧½
೧೧ ಪೆಟ್ಟಿಗೆ ಮುಚ್ಚಳಸಹಿತ
ಪೆಟ್ಟಿಗೆ ೪½ × ೫½
ಮುಚ್ಚಳ ೪½ × ೫½

೧೨ ವರ್ತುಲಾಕೃತಿಯ ಚಿತ್ರದ
ಕಟ್ಟು ೫ × ೫
೧೩ ಪುಷ್ಪ ಪತ್ರ
ರಟ್ಟು ೫½ × ೭½
ರಟ್ಟಿನ ಹಿಂಭಾಗಕ್ಕೆ
ಹಚ್ಚುವ ಕಾಗದ ೫ × ೭½
ಮೂಲೆಗಳು ೨½ × ೫
ಒತ್ತಿಬರಡು ೨ ೫ × ೭½
೧೪ ದಾರದಉಂಡಿಗಳನ್ನಿಡುವದು ೬½ × ೬½
*೧೫ ಪೆಟ್ಟಿಗೆ
ಹೊರಭಾಗ ೬½ × ೬½
ಒಳಭಾಗ ೫½ × ೯½
೧೬ ಪತ್ರಗಳನ್ನು ಇಡುವದು
ಹಿಂಭಾಗ ೪½ × ೧೦½
ಮುಂದಿನ ೨ ಪಾಕಿಟಗಳು ೪½ × ೬½
*೧೭ ಟೊಪ್ಪಿಗೆಯ ಪೆಟ್ಟಿಗೆ
೧೮ ಮನೆ
ಗೋಡೆ ೬½ × ೧೧½
ನೆಲಮಾಳಿಗೆ ೫½ × ೪½
ಹೊಗೆಯ ಕೊಂಡಿ ½ × ೨½

ಮೇಲೆ ಕಾಣಿಸಿದ ಮೂರು ವರ್ಷಗಳ ಮಾದರಿಗಳಲ್ಲಿ ಈಗುರ್ತು ಇದ್ದ ಮಾದರಿಗಳನ್ನು ಪೇಳಿಸಾಲದ ಪಕ್ಷದಲ್ಲಿ ಬಿಟ್ಟು ಬಿಡಬಹುದು. ಅಯಾ ಮಾದರಿಗಳಿಗೆ ಬೇಕಾಗಿರುವ ಕಾಗದಗಳ ಅಳತೆಯನ್ನು ಇಂಚುಗಳ ರೂಪದಿಂದ ಅವುಗಳ ಮುಂದೆ ಕೊಟ್ಟಿರುತ್ತದೆ.

ಕಲೆಗಳಬಗ್ಗೆ ಲಕ್ಷದಲ್ಲಿಡತಕ್ಕ ಸೂಚನೆಗಳು.

ಪೇಪರ ಸ್ಲಾಯಿಡದ ಕೆಲಸ ನಡೆದಾಗ ಹಲವು ಉಪಕರಣಗಳ ಉಪಯೋಗವನ್ನು ಮಾಡಬೇಕಾಗುತ್ತದಷ್ಟೇ; ಅವುಗಳ ಬಗ್ಗೆಯೂ ಹಲವು ಕೃತಿಗಳ ಬಗ್ಗೆಯೂ ಕೆಳಗಿನ ಸೂಚನೆಗಳನ್ನು ಮನನ ಮಾಡಿಕೊಳ್ಳಬೇಕು.

ಫೂಟು ಕಟ್ಟಿಗೆ: — ಈ ಅಳತೆಯ ಪಟ್ಟಿಯನ್ನು ರೇಷೆಗಳನ್ನು ಹೊಡೆಯಲಿಕ್ಕೆ ಉಪಯೋಗಿಸಿದಾಗ ಮರೆಯದೆ ಗಟ್ಟಿಯಾಗಿ ಹಿಡಿಯಬೇಕು. ಚಿಕ್ಕ ಮಕ್ಕಳಿಗೆ ಅವರ ಎಡಗೈಯ ಹೆಬ್ಬಟ್ಟನ್ನು ಮೊದಲಿನ ಎರಡು ಇಲ್ಲವೇ ಮೂರು ಬೆರಳುಗಳನ್ನು ಅಳತೆಯ ಪಟ್ಟಿಯ ಮೇಲೆ ಹೇಗೆ ಇಡಬೇಕೆಂಬದನ್ನು ಕಲಿಸಬೇಕು. ಈ ಎಲ್ಲ ಬೆರಳುಗಳನ್ನು ಕೆಲವು ಅಂತರದ ಮೇಲೆ ಇಡಬೇಕು. ಎಡಗೈಯು ತೋಳಿಗೆ ಕಾಟ ಕೋನವಾಗಿರಬೇಕು. ಮತ್ತು ಅದು ಮೇಜಿನ ಮೇಲ್ಬದಿಗೆ ತಾಕದಂತೆ ಇರಬೇಕು. ವಿದ್ಯಾರ್ಥಿಯು ತೀರ ಸಣ್ಣವನಿದ್ದು ಮೇಜು ತುಸು ಎತ್ತರವಾದದ್ದಾದರೆ ಅವನಿಗೆ ಎದ್ದು ನಿಂತು ಕೆಲಸಮಾಡಲಿಕ್ಕೆ ಪರವಾನಗಿ ಕೊಡಬೇಕು

ಪೆನ್ಸಿಲು: — ಪೆನ್ಸಿಲಿನಿಂದ ಗೆರೆ ಹೊಡೆಯುವಾಗ ಫೂಟು ಕಟ್ಟಿಗೆಯ ಇಳಿಜಾರಾದ ಭಾಗಕ್ಕೆ ಹಚ್ಚಿ ಪೆನ್ಸಿಲವನ್ನು ಗಟ್ಟಿಯಾಗಿ ಕೈಯಲ್ಲಿ ಹಿಡಿದು ಗೆರೆಯನ್ನು ಹಗುರಾಗಿಯೂ ತೀವ್ರವಾಗಿಯೂ ಒಂದೇ ಹೊಡತದಿಂದ ಎಳೆಯಬೇಕು. ಚಿಕ್ಕ ಮಕ್ಕಳಿಗೆ ಪೆನ್ಸಿಲಿನಿಂದ ಒಂದು ಬಿಂದುವನ್ನು ತೆಗೆಯ ಹೇಳಿದರೆ ಅವರಲ್ಲಿ ಬಹಳಮಾಡಿ ದೊಡ್ಡ ಬಿಂದುವನ್ನು ಬರೆಯುವ ರೂಢಿಯಿರುವ ಸಂಭವವಿರುವದು. ಆದ್ದರಿಂದ ಮೊದಲು ಪೆನ್ಸಿಲವನ್ನು ಲಂಬವಾಗಿ ಹಿಡಿದು ಹಗುರಾಗಿ ಅದನ್ನು ಮುಂದಕ್ಕೊಮ್ಮೆ ಹಿಂದಕ್ಕೊಮ್ಮೆ ಮಾಡಿ ಬಿಂದುವನ್ನು ಕೊಡಲಿಕ್ಕೆ ಹೇಳಬಹುದು. ಎರಡು ಬಿಂದುಗಳನ್ನು ಕೂಡಿಸಿದರೆ ಒಂದೇ ಸರಳ ಇಲ್ಲವೆ ವಕ್ರರೇಷೆಯಾಗುವದೆಂದು ಅನೇಕ ಉದಾಹರಣೆಗಳಿಂದಸ್ಪಷ್ಟೀಕರಿಸಬೇಕು.

ಕಂಪಾಸು: — ಮೊದಲು ಕಂಪಾಸಿನ ತುದಿಯನ್ನು ಪೆನ್ಸಿಲಿನ ತುದಿಯನ್ನು ಸರಿಯಾಗುವಂತೆ ಮಾಡಬೇಕು. ಬೇಕಾದ ಅಳತೆಗೆ ಅವನ್ನು ತೆರೆಯಬೇಕು. ಕಂಪಾಸಿನ ತುದಿಯನ್ನು ಬಿಂದುವಿನ ಮೇಲೆ ಇಡಬೇಕು. ಎಡಗೈಯಿಂದ ಕಾಗದವನ್ನು ಅಲ್ಲಾಡದಂತೆ ಸರಿಯಾಗಿ ಹಿಡಿಯಬೇಕು. ಬಳಿಕ ಕಂಪಾಸಿನ ತಲೆಯನ್ನಾಗಲಿ ಪೆನ್ಸಿಲಿನ ಮೇಲ್ಗಡೆಯನ್ನಾಗಲಿ ಹಿಡಿದು ಹಗುರಾಗಿಯೂ ತೀವ್ರವಾಗಿಯೂ ವರ್ತುಲ, ಅರ್ಧವರ್ತುಲ ಮುಂತಾದವುಗಳನ್ನು ತೆಗೆಯಬೇಕು.

ಪತ್ರವ್ಯವಹಾರವು.

ವಿ. ಗೋ. ವೆಂ. ಶಾಡಂಬಿ ಅ|| ಮಾಸ್ತರ ಹುಬ್ಬಳ್ಳಿ ಇವರು ಕಳಿಸಿದಕೂಟಪ್ರಶ್ನ:—

ನಾವೀರ್ವ ವೃದ್ಧರು ಮೂಟದಿಂದೋಟದಿಂದೂಟದಿಂದೊಂದೇ ಮೆಟ್ಟಿನವರಾಗಿರುತ್ತಿರಲು, ಪಟ್ಟನೆ ತಕ್ಕರಾಗಿರುವ ಕಟ್ಟು ತಪ್ಪಿದ್ದರಿಂದ ಮೊಟ್ಟಮೊದಲಿನ ಗುಟ್ಟು ಪಟ್ಟಾಗಿ ಪ್ರತಿಪೊರಮಟ್ಟ ಕಾಲಕ್ಕೆ ದ್ವಿಜರೆಂಬ ನಾಮಸಂಕೀರ್ಣವಂಪಟ್ಟು ಓರ್ವನು ಗೂಡಿಗೆ ಸುಟಕನಾಗಿಯೂ, ಇನ್ನೋರ್ವನು ಮುಕುಟನಾಗಿಯೂ ಇರ್ದೆವು. ಮೊಟ್ಟಮೊದಲಿನ ನಾಮಕ್ಕೂ, ಕಟ್ಟಕಡೆಗಿನ ನಾಮಕ್ಕೂ ಒಟ್ಟಾಗುವದು, ಕಟ್ಟಾಯಿತು. ಅಂದಮೇಲೆ ನಮ್ಮೀರ್ವರವಿಕಟರ ಹೆಸರೇನೆಂಬ ಗುಟ್ಟನ್ನು ಪಟ್ಟಣಿಗರಾದವರು ತಮಗೆ ಮುಟ್ಟಿದ ಪತ್ರಿಕೆಯಲ್ಲಿ ಕೊಟ್ಟೀರೆಂದು ಆಶಿಸುವೆನು.

ಗುರುವರ್ಯ ರಾವಸಾಹೇಬ ಕನ್ನಡ ಶಾಲಾಪತ್ರಕದ ಸಂಪಾದಕ ದೊರೆಗಳವರ ಸನ್ನಿಧಿಗೆ—

ನಾ|| ನ|| ವಿ. ವಿ. ಕೆಳಗಿನ ನಾಲ್ಕು ಮಾತುಗಳಿಗೆ ತಮ್ಮ ಮಾಸಪತ್ರಿಕೆಯಲ್ಲಿ ಸ್ಥಳದೊರೆಯಬೇಕೆಂದು ವಿಜ್ಞಾಪಿಸುತ್ತೇನೆ.

ಕನ್ನಡದಲ್ಲಿ ಭಾವೇಪ್ರಯೋಗ ಉಂಟೋ?

ಭಾವೇ ಪ್ರಯೋಗದ ವಿಷಯವಾಗಿ ಈ ಮೊದಲು ಹಲಕೆಲವು ಚರ್ಚೆಗಳಾಗಿದ್ದರೂ ಪೂರ್ವಪಕ್ಷ ಸಮಾಧಾನಗಳಿಗೆ ತಕ್ಕ ಅನುಕೂಲತೆಗಳು ಇಲ್ಲದ್ದರಿಂದ ಅದು ಒಂದುಸಾರೆಯಾದರೂ ಕೊನೆಗಾಣುವ ಪ್ರಸಂಗವು ಬಂದಿಲ್ಲ; ಆದ್ದರಿಂದ ಈ ಲೇಖದ ಮುಖಾಂತರವಾಗಿ ಆ ಸಂಬಂಧದ ವಿಚಾರಗಳನ್ನು ಕರ್ನಾಟಕಭಾಷಾಭಿಜ್ಞರೆದುರಿಗೆ ಇಡಬೇಕೆನ್ನುತ್ತೇನೆ.

ನುಡಿಗಟ್ಟಿನಲ್ಲಿ ಭಾವೇಪ್ರಯೋಗವು ಎಲ್ಲಿಂದ ಬಂತು? ಎಂದು ವಿಚಾರಿಸಿದರೆ ಅದು ಬಹುಶಃ ಮಹಾರಾಷ್ಟ್ರ ಮುಂತಾದ ಅನ್ಯಭಾಷೆಗಳಿಂದ ಅವತರಿಸಿತೆಂದು ಊಹಿಸಬೇಕಾಗುವದು. ನುಡಿಗಟ್ಟು ಹೊಸದಾಗಿ ರಚಿಸಲ್ಪಟ್ಟ ಸ್ವತಂತ್ರ ವ್ಯಾಕರಣವಲ್ಲವೆಂದು ತೋರುತ್ತದೆ. ಯಾಕಂದರೆ, ಅದರೊಳಗಿನ ಬಹುಶಃ ಎಲ್ಲ ಸೂತ್ರಗಳು ಶಾಲಾವ್ಯಾಕರಣವೆಂಬ ಅದರ ಹಿಂದಿನ ವ್ಯಾಕರಣದೊಳಗಿನ ಸೂತ್ರಗಳನ್ನು ಸಂಪೂರ್ಣವಾಗಿ ಹೋಲುತ್ತವೆ. ಶಾಲಾವ್ಯಾಕರಣವೆಂಬ ಹೆಸರಿನ ಪುಸ್ತಕವು ಬಹುಶಃ ಮಹಾರಾಷ್ಟ್ರ ಮುಂತಾದ ಅನ್ಯಭಾಷೆಗಳೊಳಗಿನ ವ್ಯಾಕರಣಗಳನ್ನು ಹೋಲುತ್ತದೇ ಹೊರ್ತು ಕನ್ನಡದೊಳಗಿನ ವ್ಯಾಕರಣಗಳ ಕ್ರಮವನ್ನಾಗಲಿ, ಕನ್ನಡ ವ್ಯಾಕರಣಗಳಿಗೂ ಭಾಷಾಭಿವೃದ್ಧಿಗೂ ಮೂಲವಾದ ಸಂಸ್ಕೃತಭಾಷೆಯೊಳಗಿನ ವ್ಯಾಕರಣ ಕ್ರಮ

ವನ್ನಾಗಲಿ ಹೋಲುವದಿಲ್ಲ. ಇದಕ್ಕೆ ಕೆಲವರು ಆಕ್ಷೇಪಿಸಿದ್ದೇನಂದರೆ " ಸಂಸ್ಕೃತ ಭಾಷೆಯೊಳಗಿನ ಮೂರು ಪ್ರಯೋಗಗಳು ಕನ್ನಡದಲ್ಲಿರುವದು ಅವಶ್ಯವಿರುತ್ತದೆ. ಮತ್ತು ಆ ಪ್ರಕಾರ ಅವು ನುಡಿಗಟ್ಟಿನಲ್ಲಿ ಇದ್ದೇ ಇರುವವು. ಅಂದ ಮೇಲೆ ಸಂಸ್ಕೃತ ವ್ಯಾಕರಣ ಕ್ರಮವನ್ನು ನುಡಿಗಟ್ಟು ಮುಂತಾದ ವ್ಯಾಕರಣಗಳ ಕರ್ತರು ಅನುಸರಿಸಿಲ್ಲ ಏಂಬದು ಹ್ಯಾಗೆ?" ಇದರ ಉತ್ತರವೇನಂದರೆ, ಸಂಸ್ಕೃತದೊಳಗಿನ ಮೂರು ಪ್ರಯೋಗಗಳು ಕನ್ನಡದಲ್ಲಿ ಬಂದದ್ದರಿಂದ ನುಡಿಗಟ್ಟು ಮುಂತಾದ ವ್ಯಾಕರಣಗಳ ಕರ್ತರು ಸಂಸ್ಕೃತ ವ್ಯಾಕರಣ ಕ್ರಮವನ್ನಾಗಲಿ, ಕನ್ನಡ ವ್ಯಾಕರಣ ಕ್ರಮವನ್ನಾಗಲಿ ಸಂಪೂರ್ಣವಾಗಿ ಅನುಸರಿಸಿದಂತಾಯಿತೆಂದು ಹೇಳಲಾಗುವದಿಲ್ಲ. ಇದರಂತೆ ಹಲಕೆಲವು ಪಾರಿಭಾಷಿಕ ಶಬ್ದಗಳೂ, ಸಂಜ್ಞೆಗಳೂ ಅನುಕರಿಸಲ್ಪಟ್ಟಿರುವವು. ಆದರೆ ಇವೆಲ್ಲ ಕೇವಲ ಸಾಧನಗಳೇ ಹೊರತು ವ್ಯಾಕರಣದ ಕ್ರಮವಲ್ಲ ತಮಿಳ ಮುಂತಾದ ಬೇರೆ ಸುಧಾರಿಸಿದ ದ್ರವಿಡಭಾಷೆಯೊಳಗಿನ ವ್ಯಾಕರಣಗಳ ಕರ್ತರು ಪಾರಿಭಾಷಿಕ ಶಬ್ದಗಳನ್ನು ಕೂಡ ಆ ಭಾಷೆಗಳೊಳಗಿನವೇ ಮಾಡಿಕೊಂಡಿರುವರಂತೆ. ಇದರ ಮೇಲಿಂದ ಒಂದೇ ಭಾಷೆಯ ವ್ಯಾಕರಣವು ಬೇರೊಂದು ಭಾಷೆಯೊಳಗಿನ ವ್ಯಾಕರಣವನ್ನು ಸಂಪೂರ್ಣವಾಗಿ ಹೋಲುವದು ಅವಶ್ಯವಿಲ್ಲೆಂದು ತೋರುವದು. ಸಂಸ್ಕೃತವು ಸಂಪೂರ್ಣ ಸುಧಾರಿಸಿದ ಭಾಷೆಯಾದ್ದರಿಂದ ಆ ಸಂಬಂಧವಾಗಿ ಆ ಭಾಷೆಯಲ್ಲಿ ಅನೇಕ ಉದ್ಗ್ರಂಥಗಳು ಇರುವವು. ಅವುಗಳನ್ನಾಗಲಿ, ಉಳಿದ ಅನ್ಯದೇಶೀಯ ಭಾಷೆಗಳ ವ್ಯಾಕರಣಗಳನ್ನಾಗಲಿ ಸಂಪೂರ್ಣವಾಗಿ ಕನ್ನಡದಲ್ಲಿ ಭಾಷಾಂತರಿಸಿದರೆ ಕನ್ನಡ ಭಾಷೆಗೆ ಸರಿಯಾದ ವ್ಯಾಕರಣವಾಗಲಾರದು. ಆದರೆ ಅನೇಕ ಸಂಗತಿಗಳು ಎಲ್ಲ ಭಾಷೆಯ ವ್ಯಾಕರಣಗಳೆಲ್ಲಿಯೂ ಸಾಮಾನ್ಯವಾಗಿರುತ್ತವೆಂಬುದು ನಿರ್ವಿವಾದ ಮಾತು. ಆದರೂ ಪ್ರತಿಯೊಂದು ಭಾಷೆಯ ವಿಶೇಷ ಲಕ್ಷಣಗಳು ಸ್ವತಂತ್ರವಾಗಿರುತ್ತವೆಂಬುದು ಸಿದ್ಧಾಂತವಾದ ಸಂಗತಿಯು. ಇದಕ್ಕೆ ಕರ್ಣಾಟಕ ವ್ಯಾಕರಣಕಾರರು ಅನೇಕ ಸಂಗತಿಗಳಲ್ಲಿ ಸ್ವತಂತ್ರ ವಿಚಾರವುಳ್ಳ ವ್ಯಾಕರಣ ಗ್ರಂಥಗಳನ್ನು ರಚಿಸಿರುವದೇ ಪ್ರಮಾಣವು. ವ್ಯಾಕರಣ ಸಂಬಂಧವಾಗಿ ಇಷ್ಟು ವಿವೇಚನವು ಸದ್ಯಕ್ಕೆ ಸಾಕು. ಇನ್ನು ಪ್ರಕೃತ ವಿಷಯವನ್ನು ಕುರಿತು ವಿಚಾರಮಾಡೋಣ.

ದರ್ಪಣಕಾರನು ಆಖ್ಯಾತ ಪ್ರಕರಣದ ಕಡೆಯಲ್ಲಿ

..... ಸಕರ್ಮಕದಲ್ |
ಪ್ರಯುಕ್ತ ಪಡುಧಾತು ಸರ್ವ ಧಾತುಗೆ ಯಕ್ಕುಂ || ೨೫೧ ||

ಎಂಬ ಕಂದಭಾಗದಿಂದ ಕರ್ಮಣಿ ಪ್ರಯೋಗವನ್ನು ಸೂಚಿಸಿರುವನು. ಇದರ ಹೊರ್ತಾಗಿ ಪ್ರಯೋಗಗಳ ವಿಷಯವಾಗಿ ಅವನು ಯಾವ ಸಂಗತಿಯನ್ನೂ ಹೇಳಿದಂತೆ ತೋರುವದಿಲ್ಲ. ಇದರ ಮೇಲಿಂದ ದರ್ಪಣಕಾರನ ಮತದಲ್ಲಿ ಭಾವೇ ಪ್ರಯೋಗವು ಇಲ್ಲೆಂದು ಊಹಿಸಬಹುದಾಗಿದೆ.

ಶಾಸನಕಾರನು ಚತುರ್ಥಪಾದದ ಮೊದಲನೆಯ ಸೂತ್ರದವ್ಯಾಖ್ಯಾನದಲ್ಲಿ—

ತಿಙ್ಸ್ಞಿಙ್ಕಾಸ್ತು ಸಂಸ್ಕೃತೇ ಕರ್ತರಿ ಕರ್ಮಣಿ ಭಾವೇಚ ಭವಂತಿ|
ಭಾಷಾಯಾಂತು ಕರ್ತೃ ಕರ್ಮಣೋರೇವ ನ ಭಾವೇ ||

ಎಂತಲೂ, ಳಳಳ ನೆಯ ಸೂತ್ರದ ವ್ಯಾಖ್ಯಾನದಲ್ಲಿ

|| ತಥಾ ತಿಙನ್ತ ಪ್ರಯೋಗೋಪಿದ್ವೇಧಾ ಕರ್ತರಿ ಪ್ರಯೋಗಃ ಕರ್ಮಣಿ ಪ್ರಯೋಗಶ್ಚೇತಿ ||

ಎಂಬದಾಗಿಯೂ, ಃಕಿಂ ನೆಯ ಸೂತ್ರದ ವ್ಯಾಖ್ಯಾನಾರಂಭದಲ್ಲಿ

|| ಧಾತೋಃ ಕರ್ಮಣಿ ಕರ್ತರೀಡ ತಿಙ್ಭವತೀತ್ಯುಕ್ತಂ ಪ್ರಾಕ್ ||

ಎಂತಲೂ ಹೇಳಿರುತ್ತಾನೆ. ಇವುಗಳಿಂದ ಶಾಸನಕಾರನಮತದಿಂದಲೂ ಕನ್ನಡದಲ್ಲಿ ಭಾವೇ ಪ್ರಯೋಗವು ಇಲ್ಲೆಂದು ಸ್ಪಷ್ಟವಾಗಿ ತೋರುವದು.

ಇದಲ್ಲದೆ ಶಾಸನಕಾರನು ಕರ್ಮಣಿ ಪ್ರಯೋಗದ ದೆಸೆಯಿಂದ ಹ್ಯಾಗೆ ಃಕಿಂ ನೆಯ ಸೂತ್ರವನ್ನು ರಚಿಸಿರುವನೋ ಹಾಗೆ ಭಾವೇ ಪ್ರಯೋಗದ ದೆಸೆಯಿಂದ ಸೂತ್ರವನ್ನು ರಚಿಸಿಲ್ಲವೆಂದು ಪ್ರತ್ಯೇಕವಾಗಿ ಹೇಳುವ ಕಾರಣವಿಲ್ಲ.

ಇದರ ಮೇಲಿಂದ ಕನ್ನಡ ವ್ಯಾಕರಣಕಾರರ ಅಭಿಪ್ರಾಯದ ಮೇಲಿಂದ ಈ ಭಾಷೆಯಲ್ಲಿ ಭಾವೇ ಪ್ರಯೋಗವು ಇಲ್ಲೆಂದು ಸ್ಪಷ್ಟವಾಗಿ ತೋರುವದು, ಇನ್ನು ಸದ್ಯದ ನುಡಿಗಟ್ಟಿನೊಳಗಿನ ಭಾವೇ ಪ್ರಯೋಗದ ವಿಚಾರವೇನು? ಅದರೊಳಗಿನ ಉದಾಹರಣೆಗಳನ್ನು ಯಾವ ಪ್ರಯೋಗದಲ್ಲಿ ಸೇರಿಸಬೇಕು. ಎಂಬ ಪ್ರಶ್ನೆಯು ಉದ್ಭವಿಸುವದು. ಇದರ ಉತ್ತರವೇನಂದರೆ— ಬಾರದು, ಕೂಡದು, ಆಗದು, ಬೇಕು ಮುಂತಾದ ಕ್ರಿಯಾರೂಪಗಳು ಕಡೆಯಲ್ಲಿರುವ ವಾಕ್ಯಗಳನ್ನು ಕರ್ತರಿ ಪ್ರಯೋಗವೆಂದು ತಿಳಿಯಬೇಕೆಂತಲೂ ಕರ್ಣಾಟಕ ವ್ಯಾಕರಣಕಾರರು ಸ್ಪಷ್ಟವಾಗಿ ಹೇಳುತ್ತಾರೆ. ಉದಾಹರಣಾರ್ಥವಾಗಿ "ನೀನಿದಂ ನಂಬಲಾಗದು" ಈ ವಾಕ್ಯವು ಕರ್ತರಿ ಪ್ರಯೋಗದ್ದೆಂದು ಶಾಸನಕಾರನು ಃಲಳ ನೆಯ ಸೂತ್ರದ ವ್ಯಾಖ್ಯಾನದಲ್ಲಿ ಸ್ಪಷ್ಟವಾಗಿ ಹೇಳಿರುತ್ತಾನೆ. ಮತ್ತು ಬಾರದು, ಕೂಡದು, ಆಗದು ಮುಂತಾದವು ಅಖ್ಯಾತಗಳಾದರೂ ಅವ್ಯಯಗಳೆಂದು ಶಾಸನದ ೧೯ ನೆಯ ಸೂತ್ರದಲ್ಲಿ ಇರುತ್ತದೆ.

ಇದೇ ವಿಚಾರದಿಂದ ಮೈಸೂರ ದೇಶದ "ಶಬ್ದಾದರ್ಶ" ವೆಂಬ ಹೊಸಗನ್ನಡ ವ್ಯಾಕರಣಕಾರರು ಭಾವೇ ಪ್ರಯೋಗದ ಹೆಸರನ್ನೇ ಎತ್ತಿರುವದಿಲ್ಲ. ಆ ವ್ಯಾಕರಣದ ಕರ್ತರು ಯಾರೆಂಬದನ್ನೂ, ಕನ್ನಡ ಭಾಷೆಯಲ್ಲಿ ಅವರ ಯೋಗ್ಯತೆಯು ಎಷ್ಟಿರುವದೆಂಬದನ್ನೂ, ಅವರು ವ್ಯಾಕರಣ ರಚನೆಯ ವಿಷಯದಲ್ಲಿ ಅನುಸರಿಸಿದ ಕ್ರಮವನ್ನೂ ವಿಚಾರಿಸಿದರೆ "ಕನ್ನಡದಲ್ಲಿ ಭಾವೇಪ್ರಯೋಗ ಉಂಟೋ?" ಎಂಬ ಪ್ರಶ್ನೆಗೆ "ಇಲ್ಲ" ಎಂಬ ಉತ್ತರವು ನಿರ್ವಿವಾದವಾಗಿ ಬರುವದೆಂದು ಸ್ಪಷ್ಟವಾಗಿ ಹೇಳಲಿಕ್ಕೆ ಅಡ್ಡಿ ಇಲ್ಲ.

ಸಂಪಾದಕರ ದೊರೆಗಳೇ, ವಿಷಯದ ಮಹತ್ವದಿಂದ ಪತ್ರವಿನ್ಯಾರಕ್ಕೆ ಕ್ಷಮಿಸಬೇಕೆಂದು ವಿಜ್ಞಾಪಿಸುವೆನು.

ಮಿಶ್ರೀಕೋಟಿ. ಶಾ|| ೧೯-೧೦-೧೯೧೩ } ದತ್ತಾತ್ರಯ ವೆಂಕಟೇಶ ಜೋತಿ, ಹೆಡ್ ಮಾಸ್ತರ ಮಿಶ್ರೀಕೋಟಿ.

ಪತ್ರಗಳ ಸಾರಾಂಶ.

ಕಾರವಾರ ತಾಲೂಕು ಚಂಡಿಯೆ ಶಾಲೆಯ ಅಸಿ|| ಮಾಸ್ತರ ಮಿ. ರಾ. ಗ. ಹೈ ಎವರು ತಮ್ಮಲ್ಲಿಯ ಪ್ರಮುಖ ಜನರಾದ ಮಿ. ಪಾಲೇಕರ ಸ್ಕೂಲಪಂಚ ೧೦ ರೂ. ಮಿ. ಶೇಣವಿ ಅಸಿ|| ಮಾಸ್ತರ ೧೦ ರೂ. ಮಿ. ಜ್ಯೋತಿಷಿ ತೊಡೂರ ೧೦ ರೂ. ಮಿ. ಹಬ್ಬು ಪಾಟೀಲ ೫ ರೂ. ಮಿ ಶೇಣವಿ ಸ್ಕೂಲಪಂಚ ೫ ರೂ. ಮಿ. ಶೆಟ್ಟಿ ತೊಡೂರ ೫ ರೂ. ಮತ್ತು ವಿದ್ಯಾರ್ಥಿಗಳು ಇತರ ಜನರು ಕೂಡಿ ೧೫ ರೂ. ೮ ಆಣೆ. ಹರಿಶ್ಚಂದ್ರ ನಾಟಕ ಪ್ರಯೋಗ ನೋಡಿದವರು ೭ ರೂ. ಈ ಪ್ರಕಾರ ೬೭ ರೂ. ೮ ಆಣೆಗಳನ್ನು ಕೊಟ್ಟು ಆ ಹಣವನ್ನು ವಾರಲೋನದಲ್ಲಿಟ್ಟು ಅದರಿಂದ ಬರುವ ಉತ್ಪನ್ನವನ್ನು ಪ್ರತಿವರುಷ ವಿದ್ಯಾರ್ಥಿಗಳ ಇನಾಮಿನ ಬಗ್ಗೆ ಉಪಯೋಗಿಸಲಿಕ್ಕೆ ಒಪ್ಪಿಕೊಂಡಿರುತ್ತಾರೆಂದು ತಿಳಿಸುತ್ತಾರೆ. ಈ ಪ್ರಕಾರ ಸಹಾಯಮಾಡಿದ್ದು ಅವರಿಗೆ ಭೂಷಣವಾದದ್ದು.

ಹುಬ್ಬಳ್ಳಿಯ ಮಿಶನ್ ಡಿಪ್ರೆಸ್ಡ ಕ್ಲಾಸುಗಳ ಸುಪರಿಂಟಿಂಡೆಂಟರಾದ ಮಿಸ್ತರ ಡಿ. ಎನ್. ಪಟವರ್ಧನ ಇವರು ತಮ್ಮ ಹಗಲು ಮತ್ತು ರಾತ್ರಿಯ ಆರು ಶಾಲೆಗಳ ವಿದ್ಯಾರ್ಥಿಗಳೂ ಮತ್ತು ಮಾಸ್ತರರೂ ಕೂಡಿ ೩೦ ರೂಪಾಯಿಗಳ ಕ್ಯಾಶ್ ಸರ್ಟಿಫಿಕೇಟುಗಳನ್ನು ತೆಗೆದುಕೊಂಡಿರುವರೆಂತಲೂ, ಅದರಿಂದ ಬಂದ ಉತ್ಪನ್ನವನ್ನು ಆಟದಲ್ಲಿ ಪ್ರಾವೀಣ್ಯವನ್ನು ಪಡೆದ ವಿದ್ಯಾರ್ಥಿಗಳ ಉತ್ತೇಜನಾರ್ಥವಾಗಿ ಇನಾಮು ಕೊಡುವದು ಗೊತ್ತುಮಾಡಿರುವದೆಂತಲೂ ತಿಳಿಸುತ್ತಾರೆ. ಅಸ್ಪೃಶ್ಯ ಜಾತಿಯ ವಿದ್ಯಾರ್ಥಿಗಳ ಈ ಪ್ರಕಾರದ ಉದಾಹರಣೆಯು ಮೂದರಿ ತೆಗೆದುಕೊಳ್ಳತಕ್ಕಂಥಾದ್ದಿರುವದು.

ಸಿದ್ದಾಪೂರ ತಾಲೂಕು ಬೇಡಕಣಿ ಶಾಲೆಯ ಮಾಸ್ತರ ಮಿ. ಅ. ವಿ. ಪ್ರಭು ಇವರು ತಮ್ಮ ಶಾಲೆಯಲ್ಲಿ ಶಾರದಾ ಪೂಜೆಯ ನಿಮಿತ್ತವಾಗಿ ಸಭೆಯನ್ನು ಕೂಡಿಸಿ, ಜನರು ವಾರಲೋನ ಕೊಡುವ ಬಗ್ಗೆ ಮತ್ತು ಯುದ್ದದಲ್ಲಿ ಸೇರುವ ಬಗ್ಗೆ ವ್ಯಾಖ್ಯಾನ ಕೊಟ್ಟು ಪ್ರೋತ್ಸಾಹಗೊಳ್ಳುವಂತೆ ಮಾಡಿದೆವೆಂದು ತಿಳಿಸುತ್ತಾರೆ.

ಶಾಲಾಪತ್ರಕ.

ಪುಸ್ತಕ ೫೩. | ಡಿಸೆಂಬರ ೧೯೧೩. | ಸಂಚಿಕೆ ೧೨.

ಅಂಧಜನರ ಉನ್ನತಿ.

ಹಿಂದುಸ್ತಾನದಲ್ಲಿ ಶಿಕ್ಷಣದ ಪ್ರಸಾರವೂ ಸುಧಾರಣೆಯೂ ಈಗ ಒತ್ತರದಿಂದ ನಡೆದಿರುವದು. ಈ ಮಾತಿಗೆ ಒತ್ತಾಯದ ಪ್ರಾಥಮಿಕಶಿಕ್ಷಣವೂ ಸ್ತ್ರೀವಿದ್ಯಾಭ್ಯಾಸದ ಪ್ರಸಾರವೂ ಅಸ್ಪೃಶ್ಯಜಾತಿಯ ಶಿಕ್ಷಣವೂ ಇವುಗಳ ಸಂಬಂಧದಿಂದ ನಡೆದ ಪ್ರಯತ್ನಗಳೂ ಮತ್ತು ಬೇರೆಬೇರೆ ಜಾತಿಯವರು ವಿದ್ಯಾಪ್ರಸಾರದ ಬಗ್ಗೆ ಸ್ಥಾಪಿಸಿದ ಸಂಸ್ಥೆಗಳೂ ಫಂಡುಗಳೂ ಸಾಕ್ಷೀಭೂತವಾಗಿರುವವು. ಸ್ತ್ರೀಯರು, ಅಸ್ಪೃಶ್ಯಜಾತಿಯವರು ಮೊದಲಾದವರಿಗಿಂತ ಅಂಧಜನರು ವಿದ್ಯಾದಾನವನ್ನು ಹೊಂದಲಿಕ್ಕೆ ಹೆಚ್ಚು ಪಾತ್ರರಿರುವರು. ದೃಷ್ಟಿ ಇಲ್ಲದವರಿಗೆ ಅರ್ಧಲೋಕವೇ ಇಲ್ಲದಂತಾಗಿರುತ್ತದೆ. ಅವರಿಗೆ ಸೃಷ್ಟಿಯೊಳಗಿನ ಪದಾರ್ಥಗಳ ಜ್ಞಾನಮಾಡಿಕೊಳ್ಳಲಿಕ್ಕೆ ಬೇಕಾಗುವ ಮುಖ್ಯವಾದ ನೈಸರ್ಗಿಕ- ಸಾಧನವೇ ಇರದಿರುವದರಿಂದ ಅವರು ಜ್ಞಾನಶೂನ್ಯರೂ ಪರಾವಲಂಬಿಗಳೂ ಆಗಿರಬೇಕಾಗುತ್ತದೆ. ಅವರ ಸ್ವಂತ ಜೀವನಕ್ರಮವು ಉತ್ಸಾಹರಹಿತವಾಗಿದ್ದು ಅವರಿಂದ ಸಮಾಜಕ್ಕೆ ಭಾರವಾಗಿರುತ್ತದೆ. ಸಮಾಜದಲ್ಲಿ ಅಂಧಜನರ ಸಂಖ್ಯೆಯಾದರೂ ಕಡಿಮೆಇಲ್ಲ. ಮತ್ತು ಆ ಸಂಖ್ಯೆಯು ದಿನದಿನಕ್ಕೆ ಬೆಳೆಯುತ್ತ ನಡೆದಿರುವದು. ಆದ್ದರಿಂದ ಅಂಧಜನರ ಉನ್ನತಿಯ ವಿಷಯವಾಗಿ ಸುಧಾರಿಸಿದ ರಾಷ್ಟ್ರಗಳಲ್ಲಿ ಕೆಲವು ಕಾಲದಿಂದ ಪ್ರಯತ್ನಗಳು ನಡೆದಿರುವವು. ಅದರಂತೆ ನಮ್ಮ ದೇಶದಲ್ಲಿಯಾದರೂ ಈ ಪ್ರಯತ್ನವು ನಡೆಯುವದು ಇಷ್ಟವಾವದ್ದು. ಈ ಬಗ್ಗೆ ಮೈಸೂರಿನಲ್ಲಿ ಇತ್ತಲಾಗಿ ಒಂದು ಸಂಘವು ಸ್ಥಾಪಿತವಾಗಿದ್ದು ಅವರು 'ಲಾಯಿಟ್ ಟು ದಿ ಬ್ಲಾಯಿಂಡ' ಎಂಬ ತ್ರೈಮಾಸಿಕ ಪುಸ್ತಕವನ್ನು ಆಂಗ್ಲಭಾಷೆಯಲ್ಲಿ ಪ್ರಸಿದ್ಧಪಡಿಸುತ್ತಿರುವರು. ಈ ಸಂಸ್ಥೆಯವರು ಸರಕಾರದವರ ಸಹಾಯವನ್ನು ತೆಗೆದುಕೊಂಡು ಅಲ್ಲಲ್ಲಿ ಕುರುಡರ ಶಾಲೆಗಳನ್ನು ಸ್ಥಾಪಿಸುವ ಬಗ್ಗೆಯೂ ಇತರರೀತಿಯಿಂದ ಅವರನ್ನು

ಸುಧಾರಿಸುವಬಗ್ಗೆಯೂ ಪ್ರಯತ್ನವನ್ನು ನಡಿಸಿರುವರು. ಅಂಧಜನರ ಶಿಕ್ಷಣದಬಗ್ಗೆ ಶಾಲೆಗಳ ಅವಶ್ಯಕತೆಯು ಇದ್ದಂತೆ ಅಂಧಜನರ ಶಿಕ್ಷಣವನ್ನು ಕೊಡಲಿಕ್ಕೆ ಯೋಗ್ಯರಾದ ಶಿಕ್ಷಕರ ಅವಶ್ಯಕತೆಯೂ ಇರುವದು. ಕಣ್ಣುಇದ್ದ ಜನರಿಗೆ ಶಿಕ್ಷಣವನ್ನು ಕೊಡುವವರಿಂದ ಕಣ್ಣುಇಲ್ಲದ ಜನರಿಗೆ ಶಿಕ್ಷಣವನ್ನು ಕೊಡುವದು ಸುಲಭವಲ್ಲೆಂಬಮಾತು ತುಸು ವಿಚಾರಮಾಡಿದರೆ ತಿಳಿಯುವಂತೆಅದೆ. ಕೂಸು ಹಾಲುಕುಡಿಯುವಾಗ ಅತ್ತದ್ದನ್ನು ಕೇಳಿ, ಬಳಿಯಲ್ಲಿದ್ದ ಕುರುಡನ ಪ್ರಶ್ನೆಗೆ ಉತ್ತರವನ್ನು ಕೊಡುವದರಲ್ಲಿ ಆದ ಗೊಂದಲವನ್ನು ವಿವರಿಸುವ ದಂತಕಥೆಯನ್ನು ಧ್ಯಾನದಲ್ಲಿತಂದರೆ, ಯೋಗ್ಯಶಿಕ್ಷಣದ ಕ್ರಮವನ್ನು ಅರಿತ ಜನರು ಎಷ್ಟು ಅಪರೂಪವಾಗಿರುವರೆಂಬದು ಸ್ಪಷ್ಟವಾಗುತ್ತದೆ. ಆದ್ದರಿಂದ ನಿಜವಾಗಿ ಶಿಕ್ಷಣದ ಕಲೆಯನ್ನು ಕಲಿಯಬೇಕೆಂಬ ಶಿಕ್ಷಕರು ಸ್ವಾರ್ಥದೃಷ್ಟಿಯಿಂದಾದರೂ ಅಂಧಜನರ ಶಿಕ್ಷಣವನ್ನು ಕೈಕೊಳ್ಳಬೇಕೆಂಬದಾಗಿ ನಾವು ಅವರನ್ನು ಪ್ರೋತ್ಸಾಹಿಸುವೆವು.

ಈ ಶಿಕ್ಷಣದಬಗ್ಗೆ ವಿಶೇಷಸಂಗತಿಗಳನ್ನು ದೊರಕಿಸುವದಕ್ಕೆ ಉತ್ಸುಕರಾದ ಶಿಕ್ಷಕರು ಮಿಸ್ಟರ ಪಿ. ಎನ್. ವೆಂಕಟರಾವ ಎಡಿಟರ 'ಲಾಯಿಟ್ ಟುದಿ ಬ್ಲಾಯಿಂಡ' ಮೈಸೂರು ಇವರಿಂದ ಬೇಕಾದ ಸಂಗತಿಗಳನ್ನು ತಿಳಿದುಕೊಳ್ಳಬಹುದು. ಅಥವಾ ಮೈಸೂರಲ್ಲಿರುವ 'ಕಿವುಡರ ಮೂಕರ' ಶಾಲೆಯನ್ನು ಪ್ರತ್ಯಕ್ಷ ನೋಡುವದರಿಂದ ಅದಕ್ಕೂ ಹೆಚ್ಚಿಗೆ ಲಾಭವನ್ನು ಪಡಕೊಳ್ಳಬಹುದು. ಈ ಸಂಸ್ಥೆಯವರು ಮಾಡುವ ಕೆಲಸವು ಪರೋಪಕಾರದ್ದೂ ಸ್ತುತ್ಯವಾದದ್ದೂ ಇರುವದರಿಂದ ಪ್ರತಿಯೊಬ್ಬ ಹಿಂದೂನಿವಾಸಿಯು ಇದಕ್ಕೆ ದ್ರವ್ಯದ್ವಾರದಿಂದಲೂ ಇತರರೀತಿಯಿಂದಲೂ ಸಹಾಯ ಮಾಡುವದು ಅವಶ್ಯವು.

ಅಂಧ ಜನರ ಶಿಕ್ಷಣದ ಶೋಧಕನಾದ 'ಬ್ರೇಲಿ' ಎಂಬವನ ಚರಿತ್ರವು ಮನೋರಂಜಕವಾಗಿರುತ್ತದೆ. ಅದನ್ನು ನಮ್ಮ ವಾಚಕರಿಗೋಸ್ಕರ ಮೇಲೆ ಹೇಳಿದ ತ್ರೈಮಾಸಿಕ ಪತ್ರಿಕೆಯೊಳಗಿಂದ ಭಾಷಾಂತರಿಸಿ ಕೊಡುತ್ತೇವೆ.

ಲೂಯಿಸ ಬ್ರೇಲಿ.

ಇವನು ೧೮೦೯ನೇ ಇಸವಿಯ ಜನವರಿ ತಿಂಗಳ ೪ನೇ ತಾರೀಖಿನ ದಿವಸ ಪಾರಿಸ ಪಟ್ಟಣದಿಂದ ೨೩ ಮೈಲು ಅಂತರದಲ್ಲಿ ಇರುವ

'ಕೂಪವ್ಹೈ' ಎಂಬ ಪಟ್ಟಣದಲ್ಲಿ ಜನಿಸಿದನು. ಇವನ ತಂದೆಯು ಜೀನು ಹೊಲಿಯುವ ಕೆಲಸವನ್ನು ಮಾಡುತ್ತಿದ್ದನು. ಇವನು ಹುಟ್ಟಿದಾಗ ತಂದೆ ತಾಯಿಗಳಿಬ್ಬರೂ ಪ್ರಬುದ್ಧ ವಯಸ್ಸಿನವರಿದ್ದರು. ಅದರಿಂದ ಬೆಸ್‌ಜಾಮಿನ್ ಫ್ರಾಂಕಲಿನನಂತೆ ಈ ಚಿಕ್ಕ ಹುಡುಗನೂ ತಂದೆ ತಾಯಿಗಳ ಪ್ರೀತಿಗೆ ಪಾತ್ರನಾಗಿದ್ದನು. ಈ ಚಿಕ್ಕಲೂಯಿಯು ಮೂರು ವರ್ಷದವನಿರುವಾಗಲೇ ಸ್ವಾಭಾವಿಕ ಹುಡುಗರಂತೆ ಈತನಿಗೂ ತನ್ನ ತಂದೆಯು ಮಾಡುತ್ತಿದ್ದ ಕೆಲಸವನ್ನು ನೋಡಿ ಅವನ ಉದ್ಯೋಗದ ಅನುಕರಣ ಮಾಡುವ ಇಚ್ಛೆಯು ಹುಟ್ಟಿತು. ಅದೇಪ್ರಕಾರ ಅವನು ಆಗಿನಿಂದಲೇ ತನ್ನ ತಂದೆಯ ಕೆಲಸವನ್ನೇ ಮಾಡಲಿಕ್ಕೆ ಹತ್ತಿದನು. ಆದರೆ ಮುಂದೆ ಅವನಿಗೆ ಅದರಲ್ಲಿ ಸಾಕಷ್ಟು ಯಶವು ದೊರೆಯಲಿಲ್ಲ. ಮತ್ತು ಅವನ ಕೈಯಲ್ಲಿರುವ ಒಂದು ಹದನಾದ ಆಯುಧವು ಒಮ್ಮಿಂದೊಮ್ಮೆ ಜಾರಿ ಪುಟಿದು ಬಂದು ಅವನ ಒಂದು ಕಣ್ಣನ್ನು ಕುರುಡುಮಾಡಿತು. ನೋವು ತಾಗಿದ ಒಂದು ಕಣ್ಣಿನ ಬಾವು ಅನುಷಂಗದಿಂದ ಮತ್ತೊಂದು ಕಣ್ಣಿಗೂ ಪಸರಿಸಿ ಎರಡೂ ಕಣ್ಣುಗಳೂ ಇಲ್ಲದಂತಾದವು. ೧೮೧೯ನೇ ಇಸವಿಯಲ್ಲಿ ಅವನನ್ನು 'ಪಾರಿಸ' ಪಟ್ಟಣದಲ್ಲಿರುವ ಕುರುಡರ ಸಾಲೆಗೆ ಕಳಿಸಿದರು. ಅವನು ಅಲ್ಲಿ ನಡೆಯುವ ಓದುಬರಹ ಗಣಿತ ಈ ವಿಷಯಗಳನ್ನು ತೀವ್ರವಾಗಿ ಕಲಿತನು. ಉಬ್ಬು ಹೊಡೆದು ತೆಗೆದ ರೋಮನ್ನ ಅಕ್ಷರಗಳ ಸಹಾಯದಿಂದ ವಾಚನವನ್ನು ಕಲಿತನು. ತನ್ನ ವಿದ್ಯಾರ್ಥಿ-ಅವಸ್ಥೆಯ ಕಡೆಯಭಾಗದಲ್ಲಿ ವಾದನ ವಿದ್ಯೆಯನ್ನು ಕಲಿಯಹತ್ತಿ ಸ್ವಲ್ಪ ದಿವಸಗಳಲ್ಲಿ 'ಪಾರಿಸ' ಪಟ್ಟಣದಲ್ಲಿಯ ಹಲವು ಪ್ರಾರ್ಥನಾಮಂದಿರಗಳಲ್ಲಿ ವಾದ್ಯಗಳನ್ನು ಬಾರಿಸುವ ಕೆಲಸಗಳನ್ನು ಕೈಕೊಳ್ಳಲಿಕ್ಕೆ ತಕ್ಕವನಾದನು. ಅವನ ಬೆರಳುಗಳು ಯೋಗ್ಯಸ್ಥಳದಲ್ಲಿ ನಿಶ್ಚಿತವಾಗಿಯೂ ತೀವ್ರವಾಗಿಯೂ ಆಡಹತ್ತಿದವು. ಅವನಲ್ಲಿರುವ ಈ ತರದ ಸ್ಪರ್ಶಜ್ಞಾನದ ದ್ವಾರದಿಂದ ಅವನಲ್ಲಿರುವ ವಿಶೇಷಗುಣಗಳು ತೋರಹತ್ತಿದವು. ಸನ್ ೧೮೨೬ನೇ ಇಸವಿಯಲ್ಲಿ ಅವನು ಶಿಕ್ಷಣ ಹೊಂದಿದ ಸಂಸ್ಥೆಯ ಮೇಲೆ, ಅವನನ್ನು ಅಧ್ಯಾಪಕನ್ನಾಗಿ ನೇಮಿಸಿದರು. ಅಲ್ಲಿ ಅವನು ಮೊದಲು ವ್ಯಾಕರಣ, ಭೂಗೋಲ, ಗಣಿತ ಈ ವಿಷಯಗಳನ್ನೂ ಆಮೇಲೆ ಇತಿಹಾಸ, ಭೂಮಿತಿ, ಗಣಿತ ಈ ವಿಷಯಗಳನ್ನೂ ಕಲಿಸಹತ್ತಿದನು. ಅವನ ಈ ವಿಷಯಗಳ ಶಿಕ್ಷಣವು ವಿಸ್ಮಯಕಾರಕವಾದದ್ದಿತ್ತು. ಮತ್ತು ಇವನು ತನ್ನ ಶಿಕ್ಷಣದಿಂದ ಕುಶಲ

ರಾವ ಪಿಯಾನು ಬಾರಿಸುವವರನ್ನು ಉಂಟುಮಾಡಿದನು. ದಿನದಿನಕ್ಕೆ ಅವನ ಶಿಷ್ಯರಲ್ಲಿ ಅವನ ವಿಷಯಕ್ಕೆ ಪೂಜ್ಯಬುದ್ಧಿಯೂ, ಪ್ರೇಮವೂ ಹೆಚ್ಚುತ್ತ ನಡೆಯಿತು. ಬ್ರೇಲಿಯು ಈಪ್ರಕಾರ ತನ್ನ ಶಿಕ್ಷಣ ಕೆಲಸವನ್ನು ನಡಿಸಿದ್ದಲ್ಲದೆ, ಗಣಿತ ವಿಷಯದ ಮೇಲೆ ಹಲವು ಗ್ರಂಥಗಳನ್ನು ಬರೆದನು. ಆ ಗ್ರಂಥಗಳಲ್ಲಿ ಅವನ ಮಾರ್ಮಿಕ ಮತ್ತು ನಿಸ್ಸಂದೇಹವಾದ ವಿಚಾರಸರಣಿಯ ಪರಮಾವಧಿಯು ಕಂಡುಬರುತ್ತದೆ. ಅವನು ಒಂದು ಕಡೆಯಲ್ಲಿ:— "ನಮ್ಮ ಬರಹ ಮತ್ತು ಮುದ್ರಣಕ್ರಮಗಳಿಂದ ಕಾಗದದ ಮೇಲೆ ಹೆಚ್ಚು ಸ್ಥಳವು ವ್ಯಾಪಿಸಲ್ಪಟ್ಟು ಕಾಗದವು ಹೆಚ್ಚು ವೆಚ್ಚವಾಗುತ್ತದೆ. ಆದ್ದರಿಂದ ನಾವು ಆದಷ್ಟು ಸ್ವಲ್ಪ ಶಬ್ದಗಳಿಂದ ನಮ್ಮ ವಿಚಾರವನ್ನು ವ್ಯಕ್ತಪಡಿಸಲಿಕ್ಕೆ ಯತ್ನಿಸಬೇಕು." ಎಂದು ಅಂದಿರುವನು. ವಿಚಾರಗಳನ್ನು ಸಂಕ್ಷೇಪವಾಗಿ ಹೇಳುವ ಚಟದ ಮೂಲಕ ಅವನ ಬರಹವೂ ಅವನು ವಿದ್ಯಾರ್ಥಿಗಳ ಸಲುವಾಗಿ ತೆಗೆದ ಟಿಪ್ಪಣಿಗಳೂ ಮನೋರಂಜಕವಾಗಿರುತ್ತಿದ್ದಿಲ್ಲ.

ಲೂಯಿಸಬ್ರೇಲಿಯು ವಿದ್ಯಾರ್ಥಿಯ ದೆಸೆಯಲ್ಲಿರುವಾಗಲೂ, ಶಿಕ್ಷಕನಾಗಿರುವಾಗಲೂ, ಸೂಟಿಯ ದಿವಸಗಳಲ್ಲಿ ಮನೆಗೆ ಬಂದಿರುವ ಕಾಲದಲ್ಲಿಯೂ ತನಗೆ ದೊರೆತ ವೇಳೆಯನ್ನೆಲ್ಲ ಅಂಧ ಜನರಿಗೆ ಬರಹವನ್ನು ಯಾವರೀತಿಯಿಂದ ಕಲಿಸಬೇಕೆಂಬದನ್ನು ಶೋಧಿಸಲಿಕ್ಕೆ ವೆಚ್ಚ ಮಾಡುತ್ತಿದ್ದನು. ಈ ಉದ್ದೇಶದಿಂದ ಅವನು ಬೇರೆ ಬೇರೆ ಸಾಂಕೇತಿಕ ಲಿಪಿಗಳ ಅಧ್ಯಯನವನ್ನು ಮಾಡಿದನು. ಅವುಗಳಲ್ಲಿ 'ಎಮ್ ಬಾರ್ಬೀರ' ಎಂಬವನಿಂದ ಶೋಧವಾದ 'ಉಬ್ಬು ಹೊಡೆದ ಬರಹವು' ಹೆಚ್ಚು ಯೋಗ್ಯಕರವಿತು. ಈ ಲಿಪಿಯಲ್ಲಿ ಮೊನೆಯಾದ ಮೊಳೆಗಳಿಂದ ಅಕ್ಷರಗಳು ಸಿದ್ಧವಾಗುತ್ತಿದ್ದವು. ಬ್ರೇಲಿಯು ಈ ಪದ್ಧತಿಯನ್ನು ಸುಧಾರಿಸಲಿಕ್ಕೆ ತೊಡಗಿದನು. ಬಾರ್ಬೀರನ ಅಕ್ಷರಗಳು ಉದ್ದ ಸಾಲಿನಲ್ಲಿ ಇಟ್ಟ ಆರು ಮೊನೆಗಳಿಂದ ಆಗಿರುತ್ತಿದ್ದವು. ಈ ಮೊನೆಗಳ ಬೇರೆ ಬೇರೆ ಪ್ರಕಾರದ ರಚನೆಯಿಂದ ಹಲವು ಅಕ್ಷರಗಳನ್ನು ಹುಟ್ಟಿಸುವದು ಸಾಧ್ಯವಾಗಿದ್ದರೂ, ಅವಕಾಶವು ಹೆಚ್ಚು ಬೇಕಾಗುತ್ತತ್ತು. ಅದರಿಂದ ಉಬ್ಬು ಹೊಡೆದ ಅಕ್ಷರಗಳನ್ನು ತಯಾರಿಸಿ ಬಟ್ಟಿನಿಂದ ತಿಳಕೊಳ್ಳುವದು, ಸಾಧ್ಯವಾಗಿರಲಿಲ್ಲ. ಬ್ರೇಲಿಯು ಅದರಲ್ಲಿ ತಕ್ಕ ಹೆಚ್ಚು ಕಡಿಮೆಗಳನ್ನು ಮಾಡಿ, ಈಗ ಅವನ ಹೆಸರಿನಿಂದ ಪ್ರಸಿದ್ಧವಾಗಿರುವ ಸುಲಭವಾದ ಮತ್ತು ಅಂದವಾದ ಬರ

ಪದ ಪದ್ಧತಿಯನ್ನು ಗೊತ್ತು ಹಚ್ಚಿದನು. ಈ ಪದ್ಧತಿಯನ್ನು ವರ್ಣಿಸುವ ಗ್ರಂಥವನ್ನು ಅವನು ಮೊದಲು ೧೮೨೯ರಲ್ಲಿ ಆನಂತರ ಹೆಚ್ಚು ವಿಶದವಾಗಿ ಸನ್ ೧೮೩೭ರಲ್ಲಿ ಪ್ರಸಿದ್ಧಪಡಿಸಿದನು. ಈ ಪದ್ಧತಿಯು ಆ ಅಂಧ ಶಿಕ್ಷಕನಿಗೂ ಅವನ ವಿದ್ಯಾರ್ಥಿಗಳಿಗೂ ರೋಮನ್ ಪದ್ಧತಿಗಿಂತ ಹೆಚ್ಚು ಸುಲಭವಾದದ್ದೆಂದು ಕಂಡುಬಂದಾಗ್ಯೂ ಶಾಲಾಧಿಕಾರಿಗಳು ತಮ್ಮ ಮುಂಚಿನ ಬರಹದ ಪದ್ಧತಿಯನ್ನು ಬದಲುಮಾಡಲಿಕ್ಕೆ ಇಚ್ಛಿಸಲಿಲ್ಲ. ಸಾಲೆಯ ವೇಳೆಯು ಮುಗಿದಮೇಲೆ ಸ್ವತಂತ್ರ ರೀತಿಯಿಂದ ಆ ಪದ್ಧತಿಯನ್ನು ಉಪಯೋಗಿಸಿ ಕಲಿಸಲಿಕ್ಕೆ ಅಪ್ಪಣೆ ಕೊಟ್ಟರು. ಅವನು ಸತ್ತಮೇಲೆ ಸನ್ ೧೮೫೫ನೇ ಇಸವಿಯಲ್ಲಿ ಬ್ರೇಲಿಯು ಬರೆದ ಪದ್ಧತಿಯನ್ನು ಪಾರಿಸದ ಅಂಧಶಾಲೆಯಲ್ಲಿ ಉಪಯೋಗಿಸಲಿಕ್ಕೆ ಅಪ್ಪಣೆಯು ದೊರೆಯಿತು. ಬ್ರೇಲಿಯು ತನ್ನ ಪದ್ಧತಿಯಿಂದ ಬಳಿಕೆಯೊಳಗಿನ ಗ್ರಂಥಗಳನ್ನು ಮುದ್ರಿಸಿ, ಆಮೇಲೆ ಗಾಯನ ಲಿಪಿಯನ್ನು ಹುಟ್ಟಿಸಲಿಕ್ಕೆ ಪ್ರಾರಂಭಿಸಿದನು.

ಬ್ರೇಲಿಯು ೩೬ ವರ್ಷದವನಾದಾಗಿನಿಂದ ಅವನ ಶ್ವಾಸಕೋಶದೊಳಗಿನ ತ್ರಾಣವು ಕಡಿಮೆಯಾಗಹತ್ತಿತು. ಕಫಕ್ಷಯದ ಬೇನೆಯಿಂದ ಅವನು ೧೮೫೨ರಲ್ಲಿ ಮರಣ ಹೊಂದಿದನು. ಅವನನ್ನು ಎಲ್ಲರೂ ಪ್ರೀತಿಸುತ್ತಿದ್ದರು. ಮತ್ತು ಪ್ರತಿಒಬ್ಬನು ಅವನಿಗಿಂತ ತನಗೆ ನಿಜವಾದ ಮತ್ತು ಚತುರನಾದ ಹೆಚ್ಚಿನ ಸ್ನೇಹಿತನು ಇಲ್ಲವೆಂದು ತಿಳಿಯುತ್ತಿದ್ದನು. ಅವನ ಆಲೋಚನೆಯನ್ನು ಕೇಳಲಿಕ್ಕೆ ಅವನ ಶಿಷ್ಯರೂ, ಬೇರೆ ಶಿಕ್ಷಕರೂ ಅವನ ಕಡೆಗೆ ಬರುತ್ತಿದ್ದರು. ಬ್ರೇಲಿಯು ಅವರಿಗೆ ಉಪಯುಕ್ತವಾದ ಉಪದೇಶಗಳನ್ನು ಯಾವಾಗಲೂ ಕೊಡಲಿಕ್ಕೆ ಸಿದ್ಧನಾಗಿರುತ್ತಿದ್ದನು. ಅವನ ಧರ್ಮವಿಚಾರಗಳು ಯಾವಾಗಲೂ ವ್ಯವಹಾರಿಕವಾದವುಗಳೂ ಆಸಕ್ತಿಯುಕ್ತವಾದವುಗಳೂ ಇರುತ್ತಿದ್ದವು. ಅವನು ತನ್ನ ಸ್ನೇಹಿತನಿಗಾಗಲಿ ಶಿಷ್ಯನಿಗಾಗಲಿ ಸಹಾಯ ಮಾಡುವದರ ಸಲುವಾಗಿ ತನ್ನ ವೇಳೆಯನ್ನೂ ಹಣವನ್ನೂ ಮತ್ತು ಆರೋಗ್ಯತೆಯನ್ನು ಸಹ ಕಳೆದುಕೊಳ್ಳಲಿಕ್ಕೆ ಹಿಂದುಮುಂದೆ ನೋಡುತ್ತಿದ್ದಿಲ್ಲ. ಒಂದಾನೊಂದು ಪ್ರಸಂಗದಲ್ಲಿ ಅವನ ಒಬ್ಬ ಶಿಷ್ಯನು ಆ ಸಂಸ್ಥೆಯನ್ನು ಬಿಡುವ ಪ್ರಸಂಗ ಬಂದಾಗ್ಗೆ ಮುಂದೆ ತನಗೆ ಸಾಕಷ್ಟು ಅನುಕೂಲತೆಯು ಇಲ್ಲದ್ದರಿಂದ ಪೇಚಾಡುತ್ತಿದ್ದನು. ಆಗ ಬ್ರೇಲಿಯು ತಾನು ಕೈಕೊಂಡ ವಾದ್ಯಬಾರಿಸುವ ಕೆಲಸವನ್ನು ಬಿಟ್ಟುಕೊಟ್ಟು ಅದನ್ನು

ತನ್ನ ಶಿಷ್ಯನಿಗೆ ಕೊಡಿಸಿದನು. ಬ್ರೇಲಿಯು ತನ್ನ ಸ್ನೇಹದಿಂದ ತನ್ನ ಸ್ನೇಹಿತರಿಗೆ ಏನಾದರೂ ವ್ಯವಹಾರಿಕ ಉಪಯೋಗವಾಗಬೇಕೆಂದು ಅವರ ಜೀವಿತವನ್ನು ನಿರೀಕ್ಷಿಸುತ್ತಿದ್ದನು ಪ್ರಸಂಗ ಬಂದಾಗ್ಗೆ ಅವರಿಗೆ ತಕ್ಕಉಪದೇಶಗಳನ್ನು ಮಾಡುತ್ತಿದ್ದನು. ಅವರು ತಪ್ಪಿದಾಗ ಅವರಿಗೆ ಛೀಹಾಕುವ ಪ್ರಸಂಗಬಂದರೆ ಇತರ ಸ್ನೇಹಿತರು ಆ ಕೆಲಸವನ್ನು ಮಾಡಲಿಕ್ಕೆ ಹಿಂಜರಿದರೂ, ಬ್ರೇಲಿಯು ಆದದ್ದಾಗಲೆಂದು ಆ ಕೆಲಸವನ್ನು ತಾನು ಕೈಕೊಳ್ಳುತ್ತಿದ್ದನು. ಇಂಥ ಕೆಲಸಗಳನ್ನು ಅವನು ಮೇಲಿಂದ ಮೇಲೆ ಮಾಡುತ್ತಿದ್ದರಿಂದ ಬ್ರೇಲಿಯ ಸ್ನೇಹಿತರು ಅವನಿಗೆ 'ತಪ್ಪಿದಲ್ಲಿ ತಿದ್ದುವವನು' ಎಂದು ಕರೆಯುತ್ತಿದ್ದರು. ಈಗ ಬ್ರೇಲಿಯ ಶರೀರವು ನಾಶವಾಗಿ ಮಣ್ಣುಗೂಡಿದ್ದರೂ, ಅವನ ಅಸ್ತಿತ್ವದ ಪರಿಣಾಮವು ಅವನು ಇದ್ದಾಗಿನದರಕಿಂತಲೂ ಹೆಚ್ಚು ವ್ಯಾಪಕವಾಗಿ ಪರಿಣಮಿಸಿ ತಲೆದೋರಹತ್ತಿದೆ. ಪೃಥ್ವಿಯ ಮೇಲಿನ ಅಂಧಜನರ ಪ್ರತಿಒಂದು ಸಂಸ್ಥೆಯು ಅವನು ಹಾಕಿಕೊಟ್ಟ ತತ್ವಗಳನ್ನು ಅನುಸರಿಸಿ ನಡೆಯುತ್ತದೆ.

ನಮ್ಮದಿವಸ.

ಯುರೋಪಖಂಡದಲ್ಲಿ ಮಹಾಯುದ್ಧವು ಪ್ರಾರಂಭವಾದಂದಿನಿಂದ ನಮ್ಮ ಸೈನಿಕರು ತಮ್ಮ ಸುಖೋಪಭೋಗಗಳನ್ನೆಲ್ಲ ತ್ಯಜಿಸಿ ಸಾಮ್ರಾಜ್ಯಸರಕಾರದ ಹಿತಕ್ಕಾಗಿಯೂ, ನಮ್ಮ ಕ್ಷೇಮಚಿಂತನೆಗಾಗಿಯೂ ರಣರಂಗದಲ್ಲಿ ಹೋರಾಡುತ್ತಿರುವರಷ್ಟೇ? ಅವರಲ್ಲಿ ಗಾಯಹೊಂದಿ ಮತ್ತು ರೋಗದಿಂದ ಪೀಡಿತರಾಗಿ ಸಂಕಟ ಪಡುತ್ತಿರುವವರ ಸಂಕಟಗಳ ನಿವಾರಣೆಗಾಗಿಯೂ, ಅವರ ಸುಖಸೌಕರ್ಯಗಳನ್ನು ಹೆಚ್ಚಿಸುವದರ ಸಲುವಾಗಿಯೂ 'ರೆಡ್‌ಕ್ರಾಸ್' ಎಂಬ ಸಂಸ್ಥೆಯು ಸ್ಥಾಪನೆಯಾಗಿರುವದು. ಈ ಸಂಸ್ಥೆಯವರಿಗೆ ಅನುಕೂಲ ಮಾಡಿಕೊಡುವದರ ದೆಸೆಯಿಂದ ನಮ್ಮ ಸಾಮ್ರಾಜ್ಯದ ಮತ್ತು ಮಿತ್ರ ರಾಷ್ಟ್ರಗಳ ಸರ್ವದೇಶಗಳಲ್ಲಿಯೂ ಪ್ರತಿಸಂವತ್ಸರ ಒಂದು ದಿವಸವು ಗೊತ್ತುಮಾಡಲ್ಪಟ್ಟಿರುವದು. ಆ ದಿವಸ ಆಟ, ನಾಟಕ, ಕುಸ್ತಿ, ಗಾಯನ, "ಫ್ಯಾನ್ಸಿಬಾಜಾರ" ಮುಂತಾದ ಅನೇಕತರದ ಉತ್ಸವಗಳನ್ನು ಮಾಡಿಸಿ ವರ್ಗಣಿಯನ್ನು ಕೂಡಿಸಿ, ಅದರಿಂದ ಉತ್ಪನ್ನವಾಗುವ ಎಲ್ಲ ಹಣವನ್ನು ಮೇಲೆ ಬರೆದ

ಸಂಸ್ಥೆಯವರ ಕಡೆಗೆ ಕಳಿಸುವರು. ಈ ಸಂಸ್ಥೆಗೆ ಅನುಕೂಲ ಮಾಡಿಕೊಡುವ ಸಂಬಂಧದಿಂದ ಹಿಂದುಸ್ಥಾನದಲ್ಲಿ ಇನ್ನೂವರೆಗೆ ನಿಶ್ಚಿತವಾದ ದಿವಸವು ಗೊತ್ತಾಗಿದ್ದಿಲ್ಲ. ಆದ್ದರಿಂದ ನಮ್ಮ ವ್ಹಾಯಿಸರಾಯರವರ ಪತ್ನಿಯವರಾದ ಲೇಡಿ ಚೇಮ್ಸ್‌ಫರ್ಡ್‌ ಇವರು ತಾರೀಖು ೧೭ನೇ ದಿಸೆಂಬರ ಈ ದಿವಸವು 'ನಮ್ಮ ದಿವಸ' ವೆಂದು ತಿಳಿಯಲ್ಪಡಬೇಕೆಂದು ಸೂಚಿಸಿರುವರು. ಈ ದಿವಸ ಇಡೀಹಿಂದುಸ್ಥಾನದಲ್ಲಿ ಮೇಲೆ ಹೇಳಿದ ಪ್ರಕಾರದಿಂದ ವರ್ಗಣಿಯನ್ನು ಕೂಡಿಸುವದರಲ್ಲಿ ಬರುವದು. ಮುಂಬಯಿ ಪುಣೆ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಂತೂ ಈ ಕೆಲಸವು ದೊಡ್ಡ ಪ್ರಮಾಣದಿಂದ ನಡೆಯುವದು. ಈ ಹಣದಿಂದ ಮೆಸೋಪೊತಾಮಿಯಾದಲ್ಲಿ ಯುದ್ಧದಲ್ಲಿ ಗಾಯಹೊಂದಿದ ಮತ್ತು ರೋಗದಿಂದ ಪೀಡಿತರಾದ ಹಿಂದೀ ಮತ್ತು ಯುರೋಪಿಯನ್ ಸೈನಿಕರನ್ನು ರಣಭೂಮಿಯಿಂದ ದೂರ ಒಯ್ದು ಇಟ್ಟು ಅವರಿಗೆ ಸುಖಸಾಧನಗಳನ್ನು ಅನುಕೂಲ ಮಾಡಿಕೊಟ್ಟು, ಯೋಗ್ಯ ಆರೈಕೆಯನ್ನು ಮಾಡಿ ನೆಟ್ಟಗಾದ ಬಳಿಕ ಅವರನ್ನು ಪುನಃ ರಣಭೂಮಿಗಾಗಲಿ ಇಲ್ಲವೆ ತಮ್ಮ ತಮ್ಮ ಮನೆಗಳಿಗಾಗಲಿ ಕಳಿಸುವರು.

ಈ ಕಾರ್ಯವು ಮಹತ್ವದ್ದಾದ್ದರಿಂದ ಪ್ರತಿಯೊಂದು ಹಳ್ಳಿಪಳ್ಳಿಗಳಲ್ಲಿ ವಾಸಮಾಡುವವರೆಲ್ಲರೂ ತಮ್ಮ ಯೋಗ್ಯತಾನುಸಾರ ವರ್ಗಣಿಯನ್ನು ಕೂಡಿಸಿ ಈ ಧರ್ಮಕಾರ್ಯಕ್ಕೆ ದ್ರವ್ಯಸಹಾಯವನ್ನು ಮಾಡಬೇಕೆಂದು ನಮ್ಮ ಅಪೇಕ್ಷೆಯು ಇರುವದು.

ಪ್ರಾಚೀನ ಹಿಂದುಸ್ತಾನದ ಆರ್ಯರ ಶಿಕ್ಷಣದ ಇತಿಹಾಸ.

ಶ್ರೀಯುತ ಎನ್. ಎನ್. ಮುಜುಂದಾರ ಇವರು **'ಪ್ರಾಚೀನ ಹಿಂದುಸ್ತಾನದ ಶಿಕ್ಷಣದ ಇತಿಹಾಸ'** ಎಂಬ ಪುಸ್ತಕವನ್ನು ಬರೆದಿರುವರು. ಅದರಲ್ಲಿ ಪ್ರಾಚೀನ ಆರ್ಯರ ಶಿಕ್ಷಣವು ಯಾವಪ್ರಕಾರದ್ದಿತ್ತು ಮತ್ತು ವಿದ್ಯಾಭ್ಯಾಸದ ವ್ಯವಸ್ಥೆಯು ಯಾವಪ್ರಕಾರವಿತ್ತು ಎಂಬದರ ವಿಷಯವಾಗಿ ಸವಿಸ್ತರ ವರ್ಣನೆಯು ಇರುವದು. ಅದರೊಳಗಿನ ಕೆಲವು ಭಾಗಗಳ ಸಾರಾಂಶವನ್ನು ಕನ್ನಡ ವಾಚಕರ ಉಪಯೋಗಕ್ಕಾಗಿ ಕೆಲವು ಲೇಖಗಳಲ್ಲಿ ಸಂಗ್ರಹಿಸಿ ಕೊಡುವೆವು.

(೧)

ಒಬ್ಬ ವ್ಯಕ್ತಿಯ ಶಿಕ್ಷಣವು, ಆ ವ್ಯಕ್ತಿಗೆ ಆನುವಂಶಿಕವಾಗಿ ಬಂದ ಗುಣಗಳು ಮತ್ತು ಆ ವ್ಯಕ್ತಿಯ ಚಿಕ್ಕಂದಿನ ಪರಿಸ್ಥಿತಿ ಈ ಪ್ರಕಾರ ಎರಡು ಕಾರಣಗಳನ್ನು ಅವಲಂಬಿಸಿರುವದು. ಆದ್ದರಿಂದ ಪ್ರಾಚೀನ ಹಿಂದುಸ್ತಾನದಲ್ಲಿಯ ಆರ್ಯರ ಶಿಕ್ಷಣವು ಎಂತಹದಿತ್ತೆಂಬದನ್ನು ನಿಶ್ಚಯಿಸಬೇಕಾದರೆ ಈ ದೇಶಕ್ಕೆ ಮೊದಲು ಬಂದ ಈ ಜನರ ಮೂಲಸ್ವಭಾವವನ್ನೂ ಹಾಗೂ ಪರಿಸ್ಥಿತಿಯಿಂದ ಆ ಸ್ವಭಾವಕ್ಕೆ ಯಾವತರದ ಪುಷ್ಟಿಯು ದೊರೆಯಿತೆಂಬದನ್ನೂ ನೋಡುವದು ಅವಶ್ಯವದೆ.

ಹಿಂದುಸ್ತಾನಕ್ಕೆ ಮೊದಲು ಬಂದ ಆರ್ಯರು ಪೌರುಷದಿಂದಲೂ ಬುದ್ಧಿಸಾಮರ್ಥ್ಯದಿಂದಲೂ ಅದ್ವಿತೀಯರಾಗಿದ್ದರು. ವೇದಕಾಲದ ಋಷಿಗಳು ಸೂಕ್ತಗಳನ್ನು ರಚಿಸುವದು, ಯಜ್ಞಯಾಗಾದಿಗಳನ್ನು ಮಾಡುವದು ಅಲ್ಲದೆ ರಂಬೆ ಹೊಡೆಯುವದನ್ನೂ ಯುದ್ಧಗಳಲ್ಲಿ ಹೋರಾಡುವದನ್ನೂ ಅರಿತಿದ್ದರು. ಶತ್ರುಗಳ ಕೂಡ ಹೆಣಗಾಡುವ ಪ್ರಸಂಗವು ಅವರಿಗೆ ಮೇಲಿಂದಮೇಲೆ ಒದಗುತ್ತಿದ್ದದರಿಂದ ಅವರ ಕ್ಷಾತ್ರ ತೇಜವು ಬಹುಕಾಲದವರೆಗೆ ಉಳಿಯಿತು. ಆದರೆ ಶತ್ರುಗಳೆಲ್ಲ ಪರಾಜಿತರಾಗಿ ವಿಘ್ನಗಳಿಲ್ಲದಂತಾದ್ದರಿಂದ ಕಡೆಗೆ ಆ ತೇಜವು ಕುಂದಹತ್ತಿತು. ಈ ದೇಶದ ಹವೆಯು ಸೌಮ್ಯವಿದ್ದದರಿಂದಲೂ ಭೂಮಿಯು ಫಲವತ್ತರವಿದ್ದದರಿಂದಲೂ ಜನರಿಗೆ ಅನ್ನವು ಅಲ್ಪಪ್ರಯಾಸದಿಂದ ದೊರೆತು ಅವರ ಉದರನಿರ್ವಾಹಪ್ರಯತ್ನವು ಬಹು ಸುಲಭವಾಗಿತ್ತು. ಉನ್ನತವಾದ ಪರ್ವತಗಳಿಂದಲೂ ಸಮುದ್ರದಿಂದಲೂ ಸುತ್ತಲ್ಪಟ್ಟ ಈ ದೇಶಕ್ಕೆ ಪರರಾಷ್ಟ್ರಗಳ ಸಂಸರ್ಗವು ಇಲ್ಲದ್ದರಿಂದ ಇಲ್ಲಿಯ ಆರ್ಯರ ವಿದ್ಯೆಗೆ ಒಂದು ವಿಶಿಷ್ಟ ಸ್ವರೂಪವು ಪ್ರಾಪ್ತವಾಯಿತು. ಯುರೋಪದಲ್ಲಿ ಬಹುಕಾಲ ಉಗ್ರವಾದ ಚಳಿಗಾಲವಿರುವದರಿಂದಲೂ ಭೂಮಿಯು ವಿಶೇಷವಾಗಿ ಫಲದ್ರೂಪವಲ್ಲದ್ದರಿಂದಲೂ ಮತ್ತು ನೆರೆಯ ಸಣ್ಣ ಸಣ್ಣ ರಾಷ್ಟ್ರಗಳ ಪರಸ್ಪರ ವಿರೋಧದಿಂದಲೂ ಅಲ್ಲಿಯ ಜನರಲ್ಲಿ ಆತ್ಮಸಂರಕ್ಷಣೆಯ ಗುಣವು ಬಹು ಉಚ್ಚಕೋಟಿಗೆ ಮುಟ್ಟಿ ಅವರು ಸಾಹಸಿಗಳೂ ಉದ್ಯೋಗಶೀಲರೂ ಯೋದ್ಧಾರರೂ ಆದರು. ಹಿಂದುಸ್ತಾನದಲ್ಲಿಯ ಪರಿಸ್ಥಿತಿವಿಶೇಷದಿಂದ ಇಲ್ಲಿಯ ಆರ್ಯರು ಅಲಸರೂ, ಚಿಂತನಪರರೂ ತತ್ವಜ್ಞಾನಾಸಕ್ತರೂ ಆದರು.

ಆದ್ದರಿಂದ ಈ ಎರಡು ದೇಶಗಳೊಳಗಿನ ಜನರು ಪ್ರಥಮತಃ ಒಂದೇ ದೊಡ್ಡಮಾನವಕುಟುಂಬಕ್ಕೆ ಸೇರಿದವರೂ, ಒಂದೇ ಸ್ವಭಾವದವರೂ ಆದಾಗ್ಯೂ ಅವರು ನಿವಾಸಮಾಡಿದ ದೇಶಗಳ ಭಿನ್ನ ಭಿನ್ನ ಪರಿಸ್ಥಿತಿಯಿಂದ ಮುಂದೆ ಅವರು ಬೇರೆ ಬೇರೆ ಸ್ವಭಾವಧರ್ಮದವರಾದರು. ದೇಶ ಪರಿಸ್ಥಿತಿ ಭೇದದಿಂದ ಆಯಾ ಜನರ ಸ್ವಭಾವದಲ್ಲಿ ವಿಪರ್ಯಾಸವಾಗಿರುವದಲ್ಲದೆ ಅವರ ವಿದ್ಯಾ-ವಾಙ್ಮಯ ಕಲೆಗಳಲ್ಲಿಯೂ ಭೇದವು ಉಂಟಾಗಿರುವದು. ಯುರೋಪದಲ್ಲಿ ಜನರ ರಾಜಕೀಯ ಮತ್ತು ಸಾಂಪತ್ತಿಕಸ್ಥಿತಿಯು ಪರರಾಷ್ಟ್ರಗಳಿಂದ ಅಬಾಧಿತವಾಗಿ ಉಳಿಯುವಂತೆ ಮಾಡವದಕ್ಕೆ ಅನೇಕ ಕಲೆಗಳೂ ಶಾಸ್ತ್ರಗಳೂ ಹುಟ್ಟಿ ಬೆಳೆದವು. ಆದರೆ ಹಿಂದುಸ್ಥಾನದಲ್ಲಿ ಧರ್ಮಕಾರ್ಯಗಳಿಗೆ ಅನುಕೂಲತೆಯನ್ನು ಮಾಡಿಕೊಡುವ ನಿಮಿತ್ತದಿಂದ ಎಲ್ಲ ಕಲೆಗಳ ಉತ್ಪತ್ತಿಯಾಯಿತು.

S. R. Tatti

ವಿವಿಧ ವಿಜ್ಞಾನಸಂಗ್ರಹ.

(೧) ರಬ್ಬರದ ಸಾಮಾನುಗಳು ಕೆಡದಂತೆ ಮಾಡುವದು:—ರಬ್ಬರದ ಸಾಮಾನುಗಳಲ್ಲಿ ಕಂಡುಬರುವ ಮುಖ್ಯವಾದಕುಂದು ಯಾವದೆಂದರೆ, ಅವು ಕೆಲವು ದಿವಸಗಳಲ್ಲಿ ಬಿರುಸಾಗಿ ಸ್ವಲ್ಪ ಬಳಿಕೆಯಿಂದಲೇ ಹರಿದು ಹೋಗುತ್ತದೆ; ಇಲ್ಲವೆ ಜಿಗಟಾಗುತ್ತವೆ. ಈ ತರದ ಕುಂದನ್ನು ಕೆಳಗೆ ಹೇಳಿದ ಉಪಾಯಗಳಿಂದ ಬಹಳ ಮಟ್ಟಿಗೆ ದೂರಮಾಡಬಹುದು. ರಬ್ಬರದ ಸಾಮಾನುಗಳನ್ನು ಮುಳುಗಿಸಿಡಲಿಕ್ಕೆ ಬೇಕಾಗುವಷ್ಟು ನೀರನ್ನು ತೆಗೆದುಕೊಂಡು ಅದರಲ್ಲಿ ಕರಗುವಷ್ಟು ಪಟಕವನ್ನು ಹಾಕಿ ಉಂಟಾದ ಸೊಲ್ಯೂಶನದಲ್ಲಿ ಆ ಸಾಮಾನುಗಳನ್ನು ಒಂದೆರಡು ದಿವಸ ಮುಳುಗಿಸಿಡಬೇಕು. ಹೀಗೆ ಮಾಡುವದರಿಂದ ಅವು ತಿರುಗಿ ಮೊದಲಿನಂತೆ ಮೆತ್ತಗಾಗುತ್ತವೆ. ಬಳಿಸದೆ ಇದ್ದ ರಬ್ಬರದ ಸಾಮಾನುಗಳನ್ನು ಯಾವಾಗಲೂ ಸ್ವಚ್ಛವಾದ ನೀರಿನಲ್ಲಿ ಮುಳುಗಿಸಿಟ್ಟರೆ, ಅವು ಬಹಳ ದಿವಸ ತಾಳುವವು. ನೀರಿನಲ್ಲಿ ಮುಳುಗಿಸಿಡಲಿಕ್ಕೆ ಅನುಕೂಲವಿಲ್ಲದಂಥ ರಬ್ಬರದ ಸಾಮಾನು

ಗಳನ್ನು ಮೇಲಿಂದ ಮೇಲೆ ನೀರಿನಿಂದ ತೊಳೆಯುತ್ತಿದ್ದರೆ ಒಳ್ಳೇದು. ಹವೆ ಮತ್ತು ಪ್ರಕಾಶಗಳಾದರೂ ರಬ್ಬರದ ಮೇಲೆ ತಮ್ಮ ಕಾರ್ಯವನ್ನು ನಡಿಸಿ ಕೆಡಿಸುತ್ತವಾದ್ದರಿಂದ ಅದನ್ನು ಅರಿವೆಯಿಂದಸುತ್ತಿ ಕತ್ತಲೆಯೊಳಗಿಡುವ ದರಿಂದಲೂ ಅದರ ತಾಳಿಕೆಯು ಹೆಚ್ಚಾಗುತ್ತದೆ.

(೨) ರಬ್ಬರವನ್ನು ಜೋಡಿಸುವದು:—ರಬ್ಬರದ ತುಂಡುಗಳನ್ನು ಸಾವಕಾಶವಾಗಿ ಕಾಸಿ ಒಂದಕ್ಕೊಂದು ಒತ್ತುವದರಿಂದ ಅವು ಸುಲಭವಾಗಿ ಕೂಡಿಕೊಂಡು ಮೊದಲಿನಂತೆ ಆಗುತ್ತವೆ. ಆದರೆ ಜೋಡಿಸುವ ಭಾಗವು ಸ್ವಚ್ಛವಿರುವದು ಅವಶ್ಯವಾದದ್ದು. ಆ ಭಾಗಗಳನ್ನು ಹೊಸದಾಗಿ ಕೊಯ್ದು ಎಲ್ಲ ಭಾಗಕ್ಕೂ ಸರಿಯಾದ ಉಷ್ಣತೆಯು ಸಿಗುವಂತೆ ಮಾಡತಕ್ಕದ್ದು. ರಬ್ಬರದ ಕೊಳವೆಗಳನ್ನು ಜೋಡಿಸಬೇಕಾದರೆ, ಕೊಳವೆಗಳ ಬಾಯಿಗೆ ಸರಿಯಾಗಿ ಕೂತುಕೊಳ್ಳುವ ಒಂದು ದುಂಡಗಿನ ಕೋಲನ್ನು ಕಾಗದದಿಂದ ಸುತ್ತಿ ಹುಗಿಲೊಳಗೆ ಸೇರಿಸಬೇಕು. ಜೋಡಿಸುವ ಭಾಗಗಳನ್ನು ಸರಿಯಾಗಿ ಹದನಾದ ಚೂರಿಯಿಂದ ಕೊಯ್ದು ಆಮೇಲೆ ಎರಡೂ ತುದಿಗಳು ಒಂದಕ್ಕೊಂದು ತಾಗುವಂತೆ ಸಮೀಪ ಸರಿಸಿ, ಹೊಗೆಬಾರದಂಥ ಬೆಂಕಿಯಮೇಲೆ ಹಿಡಿದು ಸಾವಕಾಶವಾಗಿ ಮೆತ್ತಗಾಗುವತನಕ ಕಾಸಬೇಕು. ಆಮೇಲೆ ತುದಿಗಳನ್ನು ಚನ್ನಾಗಿ ಒತ್ತುವದರಿಂದ ಅವು ಕೂಡಿಕೊಳ್ಳುತ್ತವೆ. ರಬ್ಬರವು ಕರಗಿ ಕಾಗದಕ್ಕೆ ಅಂಟಿಕೊಳ್ಳಬಹುದಾದ್ದರಿಂದ ಅದಕ್ಕೆ ಸ್ವಲ್ಪ ಹಿಟ್ಟನ್ನು ಇಲ್ಲವೆ ಖಡುವಿನ ಸೂಕ್ಷ್ಮಪುಡಿಯನ್ನು ತಾಗಿಸುವದು ಒಳ್ಳೇದು. ಕೂಡಿದನಂತರ ಕೋಲನ್ನು ಹೊರಗೆ ತೆಗೆಯಬೇಕು. ಕೋಲನ್ನು ತೆಗೆದನಂತರ ಕಾಗದವು ಸುಲಭವಾಗಿ ಬರುವದು.

(೩) ದೀಪದ ಕಾಚಿನ ನಲಿಕೆಗಳು ಒಡೆಯದಂತೆ ಮಾಡುವದು:—ಬತ್ತಿಯನ್ನು ಒಮ್ಮೆಲೇ ಏರಿಸುವದರಿಂದ ನಲಿಕೆಯ ಒಳಭಾಗವೇ ಚನ್ನಾಗಿ ಕಾಯ್ದು ವಿಸ್ತಾರವಾಗುವದರಿಂದ ನಲಿಕೆಯು ಒಡೆದು ಹೋಗುತ್ತದೆ. ಈ ಸ್ಥಿತಿಯನ್ನು ಕೆಲವುಮಟ್ಟಿಗೆ ದೂರಮಾಡಬಹುದು. ನಲಿಕೆಯನ್ನು ಒಂದು ಪಾತ್ರೆಯೊಳಗೆ ಹಾಕಿ, ಅದು ಪೂರ್ಣಮುಳುಗುವತನಕ ನೀರು ಹಾಕಬೇಕು; ಆಮೇಲೆ ಅದರಲ್ಲಿ ಒಂದೆರಡು ತೊಲೆ ಉಪ್ಪು ಬೆರಿಸಿ ಬೆಂಕಿಯಮೇಲೆ ಇಟ್ಟು, ಒಂದೆರಡು ಮಿನೀಟುಗಳ ತನಕ ಕುದಿಸಬೇಕು; ಆನಂತರ ಅದನ್ನು ಸಾವಕಾಶವಾಗಿ ಆರಗೊಟ್ಟು ತಣ್ಣಗೆಮಾಡಬೇಕು. ಹೀಗೆ

ಮಾಡುವದರಿಂದ ಕಾಜಿನ ಮತ್ತು ಚೀನೀಮಣ್ಣಿನ ಪಾತ್ರೆಗಳು ಉಷ್ಣತೆಯ ಹೆಚ್ಚುಕಡಿಮೆಯನ್ನು ಸಹಿಸುವವು. ಕಾಸುವ ಮತ್ತು ತಣ್ಣಗೆಮಾಡುವ ಕ್ರಿಯೆಗಳು ಆದಷ್ಟು ಸಾವಕಾಶವಾಗಿನಡೆಯತಕ್ಕದ್ದು.

R. K. NAIK,

ಸಾಮಾನ್ಯ (ವ್ಯವಹಾರೀ)ಅಪೂರ್ಣಾಂಕಗಳ ಉಪಪತ್ತಿ.

ಅಪೂರ್ಣಾಂಕಗಳ ಅವಶ್ಯಕತೆ:—

(೧) ಬೇಕಾದ ಎರಡು ಪೂರ್ಣಾಂಕಗಳನ್ನು ಗುಣಿಸಲಿಕ್ಕೆ ಬರುತ್ತದೆ. ಆದರೆ ಬೇಕಾದ ಎರಡು ಪೂರ್ಣಾಂಕಗಳಿಂದ ಭಾಗಾಕಾರವು ಸಾಧ್ಯವಾಗುವದಿಲ್ಲ. ಉದಾ:— ಲಕ್ಕೆ ೧೩ರಿಂದ ಭಾಗಿಸಿ ಉತ್ತರವನ್ನು ಬೇರೆಯೊಂದು ಪೂರ್ಣಾಂಕರೂಪವಾಗಿ ತೆಗೆಯಲಿಕ್ಕೆ ಬರುವದಿಲ್ಲ. ಆದ್ದರಿಂದ ಭಾಗಾಕಾರವು ಯಾವಾಗಲೂ ಸಾಧ್ಯವಾಗಬೇಕಾದರೆ, ಪೂರ್ಣಾಂಕಗಳ ಹೊರತು ಸಂಖ್ಯೆಗಳ ಇನ್ನೊಂದು ವರ್ಗವನ್ನು ಕಲ್ಪಿಸಬೇಕಾಗುವದು.

(೨) ವ್ಯವಹಾರದ ಕೋಷ್ಟಕಗಳಲ್ಲಿ ಉಪಯೋಗಿಸುವ ಪರಿಮಾಣಗಳ ಅಥವಾ ಎಕ್ಕಮುಗಳ ಸಂಖ್ಯೆಯು ಕ್ಲಪ್ತವಾಗಿರುವದು. ಉದಾ:— ಹಣದ ಪರಿಮಾಣಗಳು ರೂಪಾಯಿ, ಅರ್ಧರೂಪಾಯಿ, ಪಾವಲಿ, ಚವಲಿ, ಆಣೆ, ಅರ್ಧಆಣೆ, ದುಡ್ಡು, ಅದ್ದೇಲಿ, ಪೈ ಇಷ್ಟೇ ಇರುವವು. ಪೈಗಿಂತ ಕಡಿಮೆ ಬೆಲೆಯಲಿಕ್ಕ ಮಾಡಬೇಕಾದರೆ ಹೇಗೆ ಮಾಡಬೇಕು? ೧ ಪೈಗೆ ಮೂರು ಗೋಲಿಯೆಗುಂಡುಗಳಾದರೆ, ಎರಡು ಗುಂಡುಗಳಿಗೆಷ್ಟು? ಇಂಥ ಪ್ರಶ್ನೆಗಳಿಗೆ ಸರಿಯಾದ ಉತ್ತರವು ಪೂರ್ಣಾಂಕಗಳಿಂದ ದೊರೆಯುವದಿಲ್ಲ. ಈ ತೊಂದರೆಯನ್ನು ದೂರಮಾಡುವದಕ್ಕಾಗಿ ಅಪೂರ್ಣಾಂಕಗಳನ್ನು ಕಲ್ಪಿಸಿರುವರು. ಅಪೂರ್ಣಾಂಕಗಳ ಕಲ್ಪನೆಯು ವ್ಯವಹಾರದ ಕೋಷ್ಟಕಗಳಲ್ಲಿರುವ ಕ್ಲಪ್ತವಾದ ಪರಿಮಾಣಗಳ ಸಂಖ್ಯೆಯನ್ನು ಬೇಕಾದಷ್ಟು ಬೆಳಿಸಿಕೊಳ್ಳುವ ಉಪಾಯವಾಗಿರುವದು.

(೩) ಭಿನ್ನ ಭಿನ್ನ ಜಾತಿಯ ಪರಿಮಾಣಗಳಿಂದ ತೋರಿಸಿದಂಥ ಒಂದು ಪರಿಮೇಯವನ್ನು ಒಂದೇ ಎಕ್ಕಮುಗ ರೂಪದಿಂದ ಬರೆಯಲಿಕ್ಕೆ

ವಂತೆ ಹುಡುಗರ ಮನಸ್ಸನ್ನು ಒಲಿಸುವದು ಇಷ್ಟವಾದದ್ದು. ಆದರೆ ಅದರ ರುಚಿಯು ಉತ್ಪನ್ನವಾಗುವತನಕ ಸಾಧಾರಣವಾಗಿ ಹುಡುಗರು ಇತಿಹಾಸದ ಕಥೆಗಳನ್ನು ಓದಲಾರರು. ಕಥೆಗಳನ್ನು ಬಾಯಿಂದ ಹೇಳುವಾಗ ಶಿಕ್ಷಕನು ತನ್ನ ಚಾತುರ್ಯವನ್ನೂ ಉತ್ಸಾಹವನ್ನೂ ಪ್ರಕಟಮಾಡಿದಂತೆ, ಇತಿಹಾಸದ ಸಂಗತಿಗಳು ಮತ್ತು ಪ್ರಸಂಗಗಳು ಹೆಚ್ಚು ಮೂರ್ತ ಸ್ವರೂಪವನ್ನು ಹೊಂದುತ್ತವೆ.

ಸಚ್ಛಿಕ್ಷಕನಿಂದ ಕಥೆಯು ಮನೋರಂಜಕವಾಗಿ ಹೇಳಲ್ಪಡುತ್ತದೆ. ಅವನ ವರ್ಣನೆಯು ಹೆಚ್ಚು ಶೃಂಗಾರವಾದದ್ದೂ ಸರಸವಾದದ್ದೂ ಇದ್ದು, ಬೇರೆ ಬೇರೆ ಹುಡುಗರ ವಿಚಾರಗಳಿಗೂ, ಸ್ವಭಾವಗಳಿಗೂ, ತಿಳಿಕೊಳ್ಳುವ ಶಕ್ತಿಗೂ ಅನುರೂಪವಾಗಿರುತ್ತದೆ. ಇದಲ್ಲದೆ ಹುಡುಗರು ಕಾರಣಗಳ ವಿಷಯವಾಗಿ ಚರ್ಚೆಯನ್ನು ಮಾಡುವದರಿಂದಲೂ, ಕರೇಹಲಿಗೆಯ ಮೇಲೆ ಆಕೃತಿಗಳನ್ನು ತೆಗೆಯುವದರಿಂದಲೂ, ವ್ಯವಹಾರಿಕ ದೃಷ್ಟಾಂತಗಳನ್ನು ಕೇಳಿಕೊಳ್ಳುವದರಿಂದಲೂ ತಮ್ಮ ಪೂರ್ವದ ಜ್ಞಾನವನ್ನು ಜಾಗ್ರತಮಾಡಿಕೊಂಡು ಇತಿಹಾಸದ ತಾತ್ವಿಕ ಜ್ಞಾನವನ್ನು ಹೊಂದುವರು. ಗ್ರಂಥಕರ್ತನು ಬೇಕಾದಷ್ಟು ಪ್ರಜ್ಞಾಶಾಲಿಯೂ, ಭಾಷಾಭಿಜ್ಞನೂ ಇದ್ದರೂ ಸಹ ಅವನು ಶಿಕ್ಷಕನಿಂದುತ್ಪನ್ನವಾಗುವ ಚಾತುರ್ಯವನ್ನೂ, ಗತಿಯನ್ನೂ, ಆಸಕ್ತಿಯನ್ನೂ ಉಂಟುಮಾಡಲಾರನು. ಹುಡುಗರಿಗೆ ಏನಾದರೂ ಸಂಶಯಬಂದರೆ, ಅಥವಾ ಹುಡುಗರಲ್ಲಿ ಯಾವದಾದರೂ ತಪ್ಪು ತಿಳುವಳಿಕೆಯು ಇದ್ದರೆ ಅದನ್ನು ತಿದ್ದಲು ಶಿಕ್ಷಕನೇ ಸಮರ್ಥನು.

ಈ ರೀತಿಯಾಗಿ ಕಥಾರಂಭವನ್ನು ಮಾಡುವದು ಬಹಳೇ ಮಹತ್ವದ್ದು. ಯಾಕಂದರೆ ಕಥೆಗಳನ್ನು ಹೇಗೆ ಕಲಿಯಬೇಕೆಂಬದನ್ನು ಬಾಲಕನು ಉತ್ಸಾಹಿಯಾದ ಶಿಕ್ಷಕನಿಂದ ತಿಳಕೊಂಡಮೇಲೆ ಉಳಿದ ಕಥೆಗಳನ್ನು ವಾಚನದ ಮೂಲಕ ತಿಳಿದುಕೊಳ್ಳಲು ಸಮರ್ಥನಾಗುವನು. ಈ ಪ್ರಕಾರದ ಬಾಯಿಯಿಂದ ಹೇಳುವ ಪಾಠಗಳು ಮುಂದಿನ ಇತಿಹಾಸಾಧ್ಯಯನಕ್ಕೆ ಎರಡುವಿಧವಾಗಿ ಉಪೋದ್ಘಾತವಾಗುತ್ತವೆ. ದೊಡ್ಡ ವ್ಯಕ್ತಿಗಳವಿಷಯದಲ್ಲಿ ನಿರಂತರವಾದ ಆಸಕ್ತಿಯನ್ನುಂಟುಮಾಡುವದಲ್ಲದೆ, ಅವರ ಸಂಕಟಗಳ ಮತ್ತು ತೊಂದರೆಗಳ ತಾತ್ವಿಕಜ್ಞಾನವು ಮನಸ್ಸಿನ

ಮೇಲೆ ಬಿಂಬಿಸುತ್ತದೆ. ಇತಿಹಾಸದ ಇಂಗಿತವನ್ನೂ ಮತ್ತು ಅದರಲ್ಲಿ ವ್ಯಕ್ತವಾದ ಜನರ ಕೃತಿಗಳನ್ನೂ ತಿಳಕೊಳ್ಳಬೇಕಾದರೆ, ಬಾಲಕರು ಐತಿಹಾಸಿಕ ಪುರುಷರ ಸಂಕಟ ಮುಂತಾದವುಗಳನ್ನು ತಮ್ಮ ಅನುಭವಕ್ಕೆ ತರಬೇಕು. ಸಂಗತಿಗಳ ಪಠಣವೂ ಪುಸ್ತಕದೊಳಗಿನ ವರ್ಣನೆಯೂ ನಿಜವಾದ ಇತಿಹಾಸಾಧ್ಯಯನವಲ್ಲ. ಶಿಕ್ಷಕನು ಇತಿಹಾಸದ ಸಂಗತಿಗಳನ್ನು ಹೆಚ್ಚಿಸಿ, ಅವುಗಳನ್ನು ಚರ್ಚಿಸಿ, ಅದರ ಅಧ್ಯಯನದಲ್ಲಿ ಎಷ್ಟರಮಟ್ಟಿಗೆ ಸ್ಫೂರ್ತಿಯನ್ನುಂಟುಮಾಡುವನೆಂಬದು, ವಿಚಾರಾರ್ಹವಾದಮಾತು. ಆದರೂ ಪುಸ್ತಕದ ಸಹಾಯವಿಲ್ಲದೆ ಸ್ವತಃಹೇಳುವದರಿಂದ ಇತಿಹಾಸವು ಹೆಚ್ಚು ಮನೋರಂಜಕವೂ ಪರಿಣಾಮಕಾರಕವೂ ಆಗಲಿಕ್ಕೆಬೇಕು.

ಇತಿಹಾಸವನ್ನು ಯಥಾರ್ಥವಾಗಿಯೂ ಒಡೆದು ಕಾಣುವಂತೆಯೂ ಹುಡುಗರ ಮುಂದೆ ಇಡಬೇಕೆಂದು ಹಿಂದೆಹೇಳಿದೆ. ಇದರಿಂದ ಶಿಕ್ಷಕರಿಗೆ ಬಹಳ ಪ್ರಯಾಸವಾಗಬಹುದು. ಈ ಕೆಲಸದಲ್ಲಿ ಚಾತುರ್ಯ, ಸೌಲಭ್ಯ ಮತ್ತು ಹತೋಟಿ ಇವು ಸಾವಕಾಶವಾಗಿಬರುವವು. ಈ ಪ್ರಕಾರದ ಸುಗುಣಗಳು ಹುಟ್ಟುಗುಣಗಳು; ಅವು ದೈವಬಲವುಳ್ಳವರಿಗೇ ದೊರೆಯುವವೆಂದು ತಿಳಿಯುವದು ತಪ್ಪು. ಮಾತಾಡುವಾಗ ತೊದಲುವವರೂ ಅಥವಾ ಸಾವಕಾಶವಾಗಿ ಮಾತಾಡುವವರೂ ಪ್ರಗತಿಯನ್ನು ಹೊಂದಬಹುದು. ಕಥೆಗಳನ್ನು ಹೇಳುವಾಗ ಶಿಕ್ಷಕನು ನಾಲಿಗೆಯನ್ನು ಬಿಗಿಹಿಡಿಯುವದರಿಂದಲೇ ಹೆಚ್ಚು ಪರಿಣಾಮವಾಗುತ್ತದೆ. ಆದರೆ ಸಂಗತಿಗಳನ್ನೂ ಪ್ರಸಂಗಗಳನ್ನೂ ಯಥಾರ್ಥವಾಗಿ ವರ್ಣಿಸಬೇಕು.

(ಮುಂದೆ ಸಾಗುವದು.)

P. H. Walvekar.

ಶಾಲೆಯೊಳಗಿನ ಪ್ರಾರ್ಥನೆ.

ಹುಡುಗರನ್ನು ವಿದ್ಯಾವಂತರನ್ನು ಮಾಡುವದಷ್ಟೇ ಮಾಸ್ತರನ ಕರ್ತವ್ಯವಿರುವದೆಂದು ಕೆಲವು ಕಾಲದ ಹಿಂದೆ ತಿಳಿಯಲ್ಪಡುತ್ತಿತ್ತು. ಇಂಥ ಏಕಾಂಗಿಯಾದ ಶಿಕ್ಷಣದಿಂದ ಸಮಾಜಕ್ಕೆ ಹಿತಕರವಾದ ಪರಿಣಮವಾಗುವದಿಲ್ಲೆಂದು ಕ್ರಮೇಣ ತೋರಹತ್ತಿತು. ಗುರುಹಿರಿಯರ ಬಗ್ಗೆ ಅನಾದರ, ಉಚ್ಛೃಂಖಲವೃತ್ತಿ, ಒರಟುತನ ಮುಂತಾದ ದುರ್ಗುಣಗಳು ಚನ್ನಾಗಿ ಕಲಿತವರಲ್ಲಿ ಸಹ ತಲೆದೋರಹತ್ತಿದವು. ಚನ್ನಾಗಿ ಕಲಿತು ದೊಡ್ಡವರಾದವರು ಮೂಕೀ ಅರ್ಜಿ, ಹೆಸರಿಲ್ಲದ ಪತ್ರಬರೆಯುವದು, ಹೀಗೆ ಹೇಡಿತನದ

ದುಷ್ಕಾರ್ಯಗಳನ್ನು ಮಾಡಹತ್ತಿದರು. ಕೆಲವು ತಲೆತಿರುಕರು ವ್ಯಕ್ತವಾಗಿ ಅಘೋರಕೃತ್ಯಗಳನ್ನು ಮಾಡಹತ್ತಿದರು. ಶಿಕ್ಷಣದಿಂದ ಸತ್ಪರಿಣಾಮವುಂಟಾಗುವದರ ಬದಲು, ಹೀಗೆ ದುಷ್ಪರಿಣಾಮವೇಕಾಗುವದೆಂಬ ಬಗ್ಗೆ ಹಲವು ದೊಡ್ಡ ದೊಡ್ಡ ಬುದ್ಧಿವಂತರು ವಿಚಾರ ಮಾಡಹತ್ತಿ ವಿದ್ಯಾರ್ಥಿದೆಶೆಯಲ್ಲಿಯೇ ನೀತಿ ಶಿಕ್ಷಣವನ್ನು ಶಾಲೆಯಲ್ಲಿ ಸಾಗಿಸುವದು ಯುಕ್ತವೆಂದು ನಿರ್ಣಯಿಸಿದರು ಸತ್ಕರ್ಮದಿಂದ ಸುಖವೂ, ದುಷ್ಕರ್ಮದಿಂದ ಘೋರಶಿಕ್ಷೆಯೂ ಆಗುವವೆಂಬ ಮಾತನ್ನು ಚಿಕ್ಕಬಾಲಕರ ಮನಸಿನಲ್ಲಿ ಚಿಕ್ಕಚಿಕ್ಕ ಕಲ್ಪಿತ ಕಥೆಗಳಿಂದ ಬಿಂಬಿಸುವದರಿಂದ ಬಹು ಪ್ರಯೋಜನವುಂಟಿಂದು ಗೊತ್ತುಪಡಿಸಿದರು. ನೀತಿಶಿಕ್ಷಣದ ಮಾರ್ಗವನ್ನು ವಿದ್ವಾಂಸರಿಂದ ತೋರಿಸಿಕೊಟ್ಟರು. ಹಾಗು ಅನಿಷಯದ ಸಂಬಂಧದ ಜ್ಞಾನಮಾಡಿಕೊಡುವ ಪುಸ್ತಕಗಳನ್ನು ಪ್ರಕಟಿಸಿದರು.

ಅನೀತಿಯಿಂದ ಮಾಡಲ್ಪಡುವ ದೊಡ್ಡ ಹಾಗು ವ್ಯಕ್ತವಾದ ದುಷ್ಕಾರ್ಯಗಳಿಗೆ ಮಾತ್ರ ಸಮರ್ಥರಿಂದ ಶಾಸನವಾಗುವದು. ಆದರೆ ಎಲ್ಲ ಅಪರಾಧಗಳಿಗೂ ವ್ಯಕ್ತಸ್ವರೂಪವುಂಟಾಗುವದಿಲ್ಲ. ಎಷ್ಟೋ ಮೂಕೀಅರ್ಜಿ, ಹೆಸರು ಹಾಕದ ಪತ್ರ ಇವುಗಳನ್ನು ಬರೆದವರ ಹೆಸರುಗಳು ಬಯಲಿಗೆ ಬರುವಸಂಭವವಿರುವದಿಲ್ಲ. ೨೫ ವರ್ಷದ ತರುಬರುವ ತರುಣನು ಕೈಸೋಶುನಿಂತ ಮುಪ್ಪಿನ ತಂದೆತಾಯಿಗಳನ್ನು ಕ್ಷಣಶಃ ಅಪಮಾನಗೊಳಿಸುತ್ತಿದ್ದರೆ. ಯಾರೇನು ಮಾಡುವರು? ಹೀಗಿದ್ದರೂ ಅಕೃತ್ಯಗಳ ದುಷ್ಟತೆಯು ಕಡಿಮೆ ತರದ್ದಾಗುವದಿಲ್ಲ. ಹೀಗೆ ವ್ಯಕ್ತವಾಗಿ ಶಾಸನವಾಗದೆಂದು ಅಪರಾಧಗಳನ್ನು ಮಾಡಲಿಕ್ಕೆ ಸಹ ಹುಡುಗರು ಹೇಸುವಂತೆ ಮಾಡಬೇಕಾರೆ ಅವರಲ್ಲಿ ಈಶ್ವರ ನಿಷ್ಠೆಯನ್ನು ನೆಲೆಗೊಳಿಸಿದ ಹೊರತು ಬೇರೆ ಉಪಾಯವಿಲ್ಲ. "ದೇವರು ಸರ್ವವ್ಯಾಪಿಯಾಗಿರುವನು, ನಮ್ಮ ಕೆಲಸಗಳನ್ನು ಹಗಲಿರುಳು ನೋಡುತ್ತಿರುವನು. ನಾವು ಹೀನ ಕಾರ್ಯಗಳನ್ನು ಎಷ್ಟುಗುಪ್ತರೀತಿಯಿಂದಮಾಡಿದರೂ ಶಿಕ್ಷೆತಪ್ಪದು. ಇವೇ ಮುಂತಾದ ಸಂಗತಿಗಳು ಚಿಕ್ಕಮಕ್ಕಳ ಮನಸ್ಸಿನಲ್ಲಿ ಬೇರೂರಿದವೆಂದರೆ ಅವರಿಂದ ಪ್ರಮಾದಗಳಾಗುವದು ಕ್ರಮೇಣ ಕಡಿಮೆಯಾಗುವದೆಂಬದರಲ್ಲಿ ಸಂಶಯವಿಲ್ಲ. ಸಂಪೂರ್ಣ ನೀತಿಶಾಸ್ತ್ರಕ್ಕೆ ಮೂಲಾಧಾರವಾದ ಆಸ್ತಿಕ್ಯಬುದ್ಧಿಯನ್ನುಂಟು ಮಾಡುವದೇ ಶಾಲೆಯೊಳಗಿನ ಪ್ರಾರ್ಥನೆಯ ಮರ್ಮವಾಗಿರುತ್ತದೆ. ಪ್ರಾರ್ಥನೆಯಲ್ಲಿ ಬಂಧುಪ್ರೇಮ, ರಾಜನಿಷ್ಠೆ, ದೇಶಪ್ರೀತಿ, ಗುರುಭಕ್ತಿ, ಮುಂತಾದ ಹಲವು ವಿಷಯಗಳು ಬಂದರೂ ಅವೆಲ್ಲ ಆಸ್ತಿಕ್ಯ ಬುದ್ಧಿಯ ಅಂಗಗಳೆಂದು ಹುಡುಗರು ಅರಿತರೆ ದೊಡ್ಡಪ್ರಯೋಜನವಾಗುವದು.

ಪ್ರತಿದಿನ ಕಲಿಸಲಿಕ್ಕೆ ಪ್ರಾರಂಭಿಸುವ ಮೊದಲು ಹುಡುಗರಿಂದ ದೇವರಿಗೆ ಪ್ರಾರ್ಥನೆ ಮಾಡಿಸುವದು. ಬಹುಶಃ ಎಲ್ಲಸಾಲೆಗಳಲ್ಲಿ ರೂಢಿಯಿರುವದು. ಆದರೆ ಪ್ರಾರ್ಥನೆಯ ನಿಜವಾದ ಪರಿಣಾಮವು ತೀನಕಡಿಮೆಯಾಗುವದು. ಹುಡುಗರು ಅಡ್ಡತಿಡ್ಡ ನಿಂತು ಹ್ಯಾಗಾದರೂ ಪದಗಳನ್ನು ಅಂದರೆ ಇಲ್ಲವೆ ನಗುತ್ತ ಒಬ್ಬರನ್ನೊಬ್ಬರು ಕಾಲುತುಳಿಯುತ್ತ ಜಿವ್ವುಟುತ್ತ ಒದರಿದರೆ ಅದು ಪ್ರಾರ್ಥನೆಯೆನಿಸದು. ಪ್ರಾರ್ಥನೆಯ

ಮನೋಮಯ ವಿಷಯವು. ಚಂಚಲ ಮನಸಿನ ಚಿಕ್ಕಮಕ್ಕಳು ನಿಶ್ಚಲಮನಸಿನಿಂದ ಅಗಾಧಮಹಿಮನಾದ ದೇವರನ್ನು ನಿಜವಾಗಿ ಭಜಿಸುವಂತೆ ಮಾಡುವದು ಕಠಿಣವು. ಆದರೆ ನಿತ್ಯದ ಅಭ್ಯಾಸದಿಂದ ಅದು ಸಾಧಿಸಲಿಕ್ಕೆ ಅಡ್ಡಿಯಿಲ್ಲ. ತೀರ ಸಣ್ಣಮಕ್ಕಳು ಬರೇ ಮೇಲಿನ ಹುಡುಗರ ಅನುಕರಣ ಮಾಡುವವರಾದರೂ ಶಿಸ್ತು, ಅಚ್ಚುಕಟ್ಟುತನ, ವ್ಯವಸ್ಥೆ ಮುಂತಾದವು ಅವರಲ್ಲಿ ನೆಲೆಗೊಳ್ಳುವದರಲ್ಲಿ ಸಂಶಯವಿಲ್ಲ. ಆದ್ದರಿಂದ ಯೋಗ್ಯ ಪದ್ಧತಿಯಿಂದ ಪ್ರಾರ್ಥನೆ ಮಾಡಿಸುವದು ಮೇಲಾದದ್ದು.

ಪ್ರಾರ್ಥನೆ ಮಾಡುವಾಗ ಹುಡುಗರು ಕ್ರಮವಾಗಿಯೂ ಸ್ಥಿರವಾಗಿಯೂ ನಿತ್ಯ ಸೃಷ್ಟಿಕರ್ತನ ಅಗಾಧಕಾರ್ಯಗಳನ್ನು ನೆನಪಿಗೆ ತಂದು ಏಕಚಿತ್ತರಾಗಬೇಕು. ಅವರು ದೃಷ್ಟಿಯನ್ನೇ ಅಂತರಾಳದಲ್ಲಿ ಇಟ್ಟು ಅಲ್ಲಿ ದೇವರಿರುವನು; ಅವನು ದೊಡ್ಡವನು; ನಾವು ಅಲ್ಪರು ಎಂಬಭಾವನೆತಾಳಿ, ಆತನ ಪ್ರಾರ್ಥನೆಯ ಪದ್ಯಗಳನ್ನು ಸುಸ್ವರದಿಂದ ಅನ್ನಬೇಕು.

ಸಾರ್ವಜನಿಕ ಶಾಲೆಗಳಲ್ಲಿ ಹಿಂದೂ-ಮುಸಲ್ಮಾನ-ಕ್ರಿಶ್ಚನ್ ಮುಂತಾದ ಬೇರೆ ಬೇರೆ ಧರ್ಮಗಳ ವಿದ್ಯಾರ್ಥಿಗಳು ಇರುವರು. ಆದ್ದರಿಂದ ವಿಶಿಷ್ಟಧರ್ಮದ ದೇವರ ಹೆಸರಿನಿಂದ ಪ್ರಾರ್ಥನೆ ಮಾಡಿಸುವದು ಸರಿಯಾಗಲಾರದು. ಬಹುಶಃ ಎಲ್ಲ ಧರ್ಮಗಳೂ ದೇವರ ಅಸ್ತಿತ್ವವನ್ನು ಒಪ್ಪುತ್ತವಷ್ಟೇ. ಆದ್ದರಿಂದ ದೇವರನ್ನು ಸಾಮಾನ್ಯ ನಾಮದಿಂದ ಭಜಿಸುವಂಥ ಪದಗಳಿದ್ದರೆ ಯಾರಮನಸ್ಸೂ ನೋಯದೆ ಪ್ರಾರ್ಥನೆಯ ಉದ್ದೇಶವು ನೆರವೇರಲಿಕ್ಕೆ ಸಹಾಯವಾಗುವದು.

ಇನ್ನು ಪ್ರಾರ್ಥನೆಯ ಪದಗಳಲ್ಲ ಕೆಲವನ್ನು ಇಲ್ಲಿ ಬರೆಯುವೆವು. ಅವುಗಳನ್ನು ಬಲ್ಲವರು ಯೋಗ್ಯ ದಾಟಿಯಿಂದ ತಕ್ಕಕ್ರಮದಿಂದ ಅನ್ನಿಸಬಹುದು. ಇವೇ ಪದಗಳನ್ನೇ ಅನ್ನಿಸಬೇಕೆಂಬ ಅಭಿಪ್ರಾಯವಲ್ಲ. ಬೇರೆ ಮನೋಹರ ಧಾಟಿಯ ಯೋಗ್ಯಪದಗಳನ್ನು ಅನ್ನಿಸಲಿಕ್ಕೂ ಅಡ್ಡಿಯಿಲ್ಲ. ಯಾವಪದಗಳೇ ಇರಲಿ, ಅವು ಮುಖ್ಯವಲ್ಲ. ಹುಡುಗರಲ್ಲಿ ಆಸ್ತಿಕ್ಯ ಬುದ್ಧಿಯು ಜಾಗ್ರತವಾಗಿ ಸುನೀತಿ ನೆಲೆಗೊಳ್ಳಬೇಕೆಂಬ ಪ್ರಾರ್ಥನೆಯ ಉದ್ದೇಶವು ಸಫಲವಾದರೆ ಸಾಕು. (ಮುಂದೆ ಸಾಗುವದು.)

V. M. TATTI,

ಧಾರವಾಡ ಟ್ರೇನಿಂಗ ಕಾಲೇಜದ ಶಾರೀರಿಕ ಶಿಕ್ಷಣದ ವಾರ್ಷಿಕೋತ್ಸವವು.

(ಬರೆದು ಬಂದದ್ದು.)

ಪರೀಕ್ಷೆಯಾದ ಬಳಿಕ ನಾಲ್ಕು ದಿನಗಳು.

ಆಕ್ಟೋಬರದಲ್ಲಾಗುವ ಟ್ರೇನಿಂಗ ಕಾಲೇಜದ ವಾರ್ಷಿಕ ಪರೀಕ್ಷೆಯಾದ ಬಳಿಕ ವಿದ್ಯಾರ್ಥಿಗಳನ್ನು ಶಿಕ್ಷಕರಾಗಿ ಕಳಿಸುವ ಪರಿಪಾಠವದೆ. ಪ್ರವೇಶ ಪರೀಕ್ಷೆಯಾದ

ನಂತರ ಯಶಸ್ವಿಗಳಾದ ವಿದ್ಯಾರ್ಥಿಗಳು ಒಮ್ಮೆ ಕಾಲೇಜದ ಅಭ್ಯಾಸದಲ್ಲಿ ತೊಡಗಿ ಕೊಂಡ ಬಳಿಕ ಬೇರೆ ಯಾವ ಕೆಲಸದಲ್ಲಿಯೂ ತಮ್ಮ ಮನಸ್ಸನ್ನು ತೊಡಕಿಸಲಿಕ್ಕೆ ಅವಕಾಶವಿರುವದಿಲ್ಲ. ಅದರಿಂದ ಟ್ರೇನಿಂಗ ಕಾಲೇಜದ ಬಹುತರ ಎಲ್ಲ ವಿದ್ಯಾರ್ಥಿಗಳೂ ಮೂರು ವರ್ಷ ಧಾರವಾಡದಲ್ಲಿ ಕಾಲಕಳೆದರೂ ಇಲ್ಲಿಯ ಅನೇಕ ಸ್ಥಳಗಳನ್ನು ನೋಡಿ ಅವುಗಳಿಂದ ಕಲಿಯಬಹುದಾದ ಸಂಗತಿಗಳ ಜ್ಞಾನವನ್ನು ಮಾಡಿಕೊಳ್ಳುವದಾಗುವ ದಿಲ್ಲ. ಇಂಗ್ಲಂಡದೊಳಗಿನ ಒಂದೊಂದು ಪಟ್ಟಣದಲ್ಲಿಯ ಸಾರ್ವಜನಿಕ ಉದ್ಯಾನಗ ಳಿಷ್ಟೆಂಬ ಸಂಗತಿಯು ನಮಗೆ ನಿತ್ಯಪಾಠದ್ದಾದರೂ ಧಾರವಾಡದ ಭಾಗಗಳೇ ಸಂಪೂ ರ್ಣವಾಗಿ ಗೊತ್ತಿರಬಾರದೆಂದರೆ ಬಹಳೇ ಶೋಚನೀಯವಾದ ಸಂಗತಿಯು. ಈ ಕೊರ ತೆಯನ್ನು ದೂರಮಾಡುವದಕ್ಕಾಗಿಯೂ ಹುಡುಗರಿಗೆ ಅವಶ್ಯವಾಗಿ ದೊರೆಯಬೇಕಾದ ವಿಶ್ರಾಂತಿಯು ಲಭಿಸುವದಕ್ಕಾಗಿಯೂ ಗುರುವರ್ಯ ರಾವಸಾಹೇಬ ಪ್ರಿನ್ಸಿಪಾಲರವರು ೧೧ ನೇ ತಾರೀಖಿಗೆ ಪರೀಕ್ಷೆಯು ಮುಗಿದ ಬಳಿಕ ತಾರೀಖು ೧೨ ರಿಂದ ಮೂರು ದಿನ ಗಳ ವರೆಗೆ ನಿತ್ಯದಲ್ಲಿ ಧಾರವಾಡದ ಕೆಲವು ಭಾಗವನ್ನು ನೋಡಿಕೊಂಡು ಬರುವ ವ್ಯವಸ್ಥೆಯನ್ನು ಏರ್ಪಡಿಸಿದರು. ಇದೇ ನಿಜವಾದ ವಿಶ್ರಾಂತಿಯೆಂದು ಹೇಳಬಹುದು. ಅವಯವಗಳ ಚಲನವಲನವಿಲ್ಲದಂತೆ ಸುಮ್ಮನೆ ಒತ್ತಟ್ಟಿಗೆ ಹರಟಿಕೊಚ್ಚುತ್ತ ಕೂಡ್ರು ವದು ವಿಶ್ರಾಂತಿಯೆನಿಸದು. ವಿಶ್ರಾಂತಿಯ ದಿವಸಗಳಲ್ಲಿ ಮನಸ್ಸಿಗೆ ಆಹ್ಲಾದವೆನಿಸುವ ಹಲವು ಕೆಲಸಗಳನ್ನು ಮಾಡುವದು ಯೋಗ್ಯವಾಗಿರುವದು. ಊರಸುತ್ತಲಿರುವ ಪ್ರೇಕ್ಷಣೀಯ ಸ್ಥಳಗಳ ಪ್ರವಾಸಮಾಡುವದು, ಹಲವು ಮನೋಹ್ಲಾದಕ ಆಟಗಳನ್ನಾ ಡುವದು, ಸುಂದರವಾದ ಚಿತ್ರಗಳನ್ನು ನಿರೀಕ್ಷಿಸುವದು (ಇದಕ್ಕೆ ಮ್ಯಾಜಿಕ್ ಲ್ಯಾಂಟ ರ್ನವು ಉತ್ತಮವಾದದ್ದು) ಇವೇ ಮೊದಲಾದ ಕೆಲಸಗಳನ್ನು ಮಾಡುವದು ಉತ್ತಮ ವಾದುದೆಂಬದು ಪ್ರತಿಯೊಬ್ಬನಿಗೆ ಗೋಚರವಾಗುಪದು. ಟ್ರೇನಿಂಗ ಕಾಲೇಜದ ವಿದ್ಯಾ ರ್ಥಿಗಳು ಪರೀಕ್ಷೆಯಾದ ಬಳಿಕ ಯಾವ ಯಾವ ರೀತಿಯಲ್ಲಿ ದಿವಸಗಳನ್ನು ಕಳೆದರು? ಎಂಬದನ್ನು ವಿಚಾರಿಸಲು ಪ್ರತ್ಯಕ್ಷವಾಗಿ ನಿಜವಾದ ವಿಶ್ರಾಂತಿಯ ಕಲ್ಪನೆಯುಂಟಾಗು ತ್ತದೆ. ಅದಕ್ಕಾಗಿ ಆಯಾ ದಿವಸಗಳಲ್ಲಿಯ ವಿದ್ಯಾರ್ಥಿಗಳ ಕೆಲಸಗಳನ್ನು ಇದರಡಿ ಯಲ್ಲಿ ಕೊಡುವೆವು.

ತಾರೀಖು ೧೨–೧೦–೧೭ ನೇ ಇಸವಿ.

ಈ ದಿವಸ ಧಾರವಾಡದಿಂದ ಸುಮಾರು ಮೂರು ನಾಲ್ಕು ಮೈಲುಗಳ ಮೇಲಿ ರುವ 'ಗವ್ಹರ್ನಮೆಂಟ ಫಾರ್ಮ'ಕ್ಕೆ ಹೋಗತಕ್ಕದ್ದೆಂದು ಮೊದಲೇ ನಿರ್ಣಯಿಸಲ್ಪ ಟ್ಟಿತ್ತು ಹೋಗಿ ಬರುವದಕ್ಕೆ ಅನುಕೂಲವೂ ಸುಲಭವೂ ಆಗಬೇಕೆಂದು ಮುಂ ಜಾನೆ ೭ರೊಳಗಾಗಿಯೇ ಎಲ್ಲರೂ ಊಟ ತೀರಿಸಿಕೊಳ್ಳತಕ್ಕದ್ದೆಂದು ಗೊತ್ತಾಗಿತ್ತು. ಗೊತ್ತಾದ ವೇಳೆಗೆ ಊಟವು ಮುಗಿದ ಬಳಿಕ ಎಲ್ಲರೂ ತಮ್ಮ ತಮ್ಮ ಕೋಣೆಗಳಲ್ಲಿ ಅನೇಕ ಕಾರ್ಯಗಳಲ್ಲಿ ಮಗ್ನರಾಗಿದ್ದರು. ಊಟವಾದ ಬಳಿಕ ಹೊರಹೊರಡುವದಕ್ಕೆ

ಅವಕಾಶವು ಲೇಶವಾಗಿದ್ದರೂ ವಿದ್ಯಾರ್ಥಿಗಳಲ್ಲಿ ನಡೆದ ಸಂಭಾಷಣಗಳು ತುಸುವಾಗಿದ್ದಿಲ್ಲ. ಒಬ್ಬನು ತನ್ನ ಇತಿಹಾಸ ಪೇಪರಿನ ಬರಹದ ವರ್ಣನವನ್ನು ಮಾಡುದದರಲ್ಲಿ ಬೇರೊಬ್ಬನು ಗೆಳೆಯನ ಚೇಷ್ಟೆ ಮಾಡುವದರಲ್ಲಿ ಇನ್ನೊಬ್ಬನು ಗುಮ್ಮನಗುಸುಕನಂತೆ ಏಕಾಂತವಾಸಿಯಾಗಿ, ಹೀಗೆ ಅನೇಕರು ಅನೇಕ ರೀತಿಯಾಗಿ ಸೂಚನಾ ಗಂಟೆಯ ವರೆಗಿನ ಕಾಲವನ್ನು ಕಳೆಯಹತ್ತಿದ್ದರು. "ಭಿನ್ನರುಚಿರ್ಹಿ ಲೋಕಾಃ" ಒಂಬ ಮಾತಿನ ಸತ್ಯತೆಯನ್ನು ಇಂದು ಟ್ರೇನಿಂಗ ಕಾಲೇಜದಲ್ಲಿ ಸ್ಪಷ್ಟವಾಗಿ ನೋಡಲಿಕ್ಕೆ ಸಿಗುವಂತಿತ್ತು.

ಸುಮಾರು ೬, ೬½ ಘಂಟೆಯಾಗಿದೆ. ಹೊರಡುವ ವೇಳೆಯಾದ್ದರಿಂದ ಸೂಚನಾ ಗಂಟೆಯ ನಾದವು ಬಲಾತ್ಕಾರದಿಂದ ಎಲ್ಲರ ಕರ್ಣಪಥವನ್ನು ಸೇರಿ ಅವರ ವಿಧ-ವಿಧದ ಭಾಷಣಗಳನ್ನು ನಿಲ್ಲಿಸಿಬಿಟ್ಟಿತು. ಕೂಡಲೆ ಎಲ್ಲರೂ ಮೊದಲೇ ಗೊತ್ತಾದಂತೆ ಜನರಲ್ ಹಾಲಿನ ಸಮೀಪದಲ್ಲಿ ಕಲೆತೆವು. ವ್ಯವಸ್ಥೆಗಾಗಿ ನಿಯಮಿಸಲ್ಪಟ್ಟ ಗು. **ಪವಾರ**ರವರ ಅಪ್ಪಣೆಯಂತೆ ಎಲ್ಲರೂ ವ್ಯವಸ್ಥಿತರಾಗಿ ನಿಂತೆವು. ಇವತ್ತಿನ ಪ್ರವಾಸವುಗವ್ಹರ್ನಮೆಂಟ ಫಾರ್ಮಿನದಿದ್ದದರಿಂದ ಪ್ರಕೃತಿಪಾಠದ ಅಧ್ಯಾಪಕರಾದ ಗು. **ರಾಮಬ್ರಹ್ಮ**ರವರು ನಿಯಮಿಸಲ್ಪಟ್ಟಿದ್ದರು. ಅವರ ಸಂಗಡಲೇ ಸಹಾಯಕ್ಕಾಗಿ ಗು. **ನಾಯಿಕಮಾಸ್ತರ**ರವರೂ ಬಂದಿದ್ದರು.

ಗುರುಗಳ ಅಪ್ಪಣೆಯಂತೆ ಒಂದು ಕ್ರಮಕ್ಕನುಸರಿಸಿ ಸಾಲ್ಗೊಂಡು ಹೋಗುವಾಗ ಕಾಲೇಜದ ಸುವ್ಯವಸ್ಥೆಯೂ, ವಿದ್ಯಾರ್ಥಿಗಳ ಆಜ್ಞಾಪಾಲಕತ್ವವೂ ಒಡೆದು ಕಾಣುತ್ತಿದ್ದವು. ಈ ಮೇರೆಗೆ ದಾರಿಯಿಂದ ನಡೆದು ಹೋಗುವಾಗ ಸುತ್ತಲಿರುವ ಹಲವು ಬಿಳೆಗಳನ್ನೂ, ಸೃಷ್ಟಿ ಸೌಂದರ್ಯವನ್ನೂ ನಿರೀಕ್ಷಿಸುತ್ತ ಸುಮಾರು ೯½ ಘಂಟೆಗೆ ಇಚ್ಛಿತ ಸ್ಥಳಕ್ಕೆ ಮುಟ್ಟಿದೆವು. ಸುಪರಿಂಟಿಂಡೆಂಟರವರ ಅಪ್ಪಣೆಯಾದ ಮೇಲೆ ಒಳಗೆ ಪ್ರವೇಶ ಮಾಡಿದೆವು. ಅಹಹ! ಎಂಥ ಚಿತ್ರ ವಿಚಿತ್ರವಾದ ಗಿಡಗಳು! ಹೂಕಾಯಿಗಳು!! ವಿದ್ಯಾರ್ಥಿಗಳು ಆ ಗಿಡಗಳ ಸಂಬಂಧವಾಗಿ ಮಾಹಿತಿಯನ್ನು ಮಾಡಿಕೊಳ್ಳಬೇಕೆಂದು ಬಹಳೇ ಉತ್ಕಟೇಚ್ಛೆಯುಳ್ಳವರಾಗಿದ್ದರು, ಅಷ್ಟರಲ್ಲಿ ಫಾರ್ಮಿನ ಸುಪರಿಂಟಿಂಡೆಂಟರವರು ತೋರಿಸಿಕೊಂಡು ಬರುವದಕ್ಕಾಗಿ ತಮ್ಮಲ್ಲಿಯ ನಾಲ್ವರು ಅಧಿಕಾರಿಗಳನ್ನು ಕಳಿಸಿಕೊಟ್ಟರು. ನಮ್ಮ ಇಡೀ ಸಮಾಜವು ದೊಡ್ಡದೂ ಒಂದೇ ಸಾರೆ ನೋಡಿಕೊಂಡು ಬರಲಿಕ್ಕೆ ಅಸಾಧ್ಯವಾದದ್ದೂ ಇದ್ದದರಿಂದ ಅದರಲ್ಲಿ ನಾಲ್ಕು ಗುಂಪುಗಳನ್ನು ಮಾಡಿ ಒಂದೊಂದನ್ನು ಒಬ್ಬೊಬ್ಬ ಅಧಿಕಾರಿಯ ಕಡೆಗೆ ಕೊಟ್ಟರು. ಪ್ರತಿಯೊಂದು ಗುಂಪಿನವರ ಸಂಗಡ ಬಂದ ಫಾರ್ಮಿನ ಅಧಿಕಾರಿಯು ಒಳ್ಳೇ ಉತ್ಸಾಹಿಯಿದ್ದು ಪ್ರೇಮಪೂರ್ವಕವಾಗಿ ವಿದ್ಯಾರ್ಥಿಗಳಿಗೆ ತಿಳಿಸುತ್ತಿದ್ದನು.

ನಮ್ಮ ಗುಂಪಿನವರು ಮುಂಚೆ ದ್ರಾಕ್ಷೆಯ ತೋಟದ ಕಡೆಗೆ ಹೋದೆವು. ಅಲ್ಲಿಯ ಬಣಗಿದಂತೆ ತೋರುತ್ತಿದ್ದ ಒಳ್ಳೆಗಳ ದೊಡ್ಡ ದೊಡ್ಡ ಕಾಂಡಗಳನ್ನು ನೋಡಿ ನಮ್ಮಲ್ಲಿ ಅನೇಕರು 'ಆ ಬಣಗಿದ ಕಾಂಡಗಳನ್ನು ಹಂದರದ ಮೇಲೆ ಹಬ್ಬಿಸಿ ಯಾಕೆ ವ್ಯರ್ಥವಾಗಿ ಶ್ರಮ ಪಡುವರು. ಅವುಗಳಿಂದೇನು ಪ್ರಯೋಜನವು' ಇತ್ಯಾದಿ ಶಂಕೆಗಳಿಂದ

ವ್ಯಾಕುಲಿತರಾದರು. ಅಷ್ಟರಲ್ಲಿಯೇ ಅಧಿಕಾರಿಯು ದ್ರಾಕ್ಷೆಯ ಬೆಳೆಯ ಸಂಬಂಧದಿಂದ ಅನೇಕ ಮಹತ್ವವೂ ಉಪಯುಕ್ತವೂ ಆದ ಸಂಗತಿಗಳನ್ನು ಹೇಳಿ ನಮ್ಮ ಅನೇಕ ಶಂಕೆಗಳನ್ನು ಹೋಗಲಾಡಿಸಿದನು. 'ಬಾಹ್ಯ ಸ್ವರೂಪವು ಸುಂದರವಾಗಿರದಿದ್ದರೂ ಅನೇಕ ವಸ್ತುಗಳು ಒಳ್ಳೇ ಉಪಯುಕ್ತವಾಗಿರುತ್ತವೆ' ಎಂಬದನ್ನು ಪ್ರತ್ಯಕ್ಷವಾಗಿ ಕಂಡೆವು. ಮುಂದೆ ಅಧಿಕಾರಿಯು ನಮ್ಮನ್ನು ಬಟಾಟಿಯ ಪೈರಿನ ಕಡೆಗೆ ಕರಕೊಂಡು ಹೋದನು. ಅಲ್ಲಿ ಬಟಾಟಿಯನ್ನು ತೆಗೆಯುವ ಕೆಲಸವು ನಡೆದಿತ್ತು. ಬಟಾಟಿಯ ಪೈರಿನ ಸಂಬಂಧವಾಗಿ ಸಂಪೂರ್ಣವಾಗಿ ತಿಳಿಯುವದಕ್ಕೆ ಅನುಕೂಲವಾಗಿದ್ದದರಿಂದ ಆಗ ಹುಡುಗರಿಗೆ ಅದ ಆನಂದವನ್ನು ಹೇಳಲಾಸಲ್ಲ. ಅದರ ವಿಷಯಕ್ಕೆ ಅಧಿಕಾರಿಯು ತಿಳಿಸಿ ಹೇಳುತ್ತಿದ್ದರೂ ವಿದ್ಯಾರ್ಥಿಗಳಲ್ಲಿಯ ಕೇಳಿ ತಿಳುಕೊಳ್ಳಬೇಕೆಂಬ ಲವಲವಿಕೆಯು ಹೆಚ್ಚಾಗಿ ಅದು ವಿದ್ಯಾರ್ಥಿಗಳಿಗೆ ನಡುನಡುವೇ ಕೇಳಲಿಕ್ಕೆ ಹಚ್ಚುತ್ತಿತ್ತು. ಮುಂದೆ ಕಬ್ಬಿನ ಹೊಲಕ್ಕೆ ಹೋದೆವು. ಒಂದೇ ಹೊಲದಲ್ಲಿ ಎರಡು ರೀತಿಯಿಂದ ಬಿತ್ತಿದ್ದನ್ನು ಕಂಡು ಹೀಗೆ ಯಾಕೆ ಎಂದು ಕೇಳಿದೆವು. ಅದಕ್ಕೆ ಅವರು "ಕಬ್ಬಿನ ಪೈರಿನ ವಿಷಯವಾಗಿ ಆಧುನಿಕ ಪದ್ಧತಿಯಿಂದ ಅದರಲ್ಲಿ ಮಾಡಬೇಕಾದ ಸುಧಾರಣೆ, ಅದರ ಅವಶ್ಯಕತೆ, ಅದರಿಂದಾಗತಕ್ಕ ಲಾಭ ಇತ್ಯಾದಿ ಸಂಗತಿಗಳ ಬಗ್ಗೆ ವಿವೇಚಿಸಿದ್ದಲ್ಲದೆ ಈ ಪದ್ಧತಿಯಿಂದ ನಿಜವಾಗಿ ಲಾಭವಾಗುತ್ತದೆಂದು ಸಪ್ರಯೋಗವಾಗಿ ಸಿದ್ಧವಾದರೆ ಸಾಮಾನ್ಯ ಒಕ್ಕಲಿಗರೂ ಈ ಪದ್ಧತಿಯನ್ನೇ ಅನುಕರಿಸಲಿಕ್ಕೆ ಸೂಚಿಸುವೆವೆಂದೂ ಅದಕ್ಕಾಗಿಯೇ ಈಗ ನಾವು ಹಳ್ಳಿಯ ಒಕ್ಕಲಿಗರ ಪದ್ಧತಿಯಿಂದ ಕೆಲವು, ಆಧುನಿಕ ಪದ್ಧತಿಯಿಂದ ಕೆಲವು ಬಿತ್ತಿರುತ್ತೇವೆಂದೂ" ಹೇಳಿದರು. ಇದಲ್ಲದೆ ಹಲವು ಬೆಳೆಗಳನ್ನೂ ಫಲವೃಕ್ಷಗಳನ್ನೂ ತೋರಿಸಿ ಅವುಗಳ ಜೀವನ ಕ್ರಮ, ಅವು ಚನ್ನಾಗಿ ಫಲಿಸಬೇಕಾದರೆ ಅಗತ್ಯವಾಗಿ ಮಾಡತಕ್ಕ ಕೆಲಸ, ಅವಕ್ಕೆ ಒದಗಿಸಿ ಕೊಡಬೇಕಾದ ಸಾಹಿತ್ಯ ಇವೇ ಮೊದಲಾದವುಗಳನ್ನು ಸುಸ್ಪಷ್ಟವಾಗಿ ತಿಳಿಸಿ ಹೇಳಿದರು. ಆ ಮೇಲೆ ಹೊಸ ಪದ್ಧತಿಯ ಕೃಷಿಯ ಯಂತ್ರಗಳನ್ನು ತೋರಿಸುವದಕ್ಕೆಂದು ಯಂತ್ರ ಶಾಲೆಗೆ ಕರೆದೊಯ್ದರು. ಹೊಸ ಪದ್ಧತಿಯ ನೇಗಿಲು ಹೊಡೆಯುವ ಯಂತ್ರಗಳನ್ನೂ ಹರಗುವ ಸಾಮಾನುಗಳನ್ನೂ ಗೋದಿಯ ಹುಲ್ಲು ತುಳಿಸುವ ಯಂತ್ರವನ್ನೂ ತೋರಿಸಿದ್ದಲ್ಲದೆ ಅವುಗಳ ಉಪಯೋಗ ಕ್ರಮವನ್ನೂ ಅವುಗಳಿಂದಾಗತಕ್ಕ ಲಾಭವನ್ನೂ ವಿಸ್ತರಿಸಿ ಹೇಳಿದರು. ಇವನ್ನೆಲ್ಲ ನೋಡಿ ಆನಂದ ಭರಿತರಾಗಿ ಪ್ರಯೋಗ ಶಾಲೆಗೆ ಹೋದೆವು. ಅಲ್ಲಿ ಸೂಕ್ಷ್ಮದರ್ಶಕ ಯಂತ್ರವಿದ್ದು ಅದರಲ್ಲಿ ನೋಡುವದಕ್ಕೆಂದು ಸಸ್ಯಗಳ ರೋಗಾದಿಗಳ ಮೂಲಕಾರಣವಾದ ಕ್ರಿಮಿಗಳ ಸ್ಲೇಟುಗಳು ಇದ್ದವು. ಸಸ್ಯರೋಗದ ಮೇಲಿನ ಅನೇಕ ಔಷಧಿಗಳು ಇದ್ದವು ಅಲ್ಲದೆ ಅನೇಕ ರಾಸಾಯನಿಕ ಪ್ರಯೋಗದ ಅನೇಕ ವಸ್ತುಗಳೂ ಇದ್ದವು. ಪಾಶ್ಚಾತ್ಯ ಪದ್ಧತಿಯಂತೆ ನಡೆದ ಅನೇಕ ಕಾರಖಾನೆಗಳಲ್ಲಿ ಪ್ರಯೋಗ ಶಾಲೆಯು ಅತ್ಯವಶ್ಯವಾಗಿ ಇದ್ದೇ ಇರುತ್ತದೆ. ಇದರಿಂದಾಗುವ ಲಾಭವನ್ನು ಅರಿಯದ್ದರಿಂದ ನಮ್ಮ ಕೆಲವು ದೊಡ್ಡ ಕಾರಖಾನೆಗಳಲ್ಲಿ ಪ್ರಯೋಗ ಶಾಲೆಯು ಇರುತ್ತಿದ್ದಿಲ್ಲ. ಆದರೆ ಅದರ ಮಹ

ತ್ವವು ಇತ್ತಿತ್ತಲಾಗಿ ಪಾಶ್ಚಾತ್ಯರ ಸಂಸರ್ಗದಿಂದ ತಿಳಿಯಹತ್ತಿದ್ದರಿಂದ ನಮ್ಮ ಜನರೂ ಈಗೀಗ ಪ್ರಯೋಗ ಶಾಲೆಯನ್ನು ತಮ್ಮ ಕಾರಖಾನೆಯ ಒಂದು ಅಂಗವಾಗಿ ಮಾಡಹತ್ತಿದ್ದಾರೆ.

ಇವನ್ನೆಲ್ಲ ನೋಡಿ ಮುಂದೆ ದನಗಳ ವ್ಯವಸ್ಥೆಯನ್ನು ನೋಡುವದಕ್ಕೆ ಹೋದೆವು. ಅಲ್ಲಿ ಆಧುನಿಕ ಪದ್ಧತಿಯಂತೆ ಮೇವನ್ನು ಉಪಯೋಗಿಸುವದನ್ನು ಕಂಡು ಹಳ್ಳಿಯ ಒಕ್ಕಲಿಗರ ಮೇವಿನ ಉಪಯೋಗ ಪದ್ಧತಿಯನ್ನು ವಿಚಾರಿಸಲು ಬಹಳ ಖೇದವೆನಿಸಿತು. ತಿನ್ನುವದು ತುಸು; ಚೆಲ್ಲುವದು ಬಹಳ. ಇದು ನಮ್ಮ ಪದ್ಧತಿಯು, ಹಾಕಿದಷ್ಟೆಲ್ಲವನ್ನು ದನಗಳು ಪ್ರೀತಿಯಿಂದ ತಿನ್ನುವಂತೆ ಮಾಡುವದೇ ಪಾಶ್ಚಾತ್ಯ ಪದ್ಧತಿಯು. ಇವೆರಡರಲ್ಲಿ ಮಹದಂತರವು. ಹೀಗಾಗಲಿಕ್ಕೆ ನಮ್ಮ ಜನರ ಅಕ್ಷರ ಶೂನ್ಯತೆಯೇ ಬಹ್ವಂಶದಿಂದ ಕಾರಣವಾಗಿರುತ್ತದೆ. ದನದ ಕೊಟ್ಟಿಗೆಗಳನ್ನು ನೋಡಿದೆವು. ಅಲ್ಲಿಯೂ ವಿಶಿಷ್ಟ ವ್ಯವಸ್ಥೆ. ಎಲ್ಲಿ ನೋಡಿದರೂ ವ್ಯವಸ್ಥೆಯೇ ವ್ಯವಸ್ಥೆ. ಹೀಗೆ ವ್ಯವಸ್ಥಾಸಾಗರದಲ್ಲಿ ಈಸಾಡಿ ದಂಡೆಗೆ ಬಂದು ಮುಟ್ಟಿದೆವು. ಬಳಿಕ ಮೊದಲಿನಂತೆಯೇ ವ್ಯವಸ್ಥಿತ ರೀತಿಯಿಂದ ಕಾಲೇಜಕ್ಕೆ ಬಂದೆವು. ಅಷ್ಟರಲ್ಲಿ ಕಾಲೇಜದಲ್ಲಿ ಉಪಹಾರದ ಸಿದ್ಧತೆಯಾಗಿತ್ತು. ಅದನ್ನು ತಕ್ಕೊಂಡು ವಿಶ್ರಮಿಸಿದೆವು.

ಸಾಯಂಕಾಲಕ್ಕೆ ೭೫ರಿಂದ ೮೦ರ ವರೆಗೆ ಮ್ಯಾಜಿಕ್‌ಲ್ಯಾಂಟರ್ನವು ನಡೆಯುತ್ತದೆಂದು ಗೊತ್ತಾಗಿದ್ದರಿಂದ ೭೨ ಸುಮಾರಕ್ಕೆ ಊಟ ತೀರಿಸಿಕೊಂಡು ಗೊತ್ತಾದ ನೇಳಿಗೆ ಸೂಚನಾಗಂಟೆಯು ಆಗಲು ಎಲ್ಲರೂ ಜನರಲ್ ಹಾಲಿನಲ್ಲಿ ಒಟ್ಟು ಗೂಡಿದೆವು. ಗು. **ನಾಯಿಕ** ಮಾಸ್ತರರವರೇ ಇಂದಿನ ವಿಷಯವನ್ನು ವ್ಯಾಖ್ಯಾನಿಸಿದರು. ನೊಣದ ಜೀವನ ಕ್ರಮವೇ ಅವರು ಪ್ರತಿಪಾದಿಸತಕ್ಕ ವಿಷಯವಾಗಿತ್ತು. ನೊಣದ ಎಲ್ಲ ಅವಸ್ಥೆಗಳನ್ನೂ ಸೂಕ್ಷ್ಮಸೂಕ್ಷ್ಮ ಅವಯವಗಳನ್ನೂ ಚಿತ್ರದಿಂದ ತೋರಿಸಿಯೂ ವಿವರಿಸಿಯೂ ಹೇಳಿದರು. ಅದರ ವೃತ್ತಿಯನ್ನು, ವಿಶೇಷವಾಗಿ ಎಂಥ ಸ್ಥಳದಲ್ಲಿ ಯಾವ ರೂಪದಿಂದ ಇತ್ಯಾದಿ– ಬೆಳವಣಿಗೆ, ಆಹಾರವಿಶೇಷ ಇವೆಲ್ಲವನ್ನೂ ವಿವೇಚಿಸಿದರು. ನಮ್ಮ ಜನರಲ್ಲಿದ್ದ "ನೊಣವು ಯಃಕಶ್ಚಿತ್ಪ್ರಾಣಿಯು; ಅದು ಎಲ್ಲಿ ಕೂತರೇನು, ಅದರಿಂದ ಮನುಷ್ಯನಿಗೆ ಅಪಾಯ ಸಂಭವಿಸುವದಿಲ್ಲ. ಆದ್ದರಿಂದ ಅದರ ಬಗ್ಗೆ ಕಾಳಜಿ ತಕ್ಕೊಳ್ಳುವ ಕಾರಣವಿಲ್ಲ" ಎಂಬ ಹೆಡ್ಡತನದ ಕಲ್ಪನೆಯನ್ನು ಅವರು, "ನೊಣದ ಬಗೆ ಜಾಗರೂಕರಾಗಿರ್ರಿ. ಅದು ಬೇಕಾದ ಸ್ಥಳದಲ್ಲಿ ಕೂತು ಕೊಳ್ಳುವದರಿಂದ ಅದರ ಕಾಲಿಗೆ ಸೂಕ್ಷ್ಮವಾದ ರೋಗಗಳ ಪ್ರಾಣಿಗಳು ಅಂಟಿಕೊಂಡಿರುತ್ತವೆ. ಅದು ನಮ್ಮ ಆಹಾರದ ಪದಾರ್ಥಗಳಲ್ಲಿ ಕೂತಿತೆಂದರೆ ಆ ರೋಗ ಜನಕ ಪ್ರಾಣಿಗಳು ಆಹಾರಗಳಲ್ಲಿ ಸೇರಿ ನಮ್ಮ ಶರೀರವನ್ನು ಅನಾಯಾಸದಿಂದ ಸೇರುವವು. ಅಂಥ ಆಹಾರವನ್ನು ತಿಂದ ಮನುಷ್ಯನು ರೋಗದ ಬಾಧೆಯನ್ನನುಭವಿಸುವನು." ಇವೇ ಮೊದಲಾದ ಮಾತುಗಳಿಂದ ಹೇಳಲಾಡಿಸಿದರು.

ತಾರೀಖು ೧೩—೧೦—೧೭ನೇ ಇಸವಿ.

ಈ ದಿವಸ ಕೆಲಗೇರಿಯ ಪ್ರವಾಸವನ್ನಿಟ್ಟಿತ್ತು. ನಿನ್ನಿನಂತೆಯೇ ಇಂದಾದರೂ ಊಟ—ಉಪಹಾರಗಳ ವ್ಯವಸ್ಥೆಯಾಗಿತ್ತು. ಕಾರ್ಯಕ್ರಮವಾದರೂ ನಿನ್ನಿನಂತೆಯೇ ಏರ್ಪಡಿಸಲ್ಪಟ್ಟಿತ್ತು. ಕೆಲಗೇರಿಯು ಕಾಲೇಜದಿಂದ ದೂರವಿಲ್ಲ. ಆದ್ದರಿಂದ ನಮ್ಮಲ್ಲಿ ಅದನ್ನು ನೋಡಿದವರೇ ಹೆಚ್ಚು. ಆದರೂ ಸಾಮೂಹಿಕವಾಗಿ ಹೋಗುವದರಿಂದಲೂ ಅಲ್ಲಿ ಯಂತ್ರಾದಿಗಳನ್ನು ತೋರಿಸಿ ತಿಳಿಸುವರೆಂದು ಗೊತ್ತಾದ್ದರಿಂದಲೂ ಎಲ್ಲರೂ ಉತ್ಸಾಹಿಗಳಾಗಿ ಹೊರಟರು, ಗು. **ಕೊಲ್ಹಟಕರ** ಮತ್ತು ಗು. **ಕಟ್ಟಿ** ಇವರೇ ನಮ್ಮ ವ್ಯವಸ್ಥಾಪಕರಾಗಿದ್ದರು. ಕೇಲಗೇರಿಗೆ ಮುಟ್ಟಿದನಂತರ ಅದರ ಸುತ್ತಲಿನ ದೃಶ್ಯವನ್ನೂ ಉಳಿದ ಪ್ರೇಕ್ಷಣೀಯ ಸ್ಥಳಗಳನ್ನೂ ಕಣ್ಣುತುಂಬ ನೋಡಿ ಆನಂದಭರಿತರಾಗಿ ಮರಳಿ ಬಂದೆವು. ಒಳಿಕ ಉಪಹಾರವನ್ನು ಸೇವಿಸಿದೆವು.

ಸಾಯಂಕಾಲಕ್ಕೆ ಸುಮಾರು ೪ ರಿಂದ ೯ ರ ವರೆಗೆ ಗು. **ರಾಮಬ್ರಹ್ಮ**ರವರು ಮ್ಯಾಜಿಕ್‌ಲ್ಯಾಂಟರ್ನ್‌ದ ಸಹಾಯದಿಂದ ಜೀನ್ಯೊಣದ ಬಗ್ಗೆ ಹೇಳಿದರು. ಜೀನ್ಯೊಣದ ಉಪಯುಕ್ತತೆಯನ್ನೂ ಅವುಗಳನ್ನು ಜೋಪಾನ ಮಾಡಿ ಯಾವ ರೀತಿಯಲ್ಲಿ ಲಾಭ ಹೊಂದತಕ್ಕದ್ದೆಂಬದನ್ನೂ ಸುಸ್ಪಷ್ಟವಾಗಿ ತಿಳಿಸಿಹೇಳಿದರು.

ತಾರೀಖು ೧೪—೧೦—೧೭ನೇ ಇಸವಿ.

ಈ ದಿವಸ ಸೋಮೇಶ್ವರ ನುಗ್ಗೀಕೇರಿಗಳನ್ನು ನೋಡಿಕೊಂಡು ಬರತಕ್ಕದ್ದೆಂದು ನಿಶ್ಚಯವಾಗಿತ್ತು. ದೇವಾಲಯಕ್ಕೆ ಹೋಗತಕ್ಕದ್ದಿದ್ದದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯ ಮುಖದ ಮೇಲೆ ಭಕ್ತಿರಸವು ಹರಿದುಬರುತ್ತಿತ್ತು. ನುಗ್ಗೀಕೇರಿಯ ಶ್ರೀ ಪ್ರಾಣೇಶ್ವರನ ದರ್ಶನಾರ್ಥಿಯಾಗಿ ಪ್ರತಿಯೊಬ್ಬನು ಜಿದ್ದುಕಟ್ಟಿ ನಡೆಯಹತ್ತಿದನು. ಈ ಮೇರೆಗೆ ಉತ್ತರದಿಂದ ನಡೆದು ದೇವದರ್ಶನ ತಕ್ಕೊಂಡು ಅಲ್ಲಿ ಕೆಲಹೊತ್ತಿನವರೆಗೆ ಕೂತೆವು. ಆಗ ನಮ್ಮಲ್ಲಿ ಅನೇಕರು ಸುಸ್ವರದಿಂದ ಹಾಡಿದರು. ಕೆಲವರು ಮನೋರಂಜಕ ಕೃತಿಗಳನ್ನು ಮಾಡಿದರು. ಈರೀತಿಯಿಂದ ೨ ತಾಸುಗಳ ಕಾಲವನ್ನು ಆನಂದದಿಂದ ಕಳೆದು ಸೋಮೇಶ್ವರಕ್ಕೆ ಹೋದೆವು. ಅಲ್ಲಿಯ ಶಿವಾಲಯವನ್ನೂ ಹೊಂಡವನ್ನೂ ಸುತ್ತಲಿನ ದೃಶ್ಯವನ್ನೂ ಕಂಡು ತಿರುಗಿದೆವು.

ಸಾಯಂಕಾಲಕ್ಕೆ ಸುಮಾರು ೪ರಿಂದ ೯ ರ ವರೆಗೆ ಗು. **ಪುರೋಹಿತ**ರವರು 'ಶರೀರದ ಬೇರೆ ಬೇರೆ ಭಾಗಗಳು' ಎಂಬ ಮಹತ್ವವೂ ಉಪಯುಕ್ತವೂ ಆದ ವಿಷಯವನ್ನು ಮ್ಯಾಜಿಕ್‌ಲ್ಯಾಂಟರ್ನ್‌ದ ಸಹಾಯದಿಂದ ಪ್ರತಿಪಾದಿಸಿದರು.

(ಸಶೇಷ)

ವಿದ್ಯಾಖಾತೆಯ ನೋಟೀಸುಗಳು.

(೧)

ಮಿಸ್ತರ ಗದಿಗೆಯ್ಯಾ ಹುಚ್ಚಯ್ಯಾ ಹೊನ್ನಾಪುರಮಠ, ವಕೀಲ ಧಾರವಾಡ ಇವರಿಂದ ಬರೆಯಲ್ಪಟ್ಟ "ಬಾಲರಾಮಾಯಣ" ಮತ್ತು "ಸಾವಿತ್ರೆಯ ಚರಿತ್ರೆ" ಎಂಬ ಪುಸ್ತಕಗಳು ಈ ಭಾಗದ ವ್ಹರ್ನ್ಯಾಕ್ಯುಲರ ಬುಕ್ ಕಮಿಟಿಯ ಮೆಂಬರ ಜನರ ಅನುಮತಿಯ ಪ್ರಕಾರ ಕನ್ನಡ ಪ್ರಾಥಮಿಕ ಶಾಲೆಗಳ ಲಾಯಬ್ರರಿಯ ಬಗ್ಗೆಯೂ, ಇನಾಮಿನ ಬಗ್ಗೆಯೂ ಮಂಜೂರು ಮಾಡಲ್ಪಟ್ಟಿರುತ್ತವೆ.

ಎಜ್ಯುಕೇಶನಲ್ ಇನಸ್ಪೆಕ್ಟರ ದಕ್ಷಿಣಭಾಗ ಜಿಲ್ಲರ ಆಫೀಸು
ಧಾರವಾಡ.
ತಾರೀಖು ೨೦–೧೧–೧೯೧೭ ಇಸವಿ.

Sd. H. K. Gokhale.
for Educational Inspector, S. D.

(೨)

ಪ್ರಾಥಮಿಕ ಶಾಲೆಗಳಿಗೋಸ್ಕರ ಮಂಜೂರು ಮಾಡಿದಂಥ ಕೆಳಗಿನ ಪುಸ್ತಕಗಳ ಪಟ್ಟಿಯನ್ನು ಎಲ್ಲ ಜನರ ತಿಳುವಳಿಕೆಗಾಗಿ ಪ್ರಸಿದ್ಧ ಮಾಡಿರುತ್ತದೆ.

ಸಂಖ್ಯೆ	ಪುಸ್ತಕದ ಹೆಸರು.	ಯಾತರ ಬಗ್ಗೆ ಮಂಜೂರು ಮಾಡಿರುತ್ತದೆ.	ಬೆಲೆ.
೧	ವ್ಹಿ. ಕೆ. ಕ್ಷೀರಸಾಗರ, ಶಿಕ್ಷಕ ನಾರ್ಮಲ್‌ಸ್ಕೂಲ, ನಾಶಿಕ, ಮನುಷ್ಯ ಶರೀರ ಶಾಸ್ತ್ರದ ಪ್ರತಿಮಾ, ಸೂಚನೆಗಳು ಸಹಿತ.	ಪ್ರಾಥಮಿಕ ಹಾಗೂ ಸೇಕಂಡರೀ ಸಾಲೆಗಳ ಉಪಯೋಗಕ್ಕಾಗಿ.	೧೨ ರೂಪಾಯಿಗಳು.

Director Office of the Public Instruction, Poona, 2nd Nov. 1917.

(Sd.) K. S. VAKIL,
for Director of Public Instruction.

ಸಾಭಾರ ಸ್ವೀಕಾರ.

ಶ್ರೀಯುತ ಗದಿಗೆಯ್ಯಾ ಹುಚ್ಚಯ್ಯಾ ಹೊನ್ನಾಪುರಮಠ ಇವರು ನಮ್ಮ ಕಡೆಗೆ ಅಭಿಪ್ರಾಯಕ್ಕಾಗಿ ಕಳುಹಿಸಿದ (೧) ಸಚಿತ್ರಭಾರತ (೨) ನೀತಿಮಂಜರಿ (೩) ಬಾಲರಾಮಾಯಣ (೪) ಸಾವಿತ್ರೀಚರಿತ್ರ (೫) ರಾಮದಾಸಸ್ವಾಮಿಗಳ ಚರಿತ್ರ ಈ ಪುಸ್ತಕಗಳನ್ನು ಆಭಾರ ಪೂರ್ವಕ ಸ್ವೀಕರಿಸುವೆವು. ಅಭಿಪ್ರಾಯವನ್ನು ಸ್ಥಳಾನುಕೂಲತೆಯ ಪ್ರಕಾರ ಪ್ರಕಟಿಸುವೆವು.

ದಿಕರ್ನಾಟಕ ಟ್ರೇಡಿಂಗಕಂಪನಿ ಬುಕ್‌ಸೆಲರ್ಸ್ ಮತ್ತು ಪಬ್ಲಿಶರ್ಸ್ ಧಾರವಾಡ. ಇವರು ಕಳುಹಿಸಿದ 'ಕನ್ನಡ ಡಾಯರಿ'ಯನ್ನು ಅಭಾರ ಪೂರ್ವಕ ಸ್ವೀಕರಿಸುವೆವು. ಈ ಪುಸ್ತಕದ ಬಾಹ್ಯಸ್ವರೂಪವೂ ಮುದ್ರಣವೂ ಚೆನ್ನಾಗಿದೆ. ನುಣುಪಾದ ಉತ್ತಮ ಕಾಗದವನ್ನು ಉಪಯೋಗಿಸಿರುವರು. ಕಾಗದವು ತುಟ್ಟಿಯಾದ ಈ ಕಾಲದಲ್ಲಿ ಇದರ ಬೆಲೆಯು ೫ ಆಣೆ ಅಂದರೆ, ತೀರ ಕಡಿಮೆ ಬೆಲೆ ಅನ್ನಲು ಅಡ್ಡಿ ಇಲ್ಲ. ವಿವಿಧ ವಿಷಯ ಸಂಗ್ರಹವುಳ್ಳ ಈ ಡಾಯರಿಯು ವ್ಯಾಪಾರಸ್ಥರಿಗೆ ಬಹಳ ಉಪಯೋಗದ್ದಾಗಿರುವದು.

R. S. Kulkarni.
ಮ್ಯಾನೇಜರ
ಕನ್ನಡ ಶಾಲಾಪತ್ರಕ.

ಪತ್ರಗಳ ಸಾರಾಂಶ.

ಧಾರವಾಡ ಜಿಲ್ಲಾ ದೇವಗಿರಿ ಸಾಲೆಯ ಅಸಿ॥ ಮಾಸ್ತರ ಮಿ. ಶ್ರಿ. ದಾ. ಗಲಗಲಿ ಇವರು ತಮ್ಮ ಶಾಲೆಯಲ್ಲಿ ತಾ॥ ೨೯-೧೧-೧೯೩೬ನೆಯ ದಿವಸ ಮೆ. ಅಸಿ॥ ಕಲೆಕ್ಟರ ಸಾ. ಬ. **ಸೇನ** ದೊರೆಗಳವರ ಅಧ್ಯಕ್ಷತೆಯ ಕೆಳಗೆ ಇನಾಮಿನ ಸಮಾರಂಭವು ನಡೆಯಿತೆಂತಲೂ, ಸದರ ಸಾಹೇಬರವರು ಈ ಸಾಲೆಯ ಪುವರ ಫಂಡಿಗೆ ೫ ರೂಪಾಯಿಗಳನ್ನೂ ಅವರ ಧರ್ಮಪತ್ನಿಯವರು ಮಿಠಾಯಿ ಹಂಚುವದಕ್ಕಾಗಿ ೬ ರೂಪಾಯಿಗಳನೂ ತಮ್ಮ ಉದಾರಹಸ್ತದಿಂದ ದಯಪಾಲಿಸಿದರೆಂದೂ, ಊರಸಭ್ಯಗೃಹಸ್ಥರು ೭ರೂಪಾಯಿಗಳ ಪಾಟಿ, ಖಣ ಮುಂತಾದವುಗಳನ್ನು ಕೊಡಿಸಿದರೆಂದೂ, ವಿದ್ಯಾರ್ಥಿಗಳು ಅವರಡೇ ಫಂಡಿಗಾಗಿ ೬ ರೂಪಾಯಿಗಳನ್ನು ಕೂಡಿಸಿ ಕೊಟ್ಟರೆಂತಲೂ ತಿಳಿಸುವರು.

ಸಾಲೆಗಳ ಉನ್ನತಿಗಾಗಿ ಯತ್ನಿಸುತ್ತಿರುವ ಮೆ. **ಸೇನ** ಸಾಹೇಬರವರ ಮತ್ತು ಅವರ ಧರ್ಮಪತ್ನಿಯವರ ಈ ಉದಾರ ಗುಣವು ಅನುಕರಣೀಯವಾದದ್ದು, ಸಾಲೆಯ ಹಿತಕ್ಕಾಗಿ ಪ್ರಯತ್ನಿಸುವ ಊರಸಭ್ಯಗೃಹಸ್ಥರಾದರೂ ಸ್ತುತಿಗೆ ಅರ್ಹರಿರುವರು.

ಸವದತ್ತಿ ತಾಲೂಕು ಸಿರಸಂಗಿ ಸಾಲೆಯ ಮಾಸ್ತರರು, ಸಿರಸಂಗಿ ಸರದೇಸಗತ ಸಂಸ್ಥಾನದ ಕಾರಭಾರೀ ಸಾಹೇಬರಾದ ಮ. ರಾ. ರಾ. ಬಸಪ್ಪ ಚನ್ನಬಸಪ್ಪ ಶಿಗಿ ಇವರು ಸ್ವತಃ ೫೦ ರೂಪಾಯಿಗಳನ್ನು ಕೊಟ್ಟು ಹಾರಿ, ಮಲಖಂಬ, ಪ್ಯಾರಲಲ್‌ಬಾರ್ ಲೋಡಿಜೋಡುಗಳನ್ನು ತಯಾರಿಸಿ ನಮ್ಮ ಸಾಲೆಯ ಉಪಯೋಗದ ಬಗ್ಗೆ ವಿಜಯದಶಮಿಯ ದಿನಸ ಕೊಟ್ಟರೆಂದು ತಿಳಿಸುತ್ತಾರೆ. ಈ ಮಹನೀಯರ ಉದಾರಬುದ್ಧಿಯೂ ಮತ್ತು ಶರೀರಸಂಪತ್ತನ್ನು ಬೆಳೆಯಿಸುವ ಇವರ ಉತ್ಕಟೇಚ್ಛೆಯೂ ಅನುಕರಣೀಯವಾದದ್ದು.

ಬಾಲಕರ ವರ್ಗದ ವಿಷಯಗಳನ್ನು ಹೇಗೆ ಕಲಿಸಬೇಕು?

(ಬರೆದು ಬಂದದ್ದು.)

ಈಗಿನ ಸುಧಾರಣೆಯ ಕಾಲದಲ್ಲಿ ಶಿಕ್ಷಣದ ವಿಷಯದಲ್ಲಿಯೂ ಸ್ಥಿತ್ಯಂತರವುಂಟಾಗಿ ಬೇರೆ ಬೇರೆ ವಿಷಯಗಳನ್ನು ಬೇರೆ ಬೇರೆ ರೀತಿಯಿಂದ ವಿದ್ಯಾರ್ಥಿಗಳ ಮುಂದೆ ಇಟ್ಟರೆ ಆಗುವ ಪರಿಣಾಮದಲ್ಲಿ ಏನೇನು ಹೆಚ್ಚುಕಡಿಮೆಯಾಗುತ್ತದೆ? ಎಂಬ ಪ್ರಶ್ನವಾದರೂ ರಾಷ್ಟ್ರದ ಮುಂದೆ ನಿಂತಿರುವದು. ಈ ಪ್ರಯೋಗಾವಸ್ಥೆಯು ನಮ್ಮಲ್ಲಿ ಇನ್ನೂ ಪೂರ್ಣತೆಯನ್ನು ಹೊಂದದೆ ಇದ್ದರೂ, ಈ ಕಾರ್ಯವು ಅದಷ್ಟರ ಮಟ್ಟಿಗೆ ನಿಶ್ಚಿತವೂ ಪೂರ್ಣವೂ ಆದರೆ ಎಲ್ಲರಿಗೂ ಹಿತಕಾರಕವೇ. ಬಾಲಕರ ವರ್ಗದ ವಿಷಯಗಳಂತೂ ಆ ಹುಡುಗರಿಗೆ ಸರಿಯಾಗಿ ಕಲಿಸಲ್ಪಡುವದಿಲ್ಲವೆಂತಲೂ, ಅವರು ಅವರ್ಗದಲ್ಲಿ ಬಹು ಕಾಲ ಕೊಳೆಯುತ್ತ ಬೀಳುತ್ತಿರುತ್ತಾರೆಂತಲೂ, ಇದರಿಂದ ಅವರ ಮುಂದಿನ ಆಯುಷ್ಯದ ಮೇಲೆ ಕೆಟ್ಟ ಪರಿಣಾಮವು ಆಗುವದೆಂತಲೂ ಇದ್ದ ಈ ಪ್ರವಾದವೂ ಸುಳ್ಳಲ್ಲ. ಆದರೆ ಇದು ಹೀಗೆ ಏಕಾಗುತ್ತದೆ? ಸರಕಾರದ ಔದಾರ್ಯದ ಕೆಳಗೆ ನಡೆಯುತ್ತಿರುವ ಸಾಲೆಗಳಲ್ಲಿ ಸಹ ಈ ಪ್ರಕಾರದ ದುಷ್ಪರಿಣಾಮವು ಉಂಟಾಗುವ ಬಗೆ ಹೇಗೆ? ಈ ಸಂಬಂಧವಾಗಿ ಶಿಕ್ಷಕರ ದುರ್ಲಕ್ಷವಿರುವದೋ, ವಿದ್ಯಾರ್ಥಿಗಳ ಅಥವಾ ಪಾಲಕರ ಅನಾಸ್ಥೆಯಿರುವದೋ, ಈ ಪ್ರವಾದಕ್ಕೆ ಉಳಿದ ಸಂಗತಿಗಳು ಅಲ್ಪಸ್ವಲ್ಪ ಮಾನದಿಂದ ಕಾರಣಗಳಾಗಿದ್ದರೂ ಅವುಗಳನ್ನು ಸದ್ಯಃ ಬದಿಗೆ ದೂಡಿ, ಕಲಿಸುವ ಪದ್ಧತಿಯಲ್ಲಿಯೇ ಆಗಬೇಕಾದ ಸುಧಾರಣೆಯನ್ನು ಕುರಿತು ವಿಚಾರಿಸುವದು ಪ್ರಸ್ತುತ ಲೇಖದ ಉದ್ದೇಶವಾಗಿರುವದು. ಬಾಲಕರಿಗೆ ಎಲ್ಲ ವಿಷಯಗಳನ್ನು ಕಲಿಸುವದಕ್ಕೆ ಮಾರ್ಗದರ್ಶಕವಾದ ಹಾಗು ಕ್ರಮವಾದ ಟಿಪ್ಪಣಿಗಳುಳ್ಳ "ಮಾದರಿಯ ಶಿಕ್ಷಕ" ಎಂಬ ಹೆಸರಿನ ಪುಸ್ತಕವನ್ನು ಬರೆದು, ಅದು ನಿಯೋಜಿತ ಸಭೆಯಲ್ಲಿ ಪಾಸಾಗಿದ್ದರೆ ಗ್ರಂಥಕರ್ತರಿಗೆ ನೂರು ರೂಪಾಯಿಗಳ ಇನಾಮು ಕೊಡುವವರಿದ್ದೇವೆಂದು ನಮ್ಮ ವ್ಯವಸಾಯ ಬಂಧುಗಳಾದ ಒಬ್ಬ ಸದ್ಗೃಹಸ್ಥರು ವ್ಯಕ್ತಮಾಡಿದ ಅಭಿಪ್ರಾಯವನ್ನು "ಕರ್ನಾಟಕ ಶಿಕ್ಷಕ ಮಂಡಲ"ದವರು ಪ್ರಸಿದ್ಧ ಮಾಡಿರುವರಷ್ಟೇ? ಅಂಥ ಗ್ರಂಥಕಾರರ ವಿಚಾರಕ್ಕೆ ತುಸು ಮಟ್ಟಿಗಾದರೂ ಚಾಲನೆ ಸಿಗಲಿಕ್ಕೆ ಅನುಕೂಲವಾದೀತೆಂಬ ಭಾವನೆಯಿಂದ ಈ ಅನುಭವವನ್ನು ಪ್ರಸಿದ್ಧ ಮಾಡಿರುವೆನು.

ಇದನ್ನು ಬರೆಯುವ ಪೂರ್ವದಲ್ಲಿ ಶಿಕ್ಷಕರು ಲಕ್ಷದಲ್ಲಿಡಬೇಕಾದ ಕೆಲವು ಸಾಮಾನ್ಯ ಸೂಚನೆಗಳನ್ನು ಹೇಳಬೇಕಾಗಿದೆ. ಅವು ಕೆಳಗೆ ಬರೆದಿಟ್ಟಿವೆ.

೧. ಅನುಭವಿಕನೂ, ಬುದ್ಧಿವಂತನೂ, ದಯೆಯುಳ್ಳವನೂ, ಶಾಂತನೂ ಆದ ಅಧ್ಯಾಪಕನು ಈ ವರ್ಗವನ್ನು ಕಲಿಸುತ್ತಿರಬೇಕು.

೨. ಕಲಿಸುವ ಕಾಲದಲ್ಲಿ ಶಿಕ್ಷಕನ ಚಟುವಟಿಕೆಯಲ್ಲಿಯೂ, ಉಲ್ಲಾಸದಲ್ಲಿಯೂ ಭಂಗ ಬರಲಾಗದು.

೩. ಬಾಲಕರ ವರ್ಗಕ್ಕೆ ಕೊಡಲ್ಪಡುವ ಪಾಠಗಳು ೨೦, ೩೫ ನಿಮಿಟುಗಳಿಗಿಂತ ಹೆಚ್ಚು ವೇಳೆ ಹತ್ತುವವು ಇರಬಾರದು. ನಡುನಡುವೆ ಹಾಡುಗಳು, ಆಟಗಳು, ಕವಾಯಿತು, ಮನೋರಂಜಕವಾದ ಇತರ ಸಂಗತಿಗಳು ಸೇರಿಸಲ್ಪಡಬೇಕು. ಪ್ರತಿ ೫೦ ನಿಮಿಟುಗಳ ನಂತರ ೧೦ ನಿಮಿಟುಗಳ ವರೆಗೆ ವಿಶ್ರಾಂತಿಯಿರಬೇಕು.

೪. ಶಿಕ್ಷಕನು ತನ್ನ ಕರ್ತವ್ಯವನ್ನೂ, ಭಾವಿ ರಾಷ್ಟ್ರದ ಪ್ರಜೆಗಳಾಗಿರುವ ಈ ಚಿಕ್ಕ ಕೂಸುಗಳನ್ನೂ, ತಂದೆತಾಯಿಗಳು ಈ ಬಾಲಕರ ಬಹಳಷ್ಟರ ಮಟ್ಟಿಗಿರುವ ಜವಾಬದಾರಿಯನ್ನು ಸ್ವಸಂತೋಷದಿಂದಲೂ ನಿಶ್ಚಿಂತತೆಯಿಂದಲೂ ತನ್ನ ಕಡಿಗೆ ಒಪ್ಪಿಸಿಕೊಟ್ಟದ್ದನ್ನೂ ಯಾವಾಗಲೂ ಸ್ಮರಿಸುತ್ತಿರಬೇಕು.

೫. ಶಿಕ್ಷಕರ ಮೇಲೆ ಮುಖ್ಯಾಧ್ಯಾಪಕನ ಇಲ್ಲವೆ ಯೋಗ್ಯ ಅಧಿಕಾರಿಗಳ ಲಕ್ಷವು ಸಾಕಷ್ಟು ಇರಬೇಕು

೬. ಈ ಶಿಕ್ಷಣವನ್ನು ಹೊಂದತಕ್ಕ ವಿದ್ಯಾರ್ಥಿಗಳು ವಿದ್ಯೆಯಲ್ಲಿ ಮುಂದರಿದ ಜಾತಿಯವರು ಐದು ವರ್ಷಕ್ಕೆ ಮಿಕ್ಕಿದವರೂ, ಹಿಂದುಳಿದ ಜಾತಿಯವರು ಆರು ವರ್ಷಕ್ಕೆ ಮಿಕ್ಕಿದವರೂ ಇರುವದು ಒಳಿತು. ಹೆಣ್ಣು ಮಕ್ಕಳನ್ನು ಇದಕ್ಕಿಂತ ಕಡಿಮೆ ವಯಸ್ಸಿನಲ್ಲಿ ತಕ್ಕೊಂಡರೂ ಆದೀತು.

೭. ಈ ಕ್ಲಾಸಿನಲ್ಲಿ ತೆಗದುಕೊಳ್ಳತಕ್ಕ ಹುಡುಗರನ್ನು ಒಂದೇ ಕಾಲಕ್ಕೆ ತಕ್ಕೊಳ್ಳುವಂತೆ ವ್ಯವಸ್ಥೆ ಮಾಡಬೇಕು. ಅಂದರೆ ಪರೀಕ್ಷೆಯಾದ ಒಂದೆರಡು ತಿಂಗಳಲ್ಲೇ ಅರಿಸಿಕೊಳ್ಳಬೇಕು. ಹಾಗು ಎಲ್ಲ ಕ್ಲಾಸಿಗೂ ಒಮ್ಮೆಲೇ ಶಿಕ್ಷಣ ಕೊಡುತ್ತಿರಬೇಕು.

೮. ಕೆಲಸವು ನಿಯಮಿತಶನವಿಂದ ಸಾಗಬೇಕು.

೯. ಅದಷ್ಟರ ಮಟ್ಟಿಗೆ ಒಬ್ಬ ಶಿಕ್ಷಕನ ಕಡೆಗೆ ಇದೊಂದೇ ವರ್ಗವಿರುವದು ಯೋಗ್ಯವು. ಮತ್ತು ಅವನ ಕಡೆಗೆ ಇಪ್ಪತ್ತರಿಂದ ನಾಲ್ವತ್ತರವರೆಗೂ ಮಕ್ಕಳು ಇರಬಹುದು.

ವಿದ್ಯಾರ್ಥಿಗಳ ಶಾರೀರಿಕ–ಮಾನಸಿಕ–ನೈತಿಕ ಪ್ರವೃತ್ತಿಗಳನ್ನು ಬೆಳಿಸಿ, ಅವುಗಳಲ್ಲಿ ಕಾರ್ಯಕ್ಷಮತ್ವವು ಪ್ರಾಪ್ತವಾಗುವಂತೆ ವಿಕಾಸಗೊಳಿಸುವದು ಶಿಕ್ಷಣದ ಮುಖ್ಯವಾದ ಉದ್ದೇಶವಷ್ಟೇ? ಬಾಲಕರ ವರ್ಗದಲ್ಲಂತು ಈ ಉದ್ದೇಶದ ಇಮಾರತಿನ ನೆಲಗಟ್ಟು ಹಾಕತಕ್ಕದ್ದಿರುತ್ತದೆ. ಮತ್ತು ಈ ನೆಲಗಟ್ಟಿನ ಕೆಲಸವು ಎಷ್ಟು ವ್ಯವಸ್ಥಿತವೂ ಭದ್ರವೂ ಆದೀತೊ ಆಮಾನದಿಂದ ಆ ವಿದ್ಯಾರ್ಥಿಗಳ ರಾಷ್ಟ್ರದ ಮುಂದಿನ ಅಯುಷ್ಯಕ್ರಮವು ಅವಲಂಬಿಸಿರುತ್ತದೆ. ಈ ಕೆಲಸವು ಈಗಿನ ದಿನಮಾನದಂತೆ ಹೇಗೆ ನಡಿಸಿದರೆ ಸುಲಭಸಾಧ್ಯವೂ ಹಿತಕಾರಕವೂ ಆದೀತೆಂಬದನ್ನು ವಿಚಾರಿಸುವ.

ಶಾರೀರಿಕ, ಮಾನಸಿಕ, ನೈತಿಕ ಪ್ರವೃತ್ತಿಗಳಲ್ಲಿ ಕಾರ್ಯಕ್ಷಮತ್ವವು ಬರಬೇಕಾದರೆ ಅವುಗಳಿಗೆ ತಕ್ಕ ಕೆಲಸ ಕೊಡಬೇಕಾಗುತ್ತದೆ. ಮಲ್ಲವಿದ್ಯೆಯ ಭಾಷೆಯಿಂದ ಹೇಳಬೇಕಾದರೆ ಅವುಗಳಿಗೆ ತಕ್ಕ ತಾಲೀಮು ಎಗ್ಸರ್ಸಾಯಿಜ್ ಕೊಡಬೇಕಾಗುತ್ತದೆ. ಈ "ಎಗ್ಸರ್ಸಾಯಿಜ್"ಗಳಿಂದಲೇ ಈಗ ಶಾಲೆಗಳ ಬಗ್ಗೆ ನಿರ್ಣಯಿಸ

ಲ್ಪಟ್ಟ ಪರೀಕ್ಷೆಯ ಇಯತ್ತೆಗಳು. ಪ್ರಾಥಮಿಕ ಶಾಲೆಗಳಲ್ಲಿ ಬಾಲಕರ ಬಗ್ಗೆ ಸದ್ಯಃ ನಿಶ್ಚಿತವಾದ ಇಯತ್ತೆಯ ನಾಲ್ಕು ಸದರುಗಳಿದ್ದು ಮೊದಲಿನ ಮೂರು ಸದರುಗಳಲ್ಲಿ ನೂರರವರೆಗೆ ಅಂಕಿಗಳು, ಹತ್ತರ ವರೆಗೆ ಮೊಗ್ಗಿಗಳು, ಬಾಲಬೋಧಿನಿಯ ಪುಸ್ತಕವನ್ನು ಓದುವದು, ಹಾಗು ಅದರೊಳಗಿನ ಪದಗಳನ್ನು ಹಾಡುವದು, ಮೂಲಾಕ್ಷರ ಗುಣಿತಾಕ್ಷರಗಳ ಸಹಾಯದಿಂದ ಸಾದಾ ಅಕ್ಷರಗಳ ಶಬ್ದಗಳನ್ನು ಬರೆಯುವದು ಇವಿಷ್ಟು ವಿಷಯಗಳ ಶಿಕ್ಷಣ ದೊರೆಯುವಂತೆ ಶಾಸನವಾಗಿದ್ದು "ಬಾಲಕರ ವರ್ಗದಲ್ಲಿ ಕೆಳಗೆ ಕೊಟ್ಟ ವಿಷಯಗಳನ್ನು ಕಲಿಸಬಹುದು" ಎಂಬ ನಾಲ್ಕನೆಯ ಸದರಿನೊಳಗೆ (ಅ) ಸುಲಭವಾದ ಆಕೃತಿಗಳ ಬಣ್ಣಗಳ ಮತ್ತು ಪರಿಚಯದ ವಸ್ತುಗಳ ಸಂಬಂಧದ ಶಿಕ್ಷಣವನ್ನು ಕೊಡುವದು, (ಬ) ಸುಲಭ ಮತ್ತು ಮನೋರಂಜಕವಾದ ಕಥೆಗಳನ್ನು ಹೇಳುವದು, (ಕ) ಹಾಡುಗಳನ್ನು ಎಲ್ಲರೂ ಸ್ವರ ಮೇಳದಿಂದ ಹೇಳುವದು, (ಡ) ಬಾಲಕರ ಕವಾಯಿತು ತಾಲೀಮು-ಆಟಗಳು, (ಇ) ಶಾಲೆಯ ಅನುಕೂಲತೆಯ ಪ್ರಕಾರ ಬಾಲೋದ್ಯಾನದ ವ್ಯವಸಾಯಗಳು, ಇವಿಷ್ಟು ವಿಷಯಗಳು ಸಮೂದಿಸಲ್ಪಟ್ಟಿರುತ್ತವೆ. ಇದರಲ್ಲಿ "ಕಲಿಸಬಹುದು" ಎಂಬ ಶಾಸನದಿಂದ ವಿಧಿಸಲ್ಪಟ್ಟ ಈ ವಿಷಯಗಳನ್ನು ಕಲಿಸುವದೂ ಕಲಿಸದಿರುವದೂ ಅಥವಾ ಅಲ್ಪಸ್ವಲ್ಪ ಕಲಿಸುವದೂ ಶಿಕ್ಷಕರ ಇಚ್ಛೆಯ ಮೇಲೆ ಅವಲಂಬಿಸಿರುವಂತೆ ತೋರ್ಪಡಿಸಿರುತ್ತದೆ. ಆದರೆ ಈ ನಾಲ್ಕನೆಯ ಸದರಿನೊಳಗಿನ ವಿಷಯಗಳೂ ಕೂಡ ಬಾಲಕರ ವರ್ಗಕ್ಕೆ ಅತ್ಯಾವಶ್ಯಕವೆಂದೂ, ಆದ್ದರಿಂದಲೇ ಇವು ಉಳಿದ ಮೂರು ಸದರುಗಳೊಳಗಿನ ಪಾಠ ಕ್ರಮದಂತೆ "ಕಂಪಲ್‌ಸರಿ" ಯಾಗಿರಬೇಕೆಂದೂ ನಮ್ಮ ಅಂಬೋಣವುಂಟು. ಮತ್ತು ಈ ಧೋರಣವೇ ಮುಂದೆ ಹೇಳಿದ ಬಾಲಕರ ವರ್ಗದ ಶಿಕ್ಷಣ ಕ್ರಮದಲ್ಲಿ ಅನುಸ್ಯೂತವಾಗಿರುತ್ತದೆ.

ಮೊದಲನೆಯ ವಿಭಾಗ.

ಚಿಕ್ಕ ಮಕ್ಕಳಿಗೆ ತಾಯಿ ತಂದೆ ಮೊದಲಾದ ಸಮೀಪದ ಆಪ್ತರ ಹೊರತು ಬೇರೆ ಜನರ ಪರಿಚಯವು ವಿಶೇಷವಾಗಿ ಇರುತ್ತಿರುವದಿಲ್ಲ. ಇದಲ್ಲದೆ ಅವರ ಉಳಿದ ಅವಯವಗಳ, ಕೂಡ ಮನಸ್ಸು ಸಹ ಅತಿಶಯ ಕೋಮಲವಾಗಿರುತ್ತದೆ. ಇಂಥ ಅವಸ್ಥೆಯೊಳಗಿನ ಅವರ ಶಾಲಾಗೃಹದ ನೂತನ ಪ್ರವೇಶವು ಒಂದು ವಿಶೇಷ ಪ್ರಕಾರದ್ದು ಇರುವದು. ಈಗ ವಿದ್ಯಾರ್ಥಿಗಳಿಗೆ ಸ್ವಾಭಾವಿಕವಾಗಿ ಶಿಕ್ಷಕನ ಪರಿಚಯವಿಲ್ಲ. ಇಂಥ ಕಾಲದಲ್ಲಿ ಅವನು ತನ್ನ ಗಾಂಭೀರ್ಯ, ದರ್ಪ, ವರ್ಚಸ್ಸು, ಅಭಿಮಾನ ಇವುಗಳ ಅಮಲು ಆ ಬಾಲಕರ ಮೇಲೆ ನಡಿಸಲು ಯತ್ನ ಮಾಡಿದರೆ ಉಭಯತರಿಗೂ ಹಾನಿಯಾಗುವದು. ಗುರುಶಿಷ್ಯರ ಈ ಸಂಬಂಧವು ಪ್ರೇಮ ಜನಕವಾಗಬೇಕು. ಪ್ರಾಚೀನಕಾಲದಲ್ಲಿ ಶಿಷ್ಯರಿಗೆ ಗುರುಗಳ ಗರಜು ವಿಶೇಷವಿತ್ತು. ಈಗಿನ ಶಿಕ್ಷಕರಿಗೆ ತಮ್ಮ ಕೆಲಸದ ಪೈರು ಉತ್ತಮವಾಗಿ ತಕ್ಕೊಳ್ಳಲಿಕ್ಕೆ ಬರುವಂತೆ ವಿದ್ಯಾರ್ಥಿಗಳ ಮನೋಭೂಮಿಯ ಅವಶ್ಯಕತೆಯೇ ವಿಶೇಷವಾಗಿರುತ್ತದೆ. ಆದ್ದರಿಂದ ತನ್ನ ಬಗ್ಗೆ ಬಾಲಕರಲ್ಲಿ ಸದಭಿಪ್ರಾಯವನ್ನು ಉಂಟು ಮಾಡುವದು ಶಿಕ್ಷಕರ ಮೊದಲನೆಯ ಕೆಲಸವಾಗಿರುತ್ತದೆ. ಅಂದರೆ ಹುಡು

೧. ಬಳಿಕೆಯ ಒಡವೆಗಳನ್ನೂ ಪ್ರಾಣಿಗಳನ್ನೂ ಪ್ರತ್ಯಕ್ಷ ತೋರಿಸುವದು.

೨. ಬೇರೆ ಬೇರೆ ತರದ ಚಿತ್ರಗಳನ್ನು ತೋರಿಸುವದು.

೩. ಕಥೆಗಳನ್ನು ಪ್ರತ್ಯಕ್ಷಸ್ವರೂಪ ಕೊಟ್ಟು, ಇಲ್ಲವೆ ಚಿತ್ರದರ್ಶನ ಕ್ರಮದಿಂದ ಹೇಳುವದು. ಮತ್ತು ಅದಕ್ಕೆ ಸಂಬಂಧಿಸಿ ಪದಗಳನ್ನು ಹಾಡುವದು.

೪. ಸಾಭಿನಯ ಗೀತ.

೫. ವಸ್ತುಗಳನ್ನು ಹತ್ತರವರೆಗೆ ಎಣಿಸುವದು.

ಚೆಂಡು, ಬೊಗರೆ, ಗೋಲಿ, ಬಾಳೆಹಣ್ಣು, ಚಕ್ಕುಲಿ, ಟೊಪ್ಪಿಗೆ, ಕಾಜಿನಬಳೆ, ಹೂ ಮೊದಲಾದ ಪರಿಚಯದ ವಸ್ತುಗಳನ್ನು ಹುಡುಗರಿಗೆ ತೋರಿಸಬೇಕು. ಪ್ರತಿಯೊಬ್ಬ ಹುಡುಗನು ಆ ವಸ್ತುಗಳನ್ನು ಕೈಯಲ್ಲಿ ಹಿಡಿದು ನಿರೀಕ್ಷಿಸಲಿಕ್ಕೆ ಬರುವಂತೆ ಅನುಕೂಲ ತೆಯಿರಬೇಕು. ಈ ಕ್ಲಾಸಿನಲ್ಲಿ ಶಿಕ್ಷಕನು ಕುರ್ಚಿಯ ಮೇಲೆ ಕೂತು ಮಾಡುವ ಕೆಲಸವು ಬಹು ಸ್ವಲ್ಪವಿರುವದು. ಅವನು ತಾನೂ ಒಂದು ಅದರಂಥ ಪದಾರ್ಥವನ್ನು ಕೈಯಲ್ಲಿ ಹಿಡಿದು, ಎಲ್ಲ ಹುಡುಗರಂತೆ ನೆಲದಮೇಲೆಯೇ ಕೂತು ಆ ಪದಾರ್ಥದ ಸಂಬಂಧದಿಂದ ಪ್ರಶ್ನೆ ಮಾಡಬೇಕು. ಈ ಪ್ರಶ್ನೆಗಳು ಇಡೀ ಕ್ಲಾಸಿಗೆ ಸಂಬಂಧಿಸಿದವಿರಬೇಕು. ಪರಂತು ಉತ್ತರವು ಒಬ್ಬ ಹುಡುಗನ ಬಾಯಿಂದಲೇ ಹೊರಡಿಸಲ್ಪಡಬೇಕೆಂಬದು ಯೋಗ್ಯವಾಗಿದ್ದರೂ, ಅದು ಈ ವರ್ಗಕ್ಕೆ ಅಷ್ಟು ಸಂಭವಿಸುವದಿಲ್ಲ. ಹುಡುಗರಲ್ಲಿರುವ ಅಜ್ಞಾನದಿಂದಲೂ, ಪುಕ್ಕತನದಿಂದಲೂ, ಒಮ್ಮೊಮ್ಮೆ ಆಲಸ್ಯದಿಂದಲೂ, ಮನಸ್ಸಿನ ಅಭಿಪ್ರಾಯವನ್ನು ಪೂರ್ಣವಾಗಿ ಹೊರಗೆಡವುವಷ್ಟು ಭಾಷೆಯ ಸಾಹಿತ್ಯವು ಅವರಲ್ಲಿ ಇಲ್ಲದಿರುವದರಿಂದಲೂ, ಅವರ ಶಾಲೆಯ ನೂತನತ್ವವು ಇನ್ನೂ ಕಡಿಮೆ ಯಾಗದಿರುವದರಿಂದಲೂ ಒಮ್ಮೊಮ್ಮೆ ಅವರಿಂದ ಉತ್ತರವು ಹೊರಡುವದೇ ಇಲ್ಲ. ಆದ್ದರಿಂದ ಉತ್ತರವನ್ನಾದರೂ ಎಲ್ಲ ಹುಡುಗರಿಂದ ಒಮ್ಮೆಲೇ ತಕ್ಕೊಳ್ಳುವದು ಕೆಲವು ಕಾಲಕ್ಷಮ್ಯವಾಗಿಯೇ ಇರುವದು. ಮತ್ತು ಇದರಿಂದ ಲಾಭವೂ ಉಂಟು. ಉತ್ತರವನ್ನು ಕೊಡುವ ಹುಡುಗರ ಕೂಡ ಉಳಿದವರು ಸಹ ಪ್ರಯತ್ನ ಮಾಡುತ್ತಿರುತ್ತಾರೆ. ಹುಡುಗರಲ್ಲಿ ಉಲ್ಲಾಸವೃತ್ತಿಯು ಕಾಯ್ದುಕೊಳ್ಳಲ್ಪಡುತ್ತದೆ. ವಿಷಯವೂ ಬೇಸರಿಕೆಯುಳ್ಳದ್ದಾಗುವದಿಲ್ಲ. ಶಿಕ್ಷಕನ ಶ್ರಮವೂ ಉಳಿಯುತ್ತದೆ. ಆದರೆ ಈ ಕಾಲದಲ್ಲಿ ಗದ್ದಲವಾಗದಂತೆ ಮಾತ್ರ ಎಚ್ಚರಗೊಳ್ಳತಕ್ಕದ್ದು. ಹಾಗೂ ಕಡೆಕಡೆಗೆ ಈ ಪದ್ಧತಿಗೆ ಕ್ರಮವಾಗಿ ಪ್ರತಿಬಂಧವನ್ನು ಹಾಕುತ್ತ ಉತ್ತರವನ್ನು ಒಬ್ಬನ ಕಡೆಯಿಂದಲೇ ತೆಗೆದುಕೊಳ್ಳಲಿಕ್ಕೆ ಯತ್ನಿಸುವದನ್ನು ಮರೆಯಕೂಡದು. ಆಕಳು, ನಾಯಿ, ಬೆಕ್ಕು, ಕುರಿ, ಕೋಳಿ, ಗಿಳಿ, ಮೊದಲಾದ ಪ್ರಾಣಿಗಳನ್ನು ಪ್ರತ್ಯಕ್ಷ ತೋರಿಸುವಾಗ ಅವುಗಳಿಗಿಂತ ಅವುಗಳ ಮರಿಗಳನ್ನು ನೋಡುವದೇ ಬಾಲಕರಿಗೆ ವಿಶೇಷ ಸೇರುತ್ತಿರುವದರಿಂದ ಪ್ರಯತ್ನ ಮಾಡಿ ಶಿಕ್ಷಕನು ಮೊದಲಿಗೆ ಅವನ್ನೇ ತಂದು ತೋರಿಸಬೇಕು. ಚಿತ್ರಗಳನ್ನು ತೋರಿಸುವ ಕಾಲದಲ್ಲಿ ಒಂದೇ ಪ್ರಕಾರದ ಬಹಳಷ್ಟು ಚಿತ್ರಗಳು ಇದ್ದರೆ ಚಲೋದೇ. ಒಂದು ಸೇಳೆ ಇಂಥ ಅನುಕೂಲ

ಗದಿದ್ದರೆ ಒಂದೇ ಚಿತ್ರವನ್ನು ಒಬ್ಬರ ಕೈಯಿಂದ ಇನ್ನೊಬ್ಬರು ಹೀಗೆ ಎಲ್ಲ ಹುಡುಗರೂ ಕ್ರಮವಾಗಿ ನೋಡಬಹುದು. ಮತ್ತು ಹೀಗೆ ನೋಡುವದು ಆದ ಬಳಿಕ ಅದನ್ನು ಒಂದು ಪ್ರಶಸ್ತವಾದ ಎಲ್ಲರಿಗೂ ಕಾಣಬರುವ ಸ್ಥಳದಲ್ಲಿ ಇರಿಸಿ, ಆ ಸಂಬಂಧದಿಂದ ಇಡೀ ಕ್ಲಾಸಿಗೆ ಪ್ರಶ್ನೆಗಳನ್ನು ಮಾಡಬೇಕು. ಮಂದ ಹುಡುಗರನ್ನು ಆ ಚಿತ್ರದ ಸಮೀಪ ಕರಿಸಿ ಅದನ್ನು ನಿರೀಕ್ಷಿಸಲಿಕ್ಕೆ ಹಚ್ಚಬೇಕು. ಬೇರೆ ಬೇರೆ ತರದ ಪರಿಚಯದ ಪ್ರಾಣಿಗಳು, ಗಿಡಬಳ್ಳಿಗಳು, ಕಾರಖಾನೆಗಳು, ಜಾತ್ರೆಯ ಸ್ಥಳಗಳು, ಅಂಗಡಿ, ಗಾಡಿ ಹೊಡೆಯುವದು, ನೀರಲ್ಲಿ ಈಸಾಡುವದು, ಬಿಸಾ ಹಿಡಿಯುವದು, ಆಟವಾಡುವದು ಮೊದಲಾದವುಗಳ ಸಂಬಂಧದ ಚಿತ್ರಗಳು ಇರಬಹುದು. ಕಥೆಗೆ ಪ್ರತ್ಯಕ್ಷ ಸ್ವರೂಪ ಕೊಡುವದೆಂದರೆ—ಅದರೊಳಗಿನ ಪ್ರತಿಯೊಂದು ಸಂಗತಿಯನ್ನು ನಟಿಸಿ ತೋರಿಸುವದು. ಶಿಕ್ಷಕನ ಹಾವಭಾವಗಳು ಈ ಕಾಲದಲ್ಲಿ ವಿಶೇಷವಾಗಿ ಬೋಧಕವಾಗುತ್ತವೆ. ಮತ್ತು ಪರಿಣಾಮಕಾರಕವಾಗುತ್ತವೆ. ಕಥೆಯಲ್ಲಿ ಸಂಘಟಿತವಾದ ಒಂದೊಂದು ವಸ್ತುಗಳ ಪಾರ್ಟುಗಳನ್ನು ಹುಡುಗರೂ ಸ್ವೀಕರಿಸಿ ಅಭಿನಯಿಸಿ ತೋರಿಸಲು ಅದು ಅತ್ಯಂತ ಪ್ರಯೋಜನಕರವಾಗುವದು. ಅದರೆ ಈ ಮಾತು ಒಮ್ಮೊಮ್ಮೆ ಮೊದಲಿಗೇ ಸಾಧ್ಯವಾಗುವದಿಲ್ಲ. ಆ ಪ್ರಸಂಗದಲ್ಲಿ ಕಥೆಗಳನ್ನು ಚಿತ್ರದರ್ಶನ ಕ್ರಮದಿಂದ ಕಲಿಸಬಹುದು. ಚಿತ್ರದರ್ಶನ ಕ್ರಮವೆಂದರೆ— ಕಥೆಯಲ್ಲಿ ಕ್ರಮವಾಗಿ ಸಂಭವಿಸಿದ ಸಂಗತಿಗಳ ಚಿತ್ರಗಳನ್ನು, ಅವುಗಳನ್ನು ನೋಡಿದ ಮಾತ್ರದಿಂದಲೇ ಕಥೆಯ ತಾತ್ಪರ್ಯವು ತಿಳಿಯುವಂತೆ ಕರಿ ಹಲಗೆಯ ಮೇಲೆ ಒಂದರಮುಂದೊಂದು ತೆಗೆದಿಡುವದು. ಈ ಚಿತ್ರಗಳು ಶಾಸ್ತ್ರೋಕ್ತವಾಗಿ ತೆಗೆಯಲ್ಪಡಬೇಕೆಂದಿಲ್ಲ. ಶಿಕ್ಷಕರ ಮೇಲೆ ಹುಡುಗರ ಪೂರ್ಣ ವಿಶ್ವಾಸವಿರುವದರಿಂದ ಅಂಥ ಅಪೂರ್ಣವಾಗಿ ತೆಗೆದ ಚಿತ್ರಗಳಿಂದಾದರೂ ಕೆಲಸವಾಗುತ್ತದೆ. ಪರಂತು ಆ ಚಿತ್ರಗಳನ್ನು ಕಥೆಯ ನಿರೂಪಣೆಯ ಕಾಲದಲ್ಲಿ, ಪೂರ್ವಾಪರ ಸಂದರ್ಭವು ತಪ್ಪುವಂತೆ ಕಾಲವಿಲಂಬವಾಗದಿದ್ದ ಹಾಗೆ, ಜಾಗ್ರತೆಯಿಂದ ತೆಗೆಯಬೇಕು. ಈ ಕಥೆಗಳು ಹುಡುಗರ ಪ್ರತಿ ದಿವಸದ ವ್ಯವಹಾರಗಳಿಗೆ ಸಂಬಂಧಿಸಿದವಾಗಲಿ, ಹುಡುಗರು ಕಣ್ಣಾಟ್ಟಿ ನೋಡಿದ ವಸ್ತುಗಳಿಗೂ ಚಿತ್ರಗಳಿಗೂ ಸಂಬಂಧಿಸಿದವಾಗಲಿ ಇರಬಹುದು. ಕಥೆಗಳಲ್ಲಿ ನಡೆದ ಕಥಾನಕಗಳ ಯುಕ್ತಾಯುಕ್ತತೆಗಳನ್ನು ವಿವೇಚಿಸುವಷ್ಟು ಮನಃ ಸಾಮರ್ಥ್ಯವು ಈ ಬಾಲಕರಲ್ಲಿ ಇನ್ನೂ ಬಾರದ್ದರಿಂದ ಅವು ಕಲ್ಪಿತವಾಗಿದ್ದರೂ, ಕೆಂಬ ಹುನಾ ಅಸಂಭಾವ್ಯವಾಗಿದ್ದರೂ ನಡೆಯಬಹುದು. ಆದರೆ ಕಥೆಯೂ ಅದರ ಭಾಗಗಳೂ, ಆವೇಶಯುಕ್ತವೂ ಮನೋರಂಜಕವೂ ಆಗಿದ್ದು ಅವುಗಳಲ್ಲಿ ಯಾವದೊಂದು ನೈತಿಕ ಸಂಗತಿಯು ವ್ಯಕ್ತವಾಗುತ್ತಿರಬೇಕು. ಒಮ್ಮೊಮ್ಮೆ ಹುಡುಗರ ಯೋಗ್ಯತೆಯ ಮೇರೆಗೆ, ಅಂದರೆ ಅವರು ಬಹಳ ಚಿಕ್ಕವರಿದ್ದಲ್ಲಿ ನೈತಿಕ ಸಂಗತಿಯ ವ್ಯಕ್ತತೆಯ ಆವಶ್ಯಕತೆಯೂ ಇಲ್ಲ, (ಇಲ್ಲಿ ಅನೀತಿಯ ಸಂಬಂಧವು ಮಾತ್ರ ಸರ್ವಥಾ ಇರಬಾರದೆಂಬದನ್ನು ಲಕ್ಷದಲ್ಲಿಡಬೇಕು.) ಮನೋರಂಜಕವಾಗಿ ಅವರ ಉಲ್ಲಾಸವೃತ್ತಿಯ ಪೋಷಣವಾಗುತ್ತಿದ್ದರೆ ಸಾಕು. ಕಡೆಕಡೆಗೆ ಶಿಕ್ಷಕನು ಕಥೆಯೊಳಗಿನ ನಾಯಕ ಅಥವಾ

ನಾಯಿಕೆ ಮುಂತಾದವರ ವಿಷಯದಲ್ಲಿ ಹುಡುಗರೊಳಗೆ ಸಹಾನುಭೂತಿ, ಜಗಿ
ಗಿನ ವಸ್ತುಗಳ ಪರಸ್ಪರಾವಲಂಬನ, ಕಾರ್ಯಕಾರಣಗಳ ನಿಯಮಿತತ್ವ ಇವು
ಅಪ್ರತ್ಯಕ್ಷವಾಗಿ ಬಿಂಬಿಸಬೇಕು. ಕಥೆಯು ಮುಗಿದ ಬಳಿಕ ಅದನ್ನು ಸಂಪೂರ್ಣ
ವಾಗಿ, ಇಲ್ಲವೆ ಭಾಗಶಃ ಹುಡುಗರಿಂದ ಪ್ರಶ್ನೆಗಳಿಂದ ಹೊರಡಿಸುವದು ಅತ್ಯವಶ್ಯವು.
ಇಷ್ಟು ಕೆಲಸವಾದ ಬಳಿಕ ಆ ಕಥೆಗೆ ಸಂಬಂಧಿಸಿ ರಚಿಸಿದ ಪದವನ್ನು ಹೇಳಿಸಬೇಕು.
ಆ ಪದವು ಅಭಿನಯದೊಡನೆ ಹೇಳಲ್ಪಟ್ಟರಂತು ಬಹಳೇ ಉತ್ತಮ. ಯಾಕಂದರೆ ಈ
ಕಥೆಯ ಪಾಠವು ವಸ್ತು ಇಲ್ಲವೆ ವ್ಯವಹಾರ, ಅದಕ್ಕೆ ಸಂಬಂಧಿಸಿದ ಚಿತ್ರಗಳು, ಆ
ಸಂಬಂಧದ ಪದ್ಯವು ಮತ್ತು ಆ ಪದ್ಯದ ಅರ್ಥವನ್ನು ಅಭಿನಯಿಸುವ ಬಾಲಕರ ಕೃತಿ
ಗಳು ಇವುಗಳಿಂದ ಎಷ್ಟು ರಮ್ಯವಾದೀತೋ ಅಷ್ಟೇ ಬೋಧಕವೂ ಪ್ರಯೋಜನಕ
ರವೂ ಆಗುವದೆಂಬದಕ್ಕೆ ಸಂಶಯವಿಲ್ಲ. ಇನ್ನು ಎಲ್ಲ ಕಥೆಗಳಿಗೆ ಸಂಬಂಧಿಸಿದ ಈ ತರದ
ಗೀತಗಳು ಎಲ್ಲ ಶಿಕ್ಷಕರಿಗೂ ಉಪಲಬ್ಧವಾಗುವದು ಶಕ್ಯವಿಲ್ಲದಿದ್ದರೂ, ಇಂಥ ಕೆಲವು
ಗೀತಗಳನ್ನಾದರೂ ಶಿಕ್ಷಕರು ಪ್ರಯತ್ನದಿಂದ ಸಂಪಾದಿಸಿ ಅವುಗಳನ್ನೂ, ಈಗ ರೂಢಿ
ಯಲ್ಲಿರುವ ಬಾಲಬೋಧಿನಿಯೊಳಗಿನ ಸಾಭಿನಯ ಗೀತಗಳನ್ನೂ ಕಲಿಸಲಿಕ್ಕೆ ಅಡ್ಡಿ
ತೋರುವದಿಲ್ಲ. ಈ ಮೆಟ್ಟಿನಲ್ಲಿ ಹತ್ತರ ವರೆಗೆ ಎಣಿಸಲಿಕ್ಕೆ ಕಲಿಸುವಾಗ ಅಂಕೆಗಳ
ಜ್ಞಾನಮಾಡಿಕೊಡುವ ಕಾರಣವಿಲ್ಲ. ಅದನ್ನು ಮುಂದೆ ನಾಲ್ಕನೆಯ ಮೆಟ್ಟಿನಲ್ಲಿ ಮಾಡಿ
ಕೊಡಬಹುದು. ಇಷ್ಟೇ ಸಜಾತೀಯ ವಸ್ತುಗಳನ್ನು, ಅಂದರೆ ಗಜಗ, ಮಣಿ,
ಚೆಂಡು, ಬಳೆ, ರಾಟಿ, ಪೇನಸೀಲು, ಹುಣಸೆಬೀಜ, ಗೋಲಿ, ಪುಸ್ತಕ, ಟೊಪ್ಪಿಗೆ,
ಕಾಲು, ಕೈ, ಬೆರಳು ಮೊದಲಾದ ವಸ್ತುಗಳನ್ನು ಹತ್ತರ ವರೆಗೆ ಎಣಿಸಲಿಕ್ಕೆ ಬಂದಾ
ಸಾಕು. ಈ ಕಾಲದಲ್ಲಿ ವಸ್ತುಗಳ ಮೇಲೆ ಸಂಖ್ಯೆಯೆಂಬ ಧರ್ಮವಿರುತ್ತದೆಂತಲೂ
ಪ್ರತಿಯೊಂದು ಮುಂದಿನ ಸಂಖ್ಯೆಯು ಒಂದರಿಂದ ಹೆಚ್ಚಾಗಿರುತ್ತದೆಂತಲೂ, ಹಿಂದಿನ
ಸಂಖ್ಯೆಯು ಒಂದರಿಂದ ಕಡಿಮೆಯಾಗಿರುತ್ತದೆಂತಲೂ ತಿಳಿಸಿಕೊಡಬೇಕು. ಕನ್ನಡ
ಭಾಷೆಯಾಡುವ ಜನರ ಮಕ್ಕಳಿಗೆ ಈ ಎಣಿಕೆಯು ಲಗು ಬರಬಹುದಾದರೂ ಬೇರೆ
ಭಾಷೆಯ ಹುಡುಗರಿಗೆ ಮಾತ್ರ ಈ ಬಗ್ಗೆ ವಿಶೇಷ ಲಕ್ಷ ಪೂರಯಿಸುವದು ಅವಶ್ಯವು.
ಎಣಿಕೆಯ ಕೆಲಸವನ್ನು ಈ ಎರಡನೆಯ ಮೆಟ್ಟಿನಲ್ಲಿಯೂ, ಮೂರನೆಯ ಮೆಟ್ಟಿನಲ್ಲಿಯೂ
ಸಾಗಿಸಬಹುದು. ಮುಂದೆ ಮುಂದೆ ಈ ಕೆಲಸದಲ್ಲಿ ಹುಡುಗರೊಳಗೆ ಅನಾದರವು
ಕಂಡುಬರುವದು. ಆಗ ಶಿಕ್ಷಕನು ಸಣ್ಣಸಣ್ಣ ಬೀರೀಜು–ವಜಾಬಾಕಿಗಳನ್ನು ಪ್ರತ್ಯಕ್ಷ
ವಸ್ತುಗಳಿಂದ ಮಾಡಿಸಬೇಕು. ಈ ಕ್ರಮವು ಹೇಗಂದರೆ–ಪ್ರತಿಯೊಬ್ಬ ಹುಡುಗ
ಮುಂದೆ ಕೆಲಕೆಲವು ಗಜಗ ಹುಣಸೇಬೀಜ ಮೊದಲಾದವುಗಳಲ್ಲಿ ಒಂದೇ ಜಾ
ಯ ವಸ್ತುಗಳನ್ನು ಇರಿಸಿ, ತಾನೂ ಕೆಲವು ಅಂಥ ವಸ್ತುಗಳನ್ನು ಇಟ್ಟುಕೊಂಡು ಶಿಕ್ಷ
ಕನು ಅವರ ಮುಂದೆ ಕೂತು ಸಣ್ಣಸಣ್ಣ ಲೆಕ್ಕಗಳನ್ನು ಹೇಳಬೇಕು.

(ಶೇಷ).

ನಿಂಬಾಳಕರಕೃತ ಪುಸ್ತಕಗಳು; — ಮುಂಬಯಿ ಇಲಾಖೆಯ ಭೂಗೋಲ, ನಕಾಶಗಳಿಂದೊಡಗೂಡಿದೆ. ಈ ಸಮೂನೆಯದು ಇದೇ ಮೊದಲನೆಯದು. ೪-೬. ಧಾರವಾಡ ಜಿಲ್ಹೆಯ ಭೂಗೋಲ ೦-೩-೦. ರಾಜಮೂಲ ಶಿಕ್ಷಕ ೦-೧-೬. ದೇಶೀ ವಿಲಾಯತೀ ಕೋಷ್ಟಕದ ಪಠಗಳು ೦-೩-೦. ಅಂಕಗಣಿತ ೧ನೆಯ ಭಾಗ ೦-೪-೬ ಮ್ಯಾಕ್‌ಮಿಲನರ ಸರಕಾರಿ ಪುಸ್ತಕಗಳಿಗೆ ೨೫ಯಂತೆ ಕಮಿಶನ್ ಕೊಡುತ್ತೇವೆ.

ಹನಮಂತಪ್ಪಾ ನೀಲಪ್ಪಾ ದೊಡ್ಡಮನಿ, ಬುಕ್ಕಸೆಲರ್ ಗದಗ.

ಶಾಲೆಗಳ ಸಲುವಾಗಿಯೂ ಕಾಲೇಜುಗಳ ಸಲುವಾಗಿಯೂ

ಶಾಸ್ತ್ರೀಯ ಉಪಕರಣಗಳು.

ನಮ್ಮ ಕಾರ್ಯಾಲಯದಲ್ಲಿ ಕೆಳಗೆ ಕಾಣಿಸಿದ ಎಲ್ಲ ಪ್ರಕಾರದ ಉಪಕರಣಗಳು ತಯಾರಾಗುವವು.

ಸೂರ್ಯಮಾಲೆಯ ಯಂತ್ರ, ಪೃಥ್ವಿಯ ಗ್ಲೋಬುಗಳು, ಚಂದ್ರನ ಕಲೆಗಳನ್ನು ತೋರಿಸುವ ಉಪಕರಣ, ನಕಾಶಗಳು, ರಿಲೀಫ ನಕಾಶಗಳು, ಯಂತ್ರಶಾಸ್ತ್ರದ ಸಾಮಾನುಗಳು, ಮ್ಯುಝಿಯಮ ಬೋರ್ಡುಗಳು, ವಸ್ತುಪಾಠ ಸಂಬಂಧದ ಪಠಗಳು, ಎಲ್ಲ ಉದ್ಯೋಗಗಳಲ್ಲಿ ಉಪಯೋಗ ಬೀಳುವ ಆಯಗಧಳ ಪೆಟ್ಟಿಗೆ, ಜಾದೂ ಪೆಟ್ಟಿಗೆ, ಅಲ್ಲದೆ ಭೂಗೋಲ, ಜ್ಯೋತಿಷಶಾಸ್ತ್ರ, ಪದಾರ್ಥವಿಜ್ಞಾನಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ವ್ಯಾಯಾಮಶಾಸ್ತ್ರ, ಕಿಂಡರಗಾರ್ಟನ್, ಮಾಂಟೆಸರಿ ಪದ್ಧತಿಯ ಶಿಕ್ಷಣ ಮುಂತಾದವುಗಳನ್ನು ಕಲಿಸಲಿಕ್ಕೆ ಉಪಯೋಗ ಬೀಳುವ ಉಪಕರಣಗಳು.

ವಿಶೇಷ ಮಾಹಿತಿಯ ಕ್ಯಾಟಲಾಗು ಬೇಡಿದರೆ ಪುಕ್ಕಟೆಯಾಗಿ ಕಳುಹಿಸುವೆವು. ಪತ್ರವ್ಯವಹಾರವನ್ನು ಇಂಗ್ಲಿಷ, ಮರಾಠಿ ಇಲ್ಲವೆ ದೇವನಾಗರಿಯಲ್ಲಿ ಮಾಡಬೇಕು.

ಕಾಶೀಭಾಯಿ ಭಗನದಾಸ ಪಟೇಲ
ಮ್ಯಾನೇಜರ, ಶಿಕ್ಷಣ ಸಾಹಿತ್ಯ ಕಾರ್ಯಾಲಯ
ನಾಂದೋಲ, (ಅಹಮದಾಬಾದ—ಪ್ರಾಂತಿಜ ರೇಲ್ವೆ).

ಮಾರಾಟಕ್ಕೆ ಸಿದ್ಧವಾಗಿವೆ.

ಹೂಲೀಕೃತ: — ಜಮಾಖರ್ಚಿನ ಪದ್ಧತಿ ೪ ಆಣೆ; ೧ನೆಯ ಭಾಗ ಅಂಕಗಣಿತ ೧೦ ಆಣೆ; ೨ನೆಯ ಭಾಗ ಅಂಕಗಣಿತ ೧೮. ೬ ಆಣೆ; ಪರೀಕ್ಷೆಯ ಕಾಗದ ೧೦ ಆಣೆ; ಬಾಲಶಿಕ್ಷಣ ೧ ೪. ೬ ಪೈ. ಇತಿಹಾಸಸಾರ ೦-೧೫-೦.

ಶನವೀರ ಫಕೀರಪ್ಪ ಬುಕ್ಕಸೆಲರ, ಧಾರವಾಡ.